JJ-51

(B) 25226(1)

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

೧೩ನೇ ಅಧಿವೇಶನ

13TH SESSION

ಸಂಪುಟ – ೨ (ಕ್ರಮಾಂಕ – ೩)

Volume - 2 (No. 3)

(೨೩, ೨೪ ಮತ್ತು ೨೫ ನೇ ಜೂನ್ ೨೦೦೮)

(23rd, 24th & 25th June 2008)

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

(B) 25226(1)

ಕರ್ನಾಟಕ ವಿಧಾನಸಭೆಯ ನಡವಳಿಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

೧೩ನೇ ಅಧಿವೇಶನ
13TH SESSION

ಸಂಪುಟ – ೨ (ಕ್ರಮಾಂಕ – ೩)
Volume - 2 (No. 3)

೨೩, ೨೪ ಮತ್ತು ೨೫ ನೇ ಜೂನ್ ೨೦೦೮)
(23rd, 24th & 25th June 2008)

ಕರ್ನಾಟಕ ವಿಧಾನ ಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ

ವಿಷಯಾನುಕ್ರಮಣಿಕೆ

ಸಂಪುಟ–2

ಸೋಮವಾರ, ದಿನಾಂಕ : 23 ನೇ ಜೂನ್ 2008

ಪುಟ ಸಂಖ್ಯೆ

1. ಸಂತಾಪ ಸೂಚನೆ : 1 - 24

ವಿಷಯ : ದಿವಂಗತ ಬಸವರಾಜೇಶ್ವರಿ ಮತ್ತಿತರ ಗಣ್ಯರ ನಿಧನದ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ, ವಿರೋಧ ಪಕ್ಷದ ನಾಯಕರು

ಶ್ರೀ ಹೆಚ್.ಡಿ. ಕುಮಾರಸ್ವಾಮಿ

ಶ್ರೀ ಅಮರೇಗೌಡ ಪಾಟೀಲ್ ಬೈಯಾಪುರ

ಶ್ರೀ ಟಿ.ಬಿ. ಜಯಚಂದ್ರ

ಶ್ರೀ ತಿಪ್ಪೇಸ್ವಾಮಿ

ಶ್ರೀ ಎನ್. ಯೋಗೀಶ್ ಭಟ್

ಶ್ರೀ ಬಿ. ಶ್ರೀರಾಮುಲು

ಶ್ರೀ ವಿ. ಶ್ರೀನಿವಾಸ್ ಪ್ರಸಾದ್

ಶ್ರೀ ಕುರಾಣಾಕರ ರೆಡ್ಡಿ

2. ಚುನಾವಣೆ ಪ್ರಸ್ತಾವ :– 24 - 37

ವಿಷಯ : ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸುವ ಪ್ರಸ್ತಾವ :

ಪುಟ ಸಂಖ್ಯೆ

3. **ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ :** 27 - 56

ವಿಷಯ : ರಾಜ್ಯದಲ್ಲಿ ಉಂಟಾಗಿರುವ ರಸಗೊಬ್ಬರದ ತೀವ್ರ ಅಭಾವದ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ, ವಿರೋಧ ಪಕ್ಷದ ನಾಯಕರು

ಶ್ರೀ ಟಿ.ಬಿ. ಜಯಚಂದ್ರ

ಶ್ರೀ ಹೆಚ್.ಡಿ. ಕುಮಾರಸ್ವಾಮಿ

ಶ್ರೀ ವಿ. ಶ್ರೀನಿವಾಸ ಪ್ರಸಾದ್

ಶ್ರೀ ಡಿ.ಕೆ. ಶಿವಕುಮಾರ್

ಶ್ರೀ ಕೆ.ಎಸ್. ಈಶರಪ್ಪ (ಇಂಧನ ಇಲಾಖಾ ಸಚಿವರು)

(ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ನೀಡಲಾಯಿತು)

4. **ನಿಯಮ 69ರ ಅಡಿಯಲ್ಲಿ ಚರ್ಚೆ :** 56 - 82

ವಿಷಯ: ರಾಜ್ಯದಲ್ಲಿ ಉಂಟಾಗಿರುವ ರಸಗೊಬ್ಬರದ ತೀವ್ರ ಅಭಾವಾದ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು)

5. **ಪ್ರಕಟಣೆ :** 82 - 82

ವಿಷಯ : ದಿನಾಂಕ: 10-06-2008 ರಂದು ಶ್ರೀ ಸಿ.ಪಿ. ಯೋಗೇಶ್ವರ್, ಶಾಸಕರು, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಇವರನ್ನು ಹಾಗೂ ಅವರ ಬೆಂಬಲಿಗರನ್ನು ಪ್ರತಿಭಟನಾ ರ್ಯಾಲಿಯಲ್ಲಿ ಬಂಧಿಸಿ, ಬಿಡುಗಡೆ ಮಾಡಿರುವ ಬಗ್ಗೆ.

12. ಶ್ರೀ ಸಿದ್ದು ಸವದಿ

13. ಶ್ರೀ ಸಿ.ಎಸ್. ಪುಟ್ಟೇಗೌಡ

14. ಶ್ರೀ ಅಶೋಕ್

15. ಶ್ರೀ ಎ. ಮಂಜು

16. ಶ್ರೀ ಕೆ.ಎಂ ಕೃಷ್ಣಮೂರ್ತಿ

17. ಶ್ರೀ ಎಸ್.ಎ. ರವೀಂದ್ರನಾಥ್ (ಕೃಷ್ ಸಚಿವರು)

18. ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು)

19. ಶ್ರೀ ಮಲ್ಲಿಕಾರ್ಜುನ ಖರ್ಗೆ

20. ಶ್ರೀ ಹೆಚ್.ಡಿ. ರೇವಣ್ಣ

21. ಶ್ರೀ ಹೆಚ್.ಡಿ. ಕುಮಾರಸ್ವಾಮಿ

22. ಶ್ರೀ ಟಿ.ಬಿ. ಜಯಚಂದ್ರ

23. ಶ್ರೀ ಡಿ.ಕೆ. ಶಿವಕುಮಾರ್

24. ಶ್ರೀ ಬಿ.ಎಸ್. ಯಡಿಯೂರಪ್ಪ

ದಿನಾಂಕ :25-06-2008

ಕ್ರ.ಸಂಖ್ಯೆ	ವಿಷಯಾನುಕ್ರಮಣಿಕೆ	ಸ.ಸಂಖ್ಯೆ
1.	ರೈತರ ಸರಣಿ ಆತ್ಮಹತ್ಯೆಯ ಬಗ್ಗೆ ವಿಚಾರಣೆಗೆ ಜಂಟಿ ಸದನ ಸಮಿತಿ ನೇಮಕಕ್ಕೆ ಒತ್ತಾಯಿಸಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರಿಂದ ಧರಣಿ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) ಶ್ರೀ ಡಿ.ಕೆ.ಶಿವಕುಮಾರ್ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಶ್ರೀ ಟಿ.ಬಿ.ಜಯಚಂದ್ರ ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) ಶ್ರೀ ಹೆಚ್.ಡಿ.ರೇವಣ್ಣ ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)	317-375
2.	ಸಭೆಯ ಮುಂದಿಡಲಾದ ಕಾಗದ ಪತ್ರಗಳು	375-409
3.	ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮಂಡನೆ ಮತ್ತು ಅನುಮೋದನೆ ಶ್ರೀ ಸಿ.ಟಿ.ರವಿ ಶ್ರೀ ಸಿ.ಸಿ.ಪಾಟೀಲ್	409-410
4.	ವಿಧಾನಸಭೆಯ ವಿವಿಧ ಸಮಿತಿಗಳ ರಚನೆ ಮತ್ತು ರಾಜೀವ್ ಗಾಂಧಿ ಅರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಸದಸ್ಯರ ನಾಮನಿರ್ದೇಶನದ ಪ್ರಸ್ತಾವ ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು)	410-415
5.	ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ ಮತ್ತು ಉತ್ತರ ಶ್ರೀ ಸಿ.ಟಿ.ರವಿ ಶ್ರೀ ಸಿ.ಸಿ.ಪಾಟೀಲ್ ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)	415-423
6.	ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಅಂಗೀಕಾರ	

ಪುಟ ಸಂಖ್ಯೆ

6. ನಿಯಮ 69 ಅಡಿಯಲ್ಲಿ ಮುಂದುವರೆದ ಚರ್ಚೆ : 82 - 167

ವಿಷಯ: ರಾಜ್ಯದಲ್ಲಿ ಉಂಟಾಗಿರುವ ರಸಗೊಬ್ಬರದ ತೀವ್ರ ಅಭಾವದ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ

ಶ್ರೀ ಹೆಚ್.ಡಿ. ಕುಮಾರಸ್ವಾಮಿ

ಶ್ರೀ ಬಿ.ಸಿ. ಪಾಟೀಲ್

ಶ್ರೀ ಓಲೇಕಾರ್ ನೆಹರೂ ಚೆನ್ನಬಸಪ್ಪ

ಶ್ರೀ ಹೆಚ್.ಡಿ. ರೇವಣ್ಣ

ಶ್ರೀ ವಿ. ಮುನಿಯಪ್ಪ

ಶ್ರೀ ಆರ್. ಧ್ರುವನಾರಾಯಣ್

7. ಪ್ರಕಟಣೆ : 167 - 167

ವಿಷಯ: ಜನತಾದಳ (ಜಾತ್ಯಾತೀತ) ಪಕ್ಷದ ಶಾಸಕಾಂಗ ಪಕ್ಷದ ಪದಾಧಿಕಾರಿಗಳ ಆಯ್ಕೆ ಬಗ್ಗೆ.

ವಿಷಯಾನುಕ್ರಮಣಿಕೆ

ಮಂಗಳವಾರ, ದಿನಾಂಕ 24 ನೇ ಜೂನ್ 2008

169 - 172

1. ಸಂತಾಪ ಸೂಚನೆ

ದಿವಂಗತ ಸಿ.ಜೆ. ಮುಕ್ಕಣ್ಣಪ್ಪನವರ ನಿಧನದ ಬಗ್ಗೆ

1. ಮಾನ್ಯ ಸಭಾಧ್ಯಕ್ಷರು
2. ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)
3. ಶ್ರೀ ಟಿ.ಬಿ. ಜಯಚಂದ್ರ

2. ಪ್ರಕಟಣೆ 172 - 172

ವಿಷಯ: ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ದಿ: 24–06–2008 ಮತ್ತು 25–06–2008ರಂದು ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣಾ ನಿರ್ಣಯದ ಮೇಲೆ ಚರ್ಚೆ ಹಾಗೂ ಅಂಗೀಕಾರ.

3. ನಿಯಮ 69ರ ಮೇರೆಗೆ ಚರ್ಚೆ ಮುಂದುವರೆದುದು. 172 - 316

ವಿಷಯ: ರಾಜ್ಯದಲ್ಲಿ ಉಂಟಾಗಿರುವ ರಸಗೊಬ್ಬರದ ತೀವ್ರ ಅಭಾವದ ಹಿನ್ನೆಲೆಯಲ್ಲಿ ರೈತರು ಹೋರಾಟ ನಡೆಸುತ್ತಿದ್ದ ಸಂದರ್ಭದಲ್ಲಿ ಪೊಲೀಸರು ನಡೆಸಿರುವ ಗೋಲಿಬಾರ್ ಘಟನೆ ಕುರಿತು.

1. ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್
2. ಶ್ರೀ ವಿ. ಶ್ರೀನಿವಾಸಪ್ರಸಾದ್
3. ಶ್ರೀ ಕೆ.ಎಸ್. ಈಶ್ವರಪ್ಪ (ಇಂದನ ಸಚಿವರು)
4. ಶ್ರೀ ಬಂಡೆಪ್ಪ ಕಾಶಂಪುರ್
5. ಶ್ರೀ ಶ್ರೀಕಾಂತ್ ಕುಲಕರ್ಣಿ
6. ಶ್ರೀ ಎಸ್.ವಿ. ರಾಮಚಂದ್ರಪ್ಪ
7. ಶ್ರೀ ವೆಂಕಟರಾವ್ ನಾಡಗೌಡ
8. ಶ್ರೀ ಕೆ.ಎಂ. ವಿರೂಪಾಕ್ಷಪ್ಪ
9. ಶ್ರೀ ನೆ.ಲ. ನರೇಂದ್ರಬಾಬು
10. ಶ್ರೀ ಕರಡಿ ಸಂಗಣ್ಣ
11. ಶ್ರೀ ಕಿಮ್ಮನೆ ರತ್ನಾಕರ್

ಕರ್ನಾಟಕ ವಿಧಾನಸಭೆ

ಸೋಮವಾರ 23 ನೇ ಜುನ್ 2008 ರಂದು ಸದನವು

ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಗ್ಗೆ 10–50ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು ಶ್ರೀ ಜಗದೀಶ್‌ಶೆಟ್ಟರ್ ರವರು

ಪೀಠವನ್ನು ಅಲಂಕರಿಸಿದ್ದರು

VOL. X - I - X

1. ಸಂತಾಪ ಸೂಚನೆ

ವಿಷಯ : ದಿವಂಗತ ಶ್ರೀಮತಿ ಬಸವರಾಜೇಶ್ವರಿ ಮತ್ತಿತರ ಗಣ್ಯರ ನಿಧನದ ಬಗ್ಗೆ.

ಮಾನ್ಯ ಸಭಾಧ್ಯಕ್ಷರು :– ಕೇಂದ್ರ ಹಾಗೂ ರಾಜ್ಯದ ಮಾಜಿ ಸಚಿವೆಯಾದ ಶ್ರೀಮತಿ ಬಸವರಾಜೇಶ್ವರಿ, ಮಾಜಿ ಸಚಿವರಾಗಿದ್ದ ಶ್ರೀ ಬ್ಲೇಸಿಯಸ್ ಎಂ. ಡಿ'ಸೋಜ, ಶ್ರೀ ಎಂ.ಎಂ.ಜೆ. ಸದ್ಯೋಜಾತ ಹಾಗೂ ಶ್ರೀಮತಿ ಇವಾ ವಾಜ್, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ: ಟಿ. ಪಾರ್ಥಸಾರಥಿ, ಶ್ರೀ ಡಿ. ಕರಿಯಪ್ಪಗೌಡ, ಶ್ರೀ ಎಂ. ಓಬಣ್ಣ ರಾಜು, ಶ್ರೀ ದೊಡ್ಡಬೋರೇಗೌಡ, ಶ್ರೀ ಹೆಚ್.ಸಿ. ಶಿವಶಂಕರಪ್ಪ, ಲೋಕಸಭೆಯ ಮಾಜಿ ಸದಸ್ಯರಾದ ಶ್ರೀ ಚನ್ನಯ್ಯ ಒಡೆಯರ್ ಹಾಗೂ ಶ್ರೀ. ಕೆ.ಎಸ್. ವೀರಭದ್ರಪ್ಪ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀಮತಿ ಬಸವರಾಜೇಶ್ವರಿ

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಾಜಿ ಸಚಿವರು ಹಾಗೂ ವಿಧಾನಪರಿಷತ್ತಿನ ಮಾಜಿ ಸಭಾಪತಿಯವರಾಗಿದ್ದ ಶ್ರೀಮತಿ ಬಸವರಾಜೇಶ್ವರಿ ಅವರು 1922 ರಲ್ಲಿ ಬಳ್ಳಾರಿ ಜಿಲ್ಲೆ ರಾಯದುರ್ಗ ತಾಲ್ಲೂಕಿನಲ್ಲಿ ಜನಸಿದ್ದು, ಕೃಷಿಕರಾಗಿದ್ದರು. ಹಿಂದುಳಿದ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿಯವರು ರಾಯಚೂರಿನ ಟ್ಯಾಗೋರ್ ಮೆಮೋರಿಯಲ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ, ಬೆಂಗಳೂರಿನ ಇನ್ಸ್ಟಿಟ್ಯೂಟ್ ಆಫ್ ಪಾರ್ಲಿಮೆಂಟರಿ ಅಫೇರ್ಸ್ ಸಂಸ್ಥೆಯ ಉಪಾಧ್ಯಾಕ್ಷರಾಗಿ ಹಾಗೂ ಇತರೆ ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿರುತ್ತಾರೆ. 1957ರಲ್ಲಿ ಮಾನ್ವಿ ಕ್ಷೇತ್ರದಿಂದ ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾದ ಶ್ರೀಮತಿಯವರು ಸತತ ಮೂರು ಬಾರಿ ಚುನಾಯಿತರಾಗಿದ್ದರು. 1967 ರಿಂದ 1969 ರವರೆಗೆ ಸಣ್ಣ ನೀರಾವರಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಉಪ ಮಂತ್ರಿಗಳಾಗಿ, 1976 ರಿಂದ 1984 ರವರೆಗೆ ವಿಧಾನಪರಿಷತ್ ಸದಸ್ಯರಾಗಿ ಹಾಗೂ ಮೊದಲ ಮಹಿಳಾ ಸಭಾಪತಿಯಾಗಿ ಕಾರ್ಯನಿರ್ವಹಿಸಿದ್ದರು.

1984 ರಿಂದ ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ ಸತತ ಮೂರು ಬಾರಿ ಆಯ್ಕೆಯಾಗಿ ಅಂದಿನ ಪ್ರಧಾನಿ ಶ್ರೀ ಪಿ.ವಿ. ನರಸಿಂಹರಾವ್ ಅವರ ಸಂಪುಟದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿ ರಾಜ್ಯದಲ್ಲಿ ಹಂಪಿ ಎಕ್ಸ್‌ಪ್ರೆಸ್ ರೈಲ್ವೇ ಸೌಲಭ್ಯವನ್ನು ಕಲ್ಪಿಸುವಲ್ಲಿ ಹಾಗೂ ಬಾಲವಾಡಿ ಕೇಂದ್ರಗಳನ್ನು ತೆರೆಯಲು ಕಾರಣಕರ್ತರಾಗಿದ್ದರು.

ಶ್ರೀಮತಿಯವರು ದಿನಾಂಕ 19–02–2008 ರಂದು ನಿಧನ ಹೊಂದಿದರು.

2. ಶ್ರೀ ಬ್ಲೇಸಿಯಸ್ ಎಂ. ಡಿ'ಸೋಜ

ರಾಜ್ಯದ ಮಾಜಿ ಸಚಿವರು ವಿಧಾನಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಬ್ಲೇಸಿಯಸ್ ಎಂ. ಡಿ'ಸೋಜ ಅವರು 1938ನೇ ಫೆಬ್ರವರಿ 22 ರಂದು ಮಂಗಳೂರಿನಲ್ಲಿ ಜನಿಸಿದ್ದು, ವಾಣಿಜ್ಯ ಹಾಗೂ ಕಾನೂನು ಪದವೀಧರರು. ವೃತ್ತಿಯಲ್ಲಿ ನ್ಯಾಯವಾದಿಯಾಗಿದ್ದ ಶ್ರೀಯುತರು ಮಂಗಳೂರು ನಗರಸಭೆಯ ಅಧ್ಯಕ್ಷರಾಗಿ, ಜಿಲ್ಲಾ ಹಾಕಿ ಸಂಸ್ಥೆಯ ಅಧ್ಯಕ್ಷರಾಗಿ ಹಾಗೂ ವಿವಿಧ ಸಾಮಾಜಿಕ ಸೇವಾ ಸಂಸ್ಥೆಗಳ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದರು. 1980 ರಿಂದ 1985 ರವರೆಗೆ ಹಾಗೂ 2004 ರಿಂದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಶ್ರೀಯುತರು 1985 ರಿಂದ 1994 ರವರೆಗೆ ಮಂಗಳೂರು ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿದ್ದರು ಹಾಗೂ 1991–1992 ರವರೆಗೆ ಕಾನೂನು ಸಚಿವರಾಗಿ ಹಾಗೂ 1992 ರಿಂದ 1994 ರವರೆಗೆ ಕಾರ್ಮಿಕ ಸಚಿವರಾಗಿ ಕಾರ್ಯನಿರ್ವಹಿಸಿದ್ದು, ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಶ್ರಮಿಸಿದ್ದರು. ಶ್ರೀಯುತರು 1994 ರಲ್ಲಿ ಜಿನೀವಾದಲ್ಲಿ ನಡೆದ ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ 81ನೇ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು.

ಶ್ರೀಯುತರು ದಿನಾಂಕ 26–01–2008 ರಂದು ನಿಧನ ಹೊಂದಿದರು.

3. ಶ್ರೀ ಎಂ.ಎಂ.ಜೆ. ಸದ್ಯೋಜಾತ

ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಎಂ.ಎಂ.ಜೆ. ಸದ್ಯೋಜಾತ ಅವರು 1922ನೇ ಏಪ್ರಿಲ್ 22 ರಂದು ಕೊಟ್ಟೂರಿನಲ್ಲಿ ಜನಿಸಿದ್ದರು. ಸಾಮಾಜಿಕ ಕಾರ್ಯಗಳಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಪಂಚಾಯತ್ ಮಂಡಳಿಯ ಅಧ್ಯಕ್ಷರಾಗಿ, ಬಳ್ಳಾರಿ ಮಾರುಕಟ್ಟೆ ಸಮಿತಿಯ ಅಧ್ಯಕ್ಷರಾಗಿ, ಕೂಡ್ಲಿಗಿ ತಾಲ್ಲೂಕು

ಅಭಿವೃದ್ಧಿ ಮಂಡಳಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಕೊಟ್ಟೂರು ಕ್ಷೇತ್ರದಿಂದ ಎರಡು, ನಾಲ್ಕು ಹಾಗೂ ಆರನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ದಿವಂಗತ ಶ್ರೀ ಗುಂಡೂರಾವ್ ಅವರ ಸಚಿವ ಸಂಪುಟದಲ್ಲಿ ಸಾರಿಗೆ, ಸಣ್ಣ ನೀರಾವರಿ ಹಾಗೂ ಆರೋಗ್ಯ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 14–01–2008 ರಂದು ನಿಧನ ಹೊಂದಿದರು.

4. ಶ್ರೀಮತಿ ಇವಾ ವಾಜ್

ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವೆಯಾಗಿದ್ದ ಶ್ರೀಮತಿ ಇವಾ ವಾಜ್ ಅವರು 1924ನೇ ಜುಲೈ 10 ರಂದು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಬಾಜೆಪೆನಲ್ಲಿ ಜನಿಸಿದ್ದು, ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಹಾಗೂ ಬಿ.ಟಿ. ಪದವಿಯನ್ನು ಪಡೆದಿದ್ದರು. ವೃತ್ತಿಯಲ್ಲಿ ಬೋಧಕರಾಗಿದ್ದ ಶ್ರೀಮತಿಯವರು ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿ ಹಾಗೂ ಮಕ್ಕಳ ಕಲ್ಯಾಣ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಬೆಂಗಳೂರು ನಗರಸಭೆಯ ಸದಸ್ಯರಾಗಿ, ಕೇಂದ್ರ ಶಿಬಿರ ಸಮಿತಿ, ಮಹಿಳಾ ಕಲ್ಯಾಣ ರಾಷ್ಟ್ರೀಯ ಸಮಿತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ರಾಷ್ಟ್ರೀಯ ಸಮಿತಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಶ್ರೀಮತಿಯವರು ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದಿಂದ ಐದನೇ ವಿಧಾನಸಭೆಗೆ ಆಯ್ಕೆಯಾಗಿ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಶಿಕ್ಷಣ ಸಚಿವೆಯಾಗಿಯೂ ಕಾರ್ಯನಿರ್ವಹಿಸಿರುತ್ತಾರೆ.

ಶ್ರೀಮತಿಯವರು ದಿನಾಂಕ 11–03–2008 ರಂದು ನಿಧನ ಹೊಂದಿದರು.

5. ಶ್ರೀ ಡಿ. ಕರಿಯಪ್ಪ ಗೌಡ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಡಿ. ಕರಿಯಪ್ಪ ಗೌಡ ಅವರು 1934ನೇ ಏಪ್ರಿಲ್ 8 ರಂದು ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಕೊತಗಾಲದಲ್ಲಿ ಜನಿಸಿದ್ದು, ಕಲಾ ಹಾಗೂ ಕಾನೂನು ಪದವೀಧರರು. ವೃತ್ತಿಯಲ್ಲಿ ಕೃಷಿಕರು ಹಾಗೂ ವಕೀಲರು. ಹುಣಸೂರು ತಾಲ್ಲೂಕು ಮಂಡಳಿಯ ಸದಸ್ಯರಾಗಿ ಟಿ.ಎ.ಪಿ.ಸಿ.ಎಂ.ಎಸ್.ನ ನಿರ್ದೇಶಕರಾಗಿ ಹಾಗೂ ಇತರೆ ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ, ರಾಜ್ಯ ವಯಸ್ಕರ

ಶಿಕ್ಷಣ ಸಮಿತಿ ಹಾಗೂ ರಾಜ್ಯ ಸಾರಿಗೆ ಇಲಾಖೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಐದನೇ ವಿಧಾನಸಭೆಗೆ ಹುಣಸೂರು ಕ್ಷೇತ್ರದಿಂದ ಚುನಾಯಿತರಾಗಿದ್ದರು ಹಾಗೂ 1976 ರಲ್ಲಿ ವಿಧಾನಪರಿಷತ್ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 17–12–2007 ರಂದು ನಿಧನ ಹೊಂದಿದರು.

6. ಡಾ: ಟಿ. ಪಾರ್ಥಸಾರಥಿ

ವಿಧಾನಸಭೆಯ ಮಾಜಿ ಸದಸ್ಯರಾದ ಡಾ: ಟಿ. ಪಾರ್ಥಸಾರಥಿ ಅವರು 1917ನೇ ಏಪ್ರಿಲ್ 23 ರಂದು ಮೈಸೂರಿನಲ್ಲಿ ಜನಿಸಿದ್ದು, ವೃತ್ತಿಯಲ್ಲಿ ವೈದ್ಯರಾಗಿದ್ದರು. ಬೆಂಗಳೂರು ನಗರದಲ್ಲಿ ಜನಸಾಮಾನ್ಯರಿಗೆ ಕಡಿಮೆ ಖರ್ಚಿನಲ್ಲಿ ಸುಲಭವಾಗಿ ವೈದ್ಯಕೀಯ ಸೇವೆ ಸಿಗಲು ಶ್ರಮ ವಹಿಸಿದ್ದ ಶ್ರೀಯುತರು 1937 ರಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಾಗೂ 1942 ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಪಾಲ್ಗೊಂಡು ಬಂಧನಕ್ಕೆ ಒಳಗಾಗಿದ್ದರು. ಬೆಂಗಳೂರು ನಗರಸಭೆಗೆ ಎರಡು ಬಾರಿ ಚುನಾಯಿತರಾಗಿದ್ದು, ಜವಹರ್ ಕೋರ್ಟ್ ಕ್ಲಬ್ ಹಾಗೂ ಕಲ್ಪನಾ ಆರ್ಟಿಸ್ಟ್ಸ್ ಮುಂತಾದ ಹಲವಾರು ಸಂಘ ಸಂಸ್ಥೆಗಳ ಸ್ಥಾಪನೆಗೆ ಕಾರಣಕರ್ತರಾಗಿದ್ದರು ಹಾಗೂ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ನಿನ ರಾಜ್ಯ ಶಾಖೆಯ ಉಪಾಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿರುತ್ತಾರೆ. ಶ್ರೀಯುತರು ಎರಡನೇ ವಿಧಾನಸಭೆಗೆ ಮಲ್ಲೇಶ್ವರಂ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಡಾ: ಬಿ.ಸಿ. ರಾಯ್ ಪ್ರಶಸ್ತಿಗೆ ಪುರಸ್ಕೃತರಾಗಿರುತ್ತಾರೆ.

ಶ್ರೀಯುತರು ದಿನಾಂಕ 22–11–2007 ರಂದು ನಿಧನ ಹೊಂದಿದರು.

7. ಶ್ರೀ ಎಂ. ಓಬಣ್ಣ ರಾಜು

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ. ಓಬಣ್ಣ ರಾಜು ಅವರು 1926ನೇ ಡಿಸೆಂಬರ್ 26 ರಂದು ಬೆಂಗಳೂರಿನಲ್ಲಿ ಜನಿಸಿದ್ದರು. ಸಹಕಾರ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾಗಿ, ಮೈಸೂರು ತೋಟಗಾರಿಕಾ ಸೊಸೈಟಿಯ ಖಜಾಂಚಿಯಾಗಿ, ವಿನಾಯಕ ಶಿಕ್ಷಣ ಸಂಸ್ಥೆಯ

ಅಧ್ಯಕ್ಷರಾಗಿ, ಬೆಂಗಳೂರು ನಗರಸಭೆಯ ಸದಸ್ಯರಾಗಿ, ಪಶುಸಂಗೋಪನಾ ಸಲಹಾ ಸಮಿತಿಯ ಸದಸ್ಯರಾಗಿ ಹಾಗೂ ಮೈಸೂರು ಕ್ರೀಡಾ ಪರಿಷತ್ತಿನ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದ ಶ್ರೀಯುತರು ಏಳನೇ ವಿಧಾನಸಭೆಗೆ ಚಾಮರಾಜಪೇಟೆ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 07–04–2008 ರಂದು ನಿಧನ ಹೊಂದಿದರು.

8. ಶ್ರೀ ದೊಡ್ಡಬೋರೇಗೌಡ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ದೊಡ್ಡಬೋರೇಗೌಡ ಅವರು 1923ನೇ ಅಕ್ಟೋಬರ್ 4 ರಂದು ಯಟಗದಹಳ್ಳಿಯಲ್ಲಿ ಜನಿಸಿದ್ದು, ಕೃಷಿಕರಾಗಿದ್ದರು. ರೈತ ಸಮುದಾಯದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದ ಶ್ರೀಯುತರು ನಾಲ್ಕನೇ ವಿಧಾನಸಭೆಗೆ ಶ್ರೀರಂಗಪಟ್ಟಣ ಕ್ಷೇತ್ರದಿಂದ ಹಾಗೂ ಏಳನೇ ವಿಧಾನಸಭೆಗೆ ಮಂಡ್ಯ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 14–05–2008 ರಂದು ನಿಧನ ಹೊಂದಿದರು.

9. ಶ್ರೀ ಹೆಚ್.ಸಿ. ಶಿವಶಂಕರಪ್ಪ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಹೆಚ್.ಸಿ. ಶಿವಶಂಕರಪ್ಪ ಅವರು 1932ನೇ ಏಪ್ರಿಲ್ 22 ರಂದು ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕು ನಾನೀವಾಲ ಗ್ರಾಮದಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಕಲಾ ಹಾಗೂ ಕಾನೂನು ಪದವೀಧರರು. ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಹಾಗೂ ಹಲವಾರು ಶಿಕ್ಷಣ ಹಾಗೂ ಸೇವಾ ಸಂಸ್ಥೆಗಳ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಏಳನೇ ವಿಧಾನಸಭೆಗೆ ಚಳ್ಳಕೆರೆ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 29–05–2008 ರಂದು ನಿಧನ ಹೊಂದಿದರು.

10. ಶ್ರೀ ಚನ್ನಯ್ಯ ಒಡೆಯರ್

ಲೋಕಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಚನ್ನಯ್ಯ

ಒಡೆಯರ್ ಅವರು 1921ನೇ ಜೂನ್ 15 ರಂದು ಜಗಳೂರು ತಾಲ್ಲೂಕು ಬಿಳಿಚೋಡು ಗ್ರಾಮದಲ್ಲಿ ಜನಿಸಿದ್ದು, ಕಾನೂನು ಪದವೀಧರರು. ಕೃಷಿಕರಾಗಿದ್ದ ಶ್ರೀಯುತರು ಸಹಕಾರ ರಂಗದಲ್ಲಿ ಹಾಗೂ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವಲ್ಲಿ ಆಸಕ್ತಿ ಹೊಂದಿದ್ದರು. 1968 ಹಾಗೂ 1974 ರಲ್ಲಿ ಚಿತ್ರದುರ್ಗ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಹಾಗೂ ಎಂಟು, ಒಂಭತ್ತು ಮತ್ತು ಹತ್ತನೇ ಲೋಕಸಭೆಗೆ ದಾವಣಗೆರೆ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿ ಅಪಾರ ಜನಮನ್ನಣೆಯನ್ನು ಪಡೆದಿದ್ದರು.

ಶ್ರೀಯುತರು ದಿನಾಂಕ 19–11–2007 ರಂದು ನಿಧನ ಹೊಂದಿದರು.

11. ಶ್ರೀ ಕೆ.ಎಸ್. ವೀರಭದ್ರಪ್ಪ

ಲೋಕಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ.ಎಸ್. ವೀರಭದ್ರಪ್ಪ ಅವರು ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ಧರ್ಮಾವರ ಗ್ರಾಮದಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಉದ್ಯಮಿಗಳಾಗಿದ್ದರು. ಸಂಡೂರು ಪುರಸಭೆಯ ಅಧ್ಯಕ್ಷರಾಗಿ ರಾಜಕೀಯ ಜೀವನ ಆರಂಭಿಸಿದ್ದ ಶ್ರೀಯುತರು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಬಳ್ಳಾರಿ ಜಿಲ್ಲಾ ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ, ಸಂಡೂರು ಲ್ಯಾಂಡ್ ಟ್ರಿಬ್ಯೂನಲ್ ಸದಸ್ಯರಾಗಿ, ಭಾರತ ಸೇವಾ ದಳದ ಅಧ್ಯಕ್ಷರಾಗಿ ಹಾಗೂ ವಿಜಯನಗರ ಉಕ್ಕು ಯೋಜನಾ ಪ್ರಾಧಿಕಾರದ ಸದಸ್ಯರಾಗಿ ಸೇವೆ ಸಲ್ಲಿಸಿದ್ದು, 1977 ರಲ್ಲಿ ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 18–12–2007 ರಂದು ನಿಧನ ಹೊಂದಿದರು.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) :– ಸನ್ಮಾನ್ಯ ಸಭಾಧ್ಯಕ್ಷರೇ, ತಾವು ತಂದಿರುವ ಸಂತಾಪ ಸೂಚನೆಯ ಪ್ರಕಾರ 11 ಜನ ಧೀಮಂತ ನಾಯಕರು, ಯಾರು ಲೋಕಸಭಾ ಸದಸ್ಯರಾಗಿ, ಕೇಂದ್ರದ ಸಚಿವರಾಗಿ, ವಿಧಾನಸಭಾ ಮತ್ತು ವಿಧಾನಪರಿಷತ್ತಿನ ಸದಸ್ಯರಾಗಿ, ಸೇವೆಸಲ್ಲಿಸಿ ತಮ್ಮದೇ ಆದ ಕ್ಷೇತ್ರದಲ್ಲಿ ಒಂದು ದಾಖಲೆಯನ್ನು ಮಾಡಿದಂತಹ ಈ 11 ಜನ ನಾಯಕರನ್ನು ಕಳೆದುಕೊಂಡು ಕನ್ನಡ ನಾಡು ಬಡವಾಗಿದೆ. ಶ್ರೀಮತಿ ಬಸವರಾಜೇಶ್ವರಿಯವರು ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನದೇ ಆದ ಕೊಡುಗೆಯನ್ನು

ಕೊಟ್ಟು 1957ರಲ್ಲಿ ಮಾನ್ವಿ ಕ್ಷೇತ್ರದಲ್ಲಿ ಮೊದಲನೇ ಬಾರಿಗೆ ವಿಧಾನಸಭೆಗೆ ಆಯ್ಕೆಯಾದ ಶ್ರೀಮತಿಯವರು ಸತತ ಮೂರು ಬಾರಿ ಚುನಾವಣೆಯಲ್ಲಿ ಗೆದ್ದು ವಿಧಾನಪರಿಷತ್ತಿನ ಸದಸ್ಯರಾಗಿ ಕೆಲಸ ಮಾಡಿ ರಾಜ್ಯದ ಇತಿಹಾಸದಲ್ಲಿ ಮೊದಲನೇ ಬಾರಿ ಮಹಿಳಾ ಸಭಾಪತಿಯಾಗಿ ಕೆಲಸ ನಿರ್ವಹಿಸಿದ ಶ್ರೀಮತಿ ಬಸವರಾಜೇಶ್ವರಿಯವರು, ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ ಮೂರು ಬಾರಿ ಆಯ್ಕೆಯಾಗಿ ಪಿ.ವಿ. ನರಸಿಂಹರಾವ್‌ರವರ ಸಂಪುಟದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿ, ರಾಜ್ಯದಲ್ಲಿ ಹಂಪಿ ಎಕ್ಸ್‌ಪ್ರೆಸ್ ರೈಲ್ವೇ ಸೌಲಭ್ಯವನ್ನು ಕಲ್ಪಿಸುವಲ್ಲಿ ಯಶಸ್ವಿಯಾದಂಥ ಶ್ರೀಮತಿ ಬಸವರಾಜೇಶ್ವರಿಯವರನ್ನು ಕಳೆದುಕೊಂಡಿದ್ದೇವೆ. ಶ್ರೀ ಬ್ಲೇಸಿಯಸ್ ಎಂ.ಡಿ. ಸೋಜರವರು ನಿಜಕ್ಕೂ ಒಬ್ಬ ಧೀಮಂತ ನಾಯಕರಾಗಿದ್ದು ಮಂಗಳೂರು ನಗರಸಭೆ ಅಧ್ಯಕ್ಷರಾಗಿ, ವಿಧಾನಪರಿಷತ್ತಿನ ಸದಸ್ಯರಾಗಿ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾಗಿ ಸೇವೆ ಸಲ್ಲಿಸಿ, ಶ್ರೀಯುತರು 1994 ರಲ್ಲಿ ಜಿನೀವಾದಲ್ಲಿ ನಡೆದ 81ನೇ ಅಧಿವೇಶನದಲ್ಲಿ ಪಾಲ್ಗೊಂಡಿದ್ದಂಥ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಹಾಗೆಯೇ ಶ್ರೀ ಎಂ.ಎಂ.ಜೆ. ಸದ್ಯೋಜಾತ ಅವರು ಗುಂಡೂರಾವ್ ಅವರ ಸಚಿವ ಸಂಪುಟದಲ್ಲಿ ಸಾರಿಗೆ, ಸಣ್ಣ ನೀರಾವರಿ ಹಾಗೂ ಆರೋಗ್ಯ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಒಬ್ಬ ಧೀಮಂತ ವ್ಯಕ್ತಿ. ಶ್ರೀಮತಿ ಇವಾ ವಾಜ್ ಅವರು ಚಿಕ್ಕಮಗಳೂರು ವಿಧಾನ ಸಭಾ ಕ್ಷೇತ್ರದಿಂದ ಐದನೇ ವಿಧಾನಸಭೆಗೆ ಆಯ್ಕೆಯಾಗಿ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಶಿಕ್ಷಣ ಸಚಿವರಾಗಿ ಕೆಲಸ ನಿರ್ವಹಿಸಿದ್ದು ವೃತ್ತಿಯಲ್ಲಿ ಬೋಧಕರಾಗಿದ್ದು ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿ ಹಾಗೂ ಮಕ್ಕಳ ಕಲ್ಯಾಣ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಬೆಂಗಳೂರು ನರಗಸಭಾ ಸದಸ್ಯರಾಗಿಯೂ ಸೇವೆಯನ್ನು ಸಲ್ಲಿಸಿ ನಮ್ಮನ್ನು ಅಗಲಿದ್ದಾರೆ. ಶ್ರೀ ಡಿ.ಕರಿಯಪ್ಪಗೌಡರವರು ಹುಣಸೂರು ಕ್ಷೇತ್ರದಿಂದ ಆಯ್ಕೆಯಾಗಿ ಮತ್ತೆ 1976ರಲ್ಲಿ ವಿಧಾನಪರಿಷತ್ತಿನ ಸದಸ್ಯರಾಗಿ, ತಾಲ್ಲೂಕು ಮಟ್ಟದಿಂದ ಬೇರೆ ಬೇರೆ ಕ್ಷೇತ್ರಗಳಿಗೆ ಚುನಾಯಿತ ಪ್ರತಿನಿಧಿಯಾಗಿ ಅವರು ಸೇವೆ ಸಲ್ಲಿಸಿದ್ದಾರೆ. ಡಾ: ಟಿ. ಪಾರ್ಥಸಾರಥಿಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಾಗೂ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪಾಲ್ಗೊಂಡು ಬಂಧನಕ್ಕೆ ಒಳಗಾಗಿದ್ದರು. ಬೆಂಗಳೂರು ನಗರ ಸಭೆಗೆ ಎರಡು ಬಾರಿ ಚುನಾಯಿತರಾಗಿದ್ದು ಎರಡನೇ ವಿಧಾನಸಭೆಗೆ ಮಲ್ಲೇಶ್ವರಂ

VOL: IX. [illegible]

ಕ್ಷೇತ್ರದಿಂದ ಚುನಾಯಿತರಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದು ಡಾ: ಬಿ.ಸಿ. ರಾಯ್ ಪ್ರಶಸ್ತಿಗೆ ಪುರಸ್ಕೃತರಾಗಿರುವ ಧೀಮಂತ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಶ್ರೀ. ಎಂ.ಓಬಣ್ಣರಾಜು ಅವರು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದು ಸಹಕಾರ ಕ್ಷೇತ್ರದಲ್ಲಿ ತಮ್ಮದೇ ಆದಂಥ ಕೊಡುಗೆಯನ್ನು ಕೊಟ್ಟು ಏಳನೇ ವಿಧಾನಸಭೆಗೆ ಚಾಮರಾಜಪೇಟೆ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀ ದೊಡ್ಡಬೋರೇಗೌಡರವರು ಶ್ರೀರಂಗಪಟ್ಟಣದ ಕ್ಷೇತ್ರದಿಂದ ಹಾಗೂ ಏಳನೇ ವಿಧಾನಸಭೆಗೆ ಮಂಡ್ಯ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದು, ಕೃಷಿಕರಾಗಿ, ರೈತ ಸಮುದಾಯಕ್ಕೆ ತಮ್ಮದೇ ಆದಂತಹ ಕೊಡುಗೆಯನ್ನು ಕೊಟ್ಟಂಥ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಶ್ರೀ ಹೆಚ್.ಸಿ. ಶಿವಶಂಕರಪ್ಪ ಅವರು ವೃತ್ತಿಯಲ್ಲಿ ಕೃಷಿಕರಾಗಿದ್ದು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಚಳ್ಳಕೆರೆ ಕ್ಷೇತ್ರದಿಂದ ಚುನಾಯಿತರಾಗಿ ವಿಧಾನಸಭೆಯ ಸದಸ್ಯರಾಗಿ ಇದ್ದವರನ್ನು ನಾವು ಕಳೆದುಕೊಂಡಿದ್ದೇವೆ. ಹಿರಿಯವರಾದ ಈ ನಾಡಿಗೆ ತಮ್ಮದೇ ಆದಂಥ ಕೊಡುಗೆಯನ್ನು ಕೊಟ್ಟಂಥ ಶ್ರೀ ಚನ್ನಯ್ಯ ಒಡೆಯರ್ ಅವರು ಕಾನೂನು ಪರವೀಧರರಾಗಿ ಚಿತ್ರದುರ್ಗದ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಹಾಗೂ ಎಂಟು, ಒಂಭತ್ತು ಮತ್ತು ಹತ್ತನೇ ಲೋಕಸಭೆಗೆ ದಾವಣಗೆರೆ ಕ್ಷೇತ್ರದಿಂದ ಸಂಸದರಾಗಿ ಚುನಾಯಿತರಾಗಿ ಈ ನಾಡಿನ ಅಭಿವೃದ್ಧಿಗೆ ಸಾಕಷ್ಟು ದೊಡ್ಡ ಕೊಡುಗೆಯನ್ನು ನೀಡಿದ ಚನ್ನಯ್ಯ ಒಡೆಯರ್‌ರವರನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀ ಕೆ.ಎಸ್. ವೀರಭದ್ರಪ್ಪರವರು ಲೋಕಸಭೆಯ ಮಾಜಿ ಸದಸ್ಯರಾಗಿದ್ದು ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಧರ್ಮಾವರಂ ಗ್ರಾಮದಲ್ಲಿ ಜನಿಸಿ ಆ ಭಾಗದ ಅಭಿವೃದ್ಧಿಗಾಗಿ ತಮ್ಮದೇ ಆದ ಸೇವೆ ಸಲ್ಲಿಸಿ, 1977 ರಲ್ಲಿ ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುವಂತಹ ಇಂಥ ಧೀಮಂತ ನಾಯಕರುಗಳನ್ನು ಕಳೆದುಕೊಂಡಿರುವ ಈ ಸಂದರ್ಭದಲ್ಲಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ತಾವು ತಂದಿರುವ ಈ ಸಂತಾಪ ಸೂಚನೆಗೆ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಮಾನ್ಯ ವಿರೋಧ ಪಕ್ಷದ ನಾಯಕರು):– ಸನ್ಮಾನ್ಯ ಅಧ್ಯಕ್ಷರೇ, ತಾವು ಮಂಡಿಸಿರುವಂತಹ ಈ ಸಂತಾಪಸೂಚನೆಗೆ ನಾನು ಬೆಂಬಲಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿಯವರು ಕಾಂಗ್ರೆಸ್ ಪಕ್ಷದ ಒಬ್ಬ ಹಿರಿಯ ನಾಯಕಿಯಾಗಿ ಕೆಲಸವನ್ನು ಮಾಡಿದ್ದನ್ನು ನಾನು ನೋಡಿದ್ದೇನೆ. ಮತ್ತು ಅವರ ಜೊತೆಯಲ್ಲಿ ಕೆಲಸ ಮಾಡುವಂಥ ಅವಕಾಶ ಕೂಡ ನನಗೂ ಸಿಕ್ಕಿತ್ತು. ಅವರು ಸುಮಾರು 1967–69 ರ ಮಧ್ಯದಲ್ಲಿ ಸಣ್ಣ ನೀರಾವರಿ ಸಚಿವರಾಗಿ ನಿರ್ವಹಿಸಿದಂಥ ಕೆಲಸ, ತದನಂತರ ಪುನಃ 1976 ಮತ್ತು 1984 ರಲ್ಲಿ ನಮ್ಮ ಸರ್ಕಾರ ಇದ್ದಾಗ ವಿಧಾನಪರಿಷತ್ತಿನ ಸದಸ್ಯರಾಗಿ ಮತ್ತು ಸಭಾಪತಿಯಾಗಿ ಕೆಲಸವನ್ನು ನಿರ್ವಹಿಸಿದ್ದರು. ಮೊದಲನೇ ಮಹಿಳೆಯಾಗಿ ಸಭಾಪತಿಯ ಸ್ಥಾನವನ್ನು ಅಲಂಕರಿಸಿ ತನ್ನದೇ ಆದಂಥ ಛಾಪನ್ನು ವಿಧಾನಪರಿಷತ್ತಿನಲ್ಲಿ ಮೂಡಿಸಿದರು. ಗ್ರಾಮೀಣ ಪ್ರದೇಶದಿಂದ ಬಂದಂತಹ ಓರ್ವ ಮಹಿಳೆ ಒಳ್ಳೆಯ ರೀತಿಯಿಂದ ಸದನವನ್ನು ನಡೆಸಬಹುದು ಮತ್ತು ಸದನದಲ್ಲಿ ಗೌರವಕ್ಕೆ ಪಾತ್ರರಾಗಬಹುದು ಎಂಬುದನ್ನು ಅವರು ತೋರಿಸಿ ಕೊಟ್ಟಿದ್ದಾರೆ. ಪುನಃ ಅವರು ಬಳ್ಳಾರಿಯಿಂದ ಪಾರ್ಲಿಮೆಂಟ್ ಚುನಾವಣೆಗೆ ನಿಂತು, ಗೆದ್ದು, ಮಾನ್ಯ ಪಿ.ವಿ. ನರಸಿಂಹರಾವ್‌ರವರ ಕ್ಯಾಬಿನೆಟ್‌ನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ State Minister ಆಗಿ ಕೆಲಸವನ್ನು ಮಾಡಿದರು. ಅವರಿಂದಾಗಿ ಈ ಭಾಗದಲ್ಲಿ ಅನೇಕ ಕೇಂದ್ರದ ಕಟ್ಟಡಗಳು ಬರುವುದಕ್ಕೆ ಸಾಧ್ಯವಾಯಿತು. ವಿಶೇಷವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ working women hostels, Residential schools, Orphanages ಕಟ್ಟುವುದಕ್ಕೆ ಅವರು ಪ್ರೋತ್ಸಾಹವನ್ನು ನೀಡಿದರು. ಅನೇಕ Grant-in-aid institutions, ವಿಶೇಷವಾಗಿ private institutions ಗಳಿಗೆ ಇಂತಹ ಕಟ್ಟಡಗಳನ್ನು ಕೊಡತಕ್ಕ ಕೆಲಸವನ್ನು ಆ ಕಾಲದಲ್ಲಿ ಅವರು ಮಾಡಿದರು. ನಂತರ ಅವರ ಆರೋಗ್ಯ ಸರಿಯಿರಲಿಲ್ಲ. ಅವರು ರಾಜಕೀಯದಿಂದ ನಿವೃತ್ತಿಯನ್ನು ಹೊಂದಿ, ಕೊನೆಗೆ ದಿನಾಂಕ 19–02–2008 ರಂದು ನಿಧನರಾದರು. ಒಬ್ಬ ಹಿರಿಯ ನಾಯಕಿಯನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀ ಬ್ಲೇಸಿಯಸ್ ಡಿ'ಸೋಜರವರು ಅತ್ಯಂತ ಪ್ರಾಮಾಣಿಕ ಮತ್ತು ದಕ್ಷ ಆಡಳಿತಗಾರರಾಗಿದ್ದರು. ಸುಮಾರು 1952 ರಲ್ಲೇ ಅವರು ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ಸಕ್ರಿಯರಾಗಿ ಕೆಲಸ ಮಾಡಿದಂತಹ ವ್ಯಕ್ತಿಯಾಗಿದ್ದರು. ನಾವು ಅನೇಕ ಸಾರಿ ದಕ್ಷಿಣ ಕನ್ನಡಕ್ಕೆ ಭೇಟಿ ಕೊಟ್ಟಾಗ ಅಥವಾ ಪಕ್ಷದ ಕಾರ್ಯಕ್ರಮ ಏರ್ಪಡಿಸಿದ್ದಾಗ, ಅನೇಕ ವಿಚಾರಗಳು ಪ್ರಸ್ತಾಪಕ್ಕೆ ಬಂದಾಗ ಅವರು ಹೇಳುತ್ತಿದ್ದರು. "ಅನೇಕ ಜನ ಇತ್ತೀಚೆಗೆ ಕಾಂಗ್ರೆಸ್‌ಗೆ ಬಂದು ನಮಗೆ ಬುದ್ಧಿವಾದ ಹೇಳುತ್ತಿದ್ದಾರೆ. ನಾನು 1952 ರಲ್ಲೇ ಕಾಂಗ್ರೆಸ್

ಪಕ್ಷದ ಸದಸ್ಯನಾಗಿ ಕೆಲಸ ಮಾಡಿದ್ದೇನೆ" ಎಂದು. ನಾಲ್ಕಾಣೆ ಕೊಟ್ಟು ಮೆಂಬರ್ ಆಗಿದ್ದಾಗ ಕೊಟ್ಟಂತಹ ಚೀಟಿಯನ್ನು ಇಟ್ಟುಕೊಂಡು ಅವರು ಎಲ್ಲರಿಗೂ ತೋರಿಸುತ್ತಿದ್ದರು. ಯಾವುದೇ ಪಕ್ಷದಲ್ಲಿದ್ದರೂ ಕೂಡ ಅಷ್ಟೊಂದು ಅಭಿಮಾನದಿಂದ ಅವರು ಕೆಲಸ ಮಾಡುತ್ತಿದ್ದರು ಮತ್ತು ಆ ಪಕ್ಷದ ಬಗ್ಗೆ ಅವರಿಗೆ ಗೌರವಿತ್ತು ಎಂಬುದನ್ನು ಇದು ತೋರಿಸುತ್ತದೆ. ನಂತರ ಅವರು ಶಾಸಕರಾಗಿ ಮತ್ತು ಲೋಕಲ್ ಅಥಾರಿಟಿಯಿಂದ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಲೇಬರ್ ಮಿನಿಸ್ಟರ್ ಆಗಿ ಸಾಕಷ್ಟು ಪ್ರಗತಿಪರ ವಿಚಾರವನ್ನಿಟ್ಟುಕೊಂಡು ಕೆಲಸ ಮಾಡಿದಂತಹ ಡಿ'ಸೋಜರವರನ್ನು ನಾವು ಕಳೆದುಕೊಂಡಿದ್ದು ದುರದೃಷ್ಟಕರ. ಇದರಿಂದ ನಿಜವಾಗಿಯೂ ದೊಡ್ಡ ಹಾನಿ ನಮ್ಮ ಪಕ್ಷಕ್ಕಷ್ಟೇ ಆಗಿಲ್ಲ. ಈ ರಾಜ್ಯದಲ್ಲಿ ಒಬ್ಬ ಪ್ರಾಮಾಣಿಕ ರಾಜಕಾರಣಿಯನ್ನು ಕಳೆದುಕೊಂಡಿದ್ದೇವೆ ಎನ್ನುವ ದುಃಖ ನನಗಿದೆ. ದಿವಂಗತ ಸದ್ಯೋಜಾತರವರು Transport Minister ಆಗಿದ್ದರು, ನಾನು Revenue Minister ಆಗಿದ್ದಾಗ ಮಾನ್ಯ ಗುಂಡೂರಾವ್‌ರವರ ಕ್ಯಾಬಿನೆಟ್‌ನಲ್ಲಿ ಅವರೊಡನೆ ಕೆಲಸ ಮಾಡತಕ್ಕಂತ ಅವಕಾಶ ನನಗೆ ಸಿಕ್ಕಿತ್ತು. ಬಹಳ ಸರಳ ಮತ್ತು ಸಜ್ಜನ ವ್ಯಕ್ತಿಯಾಗಿದ್ದ ಅವರು ಯಾವುದೇ ಗೋಜಿಗೆ ಹೋಗದೆ, ಎಂದೂ ಕೂಡ ಯಾರ ಮೇಲೂ ಸೇಡು ತೀರಿಸಿಕೋಳ್ಳದೆ, ಬಹಳಷ್ಟು ತನ್ನ ನಡವಳಿಕೆಯಿಂದಲೇ ಜನರ ಮನಸ್ಸನ್ನು ಗೆದ್ದಂತಹವರಾಗಿದ್ದರು. ಅವರು ಯಾವತ್ತೂ ಕೂಡ ಸದನದಲ್ಲಿ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದಾಗಲೆಲ್ಲಾ ಒಂದೇ ಒಂದು ಉತ್ತರವನ್ನು ನೀಡುತ್ತಿದ್ದರು. ಎಂತಹ ಜಟಿಲವಾದ ಪ್ರಶ್ನೆ ಇದ್ದರೂ ಸಹಾ ಅವರು ಆಯಿತು ಪರಿಶೀಲನೆ ಮಾಡುತ್ತೇನೆ, ಎಂದು ಉತ್ತರವನ್ನು ಕೊಡುತ್ತಿದ್ದರು. ಆಗ ಬೇರೆಯವರು ಕೂಡಾ ಅದನ್ನು ತಿಳಿದುಕೊಂಡು ಜಾಸ್ತಿ ಪ್ರಶ್ನೆ ಕೇಳುವುದಕ್ಕೇ ಹೋಗುತ್ತಿರಲಿಲ್ಲ. 'ನಿಮ್ಮದೇನಾದರೂ ಕೆಲಸ ಇದ್ದರೆ, ನನ್ನ ಬಳಿ ಬನ್ನಿ. ಅದನ್ನು ಮಾಡಿಕೊಡುತ್ತೇನೆ, ಪ್ರಶ್ನೆಯನ್ನೇಕೆ ಕೇಳುತ್ತೀರಿ?' ಎಂದು ಅವರು ಹೇಳುತ್ತಿದ್ದರು. ಇಷ್ಟೊಂದು ಗೌರವದಿಂದ ಸದಸ್ಯರನ್ನು ಕಂಡು, ತನ್ನ ಕೈಲಾದಷ್ಟು ಸಹಾಯವನ್ನು ಮಾಡತಕ್ಕ ಕೆಲಸವನ್ನು Transport ಇಲಾಖೆಯಲ್ಲಾಗಲಿ, ಸಣ್ಣ ನೀರಾವರಿಯಲ್ಲಾಗಲಿ ಮತ್ತು ತದನಂತರ ಸ್ವಲ್ಪ ಕಾಲ ಕೆಲಸ ಮಾಡಿದಂತಹ Health Department ನಲ್ಲಾಗಲಿ, ಎಲ್ಲೇ ಇದ್ದರೂ ಕೂಡ ಅವರು ಮಾಡುತ್ತಿದ್ದರು. ಆ ರೀತಿ ಕೆಲಸ ಮಾಡಿ ಜನರ ಮೆಚ್ಚುಗೆಯನ್ನು ಪಡೆದಂತಹ ಒಬ್ಬ ವ್ಯಕ್ತಿಯಾಗಿದ್ದರು ವಿಶೇಷವಾಗಿ ನಾವು ಅವರನ್ನು 'Non political Man' ಎಂದೇ

ಹೇಳಬಹುದು. ಏಕೆಂದರೆ, ಅವರು ಯಾವುದೇ ಒಂದು ರಾಜಕೀಯ ಉದ್ದೇಶವನ್ನಿಟ್ಟುಕೊಂಡು ತಮ್ಮ ಖಾತೆಯಲ್ಲೂ ಕೆಲಸ ಮಾಡಿಲ್ಲ ಅಥವಾ ಅವರ ಮತಕ್ಷೇತ್ರದಲ್ಲೂ ಕೂಡ ಕೆಲಸ ಮಾಡಿಲ್ಲ. ಇದರಿಂದಾಗಿ ಅವರು ಅನೇಕ ಬಾರಿ ಆರಿಸಿ ಬರುವುದು ಸಾಧ್ಯವಾಯಿತು. ಶ್ರೀಮತಿ ಇವಾ ವಾಜ್‌ರವರು ಕೂಡ ನಾನು ರಾಜ್ಯ ಸಚಿವನಾಗಿದ್ದಾಗ, ಮಾನ್ಯ ದೇವರಾಜ್ ಅರಸ್ ಅವರ ಕಾಲದಲ್ಲಿ Food Minister ಆಗಿದ್ದರು. 1977ರಲ್ಲಿ ಚಿಕ್ಕಮಗಳೂರಿನಿಂದ ಆರಿಸಿ ಬಂದು ಅವರು ಸಚಿವೆಯಾಗಿದ್ದರು. ತಮ್ಮ ಇಲಾಖೆಯನ್ನು ಬಹಳ ಒಳ್ಳೆಯ ರೀತಿಯಿಂದ ನಡೆಸಿ, ಜನರ ಮೆಚ್ಚುಗೆಯನ್ನು ಪಡೆದ ಅಲ್ಪಸಂಖ್ಯಾತ ಕೋಮಿಗೆ ಸೇರಿದ ಮಹಿಳೆಯಾಗಿದ್ದರು. ಅವರು ದಕ್ಷತೆಯಿಂದ ಕೆಲಸವನ್ನು ನಿರ್ವಹಿಸಿದ್ದರು. ದಿವಂಗತ ಕರಿಯಪ್ಪಗೌಡರ ಬಗ್ಗೆ ಹೇಳುವುದಾದರೆ, ಅವರು ಹಿರಿಯ ಧುರೀಣರಾಗಿದ್ದರು. 1972 ರಲ್ಲಿ ವಿಶೇಷವಾಗಿ ಹುಣಸೂರಿನಿಂದ ಆರಿಸಿ ಬಂದು ಅವರು ಮಾನ್ಯ ದೇವರಾಜ್ ಅರಸ್‌ರವರಿಗೆ ತಮ್ಮ ಕ್ಷೇತ್ರ ವನ್ನು ಬಿಟ್ಟುಕೊಟ್ಟರು. ಮಾನ್ಯ ದೇವರಾಜ್ ಅರಸ್ ಅವರನ್ನು ಕಾಂಗ್ರೆಸ್ ಪಕ್ಷದ convenor ಆಗಿ appoint ಮಾಡಿದ ಮೇಲೆ, ಅವರಿಗೆ ಪಕ್ಷವು 'ನೀವು Assembly ಯಲ್ಲಿ ನಿಲ್ಲಬಾರದು, ಚುನಾವಣಾ ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕು, ನೀವು ಯಾರಾದರೂ ಒಬ್ಬರನ್ನು ಸದಸ್ಯರಾಗಿ ನಿಲ್ಲಿಸಿ' ಎಂದು ಹೇಳಿತ್ತು. ದಿವಂಗತ ದೇವರಾಜ್ ಅರಸ್‌ರವರು ಆ ಮತಕ್ಷೇತ್ರದಿಂದ ಸುಮಾರು ಆರು ಸಲ ಆರಿಸಿ ಬಂದಂತಹ ವ್ಯಕ್ತಿಯಾಗಿದ್ದರು. ಅದನ್ನು ಬಿಟ್ಟು ಅವರು ಶ್ರೀಮಾನ್ ಕರಿಯಪ್ಪ ಗೌಡರಿಗೆ ಆ ಸ್ಥಾನವನ್ನು ಕೊಟ್ಟರು. ತದನಂತರ ಪುನಃ ನಾವೆಲ್ಲರೂ ಸೇರಿ ಅವರನ್ನು ನಮ್ಮ ನಾಯಕರನ್ನಾಗಿ ಆರಿಸಿದೆವು. ಅವರು ಮುಖ್ಯಮಂತ್ರಿಗಳಾದ ಮೇಲೆ, ಕರಿಯಪ್ಪ ಗೌಡರು ಆ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಶ್ರೀಮಾನ್ ದೇವರಾಜ್ ಅರಸ್‌ರವರಿಗೆ ಪುನರಾಯ್ಕೆ ಆಗುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟರು. ಅವರು KSRTC Chairman ಆಗಿ ಮತ್ತು Housing Board ಸದಸ್ಯರಾಗಿ ಕೆಲಸ ಮಾಡಿದ್ದರು. ಹೀಗೆ ಅನೇಕ ಕ್ಷೇತ್ರಗಳಲ್ಲಿ ತಮ್ಮದೇ ಆದಂತಹ ಒಂದು ನಿಲುವನ್ನು ಇಟ್ಟುಕೊಂಡು ಕೆಲಸವನ್ನು ಮಾಡಿದ್ದರು. ರಾಜಕೀಯದಲ್ಲಿ ವಿಶೇಷವಾಗಿ ಹುಣಸೂರು ಮತ್ತು ಮೈಸೂರು ಜಿಲ್ಲೆಯಲ್ಲಿ ತಮ್ಮ ಪ್ರಭಾವವನ್ನು ಇಟ್ಟುಕೊಂಡು ವ್ಯಕ್ತಿಗಳಾಗಿದ್ದರು. ದಿವಂಗತ ಪಾರ್ಥಸಾರಥಿರವರು ನಮ್ಮೆಲ್ಲರಿಗಿಂತಲೂ ಹಿರಿಯರು ಸ್ವಾತಂತ್ರ ಚಳವಳಿಯಲ್ಲಿ ಭಾವಹಿಸಿ, ಅಂದಿನ ಕಾಲದಲ್ಲೇ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಲ್ಲದೆ ಒಬ್ಬ

rationalist ವಿಚಾರಧಾರೆಗೆ ಸೇರಿದವರಾಗಿದ್ದರು. ವಿಶೇಷವಾಗಿ ಅವರಿಗೆ ಡಾ: ಬಿ.ಸಿ.ರಾಯ್ ಪ್ರಶಸ್ತಿ ಕೂಡ ಸಿಕ್ಕಿತ್ತು. ಅಂತಹ ಒಬ್ಬ ವ್ಯಕ್ತಿ ನಮ್ಮಿಂದ ಇವತ್ತು ಆಗಲಿ ಹೋಗಿದ್ದಾರೆ. ಮಾನ್ಯ ಓಬಣ್ಣ ರಾಜುರವರೂ ಕೂಡ ನಮ್ಮ ಜೊತೆಯಲ್ಲಿ ಇವತ್ತು ಇಲ್ಲ. ಮಾನ್ಯ ದೊಡ್ಡಬೋರೇಗೌಡರವರೂ ಕೂಡ ಇವತ್ತು ನಮ್ಮಿಂದ ದೂರವಾಗಿದ್ದಾರೆ. ಮಾನ್ಯ ಶಿವಶಂಕರಪ್ಪರವರೂ ಕೂಡ ಇವತ್ತು ನಮ್ಮ ಮಧ್ಯದಲ್ಲಿ ಇಲ್ಲ. ಹಲವಾರು ವರ್ಷಗಳಿಂದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ತಮ್ಮದೇ ಆದಂತಹ ಗುರುತನ್ನು ಅವರು ಸಮಾಜದಲ್ಲಿ ಬಿಟ್ಟು ಹೋಗಿದ್ದಾರೆ. ಮಾನ್ಯ ಚನ್ನಯ್ಯ ಒಡೆಯರ್‌ರವರು ಅತ್ಯಂತ ಹಿರಿಯರು. ವಿಶೇಷವಾಗಿ ಕುರುಬ ಜನಾಂಗ ಅವರಿಗೆ ಹೆಚ್ಚಿನ ಮಹತ್ವ ಕೊಟ್ಟಿತ್ತು. ಗುರುಗಳಾಗಿ ಹೆಚ್ಚಿನ ಜನ ಅವರಿಂದ ಆಶೀರ್ವಾದವನ್ನು ಪಡೆದುಕೊಳ್ಳುತ್ತಿದ್ದರು ಮತ್ತು ಅವರನ್ನು ಗೌರವಿಸುತ್ತಿದ್ದರು. ನಮ್ಮ ಪಕ್ಷದ ವತಿಯಿಂದ ಅವರು ಎರಡು ಸಲ ಪಾರ್ಲಿಮೆಂಟ್ ಸದಸ್ಯರಾಗಿದ್ದರು. ಹಾಗೆ ವಯಸ್ಸು ಇಳಿಯುತ್ತಾ ಹೋದಂತೆ ಕೆಲವು ಸಾರಿ ಅವರು ಬೇರೆ ಬೇರೆ ಪಕ್ಷಕ್ಕೂ ಕೂಡ ಕಾರಣಾಂತರದಿಂದ ಹೋಗಬೇಕಾಯಿತು. ಅದೇನೆ ಇದ್ದರೂ ಸ್ವಚ್ಛ ಮತ್ತು ಪ್ರಾಮಾಣಿಕ ವ್ಯಕ್ತಿಯಾಗಿ ರಾಜಕಾರಣದಲ್ಲಿದ್ದರು. ಅವರು ತನಗಾಗಿ ಏನೂ ಮಾಡಿಕೊಂಡಿಲ್ಲ ಅಥವಾ ಅನಾವಶ್ಯಕವಾಗಿ ರಾಜಕೀಯದಲ್ಲಿ ವೈಮನಸನ್ನು ಇಟ್ಟುಕೊಳ್ಳಲಿಲ್ಲ. ಒಬ್ಬ ಅಜಾತ ಶತ್ರು ಇದ್ದಂತೆ ಅವರು ಇದ್ದರು. ಅಂತಹ ಒಬ್ಬ ಹಿರಿಯ ಧುರೀಣರನ್ನು ಇವತ್ತಿನ ದಿನ ನಾವು ಕಳೆದುಕೊಂಡಿದ್ದೇವೆ. ಮತ್ತು ಶ್ರೀಮಾನ್ ವೀರಪಭದ್ರಪ್ಪನವರು ಸಂಡೂರು ಕ್ಷೇತ್ರದಿಂದ ಒಂದು ಸಾರಿ ಶಾಸಕರಾಗಿದ್ದರು ಮತ್ತು ಲೋಕಸಭೆಯ ಸದಸ್ಯರು ಕೂಡ ಆಗಿದ್ದರು, ರಾಜಕೀಯದಲ್ಲಿ ತನ್ನ ವಿಶೇಷವಾದ ಗುಣವನ್ನು ಇಟ್ಟುಕೊಂಡು ಬಾಳಿದಂತಹ ವ್ಯಕ್ತಿಯಾಗಿದ್ದರು. ಇವತ್ತು ನಾವು ಇವರೆಲ್ಲರನ್ನು ಕಳೆದುಕೊಂಡಿದ್ದೇವೆ, ತಾವು ಮಂಡಿಸಿದ ಈ ಸಂತಾಪ ಸೂಚನೆಗೆ ನಾನು ಬೆಂಬಲಿಸುತ್ತಾ ನನ್ನ ಹೃತ್ಪೂರ್ವಕವಾದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ (ರಾಮನಗರ) :– ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿವಸ 11 ಜನ ಪ್ರಮುಖ ನಾಯಕರುಗಳು ವಿಧಾನ ಸಭೆ, ವಿಧಾನ ಪರಿಷತ್ತು ಮತ್ತು ಲೋಕ ಸಭೆಯ ಸದಸ್ಯರುಗಳಾಗಿ ಮತ್ತು ಹಲವಾರು ಮಂತ್ರಿಗಳಾಗಿ ಕೆಲಸ ಮಾಡಿರುವ ಪ್ರಮುಖ ನಿಧನದ ಸಂತಾಪ ಸೂಚನೆಯನ್ನು ಮುಂಡಿಸಿದ್ದೀರಿ. ಈ ಎಲ್ಲಾ 11 ಜನ ಪ್ರಮುಖರ

ಆತ್ಮಕ್ಕೆ ಶಾಂತಿಯನ್ನು ಕೋರಲು ಮೊದಲನೆಯದಾಗಿ ಬಯಸುತ್ತಾ, ಈಗಾಗಲೆ ಸನ್ಮಾನ್ಯ ವಿರೋಧಪಕ್ಷದ ನಾಯಕರು ಸುದೀರ್ಘವಾಗಿ ಎಲ್ಲಾ ಪ್ರಮುಖ ವ್ಯಕ್ತಿಗಳ ಬಗ್ಗೆ ವಿವರವಾದ ಚರ್ಚೆಯನ್ನು ಏನು ಮಾಡಿದ್ದಾರೆ ಅದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ, ಇವತ್ತು ಈ ಒಂದು ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸಿ, ಇವರಿಗೆ ಸಂತಾಪವನ್ನು ವ್ಯಕ್ತ ಪಡಿಸಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೂ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಅಮರೆಗೌಡ ಪಾಟೀಲ್ ಬೈಯಾಪುರ (ಕುಷ್ಟಗಿ) :– ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ 11 ಜನ ಹಿರಿಯ ಸದಸ್ಯರ ಬಗ್ಗೆ ಸಂತಾಪ ಸೂಚನೆಯನ್ನು ತಾವು ತಂದಿದ್ದೀರಿ. ನಾನು ಆ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಮೊದಲನೆಯದಾಗಿ ಶ್ರೀಮತಿ ಬಸವರಾಜೇಶ್ವರಿಯವರು ಒಬ್ಬ ಧೀಮಂತ ಮಹಿಳೆಯಾಗಿ ನನ್ನ ಸ್ವಂತ ರಾಯಚೂರು ಜಿಲ್ಲೆಯ ಲಿಂಗಸೂರು ತಾಲ್ಲೂಕಿನ ಗೆಜ್ಜಲಗಟ್ಟ ಗ್ರಾಮದವರಾಗಿದ್ದಾರೆ. ಅವರು ಬಳ್ಳಾರಿಯಲ್ಲಿ ಹುಟ್ಟಿದವರಾಗಿದ್ದರು. ಕೂಡ ರಾಜಕೀಯ ಪ್ರಾರಂಭವಾಗಿವುದು ರಾಯಚೂರು ತಾಲ್ಲೂಕಿನ ಲಿಂಗಸೂರಿನ ಒಂದು ಭಾಗವಾದ ಮಾನ್ವಿ ಕ್ಷೇತ್ರದಿಂದ ಸತತ ಮೂರು ಭಾರಿ ವಿಧಾನ ಸಭೆಯ ಸದಸ್ಯರಾಗಿ ಮತ್ತು ವಿಧಾನ ಪರಿಷತ್ತಿನ ಸದಸ್ಯರಾಗಿ ಅನೇಕ ಬಡವರ ಮತ್ತು ದೀನದಲಿತರ ಬಗೆ ಕಾಳಜಿಯುಳ್ಳ ಒಬ್ಬ ಧೀಮಂತ ಮಹಿಳೆಯಾಗಿದ್ದರು; ಅವರು ಪಕ್ಷಾತೀತವಾಗಿ ಯುವಕರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ರಾಜಕಾರಣದಲ್ಲಿ ನಮ್ಮಂತಹ ಯುವಕರಿಗೆ ಹೆಚ್ಚು ಪ್ರಾತಿನಿಧ್ಯಕೊಟ್ಟಂತಹ ಒಬ್ಬ ಮಹಿಳೆಯಾಗಿದ್ದ ಶ್ರೀಮತಿ ಬಸವರಾಜೇಶ್ವರಿಯವರು ಪಕ್ಷಾತೀತವಾಗಿ "ನಾನು ಬೇರೆ ಪಕ್ಷದಲ್ಲಿದ್ದರೂ ಕೂಡ ಅಭಿವೃದ್ಧಿ ಕೆಲಸದಲ್ಲಿ ರಾಜಕಾರಣ ಮಾಡಬಾರದು, ಎಲ್ಲರೂ ಒಗ್ಗಟ್ಟಾಗಿ ಕೆಲಸ ನಿರ್ವಹಿಸಿ ಈ ನಮ್ಮ ಜಿಲ್ಲೆ ಮತ್ತು ತಾಲ್ಲೂಕು ಹಿಂದುಳಿದಿದೆ, ಅದನ್ನು ಅಭಿವೃದ್ಧಿಯತ್ತ ತರಬೇಕು" ಎನ್ನವ ಮಾತನ್ನು ಹೇಳುತ್ತಿದ್ದರು. ವರ್ಷಕ್ಕೆ ಪ್ರತಿ ಒಂದು ಸಾರಿಯಾದರೂ ನನ್ನ ತಾಲ್ಲೂಕಿಗೆ ಬಳ್ಳಾರಿಯಿಂದ ಬಂದು ನನ್ನ ಕರೆಯಿಸಿ ಮಾತನಾಡಿಸತಕ್ಕಂತಹ ಒಳ್ಳೆಯ ಗುಣವನ್ನು ಹೊಂದಿರುವ ಒಬ್ಬ ಮಹಿಳೆಯಾಗಿದ್ದರು. ಅವರು ಇವತ್ತಿನ ದಿವಸ ನಮ್ಮನ್ನು ಅಗಲಿ ಹೋಗಿದ್ದಾರೆ, ನಾನು ವೈಯಕ್ತಿಕವಾಗಿ ಮತ್ತು ತಾಲೂಕಿನ ಪರವಾಗಿ ಅವರಿಗೆ ದೇವರು ಸದ್ಗತಿಯನ್ನು ಕೊಡಲೆಂದು ಹಾರೈಸುತ್ತೇನೆ.

ಹಾಗೇ ಉಳಿದ 11 ಜನರಿಗೂ ಕೂಡ ದೇವರು ಒಳ್ಳೆಯ ಸದ್ಗತಿಯನ್ನು ನೀಡಲೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ತಿರಾ) :– ಮಾನ್ಯ ಅಧ್ಯಕ್ಷರೆ, ಇವತ್ತು ಸುಮಾರು 11 ಜನ ವಿಧಾನ ಸಭೆ ವಿಧಾನ ಪರಿಷತ್ತಿನ ಮತ್ತು ಲೋಕಸಭೆಯ ಸದಸ್ಯರಾಗಿ ಸಾರ್ವಜನಿಕ ಜೀವನದಲ್ಲಿ ಸೇವೆಯನ್ನು ಸಲ್ಲಿಸಿ ನಿಧನರಾಗಿದ್ದಾರೆ. ತಾವು ತಂದಿರುವ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತ ಪಡಿಸುವುದರ ಜೊತೆಗೆ ಒಂದು ಬಹಳ ಮುಖ್ಯವಾದುದು, ಶ್ರೀಮತಿ ಬಸವರಾಜೇಶ್ವರಿಯವರು ಮಹಿಳೆಯಾಗಿ ಶಾಸಕರಾಗಿದ್ದರು, ವಿಧಾನ ಪರಿಷತ್ತಿಗೆ ಮತ್ತು ಲೋಕಸಭೆಗೂ ಕೂಡ ಆಯ್ಕೆಯಾಗಿದ್ದರು. ಬಹುಶಃ ಶ್ರೀಮತಿಯವರ ನಿಧನದ ವಾರ್ತೆ ಅವರನ್ನು ಅರಿತಿದ್ದಂತಹ ಕೃಷಿಕರಲ್ಲಿ ಮತ್ತು ರೈತರ ಬಗ್ಗೆ ಕಾಳಜಿ ಇಟ್ಟುಕೊಂಡಂತಹ ಜನರಿಗೆ ಬಹಳ ದುಃಖವನ್ನು ತರುವ ಒಂದು ಸಂಗತಿ. ಕಾರಣ, ಅವರು ಸಚಿವರಾಗಿದ್ದಾಗ ಕರ್ನಾಟಕ ಕೃಷಿ ಸಮಾಜಕ್ಕೆ ತನ್ನದೆ ಆದ ಅದ್ವಿತೀಯವಾದ ಸೇವೆಯನ್ನು ಸಲ್ಲಿಸಿ ಆ ಕೃಷಿಕ ಸಮಾಜ ಎಚ್ಚೆತ್ತುಕೊಳ್ಳಬೇಕು ಎಲ್ಲಾ ಜಿಲ್ಲೆಯಲ್ಲೂ ಕೂಡ ಬೆಳೆಯಬೇಕೆಂದು ಹೋರಾಟ ಮಾಡಿದ ಮೊದಲ ಮಹಿಳೆ ಎಂದರೆ ಶ್ರೀಮತಿ ಬಸವರಾಜೇಶ್ವರಿಯವರು. ಅವರ ಪ್ರಯತ್ನದಿಂದಾಗಿ ಇವತ್ತು ಎಲ್ಲಾ ಜಿಲ್ಲೆಗಳಲ್ಲೂ ಕೃಷಿಕ ಸಮಾಜ ತಲೆಯೆತ್ತಿ ಬದುಕುವಂತಾಗಿದೆ. ಹಾಗಾಗಿ ರೈತರ ಸಮಸ್ಯೆಗಳ ವಿಚಾರ ಬಂದಾಗ ಅವರು ಆಗಾಗ್ಗೆ ಸರ್ಕಾರಕ್ಕೆ ಸಲಹೆಯನ್ನು ಕೊಡುವುದನ್ನು ಕೂಡ ನಾವು ನೋಡಿದ್ದೇವೆ. ಹಾಗಾಗಿ ಅವರನ್ನು ನಾವು ಯಾರೂ ಮರೆಯುವಂತಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಾ ಅವರ ಧೈರ್ಯಕ್ಕೆ ಇವತ್ತು ನಾವು ಮೆಚ್ಚುಗೆಯನ್ನು ವ್ಯಕ್ತಪಡಿಬೇಕಾಗಿದೆ. ರೈತರ ವಿಚಾರ ಬಂದಾಗ ಹೆಣ್ಣುಮಗಳಾಗಿದ್ದರೂ, ಅವರು ತೋರಿಸಿದಂತಹ ಒಂದು ಧೈರ್ಯವನ್ನು ಬಹುಶಃ ಯಾರೂ ತೋರಿಸಲು ಸಾಧ್ಯವಿಲ್ಲವೆನ್ನುವ ರೀತಿಯಲ್ಲಿ ಅವರು ಧೈರ್ಯವನ್ನು ತೋರಿಸುತ್ತಿದ್ದರು ಮತ್ತು ಸೂಚನೆಗಳನ್ನು ಕೂಡ ಕೊಡುತ್ತಿದ್ದರೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆ ಪ್ರಾಮಾಣಿಕತೆಗೆ ಮತ್ತೊಂದು ಹೆಸರು ಬ್ಲೇಸಿಯಸ್ ಡಿಸೋಜರವರು ಎಂದರೆ ತಪ್ಪಾಗಲಾರದು. ಅವರು ಪ್ರಾಮಾಣಿಕ ಕಾಂಗ್ರೆಸಿನ ಅಧ್ಯಕ್ಷರಾಗಿ ಕೊನೆ ಉಸಿರಿರುವವರೆಗೆ ಕೆಲಸ ಮಾಡಿ ತನ್ನ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಮತ್ತು ಪ್ರತಿನಿಧಿಯಾಗಿ ಸೇವೆಯನ್ನು ಕೂಡ ಸಲ್ಲಿಸಿದ್ದಾರೆ. ಅದೆಲ್ಲಕ್ಕಿಂತ ಹೆಚ್ಚಾಗಿ ನಮ್ಮ ಸದ್ಯೋಜಾತರವರು ನಾನು ವಿಧಾನ

ಸಭೆಯ ಸದಸ್ಯನಾಗಿದ್ದಾಗ ನಮ್ಮಲ್ಲಿ ಕೆರೆ ಒಡೆದ ಘಟನೆಯಾದ ಸಂದರ್ಭದಲ್ಲಿ ನಾನು ದೂರವಾಣಿ ಮಾಡಿ ನಮ್ಮಲ್ಲಿ ಒಂದು ಕೆರೆ ಒಡೆದಿದೆ ತಾವು ಬರಬೇಕೆಂದು ಹೇಳಿದ ಕೆಲವೇ ಗಂಟೆಗಳಲ್ಲಿ ನಮ್ಮಲ್ಲಿಗೆ ಬಂದು ನಮ್ಮಲ್ಲಾಗಿರುವ ಪರಿಸ್ಥಿತಿಯನ್ನು ನೋಡಿ ಇವತ್ತು ಮೂರು ತಿಂಗಳೊಳಗಾಗಿ ಅಂದು 45 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕೆರೆಯನ್ನು ಕಟ್ಟಿಸಿಕೊಡುವ ಕೆಲಸಪನ್ನು ಮಾಡುವುದರ ಜೊತೆಗೆ ಮುಖ್ಯಮಂತ್ರಿಗಳು ಕೂಡ ಅಲ್ಲಿಗೆ ಬರಬೇಕೆನ್ನುವ ಒತ್ತಾಯವನ್ನು ಮಾಡಿ ಅವರನ್ನು ಕರೆಯಿಸುವಂತಹ ಕೆಲಸವನ್ನು ಮಾಡಿದರು. ಮತ್ತು ರೈತರ ಬಗ್ಗೆ ಕಾಳಜಿಯನ್ನು ಇಟ್ಟುಕೊಂಡಂತಹ ವ್ಯಕ್ತಿಯನ್ನು ನಾನಂತೂ ಮರೆಯುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಹತ್ತಿರದಿಂದ ಬಲ್ಲವನಾದ ಮತ್ತೊಬ್ಬ ವ್ಯಕ್ತಿ ಎಂದರೆ ಶ್ರೀಮಾನ್ ಕರಿಯಪ್ಪ ಗೌಡರು. ಇವರು ಒಬ್ಬ ಹಿರಿಯ ಪ್ರಾಮಾಣಿಕ ಕಾಂಗ್ರೆಸಿಗರು, ಅವರು ದೇವರಾಜ ಅರಸುರವರಿಗೆ ಅತ್ಯಂತ ಆತ್ಮೀಯ ವ್ಯಕ್ತಿಯಾಗಿದ್ದರು. ದೇವರಾಜ ಅರಸುರವರನ್ನು ವಿಧಾನ ಸಭೆಗೆ ಆಯ್ಕೆ ಮಾಡಿದ ಮೇಲೆ ಅವರಿಗೋಸ್ಕರ ಸ್ಥಾನವನ್ನು ತೆರವು ಮಾಡಿದವರು, ಬಹುಶಃ ಅವರು ಕೊನೆಯ ದಿವಸದವರೆಗೆ ದೇವರಾಜ ಅರಸುರವರ ನಿರಂತರ ಭಕ್ತರಾಗಿ, ಅವರ ತತ್ವ, ಸಿದ್ಧಾಂತ, ಪ್ರಿನ್ಸಿಪಲ್ಸ್, ಅವರ ವಿಚಾರದಲ್ಲಿ ಅತ್ಯಂತ ಕಾಳಜಿಯುಳ್ಳ ವ್ಯಕ್ತಿಯಾಗಿದ್ದರು ಎನ್ನುವ ಮಾತನ್ನು ನಾನು ಹೇಳುತ್ತೇನೆ. ನಾನು ಪ್ರತಿಯೊಬ್ಬ ವ್ಯಕ್ತಿಗಳ ವಿಚಾರವನ್ನು ಹೇಳಬೇಕಾಗಿಲ್ಲ, ಈಗಾಗಲೆ ವಿರೋಧಪಕ್ಷದ ನಾಯಕರಾಗಿರುವ ಖರ್ಗೆಯವರು ಮತ್ತು ಸಭಾನಾಯಕರು ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಮಗೆ ದುಃಖವೆನಿಸುವುದು, ಒಬ್ಬೊಬ್ಬರು ಕೂಡ ಅವರವರ ಜಿಲ್ಲೆಯಲ್ಲಿ ಯಾವ ರೀತಿಯಾಗಿ ತಮ್ಮದೇ ಆಗಿರುವ ಹೆಜ್ಜೆಯನ್ನು, ಗುರತನ್ನು ಬಿಟ್ಟುಹೋಗಿದ್ದಾರೆ. ಅವರು ನಡೆದುಕೊಂಡು ಬಂದಂತಹ ಜೀವನದ ದಾರಿ, ಅವರು ಇಟ್ಟಂತಹ ಅದರ್ಶಗಳು, ಅವರು ಬಿಟ್ಟುಹೋದಂತಹ ಕೆಲಸಗಳನ್ನು ಯಾವತ್ತು ಕೂಡ ಮರೆಯಲು ಆಗುವುದಿಲ್ಲ. ಮತ್ತು ಆ ಜಿಲ್ಲೆಗೆ ಹಾಗೂ ಕುಟುಂಬಗಳಿಗೆ ಅವರ ಅಗಲಿಕೆಯಿಂದ ನಷ್ಟವಾಗುವುದರ ಜೊತೆಗೆ ಕರ್ನಾಟಕ ರಾಜ್ಯವು ಕೂಡ ಇಂತಹ ನಾಯಕರುಗಳನ್ನು ಕಳೆದುಕೊಂಡು, ನಾವು ಅತ್ಯಂತ ಬಡವರಾಗಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನನಗೆ ಈ ಸಂದರ್ಭದಲ್ಲಿ ಸಂತಾಪ ಸೂಚನೆಯನ್ನು ವ್ಯಕ್ತಪಡಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ

Vol-2-F.4

ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ) :– ಮಾನ್ಯ ಸಭಾಧ್ಯಕ್ಷರೆ, ಈ ದಿನ ನಮ್ಮನ್ನು ಅಗಲಿರತಕ್ಕಂತಹ ಶ್ರೀಮತಿ ಬಸವರಾಜೇಶ್ವರಿ, ಶ್ರೀ ಬ್ಲೇಸಿಯಸ್ ಎಂ.ಡಿ'ಸೋಜ, ಶ್ರೀ ಎಂ.ಎಂ.ಜೆ. ಸದ್ಯೋಜಾತ ಶ್ರೀಮತಿ ಇವಾ ವಾಜ್, ಶ್ರೀ ಡಿ. ಕರಿಯಪ್ಪ ಗೌಡ, ಡಾ: ಟಿ. ಪಾರ್ಥಸಾರಥಿ, ಶ್ರೀ ಎಂ. ಓಬಣ್ಣ ರಾಜು, ಶ್ರೀ ದೊಡ್ಡಬೋರೇಗೌಡ, ಶ್ರೀ ಹೆಚ್.ಸಿ. ಶಿವಶಂಕರಪ್ಪ, ಶ್ರೀ ಚನ್ನಯ್ಯ ಒಡೆಯರ್, ಮತ್ತು ಶ್ರೀ ಕೆ.ಎಸ್. ವೀರಭದ್ರಪ್ಪ ಇವರ ನಿಧನದಿಂದ ಇವತ್ತು ನಮ್ಮ ಕರ್ನಾಟಕ ರಾಜ್ಯಕ್ಕೆ ತುಂಬಲಾರದ ಅನ್ಯಾಯವಾಗಿದೆ ಅದರಲ್ಲಿಯೂ ವಿಶೇಷವಾಗಿ ಸನ್ಮಾನ್ಯ ಹೆಚ್.ಸಿ. ಶಿವಶಂಕರಪ್ಪ ನಮ್ಮ ಚಳ್ಳಕೆರೆ ತಾಲ್ಲೂಕಿನವರಾಗಿದ್ದು, 1983ನೇ ವಿಧಾನಸಭೆ ಚುನಾವಣೆಯಲ್ಲಿ ನಾವೆಲ್ಲಾ ಒಟ್ಟಾಗಿ ಇದ್ದು, ಆ ಚುನಾವಣೆಯಲ್ಲಿ ಹೆಚ್ಚಿನ ಬಹುಮತದಿಂದ ಸನ್ಮಾನ್ಯ ಶಿವಶಂಕರಪ್ಪನವರು ಗೆದ್ದು, ನಮ್ಮ ತಾಲ್ಲೂಕಿಗೆ ಉತ್ತಮ ಕೆಲಸ ಮಾಡಿದ್ದರು. ಇಷ್ಟೇ ಅಲ್ಲ ಅದಕ್ಕಿಂತ ಮುಂಚೆ ಅವರು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿ ತಾಲ್ಲೂಕಿನ ಸರ್ವತೋಮುಖ ಅಭಿವೃದ್ಧಿಗೆ ದುಡಿಯುವುದರ ಜೊತೆಗೆ ಅವರ ನಡೆ–ನುಡಿ, ಅವರ ಸಜ್ಜನಿಗೆ ಇಂದಿಗೂ ನಮಗೆಲ್ಲರಿಗೂ ದಾರಿ ದೀಪವಾಗಿದೆ. ಅವರ ಜೀವನದಲ್ಲಿ ಯಾರಿಗೂ ತೊಂದರೆ ಕೊಟ್ಟವರಲ್ಲ. ಒಂದು ಕೆಟ್ಟ ಭಾಷೆ ಬಳಸಿದವರಲ್ಲ. ಅಂತಹ ಒಬ್ಬ ವ್ಯಕ್ತಿ ನಮ್ಮ ತಾಲ್ಲೂಕಿನಲ್ಲಿ ಅಗಲಿರತಕ್ಕಂಥದ್ದು ತುಂಬ ದುಃಖವಾಗಿರತಕ್ಕಂತಹ ವಿಷಯ. ಇವರು ನಮ್ಮ ತಾಲ್ಲೂಕಿನ ಒಬ್ಬ ಹಿರಿಯ ಮುತ್ಸದ್ದಿ ರಾಜಕಾರಿಣಿಯೂ ಆಗಿ ಆ ಕುಟುಂಬದ ಒಬ್ಬ ಮಹಾನ್ ವ್ಯಕ್ತಿ ಆಗಿದ್ದರು. ಇಂತಹ ವ್ಯಕ್ತಿ ನಿಧನದಿಂದ ಅವರ ಕುಟುಂಬಕ್ಕೆ ದೇವರು ಅವರು ಅಗಲಿರತಕ್ಕಂತಹ ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಕೊಡುವುದರ ಜೊತೆಗೆ ಅವರ ಆತ್ಮಕ್ಕೆ ದೇವರು ಚಿರಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು ದಕ್ಷಿಣ) :– ಸನ್ಮಾನ್ಯ ಸಭಾಧ್ಯಕ್ಷರೆ, ವಿಧಾನಸಭಾಸದಸ್ಯರಾಗಿ, ಸಚಿವರಾಗಿ ವಿವಿಧ ಜವಾಬ್ದಾರಿ ಸ್ಥಾನಗಳಲ್ಲಿ ಕರ್ನಾಟಕ ರಾಜ್ಯದ ನಾಡು ನುಡಿಗೆ ಅನುಪಮ ಸೇವೆ ಸಲ್ಲಿಸಿದ 11 ಜನ ಪ್ರಮುಖ ಧೀಮಂತ ನಾಯಕರ ಸೇವೆಯನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸಿ ಶ್ರದ್ಧಾಂಜಲಿ ಸಲ್ಲಿಸುವ ತಮ್ಮ ಸೂಚನೆಗೆ

ಅನುಮೋದನೆ ಸಲ್ಲಿಸುತ್ತಾ ವಿಶೇಷವಾಗಿ ನನ್ನ ಮಂಗಳೂರು ಕ್ಷೇತ್ರದ ನಮ್ಮೆಲ್ಲರ ಆತ್ಮೀಯರಾದ ಶ್ರೀ ಎಂ. ಬ್ಲೇಸಿಯಸ್ ಡಿಸೋಜ ಅವರ ಬಗ್ಗೆ ಎರಡು ಅನಿಸಿಕೆಗಳನ್ನು ದಾಖಲಿಸಲು ಇಚ್ಛಿಸುತ್ತೇನೆ. ವೃತ್ತಿಯಲ್ಲಿ ಕಾನೂನು ಪದವೀಧರರಾಗಿದ್ದರೂ ಕೂಡ ಪ್ರವೃತ್ತಿಯಲ್ಲಿ ಒಬ್ಬ ಒಳ್ಳೆಯ ಸಮಾಜ ಸೇವಕರಾಗಿದ್ದರು, ಸೌಜನ್ಯಶಾಲಿಗಳೂ, ಮೃದು ಭಾಷಿಗಳು ಆಗಿರುವಂತಹವರು ಮತ್ತು ಒಳ್ಳೆಯ ವಾಚ್ಮಿಗಳು ಕೂಡ ಆಗಿದ್ದರು. ಮಂಗಳೂರು ನಗರಸಭೆಯ ಚುನಾಯಿತ ಅಧ್ಯಕ್ಷರಾಗಿ ಅವರು ಸಲ್ಲಿಸಿದ ಸೇವೆ, ಮುಂದೆ ಕರ್ನಾಟಕ ರಾಜ್ಯದ ವಿಧಾನಸಭಾ ಸದಸ್ಯರಾಗಿ, ಕರ್ನಾಟಕ ರಾಜ್ಯದ ಕಾನೂನು ಸಚಿವರಾಗಿ, ಕಾರ್ಮಿಕ ಸಚಿವರಾಗಿ ಸಲ್ಲಿಸಿದ ಸೇವೆ ಕೂಡ ಜನತೆ ಇವತ್ತು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತಿದ್ದಾರೆ. ಶ್ರೀಯುತ ಬ್ಲೇಸಿಯಸ್ ಡಿಸೋಜರವರ ಜೊತೆಯಲ್ಲಿ 1989, 1990 ಮತ್ತು 1994 ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವಂತಹ ಅವಕಾಶ ನನಗಿದ್ದರೂ ಕೂಡ, ಎಲ್ಲಾ ಸಂದರ್ಭಗಳಲ್ಲಿ ಅವರೊಬ್ಬ ಸನ್ಮಿತ್ರರಾಗಿ ನನಗೆ ಸಲಹೆ ಸಹಕಾರಗಳನ್ನು ಕೊಡುತ್ತಿದ್ದರು. ಎಲ್ಲಿಯೂ ವೈರತ್ವದ ಭಾವನೆಗಳಿಲ್ಲ. ಅಭಿವೃದ್ಧಿಯೇ ತನ್ನ ಮಂತ್ರವನ್ನಾಗಿ ಮಾಡಿ, ಯಾವುದೇ ಅಭಿವೃದ್ಧಿ ಚಟುವಟಿಕೆಯಲ್ಲಿ ತುಂಬು ಹೃದಯದ ಅವರ ಸಹಕಾರವನ್ನು ಅವರು ಕೊಟ್ಟಿರುವಂತಹ ಮಾರ್ಗದರ್ಶನವನ್ನು ಕೂಡ ಈ ಸಂದರ್ಭದಲ್ಲಿ ಮಂಗಳೂರು ಕ್ಷೇತ್ರದ ಶಾಸಕನಾಗಿ ನಾನು ಅವರ ಸ್ಮರಣೆ ಮಾಡುತ್ತಿದ್ದೇನೆ. ಬಹುಶಃ ನಾನು ಕಳೆದ ಅವಧಿಯಲ್ಲಿ ಅಧೀನ ಶಾಸನ ರಚನಾ ಸಮಿತಿಯ ಅಧ್ಯಕ್ಷನಾಗಿ ಅನೇಕ ನಿರ್ಣಯಗಳನ್ನು ನಾವು ತೆಗೆದುಕೊಳ್ಳುವಂತಹ ಅವಕಾಶ ನಮಗೆ ದೊರಕಿತ್ತು. ಬಹುಶಃ artificially created light energy ಬಗ್ಗೆ ವಿವರವಾದ ಚರ್ಚೆ ಮಾಡಿ, ನಮ್ಮ ಕರ್ನಾಟಕ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ವಿಶೇಷವಾದ ಆರ್ಥಿಕ ಶಕ್ತಿಯನ್ನು ಕೊಡುವಂತಹ ಒಂದು ವಿಷಯದ ಬಗ್ಗೆ ವೈಜ್ಞಾನಿಕವಾಗಿ ನಾವು ಮಂಡನೆ ಮಾಡಬೇಕೆಂದು ಹೇಳುವಂತಹ ಸಂದರ್ಭದಲ್ಲಿ ನನಗೆ ಬೆನ್ನೆಲುಬಾಗಿ ಶಕ್ತಿಯನ್ನು ಕೊಟ್ಟಿರುವಂತಹವರು ಶ್ರೀಯುತ ಬ್ಲೇಸಿಯಸ್ ಡಿಸೋಜರವರು. ಅಷ್ಟು ಮಾತ್ರವಲ್ಲ ಆ್ಯಕ್ಟ್‌ಗಳ ಬಗ್ಗೆ ಮಾತ್ರ ಕೋಡಿಫಿಕೇಷನ್ ಆಗಿದೆ. ರೂಲ್ಸ್ ಬಗ್ಗೆ ಕೋಡಿಫಿಕೇಷನ್ ಆಗಿಲ್ಲ. ಅದರ ಬಗ್ಗೆ ನಾವು ಒಂದು ಚಿಂತನೆಯನ್ನು ಆರಂಭ ಮಾಡಿದಾಗ ಕೂಡ ನಮಗೆ ಶ್ರೀಯುತ ಬ್ಲೇಸಿಯಸ್ ಡಿಸೋಜರವರು ಸಹಾಯ ಮಾಡಿ ಮಾರ್ಗದರ್ಶನ ನೀಡಿದರು. ಮಂಗಳೂರಿನಲ್ಲಿ ಸಾರ್ವಜನಿಕವಾಗಿ ನಡೆದಂತಹ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ

ಎಲ್ಲ ಸಮಾಜದವರು, ಬಂಧುಗಳು, ಎಲ್ಲ ಸಂಪ್ರದಾಯಕ್ಕೆ ಸಂಬಂಧಪಟ್ಟವರು, ಎಲ್ಲ ಪಕ್ಷದವರೂ ಕೂಡ ತಮ್ಮ ಅನಿಸಿಕೆಗಳನ್ನು ಮತ್ತು ಭಾವನೆಗಳನ್ನು ವ್ಯಕ್ತಪಡಿಸಿ ಅಲ್ಲಿ ದಾಖಲಿಸಿದ್ದಾರೆ. ಅವರು ಒಬ್ಬ ಅಜಾತಶತ್ರು ಆಗಿದ್ದರು ಎಂದು ನಮ್ಮೆಲ್ಲರ ಅಭಿಪ್ರಾಯ. ಇಂತಹ ಧೀಮಂತ ನಾಯಕರಾದ ಶ್ರೀ ಬ್ಲೇಸಿಯಸ್ ಡಿಸೋಜರವರನ್ನು ಕಳೆದುಕೊಂಡಿರುವ ದುಃಖ ಮಂಗಳೂರು ಕ್ಷೇತ್ರಕ್ಕೆ ಮಾತ್ರವಲ್ಲ, ಇಡೀ ಕರ್ನಾಟಕ ರಾಜ್ಯಕ್ಕೆ ಅಪಾರವಾದ ನಷ್ಟವನ್ನು ತಂದಿದೆ. ಇಂತಹ 11 ನಾಯಕರುಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿ ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುವಂತಹ ಒಂದು ಸಂತಾಪ ಸೂಚನಾ ನಿರ್ಣಯವನ್ನು ತಾವು ತಂದಿದ್ದೀರಿ, ಅದಕ್ಕೆ ನನ್ನ ಅನುಮೋದನೆಯನ್ನು ಸಲ್ಲಿಸಿ, ಈ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತಿದ್ದೇನೆ.

ಶ್ರೀ ಬಿ. ಶ್ರೀರಾಮುಲು (ಬಳ್ಳಾರಿ) :– ಸನ್ಮಾನ್ಯ ಸಭಾಧ್ಯಕ್ಷರೆ, ತಾವು ತಂದಿರುವಂತಹ 11 ಮಂದಿಯ ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ, ಶ್ರೀಮತಿ ಬಸವ ರಾಜೇಶ್ವರಿಯವರನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಮೂರು ಬಾರಿ ಶಾಸಕರಾಗಿ ಮೂರು ಬಾರಿ ಸಂಸದರಾಗಿ, ಮೊದಲ ಮಹಿಳಾ ಸಭಾಪತಿಗಳಾಗಿ ಬಳ್ಳಾರಿ ಜಿಲ್ಲೆಯಲ್ಲಿ ಸಾಕಷ್ಟು ಒಳ್ಳೆಯ ಕೆಲಸ ಮಾಡಿದಂತಹ ಶ್ರೀಮತಿ ಬಸವರಾಜೇಶ್ವರಿಯವರು ಇವತ್ತು ರಾಜ್ಯದಲ್ಲಿ ಒಂದು ಪರಿಶಿಷ್ಟ ವರ್ಗಕ್ಕೆ ರಿಸರ್ವೇಶನ್ ಬರಬೇಕೆಂದು ಹೇಳುವಂತಹ ಸಂದರ್ಭದಲ್ಲಿ ಶ್ರೀಮತಿ ಬಸವರಾಜೇಶ್ವರಿಯವರು ಹೋರಾಟ ಮಾಡಿದ್ದಾರೆ. ನಾನು ಹುಡುಗನಾಗಿದ್ದ ಸಂದರ್ಭದಲ್ಲಿ ಶ್ರೀಮತಿ ಬಸವೆರಾಜೇಶ್ವರಿಯವರ ಮನೆಗೆ ಹೋಗುತ್ತಿದ್ದೆ. ಹೋಗುವಂತಹ ಸಂದರ್ಭದಲ್ಲಿ ಶ್ರೀಮತಿ ಬಸವರಾಜೇಶ್ವರಿಯವರು ವಾಲ್ಮೀಕಿ ಸಮಾಜಕ್ಕೆ ಮೀಸಲಾತಿ ಹೆಚ್ಚಾಗಬೇಕೆಂದು ಆಗಿದ್ದ ಪ್ರಧಾನ ಮಂತ್ರಿಗಳ ಹತ್ತಿರ ನಮ್ಮ ಹಿರಿಯ ಮುಖಂಡರನ್ನೆಲ್ಲಾ ಕರೆದುಕೊಂಡು ಹೋದರು. ಶ್ರೀಮತಿ ಬಸವರಾಜೇಶ್ವರಿಯವರನ್ನು ನಾವು ಬಹಳ ಹತ್ತಿರದಿಂದ ನೋಡಿದಂತಹ ಸಂದರ್ಭದಲ್ಲಿ ಮೊನ್ನೆ ನಿಧನ ಹೊಂದುವವರೆಗೂ ಕೂಡ ಶ್ರೀಮತಿ ಬಸವರಾಜೇಶ್ವರಿಯವರು ಬಹಳ ಹತ್ತಿರವಾದವರು. ಬಹಳಷ್ಟು ವರ್ಷಗಳಿಂದ ಅವರ ಕುಟುಂಬದಲ್ಲಿ ಯಾವುದೇ ಒಂದು ಒಳ್ಳೆಯ ಕಾರ್ಯವನ್ನು ಮಾಡಬೇಕೆಂದರೆ ನಮ್ಮನ್ನು ಕರೆಯುತ್ತಿದ್ದರು. ಬಳ್ಳಾರಿ ಜಿಲ್ಲೆಯಲ್ಲಿ ನವ ಕರ್ನಾಟಕ ಸ್ಟೀಲ್ ಫ್ಯಾಕ್ಟರಿಯನ್ನು ತೆರೆದು, ಬಹಳಷ್ಟು ಮಂದಿ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವಂತಹ ಕೆಲಸ ಕೂಡ ಮಾಡಿದ್ದರು. ಶ್ರೀಮತಿ ಬಸವರಾಜೇಶ್ವರಿಯವರು ಮೂರು ಬಾರಿ ಸಂಸದರಾಗಿದ್ದರು.

ಆವರನ್ನು ನಾವು ಬಹಳ ಹತ್ತಿರದಿಂದ ನೋಡಿದ್ದರಿಂದ ನಾನು ಕೂಡ ರಾಜಕೀಯದಲ್ಲಿ ಪಾಲ್ಗೊಳ್ಳಬೇಕೆಂದು ಮನಸ್ಸಿಗೆ ಬಂದಿತ್ತು. ಅಂತಹ ಸಂದರ್ಭದಲ್ಲಿ ಶ್ರೀಮತಿ ಬಸವರಾಜೇಶ್ವರಿಯವರು ಯುವಕರೆಲ್ಲಾ ಮುಂದಕ್ಕೆ ಬರಬೇಕು ಪ್ರಜಾಪ್ರಭುತ್ವದಲ್ಲಿ ನಿಮ್ಮಂತಹ ಯುವಕರು ಯಾವತ್ತು ಈ ರಾಜಕೀಯಕ್ಕೆ ಬರುತ್ತೀರೋ ಆವತ್ತು ಎಲ್ಲಾ ಜನಾಂಗದ ಜನರಿಗೂ ಒಳ್ಳೆಯದನ್ನು ಮಾಡಬಹುದು ಎಂದು ಶ್ರೀಮತಿ ಬಸವರಾಜೇಶ್ವರಿಯವರು ಹೇಳಿದರು. ಅವರ ಮಗನಾದ ಡಾ. ಮಹೀಬಲ್ ಆಗಿರಬಹುದು, ವೆಂಕಟ್‌ಗೋಪಾಲ್ ರವರಾಗಿರಬಹುದು, ಅಶೋಕ್ ಗೋಪಾಲ್‌ರವರು ಆಗಿರಬಹುದು, ಶ್ರೀಮತಿಯವರ ಮಕ್ಕಳು ಎಲ್ಲರೂ ನಮ್ಮ ಕುಟುಂಬಕ್ಕೆ ಮತ್ತು ನಮಗೆ ಮಾರ್ಗದರ್ಶನ ನೀಡಿದರು ಮೊನ್ನೆ 2004ರಲ್ಲಿ ನಡೆದಂತಹ ಚುನಾವಣೆಯಲ್ಲಿ ಸುಷ್ಮಾ ಸ್ವರಾಜ್‌ರವರು ಸೋತು ನಮ್ಮ ಸಂಸದರಾದ ಕರುಣಾಕರರೆಡ್ಡಿಯವರು ಚುನಾವಣೆಗೆ ನಿಂತಂತಹ ಸಂದರ್ಭದಲ್ಲಿ ಶ್ರೀಮತಿ ಬಸವರಾಜೇಶ್ವರಿಯವರು ನಮಗೆ ಬೆಂಬಲವನ್ನು ಸೂಚಿಸಿ, ಕರ್ನಾಟಕದವರೇ ಗೆಲ್ಲಬೇಕು, ಮುಂಬರುವಂತಹ ದಿನಗಳಲ್ಲಿ ಈ ಹಿಂದುಳಿದಿರುವಂತಹ ಜಿಲ್ಲೆ ಕೂಡ ಮುಂದುವರೆದ ಜಿಲ್ಲೆ ಆಗಬೇಕು, ಅಭಿವೃದ್ಧಿ ವಿಷಯದಲ್ಲಿ ಬಹಳಷ್ಟು ಕುಂಠಿತವಾಗಿದೆ. ಅದಕ್ಕೋಸ್ಕರ ನಾನು ಕರುಣಾಕರರೆಡ್ಡಿಯವರಿಗೆ ಬೆಂಬಲಿಸುತ್ತಿದ್ದೇನೆ. ನೀವೆಲ್ಲರೂ ಜಯಶೀಲರಾಗಬೇಕೆಂದು ಆಶೀರ್ವಾದ ಮಾಡಿದರು. ಶ್ರೀಮತಿ ಬಸವರಾಜೇಶ್ವರಿಯವರ ಜೊತೆಯಲ್ಲಿ 11 ಮಂದಿಯ ಬಗ್ಗೆ ಏನು ಸಂತಾಪ ಸೂಚನೆಯನ್ನು ತಂದಿದ್ದಾರೆ, ಅವರ ಆತ್ಮಕ್ಕೆ ಶಾಂತಿ ದೊರೆಯಲಿ, ಭಗವಂತ ಅವರ ಕುಟುಂಬಕ್ಕೆ ಎಲ್ಲಾ ರೀತಿಯಲ್ಲಿ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಅವರಿಗೆ ಕೊಡಲಿ, ಮುಂಬರುವ ದಿನಗಳಲ್ಲಿ ಅವರ ಕುಟುಂಬಕ್ಕೆ ಏನೂ ತೊಂದರೆಯಾಗದಂತೆ ಭಗವಂತ ನೋಡಿಕೊಳ್ಳಲಿ ಎಂದು ಹೇಳಿ, ಸಂತಾಪ ಸೂಚನೆಯನ್ನು ಬೆಂಬಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು) :– ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿನದ ಕಾರ್ಯಕಲಾಪಗಳಲ್ಲಿ ಮೊಟ್ಟಮೊದಲನೆಯದಾಗಿ ಸಂತಾಪ ಸೂಚನೆಯನ್ನು ನಾವು ತೆಗೆದುಕೊಂಡಿದ್ದೇವೆ. ಈ ಸದನದ ಸದಸ್ಯರಾಗಿರತಕ್ಕಂತಹ 11 ಹಿರಿಯ ಸದಸ್ಯರ ನಿಧನಕ್ಕೆ ನಾವು ಈ ವಿಷಾದವನ್ನು ವ್ಯಕ್ತಪಡಿಸುತ್ತಿದ್ದೇವೆ. ಈಗಾಗಲೇ ಈ ಸಭೆಯ ನಾಯಕರು, ಮುಖ್ಯಮಂತ್ರಿಗಳು ಹಾಗೂ ಪ್ರತಿಪಕ್ಷದ ನಾಯಕರು ಇತರೆ ಎಲ್ಲರೂ ಕೂಡ ಮಾತನಾಡಿದ್ದಾರೆ. ಮುಖ್ಯವಾಗಿ ನಾನು ಸಂತಾಪದ ಬಗ್ಗೆ ಮಾತನಾಡಬೇಕಾಗಿರುತ್ತದೆ.

ನಾನು 11 ಹಿರಿಯ ಸದಸ್ಯರಲ್ಲಿ ಬಹಳಷ್ಟು ಜನರನ್ನು ಹತ್ತಿರದಿಂದ ನೋಡಿದ್ದೇನೆ. ಕೆಲವರು ಎರಡೂ ಸದನದ ಸದಸ್ಯರಾಗಿದ್ದರು. ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ನಾನು ಸಂಸತ್ ಸದಸ್ಯನಾಗಿದ್ದಾಗ ಸುಮಾರು 15 ವರ್ಷಗಳ ಕಾಲ ನನ್ನ ಒಡನಾಡಿಯಾಗಿ ಹಾಗೂ ಸಹೋದ್ಯೋಗಿಗಳಾಗಿ ಇದ್ದಂತಹವರು ಶ್ರೀಮತಿ ಬಸವರಾಜೇಶ್ವರಿಯವರು ಹಾಗೂ ಶ್ರೀ ಚನ್ನಯ್ಯ ಒಡೆಯರ್‌ರವರು. ಈಗಾಗಲೇ ದಿವಂಗತ ಶ್ರೀಮತಿ ಬಸವರಾಜೇಶ್ವರಿಯವರ ಬಗ್ಗೆ ಸದಸ್ಯರೆಲ್ಲರೂ ಕೂಡ ತುಂಬಾ ಚೆನ್ನಾಗಿ ಮಾತನಾಡಿದ್ದಾರೆ. ಅವರು ಈ ಸದನದ ಸದಸ್ಯರಾಗಿ, ಸಚಿವರಾಗಿ, ವಿಧಾನಪರಿಷತ್ತಿನ ಸದಸ್ಯರಾಗಿ ಹಾಗೂ ಮೊಟ್ಟಮೊದಲನೆಯದಾಗಿ ಈ ದೇಶದ ಮಹಿಳಾ ಸಭಾಪತಿಯಾಗಿದ್ದರು ಎನ್ನುತಕ್ಕಂತಹ ವಿಷಯವನ್ನು ನಾವು ನೆನಪಿಸಿಕೊಂಡಿದ್ದೇವೆ. ಬಹಳ ಉತ್ತಮವಾದ ಸಂಸದೀಯ ಪಟುಗಳಾಗಿ ಇದ್ದಂತಹ ಶ್ರೀಮತಿ ಬಸವರಾಜೇಶ್ವರಿಯವರು ಬಳ್ಳಾರಿಯಿಂದ ಲೋಕಸಭೆಗೆ ಆರಿಸಿ ಬಂದಂತಹ ಸಂದರ್ಭದಲ್ಲಿ ಬಹುಶಃ ಅವರು ಸಚಿವರಾಗುವ ಮೊದಲು, ಅದರಲ್ಲೂ ವಿಶೇಷವಾಗಿ ರಾಜ್ಯದ ಸಮಸ್ಯೆಗಳ ಬಗ್ಗೆ, ಕೃಷಿ ಬಗ್ಗೆ, ಕೈಗಾರಿಕೆ ಬಗ್ಗೆ ಒಲವನ್ನು ಇಟ್ಟುಕೊಂಡಂತಹವರು ಹಾಗೂ ಯಾವುದೇ ವಿಷಯದ ಬಗ್ಗೆ ತುಂಬಾ ಚೆನ್ನಾಗಿ ಅಧ್ಯಯನ ಮಾಡಿಕೊಂಡು ಬಂದು ಮಾತನಾಡುವಂತಹವರಾಗಿದ್ದರು. ನಾನು ಹಾಗೂ ಅವರು ಕೂಡ Ministry of Steel ನಲ್ಲಿ ಇದ್ದಂತಹವರು. ಅಂದರೆ, Consultative Committee ನಲ್ಲಿ ಇದ್ದಂತಹವರು. ಏಕೆಂದರೆ, ಇವತ್ತು VSIL ನಲ್ಲಿ ಏನು ಭವಿಷ್ಯ ಇದೆ, ನಾವಿಬ್ಬರೂ ಕೂಡ ಅದಕ್ಕಾಗಿ ಹೋರಾಟ ಮಾಡಿದಂತಹವರು. Steel Authority of India Limitedಗೆ ತೆಗೆದುಕೊಳ್ಳಬೇಕೆಂದು ನಾವಿಬ್ಬರೂ ಕೂಡ ಹೋರಾಟ ಮಾಡಿದಂತಹವರು. ಅವರು ಸ್ಟೀಲ್ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ Consultative Committee ಯಲ್ಲಿ, ನಮ್ಮ ರಾಜ್ಯದಲ್ಲಿ ಇರತಕ್ಕಂತಹ VSIL ಅನ್ನು SAILಗೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಬಹಳಷ್ಟು ಚರ್ಚೆ ಮಾಡಿ, ಕೇಂದ್ರ ಸರ್ಕಾರವನ್ನು ಹಾಗೂ ಮಿನಿಸ್ಟ್ರಿ ಆಫ್ ಸ್ಟೀಲ್‌ಗೆ ಸಂಬಂಧಪಟ್ಟ ಸಚಿವರನ್ನು ಒಪ್ಪಿಸಿ, ಅದನ್ನು SAIL ವಶಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳಿದ್ದೆವು. ಹಾಗಾಗಿ, ನಾವು ವಿಶೇಷವಾಗಿ ಆ ಸಂದರ್ಭದಲ್ಲಿ ಶ್ರೀಮತಿ ಬಸವರಾಜೇಶ್ವರಿ ಅವರು ಮಹಿಳಾ ಸಚಿವರಾಗಿದ್ದರೆಂದು ಬಹಳ ಹೆಮ್ಮೆ ಪಡುತ್ತೇನೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬೀಜಿಂಗ್‌ನಲ್ಲಿ ನಡೆದಂತಹ ಮಹಿಳಾ ಸಮ್ಮೇಳನದಲ್ಲಿ ನಮ್ಮ ರಾಷ್ಟ್ರದ ಮಹಿಳಾ ಸಚಿವೆಯಾಗಿ, ಪ್ರತಿನಿಧಿಯಾಗಿ ತುಂಬಾ ಚೆನ್ನಾಗಿ ಈ ರಾಷ್ಟ್ರವನ್ನು ಪ್ರತಿನಿಧಿಸಿ, ನಮ್ಮ ರಾಷ್ಟ್ರದಲ್ಲಿ ಇರತಕ್ಕಂತಹ ಅಂತರ ರಾಷ್ಟ್ರೀಯ ಮಹಿಳೆಯರ ಸಮಸ್ಯೆಗಳನ್ನು ತುಂಬಾ

ಚೆನ್ನಾಗಿ ಅರಿತಿರತಕ್ಕಂತಹವರಾದ ಅವರು ಆ ಸಮ್ಮೇಳನದಲ್ಲಿ ಭಾಗವಹಿಸಿ ತುಂಬಾ ಚೆನ್ನಾಗಿ ಚರ್ಚೆ ಮಾಡಿ ಬಂದಂತಹವರು. ಅನೇಕ ವಿಷಯಗಳ ಬಗ್ಗೆ ರಾಜ್ಯಕ್ಕೆ ಸಂಬಂಧಪಟ್ಟಂತೆ ಅಂದರೆ, ನೀರಿನ ವಿಷಯ ಇರಬಹುದು, ಗಡಿಯ ವಿಷಯ ಇರಬಹುದು ಹಾಗೂ ಭಾಷೆಗಳ ವಿಷಯದ ಬಗ್ಗೆ ಅಪಾರವಾಡ ಆಸಕ್ತಿಯನ್ನು ತಳೆದಂತಹವರು. ಸಂಸತ್ತಿನಲ್ಲಿ ನಡೆಯುವಂತಹ ಎಲ್ಲಾ ರೀತಿಯ ರಾಜ್ಯದ ಸಮಸ್ಯೆಗಳ ಬಗ್ಗೆ ನಾವೆಲ್ಲರೂ ಕೂಡ ಒಟ್ಟಿಗೆ ಚರ್ಚೆ ಮಾಡುತ್ತಿದ್ದೆವು ಹಾಗಾಗಿ, ಶಿಕ್ಷಣ ಕ್ಷೇತ್ರದಲ್ಲಿ ತುಂಬಾ ಅದ್ವಿತೀಯವಾದ ಸೇವೆಯನ್ನು ಮಾಡಿರತಕ್ಕಂತಹವರು. ರಾಜ್ಯದಲ್ಲಿ ಒಬ್ಬ ಮಹಿಳಾ ಸದಸ್ಯರಾಗಿ, ಕೇಂದ್ರದಲ್ಲಿ ಕೂಡ ಬಹಳ ಅತ್ಯುತ್ತಮವಾದ ರೀತಿಯಲ್ಲಿ, ಬಹಳ ಚಟುವಟಿಕೆಯಿಂದ, ಉತ್ತಮವಾದ ಕೆಲಸಗಳನ್ನು ಮಾಡಿದಂತಹ ಶ್ರೀಮತಿ ಬಸವರಾಜೇಶ್ವರಿಯವರ ಅಗಲಿಕೆಯಿಂದ ನಾನೂ ಕೂಡ ಅತ್ಯಂತ ವಿಷಾದದಿಂದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ.

ನಮ್ಮ ಶ್ರೀ ಚನ್ನಯ್ಯ ಒಡೆಯರ್‌ರವರು ಮೂರು ಬಾರಿ ದಾವಣಗೆರೆ ಕ್ಷೇತ್ರದಿಂದ ಲೋಕಸಭೆಗೆ ಆರಿಸಿ ಬಂದವರು, ಬಹಳ ಸರಳ ಹಾಗೂ ಸಜ್ಜನಿಕೆಯಿಂದ ಕೂಡಿರುವಂತಹ ಒಬ್ಬ ನಿಜವಾದ ಜನಪ್ರತಿನಿಧಿಗೆ ಇರತಕ್ಕಂತಹ ಎಲ್ಲಾ ಗುಣಗಳನ್ನು ಕೂಡ ಒಳ್ಳೆಯ ರೀತಿಯಿಂದ, ತಾಳ್ಮೆಯಿಂದ ವಿಶೇಷವಾದ ಸಾಮಾಜಿಕ ಕಳಕಳಿ ಇರತಕ್ಕಂತಹ ಒಬ್ಬ ಸದಸ್ಯರಾಗಿ ಅವರೂ ಕೂಡ ಸಂಸತ್ತಿನಲ್ಲಿ ಸೇವೆ ಮಾಡಿರುವಂತಹ, ರಾಜ್ಯವನ್ನು ಪ್ರತಿನಿಧಿಸುವಂತಹ ಹಾಗೂ ರಾಜ್ಯದ ಸಮಸ್ಯೆಗಳ ಬಗ್ಗೆ ಕೂಡ ಗಮನಹರಿಸತಕ್ಕ ಪ್ರಯತ್ನ ಮಾಡಿದ್ದರು. ಹಾಗಾಗಿ, ಅವರಿಗೂ ಕೂಡ ನಾನು ಈ ಸಂದರ್ಭದಲ್ಲಿ ಈ ಸಂತಾಪ ಸೂಚನೆಯನ್ನು ಹಾಗೂ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ.

ನಮ್ಮ ಜಿಲ್ಲೆಯಲ್ಲಿ ಎಲ್ಲರೂ ಕೂಡ 11 ಜನರಲ್ಲಿ ಒಂದೇ ಸಲ ಅನೇಕ ರೀತಿಯಲ್ಲಿ ಅನೇಕ ಸದಸ್ಯರನ್ನು ನಾವು ನೆನಪಿಸಿಕೊಳ್ಳುತ್ತಿದ್ದೇವೆ. ಎಲ್ಲರಿಗೂ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ, ಕೊನೆಯದಾಗಿ ನಮ್ಮ ಜಿಲ್ಲೆಯ ಶ್ರೀ ಡಿ. ಕರಿಯಪ್ಪ ಗೌಡರು ಕೂಡ ಹಿರಿಯರು, ಅವರು ಹುಣಸೂರು ತಾಲ್ಲೂಕಿನವರು, ಅವರು ರಾಜ್ಯದಲ್ಲಿ ಬೆಳಕಿಗೆ ಬಂದಿದ್ದು, 1972ರಲ್ಲಿ ನಡೆದಂತಹ ವಿಧಾನಸಭಾ ಚುನಾವಣೆಯಲ್ಲಿ ದಿವಂಗತ ಶ್ರೀ ದೇವರಾಜ್ ಅರಸು ಅವರು ಸ್ಪರ್ಧಿಸಿರಲಿಲ್ಲ. ಅಂತಹ ಸಂದರ್ಭದಲ್ಲಿ ಅಂದಿನ ಕಾಂಗ್ರೆಸ್ ಪಕ್ಷದ ಸಂಚಾಲಕರಾಗಿ ಇಡೀ ರಾಜ್ಯದ ಚುನಾವಣೆಯ ಜವಾಬ್ದಾರಿಯನ್ನು ಅವರು ಹೊತ್ತಿದ್ದರಿಂದ ಆ ಚುನಾವಣೆಯಲ್ಲಿ ಸ್ಪರ್ದೆಗಿಳಿಯದೆ ತಮ್ಮ ನಂಬುಗೆಯ ಹಾಗೂ ಅತ್ಯಂತ

ನಿಕಟವರ್ತಿಗಳಾಗಿದ್ದಂತಹ ಶ್ರೀ ಡಿ.ಕರಿಯಪ್ಪ ಗೌಡರಿಗೆ ಅವಕಾಶ ಕೊಟ್ಟಿದ್ದರು. 1972ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದ ನಂತರ ತಕ್ಷಣದಲ್ಲಿ ರಾಜೀನಾಮೆ ಕೊಟ್ಟು ಮಾನ್ಯ ದೇವರಾಜ ಅರಸುರವರಿಗೆ ಅವಕಾಶ ಕೊಟ್ಟು, ಅವರು ಚುನಾವಣೆಯಲ್ಲಿ ಆರಿಸಿ ಬರುವುದಕ್ಕೆ ಕಾರಣಕರ್ತರಾಗಿದ್ದರು. ಅಂದರೆ, ಅಂದು ಹುಣಸೂರಿನಲ್ಲಿ ಬಹಳ ಜನಪ್ರಿಯತ ಗಳಿಸಿರತಕ್ಕಂತಹವರಾಗಿದ್ದರು.ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕೆಳ ಸಂಸ್ಥೆಗಳಾದ ತಾಲ್ಲೂಕು ಪಂಚಾಯತ್, ಸ್ಥಳೀಯ ಸಂಸ್ಥೆಗಳಲ್ಲಿ ಅತ್ಯಂತ ಹೆಚ್ಚಿನ ರೀತಿಯಿಂದ ಸೇವೆ ಸಲ್ಲಿಸಿದಂತಹ ಚುನಾಯಿತ ಪ್ರತಿನಿಧಿಗಳಾಗಿದ್ದರು. ವಿಧಾನ ಪರಿಷತ್ತಿನ ಸದಸ್ಯರಾಗಿ ಅವರು ತಮ್ಮ ಸೇವೆಯನ್ನು ಸಲ್ಲಿಸಿದರು. ಹಾಗಾಗಿ, ಅವರಿಗೆ ಹಾಗೂ ದಿವಂಗತ ಶ್ರೀ ಡಿ. ಕರಿಯಪ್ಪ ಗೌಡರಿಗೂ ಈ ಸಂದರ್ಭದಲ್ಲಿ ಅವರನ್ನು ನೆನಪಿಸಿಕೊಳ್ಳುತ್ತಾ ಸಂತಾಪ ಸೂಚನೆ ಸಲ್ಲಿಸುತ್ತಾ ಹಾಗೂ ಇತರ ಎಲ್ಲಾ ಸದಸ್ಯರುಗಳು ಒಂದಲ್ಲ ಒಂದು ರೀತಿಯಲ್ಲಿ ಒಡನಾಟವನ್ನು ಇಟ್ಟುಕೊಂಡಿದ್ದವರಾಗಿದ್ದರು. ಈ ಸಂದರ್ಭದಲ್ಲಿ ಅವರೆಲ್ಲರಿಗೂ ಈ ಸದನದಲ್ಲಿ ಈ ಸಂತಾಪ ಸೂಚನೆಯನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕರುಣಾಕರ ರೆಡ್ಡಿ (ಹರಪನಹಳ್ಳಿ) :– ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಏನು 11 ಮಂದಿ ಪ್ರಮುಖ ರಾಜಕೀಯ ನಾಯಕರು ಅಗಲಿದ್ದಾರೆ, ಇದರಲ್ಲಿ ಮುಖ್ಯವಾಗಿ ಶ್ರೀಮತಿ ಬಸವರಾಜೇಶ್ವರಿಯವರ ಬಗ್ಗೆ ಪ್ರಸ್ತಾಪಿಸಬೇಕಾಗಿದೆ. ನಮ್ಮ ಬಳ್ಳಾರಿ ಜಿಲ್ಲೆಯವರು, ರಾಯಚೂರು ಜಿಲ್ಲೆಯವರು ಎಂದು ಹೇಳಬಹುದು. ಈ ಎರಡೂ ಜಿಲ್ಲೆಗಳಲ್ಲಿ ವಿಶೇಷವಾಗಿ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಮಾಡಿ 1922 ರಲ್ಲಿ ಜನಿಸಿದ ಅವರು ಮೂರು ಬಾರಿ ವಿಧಾನಪರಿಷತ್ತಿನ ಸದಸ್ಯರಾಗಿ ಗೆದ್ದು, ಮೊದಲನೆಯ ಮಹಿಳಾ ಸಭಾಧ್ಯಕ್ಷರಾಗಿ ಒಬ್ಬ ಧೀಮಂತ ನಾಯಕಿಯಾಗಿ, ಸಾರ್ವಜನಿಕ ಕ್ಷೇತ್ರದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದಂತಹ ಮಹಾನ್ ನಾಯಕಿ, ನಂತರ, ಲೋಕಸಭಾ ಸದಸ್ಯರಾಗಿ ಮೂರು ಬಾರಿ ಗೆದ್ದು ಕೇಂದ್ರದ ರಾಜ್ಯ ಸಚಿವೆಯಾಗಿ, ಮಹಿಳಾ ಮತ್ತು ಮಕ್ಕಳಾ ಕಲ್ಯಾಣ ಸಚಿವೆಯಾಗಿ, ಹಂಪಿ ಎಕ್ಸ್‌ಪ್ರೆಸ್ ಏನು ಹುಬ್ಬಳ್ಳಿಯಿಂದ ಬೆಂಗಳೂರಿಗೆ ಬರುತ್ತಿದೆ, ಅದಕ್ಕೆ ವಿಶೇಷ ಸೇವೆ ಸಲ್ಲಿಸಿದಂತಹ ಮಹಾನ್ ನಾಯಕಿ ಅವರಾಗಿದ್ದಾರೆ. ಅದೇ ರೀತಿ ದೇಶದಲ್ಲಿ ಬಾಲವಾಡಿ ಕೇಂದ್ರಗಳನ್ನು ತೆರೆಯುವ ವಿಚಾರದಲ್ಲಿ ಕೂಡ ಕಾರಣೀಕರ್ತರಾಗಿದ್ದಾರೆ. ಅವರ ವಿಚಾರವಾಗಿ ಹೇಳಬೇಕೆಂದರೆ, ಬಹಳಷ್ಟು ಚುರುಕಾಗಿ ತಮ್ಮ 82ನೇ ವಯಸ್ಸಿನಲ್ಲಿ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ನನ್ನ ಜೊತೆಗೆ ಸಾಕಷ್ಟು ಗ್ರಾಮಗಳಿಗೆ ಪ್ರವೇಶ ಮಾಡಿ, ಚುನಾವಣೆ

ಪ್ರಚಾರದಲ್ಲಿ ಕೂಡ ಭಾಗವಹಿಸಿ ಜನರನ್ನು ಮಾತನಾಡಿಸುತ್ತಿದ್ದ ವಿಚಾರ ನೋಡಿದರೆ, ಅವರಲ್ಲಿ ಇರುವ ಒಂದು ಸೇವಾ ಮನೋಭಾವನೆ ಆಗಿರಬಹುದು, ಕಳಜೆ ಆಗಿರಬಹುದು ಮತ್ತು ಅನೇಕ ವಿದ್ಯಾ ಸಂಸ್ಥೆಗಳನ್ನು ತೆರೆದು, ಅನೇಕ ಉದ್ದಿಮೆಗಳನ್ನು ಕೂಡ ಅವರು ಪ್ರಾರಂಭಮಾಡಿ ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿಕೊಟ್ಟು ಹಾಗೂ ಮಾರ್ಗದರ್ಶನ ಮಾಡುವ ಮೂಲಕ ಒಂದು ಒಳ್ಳೆಯ ಹಾದಿಯಲ್ಲಿ ನಡೆಯುವುದಕ್ಕೆ ಕಾರಣೀಭೂತರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು.

ಅದೇ ರೀತಿ ಬಳ್ಳಾರಿ ಜಿಲ್ಲೆಯ ಶ್ರೀ ಎಂ.ಎಂ.ಜೆ. ಸದ್ಯೋಜಾತ ಅವರು ಕೂಡ ಅನೇಕ ಜನಪರವಾದ ಚಿಂತನೆ ಮಾಡಿ ಜನರ ಸೇವೆ ಮಾಡಿದಂತಹ ವ್ಯಕ್ತಿ. ಸಚಿವರಾಗಿ ಅವರೂ ಕೂಡ ಸೇವೆ ಸಲ್ಲಿಸಿರುವುದು ಸ್ಮರಣೀಯ.

ಇನ್ನೊಬ್ಬರು ಶ್ರೀ ಕೆ.ಎಸ್. ವೀರಭದ್ರಪ್ಪನವರು, ಸಂಡೂರು ತಾಲ್ಲೂಕಿನವರು, 1922ನೇ ಇಸವಿಯಲ್ಲಿ ಜನಿಸಿದ ಅವರು ಲೋಕಸಭಾ ಸದಸ್ಯರಾಗಿ ಅನೇಕ ಜನಪರ ಚಿಂತನೆಗಳುಳ್ಳವರಾದ ಅವರು ಈ ನಾಡಿಗೆ ಸೇವೆ ಸಲ್ಲಿಸಿದಂತಹವರಾಗಿದ್ದಾರೆ. ಅದರಂತೆ ಬ್ಲೇಸಿಯಸ್ ಎಂ. ಡಿಸೋಜರವರು, ಶ್ರೀಮತಿ ಇವಾವಾಜ್‌ರವರು, ಶ್ರೀ ಡಿ. ಕರಿಯಪ್ಪ ಗೌಡರವರು, ಡಾ. ಟಿ. ಪಾರ್ಥಸಾರಥಿಯವರು, ಶ್ರೀ ದೊಡ್ಡ ಬೋರೇಗೌಡರವರು, ಶ್ರೀ ಚನ್ನಯ್ಯ ಒಡೆಯರ್‌ರವರು, ಶ್ರೀ ಹೆಚ್.ಸಿ. ಶಿವಶಂಕರಪ್ಪನವರು, ಇವರೂ ಕೂಡ ಇವತ್ತು ನಾಡಿಗೆ ಸೇವೆ ಸಲ್ಲಿಸಿದಂತಹ, ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡಿದಂತಹ ಮಹಾನ್ ವ್ಯಕ್ತಿಗಳಾಗಿದ್ದಾರೆ. ಅವರಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ಭಗವಂತ ಶಾಂತಿ, ನೆಮ್ಮದಿ ಹಾಗೂ ಶಕ್ತಿಯನ್ನು ಕೊಡಲೆಂದು ಪ್ರಾರ್ಥಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಈಗ ದಿವಂಗತರಾದವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು :– ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು

VOL-IX-KS

ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

2. ಚುನಾವಣಾ ಪ್ರಸ್ತಾವ

ಅಧ್ಯಕ್ಷರು :– ಕಮಿಟಿಗೆ ಸಂಬಂಧಪಟ್ಟ ಹಾಗೆ ಚುನಾವಣಾ ಪ್ರಸ್ತಾವ ಇದೆ, ಅದನ್ನು ಮಾನ್ಯ ಕಾನೂನು ಸಚಿವರು ಹೇಳುತ್ತಾರೆ. ಅವರು ಚುನಾವಣಾ ಪ್ರಸ್ತಾವವನ್ನು ಮಂಡನೆ ಮಾಡುತ್ತಾರೆ.

ವಿಷಯ : ವಿಧಾನಸಭೆಯ ವಿವಿಧ ಸ್ಥಾಯಿ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸುವ ಪ್ರಸ್ತಾವ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪುರಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು) :– ಮಾನ್ಯ ಅಧ್ಯಕ್ಷರೇ,

ಅ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 265(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು** ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಆ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 268(1)ನೇ ನಿಯಮದ ಅನುಸಾರವಾಗಿ ಈ ಸಭೆ **ಅಂದಾಜುಗಳ ಸಮಿತಿಗೆ ಹದಿನೆಂಟು ಜನ ಸದಸ್ಯರನ್ನು** ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಇ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 271(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು** ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಈ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 272(1)ನೇ ನಿಯಮದ ಅನುಸಾರವಾಗಿ ಈ ಸಭೆ **ಹಕ್ಕು ಬಾಧ್ಯತೆಗಳ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು** ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಉ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 277(1)ನೇ ನಿಯಮದ ಅನುಸಾರವಾಗಿ ಈ ಸಭೆ **ಅಧೀನ ಶಾಸನ ರಚನಾ ಸಮಿತಿಗೆ**

ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 281ನೇ ನಿಯಮದ ಅನುಸಾರವಾಗಿ ಈ ಸಭೆ **ಸರ್ಕಾರಿ ಭರವಸೆಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು** ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಆ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 283(1)ನೇ ನಿಯಮದ ಅನುಸಾರವಾಗಿ ಈ ಸಭೆ **ಖಾಸಗಿ ಸದಸ್ಯರ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಜನ ಸದಸ್ಯರನ್ನು** ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಇ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 286ನೇ ನಿಯಮದ ಅನುಸಾರವಾಗಿ ಈ ಸಭೆ **ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ಹದಿನೈದು ಜನ ಸದಸ್ಯರನ್ನು** ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಈ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 288ನೇ ನಿಯಮದ ಅನುಸಾರವಾಗಿ ಈ ಸಭೆ **ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ ಹದಿನೈದು ಜನ ಸದಸ್ಯರನ್ನು** ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಉ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 370(2)ನೇ ನಿಯಮದ ಅನುಸಾರವಾಗಿ ಈ ಸಭೆ **ಸದನ ಸಮಿತಿ (ವಸತಿ ಸೌಕರ್ಯಗಳ ಸಮಿತಿ)ಗೆ ಹನ್ನೆರಡು ಜನ ಸದಸ್ಯರನ್ನು** ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಊ) 1994ನೇ ಇಸವಿಯ ಕರ್ನಾಟಕ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ಅಧಿನಿಯಮ ಕಲಂ 2(1) (vii)ರ ಮೇರೆಗೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು **ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಮೂರು ಜನ ಸದಸ್ಯರನ್ನು** ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ,

ಅ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 265(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ**

ಹದಿನೈದು ಜನ ಸದಸ್ಯರನ್ನು ಚುನಾಯಿಸುವುದು.

ಆ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 268(1)ನೇ ನಿಯಮದ ಅನುಸಾರವಾಗಿ ಈ ಸಭೆ **ಅಂದಾಜುಗಳ ಸಮಿತಿಗೆ ಹದಿನೆಂಟು ಜನ ಸದಸ್ಯರನ್ನು** ಚುನಾಯಿಸುವುದು.

ಇ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 271(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು** ಚುನಾಯಿಸುವುದು.

ಈ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 272(1)ನೇ ನಿಯಮದ ಅನುಸಾರವಾಗಿ ಈ ಸಭೆ **ಹಕ್ಕು ಬಾಧ್ಯತೆಗಳ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು** ಚುನಾಯಿಸುವುದು.

ಉ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 277(1)ನೇ ನಿಯಮದ ಅನುಸಾರವಾಗಿ ಈ ಸಭೆ **ಅಧೀನ ಶಾಸನ ರಚನಾ ಸಮಿತಿಗೆ ಹದಿನೈದು ಜನ ಸದಸ್ಯರನ್ನು** ಚುನಾಯಿಸುವುದು.

ಊ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 281ನೇ ನಿಯಮದ ಅನುಸಾರವಾಗಿ ಈ ಸಭೆ **ಸರ್ಕಾರಿ ಭರವಸೆಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು** ಚುನಾಯಿಸುವುದು.

ಋ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 283(1)ನೇ ನಿಯಮದ ಅನುಸಾರವಾಗಿ ಈ ಸಭೆ **ಖಾಸಗಿ ಸದಸ್ಯರ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಜನ ಸದಸ್ಯರನ್ನು** ಚುನಾಯಿಸುವುದು.

ಎ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 286ನೇ ನಿಯಮದ ಅನುಸಾರವಾಗಿ ಈ ಸಭೆ **ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ಹದಿನೈದು ಜನ ಸದಸ್ಯರನ್ನು** ಚುನಾಯಿಸುವುದು.

ಏ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 288ನೇ ನಿಯಮದ ಅನುಸಾರವಾಗಿ ಈ ಸಭೆ **ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ**

ಕಲ್ಯಾಣ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸುವುದು.

ಐ) ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 370(2)ನೇ ನಿಯಮದ ಅನುಸಾರವಾಗಿ ಈ ಸಭೆ **ಸದನ ಸಮಿತಿ (ವಸತಿ ಸೌಕರ್ಯಗಳ ಸಮಿತಿ)ಗೆ ಹನ್ನೆರಡು ಜನ ಸದಸ್ಯರನ್ನು** ಚುನಾಯಿಸುವುದು.

ಒ) 1994ನೇ ಇಸವಿಯ ಕರ್ನಾಟಕ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳ ಅಧಿನಿಯಮ ಕಲಂ 2(1) (vii)ರ ಮೇರೆಗೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು **ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಮೂರು ಜನ ಸದಸ್ಯರನ್ನು** ಚುನಾಯಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

3. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಚರ್ಚೆ

ವಿಷಯ : ರಾಜ್ಯದಲ್ಲಿ ಉಂಟಾಗಿರುವ ರಸಗೊಬ್ಬರದ ತೀವ್ರ ಅಭಾವದ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :– ಸನ್ಮಾನ್ಯ ಅಧ್ಯಕ್ಷರೇ, ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 60ರ ಮೇರೆಗೆ ಒಂದು ನಿಲುವಳಿ ಸೂಚನೆಯನ್ನು ತಮಗೆ ಕೊಟ್ಟಿದ್ದೇವೆ. ಈ ನಿಲುವಳಿ ಸೂಚನೆ ಬಹಳ ಮಹತ್ವದ್ದು, ಜರೂರು ಮತ್ತು ಇತ್ತೀಚೆಗೆ ನಡೆದಂತಹ ಘಟನೆಗಳು, ಇವೆಲ್ಲಾ ವಿಚಾರಗಳನ್ನು ಕೂಡ ರೂಲ್ 60ರ ಪ್ರಕಾರ ತೆಗೆದುಕೊಳ್ಳುವುದಕ್ಕೆ ಅರ್ಹವಾದಂತಹ ನಿಲುವಳಿ ಸೂಚನೆ ಎನ್ನುವ ಮಾತನ್ನು ಹೇಳುತ್ತೇನೆ. ಇತ್ತೀಚೆಗೆ ರಾಜ್ಯದಲ್ಲಿ ಉಂಟಾಗಿರುವ ರಸಗೊಬ್ಬರದ ತೀವ್ರ ಅಭಾವದ ಬಗ್ಗೆ ರೈತರು ರಸ್ತೆಗಿಳಿದು ನಡೆಸುತ್ತಿದ್ದ ಹೋರಾಟವನ್ನು ಲಘುವಾಗಿ ಪರಿಗಣಿಸಿ, ಈ ಬಗ್ಗೆ ಸರ್ಕಾರ ತಾಳಿದ ನಿರ್ಲಕ್ಷ್ಯದಿಂದಾಗಿ ಹೋರಾಟ ಗಂಭೀರ ಸ್ವರೂಪಕ್ಕೆ ತಿರುಗಿ, ಹಸಿರು ಶಾಲು ಹೊದ್ದು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಸರ್ಕಾರ ಅಸಹಾಯಕ ರೈತರ ಮೇಲೆ ಗೋಲಿಬಾರ್ ಮಾಡಿದ್ದು ಸಾವು ನೋವುಗಳಿಗೆ ಕಾರಣವಾಗಿದೆ. ಈಗಲೂ ರೈತರು ಹೋರಾಟವನ್ನು ಮುಂದುವರಿಸಿಕೊಂಡೇ ಇರುವುದಲ್ಲದೆ ರಸಗೊಬ್ಬರದ ತೀವ್ರ ಅಭಾವದಿಂದಾಗಿ ಹತಾಶರಾದ ರೈತರು ಸರಣಿ

ಆತ್ಮಹತ್ಯೆಗೆ ಒಳಗಾಗುತ್ತಿದ್ದಾರೆ. ಮಂತ್ರಿ ಮಂಡಲವನ್ನು ದೆಹಲಿಗೆ ಕೊಂಡೊಯ್ದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕೃಷಿ ಸಚಿವರು 2-3 ದಿವಸಗಳಲ್ಲಿ ಸಾಕಷ್ಟು ರಸಗೊಬ್ಬರ ರಾಜ್ಯಕ್ಕೆ ಬರುತ್ತದೆಂದು ಕೊಟ್ಟ ಹೇಳಿಕೆ ನಿಜವಾಗದೆ ರೈತರು ದಿನೇ ದಿನೇ ಕಂಗೆಡುತ್ತಿದ್ದಾರೆ. ರಸಗೊಬ್ಬರದ ಅಭಾವ ಪರಿಸ್ಥಿತಿಯಿಂದಾಗಿ ಸಕಾಲದಲ್ಲಿ ರಸಗೊಬ್ಬರ ಸಿಗದೆ ಕೃಷಿ ಪರಿಸ್ಥಿತಿ ಈಗಾಗಲೇ ಅಪಾರ ನಷ್ಟಕ್ಕೆ ಒಳಗಾಗಿದ್ದು, ಅಭಾವ ಪರಿಸ್ಥಿತಿ ಹೀಗೆ ಮುಂದುವರಿದರೆ ರಾಜ್ಯದಲ್ಲಿ ಹಿಂದೆಂದೂ ಕಂಡರಿಯದ ಅಪಾಯಕ್ಕೆ ತುತ್ತಾಗುವ ಸಂಭವ ಇದ್ದು, ರಸಗೊಬ್ಬರದ ತೀವ್ರ ಅಭಾವ ಪರಿಸ್ಥಿತಿಯ ಅಂಶವನ್ನು ಉಳಿದೆಲ್ಲ ವಿಷಯಗಳನ್ನು ಬದಿಗಿಟ್ಟು ಚರ್ಚಿಸುವ ಸಲುವಾಗಿ ತಮ್ಮ ಅನುಮತಿಯನ್ನು ನಾನು ಕೋರುತ್ತೇನೆ. ಇದು ವಹತ್ವದ ವಿಷಯ ಎನ್ನುವ ವಿಚಾರದಲ್ಲಿ ಇಡೀ ಸದನದಲ್ಲಿ ಯಾರೂ ಕೂಡ ಅಲ್ಲಗೆಳೆಯತಕ್ಕದ್ದಲ್ಲ. ಅದಕ್ಕಾಗಿ ಈ ವಿಷಯವನ್ನು ತಾವು ಮೊದಲು ಚರ್ಚೆಗೆ ತೆಗೆದುಕೊಳ್ಳಬೇಕು. ಉಳಿದ ವಿಷಯಗಳನ್ನು ಅಜೆಂಡಾ ಪ್ರಕಾರ ಆಮೇಲೆ ತೆಗೆದುಕೊಳ್ಳುವಂತಹ ಕೆಲಸ ಆಗಬೇಕು ಎಂದು ನಾನು ತಮ್ಮನ್ನು ವಿನಂತಿಸಿಕೊಳ್ಳುತ್ತೇನೆ. ಅದಕ್ಕಾಗಿ ತಾವು ಬೇರೆ ವಿಚಾರಗಳನ್ನು ಬದಿಗಿಟ್ಟು ಈ ಒಂದು Adjournment motion ಗೆ ಸಮ್ಮತಿಯನ್ನು ಕೊಡಬೇಕು ಎಂದು ತಮ್ಮ ಸಮ್ಮತಿಯನ್ನು ಕೇಳುತ್ತೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ರಾಮನಗರ) :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ತಂದಿರತಕ್ಕಂಥ ನಿಲುವಳಿ ಸೂಚನೆ ವಿಷಯದಲ್ಲಿ ನಮ್ಮ ಪಕ್ಷದ ವತಿಯಿಂದಲೂ ಇವತ್ತು ನಾವೇನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ, ಇದು ಬಹಳ ಪ್ರಮುಖವಾದಂತಹ ವಿಷಯವಾಗಿರುವಂತಹ ಸಂದರ್ಭದಲ್ಲಿ ನಾನು ಸನ್ಮಾನ್ಯ ಅಧ್ಯಕ್ಷರಲ್ಲಿ ಮನವಿಯನ್ನು ಮಾಡುತ್ತೇನೆ. ಮತ್ತು ಬೇರೆ ಕಲಾಪಗಳನ್ನು ಬದಿಗಿಟ್ಟು ಈ ಒಂದು ವಿಷಯದ ಬಗ್ಗೆ ಇವತ್ತು ಸದನದಲ್ಲಿ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪುರಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು) :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೆ ಸದಸ್ಯರು ಇವತ್ತು ನಿಯಮ 60ರ ಅಡಿಯಲ್ಲಿ ಒಂದು ನಿಲುವಳಿ ಸೂಚನೆಯನ್ನು ತಂದಿದ್ದಾರೆ. ರಸಗೊಬ್ಬರದ ಪೂರೈಕೆ ಸರಿಯಾಗಿ ಆಗುತ್ತಿಲ್ಲವೆಂದು

ಹಾವೇರಿಯಲ್ಲಿ ಏನು ಒಂದು ಘಟನೆ ನಡೆದಿದೆ, ಜೊತೆಗೆ ಅದಾದ ನಂತರ ಗೋಲಿಬಾರ್ ನಡೆದಂತಹ ಘಟನೆ, ಅದರ ಜೊತೆಗೆ ಕೃಷಿ ಪರಿಸ್ಥಿತಿ ಇವುಗಳನ್ನೆಲ್ಲಾ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ನೀಡಬೇಕೆಂದು ಒಂದು ನಿಲುವಳಿ ಸೂಚನೆಯನ್ನು ತಂದಿದ್ದಾರೆ. ನಾನು ತಮ್ಮಲ್ಲಿ ಅರಿಕೆ ಮಾಡುವುದು ಇಷ್ಟೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಸಾಕಷ್ಟು ಅನುಭವಿ ನಾಯಕರು, ಈಗಾಗಲೇ ಸರ್ಕಾರ ಎಲ್ಲರ ಭಾವನೆಯನ್ನು ಅರಿತು ಈ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆಗೆ ಇವತ್ತು ಆದೇಶ ನೀಡಿದೆ. ಆ ನ್ಯಾಯಾಂಗ ತನಿಖೆಯ ವರದಿ ಬಂದ ಮೇಲೆ ನಾವು ಇಲ್ಲಿ ಅದನ್ನು ಚರ್ಚೆ ಮಾಡುವುದು ಬಹಳ ಸೂಕ್ತ ಎಂದು ಎಲ್ಲರ ಅನಿಸಿಕೆ ಆಗಿದೆ. ಇನ್ನೊಂದು ವಿಚಾರ ಏನೆಂದರೆ, ಇವತ್ತು ಈ ಅಧಿವೇಶನವನ್ನು ಸನ್ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯ ಏನಿದೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೋಸ್ಕರ ಕರೆದಿರುವುದು, ಸದನ 6ನೇ ತಾರೀಖು ನಡೆದಾಗ ಹಾಗೆಯೇ ಸದನವನ್ನು 9ನೇ ತಾರೀಖಿನವರೆಗೆ ಮುಂದುವರೆಸಬಹುದಿತ್ತು, ಆವತ್ತು ಎಲ್ಲರೂ ಹೇಳಿರುವ ಪ್ರಕಾರ ಇವತ್ತು ಅಧಿವೇಶನವನ್ನು ಕರೆದಿದ್ದೇವೆ. ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಇವತ್ತು ಅಲ್ಲಿ ಘಟನೆ ಏನು ನಡೆದಿದೆ ಅದೇ ವಿಚಾರದ ಬಗ್ಗೆ ಕೂಡ ಮಾತನಾಡಬಹುದು. ಅದರ ಬಗ್ಗೆ ಚರ್ಚೆ ಮಾಡಿ ಅಲ್ಲಿ ಏನೇನು ನಡೆದಿದೆ ಎನ್ನುವುದರ ಬಗ್ಗೆ ವ್ಯಾಪಕವಾಗಿ ಮಾತನಾಡುವುದಕ್ಕೆ ಅವಕಾಶ ಇದೆ. ಆ ಅವಕಾಶವನ್ನು ಉಪಯೋಗಿಸಿಕೊಂಡು ಎಲ್ಲಾ ವಿಚಾರದ ಬಗ್ಗೆ ಇವತ್ತು ಬೆಳಕು ಚೆಲ್ಲಬಹುದಾಗಿದೆ. ಎಲ್ಲಕ್ಕಿಂತ ಬಹಳ ಮುಖ್ಯವಾಗಿ ನಿಲುವಳಿ ಸೂಚನೆಯಡಿಯಲ್ಲಿ ಈಗಾಗಲೇ ಸಾಕಷ್ಟು ರೂಲಿಂಗ್ಸ್ ಇದೆ. ಅದು ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಹಿರಿಯ ನಾಯಕರಿಗೆಲ್ಲ ಕೂಡ ಗೊತ್ತಿದೆ. ಯಾವುದೇ ನಿಲುವಳಿ ಸೂಚನೆಯಡಿ Police Firing ಆತ್ಮಹತ್ಯೆ, ಲಾಟಿ ಚಾರ್ಜ್ ಈ ವಿಚಾರಗಳನ್ನು ನಿಲುವಳಿ ಸೂಚನೆಯಡಿ ತರಬಾರದೆಂದು ಸಾಕಷ್ಟು ರೂಲಿಂಗ್‌ಗಳು ಬಂದಿವೆ. ಇದನ್ನು ನಿಲುವಳಿ ಸೂಚನೆಯಡಿ ನೀವು ಅವಕಾಶ ಕೊಡಬಾರದೆಂದು ಸಾಕಷ್ಟು ರೂಲಿಂಗ್ಸ್ ಇದೆ. ಇದನ್ನು ತಮ್ಮ ಗಮನಕ್ಕೆ ನಾನು ತರುತ್ತಾ, ನಾವು ಚರ್ಚೆಗೆ ಅವಕಾಶ ಕೊಡಬಾರದೆಂದು ಹೇಳುತ್ತಿಲ್ಲ. ಆದರೆ, ರೂಲ್ 60ರಡಿ ಇದಕ್ಕೆ ಅವಕಾಶ ಇಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಾ, ಇಲ್ಲಿ ನಾವು ಚರ್ಚೆ ಮಾಡಲೇಬೇಕು ಎಂದು ನೀವು ಹೇಳಿದರೆ ಇದನ್ನು ಸೂಕ್ತವಾಗಿ ಬದಲಾವಣೆ ಮಾಡಿ. ಆದರೆ, ಸದನ ಕರೆದಿರುವುದು ನಾವು ರಾಜ್ಯಪಾಲರ ವಂದನಾ ನಿರ್ಣಯಕ್ಕೆ ಮೊದಲು ಆದ್ಯತೆ ಕೊಡಬೇಕು. ಅದನ್ನು ತಾವು ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ

ಸೂಕ್ತವಾದ ನಿರ್ಣಯವನ್ನು ತಾವು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ಅವರು ಒಪ್ಪಿಕೊಳ್ಳುತ್ತಿದ್ದಾರೆ. ಈ ವಿಚಾರ ಅತ್ಯಂತ ಮಹತ್ವವಾದುದು ಮತ್ತು ವಿಷಯವನ್ನು ಚರ್ಚೆ ಮಾಡುವುದಕ್ಕೆ ಏನೂ ತೊಂದರೆ ಇಲ್ಲ ಎನ್ನತಕ್ಕಂಥ ಮಾತನ್ನು ಅವರು ಹೇಳುತ್ತಿದ್ದಾರೆ. ಅದಕ್ಕೆ ಎಲ್ಲಾ ಕಾರ್ಯಕಲಾಪಗಳನ್ನು ಬದಿಗಿಟ್ಟು ನಾವು ಏನು ರೂಲ್ 60 ಅಡಿಯಲ್ಲಿ ನಿಲುವಳಿ ಸೂಚನೆ ತೆಗೆದುಕೊಳ್ಳಿ ಎಂದು ತಮಗೆ ಮನವಿಯನ್ನು ಮಾಡಿಕೊಂಡಿದ್ದೇವೆ, ತಾವು Permission ಕೊಟ್ಟರೆ ಸಾಕು ನಾವು ಈಗ ಪ್ರಾರಂಭ ಮಾಡುತ್ತೇವೆ. ಏಕೆಂದರೆ, ಇದು ನಿಲುವಳಿ ಸೂಚನೆಯಡಿ ಬರುವುದಿಲ್ಲ. ಇದಕ್ಕೆ ಸಾಕಷ್ಟು ಹಿಂದಿನ rulings ಇವೆ. ಗೋಲಿಬಾರ್, ಆತ್ಮಹತ್ಯೆ ಇಂತಹ ಪ್ರಕರಣಗಳು ಬರುವುದಿಲ್ಲ ಎನ್ನತಕ್ಕಂಥ ಮಾತು ಹೇಳಿ ಸಮರ್ಥನೆ ಮಾಡಿಕೊಂಡು ಅಂತಿಮವಾಗಿ ಅವರು ಹೇಳುವುದೇನೆಂದರೆ, ಇದಕ್ಕೆ ನೀವು ಅನುಮತಿ ಕೊಡಬೇಡಿ ಎಂದು ಹೇಳಿದ್ದು, ಹೌದಲ್ಲವೇ ? ಇಲ್ಲವೇ, ಬರುವುದಿಲ್ಲ ಅಂದರೆ, ಇದನ್ನು ನೀವು ಸಮರ್ಥನೆ ಮಾಡಿಕೊಂಡಿದ್ದೀರಿ ಎಂದರೆ, ಇದನ್ನು ಕೊಡಬೇಡಿ ಎಂದು ಹೇಳಿ ವಿನಂತಿಸಿಕೊಂಡರು. ಇಂತಹ ಮಹತ್ವದ ಸಮಸ್ಯೆಗಳಿಗೆ ಅನುಮತಿ ಕೊಡದೇ ಹೋದರೆ ಮತ್ತೆ ಯಾವ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ಬಂದಿದ್ದೇವೆ? ಈ ಘಟನೆ ಬಗ್ಗೆ ಏನಾದರೂ ಒಂದು ವೇಳೆ ನನ್ನ ಜಾಗದಲ್ಲಿ ಮಾನ್ಯ ಯಡಿಯೂರಪ್ಪನವರು ಕುಳಿತಿದ್ದರೆ ಎಷ್ಟು ಕುಣಿಯುತ್ತಿದ್ದರೋ ನನಗೆ ಗೊತ್ತಿಲ್ಲ. ಆದರೆ, ಇವತ್ತು ಬಹಳ ಶಾಂತವಾಗಿ ಏಕೆ ಇದ್ದಾರೆ ಅಂದರೆ, ಏನು ಅವರು ಅಪೇಕ್ಷೆ ಪಟ್ಟಿದ್ದರೋ ಅದು ಸಿಕ್ಕಿತ್ತಲ್ಲ, ಸಾಕು. ಮುಂದೆ ಏನು ನಡೆಯುತ್ತದೋ, ನಡೆಯಲಿ ಅದಕ್ಕೆ ಅನುಮತಿ ಬೇಕಾಗಿಲ್ಲ. ಈ ಕಾನೂನು ಬೇಕು, ಈ ರೂಲ್ಸ್ ಬೇಕು, Precedents ಬೇಕು, ಆಗ ಇಲ್ಲ. ಅದಕ್ಕೋಸ್ಕರ, ಮಾನ್ಯ ಅಧ್ಯಕ್ಷರೆ, ನೀವು ಜನ ಪರ ಕಾಳಜಿ ಇರತಕ್ಕಂಥ ಅಧ್ಯಕ್ಷರು, ಮತ್ತು ನಿಮ್ಮ ಅಧ್ಯಕ್ಷತೆಯಲ್ಲಿ ಇಂತಹ ನಿಲುವಳಿ ಸೂಚನೆ ತಿರಸ್ಕಾರ ಆಯಿತು. ರೈತರ ಬಗ್ಗೆ ನಡೆದಂತಹ ಗೋಲಿಬಾರ್ ಇರಬಹುದು, ಸರಣಿ ಆತ್ಮಹತ್ಯೆಗಳೇ ಇರಬಹುದು, ರಸಗೊಬ್ಬರ ಸರಬರಾಜು ಇರಬಹುದು, ಮತ್ತು ಅನೇಕ ಜಿಲ್ಲೆಗಳಲ್ಲಿ ಇವತ್ತು ನಡೆದಥ-ಘಟನೆಗಳೇ ಇರಬಹುದು, ಮತ್ತು ಸಾಕಷ್ಟು ಕಡೆ ಸಾರ್ವಜನಿಕ ಆಸ್ತಿಪಾಸ್ತಿ ಕೂಡ ಹಾಳಾಗಿದೆ. ಇವೆಲ್ಲಾ ವಿಷಯಗಳ ಪ್ರಸ್ತಾಪವಾಗುತ್ತದೆ. ಇದಕ್ಕೆಲ್ಲಾ ಏನು ಕಾರಣ ? ಯಾರ ನಿರ್ಲಕ್ಷ್ಯ ? ಏಕೆ ಈ ರೀತಿಯಾಗಿ ಆಯಿತು ? ಇವೆಲ್ಲಾ ಕೂಡ ನಾವು ಪ್ರಸ್ತಾಪ ಮಾಡಬೇಕಾದರೆ, ತಾವು ಇದನ್ನು Adjournment

Motion ಆಗೆಯೇ ತೆಗೆದುಕೊಳ್ಳಬೇಕೆಂದರೆ ಒಂದು ಮಾತು ಬರುತ್ತದೆ. ತಮ್ಮ ನೇತೃತ್ವದಲ್ಲಿ ನೋಡಿ, ರೈತರ ಸಮಸ್ಯೆಗೆ Adjournment Motionಗೆ ಅನುಮತಿ ಕೊಟ್ಟರು. ಜಗದೀಶ್ ಶೆಟ್ಟರ್ ಅವರು ರೈತರ ಪರ ಇದ್ದಾರೆ ಅನ್ನತಕ್ಕಂಥ ಭಾವನೆ ಜನರಿಗೂ ಕೂಡ ಬರುತ್ತದೆ. ಆದರೆ, ನಿಮಗೆ ಕೊಡಬೇಕೆಂದು ಇದ್ದರೂ ಕೂಡ ಇವರು ಅಡ್ಡಗಾಲು ಹಾಕುತ್ತಿದ್ದಾರೆ. ಇದನ್ನು ಕೊಡುವುದಕ್ಕೆ ಬರುವುದಿಲ್ಲ, ಅದು ಮಾಡುವುದಕ್ಕೆ ಬರುವುದಿಲ್ಲ ಎಂದು ಕಾನೂನು ತೋರಿಸುತ್ತಿದ್ದಾರೆ. ಕಾನೂನು ಪ್ರಕಾರ ನಾವೆಲ್ಲರೂ ನಡೆದುಕೊಳ್ಳೋಣ. ಅದಕ್ಕೆ ಯಾರು ಕೂಡ ಅಡ್ಡಿ ಇಲ್ಲ. ಆದರೆ ಇಂತಹ ಮಹತ್ವದ ವಿಷಯ ಬಂದಾಗ ತಮಗೆ discretion ಇದೆ, ತಾವು ಹೇಳಬಹುದು. ಹೌದು, ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಇದು ಅತ್ಯಂತ ಮಹತ್ವದ ವಿಷಯವಾಗಿದೆ. ಈಗ ಈ ಸರ್ಕಾರ ಅಧಿಕಾರಕ್ಕೆ ಬಂದು 22, 23 ದಿವಸವಾಗಿದೆ. 23 ದಿವಸದಿಂದ ಒಂದಿಲ್ಲೊಂದು ಗಲಾಟೆ. ಆ ಗಲಾಟೆ ನಡೆದಾಗಲೆಲ್ಲ ಕೂಡ ಅವರು ಹೇಳಿದ್ದು ಏನೆಂದರೆ, ವಿರೋಧ ಪಕ್ಷದವರು ಮಾಡಿಸುತ್ತಿದ್ದಾರೆ, ತಮಗೆ ಬೇಕಾದನ್ನು ಮಾಡಿಸುತ್ತಿದ್ದಾರೆ ಅಥವಾ ಕೆಲವು ಅಸಂತುಷ್ಟ ಜನ ಮಾಡಿಸುತ್ತಿದ್ದಾರೆ ಎಂಬ ಇದೇ ಹೇಳಿಕೆಯನ್ನು ಹೇಳಿಕೊಂಡು ಅವರು ಹೊರಟಿದ್ದಾರೆ. ಅದಕ್ಕೋಸ್ಕರ, ಅಧ್ಯಕ್ಷರೆ, ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತಕ್ಕಂಥದ್ದು ಏನೆಂದರೆ, ರೂಲ್ 60ರಲ್ಲಿ ಇವೆಲ್ಲಾ ingredients ಇವೆ.

ಅಧ್ಯಕ್ಷರು :– ಮಾನ್ಯ ವಿರೋಧ ಪಕ್ಷದ ನಾಯಕರೆ, ನೀವು preliminary submission ಮಾಡಿ, ನಿಲುವಳಿ ಸೂಚನೆ ಏಕೆ ಬೇಕು ಎನ್ನುವುದರ ಬಗ್ಗೆ preliminary submission ಮಾಡಿ. ಆಮೇಲೆ ನಿರ್ಣಯ ತೆಗೆದುಕೊಳ್ಳಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಮಾನ್ಯ ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯಲ್ಲಿ ಏನಿದೆ ? ನಿಲುವಳಿ ಸೂಚನೆ ತರಲು ಅಧ್ಯಕ್ಷರ ಅನುಮತಿ ಅಗತ್ಯ.

"ಈ ನಿಯಮಗಳ ಉಪಬಂಧಗಳಿಗೊಳಪಟ್ಟು ಸಾರ್ವಜನಿಕವಾಗಿ ಅತ್ಯಂತ ಮಹತ್ವವು ಒಂದು ನಿರ್ದಿಷ್ಟ ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ಸದನದ ಕಾರ್ಯಕಲಾಪ ನಿಲುವಳಿ ಬಗ್ಗೆ ಸೂಚನೆಯನ್ನು ತರಬಹುದು". ಇದು ನಿರ್ದಿಷ್ಟವಾಗಿದೆ. ಮತ್ತು ಎರಡನೆಯದಾಗಿ, ತಮಗೆ ಗೊತ್ತಿರುವ ಹಾಗೆ ಇದು ಸಾರ್ವಜನಿಕ ಮಹತ್ವದ ವಿಷಯವಾಗಿದೆ.

ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳು ತೆಗೆದುಕೊಳ್ಳುವ ಹಾಗಿಲ್ಲ,

ಬರೀ ಮೊನ್ನೆ ನಡೆದಂಥ ಘಟನೆ ಬಗ್ಗೆ ಇದೆ. ಅದೇ ರೀತಿಯಾಗಿ ನಿಲುವಳಿ ಸೂಚನೆ ಹಕ್ಕು ಬಾಧ್ಯತೆಯ ಪ್ರಶ್ನೆ ಇಲ್ಲ. ಇವೆಲ್ಲಾ ingredients ಕೂಡ fulfil ಆಗಿರುವುದರಿಂದ ಈ ಸೂಚನೆಗೆ ತಾವು Adjournment Motion ಎಂದು ಅನುಮತಿ ಕೊಟ್ಟರೆ ನಾವು ಚರ್ಚೆ ಪ್ರಾರಂಭ ಮಾಡುತ್ತೇವೆ. ನಿಮಗೆ ಮನವರಿಕೆ ಮಾಡಿಕೊಡುವಂಥ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಏಕೆಂದರೆ, ಯಾವ್ಯಾವ ingredients rules 60ರಲ್ಲಿ ಬರುತ್ತವೋ, ಅದರ ಆಧಾರದ ಮೇಲೆ ನಾವು ಹೇಳುತ್ತಿದ್ದೇವೆ. ಸಾರ್ವಜನಿಕ ಮಹತ್ವವುಳ್ಳದ್ದು, ಇತ್ತೀಚೆಗೆ ನಡೆದಂಥ ಘಟನೆಗಳು. ಒಂದು ವಿಷಯ ಏನೆಂದರೆ, ರೈತರಿಗ ಸಂಬಂಧಪಟ್ಟ ವಿಚಾರ. ಅದಕ್ಕಾಗಿ ತಾವು ದಯವಿಟ್ಟು ಅವಕಾಶ ಮಾಡಿಕೊಡಿ, ಮತ್ತು ಈ ರಸಗೊಬ್ಬರ ಕೊರತೆಯಿಂದ ರೈತರ ಪ್ರತಿಭಟನೆ, ಆತ್ಮಹತ್ಯೆ, ಗೋಲಿಬಾರ್, ಈ ಎಲ್ಲಾ ವಿಷಯಗಳು ಕೂಡ ಇದರಲ್ಲಿ ಇದೆ.

ಅಧ್ಯಕ್ಷರೆ, ಈಗ ತಮ್ಮ ಮುಂದೆ ನಾನು ಪ್ರಸ್ತಾಪ ಮಾಡತಕ್ಕಂಥಾದ್ದು ಇಷ್ಟೇ, ಅದಕ್ಕೆ ಎಲ್ಲರೂ ಕೂಡ ಮಾತನಾಡುತ್ತಾರೆ. ಎಲ್ಲ ಅನೇಕ ಹಿರಿಯ ನಾಯಕರು ಇದ್ದಾರೆ ಮತ್ತು ಕೇವಲ ನಾವು ಸಾಂಕೇತಿಕವಾಗಿ ಯಾರು signature ಮಾಡಿದ್ದಾರೆ, ಅವರೇ ಮಾತನಾಡಬೇಕು, ಇವರೆ ಹೇಳಬೇಕು ಎಂದೇನಲ್ಲ, ಇದು ದುರ್ದೈವದ ಸಂಗತಿ. ಇಡೀ ರಾಜ್ಯದಲ್ಲಿ ಈ ಘಟನೆ ನಡೆದಿದೆ. ಅದು ಏಕೆ ನಡೆಯಿತು ? ಹೇಗೆ ನಡೆಯಿತು ? ಮತ್ತು ಅವರೆ ಹೇಳಿಕೊಂಡಿರುವಂತೆ, ಇದು ನನ್ನ ದುರ್ದೈವ, ನಾನು ಬಂದ ಕೂಡಲೇ ಇದು ಶುರು ಆಯಿತಲ್ಲ ಎಂದು, ಆದರೆ, ಅನೇಕ ಸಾರಿ ಒಂದು ಕಡೆ ದೈವದ ಮೇಲೆ ನಂಬಿಕೆ ಇಡುತ್ತಾರೆ. ಇನ್ನೊಂದು ಕಡೆ ವಿರೋಧ ಪಕ್ಷದ ಮೇಲೆ ಗೂಬೆ ಕೂರಿಸುವುದಕ್ಕೆ ಹೊರಟಿದ್ದಾರೆ. ಈ ಎರಡೂ ನಡೆದಿವೆ, ನಡೆಯಲಿ. ಅದಕ್ಕೆ ಉತ್ತರ ಕೊಡೋಣ. ಅಧ್ಯಕ್ಷರೆ, ಮೇ 29 ರಿಂದ ಅನೇಕ ಕಡೆ ಏನು ಒಂದು ಅಸಂತೋಷದ ವಾತಾವರಣ ಸೃಷ್ಟಿಯಾಗಿದೆ ಮತ್ತು ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ರೈತರ ಹೆಸರಿನ ಮೇಲೆ ಪ್ರಮಾಣ ವಚನವನ್ನು ಸ್ವೀಕಾರ ಮಾಡಿ, ಹಸಿರು ಶಾಲು ಹಾಕಿಕೊಂಡು, ಮೊದಲು ಹಸಿರು ಶಾಲು ಹಾಕುತ್ತಿರಲಿಲ್ಲ. ಮೊದಲು ಏನಿದ್ದರೂ ಕೇಸರಿ ಬಣ್ಣದ ಶಾಲು ಹಾಕುತ್ತಿದ್ದರು. ಇತ್ತೀಚೆಗೆ ಅದನ್ನು ಬಿಟ್ಟರು. ಅದನ್ನು ಬಿಟ್ಟ ಕೂಡಲೇ ಮೊನ್ನೆ 29ನೇ ತಾರೀಖಿಗೆ ನಾನು ನೋಡಿದ್ದು, ಅವರು ಹಸಿರು ಶಾಲು ಹೆಗಲ ಮೇಲೆ ಬಂದಿದ್ದು, ಅದಕ್ಕೆ ಹಸಿರು ಶಾಲನ್ನು ಧರಿಸಿಕೊಂಡು ಅವರು ಮಾತನಾಡಿ, ರೈತರ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ಅವರು

especially ರೈತರ ಹೆಸರನ್ನು ತೆಗೆದುಕೊಂಡೇ ಪ್ರಾರಂಭ ಮಾಡಿದ್ದು, ಏನೆಂದರೆ, ಅವರ ಕಾಲದಲ್ಲಿ ಗೋಲಿಬಾರ್ ನಡೆಯಿತು. ಮೊದಲನೇ ಹತ್ಯೆಯನ್ನು ಈ ಸರ್ಕಾರ ಮಾಡಿತು. ಯಾರಿಗೆ ಯಾರ ಹೆಸರಿನ ಮೇಲೆ ಪ್ರಮಾಣ ವಚನವನ್ನು ಸ್ವೀಕಾರ ಮಾಡಿತ್ತು ? ಮಾತೆತ್ತಿದರೆ ಹೇಳುತ್ತಾರೆ, ಈ ಹಿಂದೆ ದೇಶದಲ್ಲಿ ಯಾರ ಕಾಲದಲ್ಲೂ ಆಗಿಲ್ಲ, ಈಗ ಪ್ರತಿಯೊಂದಕ್ಕೂ ನೀವು ಹಿಂದಿನ ಪುಟಗಳನ್ನು ಎಣಿಸಿಕೊಂಡು ಹತ್ತಾರು ವರ್ಷಗಳ ಇತಿಹಾಸವನ್ನು ತೆಗೆದುಕೊಂಡು ನಾವು ಹಾಗೆ ಇರುತ್ತೇವೆ ಎಂದು ಹೇಳಿಕೊಳ್ಳತಕ್ಕಂಥಾದ್ದು ಇದ್ದರೆ, ಅದರ ಮೇಲೆ ನಿಮಗೆ ಸಂತೋಷವಾಗಿದ್ದರೆ, ಹೇಳಿಕೊಳ್ಳಿ. ಆದರೆ, ನೀವು ರೈತರ ಹೆಸರಿನ ಮೇಲೆ ಬಂದು ಮಾಡಿದ್ದು ಏನು ? ಇದು ಬಹಳ ಮುಖ್ಯ. ಅಧ್ಯಕ್ಷರೆ, ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ನೀವು ಅವಕಾಶ ಮಾಡಿಕೊಟ್ಟರೆ ನಾವು ಎಲ್ಲ ವಿಷಯಗಳನ್ನು ನಿಮ್ಮ ಮುಂದೆ ಪ್ರಸ್ತಾಪ ಮಾಡುತ್ತೇವೆ. ಪ್ರಸ್ತಾಪ ಮಾಡಿದ ಮೇಲೆ ಈಗಾಗಲೇ ನ್ಯಾಯಾಂಗ ತನಿಖೆ ಬಗ್ಗೆ ಹೇಳಿದರು. ಏನು ಹೇಳಿದರು ? ನ್ಯಾಯಾಂಗ ತನಿಖೆಯನ್ನು ನಾವು ಈಗಾಗಲೇ ಮಾಡಿದ್ದೇವೆ. ನ್ಯಾಯಾಂಗ ತನಿಖೆಯ ರಿಪೋರ್ಟ್ ಬಂದ ಮೇಲೆ, ಚರ್ಚೆ ಮಾಡಬೇಕು. ಆ ವರದಿಯನ್ನು ತರಿಸುವುದಕ್ಕೆ ನಾಲ್ಕು ತಿಂಗಳು time ಕೊಟ್ಟಿದ್ದಾರೆ. ಆ ನಾಲ್ಕು ತಿಂಗಳ time ನಲ್ಲಿ ವರದಿ ಬಂದ ಮೇಲೆ ಅವರು ಈ ಸದನದಲ್ಲಿ table ಮಾಡಿದ ಮೇಲೆ ಆ ವರದಿ ತೆಗೆದುಕೊಂಡು ನಾವು ಮಾತನಾಡಬೇಕು. ಇವತ್ತು ನಡೆದಂಥ ಘಟನೆಗೆ ನಾಲ್ಕು ತಿಂಗಳ ನಂತರ ಮಾತನಾಡಿಯೆಂದು ಮಾನ್ಯ ಸುರೇಶ್ ಕುಮಾರ್‌ರವರು ಹೇಳುತ್ತಾರೆ. ತಾವು ಬೇಕಾದರೆ ನಡವಳಿಕೆಯನ್ನು ತೆಗೆದು ನೋಡಿ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಈ ವಿಷಯವಾಗಿ ನ್ಯಾಯಾಂಗ ತನಿಖೆ ಆಗುತ್ತಿದೆ. ಅದಕ್ಕಾಗಿ ನಿಲುವಳಿ ಸೂಚನೆಯ ಮೇಲೆ ಚರ್ಚೆಗೆ ತೆಗೆದುಕೊಳ್ಳುವುದು ಬೇಡ. ಅದನ್ನು ರಾಜ್ಯಪಾಲರ ವಂದನಾ ನಿರ್ಣಯದಲ್ಲಿ ಚರ್ಚೆ ಮಾಡಬಹುದೆಂದು ನಾನು ಹೇಳಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರಿಗೆ ಅನಾನುಕೂಲವಾಗಿ argument ಇತ್ತೆಂದರೆ ಈ ರೀತಿ ಹೇಳುವುದು. ನಾವು ನಾಲ್ಕು ತಿಂಗಳ ನಂತರ ಚರ್ಚೆಗೆ ಹೋಗಬೇಕು. ಅಥವಾ ನ್ಯಾಯಾಂಗ ತನಿಖೆಯ ವರದಿ ಬಂದ ಮೇಲೆ ಚರ್ಚೆ ಮಾಡಬೇಕೆಂದರೆ, Rule 60 ಏಕೆ ಬೇಕು? Adjournment Motion ಏಕೆ ಬೇಕು? ಈ ಸದನ ಏಕೆ ಬೇಕು? ನಾನು ನಿಯಮ 60 ರ ಮೇಲೆ ಚರ್ಚೆಯಾಗಬೇಕೆಂದು ಕೇಳುತ್ತಿದ್ದೇನೆ. ನೀವು ಹೇಳುವುದು ಹೇಳಿ. ನಿಮ್ಮ argument ನಿಯಮ 69ರ ಅಡಿಯಲ್ಲಿ ಆಗಬೇಕೆಂದು ಇದೆ. ನನ್ನ argument

ನಿಯಮ 60 ಅಡಿಯಲ್ಲಿ ಆಗಬೇಕೆಂದು ಇದೆ. ಮಾನ್ಯ ಅಧ್ಯಕ್ಷರ ಒಪ್ಪಿಗೆಯು ನಿಯಮ 60ರ ಅಡಿಯಲ್ಲೆ ಇದೆ. ನೀವು ಏಕೆ ಅದಕ್ಕೆ ಅಡ್ಡ ಬರುತ್ತಿದ್ದೀರಿ? ಇವತ್ತು ಮುಖ್ಯವಾಗಿ ಇದನ್ನು ಏಕೆ ತೆಗೆದುಕೊಳ್ಳಬೇಕೆಂದರೆ, ನ್ಯಾಯಾಂಗ ತನಿಖೆಯಾಗುವವರೆಗೆ, ಅದರ report ಬರುವವರೆಗೆ ಮತ್ತೆ ಅವರು extension ಕೇಳಿ, ಇದನ್ನು ಮುಂದಕ್ಕೆ ಹಾಕಿಕೊಂಡು ಹೋಗುವಂಥಾದ್ದು ಆಗುತ್ತದೆ, ಮತ್ತೆ ಅನೇಕ ಭಾರಿ Judicial probe reports ನಿಗದಿತವಾದಂಥ ಸಮಯದಲ್ಲಿ ಆಗಬೇಕೆಂದು ಕೊಡುತ್ತೇವೆ. ಅದು ಆ ಸಮಯದಲಿ ಆಗುವುದಿಲ್ಲ. ಅನೇಕ ಸಾರಿ Notification issue ಮಾಡಿ, ಅವರಿಗೆ establishment ಎಲ್ಲಾ ಕೊಡುವವರೆಗೆ ಮೂರು ತಿಂಗಳುಗಳಾಗುತ್ತವೆ. ಅದು ಆದಮೇಲೆ ಅವರು report ತರುವುದಕ್ಕೆ ಇನ್ನು ಆರು ತಿಂಗಳೋ, ವರ್ಷವೋ ಬೇಕು. ಅಂದರೆ ವರ್ಷದವರೆಗೆ ಕಾದರೆ ಜನರು ಏನು ಅನ್ನುತ್ತಾರೆ? ರೈತರು ಏನು ತಿಳಿದುಕೊಳ್ಳುತ್ತಾರೆ? ನಾವು, ನೀವು ಯಾರಿಗೋಸ್ಕರ ಬದ್ಧರಾಗಿ ಅವರಿಗೆ ಸಹಾಯ ಮಾಡಬೇಕೆಂದು ಹೊರಟಿದ್ದೇವೆ, ಅವರ ಸಮಸ್ಯೆಗೆ ಸ್ಪಂದಿಸಬೇಕೆಂದು ಹೊರಟಿದ್ದೇವೆ, ಅವರಿಗೆ ಅನ್ಯಾಯ ಮಾಡಿದ ಹಾಗೆ ಆಗುವುದಿಲ್ಲವೇ? ಅದನ್ನು ಚರ್ಚೆ ಮಾಡದೇ, ಅವರ ಸಮಸ್ಯೆಗೆ ಸ್ಪಂದಿಸದೇ, ನಾವು ನೀವು ಸೇರಿ ಪರಿಹಾರವನ್ನು ಕಂಡು ಹಿಡಿಯದೇ, ನಾವು ಇದನ್ನು ರೂಲ್ಸ್ ಪ್ರಕಾರ ಆಮೇಲೆ ಮಾಡಿ ಎಂದರೆ ತಪ್ಪಾಗುತ್ತದೆ. ಅದಕ್ಕೆ ತಾವು ಈ ವಿಷಯದ ಚರ್ಚೆಗೆ ತಕ್ಷಣ permission ಕೊಡಿ ತಾವು Adjournment Motion ಗೆ ಒಪ್ಪಿಗೆಯನ್ನು ಕೊಡಿ. ತಾವು ನಿಲುವಳಿ ಸೂಚನೆಗೆ ಒಪ್ಪಿಗೆ ಕೊಟ್ಟ ತಕ್ಷಣ ನಾನು ಚರ್ಚೆಯನ್ನು ಪ್ರಾರಂಭ ಮಾಡುತ್ತೇನೆ. ಎಲ್ಲಾ ವಿಷಯಗಳನ್ನು ತಮ್ಮ ಮುಂದಿಡುತ್ತೇನೆ. ಇದರಲ್ಲಿ ಯಾವುದು ಸರಿಯೋ, ತಪ್ಪೋ, ಮತ್ತೆ ಇದಕ್ಕೆ ಮುಂದೆ ಏನು ಮಾಡಬೇಕೆನ್ನುವಂಥಾ ಸೂಚನೆಯನ್ನು ಕೂಡ ನಾನು ಕೊಡುತ್ತೇನೆ, ಇಲ್ಲದಿದ್ದರೆ ಏನು ಆಗುತ್ತದೆಂದರೆ, ಬರೀ ನಾವು ಮಾತನಡಿ ಇಲ್ಲಿಗೆ ಬಿಡುವಂಥಾದ್ದು ಅಲ್ಲ. ಇಲ್ಲಿ ಮೊದಲನೆಯದಾಗಿ police firing ಬಗ್ಗೆ, ಅಥವಾ ಗುಂಡು ಹಾಕಿ ಕೊಂದ ಬಗ್ಗೆ, ಇವತ್ತು ನ್ಯಾಯಾಂಗ ತನಿಖೆ ನಡೆಯುತ್ತಿದೆ. ಇನ್ನು ಉಳಿದಂಥಾ ಘಟನೆಗಳ ಬಗ್ಗೆ ಇನ್ನು ಏನೂ ಆಗಿಲ್ಲ. ಅದನ್ನು ನಾವು ಅದರ ಜೊತೆಯಲ್ಲೇ ಚರ್ಚೆ ಮಾಡಬೇಕಾಗಿದೆ. ಇದಕ್ಕೆ ಪೂರಕವಾದಂಥಾ ವಿಷಯಗಳು ಇರುವ ಕಾರಣ, ನಾವು ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ Adjournent Motion ಗೆ ತಾವು ಅನುಮತಿಯನ್ನು ಕೊಡಬೇಕೆಂದು ನಾನು ತಮ್ಮನ್ನು ಪುನಃ ಕೇಳಿಕೊಳ್ಳುತ್ತೇನೆ. ದಯವಿಟ್ಟು ಎಲ್ಲಾ ಕಾರ್ಯ ಕಲಾಪಗಳನ್ನು ಬದಿಗಿಟ್ಟು, ಈ ವಿಷಯಕ್ಕೆ ಅವಕಾಶವನ್ನು ಕೊಡುತ್ತಿರಿ. ನಿಮಗೂ ಕೂಡ ಇದರ ಬಗ್ಗೆ ಕಾಳಜಿ ಇದೆ. ನಿಮ್ಮ ಜಿಲ್ಲೆಯಾದ ಹುಬ್ಬಳ್ಳಿ,

ಧಾರವಾಡದಲ್ಲೂ ಈ ಘಟನೆ ನಡೆದಿದೆ. ನಿಮ್ಮ ಪಕ್ಕದ ಜಿಲ್ಲೆಯಾದ ಹಾವೇರಿಯಲ್ಲಿ ಘಟನೆ ನಡೆದಿದೆ, ಗದಗ್ ಜಿಲ್ಲೆಯಲ್ಲಿ ನಡೆದಿದೆ, ರಾಣೆ ಬೆನ್ನೂರಿನಲ್ಲಿ ನಡೆದಿದೆ. ಅದರಲ್ಲೂ ವಿಶೇಷವಾಗಿ ಕರ್ನಾಟಕದ ಮಧ್ಯ ಭಾಗದಲ್ಲಿ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಈ ಘಟನೆ ಹೆಚ್ಚಿಗೆ ನಡೆದಿದೆ. ಇತ್ತೀಚೆಗೆ ಎಲ್ಲಾ ಕಡೆಗಳಲ್ಲೂ ಮಳೆ ಬಂದ ಕಾರಣ ಗೊಬ್ಬರ ಎಲ್ಲಾ ಕಡೆಗಳಲ್ಲೂ ಬೇಕೆಂದು ಈಗ ಬರುತ್ತಿದೆ. ಅದಕ್ಕಾಗಿ ಇದು ಮಹತ್ವದ ವಿಷಯವೆಂದು ತಿಳಿದು, ತಾವು Adjournment Motion ಗೆ ಒಪ್ಪಿಗೆ ಕೊಡಬೇಕೆಂದು ನಾನು ಮತ್ತೊಮ್ಮೆ ತಮ್ಮನ್ನು ಕೇಳುತ್ತೇನೆ. ನೀವು ಇದಕ್ಕೆ ಒಪ್ಪಿದರೆ, ನಾನು ಚರ್ಚೆಯನ್ನು ಪ್ರಾರಂಭ ಮಾಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ (ಶಿರಾ): ಮಾನ್ಯ ಅಧ್ಯಕ್ಷರೆ, ಇವತ್ತೇ ಮೊದಲ ವಿಧಾನ ಸಭೆಯ ಅಧಿವೇಶನ ಆರಂಭವಾಗಿರುವಂಥಾದ್ದು. ಹೊಸ ಸರ್ಕಾರ ರಚನೆಯಾಗಿ ಸುಮಾರು 20–25 ದಿವಸಗಳಾಗಿವೆ. ಅವರು ಅಧಿಕಾರವನ್ನು ಸ್ವೀಕಾರ ಮಾಡಿದ ನಿಮಿಷದಿಂದ ರಾಜ್ಯದ ಸುಮಾರು ಆರು ಕೋಟಿ ಜನತೆಯನ್ನು, ಅದರಲ್ಲೂ ವಿಶೇಷವಾಗಿ ಕೃಷಿಕರನ್ನು ಕಾಡುತ್ತಿರುವಂಥಾ ಪ್ರಮುಖವಾದ ಸಮಸ್ಯೆಯೇನೆಂದರೆ, ಅದು ಬಿತ್ತನೆ ಬೀಜ ಮತ್ತು ರಸಗೊಬ್ಬರದ ಕೊರತೆಯಾಗಿದೆ. ಇದರಿಂದ ಬಿತ್ತನೆ ಕಾರ್ಯಕ್ರಮಕ್ಕೆ ವಿಳಂಬವಾಗುತ್ತಿದೆಯೆನ್ನುವಂಥಾ ಹಾಹಾಕಾರ ಎಲ್ಲಾ ಕಡೆ ಇರುವಂಥಾದ್ದು ನಮಗೆಲ್ಲಾ ಗೊತ್ತಿರುವಂಥ ವಿಚಾರ. ನಾನು ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರಿಗೆ ನಿವೇದನೆ ಮಾಡುವುದೇನೆಂದರೆ, ಸನ್ಮಾನ್ಯ ಮುಖ್ಯಮಂತ್ರಿಯವರು ಹೊಸ ಸಂಪ್ರದಾಯವನ್ನು ರಾಜ್ಯದಲ್ಲಿ ಹುಟ್ಟು ಹಾಕಿದ್ದಾರೆ. ಏನೆಂದರೆ, ಅದು ಸಂವಿಧಾನ ವಿರೋಧಿನೋ, ಅಲ್ಲವೋ, ಎನ್ನುವಂಥಾ ವಿಚಾರಕ್ಕೆ ನಾನು ಹೋಗುವುದಿಲ್ಲ. ಅವರು ತಮ್ಮ ಪ್ರಾಮಾಣಿಕತೆಯನ್ನು ರೈತರ ನಾಯಕರಾಗಿ ರೈತರ ಹೋರಾಟಕ್ಕೆ ಬೆಂಬಲವನ್ನು ಕೊಟ್ಟು ಕೊಂಡು ರೈತರ ವಿಚಾರದಿಂದಲೇ ಅವರ ರಾಜಕೀಯ ಜೀವನ ಪ್ರಾರಂಭವಾಗಿರುವಂಥಾದ್ದು. ಅವರು ರೈತರಿಗೆ ಬೆಂಬಲವನ್ನು ಮಾಡಿಕೊಂಡು ಬಂದಿರುವಂಥಾದ್ದು. ಅವರು ಪ್ರಮಾಣ ವಚನವನ್ನು ಸ್ವೀಕಾರ ಮಾಡುವಂಥಾ ಸಂದರ್ಭದಲ್ಲಿ ರೈತರ ಹೆಸರಿನ ಮೇಲೆ ಪ್ರಮಾಣ ವಚನವನ್ನು ಸ್ವೀಕಾರ ಮಾಡುವುದರ ಜೊತೆಗೆ ತಮ್ಮ ಪಕ್ಷದ ಕೇಸರಿ ಬಣ್ಣ ಹೋಗಿ ಹಸಿರು ಬಣ್ಣ ಆಯಿತೆನ್ನುವಂಥಾ ಮಾತನ್ನು ನಮ್ಮ ವಿರೋಧ ಪಕ್ಷದ ನಾಯಕರು ಉಲ್ಲೇಖ ಮಾಡಿ ಹೇಳಿದರು. ಅವರು ಹಸಿರು ಶಾಲನ್ನು ಹಾಕಿಕೊಂಡು ರಾಜ್ಯದ ಜನತೆಗೆ ತೋರಿಸಿದರು. ಅದರಿಂದ ತಾವು ಎಲ್ಲೋ ಒಂದು ಕಡೆ ರಾಜ್ಯದ ರೈತರಿಗೆ ಸ್ಪಂದಿಸುತ್ತೇನೆ. ನಾನು ರೈತರ ಹೋರಾಟದ ಹಿನ್ನೆಲೆಯಲ್ಲಿ ಬಂದಿದ್ದೇನೆ ರೈತರಿಗೋಸ್ಕರ ಶ್ರಮಿಸುತ್ತೇನೆ ಎನ್ನುವಂಥ ಭಾವನೆ ಬಂದಿರುವಂಥಾ ಆ

ವಿಶ್ವಾಸವನ್ನು ತಾವು ಮೂಡಿಸಿದ್ದೀರಿ. ಇವತ್ತು ಜನರು ನಿಮ್ಮನ್ನು ನಂಬಿದ್ದಾರೆ.

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ, ಈಗ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಟಿ. ಬಿ. ಜಯಚಂದ್ರ: ನಾನು ಚರ್ಚೆಗೆ ಹೋಗುತ್ತಿಲ್ಲ.

ಅಧ್ಯಕ್ಷರು: ತಾವು ಡೀಟೈಲ್ ಆಗಿ ಮಾತನಾಡುವುದು ಬೇಡ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಗೆ ಒಪ್ಪಿಗೆ ಕೊಡಿಯೆಂದು ಹೇಳಿದರು. ಅದಕ್ಕೆ ಪೂರಕವಾಗಿ ನೀವು ಹೇಳುವಂಥದ್ದು ಇದ್ದರೆ ಹೇಳಿ. ನಾನು ಆಮೇಲೆ ಡಿಟೈಲ್ಡ್ ಆಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಆಗ ಚರ್ಚೆ ಮಾಡುವಿರಂತೆ, ನಿಮಗೆ ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡುವುದಕ್ಕೆ ಒಪ್ಪಿಗೆ ಕೊಡಿಯೆಂದು ಕೇಳಿದರು. ಅದಕ್ಕೆ ಪೂರಕವಾಗಿ ಕೆಲವು points ಅನ್ನು ಅವರು ಹೇಳಿದರು. ಅದಕ್ಕೆ ಪೂರಕವಾಗಿ ನೀವು ಏನಾದರೂ ಹೇಳುವಂಥದ್ದು ಇದ್ದರೆ ಹೇಳಿ. ಈ ವಿಷಯದ ಬಗ್ಗೆ ಚರ್ಚೆ ಮಾಡುವುದಾದರೆ, ನಾನು ಅವಕಾಶವನ್ನು ಕೊಟ್ಟಾಗ ಮಾತನಾಡಿ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಏನು ಹೇಳಿದರು. ಇದು ಸಾರ್ವಜನಿಕ ಮಹತ್ವವಾದ ವಿಚಾರವೆಂದು ಆದಾಗ, ಅದಕ್ಕೆ ಗೋಲಿಬಾರ್‌ಗೆ ನ್ಯಾಯಾಂಗ ತನಿಖೆಗೆ ಆದೇಶವಾಗಿದೆ, ಆತ್ಮಹತ್ಯೆ ಪ್ರಕರಣವನ್ನು ಕಾನೂನು ಪ್ರಕಾರ ಚರ್ಚೆಗೆ ತರಲು ಆಗುವುದಿಲ್ಲ, ಕಾನೂನಿನಲ್ಲಿ ಅಡ್ಡಿ ಇದೆ, ರೂಲಿಂಗ್ಸ್ ಇದೆಯೆಂದು ಹೇಳುತ್ತಾರೆ. ಅದಕ್ಕೆಲ್ಲಕ್ಕಿಂತ ಮುಖ್ಯವಾಗಿ ನಾವು ತಂದಿರುವಂಥಾ ವಿಚಾರವೆನೆಂದರೆ ಇವತ್ತು ಬಿತ್ತನೆ ಬೀಜ ಮತ್ತು ರಸಗೊಬ್ಬರದಲ್ಲಿ ಕೊರತೆಯಾಗಿದೆ. ನಾನು ಒಂದು ಮಾತನ್ನು ಮಾನ್ಯ ಯಡಿಯೂರಪ್ಪನವರಿಗೆ ಹೇಳುವುದೇನೆಂದರೆ, ಇವತ್ತು ಅವರು ರೈತರ ನಾಯಕರಾಗಿ ರೈತರ ಹೆಸರಿನ ಮೇಲೆ ಪ್ರಮಾನ ವಚನ ಸ್ವೀಕಾರ ಮಾಡಿದ್ದಾರೆ. ತಾವು ನಿಲುವಳಿ ಸೂಚನೆ ಬಂದಂಥಾ ಸಂದರ್ಭದಲ್ಲಿ ಅದನ್ನು ಯಾವುದೇ ಚರ್ಚೆ ಇಲ್ಲದೇ, ಮಾನ್ಯ ವಿರೋಧ ಪಕ್ಷದ ನಾಯಕರು ಅನುಮತಿ ಕೇಳಿದ ತಕ್ಷಣ ಒಪ್ಪುವಂಥಾ ಧೀಮಂತಿಕೆಯನ್ನು ತಾವು ತೋರಿಸುತ್ತೀರೆಂದು ನಾನು ನಂಬಿದ್ದೆ. ಆದರೆ ನಿಮ್ಮ ಸಂಸದೀಯ ವ್ಯವಹಾರಗಳ ಸಚಿವರು ಅಕ್ಷೇಪಣೆಗಳನ್ನು ಎತ್ತಿ, ಇದು ಬರುವುದಿಲ್ಲ. ಬೇರೆ ವಿಚಾರದಲ್ಲಿ ಇದನ್ನು ಚರ್ಚೆ ಮಾಡಿಯೆಂದು ಹೇಳಿದರು. ಮಾನ್ಯ ಅಧ್ಯಕ್ಷರೇ, ನಾನು ಹೇಳುವುದೇನೆಂದರೆ, ಸಾರ್ವಜನಿಕ ಮಹತ್ವ ವಿಚಾರದಲ್ಲಿ ರಾಜ್ಯದ ಜನತೆಯನ್ನು ಕಾಡುತ್ತಿರುವಂಥ ವಿಚಾರವನ್ನು ಸರ್ಕಾರವೇ

ಇದಕ್ಕೆ ಒಪ್ಪಿಗೆಯನ್ನು ಕೊಟ್ಟು ಈ ಚರ್ಚೆಯನ್ನು ಪ್ರಾರಂಭ ಮಾಡಿದರೆ, ಬಹುಶಃ ರೈತರು ಇದರಿಂದ ಸಮಾಧಾನ ಪಡುತ್ತಾರೆ, ನಿಟ್ಟುಸಿರು ಬಿಡುತ್ತಾರೆ. ಇವತ್ತು ಮಾನ್ಯ ಯಡಿಯೂರಪ್ಪನವರು ನಮ್ಮ ನಾಯಕರು ಎಂದು ಹೇಳುವಂಥಾ ಸಂದರ್ಭ ಬರುತ್ತದೆ. ತಾವು ಯೋಚನೆ ಮಾಡಿ. ನಾವು ನಿಲುವಳಿ ಸೂಚನೆ ಯಾವುದು ಇಲ್ಲದೇ ನೇರವಾಗಿ ಚರ್ಚೆಗೆ ಹೋಗೋಣ. ನಿಲುವಳಿ ಸೂಚನೆ ಇರುವಂಥಾದ್ದು ಏಕೆಂದರೆ, ಇಂತಹ ಸಂದರ್ಭದಲ್ಲಿ, ಇಂತಹ ವಿಷಯದಲ್ಲಿ ಅದನ್ನು ಚರ್ಚೆ ಮಾಡಿ ಅದರಿಂದ ರಾಜ್ಯದ ಜನರಿಗೆ ಮನವರಿಕೆಯಾಗಬೇಕು. ನಾವು ಯಾವುದೇ ಕಲಾಪಗಳನ್ನು ಯಾವುದೇ ವಿಚಾರಗಳಲ್ಲಿ ಅಲ್ಲದಿದ್ದರೂ ಇವತ್ತು ಆ ವಿಚಾರವನ್ನು ವಿಧಾನ ಸಭೆಯ ಪ್ರಾರಂಭದಲ್ಲೇ ಪ್ರಮುಖವಾಗಿ ಚರ್ಚೆ ಮಾಡಿದರೆಂಬ ಕೀರ್ತಿ ನಿಮಗೆ ಬರುತ್ತದೆ. ನೀವು ಈ ಹೊಸ ಸಂಪ್ರದಾಯವನ್ನು ಹಾಕಿ ತಾವು ಅದಕ್ಕೆ ಯಾವುದೇ ವಿರೋಧ ಮಾಡದೇ ಚರ್ಚೆಗೆ ಅನುಮತಿಯನ್ನು ಕೊಡುವಂಥಾದ್ದು ಸೂಕ್ತ. ಇವತ್ತು ಆಹಾರದ ಬೆಲೆಗಳು ಎಲ್ಲಿಗೆ ಹೋಗುತ್ತಿದೆ. ಇವತ್ತು ಬಿತ್ತನೆ ಕಾರ್ಯಕ್ರಮ ಸ್ಥಗಿತವಾಗಿರುವಂತಾದ್ದು, ನಿಂತು ಹೋಗುವಂಥಾದ್ದು, ಇಂತಹ ಸಂದರ್ಭದಲ್ಲಿ ಮುಂದೆ ಏನಾಗುತ್ತದೆಂಬ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಸಾರ್ವಜನಿಕ ಮಹತ್ವವುಳ್ಳ ವಿಚಾರವೆಂದರೆ, ಇಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಇದು ಸಾರ್ವಜನಿಕ ಮಹತ್ವ ವಿಚಾರವಾಗಿದೆ. ಇವತ್ತು ಇದು ನಮ್ಮೆಲ್ಲರ ಹೊಟ್ಟೆಯ ಪ್ರಶ್ನೆಯಾಗಿದೆ. ರೈತರ ಪ್ರಶ್ನೆಯಾಗಿದೆ. ಆ ಕಾರಣಕ್ಕೋಸ್ಕರ ನಿಲುವಳಿ ಸೂಚನೆ ಅದರ ಉದ್ದೇಶವೇನು? ಅದರ ಮೂಲವನ್ನು ಇವತ್ತು ಸಭಾ ನಾಯಕರು ಅರ್ಥ ಮಾಡಿಕೊಂಡು ಚರ್ಚೆಗೆ ಒಪ್ಪಿಗೆಯನ್ನು ಕೊಡಬೇಕೆನ್ನುವ ಮಾತನ್ನು ನಾನು ಹೇಳುತ್ತೇನೆ. ಈ ಸದನದ ಮೂಲಕ ತಪ್ಪು ಸಂದೇಶ ರವಾನೆಯಾಗಬಾರದು. ಇವತ್ತು ರೈತರ ಪರವಾಗಿ ಇಲ್ಲ. ಶಾಸಕರಾಗಿ ಆಯ್ಕೆಯಾಗಿರುವವರೆಲ್ಲರೂ ಇವತ್ತು ಒಂದಲ್ಲ, ಒಂದು ರೀತಿಯಲ್ಲಿ ಕೃಷಿ ಮೂಲದಿಂದ ಬಂದಿದಾವಂಥಾದ್ದು. ಇವತ್ತು ನಮ್ಮ ಅದ್ಯತೆಯ ವಿಷಯವನ್ನು ಬಿಟ್ಟು ಬೇರೆ ವಿಷಯವನ್ನು ಚರ್ಚೆ ಮಾಡುತ್ತಿದ್ದಾರೆಂಬ ಸಂದೇಶ ರವಾನೆಯಾಗದ ರೀತಿಯಲ್ಲಿ ತಾವು ಒಪ್ಪಿಗೆಯನ್ನು ಕೊಡಬೇಕೆಂಬ ಮಾತನ್ನು ತಮಗೆ ಹೇಳುವುದರ ಜೊತೆಗೆ ಸಭಾ ನಾಯಕರು ಕೂಡ ತಮ್ಮ ಸಹಮತಿಯ ವ್ಯಕ್ತಪಡಿಸುತ್ತಾರೆಂದು ವಿಶ್ವಾಸದಿಂದ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ರಾಮನಗರ): ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಕಾನೂನು ಸಚಿವರು law and order ವಿಷಯಕ್ಕೆ ಸಂಬಂಧಪಟ್ಟಂತೆ ಈ ಸಂದರ್ಭದಲ್ಲಿ ಚರ್ಚೆಗೆ ಅವಕಾಶವಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅದರ ಜೊತೆಗೆ, ಈಗಾಗಲೇ ನ್ಯಾಯಾಂಗ ತನಿಖೆಯ ತೀರ್ಮಾನವನ್ನು ಸರ್ಕಾರ ಈಗಾಗಲೇ ಮಾಡಿರುವುದಿರಂದ ನ್ಯಾಯಾಂಗ ತನಿಖೆ ಆದ ನಂತರ ಈ ವಿಷಯನ್ನು ಚರ್ಚೆ ಮಾಡಬೇಕು ಎನ್ನುವ

ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಇವತ್ತು ತಂದಿರತಕ್ಕಂಥ ನಿಲುವಳಿ ಸೂಚನೆ ಕೇವಲ ಹಾವೇರಿ ಜಿಲ್ಲೆಯಲ್ಲಿ ನಡೆದಿರತಕ್ಕಂಥ ಗೋಲೀಬಾರ್ ವಿಷಯ ಒಂದಕ್ಕೆ ಮಾತ್ರವಲ್ಲ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಜಯಚಂದ್ರರವರು ಹೇಳಿದ ಹಾಗೆ, ಇವತ್ತಿನ ದಿನ ರಾಜ್ಯದಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜ ಕೊರತೆ ಇರುವ ಈ ಸಂದರ್ಭದಲ್ಲಿ ರೈತರು ರಾಜ್ಯದ ಹಲವಾರು ಭಾಗಗಳಲ್ಲಿ ಏನು ಪ್ರತಿಭಟನೆ ನಡೆಸಿದ್ದಾರೆ ಈ ವಿಷಯವಾಗಿ ನಿಲುವಳಿ ಸೂಚನೆ ತಂದಿದ್ದೇವೆ. ಇವತ್ತು ಮುಖ್ಯಮಂತ್ರಿಗಳಾಗಿ ಕುಳಿತಿರುವ ಸನಾನ್ಯ ಯಡಿಯೂರಪ್ಪನವರು ಹಿಂದೆ ವಿರೋಧ ಪಕ್ಷದವರ ಸಾಲಿನಲ್ಲಿ ಕುಳಿತಿದ್ದಂಥ ಸಂದರ್ಭದಲ್ಲಿ ಒಂದು ನಿಲುವಳಿ ಸೂಚನೆಯನ್ನು ತರತಕ್ಕಂಥ ಸಂದರ್ಭದಲ್ಲಿ ಅವರು ಪ್ರಸ್ತಾಪ ಮಾಡಿರತಕ್ಕಂತದ್ದನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ. "ಬೆಳೆ ಹಾನಿಯಿಂದಾಗಿ ರೈತರು ಸತ್ತಿರುವ ಬಗ್ಗೆ" ಎನ್ನುವ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಅವರು ಹಿಂದೆ ಈ ಭಾಗದಲ್ಲಿ ಕುಳಿತಿದ್ದಾಗ ಸಭೆಯ ಮುಂದೆ ನಿಲುವಳಿ ಸೂಚನೆಯನ್ನು ತಂದಾಗ ಏನು ಹೇಳಿದ್ದಾರೆಂದರೆ:

"ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಮಾನ್ಯ ರಾಜ್ಯಪಾಲರು ಭಾಷಣ ಮಾಡುವಂಥ ಕಾಲದಲ್ಲಿ ಆ ಸ್ಥಾನಕ್ಕೆ ಗೌರವ ಕೊಡಬೇಕೆನ್ನುವ ದೃಷ್ಟಿಯಿಂದ, ಅನೇಕ ಪ್ರಮುಖ ವಿಷಯಗಳ ಬಗ್ಗೆ ಮಾತನಾಡಬೇಕೆಂದಿದ್ದರೂ ಕೂಡ ನಾವು ಗೌರವದಿಂದ ಕುಳಿತಿದ್ದೆವು. ನಾವು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಗುಲ್ಬರ್ಗಾ ಜಿಲ್ಲೆ ಅದರಲ್ಲಿಯೂ ವಿಶೇಷವಾಗಿ ಬೀದರ್ ಜಿಲ್ಲೆಯಲ್ಲಿ ರೈತರು ಬೆಳೆದ ತೊಗರಿ ನಾಶವಾಗಿ 10–12 ಜನ ರೈತರು ವಿಷ ತೆಗೆದುಕೊಂಡು ಸತ್ತಿದ್ದಾರೆ.

ಹೀಗೆ ಅವರು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ. ಅದಕ್ಕೆ ಆವತ್ತಿನ ಸಭಾಧ್ಯಕ್ಷರಾಗಿದ್ದಂಥ ಮಾನ್ಯ ರಮೇಶ್ ಕುಮಾರ್ ರವರು "Question hour ಆದ ತಕ್ಷಣ It is being taken up by way of an adjournment motion. They have given notice under Rule 60. The procedure of the House is immediately after the question hour it will be taken up. So, it is for the Government to make the arrangement appropirately. So, now we will take up the question hour." ಎಂದು ಆವತ್ತು Ruling ಕೊಟ್ಟು ನಿಲುವಳಿ ಸೂಚನೆಗೆ ಅವಕಾಶ ಕೊಟ್ಟು ರೈತರ ಬಗ್ಗೆ ಇರತಕ್ಕಂಥಕಾಳಜಿಯನ್ನು ವ್ಯಕ್ತಪಡಿಸಿದ್ದರು. ಇವತ್ತು ತಾವು ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ 23 ದಿವಸಗಳಲ್ಲಿ ಏನು ಬೆಳವಣಿಗೆಗಳಾಗಿವೆ ಆ ವಿಷಯಗಳನ್ನು

ಚರ್ಚೆ ಮಾಡಬೇಕಾಗಿದೆ. ಅವು ಬಹಳ ಮಹತ್ವವಾಗಿರತಕ್ಕಂಥ ವಿಚಾರಗಳು. ಗೃಹ ಸಚಿವರು ಕೆಲವು ಹೇಳಿಕೆಗಳನ್ನು ಕೊಟ್ಟಿದ್ದಾರೆ, ಕೃಷಿ ಸಚಿವರು ಕೆಲವು ರೀತಿಯ ಹೇಳಿಕೆಗಳನ್ನು ಕೊಟ್ಟಿದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳು ಒಂದು ರೀತಿಯ ಹೇಳಿಕೆಯನ್ನು ಕೊಟ್ಟಿದ್ದಾರೆ, ಈ ಎಲ್ಲಾ ವಿಷಯಗಳು ಇವತ್ತು ಚರ್ಚೆಯಾಗಬೇಕಾಗಿವೆ. ಇವತ್ತು ಸಾರ್ವಜನಿಕರಲ್ಲಿ ಒಂದು ರೀತಿಯ ಗೊಂದಲ ಸೃಷ್ಟಿಯಾಗಿರತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ಸರ್ಕಾರದ ಪ್ರಮುಖ ಸ್ಥಾನದಲ್ಲಿರತಕ್ಕಂಥವರು, ಇದರಲ್ಲಿ ರಾಜಕೀಯ ಶಕ್ತಿಗಳ ಪಿತೂರಿ ನಡೆದಿದೆ ಎನ್ನುವ ವಿಷಯವನ್ನೇನು ಪ್ರಸ್ತಾಪ ಮಾಡಿದ್ದಾರೆ, ಸಾರ್ವಜನಿಕರಿಗೆ ಇರತಕ್ಕಂಥ ಗೊಂದಲಗಳನ್ನು ಪರಿಹರಿಸಲು ಅದನ್ನು ಜನತೆಯ ಮುಂದೆ ಇಡಬೇಕಾಗುತ್ತದೆ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ, ಸನ್ಮಾನ್ಯ ಯಡಿಯೂರಪ್ಪನವರು ಹಿಂದೆ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ಕೆಲಸವನ್ನು ಮಾಡಬೇಕಾದರೆ ಆವತ್ತು ರೈತರ ಬಗ್ಗೆ ಏನು ಕಾಳಜಿಯನ್ನು ತೋರಿಸಿದ್ದಾರೆ ಅದೇ ಕಾಳಜಿಯನ್ನು ಇವತ್ತು ತೋರಿಸಬೇಕು. ಹಿಂದೆ ಹಲವಾರು ಸಂದರ್ಭಗಳಲ್ಲಿ ಈ ರೀತಿಯ ಸಂದರ್ಭಗಳು ಬಂದಾಗ ನಿಲುವಳಿ ಸೂಚನೆಗೆ ಅವಕಾಶವನ್ನು ಈ ಸದನದಲ್ಲಿ ಕೊಟ್ಟಿರುವ ಸಂಪ್ರದಾಯವಿದೆ. ಇದೇನೂ ಹೊಸ ಸಂಪ್ರದಾಯವಲ್ಲ. ಹಿಂದೆ ಹಲವಾರು ಸಂದರ್ಭಗಳಲ್ಲಿ ನಿಲುವಳಿ ಸೂಚನೆಗೆ ಅವಕಾಶವನ್ನು ಕೊಟ್ಟಿದ್ದಾರೆ. ಸನ್ಮಾನ್ಯ ಅಧ್ಯಕ್ಷರಲ್ಲಿ ಮನವಿಯನ್ನು ಮಾಡುತ್ತೇನೆ, ದಯವಿಟ್ಟು ಈ ನಿಲುವಳಿ ಸೂಚನೆಗೆ ತಾವು ಅವಕಾಶವನ್ನು ಕೊಡಬೇಕೆನ್ನುವುದು ನನ್ನ ವಿನಂತಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಂಸದೀಯ ವ್ಯವಹರಗಳ ಸಚಿವರು ಈ ನಿಲುವಳಿ ಸೂಚನೆಯನ್ನು ಪೂರ್ಣವಾಗಿ ಬೇಡ ಎಂದು ಹೇಳುತ್ತಿಲ್ಲ ಎನ್ನುವುದು ಅವರ ಮಾತನ್ನು ಕೇಳಿದರೆ ತಿಳಿಯುತ್ತದೆ. ನೀವು ಆಡಳಿತ ಪಕ್ಷದಲ್ಲಿ ಇದ್ದೀರಿ. ನಿಯಮ 69ರ ಅಡಿಯಲಿ ಚರ್ಚೆ ನಡೆಯಲಿ ಎನ್ನತಕ್ಕಂಥಾದ್ದು ನಿಮ್ಮ ವಾದ ಇದೆ. ಒಂದು ಕಾಲದಲ್ಲಿ ನೀವೂ ಕೂಡ ಇಲ್ಲೇ ಇದ್ದಂಥವರು. ಆಗ ಈ ರೀತಿಯ ವಿಷಯಗಳು ಪ್ರಸ್ತಾಪವಾದಾಗ ತಾವು ಏನು ಮಾತನಾಡಿದ್ದೀರಿ ಎನ್ನುವುದನ್ನು ತಾವು ನೆನಪಿಸಿಕೊಳ್ಳಬೇಕಾಗುತ್ತದೆ. ಇವತ್ತು ನಾವು ನಿಲುವಳಿ ಸೂಚನೆಯನ್ನು ಕೊಟ್ಟಿರುವುದು ಬಹಳ ಅರ್ಥಪೂರ್ಣವಾಗಿದೆ. ಇವತ್ತು ರಾಜ್ಯದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಇದೆ ಎನ್ನುವುದನ್ನು ನೀವು ಯೋಚನೆ ಮಾಡಬೇಕು. ಸುಮ್ಮಸುಮ್ಮನೆ adjournment motion ತರುವುದಿಲ್ಲ. ರಾಜ್ಯಪಾಲರ ಭಾಷಣದ ಮೇಲೆ ವಂದನೆ ಸಲ್ಲಿಸತಕ್ಕಂಥದ್ದು ಆಗಲೇಬೇಕು, ನಿಜ. ಅದು ನಿಲ್ಲುವುದಿಲ್ಲ. ಆದರೆ, ಅದು ಇವತ್ತು ಬೇಡ. ಈ ಚರ್ಚೆ ಆದ ಮೇಲೆ ತೆಗೆದುಕೊಳ್ಳೋಣ

VOL-XI-PT-7

ಎನ್ನತಕ್ಕಂಥದ್ದು ನಮ್ಮಗಳ ಅಭಿಪ್ರಾಯವಾಗಿದೆ. ಇದು ರೈತರ ಜೀವನ್ಮರಣದ ಪ್ರಶ್ನೆಯಾಗಿದೆ. ಇದನ್ನು ತಾವು ಯೋಚನೆಮಾಡಬೇಕಾಗಿದೆ. ಇಲ್ಲಿ ಇದೆ ಚರ್ಚೆಯಾದರೆ, ಸಕರ ಕೂಡ ಏನು ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿದೆ ಅದನ್ನು ಪರಿಹಾರ ಮಾಡಲು ಸಾಧ್ಯವಿದೆ ಎನ್ನುವುದನ್ನು ತಾವು ಇವತ್ತು ತಿಳಿದುಕೊಳ್ಳಬೇಕಾಗಿದೆ. ರಾಜ್ಯದಲ್ಲಿ ಇನ್ನೂ ಕೂಡ ಹಾಹಾಕಾರವಿದೆ. ರಸಗೊಬ್ಬರದ ಸಮಸ್ಯೆ ಪರಿಹಾರವಾಗಿಲ್ಲ. ದಿನೇ ದಿನೇ ರೈತರ ಆತ್ಮಹತ್ಯೆಗಳು ಜಾಸ್ತಿಯಗುತ್ತಿವೆ. ಅದು ಹೆಚ್ಚು ಹೆಚ್ಚು ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಅದರಲ್ಲೂ ಒಂದು ಹೆಚ್ಚೆ ಮುಂದೆ ಹೋಗಿ ಇವತ್ತು ಮೊಟ್ಟಮೊದಲ ಬಾರಿಗೆ ಮಹಿಳಾ ರೈತರೊಬ್ಬರೂ ಕೂಡ ಆತ್ಮಹತ್ಯೆ ಮಾಡಿಕೊಂಡಂಥ ಪರಿಸ್ಥಿತಿ ಇದೆ. ಇವುಗಳೆಲ್ಲದರ ಹಿನ್ನೆಲೆಯಲ್ಲಿ ತಾವು ಈಗ ಈ ನಿಲುವಳಿ ಸೂಚನೆಗೆ ಅವಕಾಶವನ್ನು ಕೊಡಬೇಕು ಇದು ಪೂರ್ಣವಾಗಿ ಚರ್ಚೆಯಾದರೆ ಅದರಿಂದ ರಾಜ್ಯದ ರೈತರಿಗೂ ಒಂದು ಪರಿಹಾರ ಸಿಗುತ್ತದೆ. ಅದರ ಬಗ್ಗೆ ತಾವು ಈಗಾಗಲೇ ಸಾಕಷ್ಟು ಹೇಳಿದ್ದೀರಿ. ಇದರಲ್ಲಿ ರಾಜಕೀಯ ದುರುದ್ದೇಶವಿದಯೋ ಅಥವಾ ಕೇಂದ್ರ ಸರ್ಕಾರದಿಂದ ಬಂದಿದೆಯೋ, ಇಲ್ಲವೋ ಎನ್ನುವುದನ್ನು ಮುಕ್ತವಾಗಿ ಚರ್ಚೆ ಮಾಡೋಣ. ನಮಗಿರುವುದು ರೈತರ ಹಿತಾಸಕ್ತಿಯನ್ನು ಕಾಪಾಡಬೇಕು, ರೈತರ ಆತ್ಮಹತ್ಯೆಗಳೇನಾಗುತ್ತಿವೆ, ಅದನ್ನು ಕೊನೆಗಾಣಿಸಬೇಕು ಎನ್ನತಕ್ಕಂಥಾದ್ದು ಆಗಿದೆ. ಈಗಾಗಲೇ ಮುಂಗಾರು ಸಕಾಲಕ್ಕೆ ಬಂದಿದೆ. ಆದಷ್ಟು ಬೇಗ ರೈತರಿಗೆ ಗೊಬ್ಬರ ಮತ್ತು ಬಿತ್ತನೆ ಬೀಜವನ್ನು ಕೊಟ್ಟು ಅವನಿಗೆ ಸಹಾಯ ಮಾಡತಕ್ಕಂಥದ್ದು ನಮ್ಮೆಲ್ಲರ ಗುರಿ ಮತ್ತು ಉದ್ದೇಶವಾಗಿರುವುದರಿಂದ ತಾವು ಇವತ್ತು ಈ ನಿಲುವಳಿ ಸೂಚನೆಗೆ ಅನುಮತಿ ಕೊಟ್ಟರೆ ಇದು ಸುದೀರ್ಘವಾಗಿ, ಸಂಪೂರ್ಣವಾಗಿ ಚರ್ಚೆಯಾಗಿ, ತಮಗೆ ಸಮಸ್ಯೆಯಾಗಿ ದೊಡ್ಡ ತಲೆನೋವಾಗಿರುವ ಇದನ್ನು ಬಗೆಹರಿಸಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ತಾವು ಮನಗಂಡು ಇದರ ಬಗ್ಗೆ ವಿರೋಧ ಮಾಡದೆ, ಈ ನಿಲುವಳಿ ಸೂಚನೆಗೆ ಅವಕಾಶ ಕೊಡಬೇಕೆಂದು ನಾನು ಮಾನ್ಯ ಸಭಾಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಕೆ. ಶಿವಕುಮಾರ್ (ಕನಕಪುರ): ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರ ವಾದ ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಹಿಂದೆ ಯಡಿಯೂರಪ್ಪನವರು ಮತ್ತು ಜಗದೀಶ್ ಶಟ್ಟರ್ ರವರು ಇಲ್ಲಿ ಕುಳಿತಿದ್ದಾಗ, ರೈತರ ವಿಚಾರ ಬಂದಾಗ ಅವರು Chairನಲ್ಲೇ ಕುಳಿತುಕೊಳ್ಳುತ್ತಿರಲಿಲ್ಲ, ಕುಣಿಯುತ್ತಿದ್ದರು. ಎಂಥ ಸಂದರ್ಭದಲ್ಲೇ ಅಗಲಿ, ಎಲ್ಲಾ ಕಾರ್ಯಕಲಾಪಗಳನ್ನು ನಿಲ್ಲಿಸಿ ರೈತರ ಬಗ್ಗೆ ಏನಾದರೂ ಮಾಡಲೇಬೇಕು ಎಂದು

ಮಾಡುತ್ತಿದ್ದರು. ಈ ಸರ್ಕಾರದವರಾದ ತಾವು ರಾಜ್ಯದ ಜನರಿಗೆ ಏನೋ ಒಂದು ಸಂದೇಶವನ್ನು ಕೊಡಲು ಹೊರಟಿರಿ. ಏನೆಂದರೆ, ತಾವು ಹಸಿರು ಶಾಲನ್ನು ಹೊದ್ದುಕೊಂಡು ರೈತರ ಹೆಸರಿನಲ್ಲಿ ಪ್ರಮಾಣ ತೆಗೆದುಕೊಂಡು ರೈತರ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ ಎಂದು ಹೇಳಲು ಹೊರಟಿರಿ. ಬಹಳ ಸಂತೋಷ. ಆದರೆ, ಆವತ್ತಿನಿಂದ ಇವತ್ತಿನವರೆಗೂ ರೈತರ ಸರಣಿ ಆತ್ಮಹತ್ಯೆಗಳಾಗುತ್ತಿವೆ. ಇವತ್ತು ತಾವೇನಾದರೂ ವಿರೋಧ ಪಕ್ಷದಲಿ ಇದ್ದಿದ್ದರೆ ಈ assembly ಯಲ್ಲಿ ಇಷ್ಟುಹೊತ್ತಿಗೆ ಏನೇನು ಆಗಿಗೋಗುತ್ತಿತ್ತೋ, ಏನೇನು ಕೂಗಾಡುತ್ತಿದ್ದಿರೋ, ಮೇಲುಗಡೆ ಎಷ್ಟು ಶೀಟ್‌ಗಳು ಅಲ್ಲಾಡುತ್ತಿದ್ದವೋ? ಆದರೆ ನೀವು ಈಗ ಹೀಗೇಕೆ ಮಾಡುತ್ತಿದ್ದೀರೆಂದು ನನಗಂತೂ ಅರ್ಥವಾಗುತ್ತಿಲ್ಲ. ನಾವು ಇಲ್ಲಿ ಬೇಕಾದಷ್ಟು ವಿಚಾರಗಳನ್ನು ಚರ್ಚೆ ಮಾಡಿದ್ದೇವೆ. ನಮ್ಮ ನಾಯಕರು ಹೇಳಿದ ಹಾಗೆ ಇದು ರಾಜ್ಯದ ಜನತೆಗೆ ಅತಿ ಮಹತ್ವವಾದಂಥ ವಿಚಾರ, ನಾವೆಲ್ಲ ಬಹಳ ನೋವಿನಲ್ಲಿ ಮುಳುಗಿದ್ದೇವೆ. ಏಕೆಂದರೆ ರೈತರಿಗೊಂದು ಸಂಬಳವಿಲ್ಲ. ರೈತರಿಗೊಂದು ಪ್ರಮೋಷನ್ ಇಲ್ಲ, ರೈತರಿಗೊಂದು ಪೆನ್‌ಷನ್ ಇಲ್ಲ, ರೈತರಿಗೊಂದು ರಿಟೈರ್‌ಮೆಂಟ್ ಇಲ್ಲ. ಈ ರೀತಿನೋವಿನಲಿರುವಂಥ ರೈತರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತಿಲ್ಲ. ಅಷ್ಟೇ ಅಲ್ಲ, ರೈತನ ಬಗ್ಗೆ ಚರ್ಚೆ ಮಾಡುವುದಕ್ಕೆ ಟೈಂ ಸಹ ಇಲ್ಲ. ಯಾವುದಾದರೂ ಒಬ್ಬ ಅಧಿಕಾರಿಯದೋ ಅಥವಾ ಮತ್ತೊಂದೋ ವಿಷಯ ಬಂದಾಗ ನಾವು ಎಲ್ಲವನ್ನೂ ಬಿಟ್ಟು ಅದನ್ನು ಮೊದಲು ತೆಗೆದುಕೊಳ್ಳುತ್ತಿದಂಥ ಅನೇಕ ಉದಾಹರಣೆಗಳಿವೆ. ಆದ್ದರಿಂದ ತಾವು ಇವತ್ತು ದೊಡ್ಡ ಮನಸ್ಸು ಮಾಡಬೇಕು. ಇದಕ್ಕೆ ಹೃದಯ ಶ್ರೀಮಂತಿಕೆ ಇರಬೇಕಾಗುತ್ತದೆ. ಸ್ವಾಮಿ ವಿವೇಕಾನಂದರು ಒಂದು ಕಡೆ ಒಂದು ಮಾತನ್ನು ಹೇಳುತ್ತಾರೆ "Be bold hearted when you are defeated. Be large hearted when you are victorious" ಎಂದು ಹೇಳಿದ್ದಾರೆ. ಇವತ್ತು ಮುಖ್ಯಮಂತ್ರಿಗಳು ಗೆದ್ದು ಬಂದು ಒಂದು ದೊಡ್ಡ ಸಂತೋಷವನ್ನು ಆಚರಣೆ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಈ ರಾಜ್ಯದ ರೈತರ ಬಗ್ಗೆ ಹೃದಯ ಶ್ರೀಮಂತಿಕೆಯೂ ಇರಬೇಕು. ಅದನ್ನು ಬಿಟ್ಟು ಕಾನೂನನ್ನು ಹುಡುಕಿಕೊಂಡು ಬಂದು, ಯಾವುದೋ ಒಂದು ಕಾನೂನು ಹೀಗಿದೆ, ಗೋಲೀಬಾರ್ ಘಟನೆಗೆ ಸಂಬಂಧಿಸಿದಂತೆ ನಾವು ಈಗಾಗಲೇ ನ್ಯಾಯಾಂಗ ತನಿಖೆಗೆ ಕೊಟ್ಟುಬಿಟಿದ್ದೇವೆ ಎಂದು ಹೇಳಿದರೆ ಆಗುವುದಿಲ್ಲ. ಅಂಥ ಸಾವಿರ ಕಾನೂನುಗಳು ಇರಬಹುದು. ಆದರೆ, ತಾವು ರೈತನ ಹೆಸರಿನಲ್ಲಿ oath ತೆಗೆದುಕೊಂಡಿದ್ದೀರಿ, ಅವನ ಹೆಸರಿನಲ್ಲಿ ಸರ್ಕಾರವನ್ನು ಮಾಡುತ್ತಿದ್ದೀರಿ. ಆದ್ದರಿಂದ ತಾವು ಇದರ ಬಗ್ಗೆ ಹೆಚ್ಚು ಚರ್ಚೆಯನ್ನು ಮಾಡದೆ, ಈ ನಿಲುವಳಿ ಸೂಚನೆಗೆ ಅವಕಾಶವನ್ನು

ಕೊಡುವ ಮೂಲಕ ಈ ರಾಜ್ಯದ ಜನರಿಗೆ ಒಂದು ಸಂದೇಶ ಕೊಡಿ. ಈ ರಾಜ್ಯದ ವಿಧಾನಸಭೆ ಪ್ರಾರಂಭದಲ್ಲೇ ಕುಳಿತುಕೊಂಡಾಗ ರೈತರ ಬಗ್ಗೆ ಚರ್ಚೆಯಾಯಿತು ಎನ್ನುವ ಸಂದೇಶ ಹೋಗಲಿ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ emergency ಏನಲ್ಲ. ಆವತ್ತು ನೀವು Governor ರವರನ್ನು ಇಲ್ಲಿ ಕರೆಸಿ ಅವರಿಂದ ಭಾಷಣ ಮಾಡಿಸುವಂಥ ಸಂದರ್ಭ ಇರಲಿಲ್ಲ. ಆವತ್ತು ನೀವು ಅವರನ್ನು ಅಷ್ಟು ತರಾತುರಿಯಲ್ಲಿ ಇಲ್ಲಿಗೆ ಕರೆದುಕೊಂಡು ಬಂದು Governor speech ಮಾಡಿಸಿದ್ದರಿಂದ ನಿಮ್ಮ ego problem sort out ಆಯಿತೇ ಹೊರತು ಆ Governor speech ನಲ್ಲಿ ಯಾವುದೇ ರೀತಿಯ ಸಂದೇಶವಿಲ್ಲ. ಇಡೀ History ಯಲ್ಲೇ, that is one of the worst Governor's speech any new Government has placed. ಅದರ ಬಗ್ಗೆ ನಾವು ಬೇರೆ ಸಂದರ್ಭದಲ್ಲಿ ಚರ್ಚೆ ಮಾಡೋಣ. ಮಾನ್ಯ ಸಭಾಧ್ಯಕ್ಷರೆ, ತಾವು ಈಗ ದಯವಿಟ್ಟು ಸರ್ಕಾರ ಹೇಳಿದ ಹಾಗೆ ಕೇಳುವುದಕ್ಕೆ ಹೋಗಬೇಡಿ. ತಮ್ಮ ಕೈಯಲ್ಲಿ ದಂಡ ಇದೆ, ಪೆನ್ ಇದೆ, ಮಾತು ಇದೆ. ಈ ಮೂರನ್ನೂ ಉಪಯೋಗಿಸಿಕೊಂಡು ತಾವು ಯಾವತ್ತೂ ಸಹ ವಿರೋಧ ಪಕ್ಷದವರ ಪರವಾಗಿರಬೇಕು. Speaker ಆದರವರು ವಿರೋಧ ಪಕ್ಷದವರ ಪರವಾಗಿ ನಿಂತಾಗ ಮಾತ್ರ ಆ Speaker ಸ್ಥಾನಕ್ಕೆ ಗೌರವ. ನಾವು ಇನ್ನೂ ಅನೇಕ ವಿಚಾರಗಳನ್ನು ಚರ್ಚೆ ಮಾಡುವವರಿದ್ದೇವೆ. ದಯವಿಟ್ಟು ತಾವು ನಮ್ಮ ಕಡೆ ಒಲವು ತೋರಿಸಿ adjournment motion ಗೆ ಅವಕಾಶವನ್ನು ಮಾಡಿಕೊಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ (ಇಂಧನ ಇಲಾಖಾ ಸಚಿವರು): ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು, ಕುಮಾರಸ್ವಾಮಿಯವರು ಮತ್ತು ಕಾಂಗ್ರೆಸ್ ಪಕ್ಷದ ಇತರ ಎಲ್ಲಾ ನಾಯಕರು ಹ#ಳುತ್ತಿರುವಂಥ ಅಂಶದ ಬಗ್ಗೆ, ವಿಶೇಷವಾಗಿ ರೈತರ ಸಾವಿನ ಬಗ್ಗೆ, ಲಾಟಿ ಚಾರ್ಜ್ ಆಗಿರುವ ಬಗ್ಗೆ, ಗೋಲೀಬಾರ್ ಆಗಿರುವ ಬಗ್ಗೆ ಖಂಡಿವಾಗಿ ಚರ್ಚೆ ಆಗಲೇಬೇಕು. ಇವತ್ತು ರಾಜ್ಯದಲ್ಲಿ ರಸಗೊಬ್ಬರ ಸಮಸ್ಯೆ ಇದ್ದು, ಇಡೀ ಕರ್ನಾಟಕ ರಾಜ್ಯದಲ್ಲಿ ರೈತರು ಏನು ಒದ್ದಾಡುತ್ತಿದ್ದಾರೆ, ಇದರ ಬಗ್ಗೆಯೂ ಚರ್ಚೆ ಆಗಬೇಕು. ಆದರೆ, ಇಲ್ಲಿ ಬಂದಿರುವ ಪ್ರಶ್ನೆಯೆಂದರೆ ಇದು ನಿಯಮ 60ರ ಅಡಿಯಲಿ ಆಗಬೇಕೋ ಅಥವಾ ನಿಯಮ 69ರ ಅಡಿಯಲ್ಲಿ ಆಗಬೇಕೋ ಎನ್ನುವುದನ್ನು ಬಿಟ್ಟರೆ ಬೇರೆ ಇನ್ನೇನೂ ಇಲ್ಲ. ಇವತ್ತು ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನೇನು ಮಂಡನೆ ಮಾಡಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡುವಂಥ ಸಂದರ್ಭದಲ್ಲೂ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಯಾವ ತೊಂದರೆಯೂ ಇಲ್ಲ. ಅಥವಾ ಇದನ್ನು ನಿಯಮ 69ಕ್ಕೆ convert ಮಾಡಿ ಅದರ

ಮುಖಾಂತರ ಚರ್ಚೆ ಮಾಡಲೂ ಸಹ ಯಾವ ಸಮಸ್ಯೆಯೂ ಇಲ್ಲ. ಇಲ್ಲಿ ಕಳಕಳಿ ಖಂಡಿತ ಇದೆ. ಆದರೆ, rules ಇವೆ. ವಿರೋಧ ಪಕ್ಷದಲ್ಲಿ ನಾವು ಇದ್ದಂಥ ಸಂದರ್ಭದಲ್ಲಿ ನೀವೇ ಹೇಳಿಕೊಂಡು ಬಂದಿದ್ದೀರಿ, Ruling ಇದೆ ಎಂದು ಮೇಲಿಂದ ಮೇಲೆ ಪುಸ್ತಕಗಳನ್ನು ತೆಗೆದು ತೋರಿಸುತ್ತಿದ್ದಂಥವರು ನೀವೇ, ನಾವೇನಲ್ಲ. ನಮಗೆ ರೈತರ ಬಗ್ಗೆ ಕಳಕಳಿ ಇದ್ದಂಥ ಸಂದರ್ಭಗಳು ಬಂದಾಗ ಪುಸ್ತಕಗಳನ್ನು ತೆಗೆದು ಆ ತುದಿಯಿಂದ ಈ ತುದಿಯವರೆಗೆ ಹೇಳುತ್ತಿದ್ದೀರಿ? ಏನಃ ನಿಮಗೆ ಕಳಕಳಿ ಇರಲಿಲ್ಲ ಆದರೆ, ಈಗ ಮುಖ್ಯಮಂತ್ರಿಗಳು ಹಸಿರು ಶಾಲು ಹಾಕಿಕೊಂಡಿದ್ದರ ಬಗ್ಗೆಯೇ ಸಾಕಷ್ಟು ಟೀಕೆಗಳು ನಡೆಯುತ್ತಿವೆ.

ಶ್ರೀ ಡಿ. ಕೆ. ಶಿವಕುಮಾರ್: ಅದು ಟೀಕೆಯಲ್ಲಿ We are proud of it.

ಶ್ರೀ ಡಿ. ಕೆ. ಶಿವಕುಮಾರ್: ನಾವು ಟೀಕೆ ಮಾಡುತ್ತಿಲ್ಲ. ನಮಗೆ, ಆ ಪ್ರಾಮಾಣಿಕಗೆ ಏನಿತ್ತು ಆ ಪ್ರಾಮಾಣಿಕತೆ ಜನರಿಗೆ ಮುಟ್ಟಬೇಕೆಂದು ಹೇಳಿ. ಏಕೆಂದರೆ, ಗೊಬ್ಬರ ಕೇಳಿದವರಿಗೆ ಗುಂಡು ಹಾಕುವ ಬಗ್ಗೆ ಅಲ್ಲ ನಾವು ಚಿಂತೆ ಮಾಡುತ್ತಿರುವುದು. ಗೊಬ್ಬರ ಕೇಳಿದ ತಕ್ಷಣ ನೀವು ಗುಂಡು ಹಾಕಿದರಲ್ಲಾ, ಅದನ್ನೂ ಚರ್ಚೆ ಮಾಡಬೇಡಿ ಎಂದು ಹೇಳಿದರೆ ಹೇಗೆ ಸ್ವಾಮಿ.

ಶ್ರೀ ಕೆ. ಎಸ್. ಈಶ್ವರಪ್ಪ: ಬಹಳ ಸತ್ಯ. ಕೆಸರಿ ಶಾಲು ತೆಗೆದು ಹಸಿರು ಏಕೆ ಹಾಕಿದಿರಿ ಎಂದು ಹೇಳುತ್ತಿದ್ದಾರೆ. ಕೇಸರಿ ಹೃದಯದಲ್ಲಿದೆ. ಹಸಿರು ರಾಜ್ಯದ ರೈತರಿಗೆ ನಾವು ನಿಮ್ಮ ಜೊತೆಗಿದ್ದೇವೆ ಎಂದು ತೋರಿಸುವುದಕ್ಕೆ ಇದೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಈಶ್ವರಪ್ಪನವರು ಕರೆಕ್ಟಾಗಿ ಹೇಳಿದರು. ಹೃದಯದಲ್ಲಿ ಕೇಸರಿ ಇದೆ, ಮೇಲೆ ಹಸಿರು ಹಾಕಿಕೊಂಡಿದ್ದೇವೆಂದು ತೋರಿಸುವುದಕ್ಕೆ. ಆಂದರೆ, ಈಶ್ವರಪ್ಪನವರು ತಪ್ಪು ತಿಳಿದುಕೊಳ್ಳಬಾರದು. ಅವರು ಜಗಳಕ್ಕೆ ಬರುತ್ತಾರೆಂದು ನಮಗೆ ಗೊತ್ತು. ಗೋಡ್ಸೆ ಮಹಾತ್ಮಗಾಂಧೀಜಿಗೆ ಗುಂಡುಹೊಡೆದ. ಇವರು ಬಂದು ಯಾರಿಗೆ ಗುಂಡು ಹಾಕಿದರೆಂದರೆ ರೈತರಿಗೆ ಗುಂಡು ಹಾಕಿದರು.

(ಗೊಂದಲ)

ಅಧ್ಯಕ್ಷರು: ಶ್ರೀನಿವಾಸ್ ರವರೆ, please, ಕುಳಿತುಕೊಳ್ಳಿ. ಶ್ರೀ ಈಶ್ವರಪ್ಪನವರು ಮಾತನಾಡುತ್ತಾರೆ. ದಯಮಾಡಿ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿ ನಗರ): ನಮಗೆ ಗೊತ್ತಿದೆ, ಹಿಂದೆ 120 ಜನರಿಗೆ ಗುಂಡು ಹಾಕಿಸಿದವರು, ಯಾರು ಎಂದು ಕರ್ನಾಟಕದ ಜನತೆಗೆ ಗೊತ್ತಿದೆ.

ಶ್ರೀ ಕೆ. ಎಸ್. ಈಶ್ವರಪ್ಪ: ವಿರೋಧ ಪಕ್ಷದ ನಾಯಕರೆ, ದಯವಿಟ್ಟು ಕೇಳಿ. ಕೇಸರಿ ಎಂದ ತಕ್ಷಣ ತ್ಯಾಗ ಬಲಿದಾನ ಸಂಕೇತ. ಈ ತ್ಯಾಗ ಬಲಿದಾನದ ಸಂಕೇತವನ್ನು ಹೃದಯದಲ್ಲಿಟ್ಟುಕೊಂಡು ಈ ರಾಜ್ಯದ ರೈತರಿಗೆ ನಿಮ್ಮ ಜೊತೆಯಲ್ಲಿ ನಾವಿದ್ದೇವೆ. ಏನೂ ಚಿಂತೆ ಮಾಡಬೇಡಿ ಎಂದು ಬಹಿರಂಗವಾಗಿ ಬೆಂಬಲ ಕೊಡುವುದಕ್ಕೋಸ್ಕರ ಇಲ್ಲಿ ಹಾಕಿಕೊಂಡು ಬಂದಿರುವುದು. ಇದಕ್ಕೆ ನೀವು ಬೇರೆ ಬೇರೆ ಅರ್ಥಗಳನ್ನು ಕೊಟ್ಟುಕೊಳ್ಳುತ್ತಾ ಹೋದರೆ ಇನ್ನೂ ಹಾಳಾಗಿ ಹೋಗುತ್ತೀರಾ. ದಯವಿಟ್ಟು ಬೇಡ. ದಯವಿಟ್ಟು ನಾನು ಹೇಳುವುದನ್ನು ಕೇಳಿ. (ಗೊಂದಲ) ಈಗ ಹಾಳಾಗಿ ಹೋಗಿರುವುದು ಸಾಲದಾ, ಇನ್ನೂ ಹಾಳಾಗಿ ಹೋಗುತ್ತೀರೆಂದು ಹೇಳಿದೆ. ಬಿಡಿ (ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಕೇಸರಿ ಬಣ್ಣ ಒಳಗೆ ಹಕಿದ ತಕ್ಷಣ ಅದನ್ನು ತ್ಯಾಗ ಬಲಿದಾನದ ಸಂಕೇತ ಎಂದು ನೀವು ಹೇಳಿಕೊಳ್ಳುತ್ತಿರುವಂಥದ್ದು. (ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ: ಸ್ವಾಮಿ, ನಿಮ್ಮ ಭಾವನೆ ಏನಿದೆ ಅದನ್ನು ನೀವು ಹೇಳುತ್ತೀರಿ. ನನ್ನ ಭಾವನೆಯನ್ನು ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ...ಸ್ವಾತಂತ್ರ ಪೂರ್ವದ ಯಾವ ತ್ಯಾಗ ಮಾಡಿದ್ದೀರಿ? ಏನು ತ್ಯಾಗ ಮಾಡಿದಿರಿ ನೀವು? (ಗೊಂದಲ) ಒಳಗೆ ಕೇಸರಿ, ಮೇಲ್ಗಡೆ ಹಸಿರು ಎಂದು ಹೇಳುತ್ತೀರಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಜಯಚಂದ್ರರವರೇ, ನೀವು ಏನು ಹೇಳುವುದಿದ್ದರೂ ನನಗೆ ಹೇಳಿ. ಅವರಿಗೆ ಉತ್ತರ ಕೊಡಬೇಡಿ. ನನಗೆ ಹೇಳಿ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ವಿರೋಧ ಪಕ್ಷದಲ್ಲಿ ಕುಳಿತಾಗ ನೀವು ಕೇಸರಿ ಇಟ್ಟುಕೊಳ್ಳಬಹುದಾಗಿತ್ತು. ಈಗ ಆಡಳಿತ ಪಕ್ಷಕ್ಕೆ ಹೋಗಿದ್ದೀರಿ. ನೀವೇನಾದರೂ ಮಾಡಿಕೊಳ್ಳಿ.

ಆದರೆ ಒಳಗೆ ಹಸಿರು ಬಣ್ಣ ಇಟ್ಟುಕೊಳ್ಳಿ.

ಶ್ರೀ ಕೆ. ಎಸ್. ಈಶ್ವರಪ್ಪ: ರೈತರ ಬಗ್ಗೆ ತೋರಿಸುತ್ತಿರುವಂಥ ಕಳಕಳಿಯನ್ನು ಇಡೀ ಕರ್ನಾಟಕ ರಾಜ್ಯದ ಜನ ಮೆಚ್ಚಿ ನಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ಇನ್ನೇನೂ ಬೇರೆ ಅಲ್ಲ. ಕಳೆದ ಅನೇಕ ವರ್ಷಗಳಿಂದ ರೈತರಿಗೆ ದ್ರೋಹ ಮಾಡಿದಕ್ಕೋಸ್ಕರ ನೀವು ಅಲ್ಲಿ ಬಂದು ಕುಳಿತ್ತಿದ್ದೀರಿ. ಹೀಗಾಗಿ ಇಲ್ಲಿ ಪ್ರಶ್ನೆ ಬಂದಿರುವುದು ರೂಲ್ 60ರ ಕೆಳಗೆ ತೆಗೆದುಕೊಳ್ಳಬೇಕೋ ಅಥವಾ ನಿಯಮ 69ರ ಕೆಳಗಡೆ ತೆಗೆದುಕೊಳ್ಳಬೇಕೋ ಎಂಬುದಾಗಿದೆ. ಇವತ್ತು ಏನಾಗುತ್ತಿದೆ, ಇಡೀ ಕರ್ನಾಟಕ ರಾಜ್ಯದಲ್ಲಿ ರಸಗೊಬ್ಬರದ ಬಗ್ಗೆ ಆಗುತ್ತಿರುವ ಸಮಸ್ಯೆ ಬಗ್ಗೆ ಖಂಡಿತಾ ಚರ್ಚೆ ಆಗಬೇಕು. ಇದರಲ್ಲಿ ನಮ್ಮ ಸರ್ಕಾರದ ತಪ್ಪೋ, ಕೇಂದ್ರ ಸರ್ಕಾರದ ತಪ್ಪೋ ರಾಜ್ಯಪಾಲರು ಆಡಳಿತ ನಡೆಸಿದಂಥ ಸಂದರ್ಭದಲ್ಲಿ ಆದಂಥ ತಪ್ಪೋ ಎಂಬುದರ ಬಗ್ಗೆ ಚರ್ಚೆ ಆಗಬೇಕು. ಯಾವಾಗ ಚರ್ಚೆ ಆಗಬೇಕು? ಇದರ ಬಗ್ಗೆ ರೂಲಿಂಗ್‌ಗಳನ್ನು ಕೊಟ್ಟಿದ್ದೀರಿ. ಗೋಲಿಬಾರ್ ಮಾಡಿದಾಗ, ಲಾಟಿಚಾರ್ಜ್ ಮಾಡಿದಂಥ ಸಂದರ್ಭದಲ್ಲಿ ಇದಕ್ಕೆ ಅವಕಾಶವಿಲ್ಲವೆಂದು ರೂಲಿಂಗ್ ಬಂದಿದ್ದಕ್ಕೋಸ್ಕರವೇ ನಮ್ಮದೇನೂ ಅಭ್ಯಂತರವಿಲ್ಲ. ಅದಕ್ಕೋಸ್ಕರವೇ ಈ ವಿಚಾರವನ್ನು ಮಾನ್ಯ ಸಭಾಧ್ಯಕ್ಷರಿಗೆ ಬಿಡುತ್ತಿದ್ದೇನೆ. ನಿಮ್ಮ ಅಭಿಪ್ರಾಯವನ್ನೂ ಕೇಳಿ, ನಮ್ಮ ಅಭಿಪ್ರಾಯವನ್ನು ಕೇಳಿ, ಅವರು ಏನು ತೀರ್ಮಾನ ಮಾಡುತ್ತಾರೋ ಅದಕ್ಕೆ ನಾವು ಬದ್ಧ ಅವರ ತೀರ್ಮಾನದ ವಿರುದ್ಧ ನಾವು ಹೋಗುವುದಕ್ಕೆ ಸಾಧ್ಯವೇ ಇಲ್ಲ. ಏಕೆಂದರೆ, ಕರ್ನಾಟಕ ರಾಜ್ಯದಲ್ಲಿ ಎಂದೂ ಕಾಣದಂಥ ರಸಗೊಬ್ಬರ ಸಮಸ್ಯೆ ಇದೆ ಯಾರು ಇದಕ್ಕೆ ಮೂಲ ಕಾರಣ. ನಿನ್ನೆ ಹುಟ್ಟಿಬಂದ ಮಗು ಇದಕ್ಕೆ ಕಾರಣವೇ? ನಾನು ಅದಕ್ಕೋಸ್ಕರ ಹೇಳುತ್ತಿದ್ದೇನೆ. (ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಮ್ಮ ತಪ್ಪೋ ಇಮ್ಮ ತಪ್ಪೋ ಕೇಂದ್ರ ಸರ್ಕಾರದ ತಪ್ಪೋ ಎಂದು ಹೇಳಿದಿರಿ. ಕೇಂದ್ರ ಸರ್ಕಾರದ ತಪ್ಪು ಇದ್ದರೆ ಮಾನ್ಯ ಅನಂತ ಕುಮಾರ್ ರವರು ಅಲ್ಲಿಗೆ ಹೋಗಿದ್ದಾರೆ. ಅವರು ಅಲ್ಲಿ ಕೇಳುತ್ತಾರೆ. ನಾವಿಲ್ಲಿ ನಿಮ್ಮನ್ನು ಕೇಳುವುದಕ್ಕೆ ಬಂದಿದ್ದೇವೆ. ನೀವೇನು ಉತ್ತರ ಹೇಳುತ್ತೀರೋ ಹೇಳಿ.

ಶ್ರೀ ಕೆ. ಎಸ್. ಈಶ್ವರಪ್ಪ: ಅನಂತ ಕುಮಾರ್ ಹೋಗಿದ್ದಾರೆ, ಅವರು ಕೇಳಲಿ. ಆದರೆ ನಮ್ಮದೂ ನಿಮ್ಮದೂ ಜವಾಬ್ದಾರಿ ಇದೆಯಲ್ಲಾ. ನಾವು ಅದಕ್ಕೋಸ್ಕರವೇ ರಸಗೊಬ್ಬರದ ಸಮಸ್ಯೆ ಬರುತ್ತಿದ್ದ ಹಾಗೆಯೇ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ತಕ್ಷಣವೇ ಯಾವ ರೀತಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದರು, ರಸಗೊಬ್ಬರದ ಸಮಸ್ಯೆ ಬರುತ್ತಿದ್ದ

ಹಾಗೆಯೇ ಯಾವ ರೀತಿ ನಮ್ಮ ಸಚಿವ ಸಂಪುಟದ ಸದಸ್ಯರನ್ನು ಪ್ರಧಾನ ಮಂತ್ರಿಗಳ ಹತ್ತಿರ ನಮ್ಮ ನಾಯಕರು ಕರೆದುಕೊಂಡು ಹೋದರು, ಇದರ ಬಗ್ಗೆ ಎಲ್ಲ ಚರ್ಚೆ ಮಾಡೋಣ. ಇಲ್ಲಿ ಪ್ರಶ್ನೆ ಬಂದಿರುವುದು, ನಿಮಗೂ ನಮಗೂ ಯಾವುದರಲ್ಲೂ ತಕರಾರಿಲ್ಲ. ನಿಯಮ 60ರ ಮುಖಾಂತರವೋ ಅಥವಾ ನಿಯಮ 69ರ ಮುಖಾಂತರವೋ ಎನ್ನುವ ಪ್ರಶ್ನೆ ಮಾತ್ರವಿದೆ ಇದನ್ನು ಮಾನ್ಯ ಸಭಾಧ್ಯಕ್ಷರಾದ ತಮಗೇ ಬಿಡುತ್ತೇವೆ. ಹಿಂದೆ ಕೊಟ್ಟಂಥ ರೂಲಿಂಗ್‌ಗಳನ್ನು ಗಮನಿಸಿ ಅದನ್ನು ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನನ್ನ ಪ್ರಾರ್ಥನೆಯಷ್ಟೇ, ಬೇರೆ ಇನ್ನೇನೂ ಇಲ್ಲ.

ಶ್ರೀ ಬಿ. ಸಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಹಾವೇರಿಯಲ್ಲೂ ಕೂಡ ಗೋಲಿಬಾರ್ ಆಗಿದೆ. ನಮಗೂ ಕೂಡ ಅವಕಾಶ ಕೊಡಿ.

ಅಧ್ಯಕ್ಷರು: ಚರ್ಚೆಗೆ ಅವಕಾಶ ಕೊಟ್ಟಾಗ ಹೇಳಬಹುದು ಬಿ. ಸಿ. ಪಾಟೀಲರೆ, ಕುಳಿತುಕೊಳ್ಳಿ ನಿಮಗೂ ಕೂಡ ಅವಕಾಶ ಕೊಡುತ್ತೇವೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಈಶ್ವರಪ್ಪನವರು ಹಿರಿಯರಿದ್ದಾರೆ. ಚರ್ಚೆಗೆ ಅವಕಾಶ ಮಾಡಿಕೊಡೋಣವೆಂದು ಅವರು ಹೇಳಿದರು. ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡಬೇಕೋ, ಇಯಮ 69ರ ಅಡಿಯಲ್ಲಿ ಚರ್ಚೆ ಮಾಡಬೇಕೋ? ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ಇನ್ನೊಂದು ಕಡೆ, ಕಾನೂನು ಸಚಿವರು ಏನು ಹೇಳುತ್ತಿದ್ದಾರೆಂದರೆ, ರಾಜ್ಯಪಾಲರ ಭಾಷಣಕ್ಕೆ ವಮದನೆ ಸಲ್ಲಿಸುವ ನಿರ್ಣಯದ ಮೇಲೆ ಮಾತನಾಡುವಾಗ ಚರ್ಚೆ ಮಾಡಲಿ ಎಂದು ಅವರು ಸಲಹೆ ಕೊಡುತ್ತಿದ್ದಾರೆ. ಆದರೆ, ಇದರಲ್ಲಿ ಒಂದು ಅಂಶ ಅಡಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕಳೆದ ತಿಂಗಳ 30ನೇ ತಾರೀಖು ಪ್ರಮಾಣ ವಚನ ತೆಗೆದುಕೊಂಡ ಮೇಲೆ ಮೊದಲನೆಯದಾಗಿ ದಾವಣಗೆರೆ ಇರಬಹುದು, ಧಾರವಾಡದಲ್ಲಿರಬಹುದು ತಮ್ಮ ಜಿಲ್ಲೆಯಲ್ಲೇ ಬಸ್ಸು ಸುಟ್ಟು ಹಾಕಿದ್ದು, ಗಲಾಟೆಯಾಗಿದ್ದೆಲ್ಲ ಗೊಬ್ಬರದ ವಿಚಾರವಾಗಿ ಎಂಬುದು ತಮಗೆ ಗೊತ್ತಿರುವ ವಿಚಾರ ಸಭಾಧ್ಯಕ್ಷರೆ. ಅದಾದಮೇಲೆ, ಸನ್ಮಾನ್ಯ ಮುಖ್ಯಮಂತ್ರಿಗಳೇ Hindu ಪತ್ರಿಕೆಗೆ Interview ಕೊಡುತ್ತಾರೆ. ಅದೇನೆಂದರೆ, ಈ ರಾಜ್ಯದಲ್ಲಿ ಗೊಬ್ಬರಕ್ಕೆ ಯಾವುದೇ ತೊಂದರೆ ಇಲ್ಲವೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ರೇವಣ್ಣನವರೇ, ನಾನು ಹೇಲುವಂಥದ್ದೇನೆಂದರೆ ಚರ್ಚೆಗೆ ಅವಕಾಶ ಕೊಟ್ಟಾಗ ವಿವರವಾಗಿ ನೀವು ಏನೇನು ವಿಷಯವನ್ನು ಹೇಳಬೇಕೋ ಅದನ್ನೆಲ್ಲ ಮಾತನಾಡಿ. ನಾನು ಮಾತನಾಡಲಿಕ್ಕೆ ಬೇಡವೆಂದು ಹೇಳುವುದಿಲ್ಲ. ಚರ್ಚೆಗೆ ಅವಕಾಶ ಕೊಟ್ಟಾಗ ಎಲ್ಲ detail ಆಗಿ ಮಾತನಾಡಿ.

ಶ್ರೀ ಹೆಚ್. ಡಿ. ರೇವಣ್ಣ: ಆಯಿತು, ನಾನು ವಿವರಣೆಗೆ ಹೊಗುವುದಿಲ್ಲ. ನಿಲುವಳಿ ಸೂಚನೆ ಬಗ್ಗೆ ಎರಡೇ ನಿಮಿಷದಲ್ಲಿ ಹೇಳುತ್ತೇನೆ. ಇದರಲ್ಲಿ ಗೋಲಿಬಾರ್ ಒಂದೇ ಅಡಗಿಲ್ಲ. ಕೇಂದ್ರ ಸರ್ಕಾರದಿಂದ ಬಂದಂಥ ಗೊಬ್ಬರ ಯಾವ ರೀತಿ ವಿತರಣೆಯಾಗುತ್ತಿದೆ ಎನ್ನುವುದೂ ಚರ್ಚೆಯಾಗಬೇಕಾಗುತ್ತದೆ. ಯಾವ್ಯಾವ ಜಿಲ್ಲೆಯಲ್ಲಿ ಹೇಗೆ ವಿತರಣೆಯಾಗಿದೆ, ಎಷ್ಟೆಷ್ಟು ವಿತರಣೆಯಾಗಿದೆ, ಅದರಲ್ಲೂ ಕಾಳಸಂತೆಯಿಂದಾಗಿದೆಯೋ? ಇದರ ಹಿಂದೆ ಯಾರ ಕೈವಾಡವಿದೆಯೋ? ಏಕೆಂದರೆ, ಬೆಳಿಗ್ಗೆ ಎದ್ದರೆ ರಾಜಕೀಯ ಬಣ್ಣದಿಂದ ಇದರಲ್ಲಿ ಈ ತರಹ ಆಗುತ್ತಿದೆ ಎಂದು ವಿರೋಧ ಪಕ್ಷದವರ ಮೇಲೆ ಹೇಳಿರುವುದರಿಂದ ಇವತ್ತು ಇದರ ನಿಜವಾದ ಬಣ್ಣ ಬಯಲಿಗೆ ಬರಬೇಕಾಗುತ್ತದೆ. ಏಕೆಂದರೆ, ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಕೇಂದ್ರ ಸರ್ಕಾರದವರು ತಾರತಮ್ಯ ಮಾಡುತ್ತಿದ್ದಾರೆಂದು ಹೇಳಿದ್ದಾರೆ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಚರ್ಚೆ ಮಾಡುವಾಗ ನಾನು ನಿಮಗೆ ಅವಕಾಶ ಕೊಡುತ್ತೇನೆ. Detail ಆಗಿ ಇದರ ಮೇಲೆ ಮಾತನಾಡುವಾಗ ನಾನು ಅವಕಾಶ ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, ನಿಲುವಳಿ ಸೂಚನೆ ಮೇಲೆ ಚರ್ಚೆಗೆ ಅವಕಾಶ ಕೊಡಿ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ನಿರ್ಣಯ ಕೊಡುತ್ತೇನೆ. ಆಮೇಲೆ ನೀವು ಚರ್ಚೆ ಮಾಡುವಿರಂತೆ. ಇವತ್ತು ಮಾನ್ಯ ಗೌರವಾನ್ವಿತ ಸದಸ್ಯರು ಈ ವಿಷಯದ ಬಗ್ಗೆ ಸಾಕಷ್ಟು ಗಮನಕ್ಕೆ ತಂದಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕಾನೂನು ಸಚಿವರು ಹಾಗೂ ಇನ್ನಿತರ ಹಿರಿಯ ಸದಸ್ಯರು ನಿಲುವಳಿ ಸೂಚನೆಯನ್ನೇನು ಇವತ್ತು ಮಂಡನೆ ಮಾಡಿದ್ದಾರೆ. ಒಂದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನೊಂದನ್ನು ಶ್ರೀ ಹೆಚ್.ಡಿ. ಕುಮಾರಸ್ವಾಮಿ ಮತ್ತು ಇನ್ನಿತರ ಸದಸ್ಯರು ಎರಡು ನಿಲುವಳಿ ಸೂಚನೆಗಳನ್ನು ಇವತ್ತು ಮಂಡನೆ ಮಾಡಿದ್ದಾರೆ. ಅವು ಎರಡೂ ಒಂದೇ ವಿಷಯಕ್ಕೆ ಸಂಬಂಧಪಟ್ಟಂಥ ನಿಲುವಳಿ ಸೂಚನೆಗಳಾಗಿವೆ. ಅಧಿವೇಶನದ ಒಂದು ದಿವಸದಲ್ಲಿ ಎರಡು ನಿಲುವಳಿ ಸೂಚನೆಗಳು ಬಂದಾಗ ಒಂದನ್ನು ನಾನು

VOL.XX, 1-30

accept ಮಾಡಬೇಕಾಗುತ್ತದೆ. ಆದರೆ, ಇವತ್ತು ಒಂದೇ ವಿಷಯಕ್ಕೆ ಸಂಬಂಧಪಟ್ಟಂತೆ ನಿಲುವಳಿ ಸೂಚನೆಗಳಿವೆ. ಅದರಲ್ಲಿ ಪ್ರಮುಖವಾಗಿ ಇವತ್ತು ರಸಗೊಬ್ಬರದ ಕೊರತೆ ಮತ್ತು ಹಾವೇರಿಯಲ್ಲಿ ನಡೆದ ಘಟನೆ ಬಗೆಗಿನ ಹಿನ್ನೆಲೆಯಲ್ಲಿ ಈ ವಿಷಯವನ್ನು ನಾವು ಚರ್ಚೆ ಮಾಡಬೇಕು ಮತ್ತು ಇದರ ಬಗ್ಗೆ ಎಲ್ಲಾ ವಿಷಯಗಳನ್ನು ಬೇರೆ ಎಲ್ಲ business ಅನ್ನು ಇವತ್ತು held up ಮಾಡಿ ಈ ವಿಷಯಕ್ಕೆ ಆದ್ಯತೆ ಕೊಟ್ಟು ಚರ್ಚೆ ಮಾಡಬೇಕೆನ್ನುವ ಉದ್ದೇಶದಿಂದ ತಾವು ಈ ನಿಲುವಳಿ ಸೂಚನೆಗಳನ್ನು ತಾವಿಬ್ಬರೂ ಮಂಡನೆ ಮಾಡಿದ್ದೀರಿ. ಇದು ನನ್ನ ಗಮನಕ್ಕೆ ಬರುವಂಥಾದ್ದು ಮತ್ತು ಈಗಾಗಲೇ ಚರ್ಚೆ ಮಾಡಿದ ರೀತಿಯಲ್ಲಿ ಇದು ಸಾರ್ವಜನಿಕ ಮಹತ್ವ ಇರುವಂಥ ವಿಷಯ ಇದರಲ್ಲಿ ಅಡಕವಾಗಿದೆ. ಅದರಲ್ಲಿ ಎರಡನೇ ಪ್ರಶ್ನೆ ಇಲ್ಲ. ಇವತ್ತು ಆಡಳಿತ ಪಕ್ಷದ ಕಡೆಯಿಂದ ಕಾನೂನು ಸಚಿವರೂ, ಇವತ್ತು ಈ ವಿಷಯದ ಬಗ್ಗೆ ನಾವು ಚರ್ಚೆ ಮಾಡಲಿಕ್ಕೆ ತಯಾರಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ಇಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾಗಬೇಕೆಂಬ ಉತ್ಸುಕತೆ ತಮಗಿದೆ. ಇವತ್ತು ಆಡಳಿತ ಪಕ್ಷದವರೂ ಸಹಿತ ಈ ವಿಷಯದ ಬಗ್ಗೆ ಚರ್ಚೆಗೆ ತಯಾರಿದ್ದಾರೆ ಎನ್ನುವ ಮಾತನ್ನು ಹೇಳುತ್ತಾರೆ. ಹೀಗಾಗಿ, ಇವತ್ತು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆಯಾಗಬೇಕಾಗಿತ್ತು; ಅದು ಇವತ್ತಿನಿಂದ ಪ್ರಾರಂಭವಾಗಬೇಕಾಗಿತ್ತು. ಅದರ ಮೇಲೆ ಚರ್ಚೆ ಮಾಡಿದಾಗಲೂ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಆದರೆ, ಈ ವಿಷಯಕ್ಕೆ ಪ್ರಮುಖವಾಗಿ ಆದ್ಯತೆ ಸಿಗಬೇಕೆನ್ನುವುದು ತಮ್ಮೆಲ್ಲರ ಇಚ್ಛೆಯಿರುವುದರಿಂದ ಇವತ್ತು ನಾನು ಈ ವಿಷಯಕ್ಕೆ ಆದ್ಯತೆಯನ್ನು ಕೊಟ್ಟು ಈ ಸಂದರ್ಭದಲ್ಲಿ ಈ ವಿಷಯ ಸದನದಲ್ಲಿ ಚರ್ಚೆಯಾಗಬೇಕೆನ್ನುವ ಬಗ್ಗೆ ಸರ್ಕಾರದ ಗಮನವನ್ನು ತಾವೆಲ್ಲರೂ ಸೆಳೆಯಲು ಉತ್ಸುಕರಾಗಿರುವುದರಿಂದ, ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದರಿಂದ ಅದರ ಹಿನ್ನೆಲೆಯಲ್ಲಿ ಇವತ್ತು ಈ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ತಾವೇನು ಮಂಡನೆಯನ್ನು ಮಾಡಿದ್ದೀರಿ ಅದನ್ನು ನಾನು convert ಮಾಡಿ Rule 69 ಪ್ರಕಾರ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ತಕ್ಷಣವೇ ಪ್ರಾರಂಭ ಮಾಡಬಹುದು. ಈ ವಿಷಯದ ಮೇಲೆ ಬೆಳಕನ್ನು ಚೆಲ್ಲಬಹುದು. ಯಾವ್ಯಾವ ಗೌರವಾನ್ವಿತ ಸದಸ್ಯರು ಇದರ ಬಗ್ಗೆ ಮಾತನಾಡಲು ಬಯಸುತ್ತಿದ್ದಾರೆ, ಅವರೆಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ. ಸಾಯಂಕಾಲದವರೆಗೆ ಈ ಚರ್ಚೆಯನ್ನು ನಾವು ಮಾಡೋಣ. ಸರ್ಕಾರದವರು ತಮಗೆ ಉತ್ತರವನ್ನು ಕೊಡಲಿ ಎಂದು ನಾನು ಈ

ಸಂದರ್ಭದಲ್ಲಿ ಈ ನಿರ್ಣಯವನ್ನು ಹೇಳುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆ ಪ್ರಾರಂಭ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಇದರಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳಿ. ಏಕೆಂದರೆ, Rule 69 ನಲ್ಲಿ ಕೊಡುವುದಕ್ಕಿಂತಲೂ Rule 60 ಯಲ್ಲಿ ಕೊಟ್ಟರೆ ಬಹಳ ಮಹತ್ವ ಬರುತ್ತದೆ. ತಾವೇನು ಹೇಳಿದ್ದೀರಿ ತಮ್ಮ ನಿರ್ಣಯಕ್ಕೆ ನಾನು challenge ಮಾಡುತ್ತಿಲ್ಲ. ನಾನು ಪುನರ್ ಪರಿಶೀಲನೆ ಮಾಡಿ ಎಂದು ಬೇಡಿಕೊಳ್ಳುತ್ತಿದ್ದೇನೆ. ಏಕೆಂದರೆ, Rule 60ಯಲ್ಲಿ ಇದಕ್ಕೆ ಅವಕಾಶ ಮಾಡಿಕೊಟ್ಟರೆ ಮಹತ್ವ ಏಕೆ ಬರುತ್ತದೆಂದರೆ, ಇದೊಂದು ವಿಶೇಷವಾದ ಸಂದರ್ಭ ಮತ್ತು ರೈತರ ಬಗ್ಗೆ ನಮಗೂ ಕಾಳಜಿ ಇದೆ. ಸರ್ಕಾರದವರಂತೂ ನಮಗೆ ಕಾಳಜಿ ಇದೆ ಎಂದು ಹೇಳಿ ಸಾಕಷ್ಟು ಸಲ ಹೇಳಿಕೊಂಡು ಕುಣಿದೇ ಕುಣಿಯುತ್ತಾರೆ. ಅದಕ್ಕಾಗಿ ತಾವು Rule60ಯಲ್ಲಿ ಚರ್ಚೆಗೆ ಅವಕಾಶ ಕೊಟ್ಟರೆ ನಾವು ನಿಜವಾಗಲೂ ಬಹಳ ಸಂತೋಪಡುತ್ತೇವೆ. ಮತ್ತು ಎಲ್ಲಾ ವಿಷಯಗಳನ್ನು ಬದಿಗಿಟ್ಟು Speaker ರವರು ಇದಕ್ಕೆ ಮಹತ್ವ ಕೊಟ್ಟಿದ್ದಾರೆಂದಾಗುತ್ತದೆ. ಅದಕ್ಕಾಗಿ ದಯವಿಟ್ಟು Rule 60ಯಲ್ಲೇ ತಾವು ಇದಕ್ಕೆ ಅವಕಾಶ ಮಾಡಿಕೊಡಿ. ನಾವು ಚರ್ಚೆ ಪ್ರಾರಂಭ ಮಾಡುತ್ತೇವೆ. Rule 69ನಲ್ಲಿ ಸಹಜವಾಗಿ ಅನೇಕ ಸಲ ತಾವು ತೆಗೆದುಕೊಳ್ಳುತ್ತೀರಿ. ಈ ಸದನದಲ್ಲಿ ಅಂಥದ್ದೇನೂ ಅಪರೂಪವಾದ ಘಟನೆ ನಿಯಮ 69ನಲ್ಲಿರುವುದಿಲ್ಲ. ಅಪರೂಪವಾದಂಥ ಚರ್ಚೆ ಎಂದರೆ, Rule 60ಯಲ್ಲಿ ನೀವು ಅವಕಾಶ ಕೊಟ್ಟರೆ ಇದಕ್ಕೆ ವಿಶೇಷವಾದಂಥ ಮಹತ್ವ ಬರುತ್ತದೆ. ಅತ್ಯಂತ ಮಹತ್ವವಾದ ವಿಷಯವೆಂದು ಪರಿಗಣಿಸಿದಂತಾಗುತ್ತದೆ. ಅದಕ್ಕಾಗಿ ದಯವಿಟ್ಟು Rule 60ಯಲ್ಲಿ ತಾವು ಇದಕ್ಕೆ ಅವಕಾಶ ಕೊಡಬೇಕೆಂದು ಹೇಳಿ ಮತ್ತೊಮ್ಮೆ ತಮ್ಮ ನಿರ್ಣಯವನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ತಾವು ತಾವು first judgement ಕೊಡುತ್ತಿದ್ದೀರಿ. ತಾವು History ಗೆ ಹೋಗಿ. ತಾವು ಚರಿತ್ರೆಗೆ ಹೋಗಿ. ಚರಿತ್ರೆಗೆ ಹೋಗಿ ಎಂದರೆ ಅವರು ಹೇಳಿದ ಹಾಗೆ ಒಳಗಡೆ ಒಂದು ಹೊರಗಡೆ ಒಂದು ತರಹ ಏಕೆ ಮಾಡುತ್ತಿದ್ದೀರಿ?

ಅಧ್ಯಕ್ಷರು: ಮಾನ್ಯ ಡಿ.ಕೆ. ಶಿವಕುಮಾರ್‌ರವರೆ, ನಾನು ಯಾರೋ ಹೇಳಿದ ಹಾಗೆ, ಯಾರ ಸೂಚನೆಯ ಪ್ರಕಾರವೂ ಇಲ್ಲಿ ನಡೆಯುತ್ತಿಲ್ಲ. ಇವತ್ತು ನಿಯಮವೇನಿದೆ, ಇಲ್ಲಿಯವರೆಗಿನ

ಸಂಪ್ರದಾಯವೇನಿದೆ ಅದರ ಪ್ರಕಾರ ನಾನು ನಡೆದುಕೊಳ್ಳುತ್ತಿದ್ದೇನೆ. kaul and shakdhar ಆ ಪುಸ್ತಕದಲ್ಲಿ ಕೆಲವೊಂದು observation ಮಾಡಿದ್ದಾರೆ. ಅದರಲ್ಲಿನ page 500:

"Adjournment motions are not normally allowed during the Budget discussions or during the discussions on the motion of thanks on President's address, as members have sufficient opportunity to focus the attenction of the House to any matter during that discussion"

ಅಂದರೆ, ಇಲ್ಲಿ ನಿಮ್ಮ ಭಾವನೆ ಚರ್ಚೆ ಮಾಡಬೇಕೆಂಬುದಾಗಿದೆ, ಆದ್ಯತೆ ಕೊಡಬೇಕೆಂಬುದಾಗಿದೆ. ಇವತ್ತು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡಲಿಕ್ಕೆ agenda ಇದೆ. ಅದನ್ನು ಬದಿಗೊತ್ತಿ ನಿಜವಾಗಿ ಈ kaul and shakdhar ಪುಸ್ತಕದ ಪ್ರಕಾರವೂ ಇವತ್ತು ಆ ಒಂದು motion of vote of thanks ಇದೆ, ಅದರಲ್ಲಿ ಚರ್ಚೆಗೆ ಅವಕಾಶವಿದ್ದಂಥ ಸಂದರ್ಭದಲ್ಲಿ adjournment motion ಗೆ ಅವಕಾಶ ಕೊಡುವಂಥ ಅವಶ್ಯಕತೆ ಇಲ್ಲವಾಗಿದೆ. ಆದರೂ ಸಹಿತ ಇವತ್ತು ನಿಮ್ಮೆಲ್ಲರ ಭಾವನೆಗಳಿಗೆ ನಾನಿವತ್ತು ಗೌರವವನ್ನು ಕೊಟ್ಟು ಹೇಳುತ್ತಿರುವುದೇನೆಂದರೆ, ಇವತ್ತು Governor's Address ಮೇಲೆ ಚರ್ಚೆಯನ್ನು ಬದಿಗೊತ್ತಿ, ಆ agenda ವನ್ನು ಬದಿಗೊತ್ತಿ ತಕ್ಷಣವೇ Rule 69 ಪ್ರಕಾರ ಚರ್ಚೆ ಮಾಡುವುದಕ್ಕೆ ನಿಮಗೆ ಅವಕಾಶ ಮಾಡಿಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: kaul and Shakdhar ಪ್ರಕಾರ normally it is not allowed. but, this is a special circumstance, Extra-ordinary circumstance. In extraordinary circumstances it can be allowed ಆದರೆ normally ಮಾಡುವುದಿಲ್ಲ. ಆದರೆ, ಇದು ಬಹಳ special case ಇದ್ದ ಕಾರಣ, Special ಗೋಲಿಬಾರ್ ಮಾಡಿಸಿದ್ದಕ್ಕಾಗಿ, Special ಆಗಿ ಸತ್ತಿದ್ದಕ್ಕಾಗಿ ಮತ್ತು ರಸಗೊಬ್ಬರದ ಕೊರತೆ ಇದ್ದ ಕಾರಣಕ್ಕಾಗಿ ಮತ್ತು ಅನೇಕ ಲೋಪದೋಷಗಳಿದ್ದ ಕಾರಣ ಇದಕ್ಕೆ ವಿಶೇಷವಾದಂಥ ಅವಕಾಶವನ್ನು ಮಾಡಿಕೊಡಬೇಕೆಂಬುದೊಂದು. Governor's Speech normally ತಮಗೆ ಗೊತ್ತಿದೆ, ಅನೇಕ ವಿಷಯಗಳನ್ನು ಅದರಲ್ಲಿಟ್ಟು ಮೊದಲನೇ ಸಲ joint Session ಕರೆಸಿ ಸಾಕಷ್ಟು ಅದರೊಳಗೆ ವಿಷಯಗಳನ್ನು ಪ್ರಸ್ತಾಪ ಮಾಡಿದರೆ Governor's Speech ನಲ್ಲಿ ಮಹತ್ವವಾದ ವಿಷಯಗಳು ಪ್ರಸ್ತಾಪವಾಗಿವೆ. ಬಹಳ Important Issues ಮೇಲೆ decisions ತೆಗೆದುಕೊಂಡಿದ್ದಾರೆ, ರೈತರ ಬಗ್ಗೆ, ಬಡವರ ಬಗ್ಗೆ, ದಲಿತರ ಬಗ್ಗೆ ಸಾಕಷ್ಟು ಕಾಳಜಿಯನ್ನು

ವಹಿಸಿ ಆ Speech ಅನ್ನು ತಯಾರು ಮಾಡಿ ಸದನದ ಮುಂದಿಟ್ಟಿದ್ದಾರೆ ಅಂದರೆ ಆ ಚರ್ಚೆಯಲ್ಲಿ ಎಲ್ಲಾ ಕೂಡ ಬರುತ್ತದೆನ್ನತಕ್ಕಂಥದ್ದು ಸರಿ. ಆದರೆ, ಅದು ಸಪ್ಪೆ ಭಾಷಣ. ಅದರೊಳಗೆ ಉಪ್ಪಿಲ್ಲ. ಖಾರವಿಲ್ಲ, ಏನೂ ಇಲ್ಲ. ಡಯಾಬಿಟೀಸ್‌ನವರು ತಿನ್ನುವ ಅನ್ನವದು. ಅದರಲ್ಲಿಯೂ ಚರ್ಚೆ ಮಾಡಿ ಎಂದರೆ ಹೇಗೆ? ಅದಕ್ಕಾಗಿ ನಾವು ಹೇಳುವುದೇನೆಂದರೆ, normally it canot be done. But , as a Special Case ಅದಕ್ಕಾಗಿ ಇವತ್ತು Governor's Speech ಇದ್ದಾಗ ಅದರಲ್ಲೇನೂ ಹುರುಳು ಇಲ್ಲದಿದ್ದಾಗ ಅದರ ಮೇಲೆ ಚರ್ಚೆ ಮಾಡುವಾಗ ನಾವು ಇದನ್ನು ತೆಗೆದುಕೊಳ್ಳಬೇಕೆಂದರೆ ಸರಿ ಹೋಗುವುದಿಲ್ಲ. ಅದಕ್ಕಾಗಿ ತಾವು Rule 60 ನಲ್ಲಿಯೇ ಇದನ್ನು as a Special Case ಎಂದು ಆದೇಶ ಮಾಡಿದರೆ ಖಂಡಿತವಾಗಿ ತಮಗೂ ಗೌರವ ಬರುತ್ತದೆ. ನಾವು ಇಷ್ಟು ಸದಸ್ಯರೆಲ್ಲರೂ ಕೂಡಿ ಒತ್ತಾಯ ಮಾಡುತ್ತಿದ್ದೇನೆ, ತಮ್ಮ ಮನಸ್ಸನ್ನು ಒಲಿಸುತ್ತಿದ್ದೇವೆ, ತಮ್ಮ ಬಗ್ಗೆ ಕೂಡ ಹೆಮ್ಮೆಯಾಗುತ್ತದೆ. ಅದಕ್ಕೆ ದಯವಿಟ್ಟು kaul and Shakdhar ಪ್ರಕಾರವೇ ನೀವು ನೋಡಿದರೂ ಕೂಡ normaly they don't allow. But, in extraordinary case you have full authority, you have right and you have got discretion. kindly use your discretion judiciously in favour of farmers.

ಶ್ರೀ ಟಿ.ಬಿ. ಜಯಚಂದ್ರ: ಸಭಾಧ್ಯಕ್ಷರೆ, ಒಂದು ವಿಚಾರವನ್ನು ಇಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ, ನಿಯಮ 60 ಮತ್ತು 69ರ ವ್ಯತ್ಯಾಸವೇನು? ಸಾರ್ವಜನಿಕವಾಗಿ ಮಹತ್ವವಾಗಿರತಕ್ಕಂಥ ವಿಚಾರ, ನಿರ್ದಿಷ್ಟವಾಗಿರತಕ್ಕಂಥ ವಿಚಾರವನ್ನೆತ್ತಬೇಕಾದರೆ ಆ ಎರಡೂ ನಿಯಮಾವಳಿಗಳಲ್ಲೂ ಕೂಡ ಒಂದೇ ತರಹವಾದಂಥ ವಿಚಾರವನ್ನು ಪ್ರಸ್ತಾಪಿಸಬೇಕಾಗಿರುವಂಥದ್ದು. ನಿಯಮ 69ರ ಅಡಿಯಲ್ಲಿ ಇಬ್ಬರು ಯಾರಾದರೂ ಪ್ರಸ್ತಾಪ ಮಾಡಿದರೆ ಪ್ರಸ್ತಾಪಿಸಬಹುದು. ಆದರೆ, ನಿಯಮ 60ರ ಅಡಿಯಲ್ಲಿ 10 ಜನ ಮಾಡಬೇಕು. ಕರೆದಂಥ ಸಂದರ್ಭದಲ್ಲಿ 23 ಜನ ಎದ್ದು ನಿಲ್ಲಬೇಕು. ಇದು ಏಕೆಂದರೆ, ಅತ್ಯಂತ ಮಹತ್ವವಾಗಿರುವ ವಿಚಾರ ಎಂದು ಅದಕ್ಕೋಸ್ಕರ ನಿಯಮಾವಳಿಗಳನ್ನು ಮಾಡುವಂಥ ಸಂದರ್ಭದಲ್ಲಿ ಅದನ್ನು ಮಾಡಿರುವುದು. ಅದರ ಹಿನ್ನೆಲೆಯನ್ನು ತಾವು ಅರ್ಥ ಮಾಡಿಕೊಂಡರೆ ಒಪ್ಪಿಗೆ ಕೊಡಬೇಕಾಗುತ್ತದೆ. ನೀವು kaul and Shakdhar quote ಮಾಡಿದಿರಿ. normally, yes. ಆದರೆ, ಒಪ್ಪಿದಾಕ್ಷಣಕ್ಕೆ ಅಪರಾಧವಾಗುವುದಿಲ್ಲ. ಅದು ಸಾರ್ವಜನಿಕ ಮಹತ್ವ ಏಕೆಂದು ಹೇಳಿದರೆ, ಇಂದಿಗೂ ಕೂಡ 23 ದಿವಸವಾದರೂ

ಕೂಡ, ಬೀಜ, ಗೊಬ್ಬರ ಸಿಗುತ್ತಿಲ್ಲ. ನಿರಂತರವಾಗಿ ರೈತರ ಆತ್ಮಹತ್ಯೆ ಆಗುತ್ತಲೇ ಇದೆ. ಇದಕ್ಕೆ ನಾನು separate ಆಗಿ extraordinary circumstances ಬೇಕು ಅಂತ ಕೇಳಿದ್ದು.

ಅಧ್ಯಕ್ಷರು: ತಾವು Rule 60, 69 difference ಹೇಳಿದಿರಿ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು? ಇಲ್ಲಿ kaul and Shakdhar ಪುಸ್ತಕವನ್ನು ನಾನು refer ಮಾಡಿ ಇಲ್ಲಿದ್ದಂಥ observation ಅನ್ನು ಹೇಳಿದೆ. Adjournment Motions are not normally allowed ಎಂದಿದೆ. ಅದಕ್ಕೆ ನಾನು discretionary power ಅನ್ನು use ಮಾಡಿದ್ದೇನೆ. ಈ observation ಪ್ರಕಾರ Budget discussion ಇದ್ದಾಗ ಮತ್ತು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆ ಇದ್ದಾಗ ಅಲ್ಲಿ ಚರ್ಚೆಗೆ ಅವಕಾಶವಿದೆ.ಇದನ್ನು ನಿಲುವಳಿ ಸೂಚನೆಗೆ ಕೊಡಬಾರದೆನ್ನುವ observation ಇದು. ಇಂಥ ಸಂದರ್ಭದಲ್ಲೂ ಇವತ್ತು Rule 60,69 difference ಬಗ್ಗೆ ನೀವು ಹೇಳಿದಿರಿ. Rule 69ನ ಕೆಳಗಡೆ ಯವುದೇ ವಿಷಯದ ಬಗ್ಗೆ ನೀವು ನೋಟೀಸ್ ಕೊಟ್ಟಾಗ Speaker ಆಗಿ ನಾನು ಯಾವುದೇ ಸಂದರ್ಭದಲ್ಲಿ, ಯಾವ ಸಮಯವನ್ನು ಬೇಕಾದರೂ ನಿಗದಿ ಮಾಡಿ fix ಮಾಡಬಹುದು. ಅದಕ್ಕೆ ಇವತ್ತೇ ಬೇಕೆಂದೇನಿಲ್ಲ. ನಾಳೆಯೂ, ನಾಡಿದ್ದೂ fix ಮಾಡಬಹುದು. That is Rule 69. ಅದೂ ಕೂಡ ಸಾರ್ವಜನಿಕ ಮಹತ್ವವಾದ ವಿಷಯವೇ. ಆದರೆ, Rule 60ಯಲ್ಲಿ ತಕ್ಷಣವೇ ಚರ್ಚೆಯಾಗಬೇಕು.

ಇದು ಬಹಳ ಮುಖ್ಯ. Adjournment Motion ಎಂದರೆ ತಕ್ಷಣವೇ ಚರ್ಚೆಯಾಗಬೇಕು. ಆ ಅವಕಾಶವನ್ನು ನಾನಿವತ್ತು ಕೊಟ್ಟಿದ್ದೇನೆ. only conversion ಮಾಡಿದ್ದೇನೆ. ಚರ್ಚೆಗೆ ಪೂರ್ತಿ ನಿಮಗೆ ಅವಕಾಶ ಕೊಟ್ಟಿದ್ದೇನೆ. ಹೀಗಾಗಿ, ಆದ್ಯತೆ ಮೇಲೆ ಕೊಟ್ಟಿದ್ದೇನೆ. ರೂಲ್ 60ರಲ್ಲಿ ಏನು ಆದ್ಯತೆ ಇದೆ ಅದನ್ನು ನಿಯಮ 69 ಮುಖಾಂತರವೂ ಕೊಟ್ಟಿದ್ದೇನೆ. ಅದಕ್ಕಾಗಿ ಬೇರೆ ವಿಷಯಗಳನ್ನು ಮಾತನಾಡುವುದರ ಬದಲು ದಯವಿಟ್ಟು ಚರ್ಚೆಯನ್ನು ಪ್ರಾರಂಭಿಸಿರಿ. ಕೂಡಲೇ ಚರ್ಚೆಯನ್ನು ಮಾಡಿದರೆ ಸಾಕಷ್ಟು ಟೈಂ ಉಳಿಯುತ್ತದೆ ಹೀಗಾಗಿ ದಯಮಾಡಿ ಚರ್ಚೆ ಮಾಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಜಯಚಂದ್ರರವರು ಹೇಳಿದರು. ಹಿಂದೆ ಒಂದು ಸಂಪದ್ರಾಯವನ್ನು ಮಾನ್ಯ ಸಭಾಧ್ಯಕ್ಷರು ಹಾಕಿದ್ದಾರೆ. ಹಿಂದೆ ಮಾನ್ಯ ಯಡಿಯೂರಪ್ಪ ನವರು ವಿರೋಧ ಪಕ್ಷದ ಸ್ಥಾನದಲ್ಲಿ ಇದ್ದಂಥ ಕಾಲದಲ್ಲಿ ಮಾನ್ಯ ರಮೇಶ್ ಕುಮಾರ್‌ರವರು ರೂಲ್ 60ಲ್ಲಿ ರೈತರ ಬೆಳೆ

ಹಾನಿಯಿಂದ ಸತ್ತಿರುವ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ರೂಲ್ 60ರಲ್ಲಿ ನೋಟೀಸ್ ಕೊಟ್ಟಿದ್ದಕ್ಕೆ ಅದರ ಮೇಲೆ ರೂಲಿಂಗ್ ಕೊಟ್ಟಿದ್ದು ನಿಯಮ 60ರಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ, ಬೇರೆ ಎಲ್ಲವನ್ನು ಬದಿಗೊತ್ತಿ 60ನಲ್ಲಿ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಡಬೇಕು.

ಅಧ್ಯಕ್ಷರು: ಅದಕ್ಕೆ ರೇವಣ್ಣನವರೇ ಎಲ್ಲಾ ಕಾರ್ಯಕ್ರಮಗಳನ್ನು ಬದಿಗೊತ್ತಿ ಚರ್ಚೆಗೆ ಅವಕಾಶ ಕೊಡುತ್ತಿದ್ದೇನೆ. ಮುಖ್ಯವಾಗಿ ವಿಷಯ ಪ್ರಸ್ತಾಪವಾಗಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರು ಸ್ವಲ್ಪ ಸಮಾಧಾನದಿಂದ ಕೇಳಬೇಕು. ತಾವು ರೈತರ ಪರವಾಗಿ ಇರುವವರು ಎಂದು ತಿಳಿದುಕೊಂಡಿದ್ದೆ.

ಅಧ್ಯಕ್ಷರು: ಅದಕ್ಕೆ ಈಗ ಅವಕಾಶ ಕೊಡುತ್ತಿದ್ದೇನೆ. ಮುಖ್ಯವಾಗಿ ವಿಷಯ ಪ್ರಸ್ತಾಪವಾಗಬೇಕು. ಚರ್ಚೆ ಪ್ರಾರಂಭ ಮಾಡಿ.

ಶ್ರೀ ಬಿ.ಎನ್. ಬಚ್ಚೇಗೌಡ: ತಾವು ಈಗಾಗಲೇ ರೂಲ್ 69ರಲ್ಲಿ ಚರ್ಚೆಯಾಗಬಹುದು ಎಂದು ರೂಲಿಂಗ್ ಕೊಟ್ಟಿದ್ದೀರಿ. ಪುನಃ ಅದರ ಬಗ್ಗೆ ಮಾತನಾಡುವಂಥ ಅವಶ್ಯಕತೆ ಇಲ್ಲ. ಇದು ಬಹಳ ಮುಖ್ಯವಾದ ವಿಷಯ ಮತ್ತು ಮಹತ್ವದ ವಿಷಯ ಎಂದು ಪರಿಗಣಿಸಿ ತಕ್ಷಣವೇ ಅವಕಾಶ ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಮತ್ತೊಮ್ಮೆ ಮನವಿ ಮಾಡುತ್ತೇನೆ ದಯಮಾಡಿ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ನಾನು ಮಾನ್ಯ ಎಲ್ಲಾ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ, ದಯಮಾಡಿ ಎಲ್ಲರೂ ಸಹಕರಿಸಬೇಕು.

ಶ್ರೀ ಹೆಚ್.ಡಿ. ರೇವಣ್ಣ: ರೈತರ ಬಗ್ಗೆ ತಾವು ಕಾಳಜಿ ಇರುವವರು ಹೀಗಿರುವಾಗ ತಾವು ಈ ವಿಷಯವನ್ನು 60 ನಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಅದಕ್ಕೆ ತಕ್ಷಣವೇ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಈಗ ಚರ್ಚೆ ಪ್ರಾರಂಭಿಸಿರಿ. ರೈತರ ಬಗ್ಗೆ ಇರುವಂಥ ಕಳಕಳಿಯನ್ನು ವ್ಯಕ್ತಪಡಿಸಿರಿ. ಚರ್ಚೆ ಪ್ರಾರಂಭಿಸಿ.

ಶ್ರೀ ಹೆಚ್. ಡಿ. ರೇವಣ್ಣ: ಅದಕ್ಕಾಗಿಯೇ 60 ನಲ್ಲಿ ಅವಕಾಶ ಕೊಡಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಚರ್ಚೆ ಮಾಡುವುದು ಬಹಳ ಮಹತ್ವದ್ದು ಇದೆ. ಹೀಗಾಗಿ ಚರ್ಚೆ ಮಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ರೂಲ್ 60ನಲ್ಲಿ ನೀವು ಯಾವ ಸಂದರ್ಭದಲ್ಲಿ ಅವಕಾಶ ಕೊಡುತ್ತೀರಿ?

ಅಧ್ಯಕ್ಷರು: ಮಾನ್ಯ ಪ್ರಸಾದ್ ರವರೇ ನೀವು ಸಾಕಷ್ಟು ಅನುಭವಿಗಳು. ರೂಲ್ 60 ಮತ್ತು 69ರಲ್ಲಿ ಏನು ವ್ಯತ್ಯಾಸ ಇದೆ ಎನ್ನುವುದನ್ನು ಈಗಾಗಲೇ ನಾನು ಹೇಳಿದ್ದೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: It is very specific Rule 60ಕ್ಕೆ ಅದರದ್ದೇ ಆದಂಥ importance ಇದೆ. ಅದನ್ನು ಮಾಡಬಹುದು ಎಂದು ಅದರಡಿಯಲ್ಲಿ ಹೇಳಿದ್ದಾರೆ. ಇನ್ನೇನು ಆಗಬೇಕೆಂದು ಇದ್ದಿರಾ? ರೂಲ್ 60ನಲ್ಲಿ ನಿಲುವಳಿ ಸೂಚನೆಯನ್ನು ಯಾವಾಗ ಮೂವ್ ಮಾಡಬೇಕಾಗುತ್ತದೆ?

ಶ್ರೀ ಟಿ.ಬಿ. ಜಯಚಂದ್ರ: ಗೊಬ್ಬರ ಮತ್ತು ಬೀಜಗಳನ್ನು ಸರಬರಾಜು ಮಾಡತಕ್ಕಂಥ ಕಂಪನಿಗಳು ಎಲ್ಲೋ ಇರತಕ್ಕಂಥ ಕಂಪನಿಗಳನ್ನು ಅಟ್ರ್ಯಾಕ್ ಮಾಡಬೇಕಾಗಿದ್ದರೆ, ತಾವು ಹೇಳಿದಂಥ normal circumstance ಬಿಟ್ಟು, ಈಗ ವಿಶೇಷವಾಗಿ ತಾವು ಒಪ್ಪಿಗೆಯನ್ನು ಕೊಟ್ಟರೆ, ಇಡೀ ದೇಶದಲ್ಲಿ ಇದರ ಬಗ್ಗೆ ಚರ್ಚೆಯಾಗುತ್ತದೆ. ಕರ್ನಾಟಕದ ಆದ್ಯತೆ ಏನು? ಕೃಷಿ ಹಾಗೂ ರೈತರ ಬಗ್ಗೆ ಇರುವ ಕಳಕಳಿ ಏನು ಎಂಬುದು ಇಡೀ ದೇಶಕ್ಕೆ ಗೊತ್ತಾಗುತ್ತದೆ. ಇದರಿಂದ ಸರ್ಕಾರಕ್ಕೆ ಹೆಸರು ಬರುತ್ತದೆ ವಿನಾ: ಬೇರೆ ಏನೂ ಇಲ್ಲ.

ಅಧ್ಯಕ್ಷರು: ಜಯಚಂದ್ರರವರೇ ನಾನು ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ತಾವೆಲ್ಲರೂ ವಿವರವಾಗಿ ಮಾತನಾಡಿ ಯಾರೂ ಬೇಡ ಎನ್ನುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಅಧ್ಯಕ್ಷರೇ ತಾವು ರೈತರ ಹಿನ್ನೆಲೆಯಿಂದ ಬಂದಿರತಕ್ಕಂಥವರು. ತಮ್ಮ ಆದೇಶವನ್ನು ನಾವು ಯಾವತ್ತೂ ಪಾಲಿಸುತ್ತೇವೆ. ತಾವು ಮತ್ತೊಮ್ಮೆ ಯೋಚನೆ ಮಾಡಬೇಕು. ನಿಯಮ 60 ಎಂದು ಹೇಳಿದಾಕ್ಷಣಕ್ಕೆ ಇದೇನು ಹೊಸ ಇತಿಹಾಸ ಅಲ್ಲ. ತಮ್ಮ ಆದ್ಯತೆ ಏನು ಎಂಬುದನ್ನು ತೋರಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ತಾವು ನಿರ್ಣಯ ಕೊಟ್ಟ ನಂತರ ವಿರೋಧ ಪಕ್ಷದವರು ಇನ್ನೂ ಚರ್ಚೆ ಮಾಡಲಿಕ್ಕೆ ಪ್ರಾರಂಭಿಸುತ್ತಿಲ್ಲ ಎನ್ನುವ ಸಂದೇಶ ಈ ಸದನದಿಂದ

ಹೋಗುತ್ತದೆ. ನೀವು ಚರ್ಚೆಗೆ ರೆಡಿ ಇಲ್ಲ, ಬರೀ ರೂಲ್ ಹಿಡಿದುಕೊಂಡು ಮೇಲೆ ಕೆಳಗೆ ಎಳೆಯುವುದಕ್ಕೆ ಪ್ರಾರಂಭಿಸಿದ್ದೀರೆನ್ನುವ ಸಂದೇಶ ಈಗಾಗಲೇ ಹೋಗುತ್ತಿದೆ. ದಯವಿಟ್ಟು ನಿಮಗೆ ರೈತರ ಬಗ್ಗೆ ಕಾಳಜಿ ಇದ್ದರೆ ಚರ್ಚೆ ಶುರು ಮಾಡಿ.

ಶ್ರೀ ಹೆಚ್. ಎಸ್. ಮಹಾದೇವ ಪ್ರಸಾದ್: ದೇಶಕ್ಕೆ ಈಗಾಗಲೇ ಸಂದೇಶ ಹೋಗಿದೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಯಾವತ್ತು ಗೋಲಿಬಾರ್ ಮಾಡಿದರೋ ಅವತ್ತೇ ಸಂದೇಶ ಹೋಯಿತು. ಸ್ವಾಮಿ ಯಾವಾಗ ಗೋಲಿಬಾರ್ ಆಯಿತೋ ಆವಾಗಲೇ ನಿಮ್ಮ ಸಂದೇಶ ಹೋಗಿದೆ ಪುನಃ ನೀವು ಸಂದೇಶ ಹೋಗುತ್ತದೆ ಎಂದು ಹೇಳುವ ಅವಶ್ಯಕತೆಯಿಲ್ಲ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿಸುತ್ತೇನೆ. ನಾನೇನು ನಿರ್ಣಯ ಕೊಟ್ಟಿದ್ದೇನೆ ಅದರ ಪ್ರಕಾರ ತಾವು ಚರ್ಚೆಯನ್ನು ಮುಂದುವರಿಸಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನೆಷ್ಟು ನಿಮ್ಮ ಮನ ವೊಲಿಸುವ ಪ್ರಯತ್ನ ಮಾಡಿದೆ ಆದರೆ ಯಾಕೋ ನಿಮ್ಮ ಮನಸ್ಸು ಕರಗುತ್ತಿಲ್ಲ ಇದೇಕೆ? ಏನು ಮಾಡಬೇಕೆಂದಾದರೂ ಹೇಳಿಬಿಡಿ ಸಾರ್. ಯಾವ ದೇವರಿಗೆ ಹರಕೆ ಮಾಡಿಕೊಳ್ಳಬೇಕೆಂದು ಹೇಳಿ ಅದನ್ನು ಮಾಡೋಣ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ತಾವು 69ಗೆ ಕನ್‌ವರ್ಟ್ ಮಾಡುತ್ತಿದ್ದೀರಿ, ಇದು ಯಥಾ ಪ್ರಕಾರ ಈ ಸದನದಲ್ಲಿ ಮಾಡಿಕೊಂಡು ಬಂದಿದ್ದಾರೆ. ಆದರೆ ನಾನೇಕೆ special ಎಂದು ಹೇಳಿದೆ ಎಂದರೆ, ರೂಲ್ 60 ಕೆಳಗಡೆ ಚರ್ಚೆ ಮಾಡಿದರೆ ಇದಕ್ಕೆ ಮಹತ್ವ ಬರುತ್ತದೆ ಎನ್ನುವ ದೃಷ್ಟಿಯಿಂದ ನಾವೆಲ್ಲರೂ ಕೂಡ ಅದಕ್ಕಾಗಿಯೇ ಒತ್ತಾಯ ಮಾಡುತ್ತಿದ್ದೇವೆ. ತಾವು ಇಲ್ಲಾ ಹಿಂದಿನ ಪ್ರಸಿಡೆಂಟ್ಸ್ ಈ ರೀತಿ ಇದೆ ಅದಕ್ಕಾಗಿ ನಾನು ಅದನ್ನೆ ಮುಂದುವರಿಸುತ್ತೇನೆಂದು ತಾವೇ ಹಠ ಹಿಡಿದರೆ ನಮಗೆ ಕಷ್ಟವಾಗುತ್ತದೆ. ನಿಮಗೋಸ್ಕರ ಹುಬ್ಬಳ್ಳಿ ಧಾರವಾಡದಲ್ಲಿ ಎಷ್ಟು ಜನ ತ್ಯಾಗ ಬಲಿದಾನ ಮಾಡಿದರು. ಸಾಕಷ್ಟು ಎಜಿಟೇಷನ್ ಆಯಿತು. ಅವರ ಬಗ್ಗೆಯಾದರೂ ಕಾಳಜಿ ಇರಲಿ ಸಾರ್.

ಅಧ್ಯಕ್ಷರು: ಆ ವಿಷಯ ಬೇರೆ ಈ ವಿಷಯ ಬೇರೆ ಬಿಡಿ ಅದನ್ನು ಏಕೆ ಇಲ್ಲಿ ಹೇಳುತ್ತೀರಿ.

Vol. 2.F.9

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅವರೂ ಕೂಡ ರೈತರೇ, ಪಾಪ ಬೀದಿಗೆ ಬಂದವರು, ನಿಮ್ಮ ಬಗ್ಗೆ ಕಾಳಜಿ ಇದ್ದವರು, ನಮಗೂ ಕಾಳಜಿ ಇದೆ ಅದಕ್ಕಾಗಿ ಹೇಳುತ್ತಿದ್ದೇನೆ. ಒಂದು ಒಳ್ಳೆಯ ಸಂದೇಶ ಹೋಗುತ್ತದೆ, ಅದಕ್ಕೆ ಇನ್ನೊಂದು ಸಾರಿ ಯೋಚಿಸುತ್ತೀರಾ ನೋಡಿ.

ಅಧ್ಯಕ್ಷರು: ಇಲ್ಲಾ ಚರ್ಚೆಯನ್ನು ಪ್ರಾರಂಭಿಸಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇದು ಬಹಳ ಗಂಭೀರವಾದಂಥ ವಿಷಯ. ನಾವ್ಯಾರು ಬಹಳ ಲಘುವಾಗಿ ತೆಗೆದುಕೊಳ್ಳುವಂಥ ವಿಷಯವಲ್ಲ. ಇದು ಕೇವಲ ಪ್ರಚಾರಕ್ಕಾಗಿಯೇ ಪ್ರಸ್ತಾಪಿಸತಕ್ಕಂಥ ವಿಷಯವೂ ಅಲ್ಲ. ಇದು ಗಂಭೀರತೆ ಪ್ರಶ್ನೆ ಏಕೆ ಬಂದಿದೆ ಎಂದರೆ, ಆಳುವ ಪಕ್ಷದ ನಾಯಕರು, ಮಾನ್ಯ ಮುಖ್ಯಮಂತ್ರಿಗಳು. ಮತ್ತು ಅವರ ಸಚಿವ ಸಂಪುಟದ ಸದಸ್ಯರುಗಳು ಅನೇಕ ಹೇಳಿಕೆಗಳನ್ನು ಕೊಟ್ಟುಕೊಂಡು ಬಂದಿದ್ದಾರೆ. ರೈತರ ಬಗ್ಗೆ ಈ ರಾಜ್ಯದಲ್ಲಿರತಕ್ಕಂಥ ಆಡಳಿತದ ಬಗ್ಗೆ ಹಾಗೂ ವಿಶೇಷವಾಗಿ ರೈತರನ್ನು ಆಕರ್ಷಣೆ ಮಾಡಿಕೊಳ್ಳಬೇಕೆಂದು ಮತ್ತು ನಾವು ರೈತರ ಪರ ಇದ್ದೇವೆ ಎಂದು ಜನರಿಗೆ ತೋರಿಸಲಿಕ್ಕೆ ಸಾವಿರಾರು ಜನರಿಗೆ ವಿಧಾನ ಸೌಧದ ಮುಂದೆ ಕರೆಯಿಸಿ, ಅವರಿಗೆ ನಾನು ನಿಮ್ಮ ಪರವಾಗಿದ್ದೇನೆಂದು ಹೇಳಿ, ಆತ್ಮದಲ್ಲಿ ಕೇಸರಿ ಇದ್ದರೂ ಕೂಡ ಹೊರಗಡೆ ನಾನು ರೈತರ ಪರ ಇದ್ದೇನೆಂದು ಹಸಿರು ಶಾಲು ಹಾಕಿಕೊಂಡು ಬಂದು ಸಂವಿಧಾನದಲ್ಲಿ ಇಲ್ಲದೇ ಇರತಕ್ಕಂಥ ಪದವನ್ನು ಅದರೊಳಗೆ ಸೇರಿಸಿ ಪ್ರಮಾಣವಚನ ಸ್ವೀಕರಿಸಿದರು. ಏಕೆಂದರೆ, ಸಂವಿಧಾನದ ಪ್ರಕಾರ ಆ ಫಾರ್ಮೆಟ್‌ನಲ್ಲಿ ಬೇರೆ ಯಾವ ಹೆಸರುಗಳೂ ಇರುವುದಿಲ್ಲ, ಅಲ್ಲಿ ಇರುವುದು ಪ್ರಮಾಣ ವಚನವನ್ನು ನಾನು ದೇವರ ಹೆಸರಿನಲ್ಲಿ ತೆಗೆದುಕೊಳ್ಳುತ್ತೇನೆ ಅಥವಾ ಸತ್ಯ ನಿಷ್ಠೆಯ ಹೆಸರಿನಲ್ಲಿ ಎಂದು ಇರುತ್ತದೆ. ಆದರೆ ಇವರು special ಆಗಿ ಇಲ್ಲದೇ ಇರತಕ್ಕಂಥ, ಸಂವಿಧಾನದ ವಿರುದ್ಧವಾಗಿ, ಅಸಂವಿಧಾನತ್ಮಾಕವಾಗಿ ಅಲ್ಲಿ ಪ್ರಮಾಣಚನವನ್ನು ಸ್ವೀಕರಿಸುತ್ತಿದ್ದೇನೆಂದು ಹೇಳಿ ಜನರಿಗೆ ತೋರಿಸಿದರು. ಇದು ಒಂದು ಕಡೆ, ನಾಳೆ ಯಾರಾದರೂ ಕೋರ್ಟಿಗೆ ಹೋದರೆ, ನ್ಯಾಚುರಲಿ ಇನ್ನೊಮ್ಮೆ ನೀವು ಪ್ರಮಾಣ ವಚನ ತೆಗೆದುಕೊಳ್ಳಬೇಕು ಇದು ಸರಿಯಿಲ್ಲವೆಂದು ಕೋರ್ಟಿನವರು ಖಂಡಿತವಾಗಿ ಹೊಡೆದುಹಾಕುತ್ತಾರೆ. ಇದು ಅವರಿಗೆ ಗೊತ್ತಿದ್ದರೂ ಕೂಡ ಮಾಡಿದರು. ಏಕೆಂದರೆ ರೈತರ ಪರವಾಗಿ ಇದ್ದೇನೆಂದು ತೋರಿಸುವುದಕ್ಕಾಗಿಯೇ ಮಾಡಿದರು. ಇವತ್ತು ಏನಾಗಿದೆ ಎಂದರೆ, ಸುಮಾರು 13 ಜಿಲ್ಲೆಗಳಲ್ಲಿ ರಸಗೊಬ್ಬರದ ಕೊರತೆ ಇರುವುದು

ಒಂದು ಕಡೆಯಾದರೆ, ಬೀಜದ ಕೊರತೆ ಇರುವುದು ಇನ್ನೊಂದು ಕಡೆ, ಆಡಳಿತದ ವೈಫಲ್ಯ ಮತ್ತೊಂದು ಕಡೆ, ಜೊತೆಗೆ ಈ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಪುರುಸೊತ್ತು ಇಲ್ಲ. 29ಕ್ಕೆ ಇವರು ಬಂದು ಅಧಿಕಾರವನ್ನು ಸ್ವೀಕರಿಸಿದ ಮೇಲೆ ಎಲ್ಲಾ ಕಡೆ ಮೇಲ್ನೋಟಕ್ಕೆ ರೈತರ ಬಗ್ಗೆ ಕಾಳಜಿ ಇದೆ ಎಂದು ತೋರಿಸಿಕೊಳ್ಳುವ ಪ್ರಯತ್ನ ಮಾಡಿದರು. ವಿಶೇಷವಾಗಿ ಗೊಬ್ಬರದ ಕೊರತೆಯ ಬಗ್ಗೆ ಅವರು ಮೊದಲನೆಯದಾಗಿ ಹೇಳಿದ್ದು, ಗೊಬ್ಬರದ ಕೊರತೆ ಇಲ್ಲ, ಅಧಿಕಾರಿಗಳು ಹಂಚಿಕೆಯಲ್ಲಿ ಸ್ವಲ್ಪ ಅಸಮರ್ಪಕವಾಗಿ ಹಂಚಿಕೆಯನ್ನು ಮಾಡುತ್ತಿದ್ದಾರೆ. ಅದನ್ನು ಸರಿಪಡಿಸುತ್ತೇವೆ ಎನ್ನುವ ಮಾತನ್ನು ಹೇಳಿದರು. ಕೃಷಿ ಸಚಿವರು, ಇಲ್ಲ ಇಲ್ಲ ನಮ್ಮ ಹತ್ತಿರ ಗೊಬ್ಬರವೇ ಇಲ್ಲ ಅದಕ್ಕೆ ಸರಿಯಾಗಿ ಹಂಚತಕ್ಕಂಥ ಪ್ರಶ್ನೆ ಉದ್ಭವಿಸುವುದಿಲ್ಲ ಅದಕ್ಕೆ ಕೇಂದ್ರವೇ ಕಾರಣ ಎನ್ನುವ ಮಾತನ್ನು ಅವರು ಹೇಳಿಕೊಂಡು ಬಂದರು. ನಾನು ಕೇಳುತ್ತೇನೆ. ನೀವು ರೈತರ ಸಮಸ್ಯೆಯನ್ನು ಬಗೆಹರಿಸುವುದು ಬಿಟ್ಟು ಅವರ ಸಮಸ್ಯೆಗಳಿಗೆ ಸ್ಪಂದಿಸುವುದನ್ನು ಬಿಟ್ಟು ಕೇವಲ ಕೇಂದ್ರ ಸರ್ಕಾರದವರು ನಮಗೆ ಕೊಟ್ಟಿಲ್ಲ ಅದಕ್ಕೆ ನಾನು ಹಂಚಿಲ್ಲ ಅದಕ್ಕೆ ನಾವು ಗುಂಡು ಹಾಕುತ್ತೇವೆಂದು ಹೇಳುತ್ತೀರಾ? ಕೇಂದ್ರ ಸರ್ಕಾರದವರು ನಮಗೆ ಕೊಟ್ಟಿಲ್ಲವೆಂದು ನಿಮಗೆ ನಮ್ಮ ಗುಂಡೇಟು. ನಾನು ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದೇನೆ, ನಿಮಗೆಲ್ಲರಿಗೂ ಮುಗಿಸಿ ಬಿಡುತ್ತೇನೆಂದು ಹೇಳಿ, ಏನಾದರೂ ನಿರ್ಣಯವನ್ನು ತೆಗೆದುಕೊಂಡು ಅಲ್ಲಿಂದ ಪ್ರಾರಂಭವನ್ನು ಮಾಡಿದಿರಾ? ಏಕೆ ನಿಮ್ಮಲ್ಲಿ ಈ ಭಾವನೆ ಬಂತು. ಈ ಮಾತನ್ನು ನಾನು ನಿಮಗೆ ಕೇಳಬೇಕಾಗಿದೆ. ಹೇಗೆ ನಿಭಾಯಿಸಬೇಕು ಎನ್ನುವುದನ್ನು ನೀವು ಇವತ್ತು ಮಾಡಬೇಕಾಗಿದೆ. ಅದನ್ನು ಬಿಟ್ಟು ಇವತ್ತು ಕೇಂದ್ರ ಸರ್ಕಾರದ ಮೇಲೆ ಒಂದು ಗೂಬೆಯನ್ನು ಕೂರಿಸುವ ರೀತಿಯಲ್ಲಿ ನಿಮ್ಮ ಪ್ರಚಾರ ನಡೆದಿದೆ ಎಷ್ಟರಮಟ್ಟಿಗೆ ನಡೆದಿದೆ ಎಂದರೆ, ಈ ರಸಗೊಬ್ಬರವನ್ನು ಸರಬರಾಜು ಮಾಡುವುದರಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಅಧಿಕಾರಿಗಳು ಸರಿಯಾಗಿ ಮಾಡಿಲ್ಲ. ಸರ್ಕಾರ ಅವರಿಗೆ ಸರಿಯಾದಂಥ ಒಂದು ಗಮನವನ್ನು ಕೊಟ್ಟು ಅವರಿಗೆ ಒಳ್ಳೆಯ ರೀತಿಯಿಂದ ಹೇಳಲಿಲ್ಲ. ಅದಕ್ಕಾಗಿ ತೊಂದರೆಯಾಗಿದೆ ಇದನ್ನು ನಿವಾರಣೆ ಮಾಡಬೇಕೆಂದು ಹೇಳಿದರೆ, ಇವರು ಹೇಳಿದ್ದು ಬರೀ ಕೇಂದ್ರ ಸರ್ಕಾರ, ಅಂತಿಮವಾಗಿ ಇವತ್ತು ಏನಾಗಿದೆ, ಪ್ರತಿ ಜಿಲ್ಲೆಯಲ್ಲಿ ರೈತರು ನಮಗೆ ಗೊಬ್ಬರ ಬೇಕು, ಗೊಬ್ಬರ ಬೇಕು ಇದು ಒಂದು ಕಡೆ. ಎರಡನೆಯದು ಪ್ರತಿ ವರ್ಷ ಇಂತಹ ಸಮಸ್ಯೆ ಇದ್ದೇ ಇರುತ್ತದೆ. ಅಥವಾ ಈ ವರ್ಷ ಸಮಸ್ಯೆ ಹೆಚ್ಚಿನ ರೀತಿಯಲ್ಲಿ ಕಾಡುವಂಥದ್ದು ಏಕೆ ಆಯಿತು? ನಮಗೆ ಗೊತ್ತಿದೆ. ಹೀಗೆ ಅಂದ ತಕ್ಷಣವೇ ಗೌರ್ನರ್ ರಾಜ್ಯವಿತ್ತು. ಸೆಕ್ರೆಟರಿಗಳು ಇದನ್ನು ಮಾಡಬೇಕಾಗಿತ್ತು. ಗೌರ್ನರ್

ಇದ್ದಾಗ ರಾಜ್ಯಕ್ಕೆ ಏನು ಕೇಳಬೇಕಾಗಿತ್ತು. ನಿಮಗೆ ಕೇಳುವುದಕ್ಕೆ ಅಷ್ಟೆ ಹಕ್ಕು ಇತ್ತು, ನಮಗೆ ಕೇಳುವುದಕ್ಕೆ ಅಷ್ಟೆ ಹಕ್ಕು ಇತ್ತು. ಇನ್ನೊಬ್ಬರು ಕೇಳುವುದಕ್ಕೂ ಅಷ್ಟೆ ಹಕ್ಕು ಇತ್ತು. ಅವರು ಒಂದು ಪಕ್ಷದ ಪರವಾಗಿ ಆಡಳಿತವನ್ನು ನಡೆಸತಕ್ಕಂಥದ್ದು ಇರುವುದಿಲ್ಲ. ನಿಮಗೂ ಗೊತ್ತಿದೆ, ನಿಮ್ಮ ಹಿಂದಿನ ಗೌರ್ನರ್‌ರವರು ಇದ್ದಾಗ ನಾವು ಇದೇ ಮಾತನ್ನು ಎಂದೂ ಹೇಳಲಿಲ್ಲ. ಅಥವಾ ಅವರ ಹತ್ತಿರ ಹೋಗಿ ಇದೇ ರೀತಿಯಾಗಿರುತ್ತದೆ ನೀವು ಪದೇ ಪದೇ ಮಾಡುತ್ತಿದ್ದೀರಿ ಎನ್ನುವಂಥ ಮಾತನ್ನು ಕೂಡ ನಾವು ಹೇಳುವುದಕ್ಕೆ ಹೊಗಲಿಲ್ಲ. ನಾವು ಯಾವಾಗಲೂ ಕೂಡ ಅವರನ್ನು ಗೌರವದಿಂದ ನೋಡಿಕೊಂಡಿದ್ದೇವೆ. ಗೌರವದಿಂದ ಅವರ ಹತ್ತಿರ ಒಂದು ವರ್ಷವಲ್ಲ, ಆರು ತಿಂಗಳಲ್ಲ, 5 ವರ್ಷ ನಡೆದುಕೊಂಡಿದ್ದೇವೆ. ಏಕೆ ಈ ಪ್ರಶ್ನೆ ಬಂತು ಎನ್ನುಂಥದ್ದು, ನಾವೆಲ್ಲರೂ ಕೂಡ ಇವತ್ತು ಯೋಚನೆ ಮಾಡಬೇಕಾಗಿದೆ. ಈಗ ತಮಗೆ ಗೊತ್ತಿದೆ, ಯಾವಾಗಲೂ ಕೂಡ ನಮ್ಮದು ಹೆಚ್ಚು ಕಡಿಮೆ 76% ಬರಿ ಡ್ರೈ ಏರಿಯಾ, ಅಲ್ಲಿ ಕೇವಲ ಮಳೆ ಮೇಲೆ ಅವಲಂಬಿತರಾಗಿ ನಾವು ಕೃಷಿ ಉತ್ಪಾದನೆಯನ್ನು ಮಾಡತಕ್ಕಂಥದ್ದು, ಹೆಚ್ಚು ಕಡಿಮೆ 24–25% ಮಾತ್ರ ನೀರಾವರಿಯಿಂದ ಕೂಡಿರತಕ್ಕಂಥ ಭಾಗ. ಅಂದರೆ ಯಾವ ಕಾಲಕ್ಕೆ ಯಾವ ಭಾಗದಲ್ಲಿ ಮಳೆ ಶುರು ಆಗುತ್ತದೆ. ಅದಕ್ಕಾಗಿ ಯಾವ ಯಾವ ಭಾಗದಲ್ಲಿ ಎಷ್ಟು ಸ್ಟಾಕ್ ಇದೆ, ಎಲ್ಲಿ ಅದನ್ನು ಮೂವ್ ಮಾಡಬೇಕು ಎನ್ನತಕ್ಕಂಥ ವಿವೇಚನೆ ಕೂಡ ಇವರ ಹತ್ತಿರವಿಲ್ಲ. ಒಂದು ಜಿಲ್ಲೆಯಲ್ಲಿ ಸ್ಟಾಕ್ ಇದ್ದರೆ ಅದನ್ನು ಇನ್ನೊಂದು ಜಿಲ್ಲೆಗೆ ಕಳುಹಿಸುವಂಥದ್ದನ್ನು ಮಾಡಬೇಕಾಗಿತ್ತು. ಅಥವಾ ಒಂದು ಜಿಲ್ಲೆಯಲ್ಲಿ ಹೆಚ್ಚಿಗೆ ಸ್ಟಾಕ್ ಇದ್ದರೆ, ಸದ್ಯಕ್ಕೆ ಎಲ್ಲಿ ಮಳೆ ಬಂದಿದೆ, ಎಲ್ಲಿ ಇವತ್ತು ಬಿತ್ತನೆ ಆಗಬೇಕು ಅಂತಹ ಕಡೆ ಇವರು ಒಯ್ಯಬಹುದಾಗಿತ್ತು. ಆದರೆ ಅದರ ಬಗ್ಗೆ ಚಿಂತನೆ ಮಾಡಲಿಲ್ಲ. ಏಕೆ ಚಿಂತನೆ ಮಾಡಲಿಲ್ಲವೆಂದರೆ, ಇವರಿಗೆ ಪುರುಸೊತ್ತು ಇಲ್ಲವಲ್ಲಾ. ಇವರು ಬಂದ ಕೂಡಲೇ IAS, IPS, KAS transfer ಮಾಡುವುದರಲ್ಲಿಯೆ ಮಗ್ನ, ಇನ್ನೊಂದು ಕಡೆ ಪಾಪ 4–5 ದಿವಸವಾದರೂ ಕೂಡ ಆ Portfolios ಹಂಚುವುದಕ್ಕೆ ತಾಪತ್ರಯ. ಯಾರಿಗೆ ಏನು ಕೊಡಬೇಕು, ಎಲ್ಲಿ ಏನು ಇಟ್ಟುಕೊಳ್ಳಬೇಕು ತಾವು ಏನು ಇಟ್ಟುಕೊಳ್ಳಬೇಕು ಎಂದು ಹೇಳಿ ಇವತ್ತು ನಾನು ನಿಜವಾಗಲೂ ಮೆಚ್ಚಿಕೊಳ್ಳುತ್ತೇನೆ. ಬೇರೆ ಯಾರಾದರೂ ಮುಖ್ಯಮಂತ್ರಿಗಳಾಗಿದ್ದರೆ ಬಹಳಷ್ಟು ಜನ ಅಸಮಧಾನ ಪಡುತ್ತಿದ್ದರು. ಏನೆಂದರೆ, ಎಲ್ಲಾ Important Postfolios ಅವರೇ ಇಟ್ಟುಕೊಂಡಿದ್ದಾರೆ. ನಮಗೆ ಒಂದು ಸಿಕ್ಕಿಲ್ಲವೆಂದು ಹೇಳಿ ಗಲಾಟೆಗಳು ನಡೆಯುತ್ತಿದ್ದವು. ಆದರೆ ಅಲ್ಲಿ ಬಹಳ ಶಾಂತರೀತಿಯಿಂದ ಇದ್ದಾರೆ, Finance Department ಇರಬಹುದು, Mines and Geology ಇರಬಹುದು, Forest

ಇರಬಹುದು, BDA ಇರಬಹುದು, ಇವೆಲ್ಲವನ್ನು ಅವರ ಹತ್ತಿರ ಇಟ್ಟುಕೊಂಡು ಉಳಿದವರಿಗೆ ಸ್ವಲ್ಪ ಮೂಗಿಗೆ ತುಪ್ಪವನ್ನು ಹಚ್ಚಿದಂತೆ ಹಚ್ಚಿ ಅವರಿಗೆಲ್ಲಾ ಕೂಡಿಸಿದ್ದಾರೆ. ಇದರಲ್ಲಿಯೆ ಇವರು ಕಾಲವನ್ನು ಕಳೆದರು. ಇವರು ಅಧಿಕಾರಕ್ಕೆ ಬಂದು 23–24 ದಿವಸವಾದರೂ ಕೂಡ ಒಂದು ಖಾತೆ ಹಂಚಿಕೆಯಲ್ಲಿ, ಇನ್ನೊಂದು ಸಮಾಧಾನ ಪಡಿಸುವುದರಲ್ಲಿ ಮೂರನೆಯದಾಗಿ ಅವರು ಎಲ್ಲೆಲ್ಲಿ ಹರಕೆಯನ್ನು ಮಾಡಿಕೊಂಡಿದ್ದರು ಆ ದೇವಸ್ಥಾನಗಳಿಗೆ ಭೇಟಿಯನ್ನು ಕೊಡುವುದು. ಎಲ್ಲಿ ಕರೆದರೂ ಅಲ್ಲಿಗೆ ಹೋದರು, ಎಲ್ಲಿ ಕೆಂಪು ಶಾಲು, ಎಲ್ಲಿ ಹಸಿರು ಶಾಲು, ಎಲ್ಲಿ ಕೇಸರಿ ಶಾಲು ಮತ್ತು ಬಿಳಿ ಶಾಲು, ತಲೆಮೇಲೆ ಟೋಪಿ, ಎಲ್ಲೆಲ್ಲಿ ಏನೇನು ಹಾಕುತ್ತಾರೋ ಅದನ್ನೆಲ್ಲಾ ಹಾಕಿಸಿಕೊಂಡು ಬಂದರು. ಏಕೆಂದರೆ ಇದು ಸಿಗಲಾರದು ಸಿಕ್ಕಿದೆ ಇದು ಎಲ್ಲಿ ಓಡಿ ಹೋಗುತ್ತದೆ ಎಂದು ಹೇಳಿ ಪುನಃ ಎಲ್ಲಾ ಕಡೆ ಹೋಗಿ ಬರುವುದು. ಅದರೊಳಗೆ ರೈತನ ಗತಿ ಏನಾಯಿತು ಎಂದರೆ, ಮಾನ್ಯ ಮುಖ್ಯಮಂತ್ರಿಗಳಿಗಂತೂ ಚೆನ್ನಾಗಿ ಗೊತ್ತಿದೆ. ಶಿಕಾರಿಪುರ, ಶಿವಮೊಗ್ಗ, ದಾವಣಗೆರೆ, ಹರಿಹರ, ಗದಗ, ಧಾರವಾಡ ಇವೆಲ್ಲಾ ಒಂದಕ್ಕೊಂದು ಹತ್ತಿಕೊಂಡು ಇರತಕ್ಕಂಥ ಪ್ರದೇಶಗಳು, ಈ ಪ್ರದೇಶದಲ್ಲಿಯೇ ಮಳೆ ಹೆಚ್ಚಿಗೆ ಆಗಿ ಬಿತ್ತನೆ ಪ್ರಾರಂಭವಾಗಿದ್ದು, ಅಲ್ಲಿ ಈ ರೈತರು ಈ ಬೇಡಿಕೆಯನ್ನು ಮಾಡಿದ್ದು. ಆ ಬೇಡಿಕೆ ಬಂದಾಗ, ಅಧಿಕಾರಿಗಳು ಏನು ಮಾಡುತ್ತಿದ್ದರು. ತಾವು ಏನು ಮಾಡುತ್ತಿದ್ದೀರಿ? ಇದರ ಬಗ್ಗೆ ಏಕೆ ಚಿಂತನೆಯನ್ನು ಮಾಡಲಿಲ್ಲ. ನೀವು ಹೇಳಬಹುದು, ನಾನು 29ನೇ ದಿನಾಂಕಕ್ಕೆ ಬಂದೆ, ಇದನ್ನು ಮೊದಲೇ ಶುರು ಮಾಡಬೇಕಾಗಿತ್ತು ಎಂದು, ನಾನು ಕೇಳುತ್ತಿರುವುದು ನೀವು ಅಧಿಕಾರಕ್ಕೆ ಬಂದು 5–6 ದಿವಸವಾದ ಮೇಲೆ ಇದು ಹೆಚ್ಚಿನ ರೀತಿಯಲ್ಲಿ ಪ್ರಾರಂಭವಾಗಿರುವುದು. ಅದಕ್ಕೆ ನೀವು ಏನು ಹೇಳಿದಿರಿ, " ಇದು ಎಲ್ಲಾ ನಾವು ಬಂದ ಮೇಲೆ ಕುತಂತ್ರ ನಡದಿದೆ. ನನ್ನ ಸರ್ಕಾರವನ್ನು ಉರುಳಿಸಬೇಕೆಂದು ಮಾಡಿದ್ದಾರೆ. ಇದರಲ್ಲಿ ಎಲ್ಲಾ ವಿರೋಧಪಕ್ಷದವರ ಕೈವಾಡ ಇದೆ ಎಂದು," ಯಾರು ಬಂದಿದ್ದರು ಸ್ವಾಮಿ? ಒಂದು enquiry ಮಾಡಿಸಿ. ನಾವು ಏನಾದರೂ ಬಂದು ನಿಮ್ಮ constituency ಯಲ್ಲಿ ಪ್ರಚೋದನೆಯನ್ನು ಮಾಡಿದ್ದೇವಾ? ಹಾವೇರಿಗೆ ಬಂದು ಏನಾದರೂ ಪ್ರಚೋದನೆ ಮಾಡಿದ್ದೇವಾ? ಘಟನೆಯಾದ ನಂತರ ಸಾಮಾನ್ಯ ಜನರಿಗೆ, ನಾಗರೀಕರಿಗೆ, ರೈತರಿಗೆ ಸಮಾಧಾನ ಪಡಿಸುವಂಥ ಮಾತುಗಳನ್ನು ಹೇಳಿಬಂದಿದ್ದೇವೆ ಹೊರತಾಗಿ ಅಲ್ಲಿ ಎಲ್ಲಾದರೂ ಒಂದು ಕಡೆ ಪ್ರಚೋದನೆ ಮಾಡುವಂಥ ಭಾಷಣವಾಗಲಿ, ಅಥವಾ ಪ್ರಚೋದಿಸಿ ಈ ಸರ್ಕಾರದ ವಿರುದ್ಧ ನೀವು ನಿಲ್ಲಿ ಎಂದು ಎಲ್ಲೂ ಕೂಡ ಹೇಳಿಲ್ಲ. ಆದರೆ ಅದರ ತದ್ವಿರುದ್ಧ ನಿಮ್ಮ ಮಾತು. ನಿಮ್ಮ ಮಂತ್ರಿಗಳ

ಮಾತು. ಎಲ್ಲಿ ಹೋದಲ್ಲೆಲ್ಲಾ ಇದು ಕಾಂಗ್ರೆಸ್ ಪಕ್ಷದವರದ್ದು, ಇದೆಲ್ಲಾ ಜೆಡಿ(ಎಸ್) ರವರದ್ದು ಇದೆಲ್ಲಾ ಕುತಂತ್ರವನ್ನು ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಬಂದಿದ್ದು ಅವರು ಸಹಿಸುತ್ತಿಲ್ಲಾ ಈ ಸರ್ಕಾರವನ್ನು ಉರುಳಿಸಬೇಕೆಂದು ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿಕೊಂಡು ಬಂದಿದ್ದೀರಲ್ಲಾ ಇದು ನಿಮಗೆ ಶೋಭೆ ತರುತ್ತದಾ? ಈ ಮಾತನ್ನು ಹೇಳಿದ್ದರಿಂದ ನಾನು ಕೇಳಬೇಕಾಗುತ್ತದೆ. ನಿಜವಾಗಲೂ ಕೂಡ ನೀವು ಆಳತಕ್ಕಂಥ ಒಂದು ಪಕ್ಷದವರು, ಮುಖ್ಯಮಂತ್ರಿಗಳಾಗಿದ್ದೀರಿ, ನಿಮ್ಮ ಮಂತ್ರಿಮಂಡಲದ ಸದಸ್ಯರು ನೀವು ನಾಲಿಗೆ ಬಿಗಿ ಹಿಡಿದು ಮಾತನಾಡಬೇಕು. ನೋಡಬೇಕು ನಾವು ಮಾತನಾಡುವುದರಿಂದ ಏನು ಪರಿಣಾಮವಾಗುತ್ತದೆ, ಜನರ ಮೇಲೆ ಏನು ಪರಿಣಾಮವಾಗುತ್ತದೆ, ರೈತರ ಮೇಲೆ ಏನು ಪರಿಣಾಮವಾಗುತ್ತದೆ, ನನ್ನ ಮಾತಿನಿಂದ ಪ್ರಚೋದನೆಯಾಗಿ ಮತ್ತೆ ರಾಜ್ಯದಲ್ಲಿ ಗಲಾಟೆಯಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳುವುದು ಬಿಟ್ಟು, ಎಲ್ಲಿ ಸತ್ತರೂ ಅದಕ್ಕೆ ಕಾಂಗ್ರೆಸೇ ಕಾರಣ. ಸುದ್ದಿವದಿಂದ ಯಾರಿಗಾದರೂ ಮಕ್ಕಳಾಗಲಿಲ್ಲವೆಂದರೆ ಕಾಂಗ್ರೆಸ್ ರವರು ಕಾರಣವೆಂದು ಹೇಳಲಿಲ್ಲ. ಇದನ್ನು ಮಾತ್ರ ಹೇಳಿಕೊಂಡು ಹೋಗಿದ್ದಾರೆ. ನಾನು ಈ ಮಾತನ್ನು ಏಕೆ ನೊಂದು ಹೇಳುತ್ತಿದ್ದೇನೆಂದರೆ, ನೀವು ಸರಿಪಡಿಸುತ್ತೇನೆಂದು ಹೇಳುವುದು ಬಿಟ್ಟು ಇದಕ್ಕೆಲ್ಲಾ ಬೇರೆಯವರು ಕಾರಣಕರ್ತರು ನಾವು ಮಾತ್ರ ಏನು ಇಲ್ಲವೆಂದರೆ, ನಿಮ್ಮ ಸೊಸೈಟಿಗಳು ಎಲ್ಲವನ್ನು ಕೊಟ್ಟಿವೆಯಾ? ಎಲ್ಲಾ ಕಡೆ ನಿಮ್ಮ ಪ್ರೈವೇಟ್ ಏಜೆಂಟ್ಸ್ ಇವತ್ತು ತೆಗೆದುಕೊಂಡು ವ್ಯಾಪಾರ ಮಾಡುತ್ತಾರೆ ಅವರು ಎಷ್ಟರಮಟ್ಟಿಗೆ ಪ್ರತಿ ವರ್ಷ ಗೊಬ್ಬರವನ್ನು ತರಿಸುತ್ತಿದ್ದರು ಎಷ್ಟು ದುಡ್ಡು ಕೊಡುತ್ತಿದ್ದರು ಎಷ್ಟು ಖೋಟಾ ಬರುತ್ತಿತ್ತು ಇದರ ಬಗ್ಗೆ ಏನಾದರೂ ಪರೀಕ್ಷೆಯನ್ನು ಮಾಡಿದಿರಾ? ನಿಮ್ಮ ಅಗ್ರಕಲ್ಚರ್ ಆಫೀಸರ್ ಅವರನ್ನು ಕರೆಸಿ April, May, June, July ಈ ತಿಂಗಳಲ್ಲಿ ಪ್ರತಿ ಸಲ ನೀವು Factory ಯಿಂದ ಎಷ್ಟು ತರಿಸುತ್ತಿದ್ದೀರಿ,' ಈ ಸಲ ಏಕೆ ತರಿಸಲಿಲ್ಲ ಎನ್ನತಕ್ಕಂಥದ್ದನ್ನು ಕೇಳಿದ್ದೀರಾ? ಇದರ ಬಗ್ಗೆ ಏನೂ ವಿಚಾರವಿಲ್ಲ. ಇದರ ಬಗ್ಗೆ ಯಾವುದು ಚಿಂತನೆ ಇಲ್ಲ, ಅಷ್ಟೆ ಬಿಡಿ. ಈ ನಿಮ್ಮ ಯಾವ ಜಿಲ್ಲಾಧಿಕಾರಿಗಳೂ ಕೂಡ ಈ ಹಾವೇರಿ ಫೈರಿಂಗ್ ಆಗುವವರೆಗೆ ಇದರ ಬಗ್ಗೆ ಚಿಂತನೆಯನ್ನು ಮಾಡಲಿಲ್ಲ. ಅಗ್ರಿಕಲ್ಚರ್ ಆಫೀಸರ್ಸ್ ಮಾಡಲಿಲ್ಲ. ಜಿಲ್ಲಾಧಿಕಾರಿಗಳು ಮಾಡಲಿಲ್ಲ, ಜಿಲ್ಲಾ ಪಂಚಾಯಿತಿಯ ಸೆಕ್ರೆಟರಿಯವರು ಮಾಡಲಿಲ್ಲ ಅಥವಾ ಅಲ್ಲಿರತಕ್ಕಂಥ ಅಧಿಕಾರಿಗಳು ಮಾಡಲಿಲ್ಲ, ನೀವು ಕೂಡ ಆ ಕಡೆ ಗಮನವನ್ನು ಹರಿಸಲಿಲ್ಲ. ಇದು ನಿಮ್ಮ ವೈಫಲ್ಯ. ನಿಮ್ಮ ವೈಫಲ್ಯದಿಂದ ನಿಮ್ಮ ಆಡಳಿತದ ಅನುಭವದ ಕೊರತೆಯಿಂದ ಈ ಘಟನೆ ನಡೆದು ಇವತ್ತು ಹಾವೇರಿಯಂಥ ಒಂದು ಊರಿನಲ್ಲಿ ಜನವೇ ಇಲ್ಲ. ಬಹಳ ಕಡಿಮೆ ಜನ ಇರತಕ್ಕಂಥ

agitation ನಲ್ಲಿ ನಿಮ್ಮ ಪೊಲೀಸ್ ಅಧಿಕಾರಿಗಳು ನೇರವಾಗಿ ಅವನ ಬೆನ್ನಿನಲ್ಲಿ ನೇರವಾಗಿ ಗುಂಡು ಹಾಕುತ್ತಾರೆಂದರೆ ಇದು ನಿಜವಾಗಿಯೂ ನಾಚಿಕೆಯಿಂದ ತಲೆ ತಗ್ಗಿಸಬೇಕು. ಅವನೇನು ಗಲಾಟೆ ಮಾಡಿದರೆ ಅಂಥ ದೊಡ್ಡ ಮಾಬ್‌ನಲ್ಲಿ ಗೊತ್ತಾಗಲಿಲ್ಲ ಹಾಗಾಗಿ ನಾವು ಫೈರಿಂಗ್ ಮಾಡಿದ್ದಾರೆಂದು ನೀವು ಹೇಳಬಹುದು. ಅಂದರೆ ಫೈರಿಂಗ್ ಮಾಡಿದರೂ ಎಲ್ಲಿ ಮಾಡಬೇಕು? ಫೈರಿಂಗ್ ಮಾಡಲಿಕ್ಕೆ ಏನು ಆದೇಶವಿದೆ? ಮೊಳಕಾಲಿನ ಕೆಳಗೆ ಫೈರಿಂಗ್ ಮಾಡಬೇಕೆಂದು ನಿಮ್ಮ ಆದೇಶಗಳು ಮತ್ತು Instructions ಇವೆ. ಮೊದಲು ಲಾಠಿ ಛಾರ್ಜ್ ಮಾಡಬೇಕು, ಅದಕ್ಕೂ ಮಣಿಯಲಿಲ್ಲವೆಂದಾಗ tear gas ಉಪಯೋಗಿಸಬೇಕು, ಅದಕ್ಕೂ ಮಣಿಯಲಿಲ್ಲವೆಂದರೆ ನಿಮಗೇನಾದರೂ Deputy Commissioner, Sub Divisional Magistate ನಿಂದ Instructions ಬಂದರೆ ಆಮೇಲೆ ನೀವು ಫೈರಿಂಗ್ ಮಾಡಬೇಕಾದರೂ ಕೂಡ ಮೊಳಕಾಲಿನ ಕೆಳಗೆ ಮಾಡಬೇಕು. ಹಾಗೆ ಮಾಡುವಾಗ ತಪ್ಪಿ ಗುಂಡೇಟು ಬಿದ್ದಿದೆ ಎಂದರೆ ಓಕೆ. ಆದರೆ ಈ ಘಟನೆಯಲ್ಲಿ ನೇರವಾಗಿ ಗುಂಡು ಹಾಕಿದ್ದಾರೆ? ಅವರ ಮನೆಗೆ ಹೋಗಿ ನೀವು ಕೇಳಿ, ಆ ಸಿದ್ದಲಿಂಗಪ್ಪ ಚೂರಿಯವರ ತಾಯಿ, ಅವರ ಮನೆಯವರು, ಅವರ ತಮ್ಮ ಸಿದ್ದಲಿಂಗಪ್ಪ ಅವರಿಗೆ ನೇರವಾಗಿ ಗುಂಡು ಹಾಕಿದ್ದಾರೆಂದು ಸ್ಪಷ್ಟವಾಗಿ ಹೇಳುತ್ತಾರೆ. ಇದರ ಬಗ್ಗೆ ತನಿಖೆ ಆಗಬೇಕು, ಬೇರೆ ಎಲ್ಲಿಯೂ ಕೂಡ ಗುಂಡು ಹೊಡೆದಿಲ್ಲ. ನೇರವಾಗಿ ಗುರಿ ಇಟ್ಟು ಹೊಡೆದಿದ್ದಾರೆ ಎಂಬ ಮಾತನ್ನು ಹೇಳಬೇಕಾದರೆ ಇದರಲ್ಲಿ ಏನು ಅರ್ಥ? ವಿರೋಧ ಪಕ್ಷದವರು ಅವನಿಗೆ ಗುರಿ ಇಟ್ಟು ಹೊಡೆಯಿರಿ ಎಮದು ನಿಮ್ಮ ಪೊಲೀಸಿನವರಿಗೆ ಹೇಳಿದ್ದಾರೆಯೇ? ಅವರಿಗೆ ಯಾರು ಆದೇಶ ಕೊಟ್ಟರು ಅಥಾವಾ ನಿಮ್ಮ Deputy Commissioner ಏನು ಮಾಡುತ್ತಿದ್ದರು? ಅಥವಾ ಅಸಿಸ್ಟೆಂಟ್ ಕಮಿಷನರ್ ಏನು ಮಾಡುತ್ತಿದ್ದರು? ಇವೆಲ್ಲಾ ಪ್ರಶ್ನೆಗಳೂ ಬರುತ್ತಿವೆ. ಇದರ ಜೊತೆ ಜೊತೆಯಲ್ಲಿ ಈ ಘಟನೆಯಾದ ಮೇಲಾದರೂ ಕೂಡ ಕಂಟ್ರೋಲ್ ಮಾಡಬಹುದಾಗಿತ್ತು. ಈ ಘಟನೆಯಾದ ನಂತರ ಪ್ರತಿಯೊಂದು ಜಿಲ್ಲೆಗಳಿಗೆ ಹೋಗಿ ಸಭೆಗಳನ್ನು ನಡೆಸಿ ಸಾಂತ್ವನವನ್ನು ಹೇಳಿ ನಮಗೆ ಇಷ್ಟು ಬಂದಿದೆ, ಇಷ್ಟು ಬಂದಿಲ್ಲ, ದಯವಿಟ್ಟು ನೀವು ಯಾರಿಗೆ ಅವಶ್ಯಕತೆ ಇದೆ ಅವರಿಗೆ ಕೊಡಿ, ಯಾರಿಗೆ ಅವಶ್ಯಕತೆ ಇಲ್ಲ ಅವರಿಗೆ ಬೇಡ. ಈಗ ಉದಾಹರಣೆಗೆ ಹೇಳುವುದಾದರೆ ಬಳ್ಳಾರಿ, ಬಳ್ಳಾರಿಯಲ್ಲಿಯೂ ಮೇ end ಗಾಗಲಿ ಅಥವಾ ಜೂನ್ fist week ನಲ್ಲಾಗಲಿ ಇವತ್ತು fertilizers utilize ಮಾಡಲಿಕ್ಕೆ ಅವರಿಗೆ ಗೊತ್ತಿದೆ. ಅಂಥಾ ಕಡೆ ಸ್ಟಾಕ್‌ಗಳಿವೆ. ಅದೇ ರೀತಿಯಾಗಿ ಪ್ರತಿ ಜಿಲ್ಲೆಯಲ್ಲಿಯೂ ಸ್ಟಾಕ್ ಇದೆ. ಅದೆಲ್ಲವನ್ನೂ ತಿಳಿದುಕೊಂಡು ಎಲ್ಲಿ ಅವಶ್ಯಕತೆ ಇದೆ ಅಲ್ಲಿ

divert ಮಾಡಿ, ಕೊಡಿಸತಕ್ಕಂಥ ಪ್ರಯತ್ನ ಮಾಡಿ, ಇದೇನಾದರೂ ನಡೆಯಿತೇ ಇಲ್ಲ. ಅದನ್ನು ಬಿಟ್ಟು ನಮ್ಮಲ್ಲಿ ಗೊಬ್ಬರ ಸ್ಟಾಕ್ ಇಲ್ಲ, ಕೇಂದ್ರದವರು ಕೊಟ್ಟಿಲ್ಲ. ಅದಕ್ಕೆ ನಾವೇನು ಮಾಡೋಣ? ಇದಕ್ಕೆಲ್ಲಾ ಕಾರಣಕರ್ತರು ಇವರು ಅಂದರೆ ತಮ್ಮ ಮೇಲೆ ಬಂದಂಥ ಆಪಾದನೆಯನ್ನು, ತಾನು ನಿರ್ವಹಿಸುವಂಥ ಜವಾಬ್ದಾರಿಯನ್ನು ಇನ್ನೊಬ್ಬರ ಮೇಲೆ ಹಾಕಿ ನುಣಿಚಿಕೊಳ್ಳುವಂಥ ಕೆಲಸವನ್ನು ಇವತ್ತು ಯಾರಾದರೂ ಮಾಡುತ್ತಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಕೃಷಿ ಸಚಿವರು ಮಾಡುತ್ತಿದ್ದಾರೆ. ನಿಮ್ಮ ಜವಾಬ್ದಾರಿ ಇದು, ಬೇರೆಯವರಿಗೇಕೆ ಹೇಳುತ್ತೀರಿ? ನೀವು ಯಾವ ರೀತಿಯಾಗಿ ಇಲ್ಲಿ ನಿಭಾಯಿಸುತ್ತಿದ್ದೀರಿ ಎಂಬುದು ಪ್ರಶ್ನೆ? ಇನ್ನೊಬ್ಬರಿಂದ ನಿಮಗೆ ಏನು ಬಂತು, ಏನು ಮುಟ್ಟಿತು, ಏನು ಇಲ್ಲ ಎಂಬ ಪ್ರಶ್ನೆ ಬೇರೆ? ಆದರೆ ನೀವು ಮುಖ್ಯಮಂತ್ರಿಗಳಾಗಿ, ಕೃಷಿ ಸಚಿವರಾಗಿ ಆ ಜನರಿಗೆ ನೀವು ಏನು ಕೊಟ್ಟಿದ್ದೀರಿ? ನಿಮ್ಮ ಆಡಳಿತದಲ್ಲಿ ಏನು ನಡೆಯಿತು? ಇದರ ಬಗ್ಗೆ explanation ನೀವು ಜನರಿಗೆ ಕೊಡಬೇಕು. ಆ ರೀತಿ explanation ಕೊಡುವುದನ್ನು ಬಿಟ್ಟು ಅವರಿಗೆ ಗುಂಡು ಹಾಕಿ ಕೊಂದು ಮತ್ತೆ ಇವರು ಏನು ಹೇಳುತ್ತಿದ್ದಾರೆಂದರೆ, ಅನೇಕ ರೈತರು ರಸಗೊಬ್ಬರ ಸಿಗಲಿಲ್ಲವೆಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದರೆ, ಅವರು ರೈತರಲ್ಲ, ಅವನು ಕುಡುಕನಾಗಿದ್ದ. ನಾವೆಲ್ಲ ವೆರಿಫೈ ಮಾಡಿದ್ದೇವೆ. ಅಫರ ಮನೆಯಲ್ಲಿ ಗಂಡ ಹೆಂಡತಿ ಜಗಳವಾಗಿತ್ತು. ಅಣ್ಣತಮ್ಮಂದಿರು ಜಗಳವಾಗಿತ್ತು. ಈ ಮಾತೆಲ್ಲಾ ನಿಮ್ಮ ಬಾಯಿಂದ ಬರಬೇಕೇ? ಇದನ್ನು ನಾವು ಕೇಳಬೇಕು. ಅದಕ್ಕೆ ನಿಮ್ಮ ಅಡ್ವೈಸ್ ಆಗುತ್ತದೆ. ಕೃಷಿ ಸಚಿವರು ಇಲ್ಲಿ ಬಹಳ ಶಾಂತವಾದ ರೀತಿಯಿಂದ ಕೇಳುತ್ತಿದ್ದಾರೆ. ಅವರೇ ಒಂದು ಪತ್ರಿಕೆಯಲ್ಲಿ ಹೇಳಿದ್ದಾರೆ. ಹರಿಹರ ತಾಲ್ಲೂಕಿನ ಕುಮಾರ ಹಳ್ಳಿಯಿಲ್ಲಿ ಒಬ್ಬ ಕುಡುಕ ಇದ್ದ, ಆತ ಸತ್ತ ಎಂದರೆ ಆ ಹೇಳಿಕೆಯನ್ನು ನೀವು ಬಹಿರಂಗ ಪಡಿಸಿ. ರೈತರ ಮೇಲೆ ಇವತ್ತು ಆಪಾದನೆ ಮಾಡುತ್ತೀರಿ, ರೈತರು ಕುಡುಕರು, ಜಗಳಗಂಟರು, ಅಂಥವರು ಸತ್ತಿದ್ದರೆ. ನಿಜವಾದಂಥ ರೈತರಲ್ಲ ಅನ್ನತಕ್ಕಂಥ ಭಾಷೆಯನ್ನು ನೀವು ಅಧಿಕಾರಕ್ಕೆ ಬಂದ ಮೇಲೆ ಉಪಯೋಗಿಸುವ ಬದಲು ಈ ಭಾಷೆಯನ್ನು ಚುನಾವಣೆಗೆ ಮೊದಲೇ ಬಳಸಬೇಕಾಗಿತ್ತು. ಆಗ ನಿಮಗೆ ಗೊತ್ತಾಗುತ್ತಿತ್ತು. ಎಲ್ಲಿಯಾದರೂ ಏನಾದರೂ ಅನಾಹುತವಾದರೆ, ಅವರ ಸಮಸ್ಯೆ ನಿಮ್ಮಲ್ಲಿಗೆ ತಂದರೆ, ನೀವೆಲ್ಲಾ ಕುಡುಕರು, ನಿಮ್ಮ ಮಾತು ಕೇಳುವುದಿಲ್ಲವೆಂದು ಹೇಳಬೇಕಾಗಿತ್ತು. ಅನೇಕ ಜನ ಸರ್ಕಾರಿ ಜಮೀನುಗಳನ್ನು ಹೊಡೆಯುತ್ತಿದ್ದಾರೆ. ನಿಮ್ಮ ಕಮಿಟಿಗಳು ಇಲ್ಲ, ಅದು ರೆಗ್ಯುಲರೈಸ್ ಆಗುವುದಿಲ್ಲ. ಆದರೂ ಕೂಡ ಅದೇ ರೀತಿಯಾಗಿ ತಮ್ಮ ಜಮೀನನ್ನು cost ಮಾಡುತ್ತಿದ್ದಾರೆ. ನಿಮಗೆಲ್ಲರಿಗೂ ಗೊತ್ತು ಬಗರ್‌ಹುಕುಂ

ಕಮಿಟಿಗಳೇ ಇರುತ್ತಿರಲಿಲ್ಲ. ಇವತ್ತು ಎಲ್ಲಕ್ಕಿಂತಲೂ ಹೆಚ್ಚಿನ ಬಗರ್ ಹುಕ್ಕುಂ ಜಮೀನುಗಳನ್ನು ಮಾಡಿದ್ದು ಯಾವುದಾದರೂ ಜಿಲ್ಲೆಯಲ್ಲಿದ್ದರೆ ಅದು ಶಿವಮೊಗ್ಗ ಜಿಲ್ಲೆಯಲ್ಲಿ. ಹಾಗಿದ್ದರೆ ಆ ಎಲ್ಲಾ ರೈತರನ್ನು ತೆಗೆದುಹಾಕಿ, ಅವರು ರೈತರೇ ಅಲ್ಲ. ನಿಮಗೆ ಬೇಕಾದಂಥವರು ರೈತರು, ಬೇಡವಾದಂಥವರು ರೈತರಲ್ಲ. ಅದಕ್ಕೆ ಇಂಥ ಮಾತುಗಳು, ನೀವು ಮಾಡಿದಂಥ ಕಮಿಟಿ ಇರಬಹುದು. ನೀವು ಯಾರಿಗೆ ಕೊಡುತ್ತೀರೋ, ಬಿಡುತ್ತೀರೋ ಆದರೆ ಅವರು ಅದನ್ನು cultivating ಮಾಡುತ್ತಿದ್ದಾರೆ. ಅವನಿಗೆ ಚೀಟಿ ಕೊಟ್ಟಿದ್ದೀರಿ. 4 ಎಕರೆ ಇರುವವನಿಗೆ ಗೊಬ್ಬರದ ಸಲುವಾಗಿ ಎಲ್ಲಾ ಕಡೆ ಕೊಟ್ಟಿದ್ದೀರಿ, Unauthorized ಇದ್ದರೂ ಕೂಡ. ಸೊಸೈಟಿಯವರಿಗೆ ಕೊಟ್ಟಿದ್ದೀರಿ. ನಾನ್ಯಾಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಿಮಗೆ ಇದು ಗೊತ್ತಿದೆ, ಒಂದು ಕಡೆ ರೈತರ ಮೇಲೆ ಆಪಾದನೆ ಮಾಡುವುದು, ಗುಂಡೇಟು ಹಾಕುವುದು, ಅದರ ಬಗ್ಗೆ regret ಇಲ್ಲ. ಅದರ ಬಗ್ಗೆ ಖೇದ ವ್ಯಕ್ತಪಡಿಸುತ್ತೇನೆಂಬುದು ಇಲ್ಲ ಅಥವಾ ಇದರಲ್ಲಿ ತಪ್ಪಾಗಿದೆ ಎನ್ನುವಂಥದ್ದು ಇಲ್ಲ. ಮತ್ತೆ ಅವರ ಮೇಲೆ ಗೂಬೆ ಕೂರಿಸುವುದು. ಅವರ ಮೇಲೆ ಆಪಾದನೆ ಮಾಡುವುದು. ರೈತರ ಬಗ್ಗೆ ಕಾಳಜಿ ಬೇಕು. ರೈತರನ್ನು ಅನ್ನದಾತ ಎಂದು ಹೇಳಿಕೊಂಡು ಅವರ ಬಗ್ಗೆ ನೀವು ಡಂಗುರ ಸಾರುವಂಥ ಜನ ಆ ನಡೆದಂಥ ಘಟನೆಗಳ ಬಗ್ಗೆ ವಿಷಾದ ವ್ಯಕ್ತಪಡಿಸುವುದನ್ನು ಬಿಟ್ಟು ಅವರ ಮೇಲೆ ಆಪಾದನೆ ಹೊರಿಸುವುದನ್ನು ಮಾಡುತ್ತಿದ್ದಾರಲ್ಲಾ ಇದು ನಿಮ್ಮ ಸರ್ಕಾರಕ್ಕೆ ಶೋಭೆ ತರುವಂಥದ್ದಲ್ಲ. ಇದರಿಂದ ನಿಮಗೆ ಏನು ಪ್ರಯೋಜನ ಎನ್ನತಕ್ಕಂಥದ್ದು ಹೇಳಬೇಕು. ಆದರೆ ನಿಮಗೆ ಇದು ಅನುಕೂಲವೇ? ಏಕೆಂದರೆ ಅಧಿಕಾರಕ್ಕೆ ಬಂದಿದ್ದೇವೆ, ಬಾಯಿಗೆ ಬಂದಂತೆ ಹೇಳುವುದು. ನಾವು ಪತ್ರಿಕೆಯಲ್ಲಿ ಓದಿದ್ದೆವು ಒಂದು ಸಾರಿ ನಮ್ಮ ಬಿದರಿಯವರು ಹೇಳಿದ್ದರು, ನಮಗೆ ಕಣ್ಣಿದೆ, ಕಿವಿಯಿದೆ, ಆದರೆ ಬಾಯಿಲ್ಲ, ಅಂದರೆ ನಾವು ಪೊಲೀಸ್ ಆಫೀಸರ್ಸ್ ಮಾತನಾಡುವ ಹಾಗಿಲ್ಲ. ಏನು ನಡೆದಿದೆ ಎಂಬುದು ಎಲ್ಲಾ ನನಗೆ ಗೊತ್ತಿದೆ, ಕಣ್ಣು ಇದೆ, ಕಿವಿಯೂ ಇದೆ, ಬಾಯಿ ಮಾತ್ರವಿಲ್ಲ. ಹಾಗೆಯೇ ನಮ್ಮ ಮುಖ್ಯಮಂತ್ರಿಗಳಿಗೆ ಕಣ್ಣು ಇಲ್ಲ, ಕಿವಿಯೂ ಇಲ್ಲ, ಬಾಯಿ ಮಾತ್ರ ಇದೆ. ಬಾಯಿಗೆ ಏನು ಬರುತ್ತದೆ ಅದನ್ನು ಹೇಳಿಬಿಡುವುದು. ಮತ್ತೆ ಯಾರೆಂದರೆ ಅವರ ಮೇಲೆ ಆಪಾದನೆಯನ್ನು ಹೊರಿಸುವುದು. So Intelligence Department ನಲ್ಲಿ ಬಾಯಿಯಿಲ್ಲ. ಕಣ್ಣು, ಕಿವಿ ಇದೆ. ಇವರಿಗೆ ಮಾತ್ರ ಕಣ್ಣು ಇಲ್ಲ, ಕಿವಿಯೂ ಇಲ್ಲ, ಬಾಯಿ ಮಾತ್ರ ಇದೆ. ಇಂಥ ಒಂದು ಪರಿಸ್ಥಿತಿಯಲ್ಲಿ ನಮ್ಮ ಮುಖ್ಯಮಂತ್ರಿಗಳಿದ್ದು ಈ ರೀತಿಯಾಗಿ ಆಡಳಿತವನ್ನು ನಡೆಸುತ್ತಿದ್ದಾರೆ. ರೈತರ ಮೇಲೆ ಗೋಲಿಬಾರ್ ಆಗುತ್ತಿವೆ, ಈಗ 22–23 ದಿವಸ ಆಯಿತು, ಆತ್ಮಹತ್ಯೆ ಪ್ರಕರಣಗಳು ಹೆಚ್ಚು

ಕಡಿಮೆ 11–12 ಕ್ಕೆ ಮುಟ್ಟಿದೆ. ಇನ್ನು ಎಷ್ಟು ಆಗುತ್ತವೋ ಗೊತ್ತಿಲ್ಲ. ಅದೇನು ಗೊತ್ತಿಲ್ಲ, ಇವರು ಬಂದರೆ ಕಳ್ಳಬಟ್ಟಿ ದುರಂತ ಆಯಿತು.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು: ಕಳ್ಳಬಟ್ಟಿ ದುರಂತ ಯಾವಾಗ ಆಯಿತು ಹೇಳಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಬರುತ್ತೀರಿ, ಹಾಗೆ ಆಗುತ್ತದೆ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು: ಗವರ್ನರ್ ಆಡಳಿತ ಇದ್ದಾಗ ಆಗಿದ್ದು. ಯಾರ ಆಡಳಿತ ಇತ್ತು, ಯಾವ ಇಲಾಖೆ ಇತ್ತು, ಯಾವಾಗ ಆಗಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅರಕಲಗೂಡಿಗೆ ಹೋಗಿದ್ದೆ, ಅಲ್ಲೊಂದು ಆಯಿತು. ಅದಾದ ಮೇಲೆ ಆನೇಕ ವಿವರಣೆಗಳನ್ನು ಹೇಳಬೇಕಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ: ನೀವು ಹೇಳಿದ್ದೆಲ್ಲಾ ಸುಳ್ಳು ಎಂದು ತೀರ್ಮಾನವಾಗಿ ಬಿಡುತ್ತದೆ. ಯಾವುದು ನಾವು ಅಧಿಕಾರಕ್ಕೆ ಬಂದ ಮೇಲೆ ಆಗಿದೆ ಎಂಬುದನ್ನು ಸರಿಯಾಗಿ ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸುಳ್ಳೋ ಸತ್ಯವೋ ಜನ ತೀರ್ಮಾನ ಮಾಡಲಿ ಬಿಡಿ. ಒಟ್ಟು 11 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ಸತ್ಯವಲ್ಲವೇ? ಇದು ನನ್ನ ದುರ್ದೈವ ಎಂದು ಅನೇಕ ಕಡೆ ಹೇಳಿ ಗೋಳೋ ಎಂದು ಅವರು ಕಣ್ಣೀರು ಹಾಕಿದ್ದಾರೆ. 'ನಾವು ಅಧಿಕಾರಕ್ಕೆ ಬಂದ ತಕ್ಷಣ ಆತ್ಮಹತ್ಯೆ ನಡೆಯಿತು, ಗೋಲಿಬಾರ್ ನಡೆಯಿತು, ಅನೇಕ ದುರಂತಗಳು ನಡೆದವು, Accidents ನಡೆದವು, ಇದಕ್ಕೇನು ಮಾಡುವುದು ಎಂದು ನನಗೆ ಅರ್ಥವಾಗುತ್ತಿಲ್ಲ' ಎಂದು ಅವರು ಹೇಳಿಕೊಂಡಿದ್ದಾರೆ. ಆದರೆ ಈ ದಿನಗಳು ಹೋಗುತ್ತವೆ' ಎಂದು ಅವರೇ ಸಮಾಧಾನ ಮಾಡಿಕೊಂಡಿದ್ದಾರೆ. ನಿಮಗ್ಯಾಕೆ ತೊಂದರೆ? 'ಈ ದಿನಗಳು ಹೋಗುತ್ತವೆ, ಈ ಕಷ್ಟದಿಂದ ಪಾರಾಗಲು ನಾನು ಪ್ರಯತ್ನಿಸುತ್ತಿದ್ದೇನೆ'. ಎಂದೂ ಅವರು ಹೇಳಿಕೊಂಡಿದ್ದಾರೆ. ಇದಕ್ಕಾಗಿ ಅವರು ಯಾವ್ಯಾವ ಯಜ್ಞ ಅಥವಾ ಹವನಗಳನ್ನು ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಆದರೆ ಅನೇಕ ಪ್ರಯತ್ನಗಳು ನಡೆದಿವೆ. ಈ ರೀತಿ ವಿಘ್ನಗಳು ಬರುವುದನ್ನು ಶಮನಗೊಳಿಸುವುದಕ್ಕೆ ಅನೇಕ ಯಾಗ, ಯಜ್ಞಗಳು ನಡೆದಿವೆ. ನಡೆಯಲಿ, ಪಾಪ! ಅವರು ಪ್ರಯತ್ನ ಮಾಡಲಿ. ಮಂತ್ರದಿಂದ ಹೊಟ್ಟೆ ತುಂಬುತ್ತದೆ' ಎನ್ನುವುದಾದರೆ, ಅದನ್ನೇ ಮಾಡಿ. ಅದನ್ನೇ ರೈತರಿಗೆ ಕೊಡಿ. ಮಂತ್ರಗಳನ್ನೇ ರೈತರಿಗೆ ಕೊಡಿ, ಅದರಿಂದ ಅವನ ಹೊಟ್ಟೆ ತುಂಬುತ್ತದೆ. ಯಾರು ಸಹ ಬಿತ್ತುವುದೇ ಬೇಡ,

ಬೆಳೆಯುವುದೂ ಬೇಡ, ಗೊಬ್ಬರ ಬೇಡ, ನೇಗಿಲು ಬೇಡ, ಇದನ್ನೇ ಕೊಟ್ಟುಬಿಡಿ. ಮಾನ್ಯ ಈಶ್ವರಪ್ಪನವರು ಬಹಳ ಚೆನ್ನಾಗಿ ಹೇಳಿದರು. ಅದನ್ನು ನಾವೆಲ್ಲರೂ ಕೂಡ ಬಹಳ appreciate ಮಾಡಿದೆವು. 'ನಮ್ಮ ಹೃದಯದಲ್ಲಿ ಕೇಸರಿ ಇದೆ' ಎಂದು ಅವರು ಆಗಲೇ ಹೇಳಿದರು. ಆಗ ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಹೊರಗೆ ಹೋಗಿದ್ದರು. ಅವರ ಮುತ್ತಿನ ಮಾತುಗಳನ್ನು ಅವರು ಕೇಳಲಿಲ್ಲ. ಅಧಿಕಾರಕ್ಕಾಗಿ ಏನು ತ್ಯಾಗ ಮಾಡಬೇಕೋ ಅದನ್ನು ಮಾಡಿಕೊಂಡಿದ್ದೀರಿ. 'ಹೃದಯದಲ್ಲಿ ಕೇಸರಿಯಂತೆ, ಮೇಲೆ ತೋರಿಸುವುದಕ್ಕಾಗಿ ಹಸಿರು ಶಾಲಂತೆ' ಅಂದರೆ ರೈತರ ಮೇಲೆ ನಿಮಗೆ ಪ್ರೀತಿ ಇದೆ, ಆದರೆ ಲಗ್ನ ಮಾತ್ರ ಆರ್.ಎಸ್.ಎಸ್ ಮತ್ತು ಸಂಘ ಪರಿವಾರದ ಜೊತೆಯಲ್ಲಿ ಮಾಡಿಕೊಂಡಿದ್ದೇವೆಂದು ಹೇಳಿಕೊಳ್ಳುತ್ತಿದ್ದೀರಿ.'ಹೃದಯದಲ್ಲಿ ಸಂಘ ಪರಿವಾರ, ಹೊರಗಡೆ ರೈತ', ರೈತರ ಬಗ್ಗೆ ನಿಮಗೆ ಆ ರೀತಿಯ ಚಿಂತನೆ ಇದೆ. ನಿಮ್ಮ ಹೇಳಿಕೆ ಅಷ್ಟೊಂದು ಚೆನ್ನಾಗಿದೆ. ಅದೇ ರೀತಿ ನಿಮ್ಮ ನಡವಳಿಕೆ ಕೂಡ ಇದೆ. ಅದೇ ರೀತಿ ನೀವು ನಡೆದುಕೊಂಡು ಬಂದಿದ್ದೀರಿ. ದೇವರು ನಿಮಗೆ ಒಳ್ಳೆಯದು ಮಾಡಲಿ. ಏಕೆಂದರೆ...

ಶ್ರೀ ಕೆ.ಎಸ್. ಈಶ್ವರಪ್ಪ: ಒಂದ್ನಿಮಿಷ. ಮಾನ್ಯ ಅಧ್ಯಕ್ಷರೆ, 'ದೇವರು ನಿಮಗೆ ಒಳ್ಳೆಯದು ಮಾಡಲಿ' ಎಂದು ಅವರು ಹೇಳಿದ್ದಾರೆ. ಅವರ ಆಶೀರ್ವಾದದಿಂದಲೇ ನಾವೆಲ್ಲಾ ಇಲ್ಲಿಗೆ ಬಂದಿದ್ದೇವೆ. ಇಲ್ಲವೆಂದು ನಾನು ಹೇಳುವುದಿಲ್ಲ. ಕೇಸರಿ ವಿಚಾರವನ್ನು ದಯವಿಟ್ಟು ಹಗುರವಾಗಿ ತೆಗೆದುಕೊಳ್ಳಬಾರದು. ಕೇಸರಿ ತ್ಯಾಗ, ಬಲಿದಾನದ ಸಂಕೇತ. ಎಲ್ಲಾ ಸಾಧು ಸಂತರು, ಇಡೀ ಸಮಾಜಕ್ಕೆ ಮಾರ್ಗದರ್ಶನವನ್ನು ಮಾಡತಕ್ಕ ವ್ಯಕ್ತಿಗಳು ವೈಯಕ್ತಿಕವಾಗಿ ಇರತಕ್ಕಂಥ ಎಲ್ಲಾ ಮೋಹವನ್ನು ಬಿಟ್ಟು ಇಡೀ ಸಮಾಜಕ್ಕೆ ಮಾರ್ಗದರ್ಶನವನ್ನು ಮಾಡುತ್ತಿದ್ದಾರೆ. ಯೌವ್ವನದಲ್ಲಿ ಇರತಕ್ಕಂಥ ಸನ್ಯಾಸಿಗಳು ಅದಕ್ಕೆ ಬೆಂಕಿ ಕೊಟ್ಟು, ಅವರ ವೈಯಕ್ತಿಕ ಜೀವನಕ್ಕೆ ಬೆಂಕಿ ಕೊಟ್ಟು, ತಮ್ಮ ತ್ಯಾಗ ಬಲಿದಾನವನ್ನು ಇಡೀ ಸಮಾಜಕ್ಕೆ ತೋರಿಸುತ್ತಿರುವ ಬಿಂದು ಕೇಸರಿಯಾಗಿದೆ. ಆ ಕೇಸರಿಯನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೃದಯದಲ್ಲಿ ಇಟ್ಟುಕೊಂಡು ಇಡೀ ಕರ್ನಾಟಕ ರಾಜ್ಯದ ರೈತರಿಗೆ ನಿಮ್ಮ ಜೊತೆಯಲ್ಲಿ ನಾನಿದ್ದೇನೆ, ನಿಮ್ಮ ಸಂಕಷ್ಟಕ್ಕೆ ನಾನಿದ್ದೇನೆ, ಖಂಡಿತ ನೀವು ಹಿಂದೆ ಮುಂದೆ ನೋಡಬೇಡಿ, ನಿಮ್ಮ ಬೆಂಬಲಕ್ಕೆ ನಾನಿದ್ದೇನೆಂದು ತೋರಿಸುತ್ತಿದ್ದಾರೆ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಅವರು ಸುಮ್ಮನೆ ತೋರಿಸುತ್ತಿಲ್ಲ. ಅವರ ಭಾವನೆಗಳನ್ನು ನೀವು ಅರ್ಥ ಮಾಡಿಕೊಳ್ಳದೆ ಅದಕ್ಕೆ ಬೇರೆ ಬೇರೆ ಅರ್ಥವನ್ನು ಕೊಟ್ಟು, ಅದನ್ನು twist

ಮಾಡಿ ಹೇಳುತ್ತಿದ್ದೀರಿ. ಹೌದು, ಸಂಘ ಪರಿವಾರವೂ ಸಹ ತ್ಯಾಗ ಬಲಿದಾನದ ಬಗ್ಗೆ ನಮಗೆ ಹೇಳಿ ಕೊಟ್ಟಿದೆ. ಹಾಗಾಗಿ ದಯವಿಟ್ಟು ಕೇಸರಿಯನ್ನು ಹಗುರವಾಗಿ ತೆಗೆದುಕೊಳ್ಳಬೇಡಿ. ಹಸಿರು ಏನು ಹೇಳುತ್ತದೆ ಎಂದರೆ, ಇಡೀ ಕರ್ನಾಟಕ ರಾಜ್ಯದ ರೈತರಿಗೆ 'ನಿಮ್ಮ ಜೊತೆಗೆ ನಾವಿದ್ದೇವೆ' ಎಂದು ತೋರಿಸುವುದಕ್ಕೋಸ್ಕರ ಇರತಕ್ಕ symbol ಅದು. ಅದನ್ನು ಬೇರೆ ಬೇರೆ ಅರ್ಥಕ್ಕೆ twist ಮಾಡಬೇಡಿ....

(ಗೊಂದಲ)

ಶ್ರೀ ಅರ್. ರೋಷನ್‌ಬೇಗ್: ಮಾನ್ಯ ಈಶ್ವರಪ್ಪನವರ ಭಾವನೆಯಂತೆ ಕೇಸರಿ ಕಲರ್, ಈ ದೇಶದಲ್ಲಿ ಬರೇ ಸಂಘ ಪರಿವಾರದ ಆಸ್ತಿಯಲ್ಲ....

ಶ್ರೀ ಕೆ.ಎಸ್. ಈಶ್ವರಪ್ಪ: ಯಾರು ಹಾಗೆ ಹೇಳಿದ್ದು? ಮಾನ್ಯ ರೋಷನ್ ಬೇಗ್‌ರವರು ಮಾತ್ರ ಆ ರೀತಿಯ ಮಾತನ್ನು ಹೇಳಬಹುದು. ಅವರನ್ನು ಬಿಟ್ಟು ಬೇರೆ ಇನ್ಯಾರೂ ಆ ಮಾತನ್ನು ಹೇಳಲಿಕ್ಕೆ ಬರುವುದಿಲ್ಲ....

ಶ್ರೀ ಆರ್. ರೋಷನ್‌ಬೇಗ್: ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ಕೇಸರಿ ಕಲರ್ ಅನ್ನು ಮುಸಲ್ಮಾನರೂ ಕೂಡ ಯೂಸ್ ಮಾಡುತ್ತಾರೆ. ಅಜ್ಮೀರಕ್ಕೆ ನೀವು ಹೋದರೆ, ಅಲ್ಲಿ ಕೊಡುವ ಪ್ರಸಾದ ಕೇಸರಿ ಕಲರ್‌ನಲ್ಲೇ ಇರುತ್ತದೆ...

ಶ್ರೀ ಕೆ.ಎಸ್. ಈಶ್ವರಪ್ಪ: ಅದನ್ನು ಇಲ್ಲವೆಂದು ನಾನು ಹೇಳಿಲ್ಲ.

ಶ್ರೀ ಆರ್. ರೋಷನ್‌ಬೇಗ್: ಈ ದೇಶ ಸೂಫಿ ಸಂತರ ದೇಶ ಕೂಡ ಹೌದು. ಅದು ಕೇವಲ ಸಾಧು ಸಂತರ ದೇಶ ಮಾತ್ರವಲ್ಲ. ಇವರೊಬ್ಬರು ಮಾತ್ರ ಕೇಸರಿ ಕಲರ್ ಯೂಸ್ ಮಾಡುತ್ತಿಲ್ಲ, ನಾವೂ ಕೂಡ ಕೇಸರಿ ಕಲರ್ ಯೂಸ್ ಮಾಡುತ್ತೇವೆ. ಅದು ಸಂಘ ಪರಿವಾರದ ಆಸ್ತಿಯಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ತಮ್ಮ ಮಾತನ್ನು ಮುಂದುವರೆಸಿ.

(ಗೊಂದಲ)

ಶ್ರೀ ವಿ. ಮುನಿಯಪ್ಪ: ಸಾರ್, ಕೇಸರಿ ಬಗ್ಗೆ ಅವರಿಗೆ ಅಭಿಮಾನವಿದೆ, ಅವರು ಅದನ್ನು ಇಟ್ಟುಕೊಳ್ಳಲಿ. ಆದರೆ ಹಿಂದೂ ಸಮಾಜದ ಬಗ್ಗೆ ಅಥವಾ ಗುರು ಪೀಠಗಳ

ಬಗ್ಗೆ, ಎಲ್ಲದರ ಮೇಲೂ ನಮ್ಮದೇ ಹಕ್ಕು ಎನ್ನತಕ್ಕ ಪ್ರತಿಪಾದನೆ ಏನಿದೆ, ಅದು ತಪ್ಪು. ಅದು ನಮಗೆಲ್ಲರಿಗೂ ಸೇರಿರತಕ್ಕದ್ದಾಗಿದೆ. ಆ ಪ್ರತಿಪಾದನೆ ಬಿ.ಜೆ.ಪಿ. ಪಕ್ಷಕ್ಕೊಂದಕ್ಕೇ ಸೇರಿಲ್ಲ. ಅದನ್ನು ತಾವು ಅರ್ಥಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾವು ಮಾನ್ಯ ಈಶ್ವರಪ್ಪನವರನ್ನು ಅಭಿನಂದಿಸಬೇಕಾಗುತ್ತದೆ. ಏಕೆಂದರೆ, ಅವರು ಹೊಸ ಹೊಸ ವಿಚಾರಗಳನ್ನು ಚರ್ಚಿಸಲು ಅನುಕೂಲ ಮಾಡಿಕೊಡುತ್ತಿದ್ದಾರೆ. ಸಾಧು ಸನ್ಯಾಸಿಗಳು ಇವತ್ತು ಕೇಸರಿ ಬಣ್ಣದ ಬಟ್ಟೆಯನ್ನು ಹಾಕಿಕೊಳ್ಳುತ್ತಾರೆ. 'ಅವರು ತ್ಯಾಗ ಜೀವಿಗಳು', ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. 'ಅವರು ಮದುವೆಯಾಗುವುದಿಲ್ಲ', ಅದನ್ನೂ ನಾನು ಒಪ್ಪುತ್ತೇನೆ. ಅವರಿಗೆ ಆ ಬಟ್ಟೆಯನ್ನು ಹಾಕಿಕೊಳ್ಳತಕ್ಕ ಎಲ್ಲಾ ರೀತಿಯ ಅರ್ಹತೆ ಇದೆ. ಆ ಬಟ್ಟೆಗೆ ಒಂದು ಸಂಕೇತ ಇದೆ. ಅದನ್ನು ಅವರು ಹಾಕಿಕೊಂಡಾಗ ಅದು ತ್ಯಾಗ ಬಲಿದಾನದ ಸಂಕೇತವೇ ಆಗುತ್ತದೆ. ಆದರೆ ತಾವೂ ಸಹ ಅದೇ ಬಣ್ಣದ್ದನ್ನು ಹಾಕಿಕೊಳ್ಳುತ್ತಿದ್ದೀರಿ. ತಾವು ಬ್ರಹ್ಮಚಾರಿಗಳೇ? ತಾವು ಸ್ವಾಮಿಗಳು ನಡೆದುಕೊಂಡಂತೆ ನಡೆದುಕೊಳ್ಳುತ್ತಿದ್ದೀರಾ? ತಾವು....

ಶ್ರೀ ಕೆ.ಎಸ್. ಈಶ್ವರಪ್ಪ: ತಮಗೆ ತ್ಯಾಗ ಬಲಿದಾನದ ಅರ್ಥವೇ ಗೊತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ತಾವು ಸ್ವಾಮಿಗಳು ಹಾಕಿಕೊಳ್ಳತಕ್ಕಂಥ ಖಾವಿಯನ್ನು ಬಂಡವಾಳವನ್ನಾಗಿ ಮಾಡಿಕೊಂಡು ನಿಮ್ಮ ಪಕ್ಷದ ಸಿದ್ಧಾಂತವನ್ನು ಇವತ್ತು ಹೇಳಲಿಕ್ಕೆ ಹೊರಟಿದ್ದೀರಲ್ಲಾ?

(ಗೊಂದಲ)

ಅಧ್ಯಕ್ಷರು: ಈ ಬಗ್ಗೆ ಚರ್ಚೆ ಸಾಕು. ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮ ಭಾಷಣವನ್ನು ತಾವು ಮುಂದುವರೆಸಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ತಾವು ಹೃದಯದಲ್ಲಿ ಒಂದು ಬಣ್ಣ ಇಟ್ಟುಕೊಂಡಿದ್ದೀರಿ. ಹೆಗಲ ಮೇಲೆ ಒಂದು ಬಣ್ಣ ಇಟ್ಟುಕೊಂಡಿದ್ದೀರಿ. ಹೇಳುವುದು ಒಂದನ್ನು, ತೋರಿಸುವುದು ಇನ್ನೊಂದನ್ನು. ಇವತ್ತು ನೀವು ಸ್ವಾಮಿಗಳನ್ನು ಗುತ್ತಿಗೆ ತೆಗೆದುಕೊಂಡಿದ್ದೀರೋ?

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಮುಂದುವರೆಸಲಿ. ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೀರಿ, ಇನ್ನು ಸಾಕು. ಚರ್ಚೆ ಬೇಡ.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಮಾನ್ಯ ಈಶ್ವರಪ್ಪನವರೇ, ಕೇಸರಿ ಈಗಲೂ ಕೇವಲ ತ್ಯಾಗದ ಸಂಕೇತವಾಗಿ ಮಾತ್ರ ಉಳಿದಿದೆಯೋ ಅಥವಾ ಜಾತಿ ಅಥವಾ ಸಂಕುಚಿತ ಭಾವನೆಗಳ ಸಂಕೇತವಾಗಿ ಉಳಿದಿದೆಯೋ? ಆ ಬಗ್ಗೆ ಇವತ್ತು ನಿಮ್ಮ ಆತ್ಮಸಾಕ್ಷಿಯಾಗಿ ಹೇಳಿ, ನೋಡೋಣ. ಖಂಡಿತ ಅಲ್ಲ. ಅದು ಅತ್ಯಂತ ಜಾತಿವಾದಿಗಳ, ಅತ್ಯಂತ ಸಂಕುಚಿತ ಭಾವನೆಗಳಿಂದ ಕೂಡಿರುವಂತಹ ಮಟ್ಟಕ್ಕೆ ಇವತ್ತು ನೀವು ಖಾವಿಯನ್ನು ತಂದಿಟ್ಟಿದ್ದೀರಿ...

(ಗೊಂದಲ)

ಅಧ್ಯಕ್ಷರು: ಈ ವಿಷಯದ ಬಗ್ಗೆ ಚರ್ಚೆ ಸಾಕು. ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಮುಂದುವರೆಸಲಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರು ಮಾತನಾಡುವಾಗ, ಮಾನ್ಯ ನಾಯ್ಡುರವರು 'ನೀವು ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದ್ದಿರಿ, ಆಗ ಗೊತ್ತಿರಲಿಲ್ಲವೇ?' ಎಂದು ಕೇಳಿದರು. ಈಗ ನೀವೆಲ್ಲಾ ಒಬ್ಬರಿಗೊಬ್ಬರ ವಿಷಯವನ್ನು ಹೊರಗೆ ತೆಗೆಯುತ್ತಿದ್ದೀರಿ. ಮಾನ್ಯ ನಾಯ್ಡುರವರೂ ಕೂಡ ಮೊದಲು Youth Congressನಲ್ಲೇ ಇದ್ದರು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಇದ್ದೆ-ನಿಜ, ಆದರೆ ಆ ತತ್ವ ಸಿದ್ಧಾಂತಗಳನ್ನು ಬಿಟ್ಟು, ಅಲ್ಲಿ ಪರಿಸ್ಥಿತಿ ಪೂರ್ತಿ ಕಲುಷಿತಗೊಂಡಿದ್ದರಿಂದ, ಭಾ.ಜ.ಪ. ಚೆನ್ನಾಗಿದೆ ಎಂದು ನಾನು ಇಲ್ಲಿಗೆ ಬಂದೆ. ಸುಮಾರು 25 ವರ್ಷಗಳಿಂದ ಈ ಪಕ್ಷದಲ್ಲಿ ನಾನು ಪ್ರಾಮಾಣಿಕ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದೇನೆ. ಇಲ್ಲವೆಂದು ನಾನು ಹೇಳುತ್ತಿಲ್ಲ...

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ನಾಯ್ಡುರವರೇ, ಸುಮ್ಮನೆ ನೀವು ನಮಗೆ ಈ ರೀತಿ ಬೋಧನೆ ಮಾಡುವುದು ಬೇಡ. ನೀವು ಯಾವ ತ್ಯಾಗವನ್ನೂ ಕೂಡ ಮಾಡಿಲ್ಲ.

ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ. ನಿಮ್ಮ ಬಗ್ಗೆ ನಾವೇನೂ ಕೇಳುತ್ತಿಲ್ಲ. ಖಾದಿ ಮತ್ತು ಕೇಸರಿ ಬಗೆಗಿನ ನಿಮ್ಮ ಬೋಧನೆಯನ್ನು ಕೇಳಲಿಕ್ಕಾಗಿ ನಾವು ಇಲ್ಲಗೆ ಬಂದಿಲ್ಲ..

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನನ್ನ ಬಗ್ಗೆ ಏಕೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ನಮ್ಮ ಬಗ್ಗೆ ಏಕೆ ಹೇಳುತ್ತೀರಿ? ನಿಮ್ಮದು ಬೂದಿ ಮುಚ್ಚಿದ ಕೆಂಡದ ಪರಿಸ್ಥಿತಿಯಲ್ಲಿದೆ. ನೀವು ಸ್ವಲ್ಪ ದಿವಸ ಕಾಯಿರಿ. ನಿಮಗೇನು ಆಗುತ್ತದೆಂದು ಗೊತ್ತಾಗುತ್ತದೆ...

(ಗೊಂದಲ)

ಅಧ್ಯಕ್ಷರು: ಎಲ್ಲಾ ಮಾನ್ಯ ಸದಸ್ಯರಲ್ಲಿ ನಾನೊಂದು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಅಧ್ಯಕ್ಷರ ಅನುಮತಿ ತೆಗೆದುಕೊಳ್ಳದೇ, ಯಾರೂ ಕೂಡ ಈ ರೀತಿಯಾಗಿ ಪದೇ ಪದೇ intervene ಆಗುವಂತಹ ಅವಶ್ಯಕತೆ ಇಲ್ಲ. ಯಾರಾದರೂ ಮಾತನಾಡುವಾಗ, ಒಬ್ಬರೇ ಮಾತನಾಡಬೇಕು. ಎಲ್ಲರೂ ಒಟ್ಟಿಗೇ ಎದ್ದು ನಿಂತು ಮಾತನಾಡುವುದು 'ಸಭಾ ಮರ್ಯಾದೆ' ಆಗುವುದಿಲ್ಲ. ಅದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಕಟ್ಟಾ ಸುಬ್ರಮಣ್ಯ ನಾಯ್ಡು ಅವರು ಕಾವಿಯನ್ನು ಹೃದಯದಲ್ಲಿಟ್ಟುಕೊಂಡು, ತಲೆಯ ಮೇಲಿನ ಟೋಪಿ ಮಾತ್ರ ಬಿಳಿಯಾದಾಗಿದೆ ಅದೊಂದು ಚೂರು ಬದಲಾದರೆ ಚೆನ್ನಾಗಿರುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಅಧ್ಯಕ್ಷರೆ, ಒಂದು ಸಣ್ಣ ಕ್ಲಾರಿಫಿಕೇಷನ್, ಕಟ್ಟಾ ಸುಬ್ರಮಣ್ಯ ನಾಯ್ಡು ಅವರು ತತ್ವ ಸಿದ್ಧಾಂತದ ಬಗ್ಗೆ ಹೇಳಿದರು, ನಾನು ಆಕಸ್ಮಿಕವಾಗಿ ಅವರ ಜೊತೆ ಕೈಜೊಡಿಸಿ ಸರ್ಕಾರ ಮಾಡದೆ ಹೋಗಿದ್ದರೆ ಯಾವ ತತ್ವ ಸಿದ್ಧಾಂತಗಳನ್ನು ಇಟ್ಟುಕೊಂಡು ಯಾರ್ಯಾರು ಯಾವ ಪಕ್ಷದಲ್ಲಿರುತ್ತಿದ್ದರೊ, ತತ್ವ ಸಿದ್ಧಾಂತಗಳ ಬಗ್ಗೆ ಅವತ್ತಿನ ದಿವಸಗಳನ್ನು ನೆನೆಸಿಕೊಂಡರೆ ಚೆನ್ನಾಗಿರುತ್ತದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ತಮ್ಮ ಅನುಭವವನ್ನು ಪೂರ್ಣವಾಗಿ ಪಡೆದುಕೊಂಡಿದ್ದೇವೆ, ನಮ್ಮ ನಾಯಕರಿಗೂ ಸಿಕ್ಕಿದೆ, ನಮಗೂ ಸಿಕ್ಕಿದೆ, ನಮ್ಮ ಪಕ್ಷಕ್ಕೂ ಸಿಕ್ಕಿದೆ. ತಮ್ಮ ಆಶೀರ್ವಾದ ಬೆಂಬಲ ನಮಗೂ ಇತ್ತು, ನಮ್ಮ ಆಶೀರ್ವಾದ ಬೆಂಬಲ ತಮಗೂ ಇತ್ತು, ಇಬ್ಬರೂ ಸೇರಿ ಒಟ್ಟಿಗೆ ಸರ್ಕಾರ ರಚನೆ ಮಾಡಿದೆವು. ಆದರೆ ಕೊನೆಯಲ್ಲಿ ಏನಾಯಿತು, ಈ ರಾಜ್ಯದ ಜನರು ಏನು ತೀರ್ಮಾನ ಮಾಡಿದರು ಎಂಬುದು ತಮಗೂ ಗೊತ್ತಿದೆ. ನನಗೆ ತಮ್ಮ ಬಗ್ಗೆ ಗೌರವವಿದೆ. ತಾವು ಒಬ್ಬ Chief Minister ಅಂತ ನಾವು ಅಂದುಕೊಂಡಿದ್ದೆವು, ಆದರೆ ಕೊನೆಯಲ್ಲಿ ಯಾರ ಮಾತು ಕೇಳಿದರೊ, ಏನು ಆಯಿತೊ ಏನೊ ತಾವು ಸ್ವಲ್ಪ ಆ ಕಡೆಗೆ ಹೋದಿರಿ, ತಾವೇ ದಾರಿ ತಪ್ಪಿಸಿದ್ದು, ನಾವು ದಾರಿ ತಪ್ಪಿದ್ದಲ್ಲ.

ಶ್ರೀ ಹೆಚ್.ಡಿ. ಕುಮಾರ ಸ್ವಾಮಿ: ತಾವು, ಇಲ್ಲಿನ ತತ್ವ ಸಿದ್ಧಾಂತ ಮೆಚ್ಚಿಗೆಯಾಗಲಿಲ್ಲ, ಬಿಜೆಪಿಯ ತತ್ವ ಸಿದ್ಧಾಂತ ಮೆಚ್ಚುಗೆಯಾಗಿ ಹೋದೆ ಎಂದು ಹೇಳಿದಿರಿ, ನಾವು ನೀವು ಸೇರಿ ಸರ್ಕಾರವನ್ನು ಮಾಡದೆ ಹೋಗಿದಿದ್ದರೆ, ಆ ತತ್ವ ಸಿದ್ಧಾಂತಗಳನ್ನು ತಲೆಕೆಳಗೆ ಮಾಡಿ ಬಹಳ ಜನ; ಆ ತತ್ವ ಸಿದ್ಧಾಂತವನ್ನು ಬಿಟ್ಟು ಹೊರಗೆ ಹೋಗಲು ತಯಾರಾಗಿದ್ದರು, ಅದನ್ನು ಹೇಳಿದೆ ಅಷ್ಟೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾಯ್ಡು ಅವರೇ ಎಲ್ಲರ ದಾರಿ ತಪ್ಪಿಸಿದ್ದು, ನಿಮ್ಮ ತತ್ವ ಸರಿಹೋಗಲಿಲ್ಲ ಅದಕ್ಕೆ ನಾನು ಬಿಜೆಪಿಗೆ ಬಂದೆ ಎಂದು ಹೇಳಿದರು. ಪಾನಿ ತೇರೆ ರಂಗ್ ಕೈಸೆ ಅಂದರೆ ಜೋ ಡಾಲೆ ವೈಸೆ ಇದರ ಅರ್ಥ, ನೀರಿನ ಬಣ್ಣ ಹೇಗೆ ಎಂದರೆ, ಯಾವ ಬಣ್ಣ ಹಾಕುತ್ತಿರೋ ಅದು, ಕಾಂಗ್ರೆಸ್‌ನಲ್ಲಿದ್ದರೆ ಕಾಂಗ್ರೆಸ್ ಬಣ್ಣ, ಈಗ ಬಿಜೆಪಿಯಲ್ಲಿದ್ದಿರಿ ಬಿಜೆಪಿ ಬಣ್ಣ, ಕುಮಾರ ಸ್ವಾಮಿ ಹೇಳಿದಂತೆ ಇನ್ನೊಂದು ಆಗುವುದಕ್ಕೆ ಹೋಗಬೇಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ತಮ್ಮ ಪಕ್ಕದಲ್ಲಿ ಇರುವವರೆಲ್ಲಾ ಕೆಡಿಸಿದರು, ಎಲ್ಲಾ ಕಡೆ ಎಲ್ಲವು ಆಗಿದೆ. ಜನತಾ ದಳದವರನ್ನು ಕರೆದುಕೊಂಡಿರಿ, ಕಾಂಗ್ರೆಸ್ ಅವರನ್ನು ಕರೆದುಕೊಂಡಿರಿ, ಜನತಾ ದಳವನ್ನು ಭಾಗ ಮಾಡಿದಿರಿ ಎಲ್ಲಾ ಮಾಡಿ ಆಯಿತಲ್ಲ, ನಮ್ಮ ಬಿಜೆಪಿ ಪಕ್ಷದವರನ್ನೂ ಕರೆದುಕೊಂಡಿರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಿಮ್ಮದು ನೀರಿನ ಬಣ್ಣವಿದ್ದಂತೆಯೇ ಆ ನೀರಿಗೆ ಯಾವ ಬಣ್ಣ ಹಾಕಿದರೆ ಆ ಬಣ್ಣ ಆಗುತ್ತದೆಂದು ಹೇಳಿದೆ. ಇವತ್ತು ದಾವಣಗೆರೆಯಾಗಲಿ, ಹಾವೇರಿಯಾಗಲಿ, ಹೊನ್ನಾಳಿಯಾಗಲಿ, ಶಿಕಾರಿಪುರವಾಗಲಿ, ಗದಗ್ ಆಗಲಿ ಈ ಎಲ್ಲಾ

ಕಡೆ ಏನು ಗಲಾಟೆಗಳು ನಡೆದಿವೆ, ಇದಕ್ಕೆ ಆಡಳಿತದ ವೈಫಲ್ಯವೆನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಈ ಮಧ್ಯೆ ಎಲ್ಲವೂ ಕೂಡ ಬಂತು, ಆದರೆ ಒಂದು ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು, ಯಾವಾಗ ತಮ್ಮ ಲಕ್ಷ್ಯವನ್ನು ಆಡಳಿತದ ಕಡೆಗೆ ಕೇಂದ್ರಿಕರಣ ಮಾಡುವುದಿಲ್ಲ ಆವಾಗ ಈ ವೈಫಲ್ಯತೆಗಳನ್ನು ನಾವು ಕಾಣುತ್ತೇವೆ. ಅದಕ್ಕೆ ಎಲ್ಲೆಲ್ಲಿ ಏನೇನು ಕೊರತೆ ಇದೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಇಂಟಿಲಿಜೆನ್ಸ್, ಪೊಲೀಸ್ ಇದೆ, ಅಧಿಕಾರಿಗಳಿದ್ದಾರೆ, ಡಿಸಿ ಇದ್ದಾರೆ ಇಷ್ಟೊಂದು ದೊಡ್ಡ employee army ಇಟ್ಟುಕೊಂಡು, ಇವತ್ತಿನ ದಿವಸ ಅದು ಹೇಗೆ ನಡೆದೆ ಎಂಬುದು ನನಗೆ ಗೊತ್ತಿಲ್ಲವೆಂದು ಹೇಳುವುದಾದರೆ ನಾವು ಏನೆಂದು ತಿಳಿದುಕೊಳ್ಳೋಣ? ಆಡಳಿತದ ಅನುಭವದ ಕೊರತೆ ಎಂದು ತಿಳಿದುಕೊಳ್ಳೋಣವೆ? ಅಥವಾ ನೀವು ನಿರ್ಲಕ್ಷ ಮಾಡಿದಿರೆಂದು ತಿಳಿದುಕೊಳ್ಳೋಣವೊ? ಅಥವಾ ನಿಮಗೆ ರೈತರಿಗೆ ಸಹಾಯ ಮಾಡುವ ಮನಸ್ಸಿಲ್ಲವೆಂದು ಹೇಳಬೇಕಾ ಎಂಬುದನ್ನು ಇವತ್ತಿನ ದಿವಸ ನಾನು ಕೇಳಬೇಕಾಗಿದೆ. ಅದಕ್ಕೆ ಅನೇಕ ಜನ ಇವತ್ತು ವಿಷವನ್ನು ಕುಡಿದು ಸಾಯುತ್ತಿದ್ದಾರೆ. ಆದರೆ ಇವರು ಮಾತ್ರ ಹೇಳುತ್ತಿರುವುದು, ಅವರು ರೈತರೇ ಅಲ್ಲ, ಅದಕ್ಕೆ ಅವರೇನು ಕಾರಣಗಳನ್ನು ಕೊಡುತ್ತಿದ್ದಾರೆ, ಅವು ಸಕಾರಣಗಳಲ್ಲ. ಕೇವಲ ಅವರ ಮನೆಯ ಜಗಳ ಮತ್ತು ವ್ಯತ್ಯಾಸಗಳಿಂದ ಇದು ಕೂಡಿರುತ್ತದೆಂದು ಅವರು ಹೇಳಿದ್ದಾರೆ. ನಿವಾಗಲೂ ಸತ್ಯಕ್ಕೆ ದೂರವಾದ ಹೇಳಿಕೆಗಳನ್ನು ನೀಡುತ್ತಿದ್ದಾರೆ ಮತ್ತು ರೈತರ ಮೇಲೆ ಗೂಬೆಯನ್ನು ಕೂರಿಸಿ, ರೈತರು ಅವರಿಗೆ ಅನೇಕ ಕಡೆ ಏನು ಸಹಾಯ ಮಾಡಿದ್ದರು, ಇವತ್ತು ಅವರು ಪಶ್ಚತಾಪ ಪಡುತ್ತಿದ್ದಾರೆ. ಏಕೆಂದರೆ, ಅಧಿಕಾರಕ್ಕೆ ಬಂದ ಕೂಡಲೆ ಯಾವುದಾದರೂ ಸರ್ಕಾರ ಒಂದೇ ವಾರದಲ್ಲಿ ರೈತನನ್ನು ಗುಂಡೇಟಿನಿಂದ ಕೊಂದಿದ್ದರೆ ಆ ಕೀರ್ತಿಯೂ ಕೂಡ ಈ ಸರ್ಕಾರಕ್ಕೆ ಸಲ್ಲುತ್ತದೆ ಮತ್ತು ಆ ಒಂದು ಶಬಾಷ್‌ಗಿರಿಯನ್ನು ಕೂಡ ಅವರೆ ತೆಗೆದುಕೊಳ್ಳಬೇಕು. ಇಂತಹ ಸರ್ಕಾರ ಅಧಿಕಾರದಲ್ಲಿರುವುದಕ್ಕೆ ಏನು ಹಕ್ಕಿದೆ? ಯಾವ ಕಾರಣಕ್ಕಾಗಿ ನಾವು ಮುಂದುವರೆಯುತ್ತೇವೆಂದು ಹೇಳುತ್ತೀರಿ ಎಂಬುದನ್ನು ಜನರಿಗೆ ಹೇಳಬೇಕು. ಇವತ್ತು ಮನಸ್ಸು ಬಂದಂತೆ ಮಾತನಾಡುವುದು, ಹೇಳುವುದು. ಅದಕ್ಕೆ ಹೇಳಿದ್ದು, ಬಾಯಿ ಒಂದು ಫ್ರೀ ಇದೆ, ಏನು ಬೇಕಾದರೂ ಹೇಳುವುದು, ಬೇಕಾಗಿದ್ದನ್ನು ಪ್ರಾಮಿಸ್ ಮಾಡುವುದು, ಏನು ಬೇಕಾಗಿದ್ದನ್ನು ನಾವು ಮಾಡುತ್ತೇವೆಂದು ಹೇಳುವುದು ಈ ಒಂದು ದಿಕ್ಕಿನಲ್ಲಿ ಇವತ್ತು ಈ ಸರ್ಕಾರ ನಡೆದಿದೆ. ನಿಮಗೆ ಗೊತ್ತಿದೆ, ಅನೇಕ ಸಾರಿ ಸಾಲದ ಬಾಧೆಯಿಂದ ತೀರಿಕೊಂಡಂತಹ ರೈತರಿಗೆ ನೀವು 1 ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕೆಂದು ಮಾಡಿದ್ದಿರಿ, ಈ ಬಗ್ಗೆ ಹಿಂದಿನಿಂದ ಸರ್ಕಾರ ಆಜ್ಞೆ ಇದೆ.

Vol. 2. F-11

ಆದರೆ ಇವತ್ತು ಎಷ್ಟೊ ಜನ ಇವತ್ತು ನಮ್ಮ ಬೇಳೆ ಬೆಳೆಯುವುದಿಲ್ಲ ಅಥವಾ ಮುಂದೆ ನಮಗೆ ಉತ್ಪತ್ತಿ ಬರುವುದಿಲ್ಲವೆಂದು ತಿಳಿದುಕೊಂಡು ನಿರಾಶರಾಗಿ ಅವರು ತಮ್ಮ ಜೀವವನ್ನು ಬಲಿ ಕೊಡುತ್ತಿದ್ದಾರೆ. ಅವರಿಗೆ ನಾವು ಏನೂ ಕೊಡುವುದಿಲ್ಲ, ಪರಿಹಾರ ಕೊಡುವ ಅವಶ್ಯಕತೆ ಇಲ್ಲ ಎಂದು ನೀವು ಅನೇಕ ಕಡೆ ನೀವು ಹೇಳಿರುವುದು ನಿಜವಾಗಿಯೂ ಇದು ನಿಮಗೆ ಗೌರವವನ್ನು ತರುತ್ತದೆಯೇ? ನಿಮ್ಮ ಮತ ಕ್ಷೇತ್ರದಲ್ಲೇ ಎರಡು ಸಾವಾಗಿದೆ, ಅಲ್ಲಿ ಏನು ನಡೆದಿದೆ ಎಂದು ತಿಳಿದುಕೊಳ್ಳಿ. ನನಗೆ ಆಶ್ಚರ್ಯವೆನಿಸುತ್ತಧೆ, ನಾನು ಕೂಡ ನಿನ್ನೆ ಅಲ್ಲಿಗೆ ಹೋಗಿದ್ದೆ, ಶಿರಾಳಕೊಪ್ಪ ತಾಲ್ಲೂಕಿನಲ್ಲಿರುವ ಆ ಅಂಜನಾಪುರಕ್ಕೆ ಹೋಗಿ ಅಲ್ಲಿನ ರೈತರನ್ನು ನಾನು ಭೇಟಿಯಾದೆ. ಮೃತ ನಾರಾಯಣ ಸ್ವಾಮಿಯವರ ಪತ್ನಿಯನ್ನು ಭೇಟಿಯಾಗಿ ಕೇಳಿದಾಗ ವಿವರವನ್ನು ಕೊಡುತ್ತಿದ್ದರು. ನಮ್ಮ ಮನೆಯವರು 4–5 ದಿವಸ ಗೊಬ್ಬರ ತರಲು ಹೋಗಿದ್ದರು, ತಿರುಗಿದರು ಸಿಗಲಿಲ್ಲ, ನಮಗೆ ಜಮೀನು ಇದೆ, ಅಲ್ಲಿ ಎಲ್ಲರೂ ಆದಷ್ಟು ಬಿತ್ತನೆಯನ್ನು ಮಾಡಿದ್ದಾರೆ, ನಮ್ಮದು ಮಾತ್ರ ಬಿತ್ತನೆಯಾಗಿಲ್ಲ, ನೀನು ಏಕೆ ಖಾಲಿ ಕೈಯಲ್ಲಿ ಬಂದಿರಿ ಎಂದು ಕೇಳಿದ್ದು ನಿಜ, ಆದರೆ ಅವರು ಈ ರೀತಿ ವಿಷ ಕುಡಿದು ಸತ್ತಿದ್ದಾರೆ. ಅದಕ್ಕೆ ಏನು ಹೇಳಿದರು, ಮನೆಯಲ್ಲಿ ಏನೋ ಟೆಂಟ್ ತಂದಿದ್ದ, ಅದರ ರೆಂಟ್ ಕೊಡಬೇಕಾಗಿತ್ತು, ಆ ಬಗ್ಗೆ ತಂದೆ ಮಕ್ಕಳು ಜಗಳವಾಡಿದರು, ಅದರಲ್ಲಿ ವಿಷ ಕುಡಿದು ಸತ್ತು ಹೋದ ಎಂದರು. ಅಲ್ಲಿ ಲವ ಕುಶವೆಂದು ಎರಡು ಮಕ್ಕಳಿದ್ದಾರೆ, ಖುದ್ದಾಗಿ ತಾಯಿ ಆ ಎರಡು ಮಕ್ಕಳು ಅದನ್ನೇ ಹೇಳುತ್ತಾರೆ, ಊರಿನ ಜನರು ಅದನ್ನೇ ಹೇಳುತ್ತಾರೆ. ಇದು ಮುಖ್ಯ ಮಂತ್ರಿಯವರ ಮತಕ್ಷೇತ್ರ ವಾಗಿದೆ. ಇಲ್ಲಿ ನಾನು ರಾಜಕೀಯ ಮಾಡಲು ಬಂದಿಲ್ಲ ಎಂದು ನಾನು ಹೇಳಿದ್ದೇನೆ. ಆ ಊರಿನ ಜನ ಆ ರೀತಿ ಹೇಳುವಾಗ ಮುಖ್ಯಮಂತ್ರಿಗಳು, ಇದು ಮನೆ ಜಗಳದಿಂಧಾಗಿದ್ದು, ಇದಕ್ಕೆ ಏನೂ ಸಂಬಂಧವಿಲ್ಲ ಎಂದು ಹೇಳಿದರು. ನಾನು ಟಿವಿಯಲ್ಲೂ ಸಹ ನೋಡಿದೆ, ಕಟ್ಟಿಗೆ ಚಕ್ಲಿ ಹೊಡೆದು ಮಾಡಿದ, ಅದನ್ನೇ ಗಂಧದ ಹಾರವೆಂದು ತಿಳಿದುಕೊಂಡು ಜನರು ಹಾಕುತ್ತಿರುತ್ತಾರೆ, ಇಲ್ಲವೆಂದರೆ ಅದಕ್ಕೆ ವಾಸನೆ ಬರಲು ಸೆಂಟ್ ಹೊಡೆಯುತ್ತಾರೆ, ಆ ಹಾರ ಇವರ ಎಡಗೈನಲ್ಲಿ ಇತ್ತು, ಎಡಗೈನಿಂದ ಇಟ್ಟರು ಅವರನ್ನು ಬೇಕಾದರೆ ಕೇಳಿರಿ. ತಾವು ಈ ಗೌರವ ತೋರಿಸುವುದಕ್ಕೆ ಏತಕ್ಕೆ ಹೋಗುತ್ತೀರಿ? ಹೋಗಬೇಡಿ, if you do not want to resptect that body, do not go, ಏತಕ್ಕೆ ಹೋಗುತ್ತೀರಿ ನಿಮಗೆ ಅದರ ಬಗ್ಗೆ ಗೌರವವಿಲ್ಲ, ಮರ್ಯಾದೆ ಇಲ್ಲವೆನ್ನುವುದಾದರೆ ಹೋಗುವುದು ಬೇಡ. ನೀವು ನಡೆದುಕೊಂಡ ಧಾಟಿಯನ್ನು ನೀವು ಟಿವಿಯಲ್ಲಿ ನೋಡಿರಬಹುದು. ಈ ಬಗ್ಗೆ ಯಾರು ಕೂಡ

ಅಲ್ಲಗಳಿಯುವುದಿಲ್ಲವೆಂದು ನಾನು ಭಾವಿಸುತ್ತೇನೆ, ಮತ್ತೆ ನಾನು ರಾಜಕೀಯ ಮಾಡಬೇಕೆಂದು ಇಲ್ಲ ಅಥವಾ ಈ ಬಗ್ಗೆ ಅಲ್ಲಿ ನಾನು ಹೇಳಿಕೆಗಳನ್ನು ನೀಡಿ ಬಂದಿಲ್ಲ, ಇಲ್ಲಿ ಈ ಸದನದಲ್ಲಿ ಹೇಳುತ್ತಿದ್ದೇನೆ. ಏನು ನೀವು ಎಡಗೈನಲ್ಲಿ ಹಾರವನ್ನು ಬಿಸಾಕಿ ಬರುತ್ತೀರಾ? ಮತ್ತೆ ಇಲ್ಲಿ ರೈತರು ಸತ್ತಿಲ್ಲ, ಯಾವುದಕ್ಕಾಗಿ ನಡೆದಿದೆ ಎಂದು ನನಗೆ ಗೊತ್ತಿದೆ, ಅದೇನು ನನ್ನ ಜಿಲ್ಲೆ, ತಾಲ್ಲೂಕು, ರಸಗೊಬ್ಬರ ಹೇಗೆ ಕೊರತೆ ಇರುತ್ತದೆ? ಅಂದರೆ ನಿಮ್ಮಲ್ಲಿ ಕೊರತೆ ಇಲ್ಲ ಬೇರೆ ಕಡೆ ಕೊರತೆ ಏತಕ್ಕೆ ಬಂತು? ನೀವೆ, ನಮ್ಮಲ್ಲಿ ಕೊರತೆ ಹೇಗೆ ಬರುತ್ತದೆ, ಹೇಗೆ ಸಿಗುವುದಿಲ್ಲ ಹೇಳುತ್ತೀರಿ. ಮತ್ತೆ ಇನ್ನೊಂದು ಕಡೆ ಪತ್ರಿಕೆಯಲ್ಲಿ ಬಂದಿರುವುದು, ರಸಗೊಬ್ಬರವನ್ನು ಶಿರಾಳ ಕೊಪ್ಪದಲ್ಲಿ ಸಾಗಿಸುವಾಗ ಜನ ಅದನ್ನು ಹಿಡಿದು ನಿಲ್ಲಿಸಿ ಅವರೇ ವಿತರಣೆ ಮಾಡಿಕೊಂಡರೆಂಬುದು ಬಂದಿದೆ. ಅದು ನಿಮ್ಮ ಹೊಲಕ್ಕೆ ಹೋಗುತ್ತಿತ್ತೋ ಎಲ್ಲಿಗೆ ಹೋಗುತ್ತಿತ್ತೋ ನನಗೆ ಗೊತ್ತಿಲ್ಲ, ವೆರಿಫೈ ಮಾಡುವವರೆಗೆ ನಾನು ಅಪಾದನೆ ಮಾಡುವುದಕ್ಕೆ ಹೋಗುವುದಿಲ್ಲ, ನೀವೆ ಹೇಳಬೇಕು. ರಸಗೊಬ್ಬರದ ಕೊರತೆ ಇಲ್ಲವೆಂದು ನೀವೆ ಹೇಳಿದ ಮೇಲೆ ಅಲ್ಲಿ ಸಿಗಲಿಲ್ಲವೇಕೆ?

ಒಬ್ಬರು ಜೆಡಿಎಸ್‌ನವರು ವಿಎಸ್‌ಐಎಲ್ ಸೊಸೈಟಿಯ ಅಧ್ಯಕ್ಷರಾಗಿದ್ದಾರೆ. ಅವರು explain ಮಾಡಿ ಏನೂ ಇಲ್ಲ, ಇಲ್ಲಿ ರಸಗೊಬ್ಬರಕ್ಕೆ ನಾವು ಇಂಡೆಂಟ್ ಹಾಕಿಲ್ಲ, ಎಷ್ಟು ಹಣ ಬೇಕು ಅಷ್ಟು ಹಣ ಇಲ್ಲದೇ ಇರುವ ಕಾರಣಕ್ಕೆ ನಾವು ಎಷ್ಟು ತರಿಸಿಕೊಂಡಿದ್ದೇವೆ ಅದನ್ನು ಹಂಚಿದ್ದೇವೆ. ಪ್ರೈವೇಟ್ ಏಜೆನ್ಸಿಯವರು ಅವರು ಹೆಚ್ಚಿನ ರೀತಿಯಲ್ಲಿ ತರಿಸುತ್ತಿದ್ದರು. ಕಾಳಸಂತೆಯಲ್ಲಿ ಮಾರುವುದಕ್ಕೆ ಕೊಡುವುದಿಲ್ಲವೆಂದು ಹೇಳಿ, ಲಾಭ ಕಡಿಮೆ ಸಿಗುತ್ತದೆ ಎಂದು ಹೇಳಿ ಇಂಡೆಂಟ್ ಹಾಕಿ ತರಿಸುತ್ತಿಲ್ಲ. ಅದಕ್ಕಾಗಿ ರಸಗೊಬ್ಬರದ ಕೊರತೆಯಿಂದ ಇವತ್ತು ಈ ಘಟನೆ ನಡೆದಿದೆ ಎಂಬ ಮಾತು ಆ ನಾರಾಯಣಸ್ವಾಮಿ ಮನೆ ಮುಂದೆ ಒಬ್ಬ ವಿಎಸ್‌ಐಎಲ್ ಸಂಘದ ಅಧ್ಯಕ್ಷ ಹೇಳಿದ. ನಾವು ಇನ್ನು ಇನ್ನೊಂದು ಊರಿಗೆ ಹೋಗಿ ಅಲ್ಲಿ ಕೂಡ ಗೌಡ ಸಮುದಾಯದ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿದಾನೆಂದು ಹೇಳಿ ಅಲ್ಲಿ ಹೋಗಿ ಬರುವವರೆಗೆ ಅಲ್ಲಿ ಅವನಿಗೆ ಹೊಡಿ ಬಡಿ ಎಂದು ಮಾಡಿದ್ದಾರೆ. ಕೊರತೆ ಇದೆ ಎಂದು ಹೇಗೆ ಹೇಳಿದೆ, ಕೊರತೆ ಇಲ್ಲ. ಕೊರತೆ ಇದ್ದರೂ ಕೂಡ ಕೊರತೆ ಇಲ್ಲವೆಂದು ನಿಮ್ಮ ಮತ ಕ್ಷೇತ್ರದ ಜನರಿಗೆ ಹೇಳಿದ್ದೀರಾ? ಏನಿದು ಮಾನ್ಯ ಮುಖ್ಯಮಂತ್ರಿಗಳು ಇದ್ದಂತಹ ಮತ ಕ್ಷೇತ್ರದಲ್ಲಿ ಕಾನೂನು ಕೈಯಲ್ಲಿ ತೆಗೆದುಕೊಂಡು ನಿಮ್ಮ ಕಾರ್ಯಕರ್ತರು ಅವರ ಮೇಲೆ ಹಲ್ಲೆ ಮಾಡುತ್ತಿದ್ದಾರೆಂದರೆ ಇದನ್ನು ನಾವು ಸಹಿಸಬೇಕಾ? ಇದು ನಾವೆಲ್ಲರೂ

ನಾಚಿಕೆಯಿಂದ ತಲೆ ತಗ್ಗಿಸಬೇಕಾದ ಕೆಲಸ. ಹೊರಗಡೆ ನೀವು ರಕ್ಷಣೆ ಮಾಡುವವರು ನಿಮ್ಮ ಮತ ಕ್ಷೇತ್ರದಲ್ಲಿ ಇವತ್ತಿನ ದಿವಸ ಒಂದು ಡಿಸೆಂಟ್ ವಾಯ್ಸ್ ಬಂತು ಎಂದರೆ, ಯಾರಾದರೂ ಅದಕ್ಕೆ ಪ್ರತಿಭಟನೆ ಮಾಡಿದರೆ ಆ ಪ್ರತಿಭಟನೆ ಮಾಡುವವನಿಗೆ ಬಡಿಗೆಯಿಂದ ಹೊಡೆಯುವುದು ಅವನ ಮೇಲೆ ಹಲ್ಲೆ ಮಾಡುವುದು, ಸತ್ಯ ಮರೆ ಮಾಚಿ ನೀನು ಅಸತ್ಯ ನುಡಿ ಎಂದು ಹೇಳುವುದು, ಇದು ಯಾವ ನ್ಯಾಯ? ನಿಮಗೆ ಸರ್ವಾಧಿಕಾರ ಕೊಟ್ಟಿದ್ದಾರಾ, ಎಲ್ಲಾ ಹಕ್ಕು ನಿಮಗೆ ಇದೆಯಾ? ಈ ರೀತಿಯಾಗಿ ನಿಮ್ಮ ಮತ ಕ್ಷೇತ್ರದಲ್ಲಿ ದೌರ್ಜನ್ಯ ನಡೆದರೆ ಬೇರೆ ಕಡೆ ಯಾವ ರೀತಿಯಾಗಿ ದೌರ್ಜನ್ಯವನ್ನು ನೀವು ತಡೆಹಿಡಿಯುತ್ತೀರಿ ಎನ್ನತಕ್ಕಂಥದ್ದು ಆತ್ಮಸಾಕ್ಷಿಯಾಗಿ ನೀವು ಹೇಳಬೇಕು. ಅಲ್ಲಿ ಯಾರೂ ಕೂಡ ಬೇರೆಯವರು ಪ್ರಚೋದನೆ ಮಾಡುವವರು ಇರಲಿಲ್ಲ. ಯಾರು ಮಾಡಿದ್ದಾರೆ ಅವರಿಗೆ ಅರೆಸ್ಟ್ ಮಾಡಿದ್ದೀರಾ ಇಲ್ಲ, ಇವತ್ತಿ ದಿವಸ ಏನಾಗಿದೆ ಎಂದರೆ ರೈತರು ನ್ಯಾಯವಾಗಿ ರಸಗೊಬ್ಬರ ಸಿಕ್ಕಿಲ್ಲವೆಂದು ಪ್ರತಿಭಟನೆ ಮಾಡುವ ಕಡೆ ಅವರನ್ನು ಅರೆಸ್ಟ್ ಮಾಡಿ ಒಳಗಡೆ ಹಾಕುತ್ತೀರಿ. ಎಲ್ಲಿ ನಿಮ್ಮ ಪಕ್ಷದವರು ಈ ರೀತಿಯಾಗಿ ಗೂಂಡಾಗಿರಿ ಮಾಡುತ್ತಾರೆಯೋ ಅಥವಾ ಹಲ್ಲೆಗಳು ಮಾಡುತ್ತಾರೋ ಅಲ್ಲಿ ಕೇಸ್ ಇಲ್ಲ. ಅವರಿಗೆ ಫ್ರೀ ಬಿಟ್ಟಿದ್ದೀರಾ? ಇದು ಡೆಮಾಕ್ರಸಿ ಏನು? ಡಿಕ್ಟೇಟರ್‌ಶಿಪ್ ಅಧ್ಯಕ್ಷರೆ, ಒಂದು ಕಡೆ ಗಾದೆ ಮಾತು ಹೇಳುತ್ತಾರೆ. ಕೂಸು ಹುಟ್ಟಿದ ಕೂಡಲೇ ಅದರ ಲಕ್ಷಣ ತೊಟ್ಟಿಲಿನಲ್ಲಿ ಕಾಣುತ್ತದೆ ಎಂದು ಹೇಳಿ. ಅದೇ ಲಕ್ಷಣಗಳು ಇವರ ನಡವಳಿಕೆ ಹೇಗಿದೆ ಎಂದು ಕೇವಲ 22 ದಿವಸಗಳಲ್ಲಿ ಇವರು ತೋರಿಸುತ್ತಿದ್ದಾರೆ. ಇವರ ನಡೆ ನುಡಿಯಲ್ಲಿ ಯಾವ ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆ ಎನ್ನತಕ್ಕಂಥದ್ದು ಅವರ ಮತಕ್ಷೇತ್ರದಲ್ಲಿ ಆಗಿದೆ. ನಾನು ಎಂದೂ ಕೂಡ ಯಾವುದೇ ಮತ ಕ್ಷೇತ್ರಕ್ಕೆ ಹೋಗಿ ರಾಜಕೀಯ ಮಾಡುವುದಕ್ಕೆ ಎಂದೂ ಕೂಡ ಹೋಗಲಿಲ್ಲ. ಆದರೆ ಅಲ್ಲಿ ಇವತ್ತಿನ ದಿವಸ ಇಬ್ಬರು ರೈತರು ಸತ್ತಿದ್ದಾರೆ. ನಾನು ವಿರೋಧ ಪಕ್ಷದ ನಾಯಕನಾಗಿ ಆ ಕರ್ತವ್ಯವನ್ನು ನಿಭಾಯಿಸುವುದಕ್ಕಾಗಿ ಹೋದೆ. ಆದರೆ ಅಲ್ಲಿ ಹೋದರೆ, ಅಲ್ಲಿ ಕೇಳಿ ಬಂದ ತಕ್ಷಣ ಅವರ ಮೇಲೆ ಹಲ್ಲೆ ಮಾಡಿದ್ದಾರೆ. ನಾವು ಬಿಟ್ಟ ತಕ್ಷಣ ಯಾವ ರೀತಿಯಾಗಿ ಹಲ್ಲೆ ಮಾಡಿದ್ದಾರೆಂದು ನೀವು ಟಿವಿಯಲ್ಲಿ ನೋಡಿರಬಹುದು. ಮಾಧ್ಯಮದಲ್ಲಿ ಬಂದಂಥ ಸುದ್ದಿ ಮೇಲೆ ಏನು ಆ್ಯಕ್ಟ್ ಮಾಡಿದ್ದೀರಿ, ಇದರ ಮೇಲೆ ಕೇಸ್ ರಿಜಿಸ್ಟರ್ ಮಾಡಿದ್ದೀರಾ, ಸಂಬಂಧಪಟ್ಟ ಇನ್‌ಸ್ಪೆಕ್ಟರ್‌ಗೆ ಫೋನ್ ಮಾಡಿ ಹೇಳಿದಿರಾ? ನನ್ನ ಮತ ಕ್ಷೇತ್ರದಲ್ಲಿ ಈ ರೀತಿಯಾಗಿ ಮಾಡಬಾರದಾಗಿತ್ತು ಎಂದು ಹೇಳಿದಿರಾ? ಅದು ಏನೂ ಇಲ್ಲ. ಹೊಡೆದರಲ್ಲ ಇನ್ನೊಂದೆರಡು ಬಾರಿಸಿ ಎಂದು ಹೇಳುವವರು ಇವರು. ನಿಲ್ಲಿಸಿ ಎಂದು ಹೇಳುವುದಿಲ್ಲ. ಏಕೆಂದರೆ ಅಲಲ್ಲಿ

ನಿಮ್ಮದೇ ಪಕ್ಷದವರು ರಸಗೊಬ್ಬರದ ಕೊರತೆ ಇದೆ ಎಂದು ಹೇಳಿ ಹೋದವನಿಗೆ ಹಾವೇರಿಯಲ್ಲಿ ಗುಂಡು ಹಾರಿಸಿದಿರಿ. ನಿಮ್ಮ ಮತ ಕ್ಷೇತ್ರದಲ್ಲಿ ನಿಮಗೆ ವಿರೋಧವಾಗಿದ್ದಾನೆಂದು ಸ್ವಲ್ಪ ವಾಸನೆ ಬಂದರೂ ಕೂಡ, ಅವನಿಗೆ ಚೆನ್ನಾಗಿ ಥಳಿಸುತ್ತೀರಿ ಎನ್ನುವುದಕ್ಕೆ ನಿನ್ನೆಯ ಉದಾಹರಣೆಯೇ ಸಾಕು ಎನ್ನತಕ್ಕಂತಹ ಮಾತನ್ನು ನಾನು ನಿಮಗೆ ಹೇಳುತ್ತಿದ್ದೇನೆ. ಹೀಗೆ ಕಾನೂನನ್ನು ಕೈಯಲ್ಲಿ ತೆಗೆದುಕೊಂಡು ಡಿಕ್ಟೇಟರ್ ಆಗಿ ವರ್ತನೆ ಮಾಡತಕ್ಕಂತಹ ಕೆಲಸವನ್ನು ನೀವು ಇವತ್ತು ಮಾಡುತ್ತಿದ್ದೀರಿ. ಇದು ನಿಜವಾಗಿಯೂ ನಿಮಗೆ ಶೋಭೆ ತರುವುದಿಲ್ಲ. ಇದರಿಂದ ನಿಮಗೆ ಕೆಟ್ಟ ಹೆಸರು ಬರುತ್ತದೆ. ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಅಂತಿಮವಾಗಿ ನೀವು ಮಾಡಿದಂತಹ ಪಾಪವನ್ನು ಜನ ಸಹಿಸದೆ, ಕೊನೆಗೆ ರೊಚ್ಚಿಗೆದ್ದು ಕಾನೂನನ್ನು ಕೈಗೆ ತೆಗೆದುಕೊಳ್ಳತಕ್ಕಂತಹ ಪರಿಸ್ಥಿತಿ ಬರುತ್ತದೆ. ಈ ಎಚ್ಚರಿಕೆ ಮಾತನ್ನು ನಾನು ನಿಮಗೆ ಹೇಳುತ್ತಿದ್ದೇನೆ. ಜನ ಒಂದು ಸಾರಿ, ಎರಡು ಸಾರಿ ಮತ್ತು ಮೂರು ಸಾರಿ ಸಹಿಸುತ್ತಾರೆ. ನೋಡುತ್ತಾರೆ, ಆದರೆ ಅವರ ತಾಳ್ಮೆಗೂ ಮಿತಿ ಇರುತ್ತದೆ. ರೈತರ ತಾಳ್ಮೆಗೂ ಮಿತಿ ಇರುತ್ತದೆ. ಇದೇ ರೀತಿಯಾಗಿ ನಿಮ್ಮ ದೌರ್ಜನ್ಯ ದಬ್ಬಾಳಿಕೆ ಮುಂದುವರೆಸಿದರೆ, ಖಂಡಿತವಾಗಿ ಮುಂದೆ ಬರತಕ್ಕಂತಹ ದಿನಗಳಲ್ಲಿ ಅದೇ ರೀತಿಯಾಗಿ ಜನ ನಿಮಗೆ ಪ್ರತಿ ಉತ್ತರ ಕೊಡುತ್ತಾರೆ ಎನ್ನತಕ್ಕಂತಹ ಎಚ್ಚರಿಕೆ ಮಾತು ಇವತ್ತು ಸ್ಪಷ್ಟವಾಗಿ ನಾನು ನಿಮಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಎರಡನೆಯದು, ಇವತ್ತಿನವರೆಗೂ ನೀವು ಅದೇ ಮಾತನ್ನು ಹೇಳುತ್ತಿದ್ದೀರಿ. ರಸಗೊಬ್ಬರದ ಕೊರತೆ, ಕೇಂದ್ರ ಸರ್ಕಾರ ಸಹಕರಿಸಲಿಲ್ಲ. ಅಲ್ಲಿ ಡಾ: ಶರ್ಮ ಬಂದಿದ್ದರು, ಶರ್ಮರವರು ಬಂದು ಹೇಳಿದರು. ನಮ್ಮಲ್ಲಿ ರಸಗೊಬ್ಬರ ಎಷ್ಟು ಇದೆ, ಎಲ್ಲಿದೆ, ಎಷ್ಟು ಕೊಟ್ಟಿದ್ದೇವೆ ಎನ್ನತಕ್ಕಂತಹ ಮಾತನ್ನು ಹೇಳಿದರು. ಇನ್ನು ನಮಗೆ ರಸಗೊಬ್ಬರ ಬೇಕು, ಕೇಂದ್ರ ಸರ್ಕಾರ ಸಹಕರಿಸಬೇಕು ಎನ್ನುವ ಮಾತು ಬಿಟ್ಟು, ಅವರಿಂದಲೇ ಇದು ಆಗಿದೆ ಎನ್ನತಕ್ಕಂತಹ ಮಾತುಗಳನ್ನು ಹೇಳುತ್ತೀರಿ. ಶರ್ಮ ಏನು ಹೇಳಿದರು, ಪತ್ರಿಕಾಗೋಷ್ಟಿಯಲ್ಲಿ ಅಂಕಿ ಆಂಶ ಕೊಟ್ಟು, ನಿಮ್ಮ ಅಧಿಕಾರಿಗಳ ಸಮ್ಮುಖದಲ್ಲೇ ಈ ಮಾತನ್ನು ಹೇಳಿದರು. ಏಪ್ರಿಲ್ ತಿಂಗಳಿನಲ್ಲಿ ಬೇಡಿಕೆ ಇರತಕ್ಕಂಥದ್ದು 38.200 ಟನ್, ಪೂರೈಕೆ ಆಗಿದ್ದು 1.82 ಲಕ್ಷ ಟನ್, ಮೇ ತಿಂಗಳನಲ್ಲಿ 61,000 ಟನ್, ಪೂರೈಕೆ ಆಗಿದ್ದು 2 ಲಕ್ಷ ಟನ್, ಡಿಎಪಿ ಏಪ್ರಿಲ್ ತಿಂಗಳಿನಲ್ಲಿ ಬೇಡಿಕೆ ಇರತಕ್ಕಂಥದ್ದು 27,000 ಟನ್, ಪೂರೈಕೆ ಆಗಿರುವುದು 25,000 ಟನ್, ಆದರೆ ಮಾರಾಟ ಆಗಿರುವುದು 12,000 ಟನ್ ಮಾತ್ರ, ಉಳಿದಂತೆ ಡಿಎಪಿ ಆಗಲಿ, ಯೂರಿಯಾ ಆಗಲಿ ಎಲ್ಲಿ ಹೋಯಿತು? ಯಾರ ಸ್ಟಾಕ್‌ನಲ್ಲಿದೆ? ಯಾರು ಸ್ಟಾಕ್ ಮಾಡಿಕೊಂಡಿದ್ದಾರೆ, ಯಾವ ಏಜೆಂಟ್‌ಗಳ ಹತ್ತಿರ ಇದೆ?

ಯಾವ ಸೊಸೈಟಿಗಳ ಹತ್ತಿರ ಇದೆ? ಇದನ್ನು ನಾವು ಕಂಡುಹಿಡಿಯುವುದು ಬಿಟ್ಟು ಕೇಂದ್ರ ಸರ್ಕಾರದವರು ಮಾಡಿದರು, ಇವರಿಂದಲೇ ಆಯಿತು, ಅವರಿಂದಲೇ ಆಯಿತು, ಅನೇಕ ಸಾರಿ ನಾವು ಏನು ಇಂಡೆಂಟ್ ಕೊಡುತ್ತೇವೆ, ತರಿಸಿಕೊಳ್ಳುತ್ತೇವೆ, ಅನೇಕ ಏಜೆಂಟರು ಮಾರಾಟ ಮಾಡುವುದಿಲ್ಲ. ಅದರಿಂದ ಸಾಕಷ್ಟು ಲಾಭ ಸಿಗುತ್ತದೆ ಎಂದು ಅವರೂ ಇಟ್ಟುಕೊಳ್ಳುತ್ತಾರೆ. ಆ ಕಳ್ಳಸಂತೆಕೋರರ ಮೇಲೆ ಏನಾದರೂ ಕ್ರಮ ಜರುಗಿಸುತ್ತೀರಾ? ಆ ಏಜೆಂಟ್ ಮೇಲೆ ಏನಾದರೂ ಕ್ರಮ ಜರುಗಿಸುತ್ತೀರಾ? ಅದೆಲ್ಲಾ ಬಿಟ್ಟರಿ ರೈತರಿಗೆ ಬೈಯುವುದು ಒಂದೇ ಕೆಲಸ. ರೈತರಿಂದಲೇ ಇದು ಆಗುತ್ತಿದೆ, ರೈತರು ಬೇಕೆಂದು ಮಾಡುತ್ತಿದ್ದಾರೆ, ವಿರೋಧ ಪಕ್ಷದವರು ಮಾಡುತ್ತಿದ್ದಾರೆ, ಇವೆರಡೇ ಪದ. ಮೂರನೆಯದು ಕೇಂದ್ರ ಸರ್ಕಾರದ ತಪ್ಪು. ಇದು ಹೇಳಿಕೊಂಡು ಬರುತ್ತಿದ್ದೀರಿ ಹೊರತು ಇದು ಅವರೇ ನಿಮಗೆ ಕೊಟ್ಟಿದ್ದು. ಇದಕ್ಕೆ ನೀವು ಏನು ಉತ್ತರ ಕೊಡುತ್ತೀರಿ? ನಿಮ್ಮ ಕಣ್ಣು ಎದುರೇ ಹೇಳಿದ್ದು. ಬೆಂಗಳೂರಿಗೆ ಬಂದೇ ಈ ಮಾತನ್ನು ಹೇಳಿದ್ದಾರೆ. ಅದಲ್ಲದೆ ಎಮ್.ಒ.ಪಿ. ಏಪ್ರಿಲ್ ತಿಂಗಳಿನಲ್ಲಿ 50,000 ಟನ್ ಬೇಡಿಕೆ ಇದೆ. ಪೂರೈಕೆ ಆಗಿದ್ದು 48,000 ಟನ್, ಅದರಲ್ಲಿ ಮಾರಾಟ ಆಗಿದ್ದು 40,000 ಟನ್. ಕಾಂಪ್ಲೆಕ್ಸ್ ಮೇ ತಿಂಗಳಿನಲ್ಲಿ 52,000 ಟನ್ ಬೇಡಿಕೆ, ಪೂರೈಕೆ ಆಗಿದ್ದು 67,000 ಟನ್, ಮಾರಾಟವಾಗಿದ್ದು 57,000 ಟನ್. ಈ ಅಂಕಿ ಅಂಶಗಳನ್ನು ಇವರ ಮುಂದೆಯೇ ಕೇಂದ್ರ ಸರ್ಕಾರದ ಕಾರ್ಯದರ್ಶಿಗಳು ಇಟ್ಟರು. ಅದಲ್ಲದೆ 10.6.08 ರಂದು ತಮ್ಮೆ ಮುಖ್ಯ ಕಾರ್ಯದರ್ಶಿಗಳಿಗೂ ಒಂದು ಪತ್ರ ಬರೆದಿದ್ದಾರೆ. ಏನೆಂದು ಬರೆದಿದ್ದಾರೆ, you will recall that you have kindly instructed the Fertilizer Companies to supply 1,22,000 Metric Tonnes of DAP and 19,000 MOA Complex Fertilizer during the month of June to the State of Karnataka. As per your advice the Department of Agriculture has compiled date-wise and district-wise schedule which companies have to ensure available these fertilizers. A copy of the schedule is enclosed for your kind perusal. ಎಂದು ಹೇಳಿ, ಪತ್ರ ಬರೆದಿದ್ದಾರೆ ಅಲ್ಲದೆ, supply of fertilizer of Karnataka State ಅಲ್ಲಿಂದ fertilizer Ministry ಯಿಂದ ಇವರಿಗೆ ಕೊಟ್ಟಿದ್ದು, ಈಗಾಗಲೇ ನಾನು ಹೇಳಿದ ಹಾಗೆ ಏಪ್ರಿಲ್, ಮೇ, ಜೂನ್ ಮತ್ತು ಜುಲೈ ಇವರ ಬೇಡಿಕೆಗಳು ಎಷ್ಟಿವೆ, ಮತ್ತು ಇವರಿಗೆ ಬೇಕಾಗಿದ್ದ ಟೋಟಲ್ ಮೆಟ್ರಿಕ್ ಟನ್ ಎಷ್ಟು ಎನ್ನತಕ್ಕಂಥದ್ದರಲ್ಲಿ ಯೂರಿಯಾ, ಡಿಎಪಿ, ಎಮ್ಒಪಿ ಮತ್ತು ಕಾಂಪ್ಲೆಕ್ಸ್ ಇವೆಲ್ಲವನ್ನು ಇದರಲ್ಲಿ ಕೊಟ್ಟಿದ್ದಾರೆ. ಇದನ್ನು

ಕೊಟ್ಟಮೇಲೆ ಕೂಡ ಸೆಕ್ರೆಟರಿಯವರು ಇವರಿಗೆ ಸ್ಪಷ್ಟವಾಗಿ ಈ ಮಾತನ್ನು ಹೇಳಿದ ಮೇಲೆ ಕೂಡ ಏಕೆ ನಿಮ್ಮಲ್ಲಿ ಹೀಗೆ ನಡೆದಿದೆ.? ಎಲ್ಲಾ ರಾಜ್ಯಗಳಲ್ಲಿ ಕೊರತೆ ಇದೆ, ಇಲ್ಲ ಎಂದು ಹೇಳುವುದಿಲ್ಲ. ಆದರೆ ನಿಮ್ಮಲ್ಲಿ ಏಕೆ ಈ ಮಾತುಗಳು ಬರುತ್ತಿವೆ? ಇವರು ಬರೆದಂತಹ ಪತ್ರಕ್ಕೆ ಅವರು ಉತ್ತರ ಕೊಟ್ಟಿದ್ದೇನೆಂದರೆ overall for the month of June-2008 the position of Urea and MOP is very comfortable. In respect of DAP as against the requirement of 1,10,000 MT, the State is being supplied 1,21,514 Metric Ton along with an opening stock of 11,700 Metric Ton, the total availability would be of the order of 1,33,000 Metric Ton. As regards complexes the state's requirement is 1,10,000 Metric Ton, of which 1,00,000 is being supplied besides an opening stock of nearly 10,000 Metric Ton. The State Government has now prepared a district-wise, company-wise movement schedule. In this letter dated 10/6/2008 (copy enclosed) the Chief Secretary of Karnataka has confirmed that the supply is as per schedule in respect of DAP and slightly higher in respect of complexs. ಮಾನ್ಯ ಅಧ್ಯಕ್ಷರೆ, ಇನ್ನೊಂದು ಬಾರಿ ಓದಲೇ, the Chief Secretary of Karnataka has confirmed that the supply is as per schedule in respect of DAP and slightly higher in respect of complexes. Till date, the State has received 23,100 Metric Ton of DAP as against the target to receive till the top 23,060 Metric Ton at 24,573 MT of complexes as against the target to receive till date 19,155 MT. The Chief Secretary of Karnataka has requested for advancing the supply of Fertilizer, while it is difficult to substantially do so, the major fertilizer companies have been advised to rush stocks to Karnataka. ಎಂದರೆ ನಿಮಗೆ ಏನೇನು ಕೊಟ್ಟಿದ್ದಾರೆ ಎನ್ನುವುದನ್ನು ಹೇಳಿದ್ದಾರೆ. ಇನ್ನು ಬೇಕಾದರೆ ನೀವು ಬೇರೆ companyಗಳಿಗೆ ರಷ್ ಮಾಡಬೇಕು ಎನ್ನುವುದನ್ನು ಹೇಳಿದ್ದಾರೆ. ನಿಮ್ಮ ಬೇಡಿಕೆಯನ್ನು ಅವರ ಮುಂದೆ ಇಡಿ, ನಾವೂ ಕೂಡ ಹೇಳುತ್ತೇವೆ, ನೀವು ತೆಗೆದುಕೊಳ್ಳಿ ಎನ್ನುವ ಮಾತು ಹೇಳಿದರೂ ಕೂಡ ಪದೇ ಪದೇ Central Government ಕೊಟ್ಟಿಲ್ಲ, ನಾವು ಎಲ್ಲಿಂದ ಕೊಡಬೇಕು ಎಂದರೆ. Central

Government ಕೊಟ್ಟಿಲ್ಲವೆಂದು ಹೇಳಿ ಗುಂಡು ಹಾಕಿ ಎಂದು Central Government ನವರು ಹೇಳಿದ್ದಾರಾ? ಅಥವಾ Central Government supply ಮಾಡಿಲ್ಲವೆಂದು ನೀವು ರೈತರ ಮೇಲೆ ಸೇಡನ್ನು ತೀರಿಸಿಕೊಳ್ಳುತ್ತೀರಾ? ಇವತ್ತಿನ ದಿವಸ ನಾನು ಈ ಅಂಕಿಅಂಶವನ್ನು ಏಕೆ ಕೊಡುತ್ತಿದ್ದೇನೆಂದರೆ, ಇದು ಬಂದಂತಹ ಮಾಹಿತಿ ನನ್ನ ಹತ್ತಿರ ಇದೆ. ಇದು ಸರಿಯಿಲ್ಲವೆಂದರೆ ನೀವು ಇದು ಸರಿ ಇಲ್ಲವೆಂದು ಹೇಳಿ. ಇದು ನಿಮ್ಮ Chief Secretary letterಗೆ attach ಮಾಡಿ ಕೊಟ್ಟಂತಹ note ಇದು. It is learnt that the Chief Minister of Karnataka has been briefed by some company representatives that non-payment of subsidy is resulting in stoppage of production by companies. ಅಂದರೆ ಇವರು, ಅಲ್ಲಿ ಹೋಗಿ ಏನು ಹೇಳಿದ್ದರು ಅದರ ಬಗ್ಗೆ ಇಲ್ಲಿ ನಮೂದು ಮಾಡಿದ್ದಾರೆ. ಏನೆಂದರೆ, It is learnt that the Chief Minister of Karnataka has been briefed by some company representatives that non-payment of subsidy is resulting in stoppage of production by companies. During the meeting on 7/6/2008 the Chief Minister himself raised this issue and indicated that a sum of Rs. 400 crores is being paid to Mangalore Chemical Fertilizers Limited (MCFL). The Secretary, Fertilizer has indicated to the Chief Minister of Karnataka that the company representative had wrongly briefed the Chief Minister and that the Management of the Company has apologized to Secretary for this mistake. ಇದು ಯಾರು ಹೇಳಿದ್ದು, ಇದು ನಿಮಗೆ ಬರೆದಂತಹ ನೋಟ್‌ನಲ್ಲಿ ಅವರು ಬರೆದು ಕೊಟ್ಟಿದ್ದು. ಎಂದರೆ ನೀವು ಏನು ಬ್ರೀಫ್ ಮಾಡಿದ್ದೀರಿ, ನಿಮಗೆ ಏನು ಆ Company Secretary ಯವರು ಅಥವಾ Management ನವರು ಬ್ರೀಫ್ ಮಾಡಿದ್ದರು, ಅದು ತಪ್ಪು, ಅದಕ್ಕಾಗಿ ನಮನ್ನು ಕ್ಷಮೆ ಕೇಳಿದ್ದಾರೆ ಎನ್ನುವ ಮಾತು ಹೇಳಿದಮೇಲೆ ನೀವು ಪದೇ ಪದೇ ಅದೇ ಹೇಳುತ್ತಿದ್ದೀರಿ ಎಂದರೆ ನಾವು ಏನು ಹೇಳಬೇಕು. ಈ ರೆಕಾರ್ಡ್ಸ್ ನಿಮ್ಮಲ್ಲಿ ಇಲ್ಲಾ? ಈ ರೆಕಾರ್ಡ್ಸ್ ನಿಮ್ಮ Secretary ಹತ್ತಿರ available ಇಲ್ಲ ಅಥವಾ Chief Secretary ಹತ್ತಿರ ನೀವು ನೋಡಿಲ್ಲ. ನೀವು ಇಷ್ಟೊಂದು ನಮ್ಮ ಮೇಲೆ ಮತ್ತು ಕೇಂದ್ರ ಸರ್ಕಾರದ ಮೇಲೆ ಆಪಾದನೆ ಮಾಡುವಾಗ ನಿಮ್ಮ ರೆಕಾರ್ಡ್ಸ್‌ನಲ್ಲಿ ಏನು ಇದೆ, ಏನು ಬರೆದಿದ್ದಾರೆ ಎನ್ನುವುದನ್ನು ಕೂಡ ನೋಡಬೇಕಲ್ಲ. ಇಲ್ಲ, ಮುಂದೆ for this MD,

MCFL has in a letter dated, ಯಾರ ಪರವಾಗಿ ನೀವು ಹೇಳಿದ್ದೀರಿ, ಆ Mangalore Chemical and Fertilizer Limited (MCFL) Company's Managing Director has in a letter dated 11-06-2008 clarified to the Chief Secretary of Karnataka that subsidy receipts are an ongoing process. ಅದು ಬರುತ್ತಿರುತ್ತದೆ, ಹೋಗುತ್ತಿರುತ್ತದೆ, ಅವರೇ ಹೇಳಿದ್ದಾರೆ, ಇವರ ವಕಾಲತ್ತು ಏಕೆ ಬೇಕಾಗಿತ್ತು ಎಂದು ನನಗೆ ಗೊತ್ತಾಗಲಿಲ್ಲ. ಅವನೇ, ಇದು on going ಇದೆ. ಇದು ನಮಗೆ ಬರುತ್ತದೆ, ಹೋಗುತ್ತದೆ. ಅದಕ್ಕಾಗಿ ಇದರ ಬಗ್ಗೆ ಯಾರಿಗೂ ಕೂಡ pending ಇದೆ ಎನ್ನುವ ಭಾವನೆ ಬೇಡ. That their monthly bills are largely being settled. A copy of his letter is enclosed. During the meeting on -07-06-2008 the Chief Minister of Karnataka also indicated that a sum of Rs. 10,000 crores of subsidy is due for Fertilizers. ಇಡೀ ದೇಶದ ಗುತ್ತಿಗೆ ಇವರೇ ತೆಗೆದುಕೊಂಡಿದ್ದಾರೆ. ಮಂಗಳೂರು ಕೆಮಿಕಲ್ಸ್‌ದು 400 ಕೋಟಿ ರೂಪಾಯಿ ಇದೆ ಎಂದು ಇವರೆ ಹೇಳುವುದು. ಅವರು apology ಕೇಳುವುದು, ನಮ್ಮ bill monthly settle ಆಗುತ್ತಿರುತ್ತವೆ, ಅದರ ಬಗ್ಗೆ ಏನು ಕಾಳಜಿ ಮಾಡಬೇಕಾಗಿಲ್ಲವೆಂದು ಅವರು ಬರೆಯುತ್ತಾರೆ. 10,000 ಕೋಟಿ ಎಂದು ಇವರು ಹೇಳುತ್ತಾರೆ. ಆದರೆ ಅಲ್ಲಿ ಹೇಳಿದ್ದು ಏನೆಂದರೆ this position is also not correct. As on 11-06-2008 ಯಾವ ದಿವಸ ಈ ಪ್ರಶ್ನೆಯನ್ನು ರೈಸ್ ಮಾಡಿದ್ದಿರಿ ಅಥವಾ ಮುಂದೆ ಇಟ್ಟಿದ್ದಿರಿ only a amount of Rs. 1,070 crores not 10,000 crores is due to be paid to various Fertilizer Companies against bills properly raised by them and there is also an accrued liability of 3,600 crores for which bills are expected from the companies shortly and payment will be made in accordance with the due procedure. ಅಂದರೆ ಅವರ procedure ಇದೆ. ಅವರು ಬಿಲ್ ರೈಸ್ ಮಾಡುತ್ತಾರೆ, ದುಡ್ಡು, ಕೊಡುತ್ತಾರೆ. ನಾವು bills settle ಮಾಡಿಕೊಳ್ಳುತ್ತೇವೆ ಎಂದು ಹೇಳಿ MD ಯವರೇ, apology ಕೇಳಿದರೆ, ನೀವು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವುದು, fertilizer ಅದಕ್ಕೆ supply ಆಗುತ್ತಿಲ್ಲವೆಂದು ಹೇಳುವುದು. ಆ Companyಗಳು ನಿಲ್ಲಿಸಿವೆ ಎಂದು ಹೇಳುವುದು. ಇಂತಹ ತಪ್ಪು ತಿಳುವಳಿಕೆಯನ್ನು ಕರ್ನಾಟಕ ಜನತೆಗೆ ಕೊಟ್ಟು, ರೈತರಿಗೆ ಕೊಟ್ಟು ನೀವು ಬಚಾವ್ ಆಗಬೇಕು ಅಂದುಕೊಂಡಿದ್ದೀರಾ? ನಿಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳಬೇಕು, ಎಂದು

ಕೊಳ್ಳುತ್ತೀರಾ? ಅಥವಾ ನನ್ನ ಜವಾಬ್ದಾರಿ ಇಲ್ಲ, ಬರೀ ರೂಲ್ ಮಾಡುವುದು ಮಾತ್ರ ನನ್ನ ಜವಾಬ್ದಾರಿ ಇದೆ, ರೈತರ ಬಗ್ಗೆ ಕಾಳಜಿ ತೆಗೆದುಕೊಳ್ಳತಕ್ಕಂಥಾದ್ದು ಇಲ್ಲವೆಂದು ಹೇಳುತ್ತೀರಾ? ಈ fax ಈ letter ನಿಮ್ಮಲೆ ಇದೆ. ಈ ತಾರೀಖುಗಳನ್ನು ಹೇಳಿದ್ದೇನೆ. ಈ proceedings ಅನ್ನು ತಂದು ತಾವು ನೋಡಿ. ಮಾನ್ಯ ಅಧ್ಯಕ್ಷರೆ, ನನ್ನ ಮನವಿ ಏನೆಂದರೆ, ಇಂತಹ ಒಂದು ಘಟನೆ ನಡೆದಾಗ, ಇವತ್ತಿನ ದಿವಸ ಒಬ್ಬರ ಮೇಲೆ ಒಬ್ಬರು ಹಾಕಿ, ಜನರನ್ನು ತಪ್ಪು ದಾರಿಗೆ ಎಳೆಯುವಂದಾದ್ದು ಆಗಬಾರದು. ಜವಾಬ್ದಾರಿಯಿಂದ ನುಣುಚಿಕೊಳ್ಳುವಂಥಾದ್ದಾಗಬಾರದು ಮತ್ತು ಇವತ್ತು ರೈತರಿಗೆ ನೀವು ಏನು ಅವರಿಂದ ತಪ್ಪಾಗಿದೆ ಎಂದು ಬೋಟ್ಟು ಮಾಡಿ ತೋರಿಸಿದಿರಿ, ಅದಕ್ಕೆ ಕರ್ನಾಟಕ ರಾಜ್ಯದ ರೈತರ ಕ್ಷಮೆಯನ್ನು ಕೇಳಬೇಕು. ಇವತ್ತು ರೈತನಿಗೆ ಗುಂಡು ಹಾಕಿ ಎನು ಕೊಂದಿದ್ದೀರಿ, ಅದರ ಬಗ್ಗೆ ನಾವು Judicial probe ಕೇಳಿದ್ದೇವೆ. ಎಲ್ಲಾ ಜಿಲ್ಲೆಗಳ್ಳಲ್ಲೂ ಪ್ರತಿಭಟನೆ ಮಾಡಿದ್ದೇವೆ. ಆ ಪ್ರತಿಭಟನೆ ಮಾಡಿದ ರೀತಿಯನ್ನು ನೋಡಿಕೊಂಡು ತಾವು ಕೂಡ ಅದಕ್ಕೆ yield ಆಗಿ ಇವತ್ತಿನ ದಿವಸ judicial probe ಗೆ order ಮಾಡಿದ್ದೀರಿ. ನಾನು ಅದನ್ನು welcome ಮಾಡುತ್ತೇನೆ. ಆದರೆ Terms of reference ಅಂದರೆ ಯಾರು ಹೊಡೆದರು ? ಹೇಗೆ ಹೊಡೆದರು? ಎಲ್ಲಿಂದ ಬಂತು? ಇದಕ್ಕೆ ಏನು ಕಾರಣ? shortage ಗೆ ಏನು ಕಾರಣ? ಅಥವಾ ಬೇರೆ district ನಲ್ಲಿ stock ಏನಿದೆ? ಆ districtನಲ್ಲಿ ಇರತಕ್ಕಂಥ stock supply ಅನ್ನು ಏಕೆ administrer ಮಾಡಲಿಲ್ಲ. ಏಕೆಂದರೆ ಈ administration ಮಾಡುವುದು Governance ಮಾಡುವುದು ನಿಮ್ಮ ಕೈಯಲ್ಲಿ ಇದೆ. ಒಂದು ಊರಿನಲ್ಲಿ ಹೆಚ್ಚಿಗೆ ಇರಬಹುದು, ಒಂದು ಊರಿನಲ್ಲಿ ಕಡಿಮೆ ಇರಬಹುದು. Naturally ಅದನ್ನು transfer ಮಾಡತಕ್ಕಂಥದ್ದು ಅಥವಾ ತೆಗೆದುಕೊಂಡು ಇನ್ನೊಂದು ಜಿಲ್ಲೆಗೆ ಕೊಡತಕ್ಕಂಥಾದ್ದು ನಿಮ್ಮ ಕರ್ತವ್ಯ . ಅದನ್ನು ಬಿಟ್ಟು ಆಡಳಿತ ವೈಪಲ್ಯದಿಂದ ಇವತ್ತು ರೈತರ ಜೀವಗಳನ್ನು ತೆಗದುಕೊಂಡು, ಈ ರೀತಿಯಾದ ನಿಮ್ಮ ದೋರಣೆ ಏನಿದೆ ಇದನ್ನು ನಾನು ಖಂಡಿಸುತ್ತೇನೆ.

ಇವತ್ತು ಸರಣಿ ಆತ್ಮಹತ್ಯೆಗಳು ಏನು ಆಗಿವೆ. ಸುಮಾರು ಹನ್ನೊಂದು ಆತ್ಮಹತ್ಯೆಗಳು ಮಾಡಿಕೊಂಡಿದ್ದಾರೆ. ಇವತ್ತು ನಿಜವಾಗಿಯೂ ಆತ್ಮಹತ್ಯೆಗಳು ಆಗಿದೆಯೋ ಏನೋ ಗೊತ್ತಿಲ್ಲ. ನಾಳೆ ಆಗುತ್ತದೆಯೋ ಏನೋ ಗೊತ್ತಿಲ್ಲ. ಅದಕ್ಕಾಗಿ ಮೇಲ್ಮನೆ ಮತ್ತು ಕೆಳಮನೆ ಎರಡೂ ಸದನಗಳ ಜಂಟಿ ಸದನ ಸಮಿತಿಯನ್ನು ಮಾಡಿ ಇದಕ್ಕೆ ಏನು ಕಾರಣವೆಂದು ತಿಳಿದುಕೊಳ್ಳುವುದು ಒಂದು ಕಡೆ. ಇನ್ನೊಂದು ಕಡೆ judicial probe ಏನು ಇದೆ, ಅದಕ್ಕೆ

ಸಂಪೂರ್ಣವಾದ terms of reference ಅನ್ನು ಸದನದ ಮುಂದೆ ಇಟ್ಟು, ಅದಕ್ಕೆ ಏನು amendment ಮಾಡಬೇಕು. ಅದನ್ನು ಮಾಡಿಸಿ, ಸಲಹೆ ಸೂಚನೆಗಳನ್ನು ತೆಗದುಕೊಂಡು ಅದರ ಬಗ್ಗೆಯೂ ಕೂಡ ಕ್ರಮ ಕೈಗೊಳ್ಳಬೇಕು. ಈ ಒಂದು ಬೇಡಿಕೆಯನ್ನು ನಾನು ತಮ್ಮ ಮುಂದಿಡುತ್ತೇನೆ, ಮತ್ತೆ ಯಾವ ಸರ್ಕಾರ ರೈತರನ್ನು ನೇರವಾಗಿ ಗುಂಡಿಟ್ಟು ಕೊಂದಿದೆ ಆ ಸರ್ಕಾರ ಅಧಿಕಾರದಲ್ಲಿ ಇರುವುದಕ್ಕೆ ಲಾಯಕ್ಕಿಲ್ಲವೆಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನೀವು ಅವರ ಹೆಸರಿನ ಮೇಲೆ ಅಧಿಕಾರಕ್ಕೆ ಬಂದು ಅವರ ಹೆಸರಿನಲ್ಲೇ ಇವತ್ತು ಆಳುವಂಥಾದ್ದು ಮಾಡಿ, ಇವತ್ತು ಅವರನ್ನೇ ಮುಗಿಸುವಂಥಾ ಕೆಲಸವನ್ನು ನೀವು ಏನು ಮಾಡುತ್ತಿದ್ದೀರಲ್ಲಾ, ಅದು ನಿಮಗೆ ಶೋಭೆ ತರುವಂಥಾದ್ದಲ್ಲ. ನೀವು ವಿರೋಧಪಕ್ಷದಲ್ಲಿದ್ದಂಥಾ ಸಂದರ್ಭದಲ್ಲಿ ಅನೇಕ ಸಾರಿ ಇಂಥಾ ಘಟನೆಗಳು ಆದಾಗ ನಮ್ಮನ್ನು ಕೂರುವುದಕ್ಕೆ ಬಿಡುತ್ತಿರಲಿಲ್ಲ. ಮಾನ್ಯ ಜೆ.ಹೆಚ್. ಪಟೇಲ್‌ರವರ ಸರ್ಕಾರವಿದ್ದಾಗ, ಮಾನ್ಯ ಹೆಚ್.ಡಿ. ದೇವೇಗೌಡರ ಸರ್ಕಾರವಿದ್ದಾಗ, ನೀವು ಕುಣಿಯುತ್ತಾ ಇದ್ದಿರಿ. ಈಗ ನಾನು ಅದೇ ಮಾತನ್ನು ಕೇಳಬಹುದು. ನೀವು ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಏನು ನೈತಿಕ ಹಕ್ಕು ಇದೆಯೆಂದು ಕೇಳಬಹುದು. ಯಾವ ಆಧಾರದ ಮೇಲೆ ನೀವು ಮುಂದುವರೆಯುತ್ತೀರಿ? ನಿಮ್ಮ ಮತ ಕ್ಷೇತ್ರಗಳಲ್ಲೇ ಇವು ನಡೆದಿವೆ, ನಿಮ್ಮ ಕಣ್ಣು ಮುಂದೆಯೇ ಇವು ನಡೆದಿದೆ. ಈ ಅನಾಹುತಗಳು 22 ದಿವಸಗಳಲ್ಲೇ ನಡೆದಿವೆ. ನಾನು ಅನೇಕ ಅಂಕಿ ಅಂಶಗಳನ್ನು ತಮ್ಮ ಮುಂದಿಟ್ಟಿದ್ದೇನೆ. ಯಾವ ರೀತಿಯಾಗಿ ದಿಕ್ಕು ತಪ್ಪಿಸುವಂಥಾ ಕೆಲಸವನ್ನು ಮಾಡಿ, ಇವತ್ತು ಕೇಂದ್ರ ಸರ್ಕಾರದ ಮೇಲೆ ಹೇಳುವಂಥಾದ್ದನ್ನು ಮಾಡಿದ್ದೀರಿ. ನಾನು ಈ ಬಗ್ಗೆ latest website information ಅನ್ನು ತೆಗೆದುಕೊಂಡಿದ್ದೇನೆ. District-wise ಯೂರಿಯಾ ಸ್ಟಾಕ್ ಎಷ್ಟು ಇದೆ, ಡಿಎಪಿ. ಎಷ್ಟು ಇದೆಯೆಂಬ ಅಂಕಿ ಅಂಶಗಳನ್ನು ಬೇಕಾದರೂ ನಾನು ಹೇಳಬಹುದು. ಆದರೆ ಇನ್ನು ಅನೇಕ ಸದಸ್ಯರು ಮಾತನಾಡುವವರು ಇದ್ದಾರೆ. ನಾನು ಅವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಅದಕ್ಕಾಗಿ ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಡಿಮಾಂಡ್ ಮಾಡುತ್ತೇನೆ. ಅವರಿಗೆ ಏನಾದರೂ ನೈತಿಕತೆ ಬಗ್ಗೆ ಮೌಲ್ಯದ ಬಗ್ಗೆ ಸ್ವಲ್ಪ ಅಭಿಮಾನವಿದ್ದರೆ, ನಾವು ಮಾಡಿದ್ದು ತಪ್ಪು ಎಂದು ಇದ್ದರೆ, ಅವರು ಕರ್ನಾಟಕ ಜನತೆಯ ಬಳಿ ಕ್ಷಮೆ ಕೇಳಬೇಕು, ಮತ್ತೆ ರೈತರ ಬಳಿ ಕ್ಷಮೆ ಕೇಳಬೇಕು ಮತ್ತು ಸದನ ಸಮಿತಿಯನ್ನು ಮಾಡಬೇಕೆಂದು ನಾನು ಡಿಮಾಂಡ್ ಮಾಡುತ್ತೇನೆ. ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 3.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2:23 ಗಂಟೆಗೆ ಮುಕ್ತಾಯಗೊಂಡು, ಮತ್ತೆ ಮಧ್ಯಾಹ್ನ 3.30 ಗಂಟೆಗೆ ಸೇರಲು ನಿಶ್ಚಯಿಸಿತು)

ಸದನವು ಪುನಃ ಮಧ್ಯಾಹ್ನ 3 ಗಂಟೆ 45 ನಿಮಿಷಕ್ಕೆ ಸಮಾವೇಶಗೊಂಡಿತು

ಮಾನ್ಯ ಸಭಾಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಪೀಠವನ್ನಲಂಕರಿಸಿದ್ದರು

5. ಪ್ರಕಟಣೆ

ವಿಷಯ: ದಿನಾಂಕ 10–06–2008 ರಂದು ಶ್ರೀ ಸಿ.ಪಿ. ಯೋಗೇಶ್ವರ್, ಶಾಸಕರು, ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಇವರನ್ನು ಹಾಗೂ ಅವರ ಬೆಂಬಲಿಗರನ್ನು ಪ್ರತಿಭಟನಾ ರ್ಯಾಲಿಯಲ್ಲಿ ಬಂದಿಸಿ ಬಿಡುಗಡೆ ಮಾಡಿರುವ ಬಗ್ಗೆ

ಅಧ್ಯಕ್ಷರು: ವಿಧಾನ ಸಭಾ ಸದಸ್ಯರಾದ ಶ್ರೀ ಸಿ.ಪಿ. ಯೋಗೀಶ್ವರ್‌ರವರು ದಿನಾಂಕ: 10–06–2008 ರಂದು ತಮ್ಮ ಬೆಂಬಲಿಗರೊಂದಿಗೆ ಸರ್ಕಾರದಿಂದ ರೈತರಿಗೆ ಸರಿಯಾಗಿ ರಸಗೊಬ್ಬರವನ್ನು ವಿತರಣೆ ಮಾಡದಿರುವ ವಿಷಯದಲ್ಲಿ ಹಾಗೂ ಹಾವೇರಿ ಜಿಲ್ಲೆಯಲ್ಲಿ ಪ್ರತಿಭಟನಾ ನಿರತ ರೈತರ ಮೇಲೆ ಪೊಲೀಸ್ ಗೋಲಿಬಾರ್ ಅನ್ನು ಖಂಡಿಸಿ ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿ ರಸ್ತೆ ತಡೆ ಹಾಗೂ ಪ್ರತಿಭಟನೆ ನಡೆಸಿದ್ದರಿಂದ ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರ ಓಡಾಟಕ್ಕೆ ತೊಂದರೆಯುಂಟಾದ ಹಿನ್ನಲೆಯಲ್ಲಿ ಸದರಿಯವರನ್ನು ಹಾಗೂ 50 ಜನ ಅವರ ಬೆಂಬಲಿಗರನ್ನು ಕರ್ನಾಟಕ ಪೊಲೀಸ್ ಕಾಯ್ದೆ ಕಲಂ 71ರ ಮೇರೆಗೆ ರಾತ್ರಿ 8 ಗಂಟೆಗೆ ಬಂಧಿಸಿ, ಅದೇ ದಿನ ರಾತ್ರಿ 8.15 ಗಂಟೆಗೆ ಬಿಡುಗಡೆ ಮಾಡಲಾಗಿರುತ್ತದೆಂದು ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ ಅವರು ತಿಳಿಸಿರುತ್ತಾರೆಂದು ಈ ಮೂಲಕ ಮಾನ್ಯ ಸದಸ್ಯರಿಗೆ ತಿಳಿಯಪಡಿಸಲಾಗಿದೆ.

6. ನಿಯಮ 69ರ ಮೇರೆಗೆ ಮುಂದುವರೆದ ಚರ್ಚೆ

ವಿಷಯ: ರಾಜ್ಯದಲ್ಲಿ ಉಂಟಾಗಿರುವ ರಸಗೊಬ್ಬರದ ತೀವ್ರ ಅಭಾವದ ಬಗ್ಗೆ

ಶ್ರೀ ಟಿ.ಬಿ. ಜಯಚಂದ್ರ (ಸಿರಾ) : ಇವತ್ತು ಬೀಜ ಮತ್ತು ರಸಗೊಬ್ಬರವನ್ನು ರೈತರಿಗೆ ಸರಬರಾಜು ಮಾಡುವಲ್ಲಿ ವಿಳಂಬವಾಯಿತೆನ್ನುವ ಕಾರಣಕ್ಕೋಸ್ಕರ ಏನೆಲ್ಲ

ಅವಾಂತರಗಳು ನಡೆದು ಹೋದವು ಎನ್ನತಕ್ಕಂಥದ್ದು ನಿಮಗೆಲ್ಲರಿಗೂ ತಿಳಿದಿರುವ ವಿಚಾರ. ಇವತ್ತು ನಿಲುವಳಿ ಸೂಚನೆಯನ್ನು ನಾವು ತರಬೇಕಾದಾಗ ನಾನು ಮತ್ತೆ ಅದನ್ನು ಪ್ರಸ್ತಾಪ ಮಾಡುವುದಿಲ್ಲ. ನಿಯಮ 60ರ ಅಡಿಯಲ್ಲಿ ತಾವು ಒಪ್ಪಿಗೆಯನ್ನು ಕೊಟ್ಟಿದ್ದರೆ ಇಡೀ ರಾಷ್ಟ್ರದ ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ ಬರುತ್ತಿತ್ತು, ನಮ್ಮ ನೋವುಗಳು ಇಡೀ ದೇಶಕ್ಕೆ ಗೊತ್ತಾಗತಕ್ಕಂಥ ಸಂದರ್ಭವಿತ್ತು. ಸರ್ಕಾರದ ಕಳಕಳಿ, ಸಭೆಯ ಕಳಕಳಿ ಇಡೀ ದೇಶಕ್ಕೆ ಗೊತ್ತಾಗುವ ವಾತಾವರಣವಿತ್ತ. ಮುಖ್ಯವಾಗಿ, ಆಡಳಿತ ಮಾಡುತ್ತಿರುವ ಪಕ್ಷದವರು ಇಂಥ ನಿಲುವಳಿ ಸೂಚನೆ ಬಂದಾಗ ಯಾವ ರೀತಿಯಾಗಿ ನಿಲುವನ್ನು ತೆಗೆದುಕೊಂಡರೆನ್ನುವುದು ಬಹಳ ಮುಖ್ಯವಾಗುತ್ತದೆ. ತಾಂತ್ರಿಕವಾಗಿರತಕ್ಕಂಥ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದರ ಜೊತೆಗೆ ನೈಜವಾಗಿರುವ ವಿಚಾರಗಳನ್ನು ಪರಿಗಣಿಸಿ, ಒಪ್ಪಿಗೆಯನ್ನು ಕೊಡಬೇಕಾಗಿತ್ತು. ಎನ್ನುವುದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಮುಖ್ಯಮಂತ್ರಿಗಳು ರೈತ ನಾಯಕರು, ಅವರು ಪ್ರಮಾಣ ವಚನ ಸ್ವೀಕಾರ ಮಾಡಬೇಕಾದಾಗ ಸಂವಿಧಾನಕ್ಕೆ ವಿರೋಧವಾಗಿರತಕ್ಕಂಥದ್ದು, ರೈತರ ಹೆಸರಿನಲ್ಲಿ ಪ್ರಮಾನ ವಚನ ಸ್ವೀಕರಿಸುತ್ತಾರೆ. ಮಾರನೆಯ ದಿವಸ ಪತ್ರಿಕೆಯಲ್ಲಿ ಬಹಳಷ್ಟು ಜನರ ವಿಶ್ಲೇಷಣೆ ಬರುತ್ತದೆ. ಮುಖ್ಯಮಂತ್ರಿಗಳು ಆ ರೀತಿಯಾಗಿ ರೈತರ ಹೆಸರಿನಲ್ಲಿ ಪ್ರಮಾಣ ವಚನ ಮಾಡಿರುವುದು ಅದು ನಿಯಮಾವಳಿಗಳು, ಸಂವಿಧಾನ ಬದ್ಧವಾಗಿರತಕ್ಕಂಥದ್ದಲ್ಲ ಎನ್ನುವ ವಿಚಾರ ಪ್ರಸ್ತಾಪವಾಯಿತು. ಆದರೆ, Koul and Shekdhar ನಲ್ಲಿ ಬಂದಂಥ ಕೆಲವು comments ಅನ್ನೇ ಆಧಾರವಾಗಿಟ್ಟುಕೊಂಡು ಅದಕ್ಕೆ ಒಪ್ಪಿಗೆ ಕೊಡಲಿಲ್ಲವೆಂದರೆ, ನನಗನಿಸುತ್ತದೆ, ನೀವೆಲ್ಲೋ ಒಂದು ಕಡೆಗೆ ರೈತರ ಕಳಕಳಿಯನ್ನು ಈ ವಿಚಾರದಲ್ಲಿ ತೋರಿಸಬಹುದಾಗಿತ್ತೆನ್ನುವುದು ನನ್ನ ಅಭಿಪ್ರಾಯ. ಮುಖ್ಯವಾಗಿರುವಂಥದ್ದು ಯಾವುದೆಂದರೆ, ಬೀಜ ಮತ್ತು ಗೊಬ್ಬರ. ತಾವು ಅಧಿಕಾರಕ್ಕೆ ಬಂದು 22 ದಿವಸಗಳಾಯಿತು. ಮೇನಲ್ಲಿ ತಾವು ಅಧಿಕಾರ ಸ್ವೀಕಾರ ಮಾಡಿದಿರಿ. ಅದಕ್ಕೆ ಹಿಂದೆ ಬೀಜ, ಗೊಬ್ಬರದ ವಿಚಾರದಲ್ಲಿ ಯಾವ ರೀತಿಯಾಗಿ ನಡವಳಿಕೆ ನಡೆಯಿತು ಎನ್ನುವುದೂ ಕೂಡ ಬಹಳ ಮುಖ್ಯ. ಬೀಜಗಳ ವಿಚಾರದಲ್ಲಿ ಅದು ನಿರಂತರವಾಗಿರುವ ಪ್ರಕ್ರಿಯೆ. ಯಾವ ಸರ್ಕಾರವಿರಲಿ, ಯಾರು ಇರಲಿ ಯಾರು ಇಲ್ಲದಿರಲಿ ಅದು ನಿರಂತರವಾಗಿ ನಡೆಯಬೇಕಾಗುತ್ತದೆ. ಇವತ್ತೂ ಕೂಡ ರೈತರಿಗೆ ಬೀಜಗಳು ಸಿಗುತ್ತಿಲ್ಲ. ಸಾಕಷ್ಟು ರೀತಿಯಾದ ನ್ಯೂನತೆಗಳಿವೆ. ಲೋಪದೋಷಗಳಿವೆ. ಏಕಾಯಿತು? ಯಾರಿಂದಾಯಿತು? ಬೀಜವನ್ನು ಕೊಡುವುದರಲ್ಲಿ ಕೇಂದ್ರ ಸರ್ಕಾರದ ಹಸ್ತಕ್ಷೇಪವಿತ್ತೇ? ಅಥವಾ ಯಾರ ಹಸ್ತಕ್ಷೇಪವಿತ್ತು? ಏಕೆ ಈ ರೀತಿಯಾಯಿತು ಎಂಬುದು ಕೂಡ ಬಹಳ

ಮುಖ್ಯವಾದ ವಿಚಾರ. ಇದರ ಬಗ್ಗೆ ಕೇವಲ ರಾಜಕೀಯ ದೃಷ್ಟಿಯಿಂದ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ರೈತರ ಸಮಸ್ಯೆಗಳ ಬಗ್ಗೆ ತಾವು ಅವಕಾಶ ಕೊಟ್ಟ ಸಂದರ್ಭದಲ್ಲಿ ನಾನು ಅನೇಕ ರೀತಿಯಾದ ಸಲಹೆಗಳನ್ನು ಕೊಡಬೇಕಾಗುತ್ತದೆ. ರೈತರ ಸಮಸ್ಯೆಗೆ ಸ್ಪಂದಿಸಬೇಕಾಗುತ್ತದೆ. ವಿರೋಧ ಪಕ್ಷವಾಗಿ ನಾವು ಸಲಹೆ ಸೂಚನೆಗಳನ್ನು ಕೊಡಬೇಕಾಗುತ್ತದೆ. ಸರ್ಕಾರದ ಗಮನಕ್ಕೆ ನಾವು ತರಬೇಕಾಗುತ್ತದೆ. ಇವತ್ತು ಬಿತ್ತನೆ ಬೀಜ ಎಲ್ಲಾ ಕಡೆ ಖಾಸಗಿಯವರ ಕೈಯಲ್ಲಿದೆ. ಖಾಸಗಿಯವರು ಎಲ್ಲಾ ತರಹದ ಬೀಜಗಳನ್ನು ಸರಬರಾಜು ಮಾಡುತ್ತಿದ್ದಾರೆ. ಸರ್ಕಾರದ ಸ್ವಾಮ್ಯದಲ್ಲಿ ಕೆಲವೇ ಬೀಜಗಳು ವಿತರಣೆಯಾಗುತ್ತಿದೆ. ರಾಗಿ ಇರಬಹುದು. ಜೋಳವಲ್ಲ, ಮೆಕ್ಕೆ ಜೋಳವಲ್ಲ, ಶೇಂಗಾ ಇರಬಹುದು. ಈ ರೀತಿಯಾದ ಕೆಲವೇ ಬೀಜಗಳನ್ನು ಕೊಡುವುದು ಇದೆ. ನಮಗೆ ಒಂದು ವರ್ಷಕ್ಕೆ ಸುಮಾರು 5 ಲಕ್ಷ ಟನ್‌ನಷ್ಟು ಪ್ರಮಾಣೀಕರಿಸಿದ ಬಿತ್ತನೆ ಬೀಜ ಬೇಕಾಗುತ್ತದೆ. ಆದರೆ, ಆ ಬಿತ್ತನೆ ಬೀಜವನ್ನು ನಾವು ಶೇಖರಿಸಿಡಬೇಕಾದರೆ ಅದಕ್ಕೆ ಸುಮಾರು 6, 8 ತಿಂಗಳಿನಿಂದಲೂ ನಿರಂತರವಾಗಿ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಇಷ್ಟೆಲ್ಲಾ ಇದ್ದಾಗ್ಯೂ ಕೂಡ, ಎಲ್ಲಾ ರೀತಿಯಲ್ಲೂ planning ಆಗಿದ್ದರೂ ಕೂಡ ಬಿತ್ತನೆ ಬೀಜದ ಕೊರತೆ ಇದೆ ಎಂದರೆ ಏಕೆ ಎನ್ನುವ ಮಾತನ್ನು ಕೇಳಬೇಕಾಗುತ್ತದೆ. ಬಹಶಃ ಎಲ್ಲೋ ಒಂದು ಕಡೆ ನಮಗೆ ಬಿತ್ತನೆ ಬೀಜವನ್ನು ಸರಬರಾಜು ಮಾಡಬೇಕಾಗಿರತಕ್ಕಂಥದ್ದು, ಆ production activity ಯಲ್ಲಿ involve ಆಗಿರತಕ್ಕಂಥವರು ಇವತ್ತು seeds corporation , KOC ಇರಬಹುದು, ಎಲ್ಲೋ ಒಂದು ಕಡೆಗೆ ಅವರ ನೋವುಗಳೇನು ಎನ್ನುವುದನ್ನು ನೀವು ಕೇಳಿ, ಅವರಿಗೇನಾದರೂ ಕೂಡ ಒಂದು ರೀತಿಯಾಗಿ soft loan ಕೊಟ್ಟಿದ್ದರೆ ಬಹಶಃ ಈ ರೀತಿಯ ತೊಂದರೆ ಬರುವುದಕ್ಕೆ ಸಾಧ್ಯವಿರಲಿಲ್ಲ. ನಾನು ಒಂದು ಉದಾಹರಣೆ ಹೇಳುತ್ತೇನೆ. ನಾನು ಕೃಷಿ ಸಚಿವನಾಗಿದ್ದ ಸಂದರ್ಭದಲ್ಲಿ ಏಕಾಏಕಿ ಈ ರೀತಿಯಾಗಿ ಶೇಂಗಾ ಬೀಜಕ್ಕೆ ತೊಂದರೆ ಸಂದರ್ಭದಲ್ಲಿ ನಾವು ಅನಿವಾರ್ಯವಾಗಿ ಗುಜರಾತ್‌ಗೆ ಹೋಗಿ ಅಲ್ಲಿ ಪ್ರಮಾಣೀಕರಿಸಿದ ಬಿತ್ತನೆ ಬೀಜಗಳನ್ನು ಮತ್ತು truthful seeds ತಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ನಾವು ಯಶಸ್ವಿ ಕೂಡ ಆಗಿದ್ದೇವೆ. ಅಂಥದ್ದೇ ಒಂದು ಪ್ರಯತ್ನ ಇವತ್ತೇಕೆ ಆಗುತ್ತಿಲ್ಲವೆಂದು ನಾನು ಕೇಳಬಹುದು. ನಾನು ಶೇಂಗಾ ಬೆಳೆಯತಕ್ಕಂಥ ಪ್ರದೇಶದಿಂದ ಬಂದವನು. ತುಮಕೂರು ಜಿಲ್ಲೆ, ಕೋಲಾರ ಈ ಭಾಗದಲ್ಲಿ ಶೇಂಗಾ ಬೀಜ ಸಿಕ್ಕಾಪಟ್ಟೆ ಬೇಕಾಗುತ್ತದೆ. ನಮಗೆ ಇಲ್ಲಿಯವರೆಗೆ ಬೇಡಿಕೆ ಬಂದಿರತಕ್ಕಂಥದ್ದು ಕೇವಲ 15–20% ಬಿತ್ತನೆ ಬೀಜ ಮಾತ್ರ. ಇನ್ನೂ ಬಿತ್ತನೆ ಬೀಜ ಬರುತ್ತಿಲ್ಲ. ಏಕೆ ಬರುತ್ತಿಲ್ಲವೆನ್ನುವ ವಿಚಾರವನ್ನು

ಉತ್ತರ ಕೊಡುವ ಸಂದರ್ಭದಲ್ಲಿ ಸರ್ಕಾರ ಹೇಳಬೇಕಾಗುತ್ತದೆ. ಬಿತ್ತನೆ ಬೀಜ ಸರಬರಾಜು ಮಾಡುವುದರಲ್ಲಿ ಯಾರ ಹಸ್ತಕ್ಷೇಪವೂ ಇಲ್ಲ. ಯಾರ ನಿರ್ಲಕ್ಷವಾಗಿದೆ. ಎಂಬುದನ್ನು ಅಲ್ಲಿ ಕಂಡುಹಿಡಿಯಬೇಕಾಗುತ್ತದೆ. ಯಾರ ನಿರ್ಲಕ್ಷದಿಂದಾಗಿ ಈ ತರಹದ ತೊಂದರೆಗೆ ಯಾರು ಕಾರಣರಾದರೆನ್ನುವುದನ್ನು ಪತ್ತೆ ಹಚ್ಚಿ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಗೊಬ್ಬರ, ಬಿತ್ತನೆ ಬೀಜಕ್ಕೋಸ್ಕರ ರೈತ ಬೀದಿಗೆ ಬರುತ್ತಾನೆ. ಬೀದಿಗೆ ಬಂದಂಥ ಸಂದರ್ಭದಲ್ಲಿ ಅವನಿಗೆ ಬಿತ್ತನೆ ಬೀಜ ಸಿಗದಿದ್ದಾಗ ಒಂದು ಕಡೆ ಮಳೆ ಬಂತು. ಈ ಸಾರಿ ವಿಶೇಷವೆನೆಂದರೆ, ಜನವರಿ, ಫೆಬ್ರವರಿ ತಿಂಗಳಲ್ಲೇ ಮಳೆ ಬಂತು. ಆಗಲೇ ರೈತ ಭೂಮಿಯನ್ನು ಹಸನು ಮಾಡಿಕೊಂಡಿದ್ದ. ಆಗಲೇ ಸರ್ಕಾರ, ಅಧಿಕಾರಿಗಳೂ ಎಚ್ಚೆತ್ತುಕೊಳ್ಳಬೇಕಾಗಿತ್ತು. ನಮಗೆ ಈ ರೀತಿಯಾಗಿ early rains ಬರುತ್ತಿದೆ., monsoon ಬರುತ್ತಿದೆ, ನಾವು ಬಿತ್ತನೆ ಬೀಜಗಳಿಗೆ ಕೊರತೆಯಾಗಬಹುದು ಎಂಬುದನ್ನು ಊಹೆ ಮಾಡಿ ಅವತ್ತೇ ತಯಾರು ಮಾಡಬಹುದಾಗಿತ್ತು. ಈಗ ನಾವು ಮೆ–ಜೂನ್ ತಿಂಗಳಿಗೆ ಬಂದರೂ ಕೂಡ ಬಿತ್ತನೆ ಬೀಜ supply ಆಗುತ್ತಿಲ್ಲವೆನ್ನುವುದನ್ನು ಹೇಳುವುದಾದರೆ ಇದು ಯಾರಿಂದಾಯಿತು? ಇದಕ್ಕೆ ಕಾರಣರಾರು ಎನ್ನುವುದನ್ನು ಸರ್ಕಾರ ಹೇಳಬೇಕಾಗುತ್ತದೆ. ರೈತ ಬೀದಿಗೆ ಬಂದಂಥ ಸಂದರ್ಭದಲ್ಲಿ ಅವನ ಎದೆಗೆ ಗುಂಡಿಟ್ಟು ಹೊಡೆಯುವಂಥ ಕೆಲಸವಾಯಿತು. ಗುಂಡಿಟ್ಟು ಹೊಡೆದ ಸಂದರ್ಭದಲ್ಲಿ ವಿರೋಧ ಪಕ್ಷದವರೆಲ್ಲಾ judicial Enquiry ಆಗಬೇಕೆಂದು ಒತ್ತಾಯ ಮಾಡಿದರು. ತಾವು ತತ್‌ಕ್ಷಣ Judicial Enquiry ಮಾಡುವುದಕ್ಕೆ ಒಪ್ಪಿದ್ದರೆ ನಿಮ್ಮ ರೈತರ ಕಳಕಳಿ ಏನು ಎನ್ನುವುದು ಪ್ರದರ್ಶನವಾಗುತ್ತಿತ್ತು. ರೈತರಿಗೂ ಕೂಡ ಅದರ ಅರಿವಾಗುತ್ತಿತ್ತು. ತಾವೇನು ಮಾಡಿದಿರಿ? ತಾವು Regional Commissioner ರವರಿಂದ Enquiry ಮಾಡಿಸುವುದಕ್ಕೆ ಪ್ರಯತ್ನಪಟ್ಟಿರಿ ಆ enquiry ಮಾಡಿಸುವುದಕ್ಕೆ ಪ್ರಯತ್ನಪಟ್ಟು ವಿರೋಧ ಪಕ್ಷಗಳು ಅತಿಯಾದ ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ ನೀವು ಅಂತಿಮವಾಗಿ Judicial Enquiry ಮಾಡಿಸುವುದಕ್ಕೆ ಒಪ್ಪಿದಿರಿ. ತಾವು ಸ್ವ ಇಚ್ಛೆಯಾಗಿ ಮೊದಲೇ ಒಪ್ಪಿದರೆ ಬಹಶಃ ಅದು ಒಳ್ಳೆಯದಿತ್ತು. ಎನ್ನುವುದರ ಜೊತೆಗೆ ಇವತ್ತು ನಿಮ್ಮ Regional Commissioner ರವರು ಏನು ವರದಿ ಕೊಟ್ಟರು? ತಪ್ಪು ಯಾರಿಂದಾಯಿತು? ಅವರು ಕೊಟ್ಟ ವರದಿಯ ಮೇಲೇನಾದರೂ Judicial Enquiry ಮಾಡಿಸಿದ್ದೀರಾ? ಅಥವಾ ನಿಜವಾಗಿ, ಪ್ರಾಮಾಣಿಕವಾಗಿ ರೈತರಿಗೆ ಸ್ಪಂದಿಸಬೇಕು, ನಿಜವಾಗಿ ಸಾವು ಯಾರಿಂದಾಯಿತು? ಯಾವ ರೀತಿಯಾಯಿತು? ಅನ್ನುವುದನ್ನು ಅರಿಯುವುದಕ್ಕೋಸ್ಕರ ಕೊಟ್ಟರೋ ಅನ್ನುವುದು ನಮಗಿನ್ನೂ ಕೂಡ ಅನುಮಾನವಾಗಿಯೇ

ಉಳಿದಿದೆ. ಬಿತ್ತನೆ ಬೀಜವನ್ನು ಈ ರೀತಿಯಾಗಿ ಸರಬರಾಜು ಮಾಡಿದರೆ ಎಲ್ಲೋ ಒಂದು ರೀತಿಯಲ್ಲಿ ನಿರ್ವಹಣೆ ಮಾಡತಕ್ಕಂಥದ್ದರಲ್ಲಿ ಆಗಿರುವ ಲೋಪದೋಷದಿಂದಾಗಿ ಸರ್ಕಾರ ದೊಡ್ಡ ತಪ್ಪನ್ನು ಮಾಡಿದೆ ಎಂದು ಹೇಳಬೇಕಾಗುತ್ತದೆ. ಗೊಬ್ಬರದ ವಿಚಾರ ಬಂದ ತಕ್ಷಣವೇ ನಾವು ಬೆಟ್ಟು ಮಾಡಿ ತೋರಿಸುತ್ತಿದ್ದೇವೆ. ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ನೋಡಿ ಬಂದರು. ಸೌಜನ್ಯದ ಭೇಟಿ ಜೊತೆಗೆ ಗೊಬ್ಬರದ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೇನೆಂದು ಹೇಳಿದರು. ತಮ್ಮ Cabinet ಸಚಿವರೆಲ್ಲರನ್ನೂ ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ ಹಿನ್ನೆಲೆಯಲ್ಲಿ ನಮಗೊಂದು satisfaction ಇದೆ. ನಮಗೆ ಗೊಬ್ಬರ ಸರಬರಾಜಾಗುತ್ತದೆ, ಯಾವುದೇ ತೊಂದರೆಯಿಲ್ಲ ಎನ್ನುವ ಮಾತನ್ನು ಕೂಡ ಹೇಳಿದರು. ಜೊತೆಗೆ, ಕೇಂದ್ರದಿಂದ ಬಂದ ಕಾರ್ಯದರ್ಶಿಯವರು ಬಂದು review ಮಾಡಿದ ಸಂದರ್ಭದಲ್ಲಿ ಸಮಾಧಾನ ವ್ಯಕ್ತಪಡಿಸಿದರು. ರೈತರಿಗೆಲ್ಲೋ ಒಂದು ಕಡೆ ಸಮಾಧಾನವಾಯಿತು. ಗೊಬ್ಬರದಲ್ಲಿ ಯಾವುದೇ ರೀತಿ ತೊಂದರೆಯಾಗುವುದಿಲ್ಲ, ಇವತ್ತು ನಮಗೆ ಸರಬರಾಜಾಗುತ್ತದೆ ಎನ್ನುವ ವಿಶ್ವಾಸವನ್ನು ಮೂಡಿಸುವ ರೀತಿಯಲ್ಲಿ ತಾವು ಮಾಡಿದಿರಿ. ಆದರೆ, ಏನಾಯಿತು? ಮಾತೆತ್ತಿದರೆ ಎಲ್ಲರೂ ಮಾತನಾಡುವುದೇನೆಂದರೆ, ಇವತ್ತು ರಾಜ್ಯಪಾಲರ ಆಡಳಿತದಲ್ಲಾಗಿದೆ, ದುರ್ವ್ಯವಹಾರವಾಗಿದೆ, ಅಧಿಕಾರಿಗಳು ಕೆಲಸ ಮಾಡಿಲ್ಲವೆನ್ನುವ ಮಾತನ್ನು ಹೇಳುತ್ತಾರೆ. ರಾಜ್ಯಪಾಲರ ಆಡಳಿತವಿದ್ದದ್ದು ಏಪ್ರಿಲ್–ಮೇ ವರೆಗೆ. ಅಲ್ಲಿಯವರೆಗೂ ಕೂಡ ರಸಗೊಬ್ಬರ ಸರಬರಾಜಾಗಿರುವುದರಲ್ಲಿ ಯಾವುದೇ ರೀತಿಯ ಕೊರತೆಯನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಅವರಲ್ಲಿ ಆಗ ಬೇಡಿಕೆನುಗುಣವಾಗಿ ಗೊಬ್ಬರ ಇನ್ನೂ ಹೆಚ್ಚಿಗೆ ಬಂದಿದೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ತಾವು ಮೇ ತಿಂಗಳ ಕೊನೆಯಲ್ಲಿ ಅಧಿಕಾರ ವಹಿಸಿಕೊಂಡಿದ್ದೀರಿ. ಜೂನ್ ತಿಂಗಳಲ್ಲಿ ತೊಂದರೆ ಬಂತು. ನೀವು ಅದಕ್ಕೆ ರಾಜ್ಯಪಾಲರನ್ನು ದೂಷಿಸಬೇಕಾದ್ದಿಲ್ಲ. ಕೇಂದ್ರ ಸರ್ಕಾರವನ್ನೂ ದೂಷಣೆ ಮಾಡುವುದಕ್ಕಾಗುವುದಿಲ್ಲ. ಇದು day to day management. ನಿಮಗೆಲ್ಲಿ ಡಿಮಾಂಡ್ ಇದೆ, ಎಲ್ಲಿ ಯಾವ ತರಹ ಗೊಬ್ಬರ ಬೇಕಾಗುತ್ತದೆ., complexes ಬೇಕಾಗುತ್ತದೆ. ಯೂರಿಯಾ ಬೇಕಾಗುತ್ತದೆ ಎನ್ನುವುದನ್ನು daily monitor ಮಾಡಬೇಕಾಗುತ್ತದೆ. Company ಗಳ ಜೊತೆಗೆ ಚರ್ಚೆ ಮಾಡಿ ಗೊಬ್ಬರವನ್ನು ಸರಬರಾಜು ಮಾಡಬೇಕಾಗುತ್ತದೆ. ಮುಂಗಾರು ಮಳೆ ಯಾವ ಭಾಗದಲ್ಲಿ ಆಗುತ್ತದೆ? ಇದು ಕೇವಲ ಮೈಸೂರು, ಚಾಮರಾಜ ನಗರ ಮತ್ತು ಕೆಲವು ಭಾಗಗಳಲ್ಲಿ ಆಗುತ್ತಿದೆ. ಬೆಳಗಾಂ, ಶಿವಮೊಗ್ಗ ಈ ಭಾಗದಲ್ಲಾಗುತ್ತಿದೆ. ಅಂಥ ಭಾಗದಲ್ಲಿ ಬೇಕಾಗಿರುವ ಗೊಬ್ಬರವನ್ನು

ಕೂಡಿಸುವ ಕೆಲಸವನ್ನು ಮಾಡಿದ್ದರೆ ಏನೂ ತೊಂದರೆಯಾಗುವುದಕ್ಕೆ ಸಾಧ್ಯವಿರಲಿಲ್ಲ. ಏನಾಯಿತು? ಇವರು ಯಾವ ರೀತಿಯಾ planning ಮಾಡಿದ್ದರು? ಒಂದೊಂದು ಜಿಲ್ಲೆಗೆ ಅಲೋಕೇಷನ್ ಏನಾಯಿತು? ಕೇಂದ್ರ ಸರ್ಕಾರದ ವತಿಯಿಂದ kharif conference ಅನ್ನು March 15ನೇ ತಾರೀಖು ಕರೆಯುತ್ತಾರೆ. ಆಗ ಯಾವ್ಯಾವ ಜಿಲ್ಲೆ, ತಾಲ್ಲೂಕಿಗೆ ಎಷ್ಟು ಗೊಬ್ಬರ ಬೇಕೆನ್ನುವುದು ತೀರ್ಮಾನವಾಗುತ್ತದೆ. ಆ ತೀರ್ಮಾನದಂತೆ, ಬಂದಂಥ ಗೊಬ್ಬರವನ್ನು ಅವರೇ ಇಟ್ಟುಕೊಂಡರು. ಎಲ್ಲಿ ಕೊರತೆಯಾಗಿದೆ ಅಲ್ಲಿಗೆ ಗೊಬ್ಬರವನ್ನು ಕಳುಹಿಸುವುದಕ್ಕೆ ಡೀಲರ್‌ಗಳು ಒಪ್ಪಲಿಲ್ಲ. ಆ ಡೀಲರ್‌ಗಳು ನಿಮ್ಮನ್ನು ಕೇಳಿದ್ದೇನೆಂದರೆ, ಉದಾ: ಕೋಲಾರಕ್ಕೆ ಬರಬೇಕಾಗಿತ್ತು, ಕೋಲಾರಕ್ಕೆ ಬಂದಿದೆ, ಹಾವೇರಿಗೆ ಗೊಬ್ಬರ ಬೇಕೆಂದರೆ ಅಲ್ಲಿಗೆ Transportation charges ಕೊಡುವವರಾರು ಎಂದು ಹೇಳಿದರೆ ಸರ್ಕಾರ Transportation charges ಅನ್ನು reimburse ಮಾಡಿದ್ದರೆ ಹಾವೇರಿಯಲ್ಲಿ ಆ ಘಟನೆಯಾಗುವುದಕ್ಕೆ ಸಾಧ್ಯವಿರಲಿಲ್ಲ. ಇದಕ್ಕೆ ಕೇಂದ್ರ ಸರ್ಕಾರ ಹೊಣೆಯೇ? ಇದಕ್ಕೆ ರಾಜ್ಯಪಾರು ಹೊಣೆಯೇ? ನಿಮ್ಮ management ಮಾಡುವುದರಲ್ಲಿ ತೊಂದರೆಯಾಗಿದೆ ಎನ್ನುವುದು ಇದೆ. ತಾವು ಅಧಿಕಾರವನ್ನು ಸ್ವೀಕಾರ ಮಾಡಿದ ಮೇಲೆ ಇವತ್ತು ತಾವು ಯಾವ ರೀತಿಯಾಗಿ ಪ್ರಮುಖವಾದ ಸಮಸ್ಯೆಯನ್ನು ಎಷ್ಟರ ಮಟ್ಟಿಗೆ ಪ್ರಮಾಣಿಕವಾಗಿ ಸ್ಪಂದಿಸಿದಿರಿ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಈ ವ್ಯವಸ್ಥೆಯಲ್ಲಿ ಯಾವ ಪತ್ರಿಕೆ ನೋಡಿದರೂ ಅದರಲ್ಲಿ ಈ ವಿಚಾರವಿರುತ್ತಿತ್ತು. ವಿಶ್ಲೇಷಣೆ ಇರುತ್ತಿತ್ತು. ಸರ್ಕಾರ ಮುಂದೆ ಇಡಬೇಕಾದ ಹೆಜ್ಜೆ ಯಾವ ರೀತಿಯಾಗಿ ಇರಬೇಕಾಗಿತ್ತು, ತಪ್ಪು ಎಲ್ಲಿಯಾಗುತ್ತಿದೆ? ಯಾವ ಜಿಲ್ಲೆಯಲ್ಲಿ ಯಾವ ಡಿಮಾಂಡ್ ಇದೆ ಎನ್ನುವುದು ಕೂಡ ಪ್ರತಿಯೊಂದು ಪತ್ರಿಕೆಯಲ್ಲಿ ವಿಚಾರ ಪ್ರಸ್ತಾಪವಾಗುತ್ತಿತ್ತು. ಅದನ್ನಾದರೂ ನೋಡಿ ಎಚ್ಚೆತ್ತುಕೊಳ್ಳಬಹುದಾಗಿತ್ತು. ಆದರೂ ಕೂಡ ಎಚ್ಚೆತ್ತುಕೊಳ್ಳುವ ಕೆಲಸವನ್ನು ತಾವು ಮಾಡಲಿಲ್ಲವೆಂದಾಗ ಇದಕ್ಕೆ ಹೊಣೆ ಯಾರು? ಆ ಗೊಬ್ಬರದ ವಿಚಾರದಲ್ಲಿ ನನಗನಿಸುತ್ತದೆ, ಎಲ್ಲರೂ ಮಾತನಾಡುವಾಗ ನಾನೊಂದು ಸಲಹೆ ಕೊಟ್ಟೆ. ಕೃಷಿ ಖಾತೆಯನ್ನು ಸಮರ್ಥವಾದ ವ್ಯಕ್ತಿಗೆ ಕೊಟ್ಟಿದ್ದೀರಿ, ಆದರೆ, ಇಂಥ ಪರಿಸ್ಥಿತಿಯಲ್ಲಿ ಬಹಶಃ ತಾವೇ ಕೃಷಿ ಖಾತೆಯನ್ನು ಅಥವಾ ಗ್ರಾಮೀಣಾಭಿವೃದ್ಧಿ ಖಾತೆಯನ್ನು ಇಟ್ಟುಕೊಂಡಿದ್ದರೆ ನಿಜವಾಗಲೂ ಕೂಡ ಒಳ್ಳೆಯ ಹೆಸರು ಬರುತ್ತಿತ್ತು. ಅದನ್ನು ನಿರ್ವಹಣೆ ಮಾಡುವುದಕ್ಕೆ ನಿಮಗೆ ಸಾಧ್ಯವಾಗುತ್ತಿತ್ತು. ಎಂಬುದನ್ನು ನನ್ನ ಅಭಿಪ್ರಾಯ. ತಾವು ಈಗಲೂ ಕೂಡ ಯೋಚನೆ ಮಾಡಬಹುದು. ಮುಂದಿನ ದಿನಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸಬೇಕಾದಾಗ ನೀವೇ ಆ ಖಾತೆಯನ್ನು ಇಟ್ಟುಕೊಂಡರೆ ಒಳ್ಳೆಯದೆಂದು ಹೇಳುವುದರ

ಜೊತೆಗೆ ಈಗ ಸಮಸ್ಯೆ ಬಂದಿರತಕ್ಕಂಥದ್ದು, ಎಪ್ರೀಲ್, ಮೇ, ನಲ್ಲಿ ತೊಂದರೆಯಿಲ್ಲ. ಜೂನ್‌ನಲ್ಲಿ ಕೂಡ ಕೆಲವು ಜಿಲ್ಲೆಗಳಲ್ಲಿ ಮಳೆಯಾಗುತ್ತಿಲ್ಲ. ಬಹಳಷ್ಟು ತಾಲ್ಲೂಕುಗಳಲ್ಲಿ ಮಳೆಯಿಲ್ಲ, ಬಿತ್ತನೆ ಇಲ್ಲ, ಆದರೂ ಕೂಡ ಗೊಬ್ಬರಕ್ಕಾಗಿ ಹಾಹಾಕಾರವಿದೆ. ನೀವು ಕೇಂದ್ರದ ಕಾರ್ಯದರ್ಶಿಗಳೊಡನೆ ಮಾತನಾಡುವಂಥ ಸಂದರ್ಭದಲ್ಲಿ, ಮಾತುಕತೆಯ ಸಾರಾಂಶ ಏನು ಎಂದುದನ್ನು ಈಗಾಗಲೇ ನಮ್ಮ ನಾಯಕರಾದ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂಥ ಸಂದರ್ಭದಲ್ಲಿ ಒಂದೊಂದಾಗಿ ಬಿಡಿಸಿ ಹೇಳುವಂಥ ಸಂದರ್ಭದಲ್ಲಿ ಆ ಲೋಪ ಕೇಂದ್ರ ಸರ್ಕಾರದಿಂದ ಆಗಿಲ್ಲವೆಂದು ಮನವರಿಕೆ ಮಾಡಿಕೊಟ್ಟಿದ್ದಾರೆ. ಕಾಗದ ಬರೆದಿರುವವರು ಯಾರು ಎಂದರೆ, ಕರ್ನಾಟಕದ ಮುಖ್ಯಕಾರ್ಯದರ್ಶಿಗಳು ಬರೆದಿರತಕ್ಕಂಥ ವಿಚಾರ ಅದರಲ್ಲಿ ಅವರು ಒಂದು ಮಾತು ಹೇಳುತ್ತಾರೆ. "I am writing to inform you that upto 10th June 2008 we have received 23,100 metric tons of DAP as against the programme supply of 23,060 metric tons and 24,573 metric tons of complex fertilizers as against supply of 19,195 metric tons." ಇದು ತಮ್ಮ ಮುಖ್ಯ ಕಾರ್ಯದರ್ಶಿಗಳೆ ಬರೆದಿರತಕ್ಕಂಥ ಕಾಗದ. ಆ ಕಾಗದದ ಸಾರಾಂಶ ಇದು. ಏಪ್ರೀಲ್ ಮತ್ತು ಮೇ ನಲ್ಲಿ ತೊಂದರೆಯಾಗುವುದಿಲ್ಲ ಎನ್ನುವುದಕ್ಕೆ ನಿಮಗೆ ಒಂದು ಮಾತನ್ನು ಹೇಳುತ್ತೇನೆ. " As against the availability of seeds and fertilizers in April, May 2008, as it could be seen, the overall position of fertilizers in the State was comfortable in respect of all fertilizers. However, in respect of DAP and complexes certain districts has stress situation towards the end of May, in early June 2008. It was the responsibility of the State Government to prepare the district wise plan and oversee the supply of manufactures according to the plan. Unfortunately, this was not done properly and hence the adverse situation in some of the districts. " ಮುಖ್ಯ ಕಾರ್ಯದರ್ಶಿಗಳ ಟಿಪ್ಪಣಿಯಲ್ಲಿರತಕ್ಕಂಥ ವಿಚಾರ ಎಂದು ಹೇಳಿದಾಗ, ನೀವು ಯಾರನ್ನು ಹೊಣೆ ಮಾಡುತ್ತೀರಾ? ಮತ್ತೊಂದು ಮುಖ್ಯವಾದ ಅಂಶ ಏನೆಂದರೆ, " the Chief Secretary himself informed the Chief Minister that the supply of fertilizers ha sbeen made as planned by the Government of India and that it is for the State Government

officials now to monitor the fertilizer supply position on day to day basis." ಇದನ್ನೇ ನಾನು ಹೇಳಿದ್ದು. ಜೂನ್ ತಿಂಗಳಲ್ಲಿ ರಾಜ್ಯಪಾಲರ ಆಡಳಿತ ಇರಲಿಲ್ಲ. ಮ್ಯಾನೇಜ್ ಮಾಡಬೇಕಾದವರು ರಾಜ್ಯ ಸರ್ಕಾರವೇ ವಿನಾಃ ಬೇರೆಯವರು ಅಲ್ಲ. ರಾಜ್ಯ ಸರ್ಕಾರದ ಸಚಿವರುಗಳು ಮಾಡಬೇಕಾಗಿತ್ತು. ಅವರು ಯಾವುದೇ ಜಿಲ್ಲೆಯವರಾಗಿದ್ದರು ಅವರಿಗೆ ಪೋರ್ಟ್‌ಫೋಲಿಯೋ ಇರಲಿ ಇಲ್ಲದಿರಲಿ ಅವರು ನಿರ್ವಹಣೆಯನ್ನು ಮಾಡಬೇಕಾಗಿತ್ತು. ಎಲ್ಲಿ ತಪ್ಪಾಗಿದೆ ಎಂಬುದನ್ನು ತಾವು ಯೋಚಿಸಬೇಕು. ನಿಮಗೂ ಕೂಡ ಮಾಹಿತಿ ಗೊತ್ತಿದೆ. ನಾನು ಮತ್ತೆ ಮತ್ತೆ ಅದನ್ನೆ ಹೇಳುವ ಅವಶ್ಯಕತೆ ಇಲ್ಲವೆಂದು ಭಾವಿಸುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರ ಏನೆಂದರೆ, ಎಲ್ಲೋ ಒಂದು ಕಡೆಗೆ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸತಕ್ಕಂಥದ್ದು ಆಗಬಾರದು. ನಿನ್ನೆ ಮುಖ್ಯಮಂತ್ರಿಗಳು ನೀಡಿರುವಂಥ ಜಾಹೀರಾತು ದಿನ ಪತ್ರಿಕೆಯಲ್ಲಿ ಬಂದಿತ್ತು. ಅದರಲ್ಲಿ ಪರೋಕ್ಷವಾಗಿ ಎಲ್ಲೋ ಒಂದು ಕಡೆಗೆ ಕೇಂದ್ರ ಸರ್ಕಾರ total responsibility ಅವರದ್ದು ನಮ್ಮದೇನೂ ಇಲ್ಲ ನಮ್ಮದು ಕೇವಲ supply ಮಾಡತಕ್ಕಂಥವರು ಎನ್ನುವ ರೀತಿಯಲ್ಲಿ ಇದೆ. Post man ಎನ್ನುವ ರೀತಿಯಲ್ಲಿ ಇದೆ. Fertilizer Control Order ಪ್ರಕಾರ de-control ಆಗಿರತಕ್ಕ ಸಂದರ್ಭದಲ್ಲಿ ಕಂಪನಿಗಳು, ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಈ ಮೂರು ಕೂಡ ಒಂದು ರೀತಿಯ tripatite agreement ಆಗಬೇಕಾಗುತ್ತದೆ. ಈ ಮೂರು ಅಂತಸ್ತಿನಲ್ಲಿ ಕೂಡ ಒಂದು ಚರ್ಚೆಯಾಗಬೇಕಾಗುತ್ತದೆ. ಒಂದು conscious opinion ಕೂಡ ಬರಬೇಕಾಗುತ್ತದೆ. ಕೇಂದ್ರ ಸರ್ಕಾರದಲ್ಲಿ ಏನಾಗಿದೆ ಎಂದರೆ, ಸಬ್ಸಿಡಿ ಕೊಡಲಿಲ್ಲ. ಕೆಲವು ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದು ಎಂಬತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಗೊಬ್ಬರದ ಸಬ್ಸಿಡಿಯನ್ನು ಕಂಪನಿಗಳಿಗೆ ಕೊಡಲಿಲ್ಲ ಹೀಗಾಗಿ ಇವತ್ತು ಗೊಬ್ಬರ ಸರಬರಾಜು ಆಗುತ್ತಿಲ್ಲ ಎನ್ನುವ ಮಾಹಿತಿಯನ್ನು ಹಳ್ಳಿಯ ಮಟ್ಟಕ್ಕೆ ಮುಟ್ಟಿಸುವಂಥ ಕೆಲಸ ಮಟ್ಟಿಸುವಂಥ ಕೆಲಸವಾಗಿದೆ. ಮುಖ್ಯ ಕಾರ್ಯದರ್ಶಿಗಳು ಬರೆದಿರುವಂಥ ಪತ್ರದ ಒಂದು ಸಾಲನ್ನು ಓದುವುದಕ್ಕೆ ಇಷ್ಟಪಡುತ್ತೇನೆ. "During the meeting on 07-6-2008 the Chief Minister of Karnataka also indicated that a sum of Rs. 10,000 crores of subsidy is due to fertilizer companies." ಅದು ಹೇಗೆ ನಿಮಗೆ ವರ್ತಮಾನ ಗೊತ್ತಾಯಿತೋನನಗಂತೂ ಅರ್ಥವಾಗಲಿಲ್ಲ. ಯಾರು ಮಾಹಿತಿ ಕೊಟ್ಟಿರು ಎಂಬುದು ನನಗೆ ಗೊತ್ತಾಗಲಿಲ್ಲ. ಮುಖ್ಯಮಂತ್ರಿಗಳಾದವರು ಆ ವಿಚಾರವನ್ನು ಪ್ರಸ್ತಾಪಿಸಬೇಕಾದರೆ, ಅದಿಕೃತವಾದ ಮಾಹಿತಿ ನಿಮ್ಮ ಬಳಿ ಇರಬೇಕಾಗಿತ್ತು. ಆದರೆ, ಅಲ್ಲಿ ಆಗಿದ್ದು ಏನೆಂದರೆ,

this position not correct as on 11-06-2008. Only an amount of 1,070 crores is due to be paid to the various fertilizer companies against bills properly raised by them. ಸಾವಿರದ ಎಪ್ಪತ್ತು ಕೋಟಿ ಮಾತ್ರ bills ಗೆ against ಆಗಿ ಕೊಡ ಬೇಕಾಗಿತ್ತು. ಅದು ಹತ್ತು ಸಾವಿರ ಕೋಟಿಯಲ್ಲ. There is also an approved liability of 3,600 crores for which bill are expected from the companies shortly an payment will be made in accordance with the bill procedures. ಕಂಪನಿಯವರು ಬಿಲ್ ಕೊಡಲಾರದೇ ಯಾರದರೂ ಪೆಮೆಂಟ್ ರಿಲೀಸ್ ಮಾಡುವುದಕ್ಕಾಗುತ್ತದೆಯೇ? ಅದು Company's mistake ಇರಬಹುದು. on going procedure ಇರಬಹುದು. ಬಿಲ್ಸ್ ಕೊಡಲೇ ಇಷ್ಟು due ಇದೆ. ಎಂದು ಯಾರಾದರೂ complaint ಮಾಡಿದರೆ ಅದು ಎಷ್ಟರ ಮಟ್ಟಿಗೆ ಸರಿಯಾಗುತ್ತದೆ? ಎಲ್ಲೋ ಒಂದು ಕಡೆಗೆ ಏನು ಭಾಸವಾಗುತ್ತದೆಂದರೆ, ಮುಖ್ಯಮಂತ್ರಿಗಳಿಗೂ ಕೂಡ ಸರಿಯಾಗಿ ವರ್ತಮಾನ ರವಾನೆಯಾಗುತ್ತಿಲ್ಲ. ಮುಖ್ಯಮಂತ್ರಿಗಳಿಗೂ ಕೂಡ ಸರಿಯಾಗಿ ವಾಸ್ತಾವಾಂಶವಾದ ಅಂಕಿ ಅಂಶಗಳು ಸಿಗುತ್ತಿಲ್ಲ. ಎಂದರೆ ಲೋಪ ಎಲ್ಲಿ ಇದೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳುವುದರ ಜೊತೆಗೆ, ಇವತ್ತು ನಾನು ಅದನ್ನು ಕೇವಲ ಬೆಟ್ಟು ಮಾಡಿ ತೋರಿಸುತ್ತೇನೆ. ಎನ್ನುವುದಕ್ಕಿಂತಲೂ ಹೆಚ್ಚಾಗಿ ಇನ್ನು ಮುಂದೆಯಾದರೂ ಆ ಸಮಸ್ಯೆ ಬಗೆಹರಿಯಬೇಕು. ಈ ತಿಂಗಳಲ್ಲಿ ಮಳೆ ಬರಲಿಲ್ಲ, ಇನ್ನು ಮುಂದೆ ಏನಾದರೂ ಮಳೆ ಬರುವ ಸಂದರ್ಭದಲ್ಲಿ ಬಹಶಃ June supplies ಕೇಂದ್ರ ಸರ್ಕಾರ ಇವತ್ತೇನು ತಮಗೆ ಒಪ್ಪಿಗೆ ಕೊಟ್ಟಿದೆ, ಅಷ್ಟರ ಮಟ್ಟಿಗೆ ಆ ಕಂಪನಿಗಳ ಹತ್ತಿರ ನೇರವಾಗಿ ಮಾತನಾಡಿ ಗೊಬ್ಬರವನ್ನು ತರಿಸುವ ಕೆಲಸ ಮಾಡಬೇಕಾಗುತ್ತದೆ. ಅವರಿಗೆ ಯಾವುದಾದರೂ ತೊಂದರೆಯಿದ್ದರೆ, ತಾವು ಅವರ್ತನಿಧಿಯನ್ನು 500 ಕೋಟಿಯಿಂದ 1000 ಕೋಟಿಗೆ ಮಾಡುತ್ತೇವೆ ಎನ್ನುವ ಮಾತನ್ನು ಕೂಡ ಆಡುತ್ತಿದ್ದೀರಿ. ಎಲ್ಲೋ ಒಂದು ಕಡೆಗೆ ಅವರ್ತನಿಧಿಯನ್ನು ಬಳಸಿಯಾದರೂ ನೀವು ಆ ಕಂಪನಿಗಳ ನೆರವಿಗೆ ಹೋಗಿ ಗೊಬ್ಬರ ಬೇಗ ರವಾನೆಯಾಗುವ ಮಟ್ಟಕ್ಕೆ ನೀವು ಸ್ಪಂದಿಸಬಹುದಾಗಿತ್ತು. ಆ ಕೆಲಸವೂ ಕೂಡ ಆಗಲಿಲ್ಲ. ಇವತ್ತು ನೀವು Marketing Federation ಗೆ ಜವಾಬ್ದಾರಿಯನ್ನು ಬಹಿಸಿದ್ದೀರಿ. ಅವರು ಇವತ್ತು ಗೊಬ್ಬರಗಳನ್ನು ಸರಬರಾಜು ಮಾಡಬೇಕು. Marketing Federation ಮೂಲಕ ಎಲ್ಲಾ society ಗಳಿಗೆ ನೀವು ಗೊಬ್ಬರವನ್ನು ರವಾನೆ ಮಾಡಬೇಕೆಂದು ನೀವು ಸರ್ಕಾರಿ ಆದೇಶ ಮಾಡಿದಿರಿ. ಎಷ್ಟು ಸೊಸೈಟಿಗಳಲ್ಲಿ ಲೈಸನ್ಸ್ ಇದೆ. ಯಾವ ಸೊಸೈಟಿಯಲ್ಲೂ ಲೈಸನ್ಸ್ ಇಲ್ಲ. ಒಂದು

ಕಡೆ ಲೈಸನ್ಸ್ ಇದ್ದರೆ ಫಂಡ್ಸ್ ಇಲ್ಲ. ಅಂಥ ಸಂದರ್ಭದಲ್ಲಿ ಗೊಬ್ಬರ ಯಾವ ರೀತಿಯಾಗಿ ರವಾನೆಯಾಗುತ್ತದೆ ಎಂಬುದನ್ನು ತಾವು ಯೋಚಿಸಬೇಕು. ನಮ್ಮಲ್ಲಿರುವ ಸುಮಾರು 11 ಸಾವಿರ Distributors ಏನು ಇದ್ದಾರೆ ಅವರ ಕುಂದುಕೊರತೆಗಳೇನು ಎಂದು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ, private ನವರಾಗಬಹುದು ಇಲ್ಲಾ ಅಂದರೆ Marketing Federation ರವರಾಗಬಹುದು ಆ ಗೊಬ್ಬರವನ್ನು ಸರಬರಾಜು ಮಾಡಬೇಕಾಗುತ್ತದೆ.ಅಲ್ಲಿ struck up ಆಗಿರತಕ್ಕಂಥದ್ದು. ಗೊಬ್ಬರ ಒಂದು ಕಡೆಗೆ ದಾಸ್ತಾನು ಆಗಿದೆ, ಆದರೆ ಹಳ್ಳಿಗಳಿಗೆ ರವಾನೆಯಾಗುತ್ತಿಲ್ಲ. ಎನ್ನುವುದಕ್ಕೆ ಅದು ಮೂಲ ಕಾರಣ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಗೋಲಿಬಾರ್ ಆದಮೇಲೆ ತಾವು ಅಲ್ಲಿಗೆ ಹೋಗಿ ಸಾಂತ್ವನ ಹೇಳಿದಿರಿ, ಅದೇ ರೀತಿ ವಿರೋಧ ಪಕ್ಷದ ನಾಯಕರು ಕೂಡ ಹೋಗಿದ್ದರು. ತಾವು ಹೋದಂಥ ಸಂದರ್ಭದಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು ಬಂದಿದ್ದೀರಿ. ತಾವು ವೈಯುಕ್ತಿಕವಾಗಿ ಕೊಟ್ಟಿದ್ದೀರೋ ಅಥವಾ ಸರ್ಕಾರದಿಂದ ಕೊಟ್ಟಿದ್ದೀರೋ ನನಗೆ ಗೊತ್ತಿಲ್ಲ. ಆದರೆ, ಇನ್ನು ಮುಂದೆ ಗೋಲಿಬಾರ್‌ನಲ್ಲಿ ಮಡಿದಂಥವರು ಯಾರೇ ಆದರೂ ಕೂಡ, ತಾವು ಈಗೇನು ಸಿದ್ದಲಿಂಗಪ್ಪ ಚೂರಿಯವರಿಗೇನು ಮೂರು ಲಕ್ಷ ರೂಪಾಯಿ ಕೊಟ್ಟಿದ್ದೀರಿ, it becomes a precedent. It becomes mandatory. ಇನ್ನು ಮುಂದೆ ಯಾವುದೇ ಸಂದರ್ಭದಲ್ಲಿಯೂ ಕೂಡ ಇಂಥ ಸಂದರ್ಭಗಳು ಎದುರಾದಾಗ ಮೂರು ಲಕ್ಷ ರೂಪಾಯಿಗಳನ್ನು ತಾವು ಕೊಡುತ್ತೀರಾ ಎಂದು ನಾವು ಕೇಳಬೇಕಾಗುತ್ತದೆ. ಅದಕ್ಕೆ ಸರ್ಕಾರದ ಒಂದು ಆಜ್ಞೆ ಕೂಡ ಆಗಬೇಕಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗುತ್ತದೆ. ನಾನು ಹಿಂದೆ ಕೃಷಿ ಸಚಿವಾನಾಗಿದ್ದ ಸಂದರ್ಭದಲ್ಲಿ ಆತ್ಮಹತ್ಯೆಗೊಳಗಾಗಿದ್ದಂಥ ರೈತ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿ ಕೊಡಬೇಕೆಂದು ನಾವು ಫಿಕ್ಸ್ ಮಾಡಿ ಸುಮಾರು 8–10 ವರ್ಷಗಳಾಯಿತು. ಈಗ ಇರುವ ಒಂದು ಲಕ್ಷ ರೂಪಾಯಿಗೆ ಮೂರು ಲಕ್ಷ ರೂಪಾಯಿ ಕೊಡುತ್ತಿರೋ ಎನ್ನುವುದನ್ನು ತಾವು ಹೇಳಬೇಕಾಗುತ್ತದೆ. ನಿಮಗೆ ಜುಲೈ ತಿಂಗಳಲ್ಲಿ ಅತ್ಯಂತ ಕಷ್ಟದ ದಿನಗಳು ಬರುತ್ತವೆ, ಆಗ ಮಳೆ ಬಂದಂಥ ಸಂದರ್ಭದಲ್ಲಿ ಏಕದಂ ಜನಗಳು ಅಂಗಡಿಗಳ ಮುಂದೆ ಸಾಲಾಗಿ ನಿಂತಾಗ ಇನ್ನೊಂದು ಅತ್ಯಂತ ದೊಡ್ಡ ಕಷ್ಟವನ್ನು ಎದುರಿಸಬೇಕಾಗುತ್ತದೆ. ಅದಕ್ಕೆ ನೀವು ಈಗಲೇ ಆ ಕಂಪನಿಗಳ ಹತ್ತಿರ ಕುಳಿತು ಚರ್ಚಿಸಿ ಗೊಬ್ಬರವನ್ನು ತರಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ನಿಮ್ಮ Warehouse Corporation ನಲ್ಲಿ stock ಇರಬಹುದು, ಆದರೆ ಅದು ಮುಖ್ಯವಲ್ಲ, ಅದು ರೈತರ ಮನೆ ಮುಂದೆ ಹೋಗಿ ನಿಂತರೆ ಅಥವಾ ಸೋಸೈಟಿಗಳಿಗೆ

ಹೋಗಿ ಬಿದ್ದರೆ ಯಾವ ರೈತನೂ panic ಆಗತಕ್ಕಂಥ ಪ್ರಶ್ನೆಯಲ್ಲ. ಅಥವಾ ದುರಾಶೆಯಿಂದ ಸಿಗುತ್ತದೋ ಇಲ್ಲವೋ ಎನ್ನುವ ಅನುಮಾನದಿಂದ ಕೊಳ್ಳತಕ್ಕಂಥ ಪ್ರಶ್ನೆ ಕೂಡ ಬರುವುದಿಲ್ಲ. ಆದರೆ ಗೊಬ್ಬರ ಏನು ಗೋದಾಮಿನಲ್ಲಿದೆ ಆದರೆ ಅದು ಇವತ್ತು ಸೋಸೈಟಿಗಳಲ್ಲಿ ಅಥವಾ ಈ ಹಳ್ಳಿಗಳ ಗೋದಾಮಿನಲ್ಲಿ ಇಲ್ಲದೇ ಇವತ್ತು ಕಷ್ಟವಾಗಿದೆ ಎನ್ನುವಂಥ ಮಾತನ್ನು ಆ panic ಆಗುವುದನ್ನು ತಪ್ಪಿಸಬೇಕಾದಾಗ ಗೊಬ್ಬರವನ್ನು ಅಲ್ಲಿಗೆ ಮೊದಲು ರವಾನೆ ಮಾಡಿಸತಕ್ಕಂಥ ಕೆಲಸವನ್ನು ಮಾಡಬೇಕು ಎನ್ನುತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಮುಖ್ಯವಾದಂಥ ವಿಚಾರ ಮೊನ್ನೆ ಪತ್ರಿಕೆಯಲ್ಲಿ ನಾನು ನೋಡಿದೆ. ಬಹಳಷ್ಟು ಕಡೆಗೆ ಈಗಾಗಲೇ ಸ್ಪೂರಿಯಸ್ ಗೊಬ್ಬರ ಬರುವುದಕ್ಕೆ ಪ್ರಾರಂಭವಾಗಿದೆ. ರಂಗೋಲಿ ತರಹ ಪುಡಿ ಇರುತ್ತದೆ, ಆ ಪುಡಿಯನ್ನು ಹಾಕಿ ಇವತ್ತು ಗೊಬ್ಬರವೆಂದು ಕೊಡತಕ್ಕಂಥದ್ದನ್ನು ಸಾಕಷ್ಟು ಕಡೆ ಉತ್ತರ ಕರ್ನಾಟಕ ಭಾಗದಲ್ಲಿ ನಾನು ಕೇಳಿದ್ದೇನೆ. ಇನ್ನು ಮುಂದೆ ಸ್ಪೂರಿಯಸ್ ಗೊಬ್ಬರವನ್ನು ಕೊಡತಕ್ಕಂಥ ದಂಧೆ ಇದ್ದೇ ಇದೆ. ಅದನ್ನು ತಗ್ಗಿಸಬೇಕಾದಾಗ ನೀವು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಇನ್ನೊಂದು ಮುಖ್ಯವಾದಂಥ ವಿಚಾರ, ಇವತ್ತು ಏನು ಯೂರಿಯಾ ಗೊಬ್ಬರ, ಇವತ್ತು ನಿಮ್ಮಲ್ಲಿ ಸಾಕಷ್ಟು ದಾಸ್ತಾನು ಇದೆ. ಅದರ ಬಳಕೆಯಾಗುವುದು ಯಾವಾಗ ಎಂದರೆ ಪೈರು ಬಂದು 15–20 ದಿವಸ ಒಂದು ತಿಂಗಳಾದ ಮೇಲೆ ಯೂರಿಯಾ ಬಳಕೆಯಾಗತಕ್ಕಂಥದ್ದು. ಈಗಾಗಲೇ ಯೂರಿಯಾ ಸಾಕಷ್ಟು ರೀತಿಯಲ್ಲಿ ಸೋಸೈಟಿಗಳಲ್ಲಿ ಅಥವಾ ಬೇರೆ ಬೇರೆ ಡೀಲರ್ಸ್‌ನಿಂದ ಅದು ಎಲ್ಲೋ ಒಂದು ಕಡೆಗೆ ರವಾನೆಯಾಗಿದೆ. ಈಗಾಗಲೇ ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಇವತ್ತು ಒಬ್ಬೊಬ್ಬ ಲಾರಿಯವನಿಗೆ ಹತ್ತತ್ತು ಸಾವಿರ ರೂ. ಗಳನ್ನು ಕೊಟ್ಟು ಬಿಟ್ಟರೆ ಆ ಗೊಬ್ಬರ ಕಂಪನಿಯವರೆ ಬೇರೆ ಬೇರೆ ಕಡೆ ಇಡುವಂಥ ಪ್ರಯತ್ನವನ್ನು ಮಾಡಿದ್ದಾರೆ. ನಿಮ್ಮ ಹತ್ತಿರ ನಾನು ಏಕೆ ಹೇಳುತ್ತಿದ್ದೇನೆಂದರೆ, ನಿಮ್ಮ ಹತ್ತಿರ sufficient stock ಯೂರಿಯಾ ಇದ್ದಾಗಲೂ ಕೂಡ ಮುಂದಿನ ಜುಲೈ ಆಗಸ್ಟ್ ತಿಂಗಳಲ್ಲಿ ಅದಕ್ಕೂ ಕೂಡ ಕೊರತೆ ಬರತಕ್ಕಂಥದ್ದು ಕಾಳಸಂತೆಯಲ್ಲಿ ಮಾರಾಟವಾಗತಕ್ಕಂಥದ್ದು ಆ ಸಂದರ್ಭ ಇದೆ ಇನ್ನತಕ್ಕಂಥದನ್ನು ಕೂಡ ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಮಾನ್ಯ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶ್ರಿ ಸುರೇಶ್‌ಕುಮಾರ್‌ರವರು ಬಂದಾಗ ನಾವು ಸಲಹೆಯನ್ನು ಕೊಟ್ಟಿರುತ್ತೇವೆ. ಇವತ್ತು ತಹಶೀಲ್ದಾರ್, Assistant Directors, Agriculture ಅವರೆಲ್ಲರನ್ನು taskforce ಮಾಡಿ ಇದನ್ನು ನಿರಂತರವಾಗಿ ಅದನ್ನು ಕಂಡು ಹಿಡಿಯತಕ್ಕಂಥ ಕೆಲಸವನ್ನು ಮಾಡಿದರೆ, ಅದು ಪತ್ರಿಕೆಯಲ್ಲಿ ಆ ವಿಚಾರವನ್ನು

ಪ್ರಸ್ತಾಪ ಮಾಡುವಂಥ ಕೆಲಸವನ್ನು ಮಾಡಿದರೆ, ಅದನ್ನು ಇಲ್ಲೋ ಒಂದು ಕಡೆ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಆ ರೀತಿಯಾದಂಥ ಎಚ್ಚರಿಕೆಯ ಕೆಲಸವನ್ನು ಮಾಡಬೇಕಾಗುತ್ತದೆ ಎನ್ನುವಂಥ ಮಾತನ್ನು ಹೇಳುವುದರ ಜೊತೆಗೆ, ಇನ್ನೊಂದುಮುಖ್ಯವಾದ ವಿಚಾರ, ಜುಲೈ, ಆಗಸ್ಟ್ ತಿಂಗಳಲ್ಲಿ ನಿಮಗೆ pesticides ವಿಚಾರ ಬರುತ್ತದೆ. ಇದರಿಂದ ಹಿಂದೆ ಆತ್ಮಹತ್ಯೆಗಳು ಆಗಿರತಕ್ಕಂಥದ್ದು ಅದಕ್ಕೋಸ್ಕರ ಸದನ ಸಮಿತಿಯಾಗಿ ಅದರ ವರದಿಯನ್ನು ಕೊಟ್ಟಿರತಕ್ಕಂಥದ್ದು ಇದೆಲ್ಲಾ ಕೂಡ ಗೊತ್ತಿರತಕ್ಕಂಥದ್ದು. ಈ ಸರ್ಕಾರಕ್ಕೆ ಕೂಡ ಗೊತ್ತಿರತಕ್ಕಥದ್ದು. ಇವತ್ತು pesticides ಗೊಬ್ಬರಕ್ಕಿಂತಲೂ ದುಬಾರಿಯಾಗುತ್ತಿದೆ. ಕಾರಣವೇನೆಂದರೆ, ಇವತ್ತು pesticides components ಇವತ್ತು International Market ನಲ್ಲಿ rate ಜಾಸ್ತಿಯಾಗಿರತಕ್ಕಂಥ ಸಂದರ್ಭದಲ್ಲಿ Phosphoric acid ಅದು ಗೊಬ್ಬರಕ್ಕಾಗಲಿ, pesticides ಗೆ ಉಪಯೋಗಿಸತಕ್ಕಂಥದ್ದು. ಅಗಲಿ, ಸುಮಾರು 1 to 800 times ಜಾಸ್ತಿಯಾಗಿದೆ. ಅಂದಾಗ ಇವತ್ತು ಆ pesticides ನ ಪರಿಸ್ಥಿತಿ ಏನಾಗುತ್ತದೆ ಎನ್ನತಕ್ಕಂಥದ್ದನ್ನು ಕೂಡ ತಾವು ಯೋಚನೆ ಮಾಡಬೇಕು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೀಜ ಮತ್ತು ರಸಗೊಬ್ಬರದ ವಿಚಾರದಲ್ಲಿ ಯಾವುದೇ ರೀತಿ ವಿಳಂಬ ಮಾಡದಿರುವ ರೀತಿಯಲ್ಲಿ ಅದನ್ನು ರೈತರಿಗೆ ರವಾನೆ ಮಾಡಿಸುವ ಕೆಲಸವನ್ನು ಮಾಡಬೇಕು. ಎನ್ನತಕ್ಕಂಥ ಮಾತನ್ನು ಹೇಳುವುದರ ಜೊತೆಗೆ, ಒಂದು ಬಹಳ ಮುಖ್ಯವಾಗಿ , ನಿಮಗೆ ಎಲ್ಲೋ ಒಂದು ಕಡೆಗೆ ರಾಜಕಾರಣಿಗಳು ವಿರೋಧ ಪಕ್ಷದವರು ಇದಕ್ಕೆಲ್ಲಾ ಕಾರಣಕರ್ತರು ಆಗಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳುವಂಥದ್ದರಲ್ಲಿ ಇವತ್ತು ಸತ್ಯವಿಲ್ಲ. ರೈತರು ಬೀದಿಗೆ ಇಳಿದಂಥ ಸಂದರ್ಭದಲ್ಲಿ ಎಲ್ಲರೂ ಕೂಡ ಅವರನ್ನು ಅನುಸರಿಸಲೇಬೇಕಾಗುತ್ತದೆ. ರೈತ ಇವತ್ತು ಅವನು ಏನು ಕೇಳಲಿಲ್ಲ. ಬೇರೆ ಏನು ಮಾಡಿ ಕೊಡಿ ಎಂದು ಕೇಳಲಿಲ್ಲ. ಬಿತ್ತನೆಯಿಂದ ಯಾರಿಗೆ ಸಹಾಯವೆಂದರೆ, ರಾಜ್ಯದ ಜನರಿಗೆ ಸಹಾಯವಾಗುತ್ತದೆ. ಅವರಿಗೆ ಸಹಾಯವಾಗುವುದಕ್ಕಂಥ ಜಾಸ್ತಿ ಬೇರೆಯವರಿಗೆ ಸಹಾಯವಾಗುತ್ತದೆ. ನಮಗೆ ಗೊಬ್ಬರ ಕೊಡಿ ಎಂದು ಹೇಳಿ ಬೀದಿಗೆ ಬಂದಾಗ ಅವರಿಗೆ ಏಟು ಕೊಡತಕ್ಕಂಥದ್ದು ಆಗಿದೆ. ಎನ್ನುವ ಮಾತನ್ನು ಹೇಳುವುದರ ಜೊತೆಗೆ, ಅದು ಸರಿಯೇ ಎಂದು ಹೇಳುವುದರ ಜೊತೆಗೆ, ಈಗಾಗಲೇ ನಿರಂತರವಾಗಿ ಪ್ರತಿನಿತ್ಯ ಸರಣಿ ರೂಪದಲ್ಲಿ ಇವತ್ತು ಆತ್ಮಹತ್ಯೆಗಳು ಆಗುತ್ತಿವೆ. ಆತ್ಮಹತ್ಯೆಗಳ ವಿಚಾರ ಬಂದಾಗ ತಮ್ಮ ಕ್ಷೇತ್ರದಲ್ಲಿ ಕೂಡ ಆತ್ಮಹತ್ಯೆಗಳು ಆಗಿವೆ. ಬೇರೆ ಕಡೆ ಎಲ್ಲಾ ಆಗಿದ್ದಾಗ ಎಲ್ಲೋ ಒಂದು ಕಡೆ ಮಾಧ್ಯಮದ ಮಖೇನ ಏನು message ಕೊಡುತ್ತಿದ್ದಾರೆಂದರೆ, ಇವತ್ತು ಆತ್ಮಹತ್ಯೆ

ಆಗುತ್ತಿರುವಂಥದ್ದು ಈ ಕಾರಣಕ್ಕೋಸ್ಕರ ಅಲ್ಲ, ಗೊಬ್ಬರ, ಬೀಜಕ್ಕೋಸ್ಕರ ಆಗುತ್ತಿಲ್ಲ ಬೇರೆ ಕಾರಣಗಳಿಗೆ ಎನ್ನತಕ್ಕಂಥ ಮಾತನ್ನು ಹೇಳುವಂಥ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಸಚಿವನಾಗಿದ್ದಂಥ ಸಂದರ್ಭದಲ್ಲಿ ಕೂಡ ಡಾ. ವೀರೇಶ್‌ರವರ ಸಮಿತಿಯನ್ನು ಅಪಾಯಿಂಟ್ ಮಾಡಿದ್ದೆವು Suicidal death ಗೆ ಕಾರಣ ಏನು ಎನ್ನತಕ್ಕಂಥದ್ದರ ಬಗ್ಗೆ, ಆದರೆ, ಅವರ ವರದಿ ಬಂದ ಮೇಲೆ ಸಾರ್ವಜನಿಕವಾಗಿ ಕೂಡ ಅದನ್ನು ರಿಜೆಕ್ಟ್ ಮಾಡಬೇಕು ಎನ್ನುವ ವಿಚಾರ ಬಂತು. ಮಾನ್ಯ ಕೃಷಿ ಸಚಿವರು ಇದರ ಬಗ್ಗೆ ಯೋಚನೆ ಮಾಡಿ, ಅದು ವಾಸ್ತವಾಂಶವಾದ ವಿಚಾರ ಅಲ್ಲವೆಂದು ಹೇಳಿದರು. ನಾವೆಲ್ಲರೂ ಕೂಡ ರೈತ ಮೂಲದಿಂದ ಬಂದಿರತಕ್ಕಂಥವರು ಕೃಷಿಯನ್ನು ನಂಬಿರತಕ್ಕಂಥವರು, ಯಾರೋ ಒಬ್ಬರು ಸತ್ತರು ಕೂಡ ಹೌದು ಅವನು ಕುಡಿಯುತ್ತಿರಬಹುದು, ಅದರ ಹಿಂದಿನ ದಿವಸ ಕುಡಿದಿರಬಹುದು ಅದಕ್ಕಿಂತ 8 ದಿವಸ ಮುಂಚೆ ಕುಡಿದಿರಬಹುದು. ಅವನು ಯಾತಕ್ಕೋಸ್ಕರ ಕುಡಿಯುತ್ತಾನೆ. ಕುಡಿಯಬೇಕಾದರೆ ಬಹಶಃ ಎರಡು–ಮೂರು ಕಾರಣಗಳು ಇರುತ್ತವೆ. ದುಡ್ಡು ಹೆಚ್ಚಾದಾಗಲೂ ಕುಡಿಯುತ್ತಾನೆ. ದುಡ್ಡು ಕಡಿಮೆಯಾದಾಗಲೂ ಕುಡಿಯುತ್ತಾನೆ. ಅವನಿಗೆ ಆರ್ಥಿಕವಾಗಿ ಎಲ್ಲೋ ಅಭದ್ರತೆ ಉಂಟಾದಾಗಲೂ ಕೂಡ ಅಗಲೂ ಅವನು ಕುಡಿಯುತ್ತಾನೆ. ಬಹಶಃ ರೈತ ದುಡ್ಡು ಇದ್ದಾಗಲಂತು ಕುಡಿಯುವುದಕ್ಕೆ ಆಗಿಲ್ಲ, ಅವನಿಗೆ ಎಲ್ಲೋ ಒಂದು ಕಡೆ ಬೀಜ, ಗೊಬ್ಬರ ಸಿಗದಂಥ ಸಂದರ್ಭದಲ್ಲಿ ನಾವು ಟೀಕೆಗೆ ಒಳಗಾಗುತ್ತಿದ್ದೇವೆ. ಹೆಂಡತಿ ಮಕ್ಕಳು ನಮ್ಮನ್ನು ಕೇರ್ ಮಾಡುವುದಿಲ್ಲ. ನಾನು ಬಿತ್ತನೆ ಮಾಡದೇ ಹೇಗೆ ಮಾಡುವುದು ನಾನು ಮಕ್ಕಳನ್ನು ಶಾಲೆಗೆ ಸೇರಿಸಿದ್ದೇನೆ ಯಾವ ರೀತಿಯಾಗಿ ಬದುಕಬೇಕು, ನಾನು ಯಾವ ರೀತಿಯಾಗಿ ಹಣ ಮಾಡಬೇಕು ಎನ್ನತಕ್ಕಂಥದ್ದನ್ನು ಆ ಚಿಂತೆಯಲ್ಲಿ ಬಹುಶಃ ಕುಡಿದಿರಬಹುದು. ಅಂದಾಕ್ಷಣ ಕುಡಿದು ಸತ್ತ ಎನ್ನತಕ್ಕಂಥ ಮಾತನ್ನು ಇವತ್ತು ಸರ್ಕಾರದ ಮಂತ್ರಿಗಳು ಮತ್ತು ಅಧಿಕಾರಿ ಬಾಯಿಂದ ಏನಾದರೂ ಬಂದರೆ ಬಹುಶ ರೈತರ ಪರಿಸ್ಥಿತಿ ಏನಾಗುತ್ತದೆ. ನಾವು ನಿಜವಾಗಲೂ ಆತ್ಮಶೋಧನೆ ಮಾಡಿಕೊಳ್ಳೋಣ, ನಾವು ನಿಜವಾಗಲೂ ರೈತರ ಪ್ರತಿನಿಧಿಗಳೇ ಎನ್ನತಕ್ಕಂಥದ್ದನ್ನು ಮರೆಯಬಾರದು. ನಾನು ನನ್ನ ಅನುಭವದಲ್ಲಿ ಒಂದು ಮಾತನ್ನು ಹೇಳುತ್ತೇನೆ. ನಾನು ಗ್ರಾಮೀಣ ಪ್ರದೇಶದಿಂದ ಬಂದವನು. ಕೃಷಿಯನ್ನು ನಂಬಿರತಕ್ಕಂಥ ರೈತರುಗಳಲ್ಲಿ ಇವತ್ತು ಇರತಕ್ಕಂಥ ಅಭದ್ರತೆ ಇದಕ್ಕೆ ಮೂಲ ಕಾರಣವಾಗಿದೆ. ಆ ಕಾರಣಕ್ಕೋಸ್ಕರ ಬೇರೆ ಬೇರೆ ಚಟಗಳಿಗೆ ಒಳಗಾಗಿರಬಹುದು. ಆದರೆ ಅವನಿಗೆ ಎಲ್ಲೋ ಒಂದು ಕಡೆಗೆ ಅದೊಂದು remunerative profession ಆಗಿ ನಾವು ಮಾಡಲಿಲ್ಲ.

ಅವನಿಗೆ ಅದು ಲಾಭದಾಯಕವಾದಂಥ ಒಂದು ಉದ್ಯಮವಾಗಿಲ್ಲ. ಅದನ್ನು ಮಾಡುವುದರ ಬಗ್ಗೆ ಚಿಂತನೆ ಮಾಡಬೇಕು. ಆದರೆ ಅವನು ಆತ್ಮಹತ್ಯೆಗೆ ಒಳಗಾದ ತಕ್ಷಣ ಅದು ಬೇರೆ ಕಾರಣಕ್ಕೆಂದು ಹೇಳಿ ಕಾರಣವನ್ನು ಕೊಡತಕ್ಕಂಥದ್ದು ಸರಿ ಅಲ್ಲ. ನನಗೆ ನನ್ನ ಸ್ನೇಹಿತರು ಹೇಳುತ್ತಿದ್ದರು. ಏನೆಂದರೆ, ನಿಮ್ಮ ಅಧಿಕಾರಿಗಳು ಸತ್ತಂತಹವರ ಮನೆಗೆ ಹೋಗಿ ಖಾಲಿ ಕಾಗದದ ಮೇಲೆ ಸಹಿಯನ್ನು ಮಾಡಿಸಿಕೊಂಡು ಹೇಳಿಕೆಗಳನ್ನು ಪಡೆದು ಆ ಕಾರಣಕ್ಕೋಸ್ಕರ ಸತ್ತ, ಈ ಕಾರಣಕ್ಕೋಸ್ಕರ ಸತ್ತ ಎಂದು ಹೇಳುವುದು ಕೂಡ ಇವತ್ತು ನಡೆದಿದೆ ಎನ್ನುವುದನ್ನು ತಾವು ಅಲ್ಲಗಳೆಯಬೇಕು. ಅದರ ಬಗ್ಗೆ ವಿಚಾರ ಮಾಡಿ. ಆದರೆ ಇವತ್ತು ನಾವು ರೈತರ ಪ್ರತಿನಿಧಿಗಳಾಗಿರತಕ್ಕಂಥವರು, ರೈತ ಆತ್ಮಹತ್ಯೆಗೆ ಒಳಗಾಗಬೇಕಾದರೆ, ಅದಕ್ಕೆ ಮೂಲ ಕಾರಣವೆಂದರೆ, ಕೃಷಿಯಲ್ಲಿ ಲಾಭವಿಲ್ಲದಿರುವುದು ಮೂಲ ಕಾರಣ, ಅವನ ಆತ್ಮಹತ್ಯೆಗೆ ಸರ್ಕಾರಗಳೇ ಕಾರಣವಾಗುತ್ತವೆ ಎನ್ನತಕ್ಕಂಥದ್ದನ್ನು ಕೂಡ ತಾವು ಯೋಚನೆ ಮಾಡಬೇಕು ಎನ್ನುವಂಥ ಮಾತನ್ನು ಕೂಡ ಹೇಳುತ್ತೇನೆ. ಇವತ್ತು ಆ ರೈತನ ಬಗ್ಗೆ ಲಘುವಾಗಿ ಮಾತನಾಡತಕ್ಕಂಥದ್ದು ಸರಿ ಅಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಮುಂದಿನ ದಿನಗಳಲ್ಲಿ ಬರತಕ್ಕಂಥ ಸಮಸ್ಯೆಗಳ ಬಗ್ಗೆ ಕೂಡ ನಾನು ಸೂಕ್ಷ್ಮವಾಗಿ ಹೇಳಿದ್ದೇನೆ. ಅದರ ಬಗ್ಗೆ ಕೂಡ ಹೆಚ್ಚಿನ ಗಮನವನ್ನು ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಿಲುವಳಿ ಸೂಚನೆಯನ್ನು ಕೊಡುವುದಕ್ಕೆ ತಾವು ಯೋಚನೆಯನ್ನು ಮಾಡಬೇಕಾಗಿತ್ತು. ನಿಮ್ಮನ್ನು ಹೋಗಳುವುದಕ್ಕೆ ಅಥವಾ ತೆಗೆಳುವುದಕ್ಕೆಂದು ನಾನು ಈ ಮಾತನ್ನು ಹೇಳುತ್ತಿಲ್ಲ. ನೀವು ಉತ್ತರ ಕರ್ನಾಟಕ ಭಾಗದಿಂದ ಆ ರೈತ ಸಮುದಾಯದ ಗಂಡುಮೆಟ್ಟಿನ ನಾಡಿನ ಮೂಲದಿಂದ ಬಂದಿರತಕ್ಕಂಥ ನೀವು ಎಲ್ಲೋ ಒಂದು ಕಡೆ ರೈತರ ಪರವಾದಂಥ ತೀರ್ಮಾನಕ್ಕೆ ಬದ್ಧರಾಗುತ್ತೀರಿ ಎಂದು ನಾನು ಮಾಡಿದ್ದೆ. ಆದರೆ ನಿಮ್ಮ ಆದೇಶದಂತೆ ನಾವು ನಿಯಮ 69ರ ಅಡಿಯಲ್ಲಿ ಇವತ್ತು ನಾವು ಚರ್ಚೆಯನ್ನು ಮಾಡಿದ್ದೇವೆ. ಇದರಲ್ಲಿ ಹೆಚ್ಚು ಮಾತನಾಡುವುದಕ್ಕೆ ಅವಕಾಶವಿಲ್ಲದಿದ್ದರೂ ಕೂಡ ಆ ಮುಂದಿನ ದಿನಗಳು ಏನು ಎನ್ನತಕ್ಕಂಥದ್ದು ಮತ್ತು ಕಷ್ಟದ ದಿನಗಳು ಏನು ಎನ್ನತಕ್ಕಂಥದ್ದರ ಬಗ್ಗೆ ನಾನು ಹೇಳಿದ್ದೇನೆ. ಆದರೆ ಇವತ್ತಿನ ಆತ್ಮಹತ್ಯೆಗೆ ಇವತ್ತಿನ ಗೋಲಿಬಾರಿಗೆ ಇವತ್ತು ನೈತಿಕವಾಗಿರತಕ್ಕಂಥ ಹೊಣೆ ಯಾರದು ಎಂದು ಹೇಳಿದರೆ ಇವತ್ತು ಅದು ಸರ್ಕಾರದ್ದು. ಮಾನ್ಯ ಮುಖ್ಯಮಂತ್ರಿಗಳು ಮತ್ತು ಎಲ್ಲ ಸಚಿವರು ಇದರ ಹೊಣೆಯನ್ನು ಹೊರಬೇಕಾಗುತ್ತದೆ. ಆದರೆ ನೀವು ರೈತರ ಹೆಸರಿನ ಮೇಲೆ ಇವತ್ತು ಅಧಿಕಾರಕ್ಕೆ ಬಂದು ಆ ರೈತರಿಗೆ ಈ ಪರಿಸ್ಥಿತಿ ಆದಂಥ ಸಂದರ್ಭದಲ್ಲಿ ನಿಮ್ಮ ನಡವಳಿಕೆಗಳು ನಿಮ್ಮ ತೀರ್ಮಾನಗಳು ನಿಮ್ಮ ಹೇಳಿಕೆಗಳು ತದ್

ಸಭಾ, ೪, ಕ.ಸ.

ವಿರುದ್ಧವಾಗಿದೆ, ರೈತರಿಗೆ ವಿರೋಧವಾಗಿದೆ. ಆ ರೈತ ನಿಮ್ಮನ್ನು ಎಂದೂ ಕೂಡ ಕ್ಷಮಿಸುವುದಿಲ್ಲವೆನ್ನುವಂಥ ಮಾತು. ಇವತ್ತು ಆ ಸಂದರ್ಭದಲ್ಲಿ ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬರುವುದಕ್ಕೆ ಪ್ರಯತ್ನ ಪಟ್ಟಿರಿ. ಆದರೆ ಇವತ್ತು ಏನಾದರೂ ಕೂಡ ಈಗ ಅಥವಾ ಎರಡು ತಿಂಗಳಲ್ಲಿ ಚುನಾವಣೆ ಏನಾದರೂ ಆದರೆ, ಬಹುಶಃ ಈ ಪರಿಸ್ಥಿತಿ ಇರುವುದಕ್ಕೆ ಸಾಧ್ಯವಿಲ್ಲ. ಅದನ್ನು ತಾವು ಅರಿಯಬೇಕಾಗುತ್ತದೆ. ಯಾರಾದರೂ ರೈತರಿಗೆ ಮಣ್ಣು ತಿನ್ನಿಸಬಹುದು ಎಂದು ಹೇಳಿದರೆ, ಆ ರೈತರು ಕೂಡ ನಮಗೆ ಮಣ್ಣು ತಿನ್ನಿಸುತ್ತಾರೆ ಎನ್ನುವುದನ್ನು ನಾವು ಮರೆಯಬಾರದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಾವು ಆ ನೈತಿಕ ಹೊಣೆ ಹೊತ್ತು ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಇವತ್ತು ಸಲಹೆ ಮಾಡಿರುವ ರೀತಿಯಲ್ಲಿ ಜಂಟಿ ಸದನ ಸಮಿತಿ ಇರಬಹುದು ಮತ್ತು ರೈತರನ್ನು ಬಹಿರಂಗವಾಗಿ ಕ್ಷಮಾಪಣೆ ಕೇಳತಕ್ಕಂಥ ವಿಚಾರವಾಗಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನೊಂದು ಮುಖ್ಯವಾಗಿ ಮುಂದಿನ ದಿನಗಳಲ್ಲಿ ಆಹಾರದ ಅಭದ್ರತೆ ನಮ್ಮಲ್ಲಿ ಕಾಡುತ್ತಿರುತ್ತದೆ. ಆ ಅಭದ್ರತೆಯನ್ನು ಇವತ್ತು ನಾವು ಹೋಗಲಾಡಿಸಬೇಕಾದಾಗ ನೀವು ಕೃಷಿ ಖಾತೆಯನ್ನು ಹೊತ್ತು ಆ ಜವಾಬ್ದಾರಿಯನ್ನು ಹೊತ್ತು ಆ ಕೆಲಸವನ್ನು ಮಾಡಿದರೆ ಸ್ವಲ್ಪಮಟ್ಟಿಗೆ ನಿಭಾಯಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪದೇ ಪದೇ ನೀವು ಕೃಷಿ ಖಾತೆಯನ್ನು ಅವರೇ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೀರಿ. Mines and Geology ಎಲ್ಲಿ ಹೋಗಬೇಕು. BDA ಎಲ್ಲಿ ಹೋಗಬೇಕು. Forest ಎಲ್ಲಿ ಹೋಗಬೇಕು. Urban Development ಎಲ್ಲಿ ಹೋಗಬೇಕು. ಬರೀ ಅದನ್ನೇ ತೆಗೆದುಕೊಂಡು ಕುಳಿತರೆ ಹೇಗೆ? ಇವೆಲ್ಲಾ ಇರಬೇಕಾಗುತ್ತದೆ, ಅದಕ್ಕಾಗಿ ಅದನ್ನು ಅವರಿಗೆ ಕೊಟ್ಟಿದ್ದಾರೆ.

ಶ್ರೀ ಟಿ. ಬಿ. ಜಯಚಂದ್ರ: ಎಲ್ಲವನ್ನು ಹೇಳಿದ ಮೇಲೆಯೂ ಅವರು ವಹಿಸಿಕೊಳ್ಳಲಿಲ್ಲವೆಂದರೆ ಇವರು ಖಾತೆಗಳನ್ನು ಅವರು ಇಟ್ಟುಕೊಂಡರು ಎಂದರೆ, ಅವರ ಕಾಳಜಿ ಏನು ಎನ್ನುವುದು ಜನರಿಗೆ ಗೊತ್ತಾಗುತ್ತದೆ. ಇಷ್ಟು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ರಾಮನಗರ): ಸನ್ಮಾನ್ಯ ಅಧ್ಯಕ್ಷರೇ, ಈ ದಿನ ರಸಗೊಬ್ಬರದ ಸರಬರಾಜು ಮತ್ತು ಬಿತ್ತನೆ ಬೀಜ ವಿಷಯದಲ್ಲಿ ರಾಜ್ಯದಲ್ಲಿ ಕಳೆದ 20–

25 ದಿವಸಗಳಿಂದ ನಡೆಯುತ್ತಿರುವಂಥ ಪ್ರತಿಭಟನೆಗಳ ಬಗ್ಗೆ ಈಗಿರುವ ಕೆಲವು ಅನಾಹುತಗಳ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟು ಈಚರ್ಚೆಯಲ್ಲಿ ಭಾಗವಹಿಸಲಿಕ್ಕೆ ನನಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ, ನನಗೆ ಈ ಸಂದರ್ಭದಲ್ಲಿ ವೈಯಕ್ತಿಕವಾಗಿ ನನ್ನ ವಂದನೆಗಳನ್ನು ತಮಗೆ ಸಲ್ಲಿಸಬಯಸುತ್ತೇನೆ.

ಈ ಒಂದು ಬಿತ್ತನೆ ಬೀಜನೆ ವಿಷಯದಲ್ಲಿ ರಸ ಗೊಬ್ಬರದ ವಿಷಯದಲ್ಲಿ, ರೈತರ ಹಲವಾರು ಭಾಗಗಳಲ್ಲಿ ಆತಂಕಕ್ಕೆ ಒಳಗಾಗಿರುವ ಸನ್ನಿವೇಶ ಅಂತಿಮವಾಗಿ ಹಾವೇರಿಯಲ್ಲಿ ಗೋಲಿಬಾರ್ ಘಟನೆ ನಡೆಯುವವರೆಗೆ ಈ ಒಂದು ಘಟನೆ ನಮ್ಮ ಮುಂದೆ ನಡೆದಿರುವಂಥ ಸನ್ನಿವೇಶವನ್ನು ನಾವು ಗಮನಿಸಿದ್ದೇವೆ. ಮೇ 30ನೇ ತಾರೀಖಿನಂದು ಹೊಸ ಸರ್ಕಾರ ಪ್ರಮಾಣ ವಚನ ಸ್ವೀಕಾರ ಮಾಡುತ್ತದೆ. ಈ ಒಂದು ರಸಗೊಬ್ಬರದ ಸಮಸ್ಯೆ ಈ ಸರ್ಕಾರ ಬಂದ ನಂತರ ಪ್ರಾರಂಭವಾಗಿರುವುದಿಲ್ಲವೆಂದು ಸದನದ ಗಮನಕ್ಕೆ ತರಬಯಸುತ್ತೇನೆ. ದಾವಣಗೆರೆ ಮತ್ತು ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಮೇ 25ನೇ ತಾರೀಖಿನಿಂದಲೇ ಈ ಒಂದು ಪ್ರತಿಭಟನೆಗಳು ನಡೆದಿರತಕ್ಕಂಥದ್ದನ್ನು ನಾವೆಲ್ಲಾ ಗಮನಿಸಬೇಕಾದ ಅಂಶ. ಮೇ 30ನೇ ತಾರೀಖು ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿ ಎರಡು ದಿವಸಗಳಲ್ಲಿ ದೆಹಲಿಗೆ ಪ್ರಯಾಣ ಮಾಡಿದರು. ಅವರ ಪಕ್ಷದ ಹಿರಿಯ ನಾಯಕರುಗಳು, ಪ್ರಧಾನ ಮಂತ್ರಿಗಳು ಮತ್ತು ಕೆಲವು ಪ್ರಮುಖ ಕೇಂದ್ರ ಸಚಿವರನ್ನು ಭೇಟಿ ಮಾಡಿ ಒಂದು ಕಾರ್ಯಕ್ರಮದ ಅಡಿಯಲ್ಲಿ ಅವರು ದೆಹಲಿಯಲ್ಲಿ ಪ್ರವಾಸವನ್ನು ಮಾಡಿದರು. ಮಾಧ್ಯಮದ ಮೂಲಕ ನಾವು ಗಮನಿಸಿದ್ದೇವೆ. ರಾಜ್ಯದಲ್ಲಿ ರಸಗೊಬ್ಬರದ ಬಗ್ಗೆ ಪ್ರಧಾನ ಮಂತ್ರಿಗಳ ಜೊತೆ ಚರ್ಚೆಯನ್ನು ಮಾಡಿದ್ದನ್ನು ಸಾರ್ವಜನಿಕವಾಗಿ ಹೇಳಿದ್ದಾರೆ. 4ನೇ ತಾರೀಖು ರಾಜ್ಯಪಾಲರ ಬಾಷಣವನ್ನು ಈ ಒಂದು ಸರ್ಕಾರ, ಸರ್ಕಾರದ ಭಾವನೆಗಳನ್ನು ಸದನದ ಮೂಲಕ ಇಡೀ ರಾಜ್ಯದ ಜನತೆಗೆ ಗಮನಕ್ಕೆ ತರಲಿಕ್ಕಾಗಿ ಈ ಒಂದು ಸದನ ಪ್ರಾರಂಭ ಆಯಿತು. 6ನೇ ತಾರೀಖೂ ವಿಶ್ವಾಸ ಮತವನ್ನು ಪಡೆಯುವ ಸಂದರ್ಭದಲ್ಲಿ ತಾವು ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿರಿ. ನಾನು ಸರ್ಕಾರದ ಗಮನಕ್ಕೆ ಆ ದಿನ ರಸಗೊಬ್ಬರದ ಕೊರತೆಯ ಬಗ್ಗೆ ರಾಜ್ಯದಲ್ಲಿ ನಡೆಯತಕ್ಕಂಥ ಪ್ರತಿಭಟನೆಗಳ ಬಗ್ಗೆ ಗಮನವನ್ನು ಸೆಳೆದಾಗ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಪತ್ರಿಕೆಗಳಲ್ಲಿ ಕೊಟ್ಟಿರತಕ್ಕಂಥ ಹೇಳಿಕೆ ಒಂದು ಕಡೆ ಇರಲಿ, ಯಾವುದೇ ರೀತಿಯ ರಸಗೊಬ್ಬರದ ಕೊರತೆ ನಮ್ಮ ರಾಜ್ಯದಲ್ಲಿ ಇಲ್ಲ. ನಮ್ಮ ರಾಜ್ಯದ ರೈತರಿಗೆ ರಸಗೊಬ್ಬರವನ್ನು ಕೊಡತಕ್ಕಂಥದ್ದರಲ್ಲಿ ನಾವು

ಸಂಪೂರ್ಣವಾಗಿ ಸಮರ್ಥರಿದ್ದೇವೆ. ಆವತ್ತಿನ ದಿವಸ ವಿಶ್ವಾಸ ಮತ ಪಡೆಯುವ ದಿವಸ ಅವರು ಹೀಗೆಂದು ಉಚ್ಚಾರ ಮಾಡಿದ್ದಾರೆ. ನಾನು ಆ ಸಂದರ್ಭದಲ್ಲಿ ರಸಗೊಬ್ಬರದ ವಿಷಯದಲ್ಲಿ ರೈತರ ಪ್ರತಿಭಟನೆಗಳು ನಡೆಯುತ್ತಿವೆ, ಸರ್ಕಾರ ಇದನ್ನು ಕೇವಲವಾಗಿ ತೆಗೆದುಕೊಳ್ಳತಕ್ಕಂಥದ್ದು ಸೂಕ್ತ ಅಲ್ಲ. ತಮಗೆ ಅಧಿಕಾರಿಗಳು ಸರಿಯಾಗಿ ಮಾಹಿತಿಯಗಳನ್ನು ಕೊಟಿದ್ದಾರೋ ಇಲ್ಲವೋ ನನಗಂತೂ ಗೊತ್ತಿಲ್ಲ. ನಮಗೆ ಇರುವ ಮಾಹಿತಿ ಪ್ರಕಾರ ಸರ್ಕಾರದಲ್ಲಿ ಕೃಷಿ ಇಲಾಖೆಯಲ್ಲಿರುವ ಸ್ಟಾಕ್ ಅನ್ನು ಗಮನಿಸಿದಾಗ ರಸಗೊಬ್ಬರದ ಕೊರತೆ ಇರುವುದನ್ನು ನೀವು ನೋಡಬಹುದು ಎಂಬ ಮಾತನ್ನು ಹೇಳಿದೆವು. ಆದರೆ ಅದನ್ನು ಅಷ್ಟು ಗಂಭೀರವಾಗಿ ಆ ಸಂದರ್ಭದಲ್ಲಿ ಸರ್ಕಾರ ಪರಿಗಣಿಸಿಲ್ಲ ಎಂದು ನನ್ನ ಭಾವನೆ. 10ನೇ ತಾರೀಖು ಗೋಲಿಬಾರ್ ಪ್ರಕರಣ ಹಾವೇರಿಯಲ್ಲಿ ನಡೆಯಿತು. 6ನೇ ತಾರೀಖು ಒಂದು ಭಾರಿ ಹಾವೇರಿಯಲ್ಲಿ ಪ್ರತಿಭಟನೆ ನಡೆದಾಗ ಲಾಠಿ ಛಾರ್ಜು ಆದಂಥ ವಿಷಯ ಪತ್ರಿಕೆಗಳಲ್ಲಿ ನಾವು ಗಮನಿಸಿದ್ದೇವೆ. ನಂತರ ಹುಬ್ಬಳ್ಳಿ, ಧಾರವಾಡಗಳಲ್ಲಿ ನಡೆದಂಥ ಘಟನೆಗಳನ್ನು ಪತ್ರಿಕೆಗಳಲ್ಲಿ ವಿವರವಾಗಿ ನಾವು ಗಮನಿಸಿದ್ದೇವೆ. ಸರ್ಕಾರ ಮೊದಲಿನಿಂದಲೂ ಈ ಒಂದು ರಸಗೊಬ್ಬರದ ವಿಷಯದಲ್ಲಿ ಎಲ್ಲೋ ಒಂದು ಕಡೆ ಎಡವಿದ್ದಾರೆ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ಅದಕ್ಕೆ ಕಾರಣ ಅಧಿಕಾರಿಗಳು ಕೊಟ್ಟಂಥ ಮಾಹಿತಿಯೋ ಅಥವಾ ಸನ್ಮಾನ್ಯ ಮುಖ್ಯಮಂತ್ರಿಗಳು ವಿಶ್ವಾಸ ಮತವನ್ನು ಒಂದು ಕಡೆ ಪಡೆಯತಕ್ಕಂಥದ್ದು ಮತ್ತೊಂದು ಕಡೆ ಇಲಾಖೆಯನ್ನು ಸಚಿವರುಗಳಿಗೆ ಹಂಚುವಾಗ, ಯಾವ್ಯಾವ ಇಲಾಖೆಗಳನ್ನು ಯಾರ್ಯಾರಿಗೆ ಕೊಡಬೇಕೆನ್ನುವಂಥ ವಿಷಯದಲ್ಲಿ ಎಲ್ಲೋ ಒಂದು ಕಡೆ ಮಾನಸಿಕವಾಗಿ ತೊಂದರೆಗೊಳಗಾಗಿದ್ದು ಇದರ ಕಡೆಗೆ ಗಮನವನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲವೇನೋ ಎನ್ನುವುದು ನನ್ನ ಭಾವನೆ. ವಿಶ್ವಾಸ ಮತವನ್ನು ಪಡೆಯುವ ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳಿದ್ದೆ, ನೀವು ಕೇವಲ ಪತ್ರವನ್ನು ಬರೆದರೆ ಕೇಂದ್ರ ಸರ್ಕಾರ ಸ್ಪಂದಿಸಲಿಕ್ಕೆ ಸಾಧ್ಯವಾಗುವುದಿಲ್ಲ. ತಕ್ಷಣ ನೀವಾದರೂ ದೆಹಲಿಗೆ ಹೋಗಿ ಸಂಬಂಧಪಟ್ಟ ಸಚಿವರನ್ನಾಗಲಿ, ಪ್ರಧಾನಮಂತ್ರಿಯನ್ನಾಗಲಿ ಭೇಟಿ ಮಾಡಿ, ಇಲ್ಲವೇ ನಿಮ್ಮ ಪ್ರಮುಖ ಸಚಿವರೊಬ್ಬರನ್ನು ರೆಪ್ರೆಸೆಂಟೇಟಿವ್ ಆಗಿ ಕಳುಹಿಸಿ ಈ ಜವಾಬ್ದಾರಿಯನ್ನು ನಿರ್ವಹಿಸಲಿಕ್ಕೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೆ. ಅದರ ಬಗ್ಗೆ ಕೂಡ ಗಮನವನ್ನು ಕೊಡಲಿಲ್ಲ. ಈ ಘಟನೆಗಳಾದ ನಂತರ ನೀವು ಕೊಟ್ಟಿರತಕ್ಕಂಥ ಹೇಳಿಕೆಗಳೇನಿವೆ, ಗೃಹ ಸಚಿವರ ಹೇಳಿಕೆ, ಮುಖ್ಯಮಂತ್ರಿಗಳ ಹೇಳಿಕೆ, ಕೃಷಿ ಸಚಿವರ ಹೇಳಿಕೆ ನೋಡಿದಾಗ ಸರ್ಕಾರ ಇವತ್ತು ಹೊಂದಾಣಿಕೆಯಿಂದ ಕೆಲಸವನ್ನು ಮಾಡುತ್ತಿದ್ದಾರೆಯೇ ಎನ್ನುವುದು

ನಾವು ಹೊರನೋಟದಲ್ಲಿ ತಕ್ಷಣಕ್ಕೆ ಯೋಚಿಸಿದಾಗ ಈ ಸರ್ಕಾರ ಯಾವುದೇ ರೀತಿಯ ಹೊಂದಾಣಿಕೆಯಿಂದ ಕೆಲಸ ಮಾಡುತ್ತಿಲ್ಲ. ಬೇಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆಂಬುದನ್ನು ನಾವು ಗಮನಿಸಲಿಕ್ಕೆ ಸಾಧ್ಯವಿದೆ. ಯಾವ್ಯಾವ ರೀತಿ ಹೇಳಿಕೆಯನ್ನು ಕೊಟ್ಟಿದ್ದಾರೆ, ಬೆಳಿಗ್ಗೆ ಈ ಒಂದು ನಿಲುವಳಿ ಸೂಚನೆಯನ್ನು ತರತಕ್ಕಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡುವಾಗ ರೈತರು ಆತ್ಮಹತ್ಯೆ ಮಾಡಿಕೊಂಡಂಥ ಸಂದರ್ಭದಲ್ಲಿ ನಿಲುವಳಿ ಸೂಚನೆಯನ್ನು ತರುವಾಗ ಆವತ್ತೇನು ತೀರ್ಮಾನವಾಯಿತು, ಯಾವುದೇ ರೀತಿಯ ಹೊಸ ಸಂಪ್ರದಾಯವನ್ನು ನಾವು ಇವತ್ತು ಸೃಷ್ಟಿ ಮಾಡಬೇಕೆಂಬುದನ್ನು ಹೇಳುತ್ತಿಲ್ಲ. ಹಿಂದೆ ಹಲವಾರು ನಿದರ್ಶನಗಳು ಇದ್ದಾವೆಂಬುದನ್ನು ಸದನದ ಗಮನಕ್ಕೆ ತಂದೆ ಅಧ್ಯಕ್ಷರೆ, ರೈತರ ಆತ್ಮಹತ್ಯೆ ಘಟನೆಗಳ ಬಗ್ಗೆ ಈ ಭಾಗದಲ್ಲಿ ಕುಳಿತು ಕೆಲಸ ಮಾಡಬೇಕಾದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಯಾವ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ಕೆಲವು ವಿಷಯಗಳನ್ನು ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಏಕೆಂದರೆ ಈಗ ಮುಖ್ಯಮಂತ್ರಿಗಳಾಗಿ ಅವರು ಹೇಳುತ್ತಿದ್ದಾರೆ, ಈ ರಾಜ್ಯದಲ್ಲಿ ಎಲ್ಲಿಯೂ ರೈತರು ಆತ್ಮಹತ್ಯೆಯನ್ನು ಗೊಬ್ಬರದ ಕೊರತೆಯಿಂದಾಗಿ ಇನ್ನಾವುದೇ ರೀತಿಯ ಸರ್ಕಾರದ ವೈಫಲ್ಯದಿಂದ ಇವತ್ತು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿಲ್ಲ, ಇದು ರಾಜಕೀಯವಾಗಿ ವಿರೋಧ ಪಕ್ಷಗಳು ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರಲಿಕ್ಕೆ ಹೊರಟಿದ್ದಾರೆಂಬ ಮಾತನ್ನು ಪದೇ ಪದೇ ಹೇಳುತ್ತಿದ್ದಾರೆ. ನಮ್ಮ ರೈತರು ಎಲ್ಲಾದರೂ ಆತ್ಮಹತ್ಯೆ ಮಾಡಿಕೊಂಡಂಥ ಸಂದರ್ಭದಲ್ಲಿ ನಾವೀಗ ಅವರ ಮನೆಗಳಿಗೆ ಹೋಗಲಿಕ್ಕೆ ಭಯ ಪಡುವಂಥ ವಾತಾವರಣವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ತಂದಿದ್ದಾರೆಂದು ಹೇಳಿದರೆ ತಪ್ಪಾಗಲಾರದು ಎನ್ನುವುದು ನನ್ನ ಭಾವನೆ. ಏಕೆಂದರೆ ಒಂದು ರೀತಿಯ ಅನುಮಾನ ಏನೀ ಸರ್ಕಾರ ಕೆಲಸವನ್ನು ಮಾಡಲಿಕ್ಕೆ ಅವಕಾಶವನ್ನು ಕೊಡದೇ ಇರುವಂಥ ರೀತಿಯಲ್ಲಿ ವಿರೋಧ ಪಕ್ಷದವರು ಎಲ್ಲೋ ಒಂದು ಕಡೆ ಕೆಟ್ಟ ಅಭಿಪ್ರಾಯವನ್ನು ಮೂಡಿಸಲಿಕ್ಕೆ ಹೊರಟಿದ್ದಾರೆಂದು ಪದೇ ಪದೇ ಹೇಳುತ್ತಿದ್ದೀರಿ. ನೀವು ಈಗ ಮುಖ್ಯಮಂತ್ರಿಗಳಾಗಿದ್ದೀರಿ. ಈ ಭಾಗದಲ್ಲಿ ತಾವು ಕುಳಿತು ಚರ್ಚೆ ಮಾಡಿದಂಥ ಕೆಲವು ಹಳೆಯ ನೆನಪುಗಳನ್ನು ತಾವು ಮರೆತಿರಬಹುದು, ಅದನ್ನು ನೆನಪಿಸಿಕೊಡಲಿಕ್ಕೆ ಬಯಸುತ್ತೇನೆ. ಯಾವ ಗುಲಬರ್ಗಾ ಬೀದರ್ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಂಥ ಸಂದರ್ಭದಲ್ಲಿ ತಾವು ಈ ಭಾಗದಿಂದ ಯಾವ ರೀತಿ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಲಿಕ್ಕೆ ಹೊರಟಿರಿ, ಯಾವ ಮಾತುಗಳನ್ನು ಹೇಳಲಿಕ್ಕೆ ಹೊರಟಿರಿ ಎಂದು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಈ ಸಾವು ರೈತ ಬೆಳೆಯನ್ನು ಹಾಳು

ಮಾಡಿಕೊಂಡ ಪರಿಣಾಮ ಅಲ್ಲ, ಅದಕ್ಕೆ ಬೇರೆ ಕಾರಣ ಇದೆ. ಎಂದು ಅದೇ ಜಿಲ್ಲೆಯ ಉಸ್ತುವಾರಿ ಸಚಿವರು ಹೇಳುತ್ತಾರೆ. ಜಿಲ್ಲಾಧಿಕಾರಿಗಳು ಹೇಳುವುದು ಮಾರ್ಚ್ 4ನೇ ತಾರೀಖು, ನಿಮ್ಮ ಜಿಲ್ಲಾ ಮಂತ್ರಿಗಳು ಹೇಳುವುದು ಮಾರ್ಚ್ 7ನೇ ತಾರೀಖು. ಅಧಿಕಾರಿಗಳು ಒಂದು ರೀತಿ ಹೇಳಿಕೆ ಕೊಡುತ್ತಾರೆ, ಮುಖ್ಯಮಂತ್ರಿಗಳು ಒಂದು ರೀತಿ ಹೇಳಿಕೆ ಕೊಡುತ್ತಾರೆ ಎನ್ನತಕ್ಕಂಥ ಮಾತನ್ನು ತಾವು ಈ ಭಾಗದಿಂದ ಚರ್ಚೆ ಮಾಡಿದ್ದೀರಿ. ನಂತರ ಒಂದು ವಿಷಯವನ್ನು ಅಂದಿನ ಮುಖ್ಯಮಂತ್ರಿಗಳಿಗೆ ಪ್ರಸ್ತಾಪ ಮಾಡಿದ್ದೀರಿ. ಆವತ್ತಿನ ಮುಖ್ಯಮಂತ್ರಿಗಳಿಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ನಿಮಗೆ ಹೆಲಿಕಾಪ್ಟರನ್ನು ಏತಕ್ಕಾಗಿ ಕೊಟ್ಟಿದ್ದೇವೆ? ಮೋಜು ಮಾಡಲು ಅಥವಾ ಸ್ವಂತ ಓಡಾಟ ಮಡಲು ಕೊಟ್ಟಿದ್ದೇವಾ? ಈ ವಿಚಾರವನ್ನು ತಾವು ಈ ಭಾಗದಿಂದ ಕುಳಿತು ಚರ್ಚೆ ಮಾಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಅದನ್ನು ಅವರು 2000ದಲ್ಲಿ ಹೇಳಿದ್ದಾರೆ

ಶ್ರೀ ಹೆಚ್. ಡಿ. ಕುಮಾರಸ್ವಾಮಿ: ಇಲ್ಲಾ 1998ರಲ್ಲಿ ಜೆ. ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದಾಗ ಮಾಡಿದ್ದಾರೆ. ಆಗ ನೀವು ವಿರೋಧ ಪಕ್ಷದ ನಾಯಕರಾಗಿದ್ದೀರಿ. ಅವರು ಈ ಕಡೆ ನಮ್ಮ ಭಾಗದಲ್ಲಿ ಇದ್ದರು. ನೀವು ಆ ಕಡೆ ಇದ್ದೀರಿ. ಬೈರೇಗೌಡರು ಕೃಷಿ ಸಚಿವರಾಗಿದ್ದರು. ಸಿದ್ದರಾಮಣ್ಣನವರು ಹಣಕಾಸು ಸಚಿವರಾಗಿದ್ದರು. ಜೆ. ಹೆಚ್. ಪಟೇಲರು ಮುಖ್ಯಮಂತ್ರಿಯಾಗಿದ್ದರು. ಆ ಸಂದರ್ಭದಲ್ಲಿ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದರು. ಆವತ್ತು ತಾವು ಹೆಲಿಕಾಪ್ಟರ್ ವಿಷಯವನ್ನು ಚರ್ಚೆ ಮಾಡಿದ್ದೀರಿ. ನೀವು ಹೊಸದಾಗಿ ಸರ್ಕಾರವನ್ನು ರಚನೆ ಮಾಡಿದಿರಲ್ಲ. ಸರ್ಕಾರದ ಜೊತೆಗೆ ಈ ರಾಜ್ಯದಲ್ಲಿ ಐದಾರು ಹೆಲಿಕಾಪ್ಟರ್ ಓಡಾಡಿದವು, ಒಂದೊಂದು ನಿಮಿಷವನ್ನೂ ವ್ಯರ್ಥಮಾಡದೇ ಒಡಾಡಿದವು.

ಶ್ರೀ ಎಂ. ಶ್ರೀನಿವಾಸ್: ಹೆಲಿಕಾಪ್ಟರ್‌ನಲ್ಲಿ ಜಾಸ್ತಿ ಓಡಾಡುವುದನ್ನು ನೀವೇ ತೋರಿಸಿಕೊಟ್ಟಿರಿ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ: ಶ್ರೀನಿವಾಸ್ ರವರೆ ನಿಮಗೆ ಗೊತ್ತಿಲ್ಲ ಕುಳಿತುಕೊಳ್ಳಿ. ನೀವು ಉತ್ತರಳ್ಳಿ ಬಿಟ್ಟು ಹೊರಗಡೆ ಬಂದಿಲ್ಲ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್: ನೀವು ಹೆಲಿಕಾಪ್ಟರ್‌ನಲ್ಲಿ ಸ್ವಲ್ಪ ಜಾಸ್ತಿ ಓಡಾಡುತ್ತೀರ, ನಾವೇ ಅಲ್ಲ ಓಡಾಡಿದ್ದು ಎಂದು ನಾನು ಹೇಳಿದ್ದು, ಬೇರೆ ಏನನ್ನೂ ನಾನು ಹೇಳಿಲ್ಲ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ: ನಾವೂ ಓಡಾಡಿದ್ದೇವೆ ತಾವು ಕುಳಿತುಕೊಳ್ಳಿ. ನಾವು ಮಜಾ ಮಾಡಲು ಓಡಾಡಲಿಲ್ಲ. ಈ ರಾಜ್ಯದಲ್ಲಿ 20 ತಿಂಗಳಿನಲ್ಲಿ ಒಂದೊಂದು ಜಿಲ್ಲೆಗೆ 15–20 ಬಾರಿ ಭೇಟಿ ಕೊಟ್ಟಿದ್ದೇನೆ. ಈ ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು ಓಡಾಡಿದ್ದೇನೆ. ಮಜಾ ಮಾಡಲು ಓಡಾಡಿಲ್ಲ. ತಾವು ಕುಳಿತುಕೊಳ್ಳಿ, ತಮಗೆ ಕಗ್ಗಲಿಪುರ ಬಿಟ್ಟರೆ ಬೇರೆ ಏನೂ ಗೊತ್ತಿಲ್ಲ ಕುಳಿತುಕೊಳ್ಳಿ, ಸರ್ಕಾರ ರಚನೆ ಮಾಡಲು ಪಾಪ ಐದಾರು ಹೆಲಿಕಾಪ್ಟರ್‌ನ್ನು ಓಡಾಡಿಸಿದಿರಿ. ನಾನು ಪತ್ರಿಕೆಗಳಲ್ಲೂ ನೋಡಿದ್ದೇನೆ. ಇದೇ ಕೆಲಸವನ್ನು ನೀವು ಏನಾದರೂ ಈ ರಾಜ್ಯದಲ್ಲಿ ಗೊಬ್ಬರದ ಸಮಸ್ಯೆ ಪ್ರಾರಂಭವಾಯಿತಲ್ಲ. ಇಲ್ಲಿ 30 ಜನ ಮಂತ್ರಿಗಳು ಕುಳಿತಿದ್ದೀರಲ್ಲಾ, ಸಮಯ ಸ್ವಲ್ಪ ನೋಡಿ ಅವರನ್ನು ಆ ಕಡೆ ಏನಾದರೂ ಕಳುಹಿಸಿದ್ದರೆ ಆಗ ಮೆಚ್ಚಿಕೊಳ್ಳುತ್ತಿದ್ದೆ, ನಿಜಕ್ಕೂ ನೀವು ರೈತ ಮುಖ್ಯಮಂತ್ರಿ ಮಾತಿಗೂ ಕೃತಿಗೂ ವ್ಯತ್ಯಾಸವಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಿದ್ದೆ, ಇಷ್ಟಕ್ಕೆ ಇದನ್ನು ನಿಲ್ಲಿಸುತ್ತೇನೆ. ಇನ್ನೊಂದು ಕಡೆ ಹೇಳುತ್ತೀರಿ. ತಾವು ಏಕೆ ಜಿಲ್ಲಾ ಮಂತ್ರಿಗಳಾಗಿದ್ದೀರಿ ಸ್ವಾಮಿ? ಏತಕ್ಕಾಗಿ ನಿಮಗೆಲ್ಲಾ ಗೂಟದ ಕಾರನ್ನು ವ್ಯವಸ್ಥೇ ಮಾಡಿರತಕ್ಕದ್ದು, ನಿಮ್ಮ ಜಿಲ್ಲೆಯಲ್ಲಿ ಇಂಥದ್ದೇ ಪರಿಸ್ಥಿತಿ ಬಂದಾಗ 24 ಗಂಟೆಯೊಳಗಾಗಿ ಅಲ್ಲಿಗೆ ಧಾವಿಸಿ ಹೋಗಿ ಅಲ್ಲಿನ ವಾಸ್ತವ ಪರಿಸ್ಥಿತಿಯನ್ನು ನೋಡಿಕೊಂಡು ಜಿಲ್ಲಾಧಿಕಾರಿಯನ್ನು ಎಳೆದುಕೊಂಡು ಬಂದು ರೈತರಿಗೆ ಏನು ಕೊಡಿಸಬೇಕಾಗಿತ್ತೋ ಅದನ್ನು ಕೊಡಿಸಬೇಕಾಗಿತ್ತು. ಇದು ಈ ಭಾಗದಿಂದ ಹೇಳತ್ತೀರಿ. ಆದರೆ, ಇವತ್ತು ಸಮಾಜಘಾತುಕ ಶಕ್ತಿಗಳು ಕೆಲವು ರಾಜಕೀಯ ಶಕ್ತಿಗಳು ಒಂದು ರೀತಿ ಪಿತೂರಿ ಷಡ್ಯಂತರವನ್ನು ನಡೆಸುತ್ತಿದ್ದೀರೆಂದು ಪದೇ ಪದೇ ಹೇಳುತ್ತಿದ್ದೀರಿ. ನಾನು ಆವತ್ತು ವಿಶ್ವಾಸ ಮತವನ್ನು ಪಡೆಯತಕ್ಕ ದಿವಸ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ, ನಾನು ರಾಜಕೀಯವನ್ನು ಬೆರೆಸಿ ಮಾತನಾಡಲಿಲ್ಲ. ಈ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದಾಗ ಸಂಪೂರ್ಣ ಸಹಕಾರವನ್ನು ಕೊಡಲು ಸಿದ್ಧರಿದ್ದೇವೆ ಈ ಭಾಗದಿಂದ ಎನ್ನತಕ್ಕ ಮಾತನ್ನು ಆವತ್ತು ಹೇಳಿದ್ದೇನೆ. ಇವತ್ತು ಸರ್ಕಾರ ನೀವು ಎಲ್ಲಿ ಎಡವಿದೀರಿ, ಎಡವಿರತಕ್ಕ ತಪ್ಪುಗಳೇನು ಎನ್ನತಕ್ಕದ್ದನ್ನು ನೀವು ಇವತ್ತು ಮನವರಿಕೆ ಮಾಡಕೊಂಡರೆ ಸಾಕು. ಇವತ್ತು ಹಲವಾರು ರೀತಿಯ ಹೇಳಿಕೆಗಳನ್ನು ಕೊಟ್ಟುಕೊಂಡು ಬಂದಿದ್ದೀರಿ. ಅದರ ಕಟ್ಟಿಂಗ್‌ಗಳನ್ನು ಇಟ್ಟಿದ್ದೇವೆ. 6ನೇ ತಾರೀಖಿಗೆ ನಾನು ಹೇಳಿದೆ, ಯಾವ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದ 24 ಗಂಟೆಗಳಲ್ಲಿ ಲಾಠಿ ಪ್ರಹಾರದ ಕೆಲಸ ಈ ರಾಜ್ಯದಲ್ಲಿ ನಡೆದಿದೆ. ಮುಂದಿನ ದಿನಗಳಲ್ಲಿ ನೀವು ಯಾವ ರೀತಿಯಾಗಿ ನಡೆಯಬಹುದು ಎಂಬುದನ್ನು 24 ಗಂಟೆಗಳಲ್ಲಿ ಈ ರಾಜ್ಯದ ರೈತರಿಗೆ ಸಂದೇಶವನ್ನು ಕೊಟ್ಟಿದ್ದೀರಿ ಎಂಬ ಮಾತನ್ನು ಈ ಸ್ಥಳದಿಂದ

ಅಂದು ಹೇಳಿದ್ದೇನೆ. 9ನೇ ತಾರೀಖು ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ ಘಟನೆ ನಡೆಯಿತು. ಅಲ್ಲೂ ಗೋಲೀಬಾರ್ ಪ್ರಕರಣ ಆಗಬೇಕಾಗಿತ್ತು. ಆದರೆ ಕೆಲವರು ಮುಂಜಾಗ್ರತವಾಗಿ ಕ್ರಮ ತೆಗೆದುಕೊಂಡಿದ್ದರಿಂದ ಕೆಲವು ಪ್ರಮುಖರು ಹೋಗಿ ಈ ರೀತಿಯ ಘಟನೆಗೆ ಅವಕಾಶ ಕೊಡದಿರತಕ್ಕ ಕೆಲಸವನ್ನೇನು ಜನಪ್ರತಿನಿಧಿಗಳು ಮಾಡಿದ್ದಾರೆ, ಇವತ್ತು ನೀವೇನು ಜನಪ್ರತಿನಿಧಿಯಾಗಿದ್ದೀರಿ, ಆ ಜಿಲ್ಲೆಯಲ್ಲಿ ನಡೆದಿರುವ ಘಟನೆ ನಿಮ್ಮ ಗಮನಕ್ಕೂ ಬಂದಿದೆ. ಆದರೆ ಮಾರನೆ ದಿವಸ ಏಕೆ ಹಾವೇರಿಯಲ್ಲಿ ಗೋಲಿಬಾರ್ ಘಟನೆ ನಡೆಯಿತು? ಏತಕ್ಕೋಸ್ಕರ ನಡೆಯಿತು? ಅದಕ್ಕೆ ಕಾರಣವೇನು? ಗೋಲಿಬಾರ್‌ನ ಅವಶ್ಯಕತೆ ಇತ್ತೇ? ಪ್ರತಿಭಟನೆ ನಡೆಸಲು ಅಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನರು ಸೇರಿದ್ದರೇ? ಆವತ್ತು ಹಾವೇರಿ ನಗರದ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಬೆಳಿಗ್ಗೆಯಿಂದ ಅಲ್ಲೇ ಇದ್ದಾರೆ. ಅಂದು ಬೆಳಿಗ್ಗೆ ನಿಮ್ಮ ಪಕ್ಷದ ವತಿಯಿಂದ ಕೇಂದ್ರ ಸರ್ಕಾರದ ತೈಲ ಬೆಲೆ ಏರಿಕೆಯ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆಯನ್ನು ಪ್ರಾರಂಭ ಮಾಡಿದ್ದೀರಿ. ಕೇಂದ್ರ ಸರ್ಕಾರದ ವಿರುದ್ಧ ದರ ಕಡಿಮೆ ಮಾಡಬೇಕೆಂದು ಪ್ರತಿಭಟನೆ ಮಾಡಿದ್ದೀರಿ. ಬಹಶಃ ಆವತ್ತಿನ ದಿವಸ ನಿಮ್ಮ ಸರ್ಕಾರ ಇದ್ದರೂ ಏನು ಮಾಡುತಿದ್ದರೋ ಗೊತ್ತಿಲ್ಲ. ಆವತ್ತು ನಿಮ್ಮ ಸರ್ಕಾರ ಇದ್ದರೂ ಬೆಲೆ ಏರಿಸಬೇಕಾಗುತ್ತಿತ್ತು ಎಂದು ನನಗೆ ಕಾಣಿಸುತ್ತದೆ. ಅದರ ಅನುಭವವನ್ನು ನೀವೇ ಹೇಳಬೇಕು. ಅದು ನನಗೆ ಗೊತ್ತಿಲ್ಲ. ನೀವೇನು ಎಲ್ಲಾ ಕಡೆ ಪ್ರತಿಭಟನೆ ನಡೆಸುತ್ತಿದ್ದೀರಿ, ಇಡೀ ರಾಜ್ಯದ ಉದ್ದಗಲ ಬಿ.ಜೆ.ಪಿ. ಪಕ್ಷದ ವತಿಯಿಂದ, ಏನು ಪೆಟ್ರೋಲಿಯಂ ಪ್ರಾಡಕ್ಟ್ ಗಳ ಬೆಲೆ ಹೆಚ್ಚಿಸಿದಂಥ ಸಂದರ್ಭದಲ್ಲಿ ಅದರ ವಿರುದ್ಧ ಪ್ರತಿಭಟನೆಯನ್ನು ಹಮ್ಮಿಕೊಂಡಂಥ ನಿಮ್ಮ ಪಕ್ಷದ ಕಾರ್ಯಕ್ರಮಗಳೇನಿತ್ತು ಆವತ್ತು ಬೆಳಿಗ್ಗೆ ಆ ಕಾರ್ಯಕ್ರಮವನ್ನು ನಡೆಸುತ್ತೀರಿ. ಬೀಜ ತರಲು ಹೋದಂಥವನ್ನು ಇವತ್ತು ಏನು ಸಂಜಯಗಾಂಧಿ ಆಸ್ಪತ್ರೆಯಲ್ಲಿ ಮಲಗಿದ್ದಾನೆ ಅವನು ಏನು ಹೇಳಿದ್ದಾನೆ "ಹೊನ್ನತ್ತಿಯ ಬೆನ್ನತ್ತಿರುವ ಗೋಲಿ" ಎನ್ನತಕ್ಕ item ನಲ್ಲಿ ಸಂಜಯಗಾಂಧಿ ಆಸ್ಪತ್ರೆಯಲ್ಲಿ ಪುಟ್ಟಪ್ಪನ ಯೋಗಕ್ಷೇಮ ನೋಡಿಕೊಳ್ಳುತ್ತಿರುವ ಆತನ ಭಾವ ಚನ್ನಪ್ಪ ಚಂದ್ರ ಪಟ್ಟಣ್ ಪ್ರಕಾರ ಅಂದು ನಡೆದ ಪ್ರತಿಭಟನೆಯಲ್ಲಿ ಪುಟ್ಟಪ್ಪ ಭಾಗಿಯಾಗಿರಲಿಲ್ಲ. ಹಾವೇರಿ ಪಟ್ಟಣದಲ್ಲಿ ಪೆಟ್ರೋಲ್ ಬೆಲೆ ಏರಿಕೆ ಖಂಡಿಸಿ ಬಿ.ಜೆ.ಪಿ. ಯವರು ನೀಡಿದ ಪ್ರತಿಭಟನೆ ನಡೆಯುತ್ತಿತ್ತೇ ಹೊರತು ರಸಗೊಬ್ಬರ ಕೊರತೆ ವಿರೋಧಿಸಿ ರೈತರ ಮುಷ್ಕರ ಇರಲಿಲ್ಲ. ಪ್ರತಿಭಟನೆ ಮುಗಿದ ನಂತರ ರೈತಸಂಪರ್ಕ ಕೇಂದ್ರದ ಬಳಿ ಬಂದು ರಸಗೊಬ್ಬರ ಕೊರತೆ ಕುರಿತು ಕೆಲ ರೈತ ಮುಖಂಡರು ಚರ್ಚೆ ನಡೆಸಿದರು. ಬಿ.ಜೆ.ಪಿ.ಯವರ ಪ್ರತಿಭಟನೆ ಮುಗಿದ

ನಂತರ ರೈತರು ಅಲ್ಲಿ ಬಂದು ಅಲ್ಲಿಯ ನಿಮ್ಮ ಪ್ರಮುಖ ಜನಪ್ರತಿನಿಧಿಗಳನ್ನು ಕೇಳುತ್ತಾರೆ. ಅಲ್ಲಿಂದ ಪ್ರಾರಂಭವಾಯಿತು. ಇಲ್ಲಿ ಬಸ್ ಸ್ಟ್ಯಾಂಡ್‌ನಲ್ಲಿ ಇದ್ದಂಥವರ ಮೇಲೆ ಹೆಣ್ಣುಮಕ್ಕಳ ಮೇಲೆ ಸಹ ಪೊಲೀಸ್ ನವರು ಏನು ಮಾಡಿದರು, "ಗೋಲೀಬಾರ್ ಆಗಿದ್ದು ಏಕೆ" ಹೊಸಮನೆ ಸಿದ್ದಪ್ಪ ವೃತ್ತದಲ್ಲಿ ರೈತರ ಪ್ರತಿಭಟನೆ ಮುಂದುವರೆದ ಸಂದರ್ಭದಲ್ಲಿ ಬಸ್ ನಿಲ್ದಾಣ ಪ್ರವೇಶಿಸಿದ ಕೆಲವು ಪೊಲೀಸರು ಅಲ್ಲಿದ್ದ ಪ್ರಯಾಣಿಕರು, ಪತ್ರಕರ್ತರನ್ನು ಹಿಗ್ಗಾಮುಗ್ಗಾ ಥಳಿಸಿದ್ದೇ ಅಲ್ಲದೆ ಮುಂದಿನ ಎಲ್ಲಾ ಘಟನೆಗೂ ಕಾರಣವಾಯಿತು ಎನ್ನಲಾಗುತ್ತಿದೆ. ಈ ವೇಳೆ ತೀವ್ರವಾಗಿ ಗಾಯಗೊಂಡ ವ್ಯಕ್ತಿಯೊಬ್ಬ ಮೂರ್ಛೆಹೋದ ಅಲ್ಲಿದ್ದ ಮಾಧ್ಯಮದವರು ಪ್ರಥಮ ಚಿಕಿತ್ಸೆ ನೀಡಿದರು. ಪೊಲೀಸ್ ನವರ ಈ ವರ್ತನೆಯಿಂದ ಮಹಿಳೆಯರು ಭಯಭೀತರಾಗಿ ಓಡತೊಡಗಿದರು. ಸುದ್ದಿ ಕಾಡ್ಗಿಚ್ಚಿನಂತೆ ಹರಡಿದಾಗ ಪ್ರತಿಭಟನಾಕಾರರು ತೀವ್ರ ಆಕ್ರೋಶಗೊಂಡು ಕಲ್ಲುತೂರಾಟವನ್ನು ಚುರುಕುಗೊಳಿಸಿದರು. ಉದ್ರಿಕ್ತ ಗುಂಪನ್ನು ಸದುರಿಸಲು ಪೊಲೀಸರಿಗೆ ಗೋಲಿಬಾರ್ ಅನಿವಾರ್ಯವಾಯಿತು. ಇದು ಯಾರು ಶಾಂತಿಯಿಂದ ಹೊರಾಟ ಮಾಡುತ್ತಿದ್ದರು, ಅಂಗಡಿಗಳ ಮುಂದೆ ಗೊಬ್ಬರಕ್ಕೆ ಕ್ಯೂ ನಿಂತಿದ್ದರೋ, ಕಾರಣ ಎಲ್ಲಿ ಆಯಿತು ಎಂಬುದನ್ನು ಇವತ್ತು ಸರ್ಕಾರ ಅರಿಯಬೇಕಾಗುತ್ತದೆ. ಪದೇ ಪದೇ ವಿರೋಧ ಪಕ್ಷದವರು ಈ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರಲು ಪಿತೂರಿ ನಡೆಸುತ್ತಿದ್ದಾರೆ, ಷಡ್ಯಂತರ ನಡೆಸುತ್ತಿದ್ದಾರೆ ಮುಂತಾದ ಪದಗಳನ್ನು ಬಳಸುತ್ತಿದ್ದೀರಿ. ಇದು ಆದ ನಂತರ ಮಾರನೆ ದಿವಸ ಮಾನ್ಯ ಮುಖ್ಯ ಮಂತ್ರಿಯವರು ಅಲ್ಲಿಗೆ ಹೋಗುತ್ತಾರೆ. ಅದಕ್ಕೂ ಮೊದಲು ಅವರು ಏನು ಹೇಳಿಕೆ ಕೊಡುತ್ತಾರೆಂದರೆ, ಅದು 6ನೇ ತಾರೀಖು, ಹಾವೇರಿಯಿಂದ ಶಿಕಾರಿಪುರಕ್ಕೆ ಗೊಬ್ಬರ, ಹಾವೇರಿಗೆ ಏನು 400 ಟನ್ ಗೊಬ್ಬರ ಅಲಾಟ್ ಆಗಿರುತ್ತದೆ ಅದನ್ನು ಶಿಕಾರಿಪುರಕ್ಕೆ ತೆಗೆದುಕೊಂಡು ಹೋಗತಕ್ಕ ಸಂದರ್ಭದಲ್ಲಿ ಹತ್ತು ಲಾರಿಗಳನ್ನು ಸವಳಂಗ ಕ್ರಾಸ್ ಬಳಿ ರೈತರು ನಿಲ್ಲಿಸುತ್ತಾರೆ. ಇದನ್ನು ನಾವು ಅಲ್ಲಿಗೆ ಕೊಡಲು ಸಾಧ್ಯವಿಲ್ಲ, ನಮಗೇ ಕೊಡಬೇಕು, ನಮಗೂ ಇಲ್ಲಿ ಗೊಬ್ಬರದ ಕೊರತೆ ಇದೆಯೆಂದು ಪ್ರತಿಭಟನೆ ನಡೆಸುತ್ತಾರೆ. ಇದನ್ನು ಕಾಂಗ್ರೆಸ್ ಪಕ್ಷವಾಗಲಿ, ಜನತಾದಳ ಪಕ್ಷವಾಗಲಿ ಇದನ್ನು ಏನೋ ರಾಜಕೀಯವಾಗಿ ದುರುಪಯೋಗ ಪಡಿಸಿಕೊಳ್ಳಬೇಕೆಂದು ಮಾಡಿದಂಥ ಘಟನೆಯಲ್ಲ ಇದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಪದೇ ಪದೇ ಇದರ ಬಗ್ಗೆ ತಾವು ಹೇಳಿಕೆಗಳನ್ನು ಕೊಡುತ್ತಿದ್ದೀರಿ. "ಗೊಬ್ಬರ ಸಮಸ್ಯೆ ಹಂತ ಹಂತವಾಗಿ ಬಗೆಹರಿಯುತ್ತದೆ. ಅನಗತ್ಯವಾಗಿ ಕೆಲವರು ಗೊಬ್ಬರ ರಾಜಕೀಯ ಮಾಡುತ್ತಿದ್ದಾರೆ, ಅವರು ಯಾರು ಎಂಬುದು ನನಗೆ ಗೊತ್ತು, ರೈತರ ಹಿತದೃಷ್ಟಿಯಿಂದ

Vol. 9. F. 15

ಗೊಬ್ಬರ ರಾಜಕೀಯ ಕೈ ಬಿಡಿ, ಬಂದ್ ಮಾಡುವುದರಿಂದ, ಬಸ್ಸಿಗೆ ಕಲ್ಲು ಹೊಡೆಯುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ರಾಜ್ಯಪಾಲರ ಅವಧಿಯಲ್ಲಾದ ಸಮಸ್ಯೆಗೆ ನಾನು ಪರಿಹಾರ ನೀಡುವೆ" ಎಂದು ನೀವೇ ಹೇಳಿದ್ದೀರಿ. 11ನೇ ತಾರೀಖು ಬೆಳಿಗ್ಗೆ ನೀವು ಆ ಗೋಲಿಬಾರ್ ನಲ್ಲಿ ಮೃತಪಟ್ಟಮತಹ ಕುಟುಂಬಕ್ಕೆ ಭೇಟಿ ಕೊಟ್ಟು, ದೆಹಲಿಗೆ ಹೋಗತಕ್ಕ ಕಾರ್ಯಕ್ರಮ ನಿಗದಿ ಮಾಡುತ್ತೀರಿ. ಆಸ್ಪತ್ರೆಗೂ ಕೂಡ ಭೇಟಿ ಕೊಡುತ್ತೀರಿ. ಗುಂಡೇಟುತಿಂದಂತಹ ಹಲವಾರು ಜನ ರೈತರು ಆಸ್ಪತ್ರೆಯಲ್ಲಿ ಮಲಗಿರುತ್ತಾರೆ. ಹೆಚ್ಚಿನ ಗಾಯವಾಗಿರುವವರಿಗೆ 50 ಸಾವಿರ ರೂಪಾಯಿಗಳನ್ನು ಮತ್ತು ಸಣ್ಣ ಪುಟ್ಟ ಗಾಯವಾಗಿರುವವರಿಗೆ 25 ಸಾವಿರ ರೂಪಾಯಿಗಳನ್ನು ತಾವು ಘೋಷಣೆ ಮಾಡಿದಿರಿ. ಆಸ್ಪತ್ರೆಗೆ ಸೇರಿ 3–4 ದಿವಸವಾದರೂ, ಯಾವ ರೈತ ಗುಂಡೇಟು ಬಿದ್ದು ಆಸ್ಪತ್ರೆಯಲ್ಲಿ ಮಲಗಿರುತ್ತಾನೋ, ಅವನ ದುಡಿಮೆ ಮೇಲೆ ಜೀವನ ಮಾಡತಕ್ಕ ಕುಟುಂಬಕ್ಕೆ ಎರಡು ಹೊತ್ತಿನ ಊಟಕ್ಕೂ ಗತಿ ಇಲ್ಲದೇ ಇರತಕ್ಕ ವಿಷಯ ಪತ್ರಿಕೆಗಳಲ್ಲು ಬರೆಯುತ್ತಾರೆ. ನೀವು ಏನೋ ಒಂದು ಕಾಟಾಚಾರಕ್ಕೆ ಭೇಟಿ ಕೊಡುತ್ತೀರಿ. ಮಾನ್ಯ ವಿರೋಧ ಪಕ್ಷದ ನಾಯಕರಾದ ಖರ್ಗೆಯವರು ಬೆಳಿಗ್ಗೆ ಆ ಬಗ್ಗೆ ಹೇಳಿದರು.ನಿಮ್ಮ ಜಿಲ್ಲೆಯ, ನಿಮ್ಮ ತಾಲ್ಲೂಕಿನಲ್ಲಿ ರೈತರ ಆತ್ಮಹತ್ಯೆ ಪ್ರಕರಣವಾಯಿತು. ಅದು ಆತ್ಮಹತ್ಯೆ ಅಲ್ಲವೆಂದು ನೀವು ಈಗ ಹೇಳುತ್ತಿದ್ದೀರಿ. ಅದು ಗೊಬ್ಬರಕ್ಕಾಗಿ ಮಾಡಿಕೊಂಡ ಆತ್ಮಹತ್ಯೆ ಅಲ್ಲದೇ ಇದ್ದರೆ, ನೀವು ಅಲ್ಲಿಗೆ ಹೋಗಲೇಬಾರದಿತ್ತು. ಏತಕ್ಕಾಗಿ ತಾವು ಅಲ್ಲಿಗೆ ಹೋದಿರೋ ನನಗೆ ಗೊತ್ತಾಗುತ್ತಿಲ್ಲ. ನೀವು ಅಲ್ಲಿಗೆ ಹೋದಾಗ, ನೀವು ರೈತನ ಶವಕ್ಕೆ ಎಡಗೈಯಲ್ಲಿ ಶ್ರೀಗಂಧದ ಹಾರವನ್ನು ಎಸೆದಂತಹ ಘಟನೆ ಏನಿದೆ, ಅದು ಟಿ.ವಿ.ಯಲ್ಲಿ ಪ್ರಸಾರವಾಗಿದೆ. ಅದನ್ನು ಇಡೀ ರಾಜ್ಯದ ಜನತೆ ನೋಡಿದೆ. ನೀವು ಆಸ್ಪತ್ರೆಯಲ್ಲಿ ಯಾವ ರೀತಿ ನಡೆದುಕೊಂಡಿರಿ ಎಂಬುದನ್ನು ನಾನು ಹೇಳುತ್ತೇನೆ. ನಾನು ಮಾರನೇ ದಿವಸ ಅಲ್ಲಿಗೆ ಹೋಗಬೇಕೋ ಬೇಡವೋ ಎಂಬ ದ್ವಂದ್ವ ಮನಸ್ಸಿನಿಂದಲೇ ಹೋದೆ. ಅದಕ್ಕೆ ಕಾರಣ ಆ ರೈತರು ಹೋರಾಟ ಮಾಡಿ, ಆ ಗೋಲಿಬಾರ್ ಪ್ರಕರಣದ ಏನು ನಡೆಯಿತು. ಅಲ್ಲಿಗೆ ಹೋದಂತಹ ಪ್ರತಿಯೊಬ್ಬ ರಾಜಕಾರಣಿಗಳಿಗೂ ಮತ್ತು ಜನಪ್ರತಿನಿಧಿಗಳಿಗೂ ಆ ಜನಗಳು ಆಕ್ರೋಶದಲ್ಲಿ ಮಾತನಾಡಿರತಕ್ಕ ಪತ್ರಿಕಾ ವರದಿಗಳನ್ನು ನಾನು ಗಮನಿಸಿದೆ. ರಾಜಕಾರಣಿಗಳ ಬಗ್ಗೆ ಮತ್ತು ಜನ ಪ್ರತಿನಿಧಿಗಳ ಬಗ್ಗೆ ಜನಗಳಲ್ಲಿ ಒಂದು ರೀತಿಯ ಕೀಳು ಮಟ್ಟದ ಭಾವನೆ ಮೂಡತಕ್ಕಂಥ ರೀತಿಯ ವಾತಾವರಣ ಅಲ್ಲಿದೆ ಎಂಬ ವರದಿಗಳನ್ನು ಗಮನಿಸಿದೆ. ಆದರೂ ನಾನು ಅಲ್ಲಿಗೆ ಹೋಗದಿದ್ದರೆ ತಪ್ಪಾಗಬಹುದು ಎಂಬ ಕಾರಣದಿಂದ ನಾನು

ಅಲ್ಲಿಗೆ ಭೇಟಿ ಕೊಟ್ಟೆ ಏಕೆಂದರೆ, ನಾನು ಅಲ್ಲಿಗೆ ಭೇಟಿ ಕೊಟ್ಟರೆ, ನೀವು ಮತ್ತೆ ಇದು ರಾಜಕೀಯ ಪಿತೂರಿ ನಡೆಸಲಿಕ್ಕಾಗಿ ವಿರೋಧ ಪಕ್ಷದವರು ಹೋಗಿದ್ದಾರೆಂದು ಇಲ್ಲೊಂದು ಹೇಳಿಕೆ ಕೊಡುತ್ತೀರಿ. ಒಂದು ರೀತಿಯಲ್ಲಿ ಏನು ಮಾಡಬೇಕೆಂಬುದೇ ನಮಗಿಲ್ಲಿ ಗೊತ್ತಾಗುತ್ತಿಲ್ಲ. ನಿಮ್ಮನ್ನು ಕೇಳಿಯೇ ಪ್ರತಿಯೊಂದು ಹೆಚ್ಚೆಯನ್ನು ನಾವು ಇನ್ನು ಮುಂದೆ ಇಡಬೇಕಾದಂಥಹ ಪರಿಸ್ಥಿತಿ ಈ ರಾಜ್ಯದಲ್ಲಿ ಬರಬಹುದೋ ಏನೋ, ನನಗೆ ಗೊತ್ತಿಲ್ಲ. ಇತ್ತೀಚಿನ ನಿಮ್ಮ ಹೇಳಿಕೆಗಳನ್ನು ನಾವು ಗಮನಿಸಬಹುದು. ಅಲ್ಲಿ ಆಸ್ಪತ್ರೆಗೆ ಹೋದಾಗ ನನಗೆ ಆ ನೋವನ್ನು ಹೇಳಿಕೊಳ್ಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದರು, ಹೋದರು. ಇವತ್ತು ನಮಗೆ ಊಟಕ್ಕೆ ಗತಿ ಇಲ್ಲ. ನಮ್ಮನ್ನು ಯಾರು ನೋಡಬೇಕು? ಎಂದು ಕೇಳುತ್ತಾರೆ. ಕೊನೆಗೆ ಐದೈದು ಸಾವಿರ ರೂಪಾಯಿಗಳನ್ನು ನಮ್ಮ ಕಾರ್ಯಕರ್ತರ ಮುಖಾಂತರ ಕೊಡಿಸಲು ಏರ್ಪಾಡು ಮಾಡಿದೆ. ಈಗ ಇಲ್ಲಿನ ಸಂಜಯಗಾಂಧಿ ಆಸ್ಪತ್ರೆಗೆ ಅಧಿಕಾರಿಗಳು ತಂದು ಮಲಗಿಸಿರುವ ಪುಟ್ಟಪ್ಪನ ಹೆಂಡತಿಯನ್ನು ಮತ್ತು ಅವರ ತಾಯಿಯನ್ನು ನನ್ನ ಮುಂದೆ ಕರೆದುಕೊಂಡು ಬಂದರು. ಅವರಿಗೆ ಮೂವರು ಸಣ್ಣ ಸಣ್ಣ ಮಕ್ಕಳಿದ್ದಾರೆ. ಯಾರು ಹಾಸಿಗೆ ಮೇಲೆ ಮಲಗಿರುತ್ತಾನೋ ಅವನೇ ಆ ಕುಟುಂಬಕ್ಕೆ ಸಂಪೂರ್ಣ ಆಧಾರ. ನೀವು ಅಲ್ಲಿಗೆ ಹೋದರೆ ತಕ್ಷಣಕ್ಕಾದರೂ ಏನಾದರೂ ಅವರಿಗೆ ತಕ್ಷಣ ವ್ಯವಸ್ಥೇ ಮಾಡಬೇಕೆಂಬ ಮಾನವೀಯ ಮೌಲ್ಯವನ್ನು ನೀವು ಅಲ್ಲಿ ತೋರಿಸಲಿಲ್ಲ. ಮನುಷ್ಯತ್ವವನ್ನೂ ತೋರಿಸಲಿಲ್ಲ ಎಂಬ ಮಾತನ್ನು ಹೇಳಿದರೆ ತಪ್ಪಗಲಾರದು. ಪದ ಸ್ವಲ್ಪ ಕಟುವಾಯಿತೋ ಏನೋ ಗೊತ್ತಿಲ್ಲ. ಆದರೆ ನಡೆದಂತಹ ಘಟನೆ ಅದು. ನಾನು ಅಲ್ಲಿ ಗಮನಿಸಿ ತಕ್ಷಣಕ್ಕೆ ಏನು ವ್ಯವಸ್ಥೆ ಮಾಡಬೇಕೋ ಮಾಡಿದೆವು. ಗೋಲಿಬಾರ್ ಪ್ರಕರಣದ ಬಗ್ಗೆ ಮತ್ತು Law and Order ಬಗ್ಗೆ ಇಲ್ಲಿ ಚರ್ಚೆ ಮಾಡಬಾರದು. ಚರ್ಚೆ ಮಾಡಲಿಕ್ಕೆ ಅವಕಾಶಗಳಿಲ್ಲವೆಂದು ಬೆಳಿಗ್ಗೆ ನೀವು ಇಲ್ಲಿ ಹೇಳಿದಿರಿ. ಮಾನ್ಯ ಖರ್ಗೆಯವರು ಗೃಹ ಸಚಿವರಾಗಿದ್ದಾಗ ವಿಷಯಗಳನ್ನು ತಿಳಿದುಕೊಳ್ಳಲಿಕ್ಕಾಗಿ Karnataka Police Manualನ ಕನ್ನಡ ಅನುವಾದ ಮಾಡಲಾಯಿತು. ಅದರಲ್ಲಿ ಯಾವ ರೀತಿ ಅವರು ಗೋಲಿಬಾರ್ ಮಾಡಬೇಕು? ಎಂದು ಇದೆ. ಆದರೆ ಅಲ್ಲಿ ಯಾವ ರೀತಿ ಗೋಲಿಬಾರ್ ನಡೆಸಿದರು? ನಾನು ಎಲ್ಲವನ್ನೂ ಕೂಡ ಹೇಳಲಿಕ್ಕೆ ಹೋಗುವುದಿಲ್ಲ. ಕೇವಲ ಒಂದೇ ಒಂದು ಪ್ಯಾರಾವನ್ನು ಮಾತ್ರ ಹೇಳಬಯಸುತ್ತೇನೆ.

> "ಜನಜಂಗುಳಿ ಆದೇಶವನ್ನು ಉಲ್ಲಂಘಿಸಿದರೆ, ಫಿರಂಗಿಯಿಂದ ನೀರು ಹೊಡೆದರೆ ಮತ್ತು ಅಶ್ರೂವಾಯು ಮತ್ತು ಬೆತ್ತ ಪ್ರಯೋಗ ಅಥವಾ ಆ

ಎರಡೂ ಪರಿಣಾಮಕಾರಿಯಾಗದಿದ್ದರೆ, ರಬ್ಬರ್ ಗುಂಡು ಹಾರಿಸುವುದು ಪ್ರಯೋಜನವಾಗದಿದ್ದರೆ ಅಥವಾ ಫಲಕಾರಿಯಾಗದಿದ್ದರೆ ಅಥವಾ ತಮ್ಮ ಉದ್ದೇಶ ಸಾಧನೆಯಲ್ಲಿ ವಿಫಲರಾದರೆ ಗುಂಡು ಹಾರಿಸಬಹುದು. ಒಂದು ಅಕ್ರಮ ಕೂಟವನ್ನು ಬಲ ಪ್ರಯೋಗದಿಂದ ಯಾವಾಗ ಚದುರಿಸಬಹುದು ಎಂದು ತೀರ್ಮಾನಿಸುವ ಹೊಣೆಗಾರಿಕೆಯು ಹಾಗೂ ಯಾವ ರೀತಿಯ ಬಲ ಪ್ರಯೋಗ ಮಾಡಬೇಕೆಂದು ತೀರ್ಮಾನಿಸುವ ಜವಾಬ್ದಾರಿ ಆ ದಂಡಾಧಿಕಾರಿಗೆ ಇರುತ್ತದೆ. ಸಾಧ್ಯವಿದ್ದ ಮಟ್ಟಿಗೆ ಗುಂಡು ಹಾರಿಸುವಂತೆ ಆದೇಶಿಸುವ ಮುಂಚೆ ಅಶ್ರೂವಾಯು ಮತ್ತು ಬೆತ್ತ ಪ್ರಹಾರ ಮಾಡುವಂತೆ ಅಥವಾ ಎರಡನ್ನೂ ಮಾಡುವಂತೆ ಆದೇಶಿಸಬಹುದು ಮತ್ತು ಗುಂಪಿನ ಮೇಲೆ ಪರಿಣಾಮ ಬೀರಲು ಅವಶ್ಯವಿರುವ ಸಂಖ್ಯೆಯ ಪೊಲೀಸರು ಇಲ್ಲದಿದ್ದರೆ ಬೆತ್ತ ಪ್ರಹಾರವನ್ನು ಪ್ರಾರಂಭಿಸಬಾರದು.

ಇದೆಲ್ಲಾ ಹೇಳಿಕೊಂಡು ಹೋಗಿದ್ದಾರೆ. ಯಾರ ರೀತಿ ಗುಂಡು ಹಾರಿಸಿದ್ದಾರೆ ಎಂಬುದನ್ನು ಇಲ್ಲಿ ಹೇಳಿದ್ದಾರೆ. ಪೊಲೀಸ್ ಇಲಾಖೆಯಿಂದ ಸಿಬ್ಬಂದಿಗಳ್ಯಾರೂ ಗುಂಡು ಹಾರಿಸಲಿಲ್ಲ. ಯಾರೋ ಒಬ್ಬ ಸಾರ್ವಜನಿಕ ಗನ್ ಕಿತ್ತುಕೊಂಡು ಗುಂಡು ಹಾರಿಸಿದ್ದಾನೆ. ಆಮೇಲೆ ಗನ್ ತೆಗೆದು ಎಲ್ಲಿಯೋ ಎಸೆದು ಹೋಗಿದ್ದಾನೆ ಎಂದು ಒಬ್ಬ ಅಧಿಕಾರಿ ಹೇಳುತ್ತಾರೆ. ಪೊಲೀಸ್ ಇಲಾಖೆಯ ಅಧಿಕಾರಿಗಳಿಂದ ಈ ರೀತಿ ಹೇಳಿಕೆ ಬಂದಿದ್ದರೆ, ನಮ್ಮ ಗೃಹ ಸಚಿವರು 'ಗೋಲಿಬಾರ್‌ನ ಅವಶ್ಯಕತೆ ಇರಲಿಲ್ಲ' ಎಂದು ನಿನ್ನೆ ಅಥವಾ ಮೊನ್ನೆ ಹೇಳಿರುವುದನ್ನು ನಾನು ನೋಡಿದ್ದೇನೆ. ಇವತ್ತು ಯಾವ ಒಂದು ಗೋಲಿಬಾರ್ ಪ್ರಕರಣದ ನಡೆಯಿತು, ಆ ಸಂದರ್ಭದಲ್ಲಿ ಅದಕ್ಕೆ ಮ್ಯಾಜಿಸ್ಟ್ರೇಟ್ ಆದೇಶ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ.

"ಗೋಲಿಬಾರ್‌ಗೆ ಆದೇಶ ನೀಡಿದವರು ಯಾರು? ನಗರದಲ್ಲಿ ಮಂಗಳವಾರ ರೈತರ ಪ್ರತಿಭಟನೆ ವೇಳೆ ಗೋಲಿಬಾರ್ ಮಾಡುವ ಅವಶ್ಯಕತೆಯಿತ್ತೇ? ಇದಕ್ಕೆ ಆದೇಶ ನೀಡಿದವರು ಯಾರು? ಎಂಬ ಪ್ರಶ್ನೆಗಳು ತೀವ್ರ ಚರ್ಚೆಗೆ ಗ್ರಾಸವಾಗಿವೆ. ಗೋಲಿಬಾರ್‌ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಥವಾ ಜಿಲ್ಲಾ ದಂಡಾಧಿಕಾರಿ ಅಥವಾ ತಹಶೀಲ್ದಾರ್

ಆದೇಶ ನೀಡಬೇಕು. ಆದರೆ ಇವರಲ್ಲಿ ಯಾರೋಬ್ಬರೂ ತಾವು ಆದೇಶ ನೀಡಿದ್ದೇವೆ ಎಂದು ಒಪ್ಪಿಕೊಳ್ಳದೇ ಒಬ್ಬರ ಮೇಲೊಬ್ಬರು ಹೇಳುತ್ತಿರುವುದು ತೀವ್ರ ಕುತೂಹಲದ ವಿಷಯವಾಗಿದೆ. 'ನಾನು ಗೋಲಿಬಾರ್‌ಗೆ ಆದೇಶ ಮಾಡಿಲ್ಲ. ಎಸ್ಪಿಯವರು ಆದೇಶ ಮಾಡಿರಬಹುದು ಎಂದು ತಿಳಿದಿದ್ದೇ ಎಂದು ತಹಶೀಲ್ದಾರ್‌ರವರು ಹೇಳುತ್ತಾರೆ. ಇದೇ ರೀತಿಯ ಉತ್ತರಗಳು ಜಿಲ್ಲಾಧಿಕಾರಿ ಹಾಗೂ ಎಸ್ಪಿಯವರಿಂದಲೂ ಬಂದಿವೆ. ಸಂಜೆ ನಗರಕ್ಕೆ ಆಗಮಿಸಿದ ಅಧಿಕಾರಿಗಳು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಈ ಮಧ್ಯ ತರಾತುರಿಯಲ್ಲಿ ತಹಶೀಲ್ದಾರರ ಕಡೆಯಿಂದ ಲಿಖಿತವಾಗಿ ಗೋಲಿಬಾರ್ ಆದೇಶ ಬರೆಸಿಕೊಳ್ಳುವ ಪ್ರಯತ್ನಗಳು ಪ್ರವಾಸಿ ಮಂದಿರದಲ್ಲಿ ನಡೆಯಿತು, ಇದಕ್ಕೆ ಅವರು ಒಪ್ಪಲಿಲ್ಲ.

ಅಲ್ಲಿ ಹಿರಿಯ ಅಧಿಕಾರಿ ತಹಶೀಲ್ದಾರ್‌ಗೆ ಯಾವ್ಯಾವ ರೀತಿಯಲ್ಲಿ ಬೆದರಿಕೆ ಹಾಕಿದ್ದಾರೆ ಎಂಬುದನ್ನು ದಯವಿಟ್ಟು ನಿಮ್ಮ ನ್ಯಾಯಾಂಗ ತನಿಖೆ ಎಂದು ಈಗೇನು ಹೇಳಿದ್ದೀರಲ್ಲಾ, ಅದರಲ್ಲಿ ಸೇರಿಸಿ. ತಿಪ್ಪೆ ಸಾರಿಸುವ ಕೆಲಸಕ್ಕೆ ನ್ಯಾಯಾಂಗ ತನಿಖೆ ಮಾಡಬೇಡಿ. ಈ ರಾಜ್ಯದಲ್ಲಿ ಅಥವಾ ಈ ದೇಶದಲ್ಲಿ ನ್ಯಾಯಾಂಗ ತನಿಖೆಗಳ ವರದಿಗಳಿಗೆ ಅಂತಿಮವಾಗಿ ಏನು ಗತಿ ಎಂದು ನನಗೆ ಗೊತ್ತಿದೆ. ಹಿಂದೆ ನ್ಯಾಯಾಂಗ ತನಿಖೆ ವರದಿಗಳು ಏನು ಬಂದವು, ಅದಕ್ಕೆ ಯಾರ್ಯಾರು ಏನೇನು ಪ್ರಾಯಶ್ಚಿತ ಕೊಟ್ಟಿದ್ದಾರೆ? ಯಾವ್ಯಾವ ರೀತಿಯ ಕ್ರಮಗಳನ್ನು ತೆಗದುಕೊಂಡಿದ್ದಾರೆ ಎಂಬುದನ್ನೆಲ್ಲಾ ನನಗೆ ಗೊತ್ತಿದೆ. ಹಿಂದಿನ ಘಟನೆಗಳನ್ನು ನೋಡಿದ್ದೇವೆ. ಮತ್ತೆ ಅದೇ ಕೆಲಸ ಆಗಬಾರದು. ಇವತ್ತು ನಿಮಗೆ ರೈತರ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದರೆ, ಯಾವ ರೈತನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದೀರಿ, ಇವತ್ತು ನೀವು ಆ ಬದ್ಧತೆಯನ್ನು ಪ್ರದರ್ಶನ ಮಾಡಬೇಕು. ನಿಮ್ಮ ಮನಸ್ಸಿನಲಿ ಆ ಸಂಕಲ್ಪ ಇದ್ದರೆ, ತೋರಿಕೆಯಾಗಿ ನ್ಯಾಯಾಂಗ ತನಿಖೆಯನ್ನು ಮಾಡಬೇಡಿ. ಮೊದಲು ಅಲ್ಲಿ ಇರತಕ್ಕಂಥ ಎಲ್ಲಾ ಹಿರಿಯ ಅಧಿಕಾರಿಗಳನ್ನು ವರ್ಗಾಯಿಸತಕ್ಕ ಕೆಲಸ ಮಾಡಿ. ತರಾತುರಿಯಲ್ಲಿ ಕುಳಿತುಕೊಂಡು, ಗೊಬ್ಬರದ ತೊಂದರೆಗಳಿವೆ ಎನ್ನುವುದನ್ನು ಪ್ರತಿನಿತ್ಯ ನೀವು ಪತ್ರಿಕೆಗಳಲ್ಲಿಸ ಗಮನಿಸಿದರೂ, ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ನೀವು ಆವತ್ತು ಜೆ. ಹೆಚ್. ಪಟೇಲ್‌ರ ಸರ್ಕಾರದಲ್ಲಿ ಗೂಟದ ಕಾರು ಮತ್ತು ಹೆಲಿಕಾಪ್ಟರ್‌ಗಳ ಬಗ್ಗೆ ಹೇಳಿದ್ದೀರಿ. ಯಾವ ಜಿಲ್ಲಾ ಮಂತ್ರಿಗಳು ಈ ಒಂದು ಸಮಸ್ಯೆಗಳನ್ನು ಕೈಗೆತ್ತಿಕೊಂಡು ಸ್ಥಳಕ್ಕೆ ಹೋಗಲಿಲ್ಲ. ಇವತ್ತು ಪಾಪ! ನೀವು ವಿಡಿಯೋ ಕಾನ್ಫರೆನ್ಸ್ ಹೊಸದಾಗಿ ಪ್ರಾರಂಭ ಮಾಡಿದ್ದೀರಿ. ವಿಡಿಯೋ

ಕಾನ್ಫರೆನ್ಸ್ ಮುಖಾಂತರ ಅಧಿಕಾರಿಗಳನ್ನು hi-tech ಸಂಸ್ಕೃತಿಗೆ ತರುವುದಕ್ಕೆ ಏನು ಪ್ರಯತ್ನ ಪಡುತ್ತಿದ್ದೀರಿ, ಅದಕ್ಕೆ ನಾನು ಶುಭ ಕೋರುತ್ತೇನೆ. ನಾನು ನಿಮ್ಮ ಜೊತೆ ನೀವು ಕೊಟ್ಟಂತಹ ಸಹಕಾರದಿಂದ ಏನು ಕೆಲಸ ಮಾಡಿದ್ದೇನೆ. ಆಗ ನನಗೆ ಅಧಿಕಾರಿಗಳ ಬಗ್ಗೆ ಗೊತ್ತಾಗಿದೆ. ಅಧಿಕಾರಿಗಳು ಯಾವ ರೀತಿಯಿಂದ ಕೆಲಸ ಮಾಡುತ್ತಾರೆ ಎನ್ನುವುದನ್ನೂ ಸಹ ನಾನು ಗಮನಿಸಿದ್ದೇನೆ. ನಿಮ್ಮ ವಿಡಿಯೋ ಕಾನ್ಫರೆನ್ಸ್ ಎಷ್ಟ ಮಟ್ಟಿಗೆ ಯಶಸ್ವಿಯಾಗುತ್ತದೆ ಎನ್ನುವುದನ್ನು ಮುಂದಿನ ದಿನಗಳಲ್ಲಿ ಕಾದು ನೋಡೋಣ. ಗೋಲಿಬಾರ್‌ಗೆ ಆದೇಶ ಯಾರು ನೀಡಿದರು ಎಂಬ ಬಗ್ಗೆ ನಿಮಗೆ ಇನ್ನೂ ಗೊತ್ತಿಲ್ಲ. ಘಟನೆಯಾಗಿ ನಾಲ್ಕು ದಿವಸಗಳಾದ ಮೇಲೂ ಗೃಹ ಸಚಿವರು ಅಲ್ಲೆಲ್ಲೋ 'ಇನ್ನೂ ನಮಗೆ ಯಾರು ಆದೇಶ ಮಾಡಿದರೂ?' ಎನ್ನುವುದು ಗಮನಕ್ಕೆ ಬಂದಿಲ್ಲವೆಂದು ಹೇಳಿಕೆ ಕೊಟ್ಟಿದ್ದಾರೆ.

ರೈತರ ಆತ್ಮಹತ್ಯೆ ಪ್ರಕರಣಗಳು ಶುರುವಾಗಿವೆ, ಅದಕ್ಕೆ ನಿಮಗೆ ನಾನು ದೋಷ ಕೊಡುವುದಿಲ್ಲ. ಏನೋ ಈ ಸರ್ಕಾರ ಬಂದ ತಕ್ಷಣವೇ ಆರಂಭವಾಯಿತೆಂದು ಹೇಳುವುದಿಲ್ಲ. ನಾನು ಇದ್ದಾಗಲೂ ಆಗಿವೆ. ಸುಮಾರು 8–10 ವರ್ಷಗಳಿಂದ ಈ ರೈತರ ಆತ್ಮಹತ್ಯೆ ಪ್ರಕರಣಗಳು ಈ ದೇಶದಲ್ಲಿ ಈ ರಾಜ್ಯದಲ್ಲಿ ಏನು ನಡೆಯುತ್ತಿವೆ, ನಾವು ಕೇವಲ ರಾಜಕೀಯಕ್ಕೆ ಈ ಆತ್ಮಹತ್ಯೆ ಪ್ರಕರಣಗಳನ್ನು ದುರ್ಬಳಕೆ ಮಾಡುವುದು ಬೇಡ ನೀವು ಮಾಡುವುದ ಬೇಡ. ರೈತರಿಗೆ ಯಾವ ರೀತಿಯ ಕಾರ್ಯಕ್ರಮವನ್ನು ಕೊಡಬೇಕೆನ್ನುವುದನ್ನು ಏನು 17ನೆ ತಾರೀಖು ಆಯವ್ಯಯದಲ್ಲಿ ಮಂಡನೆ ಮಾಡುತ್ತಿದ್ದೀರಿ. ದಯವಿಟ್ಟು ಅದನ್ನು ಕೊಟ್ಟುಬಿಟ್ಟರೆ, ರೈತರ ಪರವಾಗಿ ನಾನೇ ನಿಮಗೆ ವಂದನೆಗಳನ್ನು ಸಲ್ಲಿಸುವುದಕ್ಕೆ ಸಿದ್ದನಿದ್ದೇನೆ. ನೀವು ಪದೆ ಪದೆ ರೈತರ ಬಗ್ಗೆ ಹೇಳುತ್ತೀರಿ, ನಾನು ರೈತರ ಮಗ, ರೈತರಿಗೋಸ್ಕರ ಈ ಸರ್ಕಾರ ಏನು ಮಾಡುವುದಕ್ಕೂ ಸಿದ್ಧವಿದೆ ಎಂದು ಹೇಳುತ್ತೀರಿ ನಾನು ನಿಮ್ಮ ಜೊತೆ ಮುಖ್ಯಮಂತ್ರಿಯಾಗಿ ಕೆಲಸ ಮಾಡುವಾಗ ರೈತರ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಸಿದಂತೆಯೇ ಬೆಳಗಿನಿಂದ ಸಂಜೆಯವರೆಗೆ ಒಂದು ಕಾರ್ಯಕ್ರಮವನ್ನು ಇಟ್ಟಿದ್ದೆವು, ಆ ಸಭೆಗೆ ಧರ್ಮಸಿಂಗ್, ಹೆಚ್.ಕೆ. ಪಾಟೀಲ್ ಬಂದರು, ಆ ಸಭೆಗೆ ಉಪ ಮುಖ್ಯಮಂತ್ರಿಗಳು ತಿರುಗಿಯೂ ನೋಡಲಿಲ್ಲ. ಬೆಳಗಿನಿಂದ ಸಂಜೆಯವರೆಗೆ ಜಾಗವನ್ನು ಕಾಯ್ದಿರಿಸಿದರು ಬರಲಿಲ್ಲ. ಹಾಗೆಂದು ನೀವು ರೈತರ ಪರವಾಗಿಲ್ಲವೆಂದು ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಅದರ ಆಧಾರದ ಮೇಲೆ ಕೆಲವು ಪ್ರಾಮಾಣಿಕ ಅಧಿಕಾರಿಗಳು ಕೆಲವು ವರದಿಗಳನ್ನು ರಾಜ್ಯಪಾಲರ ಆಡಳಿತವಿದ್ದಾಗ ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ರೈತರಿಗೆ ಯಾವ ರೀತಿಯಾಗಿ ಮಾನಸಿಕವಾಗಿ

ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡುವುದಕ್ಕೆ ಕಾರ್ಯಕ್ರಮ ಕೊಡಬೇಕೆಂದು ವರದಿಯನ್ನು ಕೊಟ್ಟಿದ್ದಾರೆ, ಸಾಧ್ಯವಾದರೆ ಆ ಪ್ರಾಮಾಣಿಕ ಅಧಿಕಾರಿಗಳೊಡನೆ ಚರ್ಚೆ ಮಾಡಿ ಈ ಆತ್ಮಹತ್ಯೆ ಪ್ರಕರಣಗಳನ್ನು ನಿಲ್ಲಿಸುವುದಕ್ಕೆ ಆ ಕಾರ್ಯಕ್ರಮಗಳ ಮುಖಾಂತರ ಸಾಧ್ಯವಾದರೆ ಮಾಡಲೆಂದು ನಾನು ನಿಮಗೆ ಶುಭ ಹಾರೈಸುತ್ತೇನೆ. ಇವತ್ತು ನಾನು ನಿಮ್ಮ ಗಮನಕ್ಕೆ ತಂದಾಗ ಗೊಬ್ಬರದ ಕೊರತೆ ಇಲ್ಲವೆಂದು ಹೇಳುತ್ತೀರಿ, ಆದರೆ ಪ್ರಧಾನ ಮಂತ್ರಿಗಳಿಗೆ 11ನೇ ತಾರೀಖಿನಂದು ಏನೆಂದು ಪತ್ರವನ್ನು ಬರೆಯುತ್ತೀರಿ? ಸದನದಲ್ಲಿ, ಗೊಬ್ಬರಕ್ಕೆ ಯಾವ ಕೊರತೆ ಇಲ್ಲವೆಂದು ಹೇಳುವ ನೀವು 11ನೇ ತಾರೀಖಿನಂದು ಪತ್ರ ಬರೆಯುತ್ತೀರಿ. I also wrote to you on June 4, 2008 drawing your attention to the shortage of fertilizers in Karnataka and requested you to instruct the concerned to make available the required quantity of fertilizers in the first fortnight of June 2008 ಅಲ್ಲಿ ಇನ್ನೊಂದು ಮಾತನ್ನು ಹೇಳಿದ್ದೀರಿ, indeed the State Government officers concerned seem to have followed up on these letters to ensure that adequate stocks are moved to the State of Karnataka in time, consequently leading to the present crisis situation. It is only after my review that a sense of urgency has been instilled and the officers and the Union Department of Fertilizer officials led by Fertilizer secretary have visited Karnataka ನಾನು 6ನೇ ತಾರೀಖು ಸದನದಲ್ಲಿ ಪ್ರಸ್ತಾಪ ಮಾಡಿದರೆ ಅದರ ತೊಂದರೆಯೇ ಇಲ್ಲವೆಂದು ಹೇಳಿಬಿಟ್ಟಿರಿ, 11ನೇ ತಾರೀಖು ಪ್ರಧಾನ ಮಂತ್ರಿಗಳಿಗೆ ಪತ್ರದಲ್ಲಿ ಏನು ಬರೆಯುತ್ತೀರಿ? ಭೇಟಿ ಮಾಡಿದಿರಿ, ತರಾತುರಿಯಲ್ಲಿ ಯಾರನ್ನು ಭೇಟಿ ಮಾಡಿದಿರಿ? ಆವತ್ತು ಹುಬ್ಬಳ್ಳಿಯಿಂದ ವಿಶೇಷ ವಿಮಾನದಲ್ಲಿ 10–12 ಜನ ಮಂತ್ರಿಗಳು ಹೋದಿರಿ, ಪ್ರಧಾನ ಮಂತ್ರಿ ಮತ್ತು ರಸಾಯನಿಕ ಗೊಬ್ಬರ ಮಂತ್ರಿಗಳನ್ನು ಭೇಟಿ ಮಾಡಿದಿರಿ. ಒಂದು ಐದೈದು ನಿಮಿಷ ಭೇಟಿ ಮಾಡಿ ನಿಮ್ಮ ಮನವಿಯನ್ನು ಕೊಟ್ಟು ಬಂದುಬಿಟ್ಟಿರಿ. ಇಫ್ಕೋ ಮತ್ತಿ ಕ್ರಿಫ್ಕೋ ಈ ಎರಡು ಸಂಸ್ಥೆಗಳು ಯಾರ ಅಧೀನದಲ್ಲಿ ಕೆಲಸ ಮಾಡುವ ಸಂಸ್ಥೆಗಳು? ಈ ಎರಡು ಸಂಸ್ಥೇಗಳು ಕೃಷಿ ಇಲಾಖೆಯ ಅಧೀನದಲ್ಲಿ ಏನು ಕೆಲಸ ಮಾಡುತ್ತವೆ, ಈ ಎರಡು ಸಂಸ್ಥೆಗಳಿಂದ ಗೊಬ್ಬರವನ್ನು ಪಡೆಯುವುದಕ್ಕೆ ಕೇಂದ್ರ ಕೃಷಿ ಇಲಾಖೆಯ ಸಚಿವರಾದ ಶ್ರೀ ಶರದ್ ಪವಾರ್ ಅವರನ್ನು ಭೇಟಿ ಮಾಡಿದಿರೇನೋ ನನಗೆ ಗೊತ್ತಿಲ್ಲ. ಇದೊಂದು ಕಡೆ ಇರಲಿ. ಆಮೇಲೆ ನೀವು ದೆಹಲಿಯಿಂದ ಬಂದ ಮೇಲೆ ನೀವು ಪದೆ ಪದೆ, ನಾವು

ಯಾವುದೇ ರೀತಿಯ ಸಂಘರ್ಷಕ್ಕೆ ಹೋಗುವುದಿಲ್ಲ ನಮಗೆ ಯಾರ ಬಗ್ಗೆಯೂ ಅಸೂಯೆ ಇಲ್ಲ. ನಮ್ಮ ಅಜೆಂಡವೇ ಅಭಿವೃದ್ಧಿ ಎಂದು ಹೇಳುತ್ತೀರಿ. ನಾನು ಮೊನ್ನೆ ಯಾವುದೋ ಟಿವಿಯಲ್ಲಿ ಗಮನಿಸಿದೆ. ಒಬ್ಬ ಸಚಿವರು ಹೇಳಿಕೆಯನ್ನು ಕೊಡುತ್ತಾರೆ, ನೋಡಿ ಮೊನ್ನೆ ದೆಹಲಿಗೆ 10–12 ಜನ ಹೋದೆವು, ಕೇಂದ್ರ ಸರ್ಕಾರಕ್ಕೆ ಹೋದೆವು ನೋಡಿ ಗೊಬ್ಬರ ಹಾಗೆ ಇಲ್ಲಿಗೆ ಬಂತು ಎಂದು ಹೇಳಿದರು, ನಾನು ಗಮನಿಸಿದೆ. ಯಾವ ತ್ಯಾಗದ ಬಗ್ಗೆ ಕೇಸರಿ ಬಗ್ಗೆ ಬೆಳಿಗ್ಗೆ ಚರ್ಚೆ ನಡೆಯುತ್ತಿತ್ತು. ಯಾವ ಕೇಸರಿಯ ಸಂಕೇತ ತ್ಯಾಗ, ಬಲಿದಾನ ಇದರ ಸಂಕೇತವೆಂದು ಮಾತ್ರ ಹೇಳುತ್ತಿದ್ದೀರಿ, ಇನ್ನೊಂದನ್ನು ಅದಕ್ಕೆ ಸೇರಿಸಿಕೊಳ್ಳಲಿಲ್ಲ. ಏನು ರಾಜಕೀಯ ಶಕ್ತಿಗಳ ಪಿತೂರಿಯ ಬಗ್ಗೆ ಹೇಳುತ್ತಿದ್ದೀರಲ್ಲ. ಆ ಬಣ್ಣವನ್ನು ನಿಮ್ಮ ಪಕ್ಷಕ್ಕೆ ಗುತ್ತಿಗೆ ತೆಗೆದುಕೊಂಡ ಮೇಲೆ ಆ ಪಿತೂರಿಯನ್ನು ನಿಮ್ಮ ಕೇಸರಿಯಲ್ಲಿ ಅಳವಡಿಸಿದ್ದೀರಿ ಎಂಬುದನ್ನು ನಾವು ಹಲವಾರು ವಿಷಯಗಳನ್ನು ಗಮನಿಸಿದಾಗ, ಆ ಪಿತೂರಿ ಮಾಡುವ ಕೆಲಸ ಮಾಡುವುದನ್ನು ಕೂಡ ಆ ಕೇಸರಿಯಲ್ಲಿ ಅಳವಡಿಸಿಕೊಂಡಿದ್ದಿರೆಂಬುದನ್ನು ನಾನು ಇವತ್ತು ಬಹಳ ನೋವಿನಿಂದ ಹೇಳಬೇಕಾಗಿದೆ. ಏಕೆಂದರೆ ಪದೆ ಪದೆ ಈ ಪಿತೂರಿ ವಿಷಯವಾಗಿ ಕಳೆದ 10 ದಿವಸಗಳಿಂದ ಪ್ರಸ್ತಾಪ ಮಾಡುತ್ತಿದ್ದೀರಿ. ಇವತ್ತು ಏನು ಹೇಳುತ್ತಿದ್ದೀರಿ, ಆವತ್ತು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದಿರಿ, ಪ್ರಧಾನ ಮಂತ್ರಿಗಳು ನನಗೆ, ಸಕಾರಾತ್ಮಕವಾಗಿ ಸ್ಪಂದಿಸಿದರೆಂದು ಹೇಳುತ್ತೀರಿ ಮತ್ತೆ ಎರಡು ನಿಮಿಷಕ್ಕೆ ಅದೇ ಪಕ್ಕದ ಕಾಲಂನಲ್ಲಿ ಅದೇ ಪತ್ರಿಕೆಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ನಾವು ಯಾವ ಸಂಘರ್ಷಕ್ಕು ತಯಾರಿದ್ದೇವೆ ಎಂದು ನೀವೆ ಹೇಳಿದಿರಿ, ಕಾಯತಕ್ಕಂಥ ವ್ಯವದಾನವಿಲ್ಲ. ತಾಳ್ಮೆ ಇಲ್ಲ, ಅಲ್ಲೆ ಹೇಳಿತ್ತೀರಿ, ರೈತರಿಗೆ ನೀವೊಂದು ಮನವಿಯನ್ನು ಮಾಡಿದ್ದಿರಿ, ನಾಡಿನ ರೈತ ಬಂಧುಗಳೆ, ಪ್ರತಿ ರೈತನ ಜೀವವು ಅಮೂಲ್ಯ ರೈತನ ಬದುಕು ನೆಮ್ಮದಿಯಿಂದ ಇರಬೇಕೆಂಬುದೆ ನಮ್ಮ ಸರ್ಕಾರದ ಹೆಬ್ಬಯಕೆ. ಹಾವೇರಿಯ ಘಟನೆ ನಡೆದ ಕೂಡಲೆ ನಾನು ಸ್ಥಳಕ್ಕೆ ಭೇಟಿ ನೀಡಿ, ಮೃತ ಕುಟುಂಬಕ್ಕೆ ಪರಿಹಾರ ಒದಿಗಿಸಿ, ಅವರ ಪತ್ನಿಗೆ ಸರ್ಕಾರಿ ನೌಕರಿಯನ್ನು ನೀಡಿ, ಅವರ ಮಕ್ಕಳ ಶಿಕ್ಷಣ ವೆಚ್ಚವನ್ನು ಸರ್ಕಾರವೇ ಭರಿಸುವ ನಿರ್ಧಾರವನ್ನು ಕೈಗೊಂಡು ಈ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆಗೂ ಕೂಡ ಆದೇಶಿಸಿದ್ದೇನೆ. ಇತ್ತೀಚೆಗೆ ರಾಜ್ಯದ ಕೆಲವೆಡೆ ರೈತರು ಆತ್ಮಹತ್ಯೆ ಮಾಡಿಕೊಂಡ ಘಟನೆಗಳು ವರದಿಯಾಗಿವೆ. ಜಿಲ್ಲಾಧಿಕಾರಿಗಳ ವರದಿಯಂತೆ ರೈತರ ಈ ಆತ್ಮಹತ್ಯೆಗೂ ರಸಗೊಬ್ಬರದ ಕೊರತೆಗೂ ಸಂಬಂಧವಿರುವುದಿಲ್ಲ. ಬೇರೆ ಬೇರೆ ಕಾರಣಗಳಿಂದ ರೈತರು ಆತ್ಮಹತ್ಯೆಗೆ ಶರಣಾದರು. ಅದನ್ನು ಕೆಲವು ಪಟ್ಟಭದ್ರಹಿತಾಸಕ್ತಿಗಳು ರಸಗೊಬ್ಬರದ ಕೊರತೆಯ ಜೊತೆಗೆ

ತಳುಕು ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ರೈತರು ಆ ವಿಷಯಕ್ಕೆ ಆತ್ಮಹತ್ಯೆ ಮಾಡಿಕೊಳ್ಳದೆ ಇದ್ದ ಮೇಲೆ ನೀವು ಈ ರೀತಿಯ ಜಾಹಿರಾತನ್ನು ಕೊಡುವ ಅವಶ್ಯಕತೆ ಏನಿತ್ತು? ರೈತರು ಬೇರೆ ಬೇರೆ ರೀತಿಯಲ್ಲಿ ಅವರ ಕುಟುಂಬದ ಸಮಸ್ಯೆಗೆ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಇದರ ಅವಶ್ಯಕತೆ ಸರ್ಕಾರಕ್ಕೆ ಏನಿತ್ತು? ಇದು ನಾನು ನಿಮ್ಮನ್ನು ಕೇಳುತ್ತಿರುವ ಪ್ರಶ್ನೆ. ಏಕೆಂದರೆ, ಆಗಲೇ ನೀವು ವಿರೋಧಪಕ್ಷದಲ್ಲಿ ಕುಳಿತಾಗ ಹೇಳಿದ್ದಿರಿ, ರೈತರ ಬಗ್ಗೆ ಯಾವ ರೀತಿಯಾಗಿ ನಡೆದುಕೊಳ್ಳಬೇಕೆಂದು ಮುಖ್ಯಮಂತ್ರಿಗಳ ಬಹಳ ಸರ್ಕಾರಕ್ಕೆ ಉಪದೇಶವನ್ನು ಮಾಡಿದ್ದೀರಿ, ಇವತ್ತು ಹಾವೇರಿಯಲ್ಲಿ ನಡೆದಂತಹ ಘಟನೆ ಇದೆಯಲ್ಲ. ನೀವು ತಕ್ಷಣ, ಇದು ರಾಜಕೀಯ ಶಕ್ತಿಗಳ ಪಿತೂರಿ ಎಂದು ಹೇಳಿಬಿಟ್ಟಿರಿ. ನಾನು ಆ ಕುಟುಂಬಕ್ಕೆ ಭೇಟಿ ಕೊಟ್ಟಾಗ, ಗೋಲಿಬಾರ್ ನಿಂದ ಮೃತನಾದವನ ಅಣ್ಣ ಹೇಳುತ್ತಾನೆ. ನಾನು ವಿಷಯ ಗೊತ್ತಾದಂತೆ ಪ್ರವಾಸಿ ಮಂದಿರಕ್ಕೆ ಹೋದೆ, ಅಲ್ಲಿ ನಮ್ಮ ಶಾಸಕರಿದ್ದರು, ಅವರನ್ನು ಬನ್ನಿ ಸ್ಥಳಕ್ಕೆ ಹೋಗಬೇಕೆಂದು ಕಾಡಿಬೇಡಿದೆ, ಬರತಕ್ಕಂಥ ಸೌಜನ್ಯ ತೋರಿಸಲಿಲ್ಲವೆಂದು ಅವರು ಕುಟುಂಬ ವರ್ಗದವರು ಹೇಳುತ್ತಾರೆ. ಈಗ ನೀವು ಕೆಲವರನ್ನು ಅರಸ್ಟ್ ಮಾಡಿದ್ದೀರಿ, ಶಂಕರಯ್ಯ ಎಂಬುವ ಒಬ್ಬ ಜಂಗಮನನ್ನು ಅರೆಸ್ಟ್ ಮಾಡಿದ್ದಾರೆ. ಆ ಪುಣ್ಯಾತ್ಮ ಯಾರು ಮರಣ ಹೊಂದಿದ್ದ ಅವನ ಅಂತ್ಯಕ್ರಿಯೆ ಮಾಡುವ ಕ್ರಮವನ್ನು ವಿಧಿವಿಧಾನಗಳನ್ನು ಮಾಡುವುದಕ್ಕೆ ಹೋದಂತಹ ಒಬ್ಬ ಜಂಗಮರು. ಏನೋ ಆ ಭಾಗದಲ್ಲಿ ಹೆಬ್ಬೆಟ್ಟಿನಲ್ಲಿ ಒತ್ತಿ ಆ ಸಮಾಧಿ ಮುಂದೆ ಶವಕ್ಕೆ ಏನೋ ಮಾಡುತ್ತಾರೆ, ಅದಕ್ಕೆ ಹೋಗಿ ಅವರಿಗೆ ಚಂಬು ಏನೋ ಆ ಕುಟುಂಬದವರು ಕೊಟ್ಟಿದ್ದಾರೆ. ಆ ಚಂಬು ಸಮೇತ ಕರೆದುಕೊಂಡು ಹೋಗಿ ಅವರಿಬ್ಬರನ್ನು ಆ ಧಾರವಾಡದ ಜೈಲಿನಲ್ಲಿಟ್ಟಿದ್ದಾರೆ. ಯಾರನ್ನು ನಿಮ್ಮ ಅಧಿಕಾರಿಗಳು ಅರೆಸ್ಟ್ ಮಾಡಿದ್ದಾರೆಂಬುದನ್ನು ದಯವಿಟ್ಟು ಸ್ವಲ್ಪ ಅರ್ಥ ಮಾಡಿಕೊಳ್ಳಿ. ಅಲ್ಲಿರುವ ಅಧಿಕಾರಿಗಳನ್ನು ತಕ್ಷಣ ನೀವು ವರ್ಗ ಮಾಡದೇ ಇದ್ದರೆ. ಇಲ್ಲಿ ಗೊಬ್ಬರದ ಕೊರತೆ ನಿಮ್ಮ ಗಮನದಲ್ಲಿ ಇದ್ದರು ರಾಜ್ಯದಲ್ಲಿದ್ದಂತಹ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದಕ್ಕೆ ಕ್ರಮ ಕೈಗೊಂಡಿರಿ, ನಿಮ್ಮ ಅಧಿಕಾರಿಗಳು ನಿಮ್ಮ ದಿಕ್ಕನ್ನು ತಪ್ಪಿಸಿದರೋ ಏನೋ ಗೊತ್ತಿಲ್ಲ ತರಾತುರಿಯಲ್ಲಿ ಮಾಸ ಪ್ರಾನ್ಸ್‌ಫರ್ ಮೂಲಕ 60 ಅಧಿಕಾರಿಗಳನ್ನೇನು ವರ್ಗಾವಣೆ ಮಾಡುವುದಕ್ಕೆ ಸಮಯ ಇಟ್ಟಿರಲ್ಲ. ಅದೇ ಸಮಯವನ್ನು ಇಲ್ಲಿ ನಡೆದಂತಹ ಘಟನೆಗೆ ಸಂಬಂಧಿಸಿದ ಅಧಿಕಾರಿಗಳನ್ನು ವರ್ಗಾವಣೆ ಮಾಡದೆ ಇಲ್ಲಿಯವರೆಗೆ ರಕ್ಷಣೆ ಕೊಟ್ಟಿಕೊಂಡು ಕುಳಿತ್ತಿದ್ದೀರಿ? ಏತಕ್ಕೆ ನೀವು ಇನ್ನೂ ಹೊರಗಡೆಗೆ ಕಳುಹಿಸಲಿಲ್ಲ. ಈ ಅಧಿಕಾರಿಗಳನ್ನು ನೀವು ಅಲ್ಲಿ ಇಟ್ಟುಕೊಂಡು ನ್ಯಾಯಾಂಗ ತನಿಖೆಯ ಮುಖಾಂತರ ಆಗಿರುವ. ಘಟನೆಯ

Vol. 2. F. 16

ಬಗ್ಗೆ ನ್ಯಾಯವನ್ನು ಒದಗಿಸಲು ನಿಮ್ಮ ಸರ್ಕಾರಕ್ಕೆ ಸಾಧ್ಯವಿದೆಯೇ? ಇವತ್ತು ಪತ್ರಿಕೆಯಲ್ಲೇ ಬರೆದಿದ್ದಾರೆ, ನಿಮಗೆ ಯಾರು ರಕ್ಷಣೆ ಕೊಟ್ಟು. ಈ ಚುನಾವಣೆಯಲ್ಲಿ ಸಂಪೂರ್ಣ ಬೆಂಬಲವನ್ನು ಕೊಟ್ಟಿದ್ದಾರೆ, ಆ ಪತ್ರಿಕೆಗಳಲ್ಲಿಯೇ ಬರೆದಿದ್ದಾರೆ. ತಹಸೀಲ್ದಾರ್ ಕೈನಲ್ಲಿ ಒತ್ತಡ ಹಾಕಿ ಆದೇಶ ಮಾಡಿದೆ ಎಂದು ಸಹಿ ಹಾಕಿಸಿಕೊಳ್ಳಬೇಕೆಂದು ಹೇಳಿ, ಇಲ್ಲಿಯವರೆಗೆ ಹಾಕಿಕೊಟ್ಟಿದ್ದಾರೊ ಇಲ್ಲವೋ ಎಂಬುದನ್ನು ಗೃಹ ಸಚಿವರು ಈ ಸದನದ ಮುಂದೆ ಇಡಬೇಕಾಗುತ್ತದೆ. ಯಾರನ್ನೋ ಒಬ್ಬರಿಗೆ ಅರೆಸ್ಟ್ ಮಾಡಿದ್ದೇವೆಂದು ಹೇಳಿದ್ದಾರೆ. ಯಾರೋ ಗನ್ ತೆಗೆದುಕೊಂಡು ಹೊಡೆದಿದ್ದಾನೆ ಎಂದು ಹೇಳಿದ್ದೀರಿ. ಯಾರು ಮರಣ ಹೊಂದಿರತಕ್ಕಂತಹ ವ್ಯಕ್ತಿ? ನಿಮ್ಮ ಪಕ್ಷದ ಒಬ್ಬ ಸಕ್ರಿಯ ಕಾರ್ಯಕರ್ತ, ಬೇರೆ ಪಕ್ಷದವರು ಈ ರಾಜ್ಯದಲ್ಲಿ ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ತರತಕ್ಕಂಥದ್ದಕ್ಕೆ ಗೊಬ್ಬರದ ಹೆಸರಿನಲ್ಲಿ ರಾಜಕೀಯ ಮಾಡುವುದಕ್ಕೆ ಹೋಗಿದ್ದರೆ ಅಲ್ಲಿ ಯಾರು ಸ್ಥಳದಲ್ಲಿ ಸತ್ತಿರತಕ್ಕಂತಹ ವ್ಯಕ್ತಿ ಅಮಾಯಕ ನಿಮ್ಮ ಪಕ್ಷದ ವ್ಯಕ್ತಿ. ಬೇರೆ ಯಾವುದೇ ಪಕ್ಷದ ಸಕ್ರಿಯ ಕಾರ್ಯಕರ್ತ ಅಲ್ಲ. ವಿಐಎಸ್ಎಲ್ ಸೊಸೈಟಿಯ ಅಧ್ಯಕ್ಷ. ಗೊಬ್ಬರದ ಬಗ್ಗೆ ನೀವು ಹೇಳಿದ್ದೀರಿ. ನಮ್ಮದು ಪೋಸ್ಟ್‌ಮ್ಯಾನ್ ಕೆಲಸ. ಕೇಂದ್ರ ಸರ್ಕಾರದವರು ಕೊಡದೇ ಇದ್ದರೆ ವಿರೋಧ ಪಕ್ಷದವರು ನಮ್ಮ ಜೊತೆ ಬರದೇ ಕಾಂಗ್ರೆಸ್‌ನವರು ಜೈಲಿಗೆ ಹೋಗಿ ಧರಣಿ ಮಾಡುವುದಕ್ಕೆ ಬರುತ್ತಾರಾ ಎಂದು ಹೇಳಿದರು. ಜನ ನಮ್ಮ ಹೋರಾಟ ನೋಡಿ ರೈತರ ಬಗ್ಗೆ ಇರತಕ್ಕಂತಹ ನಮ್ಮ ಕಾಳಜಿ ನೋಡಿ ನಮ್ಮನ್ನು ಇಲ್ಲಿ ಕೂರಿಸಿದ್ದಾರೆ. ನಿಮ್ಮನ್ನು ಅಲ್ಲಿ ಕಳುಹಿಸಿದ್ದಾರೆಂದು ಹೇಳಿದಿರಿ, ಅದೇ ಜನಗಳು ಮುಂದಿನ ದಿನ ತೀರ್ಮಾನ ಮಾಡುತ್ತಾರೆ. ಚಕ್ರ ಉರುಳುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ಯಾರಿಗೂ ಅಧಿಕಾರ ಶಾಶ್ವತ ಅಲ್ಲ. ಇವತ್ತು ಹೇಳಿದ್ದಿರಿ, ರಸಗೊಬ್ಬರದ ಉತ್ಪಾದನೆ ಮತ್ತು ನಿಯಂತ್ರಣದ ಹೊಣೆ ಕೇಂದ್ರ ಸರ್ಕಾರದ್ದು. ರಾಜ್ಯ ಸರ್ಕಾರದ್ದು ಪೋಸ್ಟಮ್ಯಾನ್ ಕೆಲಸ. ಗೊಬ್ಬರದ ಕೊರತೆಯಿಂದ ರೈತರು ಸತ್ತಿಲ್ಲ. ವಿಶೇಷ ಸಂದರ್ಶನಗಳು ನಿನ್ನೆ ಇಲ್ಲವೆಂದು ಎಲ್ಲ ಪತ್ರಿಕೆಗಳಲ್ಲಿ ಬಂದಿದೆ. ಕೇವಲ 23 ದಿವಸಕ್ಕೆ ವಿಶೇಷ ಸಂದರ್ಶನ ಎಂದು ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಬಂದಿದೆ. ಇದಕ್ಕೆ ನಿಮಗೆ ಸಮಯ ಇದೆ. ಗ್ರಾಮ ವಾಸ್ತವ್ಯದ ಬಗ್ಗೆ ಪತ್ರಿಕೆಯವರು ಕೇಳಿದರೆ ಒಬ್ಬ ಮುಖ್ಯಮಂತ್ರಿ 7–8 ಗಂಟೆ ಹೋಗಿ ಸಮಯ ವ್ಯರ್ಥ ಮಾಡುವುದಕ್ಕಾಗುತ್ತಾ ಎನ್ನತಕ್ಕಂತಹ ಮಾತು ಹೇಳಿದ್ದೀರಿ. ಗ್ರಾಮ ವಾಸ್ತವ್ಯಕ್ಕೆ ಹೋಗುತ್ತಿದ್ದುದು ಸಮಯ ಇದೆ ಎಂದು ಅಲ್ಲ. ಹರಕಲು ಬಟ್ಟೆ ಹಾಕಿಕೊಂಡು ಹಳ್ಳಿಯಲ್ಲಿ ಜೀವನ ಮಾಡುತ್ತಾರೆ, ಅವರ ಹೆಸರು ಹೇಳಿ ನೀವು ಇಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದ್ದಿರಿ, ನಿಮ್ಮ ಅಧಿಕಾರಿಗಳು ವಿಡಿಯೋ

ಕಾನ್‌ಫರೆನ್ಸ್ ಮುಖಾಂತರ ಚರ್ಚೆ ಮಾಡಿದರೆ, ಆ ಹಳ್ಳಿಯಲ್ಲಿ ಮೈಮೇಲೆ ದೂಳು ತುಂಬಿಕೊಂಡು ಕೆಲಸ ಮಾಡುವುದು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಬಗೆಹರಿಯುವುದಿಲ್ಲ. ನಾನೂ ನೋಡಿದ್ದೇನೆ. ನಾನು ಹಳ್ಳಿಯ ಜನರ ಮುಂದೆ ಹೋಗಿಯೇ ಇನ್ನೂ ಆ ಕೆಲಸ ಪೂರ್ಣ ಆಗಿಲ್ಲ. ಕುರುಡರು, ಕುಂಟರ ಮತ್ತು ಮೂಗರ ಕಥೆ ನಾನು ನೋಡಿದ್ದೇನೆ. ಪೋಸ್ಟ್‌ಮ್ಯಾನ್ ಕೆಲಸ ಮುಖ್ಯಮಂತ್ರಿಯದಲ್ಲ ಸ್ವಾಮಿ, ಈ ರಾಜ್ಯದ ಸರ್ಕಾರ ನಡೆಸತಕ್ಕಂತಹವರಿಗೆ ಕೇಂದ್ರ ಸರ್ಕಾರ ಗೊಬ್ಬರ ಕೊಡತಕ್ಕಂಥದ್ದಕ್ಕೆ ಅವರ ಕೈಯಲ್ಲಿ ಶಕ್ತಿ ಇಲ್ಲವೆಂದು ಹೇಳಿದಾಗ ನಿಮಗೆ ಏನಾಗಿತ್ತು, ಎಷ್ಟು ಖರ್ಚಾಗುತ್ತಿತ್ತು ನಿಮಗೆ? ಏನು ಕೊರತೆ ಇದೆ, ಆ ಕೊರತೆ ತುಂಬುವುದಕ್ಕೆ ಮೊದಲು ನಿಮ್ಮ ಕರ್ತವ್ಯ ನಿರ್ವಹಿಸಬೇಕಾಗಿತ್ತು. ನಮ್ಮ ಕಾಲದಲ್ಲಿ ನೀವೇ ಉಪ ಮುಖ್ಯಮಂತ್ರಿಗಳಾಗಿದ್ದೀರಿ, ಬಫರ್ ಸ್ಟಾಕ್ ಎಂದು ಮಾಡಿದ್ದೆವು. ಕೃಷಿ ಸಚಿವರು ಇಲ್ಲಿಯೇ ಕೂತಿದ್ದಾರೆ. ನಾವು ಮೊದಲನೇ ಬಾರಿಗೆ experiment basis ನಲ್ಲಿ ಕಳೆದ ಎರಡು ವರ್ಷಗಳಿಂದ ಈ ಸಮಸ್ಯೆ ಏನು ಇದೆ ಇದಕ್ಕೆ ಸರ್ಕಾರ ಗಮನಹರಿಸಬೇಕೆಂಬ ದೃಷ್ಟಿಯಿಂದ 25 ಕೋಟಿ ರೂಪಾಯಿಗಳನ್ನು ಇವತ್ತು ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ ಗೊಬ್ಬರ ಖರೀದಿ ಮಾಡುವುದಕ್ಕೆ ಬಫರ್ ಸ್ಟಾಕ್ ಇಡುವುದಕ್ಕೆ ಸರ್ಕಾರದ ವತಿಯಿಂದ ತೀರ್ಮಾನ ಮಾಡಿದೆವು. 8 ಕೋಟಿ ರೂಪಾಯಿಗಳನ್ನು ರಾಜ್ಯಪಾಲರ ಆಡಳಿತದಲ್ಲಿ ಬಿಡುಗಡೆ ಮಾಡಿದ್ದಾರೆ. ಆದರೆ ಈ ಗೊಬ್ಬರದ ಕೊರತೆ ಬಂದಾಗ ಮಾರ್ಕೆಟಿಂಗ್ ಫೆಡರೇಷನ್‌ನವರು 8 ಕೋಟಿ ರೂಪಾಯಿಗಳನ್ನು ಹಾಕಿ, ಸರ್ಕಾರ ಏನು ತೀರ್ಮಾನ ಮಾಡಿತ್ತು, ಆ 8 ಕೋಟಿ ರೂಪಾಯಿಗಳನ್ನು ಹಾಕಿ ಇವತ್ತು ಗೊಬ್ಬರ ಸ್ಟಾಕ್ ಮಾಡಬೇಕೆಂದು ತೀರ್ಮಾನ ಮಾಡಿದೆವು. ಇವತ್ತು ಏನು ಕಷ್ಟವಾಗುತ್ತಿತ್ತು ಯಡಿಯೂರಪ್ಪನವರೇ ಪೋಸ್ಟ್‌ಮ್ಯಾನ್ ಕೆಲಸ, ನಮಗೆ ಗೊಬ್ಬರ ಕೊಡದೆ ಕೇಂದ್ರ ಸರ್ಕಾರದವರು ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ, ಎಂದು ಇಷ್ಟು ಹೇಳಿದರೆ ಸರ್ಕಾರದ ಜವಾಬ್ದಾರಿ ಮುಗಿಯಲಿಲ್ಲ. ನಿಮ್ಮ ಜವಾಬ್ದಾರಿ ನಮ್ಮ ರಾಜ್ಯ ಸರ್ಕಾರದ ಹಣದಿಂದ ಯಾರು ರೈತರು ಸಂಕಷ್ಟದಲ್ಲಿದ್ದಾರೆ, 400 ಕೋಟಿ ರೂಪಾಯಿಗಳಾಗಲಿ, 500 ಕೋಟಿ ರೂಪಾಯಿಗಳಾಗಲಿ, ಆ ಹಣ ಬಿಡುಗಡೆ ಮಾಡಿ ಗೊಬ್ಬರ ಖರೀದಿ ಮಾಡುವ ಕೆಲಸ ಮಾಡಬೇಕಾಗಿತ್ತು. ಸಬ್ಸಿಡಿ ಪಡೆಯುವುದಕ್ಕೆ ಕೇಂದ್ರ ಸರ್ಕಾರದಿಂದ ಮತ್ತೆ ಹಣವನ್ನು ರಿಎಂಬರ್ಸ್‌ಮೆಂಟ್ ಮಾಡುವುದು ಆ ಮೇಲೆ ಮಾಡಿಕೊಳ್ಳಬೇಕಾಗಿತ್ತು. ನಡಿಯಿರಿ ಹೋಗೋಣ ದೆಹಲಿಗೆ, ನಮ್ಮ ಜೊತೆ ಧರಣಿಗೆ ಕುಳಿತುಕೊಳ್ಳಿ ಎಂದು ವಿರೋಧ ಪಕ್ಷದವರಿಗೆ ಕರೆಯುತ್ತಿದ್ದೀರಲ್ಲ. ಕೇಂದ್ರ ಸರ್ಕಾರದವರು

ಗೊಬ್ಬರ ಕೊಡಲಿಲ್ಲವೆಂದು ಪ್ರತಿಭಟನೆ ಮಾಡುವುದು ವಿರೋಧ ಪಕ್ಷದವರ ಕೆಲಸ ಅಲ್ಲ ಅದು ಎಂದು ಒಂದು ಕಡೆ ಹೇಳುತ್ತೀರಿ. ಅದೂ ನಮ್ಮ ಹಕ್ಕು ಎಂದು ಹೇಳುತ್ತೀರಿ. ಎರಡೂ ಕೆಲಸ ನೀವೇ ಮಾಡುತ್ತೀರಾ? ಹೇಳಿಬಿಡಿ ನಾವು ಆರಾಮಾಗಿರುತ್ತೇವೆ. ಆ ಕೆಲಸವೂ ನೀವೆ ಜವಾಬ್ದಾರಿ ತೆಗೆದುಕೊಂಡು ಮಾಡುವುದಿದ್ದರೆ, ಈಗಲೇ ತೆಗೆದುಕೊಂಡು ಬಿಡಿ. ದ್ವಿಪಾತ್ರಾಭಿನಯ ನಡೆಸಬೇಕೆಂದು ನಿಮ್ಮ ಇಚ್ಛೆ ಇದ್ದರೆ, ಅದನೂ ಮಾಡಿ. ಪ್ರತಿಭಟನೆ ನಡೆಸುವುದು ಬಿ.ಜೆ.ಪಿ ಹಕ್ಕು ಎಂದು ಹೇಳಿದ್ದೀರಿ. ನೀವು ಈಗ ಮುಖ್ಯಮಂತ್ರಿಗಳು. ವಿರೋಧ ಪಕ್ಷದ ನಾಯಕರಲ್ಲ. ಕೇಂದ್ರ ಸರ್ಕಾರ ಪೆಟ್ರೋಲಿಯಂ ಪ್ರಾಡಕ್ಟ್ ಬಗ್ಗೆ ರೈಸ್ ಮಾಡಿತು ಎಂದರೆ ಅದಕ್ಕೂ ರಾಜಕೀಯ. ನೀವಿದ್ದರೆ ಏನು ಮಾಡುತ್ತಿದ್ದಿರಿ ಸ್ವಾಮಿ? ನಿಮ್ಮ ಎನ್.ಡಿ.ಎ. ಸರ್ಕಾರ ಇದ್ದಾಗ ನೀವೇನು ರೈಸ್ ಮಾಡಲಿಲ್ಲವಾ? ಇವತ್ತು International market ನಲ್ಲಿ ನಡೆಯುತ್ತಿರುವ price rise ನಿಂದ ಯಾವ ಸರ್ಕಾರಗಳಿದ್ದರೂ ಅದು ಮಾಡಲೇಬೇಕಾದಂತಹ ಪರಿಸ್ಥಿತಿ. ಅದಕ್ಕೆ ಕೇವಲ ಓಟು ಪಡೆಯುವುದಕ್ಕೋಸ್ಕರ ಪ್ರತಿಭಟನೆ ನಡೆಸಿಕೊಂಡು ಪ್ರಧಾನ ಮಂತ್ರಿಗಳ ಪ್ರತಿಕೃತಿ ದಹನ ಮಾಡುವುದು, ನಡೆಸಿ, ನಡೆಯಲಿ ನೋಡೋಣ ಎಷ್ಟು ದಿವಸ ನಡೆಯುತ್ತದೆ ಎಂದು. ಈಗಾಗಲೇ ನಾಳೆಯಿಂದ ಗೊಬ್ಬರದ ಬಗ್ಗೆ ಪ್ರತಿಭಟನೆ ಇದೆ, ಇವತ್ತು ತುಮಕೂರಿನಲ್ಲಿ ಪ್ರಾರಂಭ ಮಾಡಿದ್ದಾರೆಂದು ಹೇಳಿದರೆ. ನೀವಲ್ಲ ಪ್ರತಿಭಟನೆ ಮಾಡಬೇಕಾದುದು. ಈ ರಾಜ್ಯದ ಜನ ನಿಮಗೆ ಓಟು ಕೊಟ್ಟು ಅಲ್ಲಿ ಕೂರಿಸಿದ್ದಾರೆ. ಕೇಂದ್ರ ಸರ್ಕಾರದ ವೈಫಲ್ಯತೆ ಇದ್ದರೆ ಅದರ ಜವಾಬ್ದಾರಿ ನಿರ್ವಹಿಸಬೇಕಾದುದು ರಾಜ್ಯ ಸರ್ಕಾರ. ಗುಲ್ಬರ್ಗಾ ಜಿಲ್ಲೆಗೂ ಹೋದಿರಿ. ನಿಮ್ಮ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಉದ್ಘಾಟನೆ ಮಾಡಿದ ಜಾಹೀರಾತು ನೋಡಿದೆ. ಇದೆಲ್ಲಾ ಹಿಂದಿನ ಸರ್ಕಾರದಲ್ಲಿ ಕ್ಯಾಬಿನೆಟ್ ಡಿಸಿಷನ್ ಆಗಿರುವಂತಹವು. ಇದು ನೀವು ಬಂದು ಹೊಸದಾಗೇನೂ ಪ್ರಾರಂಭ ಮಾಡಿಲ್ಲ. ಆರು ಏರ್ ಪೋರ್ಟ್‌ಗಳನ್ನು ಮಾಡತಕ್ಕಂಥದಕ್ಕೆ ಹಿಂದಿನ ಸರ್ಕಾರದಲ್ಲಿಯೇ ತೀರ್ಮಾನ ಮಾಡಿದ್ದೇವೆ. ಹೋಗಿ ಅಲ್ಲೆಲ್ಲೋ ಅದನ್ನು ಮಾಡಲಿಕ್ಕೆ ನಿಮಗೆ ಸಮಯ ಇದೆ. "ಸಹ್ಯಾದ್ರಿಯ ಮಡಿಲಿನಿಂದ ಮುಗಿಲೆತ್ತರಕ್ಕೆ ಹಾರಿ ಮಲೆನಾಡ ಸೊಬಗು ಸವಿಯೋಣ." ಯಾವ ಸೊಬಗು ಸವಿಯುತ್ತೀರಿ ಮಾನ್ಯ ಮುಖ್ಯಮಂತ್ರಿಗಳೇ? ರೈತನ ಆತ್ಮಹತ್ಯೆ ಪ್ರಕರಣ ಏನು ನಡೆಯುತ್ತಿದೆ, ಗೋಲಿಬಾರ್ ಪ್ರಕರಣದಿಂದ ಒಬ್ಬ ರೈತ ನಿಮ್ಮ ಪಕ್ಷದವನೇ ಏನು ಅಸು ನೀಗಿದ್ದಾನೆ, ಅವನ ಸಮಾಧಿ ಮೇಲೆ ಸೊಬಗು ಸವಿಯುತ್ತಿರಾ ಸ್ವಾಮಿ? ಸವಿಯಿರಿ ಬಹಳ ಸಂತೋಷ. ಯಾವ ಪತ್ರಿಕೆ ತೆಗೆದರೂ ಇವತ್ತು ಅದೇ ವಿಷಯ ಇದೆ. ರೈತನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದರ

ಹಿನ್ನೆಲೆಯಲ್ಲಿ ಮಾನ್ಯ ಪ್ರತಿಪಕ್ಷದ ನಾಯಕರು ನನ್ನ ಸ್ವಕ್ಷೇತ್ರಕ್ಕೆ ತೆರಳಿದ್ದಾರೆ, ಅವರು ಹೋಗುವುದಕ್ಕೆ ನನ್ನ ಅಭ್ಯಂತರವಿಲ್ಲವೆಂದು ಅಲ್ಲಿ ಹೇಳುತ್ತೀರಿ. ಮತ್ತೆ ಮಾನ್ಯ ವಿರೊಧ ಪಕ್ಷದ ನಾಯಕರು ನನ್ನನ್ನೆ ದೂರವಾಣಿ ಮುಖಾಂತರ ಕೇಳಬಹುದಾಗಿತ್ತು ಎಂದು ಇನ್ನೊಂದು ಪ್ಯಾರಾದಲ್ಲಿ ಹೇಳುತ್ತೀರಿ. ಅಲ್ಲಿಗೆ ಹೋಗುವುದಕ್ಕೆ ಮುಂಚೆ ನನ್ನನ್ನೇ ಕೇಳಿದ್ದರೆ ಎಲ್ಲಾ ವಿವರಗಳನ್ನು ಕೊಡುತ್ತಿದ್ದೆ ಎಂದು ಹೇಳುತ್ತೀರಿ. ಪ್ರಧಾನ ಮಂತ್ರಿಯವರಿಗೆ ಪತ್ರ ಬರೆಯಬಹುದೇ ಹೊರತು ಇದ್ದಕಿಂತ ಹೆಚ್ಚಿಗೆ ಏನು ಮಾಡುವುದು ಎಂದು ಹೇಳುತ್ತೀರಿ. ಪ್ರಧಾನಿಗೆ ಪತ್ರ ಬರೆದ ತಕ್ಷಣ ನಮ್ಮ ರೈತರಿಗೆ ಗೊಬ್ಬರ ಸಿಕ್ಕಿ ಬಿಟ್ಟಿತು. ಇದಕ್ಕಿಂತ ನಾನು ಇನ್ನೇನು ಮಾಡುವುದಕ್ಕಾಗುತ್ತದೆ ಎಂದು ಇವತ್ತಿನ ಸಂದರ್ಶನದಲ್ಲಿ ಹೇಳುತ್ತೀರಿ. ಈ ಆತ್ಮಹತ್ಯೆಗೆ ಬೇರೆಯೇ ಕಾರಣಗಳಿವೆ. ಕೌಟುಂಬಿಕ ಸಮಸ್ಯೆಗಳು, ಭಿನ್ನಾಭಿಪ್ರಾಯಗಳು ಇವೆಲ್ಲಾ ಹೇಳಿದೀರಿ. ನಿಮ್ಮ ಅಧಿಕಾರಿಗಳು ನೀವು ಯಾವ ರೀತಿ ವರದಿ ಮಾಡಬೇಕೆಂದು ಹೇಳುತ್ತೀರೋ ಆ ರೀತಿ ವರದಿ ಮಾಡುತ್ತಾರೆ. ಯಾರೂ ಕಾಣದೆ ಇರುವ ಅಧಿಕಾರಿಗಳಿಲ್ಲ ಈ ರಾಜ್ಯದಲ್ಲಿ. ಆತ್ಮಹತ್ಯೆ ಪ್ರಕರಣ ಎಂದು ನೀವು ನಿರ್ದೇಶನ ಕೊಟ್ಟರೆ ಅವರು ಆತ್ಮಹತ್ಯೆ ಪ್ರಕರಣ ಎಂದು ವರದಿ ಕೊಡುತ್ತಾರೆ. ಅದು ಆತ್ಮಹತ್ಯೆ ಅಲ್ಲ ಎನ್ನತಕ್ಕಂತಹ ರಿತಿಯಲ್ಲಿ ವರದಿ ಕೊಡಿ ಎಂದರೆ ಅದೇ ರೀತಿ ವರದಿ ಕೊಡುತ್ತಾರೆ. ಇವತ್ತು ಹೋರಾಟ ಮಾಡಬೇಕೆಂದು ಹೇಳಿದ್ದೀರಿ. ಇವತ್ತು ನೀವು ಒಂದು ಹೇಳುತ್ತೀರಿ. ರೈತರ ಆತ್ಮಹತ್ಯೆಗೆ ಕೃಷಿ ಸಾಲ ರಸಗೊಬ್ಬರದ ಕೊರತೆ ಕಾರಣವಲ್ಲ, ಕೌಟುಂಬಿಕ ಕಲಹ ಎಂದು ಹೇಳಿ, ಪ್ರತಿ ಪಕ್ಷಗಳು ಕ್ಷುಲ್ಲಕ ರಾಜಕೀಯ ಮಾಡುತ್ತಿವೆ. ಬರಗಾಲ ಇದ್ದಾಗಲೂ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಒಳ್ಳೆಯ ಮಳೆ ಬೆಳೆ ಆದಾಗಲೂ ಆತ್ಮಹತ್ಯೆ ನಡೆಯುತ್ತಿದೆ. ಯಾವುದೇ ಸಮಸ್ಯೆಗೆ ಆತ್ಮಹತ್ಯೆ ಒಂದೇ ಪರಿಹಾರ ಅಲ್ಲ. ಜನರಲ್ಲಿ ಜಾಗೃತಿ ಮೂಡಿಸುವ ಆತ್ಮವಿಶ್ವಾಸ ಮೂಡಿಸುವ ಕೆಲಸವನ್ನು ಸರ್ಕಾರ ಮಾಡಲಿದೆ. ಇದ್ದಕಾಗಿನ ವಿಶಿಷ್ಟ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಯಾವುದು ಸ್ವಾಮಿ ವಿಶಿಷ್ಟ ಕಾರ್ಯಕ್ರಮ? ಮಾನ್ಯ ವಿರೊಧ ಪಕ್ಷದ ನಾಯಕರು ಬೆಳಿಗ್ಗೆ ಒಂದು ವಿಷಯ ಪ್ರಸ್ತಾಪ ಮಾಡಿದರು. ನೆನ್ನೆ ಟಿವಿಯಲ್ಲಿ ಎಲ್ಲಾ ನೋಡಿದ್ದೇವೆ. ಒಬ್ಬ ವಿಎಸ್‌ಐಎಲ್ ಸೊಸೈಟಿಯ ಅಧ್ಯಕ್ಷ ಮಾನ್ಯ ವಿರೋಧ ಪಕ್ಷದ ನಾಯಕರು ನೆನ್ನೆ ನಿಮ್ಮ ಗ್ರಾಮ ಅಂಜನಾಪುರಕ್ಕೆ ಬಂದಾಗ ಅಲ್ಲಿರತಕ್ಕಂತಹ ಸಮಸ್ಯೆ ಜನರ ಮುಂದೆ ಮತ್ತು ವಿರೋಧ ಪಕ್ಷದ ನಾಯಕರ ಮುಂದೆ ಇಟ್ಟಾಗ, ಆ ವಿಷಯ ಏಕೆ ಪ್ರಸ್ತಾಪ ಮಾಡಿದೆ ಎಂದು ನೆನ್ನೆ ರೋಡ್ ರೋಡ್‌ನಲ್ಲಿಯೇ ಹೊಡೆಸಿದ್ದೀರಿ, ಇದಾ ವಿಶಿಷ್ಟವಾದ ಕಾರ್ಯಕ್ರಮ ನಿಮ್ಮದು? ಇನ್ನೆಲ್ಲಾ ಹತ್ತಿಕ್ಕಲಿಕ್ಕೆ, ಈ ದೇಶ ಇತಿಹಾಸದಲ್ಲಿ

ಯಾವುದಾದರೂ ಒಂದು ಪಕ್ಷದ ಕಾರ್ಯಕರ್ತರ ಮುಖಾಂತರ ಸರ್ಕಾರ ನಡೆಸತಕ್ಕಂತಹವರು ಈ ರೀತಿಯಾದಂತಹ ಘಟನೆ ನಡೆಸಿದ್ದರೆ, ಅದು ಬಹುಶಃ ಕೇಸರಿಯ ತ್ಯಾಗ ವರ್ಣರಂಜಿತವಾದ ಕಲರ್‌ನಿಂದ ತಾವು ಏನು ಬಂದಿದ್ದೀರಿ, ನಮ್ಮಿಂದ ಅದು ಪ್ರಾರಂಭವಾಗಿದೆ. ನೆನ್ನೆ ಆದಂಥ ಘಟನೆಯ ಹಿನ್ನಲೆಯಲ್ಲಿ ಇಲ್ಲಿಯವರೆವಿಗೆ ನೀವು ಯಾರನ್ನು ಅರೆಸ್ಟ್ ಮಾಡಿದ್ದೀರಿ? ಆಗಲೇ ಹೇಳಿದೆನಲ್ಲ, ಅಲ್ಲಿ ಶವಸಂಸ್ಕಾರದ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ಶವಸಂಸ್ಕಾರವನ್ನು ನಡೆಸಿಕೊಡಲು ಬಂದಂಥ ಜಂಗಮವರನ್ನು ಕರೆದುಕೊಂಡು ಹೊಗಿ ಧಾರವಾಡದ ಜೈಲಿನಲ್ಲಿ ಇಟ್ಟಿದ್ದೀರಿ. ಈ ರಾಜ್ಯದಲ್ಲಿ ತಾವೇನು ಮಂತ್ರಿಮಂಡಲವನ್ನು ರಚಿಸಿದಿರಿ ಅದರಲ್ಲಿ ಸ್ಥಾನ ಸಿಗಲಿಲ್ಲವೆಂದು ಹೇಳಿ ಈ ರಾಜ್ಯದ ಕೆಲವಾರು ಭಾಗಗಳಲ್ಲಿ ಬಸ್‌ಗಳನ್ನು ಸುಟ್ಟಿದರಲ್ಲ, ಈ ವಿಚಾರದಲ್ಲಿ ಇಲ್ಲಿಯವರೆವಿಗೆ ಯಾರನ್ನು ನೀವು ಅರೆಸ್ಟ್ ಮಾಡಿದ್ದೀರಿ? ಈ ಬಗ್ಗೆ ಉತ್ತರವನ್ನು ಗೃಹ ಸಚಿವರು ಇಡುತ್ತೀರೋ ಅಥವಾ ನೀವೇ ಇಡುತ್ತೀರೋ ಅದನ್ನು ಸದನದ ಮುಂದೆ ಇಡಿ. ಬೀದಿಯಲ್ಲಿ ಹೋಗತಕ್ಕಂಥ, ಮಸೀದಿಯಲ್ಲಿ ಪ್ರಾರ್ಥನೆ ಮಂದಿರದೊಳಗೆ ನುಗ್ಗಿದೀರಿ, ಬಸ್‌ಸ್ಟ್ಯಾಂಡಿನಲ್ಲಿ ಕೂಲಿ ಕೆಲಸ ಮಾಡತಕ್ಕಂಥವರಲ್ಲಿ ಸಿಕ್ಕ ಸಿಕ್ಕಿದವರಿಗೆಲ್ಲಾ ಥಳಿಸಿದ್ದೀರಿ, ಪಾಪ ಆ ಜಂಗಮರನ್ನೂ ಕೂಡ ಥಳಿಸಿದಿರಿ, ಮೊದಲು ಅವರನ್ನು ಬಿಡಿಸುವುದಕ್ಕೆ ಸಾಧ್ಯವಿದ್ದರೆ ಬಿಡಿಸಿಬಿಡಿ. ಏಕೆಂದರೆ ಅವರ ಶಾಪವೇನಾದರೂ ತಟ್ಟಿಬಿಟ್ಟೀತು. ಏಕೆಂದರೆ ನಿಮಗೆ ಬಹಳ ನಂಬಿಕೆ ಇದೆ. ಒಂದು ಕಾಲದಲ್ಲಿ ರೇವಣ್ಣನವರಿಗೆ ಜಾಸ್ತಿ ನಂಬಿಕೆ ಇದೆ ಎನ್ನುತ್ತಿದ್ದಿರಿ, ದೇವೇಗೌಡರಿಗೆ ಜಾಸ್ತಿ ನಂಬಿಕೆ ಎನ್ನುತ್ತಿದ್ದಿರಿ. ಈಗ ನೀವು ಅವರೆಲ್ಲರನ್ನು overtake ಮಾಡಿಬಿಟ್ಟಿದ್ದೀರಿ. ಎಲ್ಲರನ್ನು ಈ ವಿಚಾರದಲ್ಲಿ ನೀವು ಮಾಡಿಬಿಟ್ಟಿದ್ದೀರಿ. ಅದುದರಿಂದ ಇವೊತ್ತೇನು ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ಹೇಳಿ ಈ ರೀತಿಯ ರಾಜಕಾರಣವನ್ನು ರಾಜ್ಯದಲ್ಲಿ ಹೊಸದಾಗಿ ಪ್ರಾರಂಭ ಮಾಡುವುದಕ್ಕೆ ಏನು ಹೊರಟಿದ್ದಿರಿ, ತಮ್ಮ ಪಕ್ಷದ ಕಾರ್ಯಕರ್ತರ ಮೇಲೆ ನಿನ್ನೆ ನೀವು ತೆಗೆದುಕೊಂಡಂಥ ನಿರ್ಧಾರ, ಈ ಸವಾಲನ್ನು ನಾನು ಸ್ವೀಕಾರ ಮಾಡುತ್ತಿದ್ದೇನೆ, 24 ಗಂಟೆಯಾಗಿದೆ, ಇಲ್ಲಿಯವರೆಗೆ ಯಾರನ್ನು ನೀವು ಅರೆಸ್ಟ್ ಮಾಡಿದ್ದಿರಿ? ಇಲ್ಲಿ ನೀವು ಹೇಳುತ್ತೀರಿ, ಮೊನ್ನೆ ಹಾವೇರಿಯಲ್ಲಿ ನಡೆದಂಥ ಘಟನೆಯ ವಿಡಿಯೋ ಚಿತ್ರವನ್ನು ನೋಡಿ ನಾವು ಅರೆಸ್ಟ್ ಮಾಡಿದ್ದೇವೆಂದು ಹೇಳುತ್ತೀರಿ. ನ್ಯಾಯಾಂಗ ತನಿಖೆಯಲ್ಲಿ ಯಾವ ಯಾವ ಪಕ್ಷಗಳು ಇವೊತ್ತು ಗೊಬ್ಬರ ವಿಚಾರದಲ್ಲಿ ರಾಜಕಾರಣ ಮಾಡಿದ್ದಾರೆಂಬ ಬಗ್ಗೆ ಸರಿಯಾದಂಥ ರೀತಿಯಲ್ಲಿ ಒಂದು ನ್ಯಾಯಾಂಗ ತನಿಕೆ ನಡೆದರೆ ಆಗ ನಿಮ್ಮ ಬಣ್ಣ ಬಯಲಾಗುತ್ತದೆ. ನೀವೇನು ಈಗಾಗಲೇ ಪತ್ರಿಕೆಗಳಲ್ಲಿ

ಹೇಳಿದ್ದೀರಿ, ಕೇಂದ್ರದ ವಿರುದ್ಧ ಗುಡುಗಿದ ಮುಖ್ಯಮಂತ್ರಿಗಳು . ಎಂದು ಬಂದಿದೆ. ಒಂದು ಕಡೆ ನೀವು ಸಂಘರ್ಷ ಮಾಡುವುದಿಲ್ಲವೆಂದು ಹೇಳುತ್ತೀರಿ. ಒಬ್ಬ ಮಂತ್ರಿಗಳು ಹೇಳುತ್ತಾರೆ ಒಂದು ಕಡೆ ಒದ್ದು ನೋಡಿ, ಕೊಟ್ರು ಗೊಬ್ಬರ ಎನ್ನುತ್ತಾರೆ. ನಿಮಗೆ ಈಗ ಅಧಿಕಾರವಿದೆ. ನೀವು ನಿಮ್ಮ ಮಾತಿನಲ್ಲಿ ಏನು ಮಾತುಗಳನ್ನು ಆಡಿದ್ದಿರಿ, ಆ ನಿಟ್ಟಿನಲ್ಲಿ ಕೆಲಸವನ್ನು ಮಾಡುವುದರ ಮುಖಾಂತರ, ಇವೊತ್ತು ಈ ಗೊಬ್ಬರದ ವಿಚಾರದಲ್ಲಿ ಜವಾಬ್ದಾರಿಯನ್ನು ಕೇಂದ್ರ ಸರ್ಕಾರದ ಮೇಲೆ ಹೊರಿಸುವುದರ ಮುಖಾಂತರ ತಾವು ಜವಾಬ್ದಾರಿಯಿಂದ ನುಣಿಚಿಕೊಳ್ಳತಕ್ಕಂಥ ಕೆಲಸವನ್ನು ಮಾಡಬೇಡಿ. ಈಗೇನು ರೈತರುಗಳು ಹೋರಾಟವನ್ನು ಮಾಡುತ್ತಿದ್ದಾರೆ ಆ ಬಗ್ಗೆ ಇಲ್ಲಸಲ್ಲದ್ದನ್ನು ಹೇಳಬೇಡಿ. ಈಗಾಗಲೇ ಕೃಷಿ ಸಚಿವರು ಹೇಳಿದ್ದಾರೆ, ಕೆಲವು ರೈತರುಗಳು ಮಾತನಾಡುತ್ತಿದ್ದರು ಎಂದು ಹೇಳಿ ಸತ್ತವನು ಕುಡಿದು ಸತ್ತಿದ್ದಾನೆಂದು ಹೇಳಿದಿರಿ. ಇನ್ನೊಬ್ಬರು ಹೇಳುತ್ತಾರೆ ಸತ್ತವನು ರೈತನೇ ಅಲ್ಲವೆಂದು, ಈ ರಾಜ್ಯದಲ್ಲಿ ಎಷ್ಟೋ ರೈತರುಗಳು ಭೂಮಿ ಇಲ್ಲದೆ ಕೂಲಿ ಕೆಲಸವನ್ನು ಮಾಡತಕ್ಕಂಥವರು ಇದ್ದಾರೆ. ಗುತ್ತಿಗೆ ಆಧಾರದ ಮೇಲೆ 2 ಎಕರೆ 3 ಎಕರೆ ಭೂಮಿಯನ್ನು ಪಡೆದುಕೊಂಡು ಉಳುಮೆ ಮಾಡಿ ಗುತ್ತಿಗೆ ಕೆಲಸ ಮಾಡತಕ್ಕಂಥ ರೈತರುಗಳು ಇದ್ದಾರೆ. ಇಂಥ ರೈತರುಗಳ ಹೆಸರಿನಲ್ಲಿ ಯಾವುದೇ ಭೂಮಿ ಇಲ್ಲ. ಬೇರೆಯವರಿಂದ ಭೂಮಿಯನ್ನು ಇವೊತ್ತು ಗುತ್ತಿಗೆ ಆಧಾರದ ಮೇಲೆ ಪಡೆದು ಉಳುಮೆ ಮಾಡಿ ಜೀವನ ಮಾಡುತ್ತಿರುವ ಸಾವಿರಾರು ರೈತರುಗಳಿದ್ದಾರೆ. ಇವೊತ್ತು ಎಷ್ಟೋ ರೈತರುಗಳಿಗೆ ಇಲ್ಲಿಯವರೆವಿಗೂ ಬಗರ್ ಹುಕುಂ ಅಡಿಯಲ್ಲಿ ಸಾಗುವಳಿ ಮಾಡುತ್ತಿರುವವರಿಗೆ ಪಹಣಿಯನ್ನೇ ನೀಡದಿರುವಂಥ ಹಲವಾರು ಘಟನೆಗಳು ಇವೆ. ರೈತರು ಸುಮ್ಮಸುಮ್ಮನೆ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಆದರೆ ಇವೊತ್ತು ಇಂಥ ಘಟನೆಗಳು ಏನು ನಡೆಯುತ್ತಿವೆ ಇದಕ್ಕೆ ಕಾರಣ ಏನು ಎನ್ನತಕ್ಕಂಥ ವಿಷಯದಲ್ಲಿ ಉಡಾಫೆ ಮಾತನಾಡುವುದನ್ನು ಇನ್ನಾದರೂ ನಿಲ್ಲಿಸಿ. ಪದೇ ಪದೇ ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿ ಹೊರಿಸಿ ಕೇಂದ್ರ ಸರ್ಕಾರದ ವಿರುದ್ಧ ನಾವು ಬೀದಿಗಿಳಿದು ಹೋರಾಟ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಪದೇ ಪದೇ ನೀವು ಹೇಳಿದರೆ ಬಹಳ ದಿವಸ ಜನರು ನಿಮ್ಮ ಈ ಮಾತನ್ನು ಕೇಳುವುದಿಲ್ಲ. ಈ ರೀತಿಯ ಮಾತು ನಡೆಯುವುದಿಲ್ಲ. ಚುನಾವಣೆಯನ್ನು ಯಾವ ರೀತಿ ನಡೆಸಿಕೊಂಡು ಬರಲಾಯಿತು. ಎನ್ನುವ ಬಗ್ಗೆ ನಾನು ಈಗ ಚರ್ಚೆ ಮಾಡುವುದಿಲ್ಲ. ಚುನಾವಣೆ ನಡೆಸಬೇಕಾದರೆ ಎಲ್ಲಾ ರೀತಿಯಲ್ಲಿಯೂ ಚುನಾವಣೆ ನಡೆಸುತ್ತಾರೆ. ಸಾಮ, ಭೇದ ನಡೆಯತ್ತವೆ. ಯಾವ ರೀತಿ ಚುನಾವಣೆಯಾಯಿತು. ಅದರಿಂದ ಈ ರೀತಿಯಾಯಿತು, ಈ ಆಪರೇಶನ್ ಮಾಡುವುದಕ್ಕೆ ನಾವು ಸಿದ್ದರಿಲ್ಲ. ಇದರ

ಬಗ್ಗೆ ಪೋಸ್ಟ್‌ಮಾರ್ಟಂ ಮಾಡುವುದಕ್ಕೂ ನಾವು ಸಿದ್ದರಿಲ್ಲ. 110 ಸೀಟ್‌ಗಳನ್ನು ತಾವು ಗೆದ್ದಿದ್ದೀರಿ. ಆರು ಜನ ಪಕ್ಷೇತರ ಶಾಸಕರೂ ಕೂಡ ತಮಗೆ ಆಡಳಿತವನ್ನು ನಡೆಸುವುದಕ್ಕೆ ತಮಗೆ ಅವಕಾಶವನ್ನು ಕೊಟ್ಟಿದ್ದಾರೆ. ಆಡಳಿತವನ್ನು ನಡೆಸಿ. ಆದರ ತಲೆ ತಿರುಗಿ ಹೋದರೆ ನಾವೇನು ನಿಮಗೆ ಬುದ್ಧಿಯನ್ನು ಕಲಿಸಬೇಕಾಗಿಲ್ಲ. ಯಾರು ಇವೊತ್ತು ನಿಮಗೆ 110 ಸೀಟ್‌ಗಳನ್ನು ನಿಮಗೆ ಕೊಟ್ಟಿದ್ದಾರೋ ಆ ಪುಣ್ಯಾತ್ಮರು ಅದೇ ಜನರು ನಿಮಗೆ ಬುದ್ದಿಯನ್ನು ಕಲಿಸತಕ್ಕಂಥ ಕಾಲ ದೂರವಿಲ್ಲ ಎನ್ನತಕ್ಕಂಥ ಮಾತನ್ನು ನಿಮಗೆ ಎಚ್ಚರಿಕೆ ಕೊಟ್ಟು, ಈ ವಿಷಯದಲ್ಲಿ ಸದನದ ಮುಂದೆ ನೀವು ಹೇಳಬೇಕಾಗುತ್ತದೆ, ಇವೊತ್ತು ನ್ಯಾಯಾಂಗ ತನಿಖೆಗೆ Terms of reference ಏನೇನು ಇಟ್ಟಿದ್ದೀರಿ ಎಂದು ಹೇಳಬೇಕು. ಅದು ನಮಗೆ ಬಹಳ ಮುಖ್ಯ. ಈ ಬಗ್ಗೆ ಸಾರ್ವಜನಿಕವಾಗಿ ನೀವೇನೂ ಪ್ರಕಟ ಮಾಡಿಲ್ಲ. ಆ ಬಗ್ಗೆ ನೀವು ಹೇಳಬೇಕಾಗುತ್ತದೆ. ಅಲ್ಲಿರತಕ್ಕಂಥ ಸಣ್ಣ ಮಟ್ಟದ ಅಧಿಕಾರಿಗಳೇನಿದ್ದಾರೆ ಅವರು ಏನು ಇವೊತ್ತು ಬೆದರಿಕೆಯನ್ನು ಹಾಕಿದ್ದಾರೆ ಅವರೆಲ್ಲರನ್ನೂ ವರ್ಗಾವಣೆ ಮಾಡಿ. ಅವರನ್ನು ಸಸ್ಪೆಂಡ್ ಮಾಡಿ ಎಂದು ನಾನು ಹೇಳುವುದಿಲ್ಲ. ಇವೊತ್ತು ಬೇರೊಂದು ಕಡೆ ನಮ್ಮ ಗೃಹ ಸಚಿವರು ನಮ್ಮ Intelligence failure ಆಯಿತು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನು ಪತ್ರಿಕೆಯಲ್ಲಿ ಅದನ್ನು ನೋಡಿದೆ. Intelligence ಇರತಕ್ಕಂಥದ್ದು ಮುಖ್ಯಮಂತಿಗಳ ಕೈಕೆಳಗೆ. ಅಂದರೆ ಗೃಹ ಸಚಿವರು ಹೇಳತಕ್ಕಂಥದ್ದರಲ್ಲಿ Intelligence ಅಧಿಕಾರಿಗಳು failure ಆದರೋ ಅಥವಾ ಮುಖ್ಯಮಂತ್ರಿಗಳು failure ಆದರೋ ಎನ್ನುವ ಬಗ್ಗೆ ಸ್ವಲ್ಪ ವಿವರಣೆ ಕೊಟ್ಟರೆ ಸೂಕ್ತ ಎನ್ನುವುದನ್ನು ಈ ಸಂದರ್ಭದಲ್ಲಿ ಮಾನ್ಯ ಗೃಹ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಇವೊತ್ತು ತಾವೇನು ಈ ವಿಚಾರದಲ್ಲಿ ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ಮತ್ತೊಮ್ಮೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಈಗಾಗಲೇ ಈ ವಿಚಾರದಲ್ಲಿ ಮಾನ್ಯ ಖರ್ಗೆಯವರು, ಮಾನ್ಯ ಜಯಚಂದ್ರರವರು ಗೊಬ್ಬರದ ಸ್ಟಾಕ್ ಬಗ್ಗೆ, ಕೇಂದ್ರ ಸರ್ಕಾರದ ಕಾರ್ಯದರ್ಶಿಗಳ ಜೊತೆ ಚರ್ಚೆ ಮಾಡಿರುವುದರ ಬಗ್ಗೆ ಎಲ್ಲಾ ವಿವರಗಳೂ ನನ್ನ ಬಳಿ ಇದ್ದರೂ ಕೂಡ ಮತ್ತೆ ಅದೇ ಮಾಹಿತಿಗಳ ಬಗ್ಗೆ ಚರ್ಚೆ ಮಾಡಿ ಸಮಯವನ್ನು ವ್ಯರ್ಥ ಮಾಡದೆ ಇವೊತ್ತು ರಾಜಕೀಯವಾಗಿ ಈ ಒಂದು ಘಟನೆಯನ್ನು ದುರ್ಬಳಕೆ ಮಾಡಿಕೊಳ್ಳುವುದಕ್ಕೆ ಇವೊತ್ತು ಸರ್ಕಾರ ಏನು ಹೊರಟಿದೆ, ಆ ರೀತಿಯ ದುರ್ಬಳಕೆಯನ್ನು ನಿಲ್ಲಿಸಬೇಕು ಎನ್ನತಕ್ಕಂಥ ಮಾತನ್ನು ಹೇಳಿ ನನಗೇನು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಿರಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಸಿ ಪಾಟೀಲ್ (ಹಿರೇಕೆರೂರ್):-- ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಹಾವೇರಿ ಗೋಲಿಬಾರ್ ಬಗ್ಗೆ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. "ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲಾ" ಎಂದು ಹೇಳಲಾಗುತ್ತದೆ. ಇವೊತ್ತು ಯಾವ ಒಕ್ಕಲಿಗ ಭೂಮಿಯನ್ನು ಒಕ್ಕಬೇಕು ಎಂದು ಹೊರಟಿದ್ದಾನೆ ಆ ಒಕ್ಕಲಿಗನಿಗೆ ಬಿಕ್ಕುವಂಥ ಪರಿಸ್ಥಿತಿ ಇವೊತ್ತು ಈ ಸರ್ಕಾರದಲ್ಲಿ ನಿರ್ಮಾಣವಾಗಿದೆ. ಕರ್ನಾಟಕದ ಜನತೆ ಅದರಲ್ಲಿಯೂ ವಿಶೇಷವಾಗಿ ಉತ್ತರ ಕರ್ನಾಟಕದ ಜನತೆ ಬಿ.ಜೆ.ಪಿ ಪಕ್ಷದ ಮೇಲೆ ಅಪಾರ ನಂಬಿಕೆಯನ್ನಿಟ್ಟು, ರೈತರ ಬಗ್ಗೆ ಬಹಳ ಹೋರಾಟವನ್ನು ಮಾಡುತ್ತಾರೆ. ಈ ಸರ್ಕಾರ ಬಂದ ತಕ್ಷಣ ರೈತರಿಗೆ ಉಚಿತ ವಿದ್ಯುತ್ ಕೊಡುತ್ತಾರೆ, ರೈತರ ಪರವಾಗಿ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆಂದು ಹೇಳಿ ವಿಶೇಷವಾಗಿ ಉತ್ತರ ಕರ್ನಾಟಕದ ಜನತೆ ಬಿ.ಜೆ.ಪಿ, ಪಕ್ಷವನ್ನು ಬೆಂಬಲಿಸಿ ಇವೊತ್ತು ಆಡಳಿತಕ್ಕೆ ತಂದಿದ್ದಾರೆ. ಹಲವಾರು ಕನಸುಗಳನ್ನು, ಆಶಾಗೋಪುರಗಳನ್ನು ಇಟ್ಟುಕೊಂಡಿರುವ ಆ ಜನತೆ ಕನಸು ಕಾಣುತ್ತಿದ್ದಾರೆ. ಉತ್ತರ ಕರ್ನಾಟಕದ ಹೆಬ್ಬಾಗಿಲಾದ ಹಾವೇರಿಯಲ್ಲಿ ಯಾವ ಜನತೆ ಅತಿ ಹೆಚ್ಚಿನ ಮಾತುಗಳನ್ನು ಕೊಟ್ಟು ನಿಮ್ಮನ್ನು ಆಡಳಿತಕ್ಕೆ ತಂದಿದ್ದರೋ ಅವರು ಕಟ್ಟಿದಂತಹ ಆಶಾಗೋಪುರವನ್ನು ಈವತ್ತು ನಿಮ್ಮ ಸರ್ಕಾರ ಆಡಳಿತಕ್ಕೆ ಬಂದ ಕೇವಲ ಹತ್ತು ದಿನಗಳಲ್ಲಿ ಗೋಲಿಬಾರ್‌ಅನ್ನು ಮಾಡುವುದರ ಮೂಲಕ ಮೊದಲನೆಯದಾಗಿ ರೈತರ ಬಲಿ ತೆಗೆದುಕೊಂಡ ಕೆಲಸವನ್ನು ಇವೊತ್ತು ಈ ಸರ್ಕಾರ ಮಾಡಿದೆಯೆಂದು ಹೇಳುವುದಕ್ಕೆ ಬಹಳ ವಿಷಾದವನ್ನು ಪಡುತ್ತೇನೆ. ಈಗಾಗಲೇ ವಿರೋಧ ಪಕ್ಷದ ನಾಯಕರು, ಮಾಜಿ ಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಸವಿಸ್ತಾರವಾಗಿ ಚರ್ಚೆಯನ್ನು ಮಾಡಿದ್ದಾರೆ.10.06.2008ರಂದು ಘಟನೆ ಹೇಗೆ ಪ್ರಾರಂಭವಾಯಿತು ಎನ್ನುವುದರ ಬಗ್ಗೆ ಸ್ವಲ್ಪ ಬೆಳಕನ್ನು ಇಲ್ಲಿ ಚೆಲ್ಲಬೇಕಾಗುತ್ತದೆ. ರಸಗೊಬ್ಬರದ ಕೊರತೆ ಕಳೆದ ಮೇ ತಿಂಗಳಿನಿಂದಲೂ ಪ್ರಾರಂಭವಾಗಿದೆ. 30ನೇ ತಾರೀಖು ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಇಲ್ಲಿ ಅಧಿಕಾರವನ್ನು ಸ್ವೀಕಾರ ಮಾಡಿದ್ದಾರೆ. ಅವರು ಅಧಿಕಾರವನ್ನು ಸ್ವೀಕಾರ ಮಾಡಿದ 22 ಗಂಟೆಯೊಳಗಾಗಿ ನಾನು ರೈತರ ಪರವಾಗಿ ಹಿರೇಕೆರೂರಿನಲ್ಲಿ ಒಂದು ಪ್ರತಿಭಟನೆಯನ್ನು ಮಾಡಿದೆ. ರಸಗೊಬ್ಬರದ ಕೊರತೆ ಇದೆ ಮತ್ತು ಬೀಜದ ಕೊರತೆ ಇದೆಯೆಂದು ಸರ್ಕಾರಕ್ಕೆ ವಿಷಯವನ್ನು ಮನದಟ್ಟು ಮಾಡಿದೆ. ತದನಂತರ ಪ್ರತಿ ದಿನ ಉತ್ತರ ಕರ್ನಾಟಕದಲ್ಲಿರಬಹುದು, ದಕ್ಷಿಣ ಕರ್ನಾಟಕದಲ್ಲಿರಬಹುದು, ಎಲ್ಲಾ ಕಡೆಯಲ್ಲಿಯು ಕೂಡ ರೈತರು ರಸಗೊಬ್ಬರದ ಕೊರತೆಯಿಂದ ಮತ್ತು ಬೀಜದ ಕೊರತೆಯಿಂದ ಪ್ರತಿಭಟನೆಯನ್ನು ಮಾಡುವುದು, ಅಂಗಡಿಗಳ

ಮುಂದೆ ನಿಲ್ಲುವುದು, ರಸ್ತೆಗಳಲ್ಲಿ ಹರತಾಳ ಮಾಡುವುದೆಲ್ಲವೂ ಕೂಡ ನಡೆದುಕೊಂಡು ಬಂದಂಥ ಪದ್ಧತಿ. ಬಹುಶಃ 8ನೇ ತಾರೀಕು ಹುಬ್ಬಳ್ಳಿಯಲ್ಲಿ ದೊಡ್ಡ ಗಲಭೆಯಾಯಿತು. ಬೆಂಕಿ ಹಚ್ಚಿದರು, ಗೋದಾಮುಗಳಿಗೆ ನುಗ್ಗಿದರು, 9ನೇ ತಾರೀಖು ಶಿಗ್ಗಾಂವ್ ಕ್ರಾಸ್‌ನಲ್ಲಿ ಗಲಾಟೆಯಾಯಿತು. ಆವೊತ್ತಿನ ದಿವಸ ನಾವು ಆ ಕಡೆ ಬರುವಾಗ ನಮ್ಮನ್ನೂ ಕೂಡ ಒಂದು ಗಂಟೆ ಕಾಲ ರೈತರು ತಡೆಹಿಡಿದಿದ್ದರು. ಇಷ್ಟಾದರೂ ಕೂಡ ಸರ್ಕಾರ ಯಾವುದೇ ರೀತಿಯಲ್ಲಿಯೂ ಗೊಬ್ಬರವನ್ನು ಸಮರ್ಪಕವಾಗಿ ವಿತರಣೆ ಮಾಡುವಂಥ ಕೆಲಸವನ್ನು ಮಾಡಲಿಲ್ಲ. ಆದರ 10ನೇ ತಾರೀಖು ರೈತರು ಗೊಬ್ಬರದ ಅಂಗಡಿಗಳ ಮುಂದೆ ಸಾಲು ಗಟ್ಟಿ ನಿಂತಿದ್ದಾರೆ, ಆವೊತ್ತಿನ ದಿವಸ ಹಾವೇರಿ ಶಾಸಕರು, ಹಾವೇರಿಯ ಮಾಜಿ ಶಾಸಕರು, ಆವೊತ್ತಿನ ದಿವಸ ಹಾವೇರಿ ಜಿಲ್ಲೆ ಉಸ್ತುವಾರಿ ಸಚಿವರು ಅಲ್ಲಿ ಅಧಿಕಾರಿಗಳ ಒಂದು ಸಭೆಯನ್ನು ಕರೆದಿದ್ದಾರೆ. ಆ ಸಭೆ ನಡೆಯುತ್ತಿದೆ. ಆ ಸಭೆ ನಡೆಯುವ ಸಮಯದಲ್ಲಿ ಸುಮರು 12 ಗಂಟೆಗೆ ಪ್ರವಾಸಿ ಮಂದಿರದಿಂದ ಒಂದು ಮೆರವಣಿಗೆ ಮೂಲಕ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆಯನ್ನು ಕೂಗಿಕೊಂಡು ಸಿದ್ದಪ್ಪ ಸರ್ಕಲ್‌ವರೆಗೂ ಬರುತ್ತಾರೆ. ಅಲ್ಲಿ ಆಗಲೇ ರೈತರು ಗೊಬ್ಬರ ಇಲ್ಲದೆ ಕಂಗೆಟ್ಟು ನಿಂತಿದ್ದಾರೆ. ಅಲ್ಲಿಗೆ ಬಂದಂತಹ ಸಂದರ್ಭದಲ್ಲಿ ಒಬ್ಬರು ಹಾಲಿ ಸರ್ಕಾರದಲ್ಲಿ ಇರುವಂತಹ ಶಾಸಕರು ಜೊತೆಗಿದ್ದುಕೊಂಡು ಅವರ ಸಮ್ಮುಖದಲ್ಲಿ ಟೈರ್‌ಗೆ ಬೆಂಕಿ ಹಚ್ಚಿಸುತ್ತಾರೆ. ಅಲ್ಲಿ ಅಶಾಂತಿ ವಾತಾವರಣವನ್ನು ಉಂಟು ಮಾಡುತ್ತಾರೆ. ಆ ಸಿದ್ದಪ್ಪ ಸರ್ಕಲ್‌ನಲ್ಲಿ ಇವರು ಭಾಷಣ ಮಾಡುವುದಕ್ಕೆ ಹೋದಾಗ ಅಲ್ಲಿ ರೈತರು ಕೇಳುತ್ತಾರೆ, ಇಲ್ಲಿ with photo ಇದೆ, ನಿಮ್ಮ photo ಕೂಡ ಇದೆ. ಇಲ್ಲಿ ಸದನದ ಗಮನಕ್ಕೆ ತರುತ್ತೇನೆ.

ಶ್ರೀ ನೆಹರು ಓಲೇಕರ್ ಚನ್ನಬಸಪ್ಪ: ನಾವು ಬರುವುದಕ್ಕಿಂತ ಪೂರ್ವದಲ್ಲೇ ಟೈರ್‌ಗೆ ಬೆಂಕಿಯನ್ನು ಹಚ್ಚಿದರು ಎಂದು ಮಾನ್ಯ ಶಾಸಕರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಬಿ.ಸಿ ಪಾಟೀಲ್: ನಿಮ್ಮ Photo ಇದರಲ್ಲಿ ಇದೆ. ಬೆಂಕಿ ಹಚ್ಚಿದ್ದು ಇದೆ, ಇದರಲ್ಲಿ Photo ಕೂಡ ಇದೆ. ನೀವು ಇದ್ದಿದ್ದು, ನೀವು ಇದ್ದಂತಹ ಚಿತ್ರಗಳು ಇಲ್ಲಿ ಇವೆ.

ಶ್ರೀ ನೆಹರು ಓಲೇಕಾರ್ ಚನ್ನಬಸಪ್ಪ: ನಾವು ಬರುವುದಕ್ಕಿಂತ ಪೂರ್ವದಲ್ಲೇ ಜನರು ಬೆಂಕಿಯನ್ನು ಹಚ್ಚಿದ್ದರು.

ಶ್ರೀ ಬಿ.ಸಿ ಪಾಟೀಲ್: ಇಲ್ಲಿ ಇದೆ, ರಸ್ತೆಯಲ್ಲಿ ನಿಮ್ಮ ಸಮಕ್ಷಮದಲ್ಲಿ ಬೆಂಕಿ ಹಚ್ಚಿದ್ದಂತಹ photo ಕೂಡ ಇದೆ. ಇದನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುವುದದಕ್ಕೆ ಇಷ್ಟಪಡುತ್ತೇನೆ.

ಬಿಜೆಪಿ ಬಾವುಟವನ್ನು ಹಿಡಿದುಕೊಂಡು ಬಿ.ಜೆ.ಪಿ ಶಾಸಕರು, ಮಾಜಿ ಶಾಸಕರು ಎಲ್ಲರೂ ಇರುವಂತಹ photo ಗಳು ಇವೆ. ಇದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ರೈತರು, ನೀವು ಒಬ್ಬರ ಮೇಲೆ ಒಬ್ಬರು ಕೆಸರು ಎರಚುವ ಕೆಲಸ ಬಿಡಿ, ನಮಗೆ ಗೊಬ್ಬರವನ್ನು ಕೊಡಿ, ನಿಮ್ಮ ಭಾಷಣವನ್ನು ಬಂದ್ ಮಾಡಿ ಎಂದು ಹೇಳಿದರು. ಅವರು ಹೇಳಿದಂತಹ ಸಂದರ್ಭದಲ್ಲಿ ಇವರು ಟೈರ್‌ಗೆ ಬೆಂಕಿ ಹಚ್ಚಿಯಾದ ಮೇಲೆ ಅಲ್ಲಿ ವಾತಾವರಣ ಕಲುಷಿತವಾದ ನಂತರ ಅಲ್ಲಿಂದ ಆ ನಾಯಕರು ಪಲಾಯನಗೊಂಡರು. ಆದರೆ ಇವರ ಜೊತೆ ಬಂದಂತಹ ಹಲವಾರು ಜನ ಅಲ್ಲಿ ರೈತರ ಜೊತೆ ಸೇರಿಕೊಂಡು ಅಲ್ಲಿ ಒಂದು ಪ್ರಕ್ಷುಬ್ಧ ವಾತಾವರಣ ಉಂಟುಮಾಡಿದರು. ಆ ವಾತಾವರಣ ಉಂಟಾದಂತಹ ಸಂದರ್ಭದಲ್ಲಿ ಒಬ್ಬರು ಕಲ್ಲು ಎಸೆಯುವುದು, ಈ ರೀತಿ ಗಲಾಟೆ ಪ್ರಾರಂಭವಾಯಿತೇ ಹೊರತು, ಇವರು ಇದನ್ನು ಬೇರೆ ಪಕ್ಷಗಳ ಮೇಲೆ ಪ್ರತಿಪಕ್ಷಗಳು ಪಿತೂರಿ ಮಾಡಿದರು ಎಂದು ಹೇಳುತ್ತಾರೆ. ಈ ಗಲಾಟೆ, ಈ ಘಟನೆ ಆಗುವುದಕ್ಕೆ ಅಂದು ಸರ್ಕಾರದಲ್ಲಿದ್ದಂತಹವರು ರಸಗೊಬ್ಬರವನ್ನು ವಿತರಣೆ ಮಾಡುವುದರ ಬಗ್ಗೆ ಕಾಳಜಿ ವಹಿಸಬೇಕಾಗಿತ್ತೇ ಹೊರತು, ಅವತ್ತು ಯಾವ ಜ್ವಲಂತ ಸಮಸ್ಯೆ ಇತ್ತು ಆ ಸಮಸ್ಯೆಗೆ ಗಮನ ಕೊಡದೇ ತಮ್ಮ ಮೇಲಿರುವಂತಹ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಅಂದು ಕೇಂದ್ರ ಸರ್ಕಾರದ ಮೇಲೆ ಧರಣಿಯನ್ನು ಮಾಡಿ ಅವರೇ ಅಶಾಂತಿಗೆ ಕಾರಣರಾದರು. ಇವತ್ತು ಬೇರೆ ಪ್ರತಿಪಕ್ಷಗಳ ಮೇಲೆ ಪಿತೂರಿ ಮಾಡಿ ಗಲಾಟೆ ಆಯಿತು ಎಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು firing ಆಗಬೇಕಾದರೆ, ಮೊದಲು ಲಾಠಿ ಚಾರ್ಜ್ ಆಗಬೇಕು. Tear gas cell ಅನ್ನು ಸಿಡಿಬೇಕು. KRSP ಯನ್ನು ಒಂದು ಜಾಗದಲ್ಲಿ depute ಮಾಡಿದರೆ ಆ ಜಾಗಕ್ಕೆ ಒಬ್ಬ ಸ್ಥಳೀಯ ಪೊಲೀಸ್ ಅಧಿಕಾರಿ ಇರಬೇಕು. TV ಮಾಧ್ಯಮದಲ್ಲಿ, ಅದು TV 9 ಇರಬಹುದು ಈ ಟಿವಿಯಲ್ಲಿ ಹಿಡಿದಂತಹ ದೃಶ್ಯಗಳನ್ನು ತಾವು ತರಿಸಿ ಅವಲೋಕನ ಮಾಡಿದರೆ ಗೊತ್ತಾಗುತ್ತದೆ. ಪೊಲೀಸಿನವರು ಯಾವುದೇ ಮುಂಜಾಗ್ರತೆ ಕ್ರಮವನ್ನು ಜರುಗಿಸದೆ ಬೇಕಾಬಿಟ್ಟಿಯಾಗಿ, ಹೀನಾಯಮಾನವಾಗಿ ಆ ರಸ್ತೆಯಲ್ಲಿ ಇರುವಂತಹ ಅಮಾಯಕರ ಮೇಲೆ ಗುಂಡನ್ನು ಹಾರಿಸಿದ್ದನ್ನು TV ಮಾಧ್ಯಮದವರ clipping ಅನ್ನು ತಾವು ತರಿಸಿ ನೀಡಿದರೆ ಇವತ್ತು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವತ್ತಿನ ದಿವಸ ಅಧಿಕಾರಿಗಳು, ಶಾಸಕಾಂಗ ಮತ್ತು ಕಾರ್ಯಾಂಗದ ಮಧ್ಯೆ ಸಮನ್ವಯ ಇಲ್ಲ. ಮಧ್ಯಾಹ್ನ 2.00 ಗಂಟೆ ನಂತರ ಅಲ್ಲಿ firing ಆಗಿದೆ. ಸಿದ್ದಲಿಂಗಪ್ಪ ಚೂರಿ ಮೃತಪಟ್ಟಿದ್ದಾರೆ. ಉಳಿದ ಹತ್ತು ಜನ ಗಾಯಾಳುಗಳಾಗಿದ್ದಾರೆ. ಈ ಸಂದರ್ಭದಲ್ಲಿ

ಸಾಯಂಕಾಲ ಮಾನ್ಯ ಮುಖ್ಯಮಂತ್ರಿಗಳು ಒಂದು ಉನ್ನತಾಧಿಕಾರಿಗಳ ವಿಶೇಷ ಸಭೆಯನ್ನು ಕರೆದು ಪತ್ರಿಕಾ ಘೋಷ್ಠಿಯಲ್ಲಿ ಹೇಳುತ್ತಾರೆ. ಹಾವೇರಿಯಲ್ಲಿ ಆದಂತಹ ಈ ಘಟನೆಗೆ ವಿಷಾದಿಸಿ, ಮೃತನ ಕುಟುಂಬಕ್ಕೆ ನಾವು ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಿ ಮತ್ತು ಈ ಘಟನೆಯನ್ನು ತನಿಖೆ ಮಾಡುವುದಕ್ಕೆ ಬೆಳಗಾವಿ Regional Commissioner ರವರನ್ನು depute ಮಾಡಿದ್ದೇವೆನ್ನುವ ಮಾತನ್ನು ಹೇಳುತ್ತಾರೆ.

ಇದಾದ ನಂತರ ಏಳುಮುಕ್ಕಾಲಿಗೆ Additional DGP (Law and Order) ಇವರು ಉದಯ ಟಿವಿ ನ್ಯೂಸ್‌ನಲ್ಲಿ, ಹಾವೇರಿಯಲ್ಲಿ ಗೋಲಿಬಾರ್ ಆಗಿದ್ದರ ವಿಚಾರದಲ್ಲಿ ನಮಗೆ ಇನ್ನು ಯಾವುದೇ confirmation ಇಲ್ಲ ಎಂದು ಹೇಳುತ್ತಾರೆ. ಉನ್ನತಾಧಿಕಾರಿಗಳ ಸಭೆ ನಡೆದು, ಮಾನ್ಯ ಮುಖ್ಯಮಂತ್ರಿಗಳು ಈ ಹೇಳಿಕೆಯನ್ನು ಕೊಟ್ಟು, enquiry order ಮಾಡಿದ ನಂತರ Additional DGP (Law and order) ರವರು ಹೇಳುತ್ತಾರೆ. ಈ ಘಟನೆ ಬಗ್ಗೆ ನಮಗೆ ಇನ್ನೂ confirmation ಇಲ್ಲ, yet to be confirmed ಎಂದು ಹೇಳುತ್ತಾರೆ. ಅಂದರೆ ಸರ್ಕಾರ ಮತ್ತು ಅಧಿಕಾರಿಗಳ ಮಧ್ಯೆ ಯಾವ ರೀತಿ ಸಮನ್ವಯ ನಡೆಯುತ್ತಿದೆ? ಯಾವ ರೀತಿ ಹೊಂದಾಣಿಕೆ ಇದೆ? ಅಲ್ಲಿ ನಡೆದಂತಹ ಗಲಭೆ ಬಗ್ಗೆ ಪೊಲೀಸ್ ಉನ್ನತಾಧಿಕಾರಿಗಳ ಗಮನಕ್ಕೆ ಬಂದಿಲ್ಲವೆಂದು ಹೇಳಿದರೆ ಸರ್ಕಾರ ಯಾವ ರೀತಿ ನಿರ್ಲಕ್ಷತೆ ವಹಿಸಿದೆ ಎನ್ನುವುದನ್ನು ಇಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿಗೆ ಗಲಭೆಯಾಗಿ 13 ದಿವಸವಾಗಿದೆ. ಇಲ್ಲಿಯವರೆಗೂ ಅಲ್ಲಿ ಗಲಭೆಯಾದಾಗ ಗೋಲಿಬಾರ್ ಮಾಡಿದಂತಹ ಯಾವುದೇ ಪೊಲೀಸ್ ಅಧಿಕಾರಿಗಳ ಮೇಲೆ ಯಾವುದೇ ರೀತಿಯ ಕ್ರಮವನ್ನು ಸರ್ಕಾರ ಜರುಗಿಸಿಲ್ಲ. ಕೇವಲ SP ಒಬ್ಬರನ್ನು ರಜೆ ಮೇಲೆ ಕಳುಹಿಸಿದ ತಕ್ಷಣ ಅಲ್ಲಿ ನೊಂದಂತಹ ಕುಟುಂಬಗಳಿಗೆ ಸಾಂತ್ವನ ಸಿಗುವುದಿಲ್ಲ. ನೀವು ನ್ಯಾಯಾಂಗ ತನಿಖೆಗೆ ಆದೇಶ ಮಾಡಿದ ತಕ್ಷಣ ಅವರಿಗೆ ನ್ಯಾಯ ಸಿಗುವುದಿಲ್ಲ. ಇವತ್ತು ಅಲ್ಲಿ ಯಾವ ಒಬ್ಬ ಪೊಲೀಸ್ ಅಧಿಕಾರಿ ಕೂಡ suspend ಆಗಲಿಲ್ಲ. ಅವರ ಮೇಲೆ enquiry ಆಗಲಿಲ್ಲ. ವಿಚಾರಣೆ ನಡೆಯಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಇವತ್ತು ಹಾವೇರಿ ನಗರ ನಲುಗಿ ಹೋಗುತ್ತಿದೆ. ಅಲ್ಲಿ ಈ ಘಟನೆಯಾದ ನಂತರ ಸಿದ್ಧಲಿಂಗಪ್ಪ ಚೂರಿಯವರು, ಈಗ ನಮ್ಮ ಮಾಜಿ ಮುಖ್ಯಮಂತ್ರಿಯವರು ಹೇಳಿದ ಹಾಗೆ ಅಪ್ಪಟ ಬಿಜೆಪಿ ಕಾರ್ಯಕರ್ತರು. ಅವರ ಅಣ್ಣ ಇವತ್ತು ನಗರಸಭೆಯ ಬಿಜೆಪಿ ಸದಸ್ಯರಾಗಿದ್ದಾರೆ. ಅಲ್ಲಿ ಗೋಲಿಬಾರ್‌ನಲ್ಲಿ ಅವರು ಹತ್ಯೆಯಾಗಿ ಮೃತಪಟ್ಟರು. ಎಂದು ಸರ್ಕಾರ ಅವರ ಕುಟುಂಬಕ್ಕೆ ಎರಡು ಲಕ್ಷ

ರೂಪಾಯಿಗಳನ್ನು ಕೊಟ್ಟರು ಹಾಗೂ ಅವರ ಶ್ರೀಮತಿಯವರಿಗೆ ಉದ್ಯೋಗವನ್ನು ಏನು ಒದಗಿಸಿಕೊಟ್ಟಿದ್ದಾರೆ, ಅದೇ ಮಮತೆ, ಅದೇ ಪ್ರೀತಿ, ಅದೇ ಕರುಣೆಯನ್ನು ಬೇರೆ ಗಾಯಾಳುಗಳ ಮೇಲೆ ಈ ಸರ್ಕಾರ ಇಲ್ಲಿಯವರೆಗೆ ತೋರಿಸಲಿಲ್ಲ. ಇದನ್ನು ನಾವು ಖಂಡಿಸಬೇಕಾಗುತ್ತದೆ. ನಮಗೆ ಬಿಜೆಪಿ ಪಕ್ಷದ ಪ್ರಣಾಳಿಕೆ ಗೊತ್ತಿಲ್ಲ. ಬಹುಶಃ ಇವರು ಒಂದು word ಸೇರಿಸಿಕೊಳ್ಳಬಹುದು. ಗಂಡಂದಿರಿಗೆ ಗುಂಡೇಟು, ಹೆಂಡತಿಯರಿಗೆ ನೌಕರಿ. ಇದು ಇವತ್ತು ಆಗಿದೆ. ಗುಂಡೇಟು ಹಾಕಿ ಸಾಯಿಸಿಬಿಟ್ಟು, ಅವರ ಮನೆಯವರಿಗೆ ನೌಕರಿ ಕೊಟ್ಟು ಬಿಟ್ಟರೆ ಅದರಿಂದ ಅವರಿಗೆ ನ್ಯಾಯ ಸಿಗುವುದಿಲ್ಲ. ಅವರಿಗೆ ಗುಂಡೇಟಿನಿಂದ ಹೊಡೆದು, ಅವರ ಮನೆಯವರಿಗೆ ನೌಕರಿ ಕೊಡುವುದರ ಮೂಲಕ ಅದನ್ನು ಸಮಜಾಯಿಸಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದರೆ ಇದಕ್ಕಿಂತ ದುರದೃಷ್ಟಕರ ಸಂಗತಿ ಇನ್ನೊಂದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ನಾನು ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಕೃಷಿ ಸಚಿವರ ಕ್ಷೇತ್ರದಲ್ಲಿ ಕೃಷಿಕನ ಆತ್ಮಹತ್ಯೆ. ಗೃಹ ಸಚಿವರ ಕ್ಷೇತ್ರದಲ್ಲಿ ಗೃಹಿಣಿ ಆತ್ಮಹತ್ಯೆ. ಇವತ್ತು ಈ ಸರ್ಕಾರ ಯಾವ ರೀತಿ ನಡೆದುಕೊಂಡು ಹೋಗುತ್ತಿದೆ ಎನ್ನುವುದಕ್ಕೆ ಇದು ಜೀವಂತ ನಿದರ್ಶನಗಳು ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಎನ್. ಯೋಗೀಶ್‌ಭಟ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇವತ್ತು ಕೂಡ ರಸಗೊಬ್ಬರದ ಕೊರತೆ ಇದೆ. ಬೀಜದ ಕೊರತೆ ಇದೆ. ಔಷಧಿ ಕೊರತೆ ಇದೆ. ಇದರ ಬಗ್ಗೆ ಇದುವರೆಗೂ ಸರ್ಕಾರ ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಂಡಿಲ್ಲ. ನಮಗೆ ಬಂದ ಒಂದು ಮಾಹಿತಿ ಪ್ರಕಾರ ಇವತ್ತು ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ IPL Company ಯಿಂದ ಹೆಚ್ಚಿನ ಗೊಬ್ಬರವನ್ನು ಒದಗಿಸಬೇಕು ಎಂದು ಒಂದು ಆದೇಶ ಹೋಗಿದೆ ಎಂದು ನಮಗೆ ತಿಳಿದು ಬಂದಿದೆ. ಇದರ ಸತ್ಯಾಸತ್ಯತೆಯನ್ನು ಕಂಡು ಹಿಡಿಯುವುದಕ್ಕೆ ಆ ಕಂಪನಿಗೆ ನೋಟೀಸನ್ನು ಕೊಟ್ಟು ರಾಜ್ಯದ ಯಾವ್ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಗೊಬ್ಬರವನ್ನು ಕೊಟ್ಟಿದ್ದಾರೆ ಎಂದು ಈ ಸದನದ ಗಮನಕ್ಕೆ ತಾವೆಲ್ಲ ತರಬೇಕು ಹಾಗೂ ಇದರ ಸತ್ಯಾಸತ್ಯತೆಯನ್ನು ಕಂಡುಹಿಡಿಯಬೇಕು ಎನ್ನುವ ಮಾತನ್ನು ಕೂಡ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ರಾಜ್ಯದಲ್ಲಿ ಉಂಟಾಗಿರುವಂತಹ ಗೊಬ್ಬರ ಮತ್ತು ಬೀಜದ ಕೊರತೆ ಏನಿದೆ ಇದರ ಬಗ್ಗೆ ಕೂಡಲೇ ಸರ್ಕಾರ ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಂಡು ಕಾಳಸಂತೆಯಲ್ಲಿ ಮಾರುವವರು

ಏನಿದ್ದಾರೆ ಅವರ ಮೇಲೆ ಕ್ರಮ ಜರುಗಿಸಬೇಕು. ..... ಮಾನ್ಯ ಅಧ್ಯಕ್ಷರೆ, ಇವತ್ತು ಏನಾಯಿತು ಎಂದರೆ ಗೊಬ್ಬರವನ್ನು ವಿತರಣೆ ಮಾಡಬೇಕಾದರೆ, ಯಾವಾಗ ವಿತರಣೆ ಪ್ರಾರಂಭ ಮಾಡಿದರು, ಅದು systematic ಆಗಿ ವಿತರಣೆಯಾಗಲಿಲ್ಲ. ಈಗ "ಅ" ಖಾತೆಯನ್ನು ಇಟ್ಟುಕೊಂಡು ಗೊಬ್ಬರವನ್ನು ವಿತರಣೆ ಮಾಡುತ್ತಿದ್ದಾರೆ. ಅದೇ ಗೊಬ್ಬರವನ್ನು ಮೊದಲಿನಿಂದಲೂ ಕೊಡುವಾಗ ರೈತರ "ಅ" ಖಾತೆಯನ್ನು ಇಟ್ಟುಕೊಂಡು ಗೊಬ್ಬರವನ್ನು ಕೊಟ್ಟಿದ್ದರೆ ಬಹುಶಃ ಈ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ ಎನ್ನುವ ಭಾವನೆಯನ್ನು ಕೂಡ ತಮ್ಮ ಮುಂದೆ ವ್ಯಕ್ತಪಡಿಸುತ್ತೇನೆ. ಏಕೆಂದರೆ ಕ್ಯೂನಲ್ಲಿ ಯಾರು ಬರುತ್ತಾರೆ ಅವರಿಗೆ ಒಂದು ಚೀಲ ಗೊಬ್ಬರ ಕೊಡುತ್ತಾರೆ. ಅವನು ಕಳ್ಳನೋ, ಸುಳ್ಳನೋ, ರೈತನೋ, ಕೂಲಿನೋ, ಹಮಾಲಿ ಇದ್ದಾನೋ ಯಾವುದನ್ನು ಲೆಕ್ಕಿಸದೆ ಇವತ್ತು ಬಂದು ಕ್ಯೂನಲ್ಲಿ ನಿಂತವರಿಗೆಲ್ಲ ಒಂದು ಚೀಲ ಗೊಬ್ಬರ ಕೊಟ್ಟಿದ್ದಲ್ಲದೆ, ಇವತ್ತು ಕೃಷಿ ಇಲಾಖೆ ಮತ್ತು ಸರ್ಕಾರ ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇರುವುದರಿಂದ ಇವತ್ತು ಈ ಗೋಲಿಬಾರನಂತಹ ಪ್ರಕರಣವಾಗಿದ್ದು, ಇವತ್ತು ಕರ್ನಾಟಕದಲ್ಲಿ ರೈತರು ಏನು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಅದಕ್ಕೆ ಸರ್ಕಾರದ ಬೇಜವಾಬ್ದಾರಿ ಕಾರಣ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತಾ, ಇವತ್ತು ತಾವು ನನಗೆ ನಾಲ್ಕು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಓಲೇಕಾರ್ ನೆಹರೂ ಚನ್ನಬಸಪ್ಪ (ಹಾವೇರಿ) :– ಸನ್ಮಾನ್ಯ ಅಧ್ಯಕ್ಷರೆ, ನಾನು ನಿಯಮ 69ರ ಅಡಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿದ ತಮಗೆ ವಂದಿಸುತ್ತಾ, ಇಂದಿನ ಅಧಿವೇಶನದಲ್ಲಿ ವಿಶೇಷವಾಗಿ ಹಾವೇರಿ ಗೋಲಿಬಾರ್ ವಿಷಯವಾಗಿ ಅನೇಕ ಹಿರಿಯರು ಹಾಗೂ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಹಾವೇರಿಯಲ್ಲಿ ಗೋಲಿಬಾರ್ ಪ್ರಕರಣ ನಡೆಯುವುದಕ್ಕೆ ಕಾರಣ ಏನು? ಯಾವ ಕಾರಣದಿಂದ ಗೋಲಿಬಾರ್ ನಡೆಯಿತು? ಎಂಬುದನ್ನು ಭೇದಿಸುವಂಥಾದ್ದು ಬಹಳ ಪ್ರಮುಖವಾದ ವಿಚಾರವೆಂದು ನಾನು ಭಾವಿಸಿದ್ದೇನೆ. ಇವತ್ತು ಕೇಂದ್ರ ಸರ್ಕಾರಕ್ಕೆ ಅದಕ್ಕೆ ಸೀಮಿತವಾಗಿರುವಂಥಾ ಜವಾಬ್ದಾರಿ, ರಾಜ್ಯ ಸರ್ಕಾರಕ್ಕೆ ಅದಕ್ಕೆ ಸೀಮಿತವಾಗಿರುವಂಥಾ ಜವಾಬ್ದಾರಿಗಳನ್ನು ಕೊಡಲಾಗಿದೆ. ಈ ಸರ್ಕಾರಗಳಿಗೆ ಕೊಟ್ಟಿರುವಂಥ ಜವಾಬ್ದಾರಿಗಳನ್ನು ಸರಿಯಾದ ರೀತಿಯಲ್ಲಿ ಆಯಾ ಸರ್ಕಾರಗಳು ನಿಭಾಯಿಸಿತೆಂದರೆ ನಿಜವಾಗಿಯೂ ಯಾವುದೇ ತೊಂದರೆಗಳು ರಾಜ್ಯದಲ್ಲಿಯಾಗಲಿ, ದೇಶದಲ್ಲಿಯಾಗಲಿ ಬರುವುದಕ್ಕೆ ಸಾಧ್ಯವಿಲ್ಲ. ಇವತ್ತು ರಸಗೊಬ್ಬರವನ್ನು

ಉತ್ಪಾದನೆ ಮಾಡುವುದಾಗಲಿ, ಅದನ್ನು ರಾಜ್ಯಗಳಿಗೆ ಕಳುಹಿಸಿಕೊಡುವಂಥಾ ವ್ಯವಸ್ಥೆ ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ. ಈ ಕೆಲಸ ಕೇಂದ್ರ ಸರ್ಕಾರಕ್ಕೆ ಇರುವಂಥ ಸಂದರ್ಭದಲ್ಲಿ ಇವತ್ತು ರಾಜ್ಯಕ್ಕೆ ಕಳುಹಿಸಬೇಕಾಗಿರುವಂಥಾ ಗೊಬ್ಬರವನ್ನು ಕೇಂದ್ರ ಸರ್ಕಾರ ಕಳುಹಿಸದೇ ಇರುವುದರಿಂದ ಇವತ್ತಿನ ದಿವಸ ರಾಜ್ಯದ ಅನೇಕ ಕಡೆಗಳಲ್ಲಿ ಗೊಂದಲವುಂಟಾಗಿದೆ. ರಾಜ್ಯದಲ್ಲಿ ಈ ಸರ್ಕಾರ ಬರುವ ಪೂರ್ವದಲ್ಲಿ ವಿರೋಧಪಕ್ಷದ ನಾಯಕರಾಗಲಿ, ಉಳಿದಿರುವಂಥ ಎಲ್ಲಾ ನಾಯಕರು ಇವತ್ತು ಒಪ್ಪಿಕೊಂಡಿದ್ದಾರೆ. ಸರ್ಕಾರ ಬರುವುದಕ್ಕಿಂತ ಪೂರ್ವದಲ್ಲಿಯೇ ಈ ರಾಜ್ಯದಲ್ಲಿ ಗಲಾಟೆಗಳು ನಡೆದಿದ್ದವು ಎಂದು. ಅದು ದಾವಣಗೆರೆ, ಧಾರವಾಡ ಜಿಲ್ಲೆಯಲ್ಲಿ ಅನೇಕ ಕಡೆಗಳಲ್ಲಿ ಗಲಾಟೆ ನಡೆದಿದೆ. ಈ ಗಲಾಟೆ ನಡೆಯುವಂಥಾ ಸಂದರ್ಭದಲ್ಲಿ ರಾಜ್ಯದಲ್ಲಿ ಸರ್ಕಾರವಿರಲಿಲ್ಲ. ಆಗ ರಾಜ್ಯಪಾಲರ ಆಳ್ವಿಕೆ ಇದ್ದು, ರಾಜ್ಯಪಾಲರನ್ನು ದೂಷಣೆ ಮಾಡಬೇಕಾಗಿತ್ತು. ಮಾನ್ಯ ರಾಜ್ಯಪಾಲರು ಗೊಬ್ಬರವನ್ನು ಸರಿಯಾದ ರೀತಿಯಲ್ಲಿ ಕಳುಹಿಸಬೇಕೆಂದು ಮೂರು ನಾಲ್ಕು ತಿಂಗಳುಗಳ ಹಿಂದೆಯೇ ಕೇಂದ್ರ ಸರ್ಕಾರಕ್ಕೆ ಎರಡು ಬಾರಿ ಪತ್ರವನ್ನು ಬರೆದಿದ್ದಾರೆ. ಮಾನ್ಯ ರಾಜ್ಯಪಾಲರು ಎರಡು ಬಾರಿ ಪತ್ರಗಳನ್ನು ಬರೆದರೂ ಸಹಿತ ಇವತ್ತು ಕೇಂದ್ರ ಸರ್ಕಾರ ತನ್ನ ಹೊಣೆಗಾರಿಕೆಯನ್ನು ಅರಿತು ಇವತ್ತು ಗೊಬ್ಬರವನ್ನು ಕಳುಹಿಸಿಕೊಡುತ್ತೇವೆನ್ನುವ ಮಾತನ್ನು ಹೇಳಲಿಲ್ಲ. ಮಾನ್ಯ ರಾಜ್ಯಪಾಲರು ಬರೆದ ಪತ್ರಕ್ಕೆ ಕವಡೆ ಕಿಮ್ಮತ್ತು ಇಲ್ಲದ ರೀತಿಯಲ್ಲಿ ಇವತ್ತು ಕೇಂದ್ರ ಸರ್ಕಾರ ವರ್ತನೆ ಮಾಡಿರುವುದನ್ನು ನೋಡಿದರೆ, ನಿಜವಾಗಿಯೂ ನಾವು ಕೇಂದ್ರ ಸರ್ಕಾರವನ್ನು ಖಂಡನೆ ಮಾಡಬೇಕಾಗುತ್ತದೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ಕೇಂದ್ರ ಸರ್ಕಾರ ಪ್ರತಿ ವರ್ಷ ರಾಜ್ಯಕ್ಕೆ ಎಷ್ಟು ರಸಗೊಬ್ಬರವನ್ನು ಕಳುಹಿಸುತ್ತಾ ಇತ್ತು. ಅಷ್ಟು ರಸಗೊಬ್ಬರವನ್ನು ನಿಗದಿತ ವೇಳೆಯಲ್ಲಿ ಕಳುಹಿಸಿ ಕೊಟ್ಟಿದ್ದರೆ, ಈ ರಾಜ್ಯದಲ್ಲಿ ಸಮಸ್ಯೆ ಉದ್ಭವವಾಗುವುದಕ್ಕೆ ಸಾಧ್ಯವಿರಲಿಲ್ಲ. ಇವತ್ತು ಕೇಂದ್ರ ಸರ್ಕಾರ ನೇರವಾಗಿ ಈ ಹೊಣೆಯನ್ನು ಹೊರಬೇಕಾಗುತ್ತದೆ. ಕೇಂದ್ರ ಸರ್ಕಾರ ರಸಗೊಬ್ಬರವನ್ನು ಪೂರೈಕೆ ಮಾಡುವುದರಲ್ಲಿ ಸಂಪೂರ್ಣ ವಿಫಲವಾಗಿರುವುದರಿಂದ ಅದು ಈ ಹೊಣೆಯನ್ನು ಹೊರಬೇಕಾಗುತ್ತದೆ. ಇವತ್ತು ರಾಜ್ಯದಲ್ಲಿ ಇಂತಹ ಘಟನೆಗಳು ನಡೆದಿರುವಂಥಾ ಸಂದರ್ಭದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಸ್ಥಳಕ್ಕೆ ಭೇಟಿ ನೀಟಿ, ಆ ಕುಟುಂಬಕ್ಕೆ ಪರಿಹಾರವನ್ನು ಕೊಡುವುದರ ಜೊತೆಗೆ ಅವರ ಧರ್ಮಪತ್ನಿಗೆ ನೌಕರಿಯನ್ನು ಕೊಡುವಂಥಾ ಕೆಲಸವನ್ನು ಮಾಡಿರುವುದನ್ನು ನಾವು ಕಂಡಿದ್ದೇವೆ. ಕೆಂದ್ರ ಸರ್ಕಾರ ಮಾಡಬೇಕಾಗಿರುವಂಥಾ ಕೆಲಸವನ್ನು ಇವತ್ತು ರಾಜ್ಯ ಸರ್ಕಾರ ತನ್ನ

ಪಾಲುಗಾರಿಕೆ ಇಲ್ಲದಿದ್ದರೂ ಸಹಿತ ಇವತ್ತು ಆ ಜವಾಬ್ದಾರಿಯನ್ನು ಹೊತ್ತು ನಿಭಾಯಿಸುತ್ತಿರುವುದನ್ನು ನೋಡಿದರೆ ಕೇಂದ್ರ ಸರ್ಕಾರ ಈ ಕುಟುಂಬಕ್ಕೆ ಏಕೆ ಪರಿಹಾರವನ್ನು ಒದಗಿಸಬಾರದು? ಗಾಯಾಳುಗಳಿಗೆ, ತೊಂದರೆಗೆ ಒಳಗಾದವರಿಗೆ ನೆರವನ್ನು ಏಕೆ ಕೊಡಬಾರದೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಕೇಳಬಯಸುತ್ತೇನೆ. ಇವತ್ತು ಹವೇರಿ ಜಿಲ್ಲೆಯಲ್ಲಿ 10ನೇ ತಾರೀಖಿನಂದು ನಾವು ಭಾರತೀಯ ಜನತಾ ಪಕ್ಷದ ವತಿಯಿಂದ ಕೇಂದ್ರ ಸರ್ಕಾರವು ಪೆಟ್ರೋಲಿಯಂ ಉತ್ಪಾದನೆಗಳ ಬೆಲೆ ಏರಿಕೆ ಮಾಡಿರುವಂಥಾದ್ದನ್ನು ಹಾಗು ರಸಗೊಬ್ಬರವನ್ನು ರಾಜ್ಯಕ್ಕೆ ಪೂರೈಕೆ ಮಾಡಿಲ್ಲವೆನ್ನುವ ವಿಚಾರಗಳ ಬಗ್ಗೆ ನಾವು ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು ನಿಜ. ನಾವು ಪ್ರತಿಭಟನೆಯನ್ನು ಶಾಂತಿಗಾಗಿ ಮುಗಿಸಿ, ಅಂದೇ ನಮ್ಮ ಸಂಪೂರ್ಣ ಕೆಲಸವನ್ನು ಮುಗಿಸಿದ್ದೆವು. ಅದು ಆದ ನಂತರ ಈ ಘಟನೆ ಪುನಃ ಕೆಲವು ಗೊಬ್ಬರ ಸಿಗದೇ ಕುಪಿತಗೊಂಡವರು ಅವರು ರಸ್ತೆಗೆ ಬರುವಂಥಾ ಕೆಲಸವನ್ನು ಮಾಡಿದರು. ಅವರು ರಸ್ತೆಗೆ ಬಂದಾಗ ಅದರಲ್ಲಿದ್ದಂತಹ ಅನೇಕ ಜನರು ಮದ್ಯಪಾನ ಸೇವನೆ ಮಾಡಿರುವವರು ಇದ್ದರು. ಈ ಕೆಲವು ಜನರು ಬಸ್ಸುಗಳಿಗೆ ಕಲ್ಲು ಹೊಡೆಯುವಂಥಾ ಕೆಲವನ್ನು ಮಾಡುತ್ತಿದ್ದರು. ಈ ರೀತಿ ಮಾಡುತ್ತಿರುವಾಗ ಪೊಲೀಸ್ ವ್ಯಾನ್‌ಗಳು ಅಲ್ಲಿಗೆ ಬಂದಂಥಾ ಸಂದರ್ಭದಲ್ಲಿ, ಆ ಪೊಲೀಸ್ ವ್ಯಾನ್‌ಗಳನ್ನು ಸಹ ಬೆನ್ನತ್ತಿ ಅದಕ್ಕೂ ಕಲ್ಲುಗಳನ್ನು ಹೊಡೆದಂಥಾದ್ದನ್ನು ನಾವು ವಿಡಿಯೋ ಚಿತ್ರೀಕರಣದಲ್ಲಿ ನೋಡಬಹುದು. ಅಗ ಪತ್ರಕರ್ತರು ಸ್ಥಳದಲ್ಲಿ ಇದ್ದರು. ಅದರ ಜೊತೆಗೆ ಅನೇಕ ಶಾಂತ ನಾಗರೀಕರು ಸಹ ವಿಡಿಯೋ ಕ್ಯಾಮರವನ್ನು ಮಾಡಿಕೊಂಡಿದ್ದಾರೆ. ಪೊಲೀಸ್‌ನವರು ಸಹ ವಿಡಿಯೋ ಕ್ಯಾಮರವನ್ನು ಮಾಡಿಕೊಂಡಿದ್ದಾರೆ. ನಾನು ಮಾನ್ಯ ಅಧ್ಯಕ್ಷರಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ಹಾವೇರಿ ಜಿಲ್ಲೆಯಲ್ಲಿ ಏನು ಘಟನೆ ನಡೆದಿದೆ. ಅದರ ಸಂಪೂರ್ಣ ವಿಡಿಯೊ ಚಿತ್ರೀಕರಣವಿದೆ. ನಾವು ಆ ವಿಡಿಯೊ ಚಿತ್ರೀಕರಣವನ್ನು ಪೊಲೀಸ್‌ನವರಿಂದ ತೆಗೆದುಕೊಂಡು ಅದನ್ನು ಈ ರಾಜ್ಯದ ಜನತೆಗೆ ಬಿತ್ತರಿಸುವಂಥಾ ಕೆಲಸವನ್ನು ಮಾಡಬೇಕೆಂದು ನಾನು ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತೇನೆ. ಆ ಚಿತ್ರಣವನ್ನು ಎಲ್ಲಾ ಜನತೆಯು ನೋಡಿದರೆ ವಾಸ್ತವಾಂಶ ಏನೆಂದರೆ ರಾಜ್ಯದ ಜನರಿಗೆ ನಿಜವಾಗಿಯೂ ಅರ್ಥವಾಗುತ್ತದೆ. ಈ ನಾಯಕರುಗಳಿಗೂ ಸಹ ಅರ್ಥವಾಗುತ್ತದೆ. ಆ ಕಾರಣದಿಂದ ಸನ್ಮಾನ್ಯ ಅಧ್ಯಕ್ಷರು ಸರ್ಕಾರದ ಮೂಲಕ ಆ ಕೆಲಸವನ್ನು ಮಾಡಿಸಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅವತ್ತು ನಡೆದಿರುವಂಥಾ ಎಲ್ಲಾ ಘಟನೆಗಳು ಸಹ ಚಿತ್ರೀಕರಣಗೊಂಡಿವೆ. ಆ ವಿಡಿಯೋ ಕ್ಯಾಸೆಟ್‌ಗಳನ್ನು ಬಿಡುಗಡೆ ಮಾಡಿಸಬೇಕು. ಅದರ

ಜೊತೆಗೆ ಇವತ್ತು ಅನೇಕ ಜನರು ಸಮಸ್ಯೆಯ ಸುಳಿಯಲ್ಲಿ ಸಿಲುಕಿದ್ದಾರೆ. ಇದು ಸತ್ಯ, ಇವತ್ತು ಪೊಲೀಸರ ಏಟಿನಿಂದ ಕೆಲವು ಜನರಿಗೆ ಗಾಯವಾಗಿದೆ, ತೊಂದರೆಯಾಗಿದೆ. ಅದರ ಜೊತೆಗೆ ಪುಟ್ಟಪ್ಪ ಹೊನ್ನತ್ತಿ ಎನ್ನುವವರು ಬೆಂಗಳೂರಿನ ಅಸ್ಪತ್ರೆಯಲ್ಲಿ ನರಳುತ್ತಿದ್ದಾರೆ. ಅವರು ತುಂಬಾ ಸಮಸ್ಯೆಯಲ್ಲಿದ್ದಾರೆ. ಆ ರೀತಿ ಸಮಸ್ಯೆಯಲ್ಲಿ ಇರುವವರಿಗೆ ಇನ್ನು ಹೆಚ್ಚಿನ ಪರಿಹಾರವನ್ನು ಸರ್ಕಾರ ಕೊಡಬೇಕೆಂದು ನಾನು ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ಬಿ.ಸಿ.ಪಾಟೀಲ್ ರವರು ಮಾತನಾಡುವಂಥಾ ಸಂದರ್ಭದಲ್ಲಿ ನೇರವಾಗಿ ಶಾಸಕರು ಇದ್ದಂಥ ಸಂದರ್ಭದಲ್ಲಿ ಬಸ್ಸಿನ ಟೈರ್‌ಗೆ ಬೆಂಕಿಯನ್ನು ಹಚ್ಚಿ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದರೆಂಬ ಮಾತನ್ನು ಹೇಳುತ್ತಿದ್ದರು. ಇದು ಸತ್ಯಕ್ಕೆ ದೂರವಾಗಿರುವಂಥಾ ಮಾತು, ಸುಳ್ಳನ್ನು ಸತ್ಯದ ರೂಪದಲ್ಲಿ ಪರಿವರ್ತನೆ ಮಾಡುವಂಥಾ ಕಲೆಯನ್ನು ಬಿ.ಸಿ.ಪಾಟೀಲ್ ರವರು ಪಡೆದಿದ್ದಾರೆಂದು ನಾನು ಭಾವಿಸಿದ್ದೇನೆ.

ಶ್ರೀ ಬಿ.ಸಿ. ಪಾಟೀಲ್: Photograph ಇದೆ. ಅಲ್ಲಿ ಟೈರ್ ಗೆ ಬೆಂಕಿ ಹಚ್ಚಿದ್ದು ಅದರಲ್ಲಿ ಇದೆ.

ಶ್ರೀ ನೆಹರೂ ಓಲೆಕಾರ್ ಚನ್ನಬಸಪ್ಪ: Photo copyಗಳು ಇವೆ. ನಾವು ಏನು ಪ್ರತಿಭಟನೆ ಮಾಡುವುದಕ್ಕೆ ಅಲ್ಲಿಗೆ ಹೋಗಿದ್ದೆವು. ಅಲ್ಲಿ ಏನು ಘಟನೆ ನಡೆಯುತ್ತಿತ್ತು, ಟೈರ್ ಗೆ ಬೆಂಕಿ ಹಚ್ಚುವಂಥಾ ಸಂದರ್ಭದಲ್ಲಿ ಅಲ್ಲಿ ಓಡುತ್ತಿರುವಂಥಾ ಸಂದರ್ಭದಲ್ಲಿ ತೆಗೆದಿರುವಂಥ Photo copyಗಳು ಆಗಿವೆ. ನಮ್ಮ ಸರ್ಕಾರ ಈಗಾಗಲೇ ನ್ಯಾಯಂಗ ತನಿಖೆಗೆ ಇವತ್ತು ಆದೇಶವನ್ನು ಹೊರಡಿಸಿದೆ. ನ್ಯಾಯಾಂಗ ತನಿಖೆ ಮಾಡಿದಾಗ ವಾಸ್ತವಾಂಶ ಏನೆಂಬುದು ಗೊತ್ತಾಗುತ್ತದೆ. ಆ ಸಂದರ್ಭದಲ್ಲಿ ಮಾಡಿರುವಂಥಾ ಅನೇಕ ವಿಚ್ಛಿದ್ರಕಾರಕ ಶಕ್ತಿಗಳು ಇಲ್ಲವೆಂದು ನಾನು ಹೇಳುವುದಿಲ್ಲ. ಅನೇಕ ಜನ ಕಿಡಿಗೇಡಿಗಳು ಮದ್ಯಪಾನವನ್ನು ಮಾಡಿ, ಅವತ್ತು ಪೊಲೀಸ್ ವ್ಯಾನ್ ಮೇಲೆ ಕಲ್ಲನ್ನು ಎಸೆಯುವುದನ್ನು ಹಾಗೂ ಎಸೆಯುವುದನ್ನು ಹಾಗೂ ಪೊಲೀಸರ ಬಂದೂಕನ್ನು ಕಸಿದುಕೊಂಡಿದ್ದನ್ನು ಸಹಿ ಆ ವಿಡಿಯೋ ಕ್ಯಾಮೆರಾದಲ್ಲಿ ಸೆರೆ ಹಿಡಿಯಲಾಗಿದೆ. ಪೊಲೀಸರನ್ನು ಬೆನ್ನಟ್ಟಿಸಿಕೊಂಡು ಹೋಗಿ ಆ ಪೊಲೀಸರಿಂದ ಬಂದೂಕನ್ನು ಕಸಿದುಕೊಂಡು, ಆ ಬಂದೂಕಿನೊಂದಿಗೆ ಪೊಲೀಸರನ್ನೇ ಬೆನ್ನಟ್ಟಿರುವಂಥಾದ್ದನ್ನು ಸಹ ವಿಡಿಯೋದಲ್ಲಿ ಸೆರೆ ಹಿಡಿದಿದ್ದಾರೆ. ಆ ಕಾರಣದಿಂದ ಈ ಒಂದು ಘಟನೆ ಏನು ನಡೆದಿದೆ. ಅದರ ವಾಸ್ತವಾಂಶ ಏನೆಂಬುದನ್ನು ಬಯಲಿಗೆಳೆಯಬೇಕೆಂದರೆ, ನಾವು ಆ ವಿಡಿಯೋ ಚಿತ್ರೀಕರಣವನ್ನು ರಾಜ್ಯದ ಜನತೆಗೆ

VOL. 2, F, 18

ತೋರಿಸಬೇಕೆಂದು ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ವ್ಯಾನ್ ನಲ್ಲಿ 22 ಜನ ರಿಸರ್ವ್ ಪೊಲೀಸ್ ಇದ್ದರು. ಆ 22 ಜನ ರಿಸರ್ವ್ ಪೊಲೀಸ್ ವ್ಯಾನ್ ಒಳಗೆ ಇದ್ದಂಥ ಸಂದರ್ಭದಲ್ಲಿ ಅವರ ಗಾಡಿಗೆ ಕಲ್ಲನ್ನು ಹೊಡೆಯುವುದರ ಜೊತೆಗೆ ಅವರು ಹೊರಗಡೆಗೆ ಬರದ ಹಾಗೆ ಆ ಗಾಡಿಯ ಚಿಲಕವನ್ನು ಹಾಕಿ, ಅದಕ್ಕೆ ಕಟ್ಟಿಗೆಯನ್ನು ಬಡಿಯುವಂಥಾ ಕೆಲಸವನ್ನು ಮಾಡಿದರು. ಅವರು ಕಟ್ಟಿಗೆಯನ್ನು ಬಡಿದ ನಂತರ, ಡೀಸೆಲ್‌ಅನ್ನು ತಂದು ಬೆಂಕಿಯನ್ನು ಹಚ್ಚುವಂಥ ಪ್ರಯತ್ನವನ್ನು ಮಾಡಿದಾಗ ಆ ಪೊಲೀಸರ ರೋಧನ ಕೇಳಬೇಕಾಗಿತ್ತು. ಅಲ್ಲಿದ್ದಂತಹ ಜನರು ಹೇಳುತ್ತಿದ್ದರು, ಆ ಪೊಲೀಸರು ನಮ್ಮನ್ನು ಹೊಡೆಯಬೇಡಿ. ನಾವು ನಿಮ್ಮ ಅಣ್ಣ ತಮ್ಮಂದಿರಾಗಿ ಇರುತ್ತೇವೆ. ನಿಮ್ಮ ಮಕ್ಕಳ ರೀತಿಯಲ್ಲಿರುತ್ತೇವೆ. ನಮ್ಮ ಹೆಂಡತಿ, ಮಕ್ಕಳು ಸಾಯುತ್ತಿದ್ದಾರೆನ್ನುವಂಥಾ ಕೂಗನ್ನು ಹಾಕುತ್ತಿದ್ದಾರೆಂಬ ವಿಚಾರವನ್ನು ಪ್ರತ್ಯೇಕದರ್ಶಿಗಳು ಇವತ್ತಿನ ದಿವಸ ಹೇಳುತ್ತಿದ್ದಾರೆ. ಅದು ತನಿಖೆಯಿಂದ ಬಯಲಿಗೆ ಬರುತ್ತದೆ. ಇದು ಬಯಲಿಗೆ ಬಂದ ನಂತರ ಬಿ.ಸಿ. ಪಾಟೀಲ್‌ರವರು ಏನು ಹೇಳುತ್ತಾರೆಂಬುದನ್ನು ಕಾದು ನೋಡೋಣ. ಇವತ್ತು ಅವರು ಏನು ಮಾತನಾಡುತ್ತಿದ್ದಾರೆ. ಅದು ಸೂಚ್ಯವಾದುದಲ್ಲವೆಂಬ ಮಾತನ್ನು ಇನ್ನೊಮ್ಮೆ ಸಭೆಯ ಗಮನಕ್ಕೆ ತರಬಯಸುತ್ತಾ, ಇವತ್ತು ಹಾವೇರಿ ಜಿಲ್ಲೆಯಲ್ಲಿ ಏನು ಘಟನೆಯಾಗಿದೆ. ಅದು ಆಗಬಾರದಾಗಿತ್ತು, ಈ ಆಗಬಾರದಂಥ ಘಟನೆಗೆ ಕೆಲವು ವಿಚ್ಛಿದ್ರಕಾರಿ ಶಕ್ತಿಗಳೇ ಕಾರಣವೆಂದು ನಾನು ಮತ್ತೊಮ್ಮೆ ಪುನರುಚ್ಚರಿಸುತ್ತೇನೆ. ಆ ಕಾರಣದಿಂದ ಇವತ್ತು ಆ ವಿಡಿಯೋ ಕ್ಲಾಸೆಟ್‌ನ ಮೂಲಕ ಇವತ್ತು ಏನು ವಿಚ್ಛಿದ್ರಕಾರಿಯಾದ ಕೆಲಸವನ್ನು ಮಾಡಿದ್ದಾರೆ, ಬೆಂಕಿಯನ್ನು ಹಚ್ಚುವಂಥಾ ಕೆಲಸವನ್ನು ಏನು ಮಾಡಿದ್ದಾರೆ, ಪೊಲೀಸರ ಬಂದೂಕನ್ನು ಕಸಿದುಕೊಳ್ಳುವಂಥಾ ಕೆಲಸವನ್ನು ಏನು ಮಾಡಿದ್ದಾರೆ. ಪೊಲೀಸರಿಗೆ ಬೆಂಕಿಯನ್ನು ಹಚ್ಚುವಂಥಾ ಕೆಲಸವನ್ನು ಏನು ಮಾಡುತ್ತಿದ್ದರೋ, ಅಂಥವರನ್ನು ಪೊಲೀಸರು arrest ಮಾಡುತ್ತಿಲ್ಲ ಆದರೆ ಅಮಾಯಕರನ್ನು arrest ಮಾಡುತ್ತಿದ್ದಾರೆ. ಅದರ ಗಲಾಟೆಯಲ್ಲಿ ಕೆಲವು ಜನ ಅಮಾಯಕರು ಸಹ ಸಿಕ್ಕಿದ್ದಾರೆ. ಸಿಕ್ಕಿರುವಂಥ ಅಮಾಯಕರ ಬಗ್ಗೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ನಾವು ಈಗಾಗಲೇ ಗೃಹ ಮಂತ್ರಿಗಳೀಗೆ ವಿನಂತಿಯನ್ನು ಮಾಡಿಕೊಂಡಿದ್ದೇವೆ. ಅಂಥ ಅಮಾಯಕರನ್ನು ಕೂಡಲೇ ಬಿಡುಗಡೆ ಮಾಡುವಂಥ ಕೆಲಸವನ್ನು ಮಾಡಿಸಬೇಕೆಂದು ನಾನು ವಿನಂತಿ ಮಾಡಿಕೊಂಡಿದ್ದೇನೆ.

ಮಾಜಿ ಮುಖ್ಯಮಂತ್ರಿಗಳಾಗಿರುವಂಥ ಕುಮಾರಸ್ವಾಮಿಯವರು ಗ್ರಾಮ ವಾಸ್ತವ್ಯದ ಬಗ್ಗೆ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಹಿಂದೆ ಅವರು ಆ ರೀತಿ ಗ್ರಾಮ ವಾಸ್ತವ್ಯವನ್ನು ಮಾಡುವಂಥ ಸಂದರ್ಭದಲ್ಲಿ ಹಿಂದಿನ ಬ್ಯಾಡಗಿ ಕ್ಷೇತ್ರದ ಕಾಕೋಳು

ಗ್ರಾಮದಲ್ಲಿ ಸಹ ಗ್ರಾಮ ವಾಸ್ತವ್ಯವನ್ನು ಮಾಡಿದ್ದರು. ಆ ಗ್ರಾಮಕ್ಕೆ ಅವರು ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಅಲ್ಲಿನ ಸಮಸ್ಯೆಗಳಿಗೆ ಸ್ಪಂದನ ಮಾಡುತ್ತೇನೆ ಎನ್ನುವ ಮಾತುಗಳನ್ನು ಹೇಳಿದಾಗ, ಅಂದು ಬ್ಯಾಡಗಿ ಕ್ಷೇತ್ರದ ಶಾಸಕನಾಗಿದ್ದಂಥ ನಾನು ಅವತ್ತು ಎರಡೇ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೆ. ನಾವು ಹೆಚ್ಚು ಬೇಡಿಕೆಗಳನ್ನಿಟ್ಟು ಅವುಗಳ್ಯಾವುವೂ ಈಡೇರಲಿಲ್ಲ ಎನ್ನುವಂಥಾದ್ದು ಬೇಡ, ಈ ಗ್ರಾಮಕ್ಕೆ ಬೇಕಾಗಿರುವ ಎಡರು ಬೇಡಿಕೆಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡುತ್ತೇನೆಂದು ನನ್ನ ಅಂದಿನ ಭಾಷಣದಲ್ಲಿ ಹೇಳಿದ್ದೆ. ಮೊದಲನೆಯದು, ಆ ಗ್ರಾಮ ಅತ್ಯಂತ ದೊಡ್ಡ ಗ್ರಾಮವಾಗಿದ್ದು, ಬಡ ಜನತೆ ಇರುವ ಆ ಗ್ರಾಮಕ್ಕೆ ಒಂದು ಆಸ್ಪತ್ರೆಯ ಅವಶ್ಯಕತೆ ಇದೆ, ಈ ಗ್ರಾಮದಲ್ಲಿ ಅತ್ಯಂತ ಹಿಂದುಳಿದಂಥ ಮಕ್ಕಳಿದ್ದಾರೆ. ಅವಿದ್ಯಾವಂತರಿದ್ದಾರೆ,

(ಶ್ರೀ ಎನ್.ಯೋಗೀಶ್ ಭಟ್‌ರವರು ಅಧ್ಯಕ್ಷ ಪೀಠದಲ್ಲಿದ್ದರು)

ಚೇರ್ಮನ್ (ಶ್ರೀ ಎನ್.ಯೋಗೀಶ್ ಭಟ್):– ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಪ್ರಸ್ತಾಪ ಮಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ:– ಸನ್ಮಾನ್ಯ ಅಧ್ಯಕ್ಷರೇ, ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುತ್ತಿರುವಾಗ ವಿಚಾರ ಎಲ್ಲಿಗೋ ಹೋಗುತ್ತಿದೆ. ಇವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಹೇಳಲಿ.

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿನಗರ):– ಅವರು ಮಾತನಾಡುತ್ತಿರುವಾಗ ನೀವೇಕೆ ಮಧ್ಯದಲ್ಲಿ ಮಾತನಾಡುತ್ತೀರಿ.

ಶ್ರೀ ಹೆಚ್.ಸಿ.ಬಾಲಕೃಷ್ಣ– ನಾನು ಅಧ್ಯಕ್ಷರನ್ನು ಕೇಳುತ್ತಿದ್ದೇನೆ. ಇದೇನು ರಾಜ್ಯಪಾಲರ ಭಾಷಣದ ಮೇಲೆ ಭಾಷಣವೋ ಅಥವಾ ರಸಗೊಬ್ಬರದ ಮೇಲೆ ಭಾಷಣವೋ?

(ಗೊಂದಲ)

ಚೇರ್ಮನ್:– ತಾವು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎಂ.ಶ್ರೀನಿವಾಸ್ (ರಾಜರಾಜೇಶ್ವರಿನಗರ):– ನಂತರ ಅವರು ಮಾತನಾಡಲಿ, ಇವರದು ಮುಗಿದ ಮೇಲೆ ಅವರಿಗೂ ತಾವು ಅವಕಾಶ ಕೊಡಿ.

(ಗೊಂದಲ)

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ಬಿ.ಸಿ.ಪಾಟೀಲರು ಮಾತನಾಡಿದಾಗ ನಾವು ಸುಮ್ಮನಿರಲಿಲ್ಲವೇ?

(ಗೊಂದಲ)

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ತಾವು ಕುಳಿತುಕೊಳ್ಳಿ. ಬೇರೆಯವರು ಮಾತನಾಡಿದರೆ ಚಪ್ಪಾಳೆ ತಟ್ಟುತ್ತೀರಿ, ನಾವು ಮಾತನಾಡಿದರೆ ಅಡ್ಡಿಪಡಿಸುತ್ತೀರಿ. ಈಗ ನಾವು ಸುಮ್ಮನೆ ಕುಳಿತುಕೊಳ್ಳಿ. ನೀವು ಆಮೇಲೆ ಮಾತನಾಡುವಿರಂತೆ.

(ಗೊಂದಲ)

ಚೇರ್ಮನ್:– ಓಲೇಕಾರ್‌ರವರೇ ತಾವು ಅಧ್ಯಕ್ಷರನ್ನು ಕುರಿತು ಮಾಡನಾಡಿ. ಚೇರ್‌ಅನ್ನು ಕುರಿತು ಮಾತನಾಡಿ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:– ನಾವು ಇಲ್ಲಿಗೆ ಸುಮ್ಮನೆ ಬಂದು ಕುಳಿತಿಲ್ಲ. 1983ರಿಂದ ನಾವೂ ಇಲ್ಲಿ ಕುಳಿತಿದ್ದೇವೆ. ಸದನದಲ್ಲಿ ಏನು ಮಾತನಾಡಬೇಕು ಎನ್ನುವುದು ನಮಗೆ ಗೊತ್ತಿದೆ. ಆದರೆ...

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:–ಅವರು ಕಾಂಗ್ರೆಸ್ ಪಕ್ಷದ ಶಾಸಕರಾಗಿದ್ದರೋ, ಬಿ.ಜೆ.ಪಿ. ಶಾಸಕರಾಗಿದ್ದಾರೋ ಎನ್ನುವುದು ದಯಮಾಡಿ ನಮಗೆ ಅರ್ಥಮಾಡಿಕೊಡಬೇಕು.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:– ಅವರು ಮಾತನಾಡುವಾಗ ನಾವು ಅಡ್ಡ ಬರುತ್ತಿಲ್ಲ. ಅವರ ಕ್ಷೇತ್ರದಲ್ಲಿ ಏನು ನಡೆಯುತ್ತಿದೆ ಅದನ್ನು ಅವರು ಹೇಳುತ್ತಿದ್ದಾರೆ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ನೀವು ಅರ್ಥಮಾಡಿಕೊಳ್ಳಿ, ಅಧ್ಯಕ್ಷರನ್ನು ಕೇಳಿ ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ:– ಹಿಂದಿನ ಶಾಸನಸಭೆಯಲ್ಲಿ ನೀವು ಕಾಂಗ್ರೆಸ್ ಶಾಸಕರಾಗಿದ್ದಿರೋ ಅಥವಾ ಬಿ.ಜೆ.ಪಿ. ಶಾಸಕರಾಗಿದ್ದಿರೋ ಎನ್ನುವುದು ನಮಗೆ

ಗೊತ್ತಾಗಬೇಕು.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ನಾನು ಬಿ.ಜೆ.ಪಿ. ಶಾಸಕ.

ಶ್ರೀ ಹೆಚ್.ಸಿ.ಬಾಲಕೃಷ್ಣ:–ಆಗ ಉಪಮುಖ್ಯಮಂತ್ರಿಗಳು ನಿಮ್ಮವರೇ ಇದ್ದರು, ಆರೋಗ್ಯ ಖಾತೆಯನ್ನು ನೀವೇ ಇಟ್ಟುಕೊಂಡಿದ್ದಿರಿ, ಆಸ್ಪತ್ರೆಗಳನ್ನೆಲ್ಲ ನೀವೇ ಹಂಚಿದ್ದೀರಿ.

(ಗೊಂದಲ)

ಚೇರ್ಮನ್:– ಪರಸ್ಪರ ಚರ್ಚೆಗೆ ಅವಕಾಶವಿಲ್ಲ. ತಾವು ಕುಳಿತುಕೊಳ್ಳಿ. ಬಾಲಕೃಷ್ಣರವರೇ, ತಾವು ಕುಳಿತುಕೊಳ್ಳಿ. ಓಲೇಕಾರ್‌ರವರೇ ಸಾಕಷ್ಟು ಸಮಯವಾಯಿತು. ನೀವು ಸಬ್ಜೆಕ್ಟ್‌ಗೆ ಸಂಬಂಧಪಟ್ಟದ್ದನ್ನು ಮಾತ್ರ ಚರ್ಚೆ ಮಾಡಿ. ಎರಡು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ಮಾನ್ಯ ಅಧ್ಯಕ್ಷರೇ, ಮಾಜಿ ಮುಖ್ಯಮಂತ್ರಿಗಳು ಕಾಕೋಳು ಗ್ರಾಮಕ್ಕೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ನಾನು ಕೇವಲ ಎರಡು ಬೇಡಿಕೆಗಳನ್ನು ಇಟ್ಟಿದ್ದೆ. ನಾವು ಹೆಚ್ಚು ಬೇಡಿಕೆಗಳನ್ನು ಇಡಲಿಕ್ಕೆ ತಯಾರಿಲ್ಲ. ಕೇವಲ ಎರಡು ಬೇಡಿಕೆಗಳನ್ನು ಇಟ್ಟಿದ್ದೇವೆ, ಅದರಲ್ಲಿ ಒಂದು, ಈ ಗ್ರಾಮಕ್ಕೆ ಒಂದು ಆಸ್ಪತ್ರೆಯನ್ನು ಕೊಡಿ. ಈ ಗ್ರಾಮದ ಜನ ಬಹಳ ಹಿಂದುಳಿದಂಥ ಜನರಾಗಿದ್ದು, ಬಡವರಾಗಿದ್ದಾರೆ. ಇಲ್ಲಿ ಬಹಳ ಹಿಂದುಳಿದಂಥ ವಿದ್ಯಾರ್ಥಿಗಳಿದ್ದಾರೆ, ಅವರಿಗೆ ಕಾಲೇಜಿಗೆ ಹೋಗಲಿಕ್ಕೆ ಬಹಳ ದೂರವಾಗುತ್ತಿದೆ. ಆದ್ದರಿಂದ ಒಂದು ಕಾಲೇಜನ್ನು ಕೊಡಿ. ಇವೆರಡನ್ನು ಮಾತ್ರ ಕೊಡಿ ಎಂದು ಕೇಳಿದಾಗ ಆಗಿನ ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳ ಹುರುಪಿನಿಂದ ಒಪ್ಪಿಕೊಂಡರು, ನೀವು ಕೇವಲ ಎರಡೇ ಎರಡು ಬೇಡಿಕೆಯನ್ನು ಸಲ್ಲಿಸಿಸದ್ದೀರಿ, ಇದ್ಯಾವ ಮಹಾ ದೊಡ್ಡದು, ಕೂಡಲೇ ಈಡೇರಿಸುತ್ತೇವೆ ಬಿಡಿ ಎಂದು ಒಪ್ಪಿಕೊಂಡರು. ನಾವು ಹತ್ತಾರು ಬಾರಿ ಅವರ ಕಛೇರಿಗೆ ಅಲೆದೆವು, ಮನೆಗಳಿಗೆ ಅಲೆದವು. ಹೀಗೆ ಅಲೆದರೂ ಸಹ ಯಾವುದೇ ರೀತಿಯಲ್ಲಿ ಅವುಗಳನ್ನು ಮಂಜೂರಾತಿ ಮಾಡಿ ಕೊಡಲಿಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ:– ಹಿಂದಿನ ಸರ್ಕಾರದಲ್ಲಿ ಆರೋಗ್ಯ ಮಂತ್ರಿಗಳು ಯಾರಾಗಿದ್ದರು ಎಂದು ದಯಮಾಡಿ ಅವರು ಹೇಳಬೇಕು. ಆರೋಗ್ಯ ಮಂತ್ರಿ ಯಾರಾಗಿದ್ದರು ಎಂದು ಶಾಸಕರು ಹೇಳಬೇಕು. ಎಲ್ಲೆಲ್ಲೋ ಅಲೆದಿರಿ. ನಿಮ್ಮ ಮಂತ್ರಿಗಳೇ ನಿಮಗೆ ಮಾಡಿಕೊಡದಿದ್ದರೆ ಇನ್ಯಾರು ಮಾಡಿಕೊಡುತ್ತಾರೆ ಸ್ವಾಮಿ?

ಚೇರ್ಮನ್:–ಬಾಲಕೃಷ್ಣರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಓಲೆಕಾರ್ ನೆಹರೂ ಚೆನ್ನಬಸಪ್ಪ:– ನೀವು ಆಮೇಲೆ ಮಾತನಾಡುವಿರಂತೆ. ನೀವು ಆ ಕಡೆ ಇದ್ದೀರಿ, ನಿಮಗೆ ಅವಕಾಶ ಸಿಗುತ್ತದೆ.

ಶ್ರೀ ಎಂ.ಪಿ.ರೇಣುಕಾಚಾರ್ಯ:– ಸಮ್ಮಿಶ್ರ ಸರ್ಕಾರದಲ್ಲಿ ಆರೋಗ್ಯ ಸಚಿವರಿರಬಹುದು ಅಥವಾ ಬೇರೆ ಯಾವುದೇ ಸಚಿವರಿರಬಹುದು. ಅವರ ಖಾತೆಯಲ್ಲಿ ಹಸ್ತಕ್ಷೇಪ ಮಾಡಿ Direction ಕೊಟ್ಟಂಥವರು ನಿಮ್ಮವರೇ.

ಚೇರ್ಮನ್:– ತಾವು ದಯವಿಟ್ಟು ಕುಳಿತುಕೊಳ್ಳಿ. ಅವರು ಮಾತನಾಡುತ್ತಿದ್ದಾರೆ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ನಾವು ಹೇಳುವುದನ್ನು ಕುಳಿತುಕೊಂಡು ಕೇಳಿ. ಆಮೇಲೆ ನೀವು ಮಾತನಾಡುವಿರಂತೆ. ಸನ್ಮಾನ್ಯ ಅಧ್ಯಕ್ಷರೇ, ಅದರ ಜೊತೆಗೆ ನಾನು ಇನ್ನೊಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ತಮ್ಮ ಅವಧಿಯಲ್ಲಿ ತಾವು ಎಷ್ಟು ಗ್ರಾಮ ವಾಸ್ತವ್ಯವನ್ನು ಮಾಡಿದ್ದೀರಿ? ಆ ರೀತಿ ಗ್ರಾಮ ವಾಸ್ತವ್ಯವನ್ನು ಮಾಡಿದಂಥ ಸಂದರ್ಭದಲ್ಲಿ ನಿಮಗೆ ಎಷ್ಟು ಅರ್ಜಿಗಳು ಬಂದಿವೆ, ಹಾಗೆ ಬಂದಿರುವಂಥ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳಿಗೆ ನೀವು ಪೂರಕವಾಗಿ ಕೆಲಸವನ್ನು ಮಾಡಿಕೊಟ್ಟಿದ್ದೀರಿ? ಎನ್ನೂ ಎಷ್ಟು ಅರ್ಜಿಗಳು ಬಾಕಿ ಇವೆ ಎನ್ನುವುದನ್ನು ತಿಳಿಸಬೇಕು. ಸನ್ಮಾನ್ಯ ಅಧ್ಯಕ್ಷರೇ, ಬಹಳ ಮಹತ್ವವಾದ ವಿಷಯವಿದು. ಇವರು ಗ್ರಾಮ ವಾಸ್ತವ್ಯವನ್ನು ಮಾಡಿ, ಲಕ್ಷಾಂತರ ಅರ್ಜಿಗಳನ್ನು ಪಡೆದು....

(ಗೊಂದಲ)

ಚೇರ್ಮನ್:– ಓಲೆಕಾರ್‌ರವರೇ, ಇನ್ನೊಂದು ಸಲ ಗ್ರಾಮ ವಾಸ್ತವ್ಯವದ ಬಗ್ಗೆಯೇ ಚರ್ಚೆಯನ್ನು ಮಾಡೋಣ. ಈಗ ತಾವು ಕುಳಿತುಕೊಳ್ಳಿ. ಗ್ರಾಮ ವಾಸ್ತವ್ಯದ ಬಗ್ಗೆ ವಿಶೇಷ ಚರ್ಚೆಯನ್ನು ಇಡೋಣ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:–ಮಾನ್ಯ ಅಧ್ಯಕ್ಷರೇ, ಇದೇನೆಂದು ನಮಗೆ ಅರ್ಥವಾಗುತ್ತಿಲ್ಲ. ಇವರು ಏನು ಮಾಡುತ್ತಿದ್ದಾರೆ, ಎಲ್ಲಿಗೆ ಹೋಗುತ್ತಿದ್ದಾರೆ ಒಂದೂ ಗೊತ್ತಾಗುತ್ತಿಲ್ಲ.

(ಗೊಂದಲ)

ಚೇರ್ಮನ್:– ಓಲೆಕಾರ್‌ರವರೇ, ತಾವು ಕುಳಿತುಕೊಳ್ಳಿ

(ಗೊಂದಲ)

ಚೇರ್ಮನ್:–ಈಗ ಹೆಚ್.ಡಿ.ರೇವಣ್ಣನವರು

(ಗೊಂದಲ)

ಶ್ರೀ ಎಂ.ಶ್ರೀನಿವಾಸ್;– ಮಾನ್ಯ ಮುಖ್ಯಮಂತ್ರಿಗಳಿಗೆ ಇವರು ಅರ್ಧ ಗಂಟೆ ಮಾತನಾಡಿದರು. ಆಗ ನಾವು ಸುಮ್ಮನೆ ಕುಳಿತುಕೊಳ್ಳಲಿಲ್ಲವೇ?

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ:– ಶ್ರೀನಿವಾಸ್ ಸಾಹೇಬರೇ, ಆಗ ಅವರದೇ ಸರ್ಕಾರವಿದ್ದುದು. ತೆಗೆಸಿ ನೋಡಿ, ಏನಾಗಿದೆ ಎಂದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:–ಅವರ ವಿಧಾನಸಭಾ ಕ್ಷೇತ್ರದ ಬಗ್ಗೆ ಅವರು ಮಾತನಾಡುತ್ತಿದ್ದಾರೆ.

(ಗೊಂದಲ)

ಚೇರ್ಮನ್:– ತಾವು ಕುಳಿತುಕೊಳ್ಳಿ. ಈಗ ಹೆಚ್.ಡಿ.ರೇವಣ್ಣನವರು. ನಾನು ರೇವಣ್ಣನವರನ್ನು ಕರೆದಿದ್ದೇನೆ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ನಡೆದಂಥ ಘಟನೆಯ ಬಗ್ಗೆ ನಾನು ಮಾಹಿತಿಯನ್ನು ಸದನದಲ್ಲಿ ಕೇಳಬೇಕೆಂದರೆ, ಇವರು ಮಧ್ಯದಲ್ಲಿ ಎದ್ದೆದ್ದು ಮಾತನಾಡುತ್ತಿದ್ದಾರೆ.

ಚೇರ್ಮನ್:– ಓಲೆಕಾರ್‌ರವರೇ ತಾವು conclude ಮಾಡಿ ಕುಳಿತುಕೊಳ್ಳಿ. ನಾನು ರೇವಣ್ಣನವರ ಹೆಸರನ್ನು ಕರೆದಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ನಾನು ಯೀಲ್ಡ್ ಆಗಿಲ್ಲ ಸ್ವಾಮಿ. ಇದು ನನ್ನ ಕ್ಷೇತ್ರದ ಸಮಸ್ಯೆ. ನನ್ನ ಜಿಲ್ಲೆಯ ಸಮಸ್ಯೆ ಇದು. ನನ್ನ ಜಿಲ್ಲೆಯ ಸಮಸ್ಯೆಯನ್ನು ನಾನು ಹೇಳಬೇಕು ಎಂದರೆ ಅಡ್ಡಿಪಡಿಸುತ್ತಿದ್ದಾರೆ. ಅವರು ಮಾತನಾಡುವಂಥ ಸಂದರ್ಭದಲ್ಲಿ

ನಾವು ಗಪ್‌ಚಿಪ್‌ಆಗಿ ಕುಳಿತಿದ್ದೆವು. ನಾವು ಯಾವುದೇ ಚಕಾರವನ್ನು ಎತ್ತಿಲ್ಲ.

(ಗೊಂದಲ)

ಚೇರ್ಮನ್:– ಓಲೆಕಾರ್‌ರವರೇ, ತಮ್ಮ ಸಮಯವಾಯಿತು, ತಾವು ಕುಳಿತುಕೊಳ್ಳಿ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ಇದ್ದ ವಿಚಾರವನ್ನು ಮಾತನಾಡಿದರೆ ಅವರಿಗೆ ಸಿಟ್ಟು ಬಂದಿದೆ.

ಚೇರ್ಮನ್:–ತಮ್ಮ ಸಮಯವಾಯಿತು, ತಾವು ಕುಳಿತುಕೊಳ್ಳಿ. ರೇವಣ್ಣನವರೇ ತಾವು ಪ್ರಾರಂಭ ಮಾಡಿ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:–ನಾವು ಮಾಹಿತಿಯನ್ನು ಕೇಳಿದೆವು ಎಂದ ಕೂಡಲೇ ಅವರು ಅಷ್ಟೊಂದು ಕೋಪಕ್ಕೆ ಏಕೆ ಬರಬೇಕು?

ಚೇರ್ಮನ್:– ಓಲೆಕಾರ್‌ರವರೇ, ಇನ್ನೂ ಚರ್ಚೆ ಮಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ. ಓಲೆಕಾರ್‌ರವರೇ ತಾವು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ಅವರು ಮಾತನಾಡುವಾಗ ನಾವು ಇದೇ ರೀತಿ ಮಾಡುತ್ತೇವೆ.

(ಗೊಂದಲ)

ಚೇರ್ಮನ್: ತಾವು ಮುಗಿಸಿ

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:–ಅವರು ಮಾತನಾಡುವಾಗ ನಾವೂ ಹೀಗೆ ಗಲಾಟೆ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ.ಶ್ರೀನಿವಾಸ್:–ಮುಖ್ಯಮಂತ್ರಿಗಳು ಹೆಣದ ಮೇಲೆ ಹಾರ ಹಾಕುವುದನ್ನು ಪ್ರಸ್ತಾಪ ಮಾಡಿದರು. ಮುಖ್ಯಮಂತ್ರಿಗಳು ಎಡಗೈನಲ್ಲಿ ಹಾರ ಹಾಕಿದರು ಎಂದು

ಮಾತನಾಡಿದರು. ಈಗ ಇವರು ತಮ್ಮ ಕ್ಷೇತ್ರದ ಬಗ್ಗೆ ಹೇಳುತ್ತಿದ್ದಾರೆ. ಅವರಿಗೆ ಅವಕಾಶ ಮಾಡಿಕೊಡಿ.

ಒಬ್ಬ ಮಾನ್ಯ ಸದಸ್ಯರು:– ನಿಯಮ 69ರ ಕೆಳಗೆ ಮಾತನಾಡುತ್ತಿರುವಂಥ ಸಂದರ್ಭದಲ್ಲಿ, ಗ್ರಾಮ ವಾಸ್ತವ್ಯದ ಬಗ್ಗೆ ಅವರು ಏಕೆ ಮಾತನಾಡಬೇಕಿತ್ತು?

(ಗೊಂದಲ)

ಚೇರ್ಮನ್:–ರೇವಣ್ಣನವರೇ, ಅವರು ಎರಡು ನಿಮಿಷದಲ್ಲಿ conclude ಮಾಡುತ್ತಾರೆ, ನಂತರ ತಾವು ಪ್ರಾರಂಭ ಮಾಡಿ. ಓಲೆಕಾರ್‌ರವರೇ ತಾವು ಎರಡು ನಿಮಿಷದಲ್ಲಿ conclude ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೇ, ನೆಹರೂ ಓಲೆಕಾರ್‌ರವರು ಹಾವೇರಿಯವರು. ಇದು ಅವರ ಕ್ಷೇತ್ರದಲ್ಲಿ, ಅವರ ಜಿಲ್ಲೆಯಲ್ಲಿ ನಡೆದಿರತಕ್ಕಂಥ ಘಟನೆ. ಅವರು ತಮ್ಮ ಭಾವನೆಗಳನ್ನು, ವಸ್ತುಸ್ಥಿತಿಗಳನ್ನು ಹೇಳುತ್ತಿದ್ದಾರೆ. ಉಳಿದವರೆಲ್ಲ ಚರ್ಚೆ ಮಾಡಿದ ಆಧಾರದ ಮೇಲೆ ಅವರು ಒಳ್ಳೆಯ ರೀತಿಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ:–ಆ ವಿಷಯ ಚರ್ಚೆ ಮಾಡಲಿಕ್ಕೆ ರಾಜ್ಯಪಾಲರ ಭಾಷಣ ಇದೆ. ಅದರ ಮೇಲೆ ಚರ್ಚೆ ಮಾಡುವಾಗ ಅವರು ಈ ವಿಷಯವನ್ನು ಚರ್ಚೆ ಮಾಡಲಿ. ಈಗ ಏಕೆ ಚರ್ಚೆ ಮಾಡುತ್ತಿದ್ದಾರೆಂದು ನಗೆ ಗೊತ್ತಾಗುತ್ತಿಲ್ಲ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಬಂದಾಗ, ಚರ್ಚೆ ಮಾಡಿ ಅವರು ಕೇಳಲಿ. ಅವರಿಗೆ ಮಾಹಿತಿ ಬೇಕಾದರೆ, ನಾವು ಅಲ್ಲಿಗೆ ಹೋದಾಗ ಆ ಮಾಹಿತಿಗಳನ್ನು ಕೊಡುತ್ತೇವೆ.

ಚೇರ್ಮನ್:– ಬಾಲಕೃಷ್ಣರವರೇ, ಈಗ ಯಾವುದೇ ಚರ್ಚೆಗೆ ಹೋಗುವುದು ಬೇಡ. ಓಲೆಕಾರ್‌ರವರೇ ತಮಗೆ ಅವಕಾಶ ಕೊಡುತ್ತೇವೆ. ಎರಡು ನಿಮಿಷದಲ್ಲಿ conclude ಮಾಡಿ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ಮಾನ್ಯ ಅಧ್ಯಕ್ಷರೆ, ದಯವಿಟ್ಟು ಐದು ನಿಮಿಷ ಕೊಡಿ, conclude ಮಾಡುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೇ, ಇನ್ನೂ ನಾನೇ ಮುಖ್ಯಮಂತ್ರಿ

ಎಂದು ಅವರು ತಿಳಿದುಕೊಂಡಿದ್ದಾರೇನೋ ಗೊತ್ತಿಲ್ಲ. ನಿಮ್ಮವರೇ ಮುಖ್ಯಮಂತ್ರಿಗಳಿದ್ದಾರೆ. ನಿಮಗೆ ಏನು ಮಾಹಿತಿ ಬೇಕೋ ಅವರ ಹತ್ತಿರ ತಿರಿಸಕೊಳ್ಳಿ. ಎಷ್ಟು ಕೆಲಸ ಮಾಡಿದ್ದೇನೆ, ಎಷ್ಟು ಮಾಡಿಲಲ್ಲ, ಯಾವ ಯಾವ ಇಲಾಖೆಯಲ್ಲಿ...

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ನಾನು ಸರ್ಕಾರಕ್ಕೆ ಹೇಳುತ್ತಿರುವುದು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ:– ಅವರಿಗೆ ಕೇಳಿದರೆ ಸರಿ. ನನಗೆ ಹೇಳಿದ್ದಕ್ಕೇ ನಾನು ಮಾತನಾಡುತ್ತಿರುವುದು.

(ಗೊಂದಲ)

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:–ಮಾಹಿತಿ ಕೊಡಿ ಎಂದು ಸರ್ಕಾರಕ್ಕೆ ಹೇಳುತ್ತಿದ್ದೇನೆ. ನಾನು ನಿಮಗೆ ಹೇಳುತ್ತಿಲ್ಲ. ಮಾಹಿತಿಯನ್ನು ಸರ್ಕಾರ ಒದಗಿಸಲಿ ಎಂದೇ ಹೇಳುತ್ತಿದ್ದೇನೆ. ನನ್ನಲ್ಲಿ ಮಾಹಿತಿ ಇಲ್ಲ ಎಂದು ನೀವು ಹೇಳುತ್ತಿದ್ದೀರಲ್ಲ. ನಾನು ಇಲ್ಲಿಗೆ ಎರಡನೇ ಬಾರಿಗೆ ಆಯ್ಕೆಯಾಗಿ ಬಂದಿದ್ದೇನೆ.

ಚೇರ್ಮನ್:– ಓಲೆಕಾರ್‌ರವರೇ ನಿಮ್ಮ ಭಾವನೆಗಳನ್ನು ಎರಡೇ ನಿಮಿಷದಲ್ಲಿ conclude ಮಾಡಿ. ಇನ್ನು ಹೆಚ್ಚು ಅವಕಾಶ ಕೊಡುವುದಿಲ್ಲ. ಸಮಯವಾಯಿತು, ಎರಡು ನಿಮಿಷದಲ್ಲಿ ಹೇಳಿ.

ಶ್ರೀ ಓಲೆಕಾರ್ ನೆಹರೂ ಚನ್ನಬಸಪ್ಪ:– ಬೇರೆಯವರ ವಿಚಾರಗಳನ್ನು ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ಅವರಿಗೆ ಬಹಳ ಖುಷಿಯಾಗುತ್ತದೆ. ಆದರೆ ನಾವು ಅವರ ವಿಚಾರಗಳನ್ನು ಪ್ರಸ್ತಾಪ ಮಾಡಬೇಕು ಎಂದು ಅಂದ ಕೂಡಲೇ ಅವರಿಗೆ ಬಹಳ ಕಸಿವಿಸಿಯಾಗುತ್ತದೆ, ಮುಜುಗರವಾಗುತ್ತದೆ. ನಮ್ಮ ಮುಖ್ಯಮಂತ್ರಿಗಳ ಬಗ್ಗೆ ಇವತ್ತಿನ ದಿವಸ ಅವರು ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಆಗ ನಾವು ಚಕಾರ ಎತ್ತಲಿಲ್ಲ. ನಿಮ್ಮ ಕಾಲದಲ್ಲಿಯೇ ಬಹಳ ಸಲ ಗೋಲಿಬಾರ್ ಆಗಿದೆ. ಬಹಳ ಜನ ರೈತರು ನಿಮ್ಮ ಆಡಳಿತದ ಕಾಲದಲ್ಲಿ ಸತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಸತ್ತಿದ್ದಾರೆ. ಆ ಲಿಸ್ಟ್ ಎಲ್ಲ ಇದೆ. ಯಾರ್ಯಾರ ಕಾಲದಲ್ಲಿ ಏನೇನಾಗಿದೆ ಎನ್ನುವ ಸಂಪೂರ್ಣ ಮಾಹಿತಿ ಇದೆ. ಆ ಮಾಹಿತಿಯಲ್ಲಿರುವುದನ್ನು ಬಯಲಿಗೆ ಎಳೆಯಬೇಕಾಗಿದೆ.

ಹೆಚ್.ಡಿ.ಕುಮಾರಸ್ವಾಮಿ:– ಮಾನ್ಯ ಛೇರ್ಮನ್‌ರವರೆ, ಅವರಲ್ಲಿ ಮಾಹಿತಿ ಇದ್ದರೆ

ಅದನ್ನು ತಮ್ಮ ಮುಂದೆ ಇಡುವುದಕ್ಕೆ ಹೇಳಿ. ಮಾತನಾಡಬೇಕಾದರೆ ಏನಾದರೂ ಸ್ವಲ್ಪ ಮಾಹಿತಿ ಇಟ್ಟುಕೊಂಡು ಮಾತನಾಡಿ. ಅಂಥದೇನಾದರೂ ಮಾಹಿತಿ ಇದ್ದರೆ ಸದನದ ಮುಂದೆ ಇಡಿ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:– ನಾನೂ ಒಬ್ಬನೇ ಮಾತನಾಡುತ್ತಿದ್ದೇನೆ. ನಾನು ಮಾತನಾಡಿ ಮುಗಿಸುವವರೆಗೆ ಸುಮ್ಮನೆ ಕುಳಿತುಕೊಳ್ಳಿ ಎಂದು ನಿಮ್ಮ ಕಡೆಯವರಿಗೆ ಹೇಳಿ.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್:– ಮಾನ್ಯ ಛೇರ್ಮನ್‌ರವರೆ, ಗೋಲಿಬಾರ್ ಬಗ್ಗೆ ಬಹಳ ಮಹತ್ವದ ಚರ್ಚೆ ನಡೆಯುತ್ತಿದೆ.(ಗೊಂದಲ) ನೇರವಾಗಿ ಗೋಲಿಬಾರ್ ಬಗ್ಗೆ ಮಾತನಾಡಲಿ.

ಶ್ರೀ ನೆಹರೂ ಓಲೆಕಾರ್ ಚನ್ನಬಸಪ್ಪ:– ನಾವೂ ಗೋಲಿಬಾರ್ ಬಗ್ಗೆ ಮಾತನಾಡಬೇಕು. ಹೆಲಿಕಾಪ್ಟರ್‌ನಲ್ಲಿ ಹತ್ತಾರು ಬಾರಿ ಅಡ್ಡಾಡಿದ್ದರ ಬಗ್ಗೆ ಅವರು ಮಾತನಾಡಿದರು. ಮುಖ್ಯಮಂತ್ರಿಗಳು ಹಾಗೆ ಹೇಳಿದ್ದಾರೆ, ಹೀಗೆ ಹೇಳಿದ್ದಾರೆ ಎನ್ನುವಂಥದ್ದನ್ನು ಅವರು ಹೇಳಿದರು. ನೀವು ಏನೇನು ಹೇಳುತ್ತೀರಿ, portfolio ಅವಶ್ಯಕತೆ ಇಲ್ಲ ಸ್ವಾಮಿ. ನಾನು ವಾಸ್ತವಾಂಶ ಹೇಳಿದರೆ ನಿಮಗೇಕೆ ಕಸಿವಿಸಿಯಾಗುತ್ತದೆ? ದಯವಿಟ್ಟು ಶಾಂತ ರೀತಿಯಿಂದ ಕುಳಿತು ಕೇಳಿ. ಏನು ನಡೆದಿದೆ, ಏನಾಗುತ್ತಿದೆ ಎನ್ನುವುದನ್ನು ತಾವೂ ಸಹ ಅರ್ಥಮಾಡಿಕೊಳ್ಳಿ. ಏನು ಮಾಡುತ್ತಿದ್ದಾರೆಂದು ನಿಮ್ಮನ್ನು ರಾಜ್ಯದ ಜನತೆ ನೋಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್:– ಕಳೆದ 23 ದಿವಸಗಳಲ್ಲಿ ಏನೇನು ನಡೆದಿದೆ, ಆಗಿದೆ ಎಂದು ಜನ ನೋಡಿಬಿಟ್ಟಿದ್ದಾರೆ.

(ಗೊಂದಲ)

ಶ್ರೀ ಬಂಡೆಪ್ಪ ಕಾಶಂಪೂರ್:– ಕಳೆದ 22 ದಿವಸಗಳಲ್ಲಿ ರಾಜ್ಯದ ಜನತೆ ಎಲ್ಲವನ್ನೂ ನೋಡುತ್ತಿದ್ದಾರೆ. ಅದನ್ನೂ ಮರೆಯಬೇಡಿ.

(ಗೊಂದಲ)

ಶ್ರೀ ನೆಹರೂ ಓಲೆಕಾರ್ ಚನ್ನಬಸಪ್ಪ:– ಕಳೆದ 20 ತಿಂಗಳಲ್ಲಿ ಏನು ಮಾಡಿದ್ದೀರೆಂದು ನಿಮ್ಮದೂ ಸಹ ಈ ರಾಜ್ಯದ ಜನತೆಗೆ ಗೊತ್ತಿದೆ. ಹೇಗೆ ಕೈಕೊಟ್ಟಿರಿ, ಏನು ಮಾಡಿದ್ದೀರೆಂದು ಗೊತ್ತಿಲ್ಲವೇ?

(ಗೊಂದಲ)

ಛೇರ್ಮನ್:– ಓಲೇಕಾರ್‌ರವರೆ, ಬೇಗ conclude ಮಾಡಿ.

ಶ್ರೀ ಆರ್. ಧ್ರುವನಾರಾಯಣ್:– ಮಾನ್ಯ ಛೇರ್ಮನ್‌ರವರೆ, ಕಳೆದ 22 ದಿವಸಗಳಲ್ಲಿ 12 ರೈತರ ಆತ್ಮಹತ್ಯೆ ಆಗಿದೆ. ದಾಖಲೆ ಇದೆ. ಇದನ್ನು ದಾಖಲೆ ಮಾಡಬೇಕು. ಗೋಲಿಬಾರ್ ನಡೆದಿದೆ. ಇದು ದಾಖಲೆ (ಗೊಂದಲ) ಈ ದಾಖಲೆಯನ್ನು ಯಾರೂ ಕೂಡ ಮರೆಯುವುದಕ್ಕೆ ಆಗುವುದಿಲ್ಲ.

(ಗೊಂದಲ)

ಛೇರ್ಮನ್:– ಧ್ರುವನಾರಾಯಣ್‌ರವರೆ, ತಮಗೆ ಅವಕಾಶ ಕೊಟ್ಟಾಗ ಮಾತನಾಡಿ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:–ಸನ್ಮಾನ್ಯ ಛೇರ್ಮನ್‌ರವರೆ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾಜಿ ಮುಖ್ಯಮಂತ್ರಿಗಳು ಗ್ರಾಮ ವಾಸ್ತವ್ಯವನ್ನು ಮಾಡುವಂಥ ಸಂದರ್ಭದಲ್ಲಿ...

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್:– ಮಾನ್ಯ ಛೇರ್ಮನ್‌ರವರೆ, ಇಲ್ಲಿ ಗೋಲಿಬಾರ್ ವಿಚಾರವಾಗಿ ಚರ್ಚೆ ನಡೆಯುತ್ತಿರುವುದು. ಇಲ್ಲಿ ಗ್ರಾಮ ವಾಸ್ತವ್ಯದ ಬಗ್ಗೆ ಚರ್ಚೆ ನಡೆಯುತ್ತಿಲ್ಲ. ಬಹಳ ಮಹತ್ವವಾದ ವಿಚಾರ ಇದೆ.

(ಗೊಂದಲ)

ಛೇರ್ಮನ್:– ಮಾನ್ಯ ಸದಸ್ಯರುಗಳು ದಯಮಾಡಿ ಕುಳಿತುಕೊಳ್ಳಿ. (ಗೊಂದಲ) ಓಲೇಕಾರ್‌ರವರೆ, ತಾವು conclude ಮಾಡಿ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:– ರೈತ ಸಮುದಾಯ ಅರ್ಜಿ ಕೊಟ್ಟಿದೆ.

ರೈತ ಸಮುದಾಯ ಅರ್ಜಿ ಕೊಟ್ಟಿದ್ದನ್ನು ಏನಾಯಿತು ಎಂದು ಕೇಳುವ ಹಕ್ಕು ನನಗೂ ಇದೆ. ನಾನೂ ಒಬ್ಬ ಪ್ರತಿನಿಧಿ. ಅದನ್ನು ಮೊಟಕುಗೊಳಿಸುವಂಥ ಹಕ್ಕ ನಿಮಗಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ:– ನಮ್ಮ ಮುಖ್ಯಮಂತ್ರಿಗಳು ಮಾಡದಿರುವುದನ್ನು ಅವರ ಮುಖ್ಯಮಂತ್ರಿಗಳು ಎಲ್ಲ ಮಾಡಿಕೊಡಲಿ ಸ್ವಾಮಿ. ಅದಕ್ಕೆ ನಮ್ಮದೇನೂ ತಕರಾರೂ ಇಲ್ಲ.

(ಗೊಂದಲ)

ಛೇರ್ಮನ್:– ಬಾಲಕೃಷ್ಣರವರೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಛೇರ್ಮನ್:– ಎಲ್ಲರೂ ಕುಳಿತುಕೊಳ್ಳಿ. ಓಲೇಕಾರ್‌ರವರೆ, ಸಮಯ ಆಯಿತು. conclude ಮಾಡಿ. ಇಲ್ಲದಿದ್ದರೆ bell ಹಾಕುತ್ತೇನೆ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:– ಈ ರಾಜ್ಯದಲ್ಲಿರುವಂಥ ಲಕ್ಷಾಂತರ ರೈತರು ಹಿಂದಿನ ಮುಖ್ಯಮಂತ್ರಿಗಳು ಗ್ರಾಮ ವಾಸ್ತವ್ಯ ಮಾಡಿದ ಸಂದರ್ಭದಲ್ಲಿ (ಗೊಂದಲ)...

ಶ್ರೀ ಬಿ.ಸಿ.ಪಾಟೀಲ್:– ಮಾನ್ಯ ಛೇರ್ಮನ್‌ರವರೆ, ದಯಮಾಡಿ ಗೋಲಿಬಾರ್ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆ ಹೊರತು ಬೇರೆ ವಿಷಯಕ್ಕೆ ಅವಕಾಶ ಕೊಡಬೇಡಿ.

(ಗೊಂದಲ)

ಛೇರ್ಮನ್:– ಎಲ್ಲರೂ ಕುಳಿತುಕೊಳ್ಳಿ. ಅವರಿಗೆ ಮಾತನಾಡುವ ಹಕ್ಕಿದೆ. (ಗೊಂದಲ) ತಾವೆಲ್ಲ ಕುಳಿತುಕೊಳ್ಳಿ. (ಗೊಂದಲ) ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ. (ಗೊಂದಲ) ಇಲ್ಲಿ ಅವರಿಗೆ ಮಾತನಾಡುವ ಹಕ್ಕಿದೆ. ತಾವು ಕುಳಿತುಕೊಳ್ಳಿ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:– ನಾನು ನನ್ನ ಮಾತನ್ನು ಪೂರ್ಣಗೊಳಿಸುವುದಕ್ಕೆ ಅವಕಾಶ ಕೊಡುತ್ತಿಲ್ಲ. ನಮ್ಮ ಬೇಡಿಕೆ, ಹಕ್ಕನ್ನು ಮಂಡಿಸಬಾರದೇ? ನಮ್ಮ ಮುಖ್ಯಮಂತ್ರಿಗಳ ಬಗ್ಗೆ, ನಮ್ಮ ಸರ್ಕಾರದ ಮಂತ್ರಿಗಳ ಬಗ್ಗೆ ಅವರೆಷ್ಟು ಅವಹೇಳನಕಾರಿಯಾಗಿ ಮಾತನಾಡಿದರೂ ಸಹ ಸುಮ್ಮನೆ ಕೈಕಟ್ಟಿಕೊಂಡು ನೋಡುತ್ತಾ ಕುಳಿತಿದ್ದೆವು. ಇವತ್ತು ಅರ್ಜಿಗಳೆಷ್ಟು ಬಂದಿದ್ದವು? ಅವು ಏನೇನಾದವು? (ಗೊಂದಲ)

ನಾನು ಹೆಚ್ಚೇನೂ ಕೇಳುತ್ತಿಲ್ಲ, ಆಪೇಕ್ಷೆ ಮಾಡುತ್ತಿಲ್ಲ. ನಾನು ಕೇಳುತ್ತಿರುವ ವಿಷಯವೇನೆಂದರೆ, ಅವರು ಗ್ರಾಮ ವಾಸ್ತವ್ಯ ಮಾಡಿದ ಸಂದರ್ಭದಲ್ಲಿ (ಗೊಂದಲ)....

ಶ್ರೀ ವಿ.ಮುನಿಯಪ್ಪ:– ನಿಯಮ 69ರ ಅಡಿಯಲ್ಲಿ ನಿಶ್ಚಿತವಾದ ವಿಚಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ನೀವು ಅನುವು ಮಾಡಿಕೊಟ್ಟಿದ್ದೀರಿ. ಅದಕ್ಕೆ ಸಂಬಂಧಪಟ್ಟಹಾಗೆ ಮಾತನಾಡಬೇಕು. ಸಂಬಂಧವಿಲ್ಲದ್ದನ್ನು ಮಾತನಾಡುವುದಕ್ಕೆ ಅವಕಾಶ ಕೊಡಬಾರದು.

(ಗೊಂದಲ)

ಛೇರ್ಮನ್:–ತಾವು ಕುಳಿತುಕೊಳ್ಳಿ. ಓಲೇಕಾರ್‌ರವರೆ, ಬೇಗ ಮುಗಿಸಿ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್:– ಗೌರವಾನ್ವಿತ ಸದಸ್ಯರು ಮಾತನಾಡುವಾಗ ಇವರು ಏಕೆ ತೊಂದರೆ ಕೊಡುತ್ತಾರೆ. ಅವರು ಮಾನಾಡಲಿ. ಅವರು ಮಾತನಾಡಿದ ಮೇಲೆ ಇವರೆಲ್ಲ ಏನು ಬೇಕೋ ಅದನ್ನು ಮಾತನಾಡಲಿ.

(ಗೊಂದಲ)

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:–ಆ ರೈತ ಸಮುದಾಯ ಕೊಟ್ಟ ಎಷ್ಟು ಅರ್ಜಿಗಳಿಗೆ ಮುಕ್ತಿ ದೊರಕಿದೆ ಎನ್ನುವುದನ್ನು ಈ ಸದನಕ್ಕೆ ತಿಳಿಸಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಎಷ್ಟೋ ಜನರು ಅರ್ಜಿಗಳನ್ನ ಕೊಟ್ಟು ಅಲೆದೂ ಅಲೆದೂ ಸುಸ್ತಾಗಿ ಯಾವುದೇ ಪರಿಹಾರವನ್ನು ಕಾಣದೇ ಅವರು ತಮ್ಮ ತಮ್ಮ ಹಳ್ಳಿಯಲ್ಲಿ ಸುಸ್ತಾಗಿ ಕುಳಿತಿದ್ದಾರೆ. ಇಂಥ ಪರಿಸ್ಥಿತಿಯನ್ನು ನೋಡಿದರೆ ಪುನಃ ವಾಸ್ತವ್ಯಕ್ಕೆ ಮುಖ್ಯಮಂತ್ರಿಗಳು ಬರುತ್ತಾರೆಂದರೆ, ಇವತ್ತು ಜನರಿಗೇನಾಗಿದೆಯೆಂದರೆ, ಮುಖ್ಯಮಂತ್ರಿಗಳು ವಾಸ್ತವ್ಯ ಮಾಡುತ್ತಾರೆಂದರೆ, ನಾವು ಅರ್ಜಿ ಕೊಟ್ಟು ಬಂದರೆ ಅದರ ಹಿಂದೆ ಅಲೆದಾಡಬೇಕಾಗುತ್ತದೆಯೇ ಹೊರತು ಕೆಲಸವೇನೂ ಆಗುವುದಿಲ್ಲವೆಂಬ ಭ್ರಮೆ ಇವತ್ತು ಮೂಡುವಂತಾಗಿದೆ. ಅದಕ್ಕೆ ಇಂಥ ಪರಿಸ್ಥಿತಿ ಹಿಂದಿನ ಸರ್ಕಾರದಲ್ಲಿ ಬಂದಿರುವುದರಿಂದ ಅಂಥ ಪರಿಸ್ಥಿತಿ ಮುಂದಿನ ದಿನಗಳಲ್ಲಾಗಬಾರದೆನ್ನುವಂಥ ಚಿಂತನೆ ನಮ್ಮದು. ಇದನ್ನು ಮಾನ್ಯ ಛೇರ್ಮನ್‌ರವರ ಗಮನಕ್ಕೆ ತರುತ್ತಿದ್ದೇನೆಯೇ ಹೊರತು ಬೇರೇನಿಲ್ಲ. ಸರ್ಕಾರ ನ್ಯಾಯಾಂಗ ತನಿಖೆಗೆ ಆದೇಶ ಮಾಡಿದೆ. ತಾವು ನಿಷ್ಪಕ್ಷಪಾತವಾದ ತನಿಖೆಯನ್ನು ಮಾಡಿಸಿ. ಯಾರು ತಪ್ಪತಸ್ಥರಿದ್ದಾರೆ, ಬಿ.ಸಿ. ಪಾಟೀಲ್‌ರವರು ಸುಳ್ಳು ಹೇಳುತ್ತಾರಲ್ಲ ಅಂಥವರನ್ನು ಬಿಟ್ಟು..

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್:– ಫೋಟೋ ಇದೆ. ನೀವು ಪುನಃ ಪುನಃ ಹೇಳುವುದಕ್ಕೆ ಬರಬೇಡಿ.

(ಗೊಂದಲ)

ಛೇರ್ಮನ್:–ಯಾವುದೇ ವೈಯಕ್ತಿಕ ಆಪಾದನೆಗಳನ್ನು ಮಾಡುವ ಹಾಗಿಲ್ಲ. (ಗೊಂದಲ) ಆ ರೀತಿ ಇನ್ಯಾವುದೇ ವೈಯಕ್ತಿಕ ಆಪಾದನೆಗಳು ಬಂದರೆ ಅದನ್ನು ಕಡತದಿಂದ ತೆಗೆಯುವುದಕ್ಕೆ ಹೇಳುತ್ತೇನೆ.

(ಗೊಂದಲ)

ಶ್ರೀ ದಿನೇಶ್ ಗೂಂಡುರಾವ್:– ಆ ವೈಯಕ್ತಿಕ ಹೇಳಿಕೆಯನ್ನು ಕಡತದಿಂದ ತೆಗೆಯಬೇಕಾಗುತ್ತದೆ.

ಛೇರ್ಮನ್:– ಈ ಆಪಾದನೆಗೆ ಸಂಬಂಧಪಟ್ಟಂತೆ ನಾನು ಯೋಚನೆ ಮಾಡುತ್ತೇನೆ, ತಾವು ಕುಳಿತುಕೊಳ್ಳಿ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:– ಮಧ್ಯೆ ಮಧ್ಯೆ ಮಾತನಾಡುವುದಕ್ಕೆ ಹೋಗಬೇಡಿ. ಇದು ಸದನ. ನೀವು ಮಾತನಾಡುವಾಗ ನಾವು ಸುಮ್ಮನೆ ಕುಳಿತಿದ್ದೆವು. ಆದ್ದರಿಂದ, ನೀವು ಮಧ್ಯೆ ಮಧ್ಯೆ ಎದ್ದು ತಕರಾರು ಮಾಡಬೇಡಿ. ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ನಿಷ್ಪಕ್ಷಪಾತವಾದ ತನಿಖೆ ಮಾಡಿಸಿ. ತಪ್ಪಿತಸ್ಥರು ಯಾರೇ ಇರಲಿ ಅವರಿಗೆ ಈ ರಾಜ್ಯದಲ್ಲಿ ಶಿಕ್ಷೆಯಾಗುವಂಥದ್ದಾಗಬೇಕು. ಇನ್ನು ಮುಂದೆ ಯಾರೂ ತಪ್ಪನ್ನೆಸಗದಂಥ ಕೆಲಸವಾಗಲಿ. ತಮ್ಮ ಘನ ಅಧ್ಯಕ್ಷತೆಯಲ್ಲಿ, ಈ ಸರ್ಕಾರದಿಂದಾಗಲಿ ಎನ್ನುವ ಚಿಂತನೆ ಇದೆ, ನಮ್ಮ ಸರ್ಕಾರದ ಚಿಂತನೆಯೂ ಅದೇ ಇದೆ. ಅದಕ್ಕಾಗಿ ಇವತ್ತಿನ ದಿವಸ ನಾನು ಗೌರವಪೂರ್ವಕವಾಗಿ ಕಳಕಳಿಯ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಿಷ್ಪಕ್ಷತವಾಗಿರುವ ತನಿಖೆಯನ್ನು ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ಕೆಲಸ ಮಾಡಿಸಬೇಕು. ನನಗೊಂದು ಸಂಶಯ ಬರುತ್ತದೆ. ಆ ಕ್ಷೇತ್ರದಲ್ಲಿ ಗಲಾಟೆಯೇನಾಗಿದೆ, ಆ ಗಲಾಟೆಯ ಬಗ್ಗೆ ಈ ಸದನದಲ್ಲಿ ಮಾತನಾಡುವುದಕ್ಕೂ ಕೂಡ ಇವರು ಬಿಡುತ್ತಿಲ್ಲವಲ್ಲ. ಇದರ ಹಿನ್ನೆಲೆಯಲ್ಲಿ ಯಾರದೋ ಕೈವಾಡವಿದೆ ಎಂದು ನನಗನಿಸುತ್ತದೆ. ನಮ್ಮ ಬಣ್ಣ

ಬಯಲಾಗುತ್ತದೆನ್ನುವ ಚಿಂತನೆಯಿಂದ ಇವತ್ತಿನ ದಿವಸ ನನ್ನ ಮಾತನ್ನು ಮೊಟಕುಗೊಳಿಸಲಿಕ್ಕೆ ನೋಡುತ್ತಿದ್ದಾರೆ. ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಇದು ಗಂಭೀರವಾದ ವಿಚಾರ. ನನಗೆ ಮಾತನಾಡಲಿಕ್ಕೇ ಅವಕಾಶ ಕೊಡದಿರುವಂಥ ಜನರು ಪಕ್ಕದ ಕ್ಷೇತ್ರದಲ್ಲಿರುವ ಬಿ.ಸಿ. ಪಾಟೀಲರು ಬಂದು ಏಕೆ ಇದನ್ನು ಪರಿಶೀಲಿಸಬಾರದು ಎಂದು ಕೇಳುತ್ತೇನೆ.

ಶ್ರೀ ಬಿ.ಸಿ.ಪಾಟೀಲ್:– ತನಿಖೆ ಮಾಡಿಸಿ. ತನಿಖೆ ಮಾಡುವವರೂ ನೀವೇ ಇದ್ದೀರಿ. ಸತ್ಯಾಂಶ ಬೆಳಕಿಗೆ ಬರಲಿ. ಸತ್ಯಾಂಶ ಬೆಳಕಿಗೆ ಬಂದಾಗ ಗೊತ್ತಾಗುತ್ತದೆ. ನಿಮ್ಮ ಮೇಲಿರುವ ಜವಾಬ್ದಾರಿಯಿಂದ ನುಣಚಿಕೊಳ್ಳುವುದಕ್ಕೆ ಇನ್ನೊಬ್ಬರ ಮೇಲೆ ಆಪಾದನೆ ಮಾಡುವುದು ಬಹಳ ಗುರುತರವಾದ ಆಪಾದನೆಯಾಗುತ್ತದೆ.

ಶ್ರೀ ನೆಹರೂ ಓಲೇಕಾರ್ ಚನ್ನಬಸಪ್ಪ:– ಅವರು ಮಾತನಾಡುವ ಸಂದರ್ಭದಲ್ಲಿ ನಾನು ಗೌರವವನ್ನು ಕೊಟ್ಟು ಸುಮ್ಮನೆ ಕುಳಿತಿದ್ದೆ. ನಾನು ಮಾತನಾಡುವ ಸಂದರ್ಭದಲ್ಲಿ ಅವರು ಮಾತು ಮಾತಿಗೂ ಸಹ ಅವರು ಏದ್ದು ನನ್ನ ಮಾತನ್ನು ಸ್ಥಗಿತಗೊಳಿಸುವಂಥ, ಚುಚ್ಚುವಂಥ ಪ್ರಯತ್ನವನ್ನೇಕೆ ಮಾಡುತ್ತಿದ್ದಾರೆನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇವತ್ತು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):– ಮಾನ್ಯ ಛೇರ್ಮನ್‌ರವರೇ, ದಿನಾಂಕ 10–06–2008ರಂದು ಹಾವೇರಿಯಲ್ಲಿ ರಸಗೊಬ್ಬರ ಪೂರೈಕೆ ಮತ್ತು ವಿತರಣೆ ಸರಿಯಾಗಿ ಆಗುತ್ತಿಲ್ಲವೆಂಬ ಗಂಭೀರ ಸಮಸ್ಯೆ ಬಗ್ಗೆ ಸರ್ಕಾರದ ಗಮನ ಸೆಳೆಯಲು ಶಾಂತಿಯುತ ಹೋರಾಟದಲ್ಲಿ ನಿರತರಾಗಿದ್ದ ರೈತರ ಮೇಲೆ ಅನಾವಶ್ಯಕವಾಗಿ ವಿನಾಕಾರಣ ಏಕಾಏಕಿ ಗೋಲಿಬಾರ್ ಮತ್ತು ಸ್ಥಳದಲ್ಲಿ ರೈತರು ಮೃತಪಟ್ಟಿದ್ದು, 3 ಜನ ಚಿಂತಾಜನಕ ಸ್ಥಿತಿಯಲ್ಲಿದ್ದಾರೆ, 19 ಜನರಿಗೆ ಗಾಯವಾಗಿದ್ದು, ಇವೆಲ್ಲ ನಿಯಂತ್ರಣ ಮಾಡುವುದರಲ್ಲಿ ಸರ್ಕಾರ ವಿಫಲವಾಗಿದೆ ಎನ್ನುವುದರ ಬಗ್ಗೆ ನಿಲುವಳಿ ಸೂಚನೆಯನ್ನು ನಾವು ಬೆಳಿಗ್ಗೆ ತಂದಿದ್ದೆವು. ಅದನ್ನು ಸಭಾಧ್ಯಕ್ಷರು ನಾವೇನು ನಿಯಮ 60ರ ಅಡಿಯಲ್ಲಿ ತಂದಿದ್ದೆವು ಅದನ್ನು ನಿಯಮ 69ಕ್ಕೆ convert ಮಾಡಿದ್ದಾರೆ. ಏಕೆಂದರೆ, ಹಿಂದೆ ನಿಯಮ 60ರ ಅಡಿಯಲ್ಲಿ ಹಿಂದಿನ ಸಭಾಧ್ಯಕ್ಷರು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇವತ್ತಿನ ದಇವಸ ಗೋಲಿಬಾರ್ ಆಗಿದೆ. ಕಳೆದ 30ನೇ ತಾರೀಖು ಸನ್ಮಾನ್ಯ ಮುಖ್ಯಮಂತ್ರಿಗಳು ರೈತರ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕರಿಸಿದರು. ಅದೂ ಹಸಿರು ಶಾಲು ಹಾಕಿಕೊಂಡು ರೈತರ ಒಂದು ಸಂಕೇತವನ್ನು ರಾಜ್ಯದ ರೈತಾಪಿ ಜನರಿಗೆ

ತೋರಿಸಿದ್ದಾರೆಂದರೆ ತಪ್ಪಾಗಲಾರದು. ಆದರೆ, ಇವತ್ತಿನ ದಿವಸ ನಾನು ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕಾಗುತ್ತದೆ. ಏಕೆಂದರೆ, 30ನೇ ತಾರೀಖು ಮಂತ್ರಿಮಂಡಲ ರಚನೆಯಾದಂದಿನಿಂದ ಪ್ರಾರಂಭವಾಗಿದ್ದು ದಾವಣಗೆರೆ ಗಲಾಟೆಯಿರಬಹುದು, ಆನೇಕಲ್ ಗಲಾಟೆಯಿರಬಹುದು, ಮೈಸೂರಿನಲ್ಲಿ ಆದ ಗಲಾಟೆಯಿರಬಹುದು, ಬೆಂಗಳೂರಿನಲ್ಲಿ, ಎಲ್ಲಾ ಕಡೆ ಬಸ್ಸು ಸುಡುವುದರಿಂದ ಹಿಡಿದು ಜನ ಸಾಮಾನ್ಯರ ಆಸ್ತಿ ಎಷ್ಟು ನಷ್ಟವಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಏಕೆಂದರೆ, ಆ ಜನ ಸಾಮಾನ್ಯರ ಮೇಲೆ ನಡೆದ ಗಲಾಟೆ ಮತ್ತೆ ಸಾರ್ವಜನಿಕರ ಆಸ್ತಿಯನ್ನು ನಷ್ಟ ಮಾಡಿದ್ದರಿಂದ ಯಾರ್ಯಾ ಮೇಲೆ ಇಲ್ಲಿಯವರೆಗೆ ಎಷ್ಟೆಷ್ಟು ಕೇಸ್ ಹಾಕಿದ್ದಾರೆ? ಧಾರವಾಡದಲ್ಲಿ ಬಸ್ಸು ಸುಟ್ಟು ಹಾಕಿರುವುದು ಇರಬಹುದು, ಆನೇಕಲ್‌ನಲ್ಲಿ ಬಸ್ಸು ಸುಟ್ಟು ಹಾಕಿರುವುದು ಇರಬಹುದು, ಬೆಂಗಳೂರಿನಲ್ಲಿ ಬಸ್ಸು ಸುಟ್ಟು ಹಾಕಿರುವುದು ಇರಬಹುದು, ಮೈಸೂರಿನಲ್ಲಿ ಇರಬಹುದು, ಈ ವಿಷಯದಲ್ಲಿ ಎಷ್ಟು ಕೇಸ್ ಆಗಿದೆ ಎನ್ನುವುದನ್ನು ದಯಮಾಡಿ ಸನ್ಮಾನ್ಯ ಗೃಹ ಸಚಿವರು ಅಥವಾ ಸನ್ಮಾನ್ಯ ಮುಖ್ಯಮಂತ್ರಿಗಳು ಸದನದ ಮುಂದೆ ತಿಳಿಸಬೇಕೆಂದು ನಾನು ಛೇರ್ಮನ್‌ರವರಿಗೆ ಮನವಿ ಮಾಡುತ್ತಿದ್ದೇನೆ. ಸುಮಾರು 20 ಲಕ್ಷ ಟನ್ ಗೊಬ್ಬರ ನಮ್ಮ ಹಾಸನ ಜಿಲ್ಲೆಗೆ ಬೇಕಾಗಿತ್ತು. ನಮ್ಮಲ್ಲೀಗ ಸುಮಾರು 35–45 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಆಲೂಗಡ್ಡೆ ಬೆಳೆಯುತ್ತಿದ್ದಾರೆ. ಅಂದು ವಿಶ್ವಾಸಮತ ಕೋರುವ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತಂದಿದ್ದೇ. ಅದನ್ನು 2–3 ದಿನಗಳಲ್ಲಿ ಸರಿಪಡಿಸುತ್ತೇವೆಂದು ಹೇಳಿದ್ದರು. ಇದಾದ ಮೇಲೆ, ಸನ್ಮಾನ್ಯ ಮುಖ್ಯಮಂತ್ರಿಗಳೇ ದೆಹಲಿಗೆ ಹೋಗಿದ್ದರು. ಅದಾದ ಮೇಲೆ ಹಿಂದೂ ಪತ್ರಿಕೆಯಲ್ಲಿ ನೋಡಿದ್ದೇವೆ. ಅದರಲ್ಲಿ, ಈ ರಾಜ್ಯದ ಯಾವುದೇ ಗೊಬ್ಬರದ scarcity ಇಲ್ಲ, ಈ ರಾಜ್ಯದಲ್ಲಿ ಅಂಥ ಪ್ರಮೇಯವಿಲ್ಲ ಎಂಬ ಭಾವನೆಯನ್ನು ಸಹ ಪತ್ರಿಕೆಯ ಮೂಲಕ ರಾಜ್ಯದ ಜನತೆಗೆ ತಿಳಿಸಿದ್ದಾರೆ. ನಮ್ಮ ಕೃಷಿ ಸಚಿವರೂ ಸಹ, ದಾವಣಗೆರೆಯಲ್ಲಿ, ಕೆಲವು ಗೊಬ್ಬರದ ಸಮಸ್ಯೆ ಇದೆ, ಅದನ್ನು 2–3 ದಿವಸಗಳಲ್ಲಿ ಸರಿಪಡಿಸುತ್ತೇವೆಂದು ಹೇಳಿದ್ದಾರೆ. ದಾವಣಗೆರೆಯಲ್ಲಿ ಗೊಬ್ಬರದ ಸಲುವಾಗಿ ಎಷ್ಟು ಗಲಾಟೆಯಾಗಿದೆಯೆನ್ನುವುದು ಸನ್ಮಾನ್ಯ ಕೃಷಿ ಸಚಿವರಿಗೆ ಗೊತ್ತಿದೆ. ಇದಲ್ಲದೆ, ಹಾವೇರಿ ಗೋಲಿಬಾರ್ ಬಗ್ಗೆ ಇಂದು ಬೆಳಿಗ್ಗೆ ಸನ್ಮಾನ್ಯ ಹಿರಿಯ ಸದಸ್ಯರಾದ ಬಿ.ಸಿ.ಪಾಟೀಲ್‌ರವರು ಸದನದ ಗಮನಕ್ಕೆ ತಂದಿದ್ದಾರೆ. ನಮ್ಮ ಹಾವೇರಿ ಶಾಸಕರೂ ಸಹ ಇದರ ಬಗ್ಗೆ ಹೇಳಿದ್ದಾರೆ. Electronic media ದವರು ಪೂರ್ಣವಾಗಿ ಏನು ಚಿತ್ರೀಕರಣ ಮಾಡಿದ್ದಾರೆ ಅದನ್ನೆಲ್ಲ ತರಿಸಿ enquiry ಮಾಡಿ ಎಂದು ಬಿ.ಸಿ. ಪಾಟೀಲ್‌ರವರು ಹೇಳಿರುವುದು. ವಿರೋಧ

ಪಕ್ಷದ ಸದಸ್ಯರು ಹೇಳುವುದು ತಪ್ಪಾಗುತ್ತದೆ. ಟಿವಿ9 ಇರಬಹುದು, ಉದಯ ಟಿವಿ, ಈಟಿವಿ ಇರಬಹುದು, ಎಲ್ಲ ಚಿತ್ರೀಕರಣವನ್ನು ತೋರಿಸಿದ್ದಾರೆ. ಏಕೆಂದರೆ, ನಮ್ಮ ಶಾಸಕರು ಹೇಳಿದ ಮೇಲೆ ಪಾಪ ಅವರಿಗೆ ಗೌರವ ಕೊಡಬೇಕಾಗುತ್ತದೆ. 2 ಬಾರಿ ಗೆದ್ದು ಈ ಸದನಕ್ಕೆ ಬಂದಿರುವ ಹಿರಿಯ ಶಾಸಕರವರು. ಅವರು ಹೇಳಿದ ಹಾಗೆ ಯಾವುದೇ ಕಾರಣದಿಂದ ವಿರೋಧ ಪಕ್ಷದವರಾದ ನಾವಂತೂ ಅದಕ್ಕೆ ಚಕಾರವೆತ್ತಲ್ಲ. ಅಷ್ಟೂ Video Cassette ಅನ್ನು ನ್ಯಾಯಾಂಗ ತನಿಖೆಯೊಳಗೆ ಪೂರ್ತಿ ಎಲ್ಲ ಸೀಜ್ ಮಾಡಬೇಕು. ಏಕೆಂದರೆ, ಬಿ.ಸಿ. ಪಾಟೀಲ್‌ರವರು ಫೋಟೋವನ್ನು ಸೆಪರೇಟ್ ಆಗಿ ಏನಾದರೂ ಮಾಡಿಸಿಕೊಂಡು ಬಂದಿದ್ದಾರೆಂದು ಹೇಳಿದರೂ ಹೇಳಬಹುದು. ಅದಾಗುವುದು ಬೇಡ. ಏಕೆಂದರೆ, ಹೊಡೆಯುತ್ತಿರುವುದನ್ನು ಕೆಲವು ಪತ್ರಿಕೆಗಳಲ್ಲಿ ನೀವೇ ನೋಡಿದ್ದೀರಿ. ಯಾವ ರೀತಿಯಲ್ಲಿ ಹೊಡಯುತ್ತಿದ್ದಾರೆನ್ನುವುದನ್ನು ಎಲ್ಲ ತೋರಿಸಿದ್ದಾರೆ. ಏಕೆಂದರೆ, ಬಿ.ಸಿ.ಪಾಟೀಲರು ಚಿತ್ರೀಕರಣ ತೋರಿಸಿದರು, ಅವರು ಬೇಕೆಂದು ದುರುದ್ದೇಶದಿಂದ ಮಾಡಿದರೆನ್ನುವುದು ಬರುವುದು ಬೇಡ. ಇದು ಒಂದು ಭಾಗ. ಅಂದು ಬೆಳಿಗ್ಗೆ 10 ಗಂಟೆಗೆ ಯಾರು ಮೆರವಣಿಗೆಯ ನೇತೃತ್ವವನ್ನು ವಹಿಸಿದ್ದರು? ಗೋಲಿಬಾರ್ ಎಷ್ಟು ಹೊತ್ತಿಗಾಯಿತು? ಆ ನೇತೃತ್ವ ವಹಿಸಿ ಸಿದ್ದಪ್ಪ ಸರ್ಕಲ್‌ಗೆ ಬಂದಾಗ ಯಾವ ವಿಷಯವಾಗಿ ಅಂದು ನಡೆದಿದ್ದು? 10ನೇ ತಾರೀಖು ಹಾವೇರಿಯಲ್ಲಿ ಮಾನ್ಯ ಶಾಸಕರೇ ನಾನೇ ಮೆರವಣಿಗೆಯ ನೇತೃತ್ವ ವಹಿಸಿದ್ದೇ ಎಂದು ಅವರೇ ಸದನದ ಮುಂದೆ ಒಪ್ಪಿಕೊಂಡಿದ್ದಾರೆ. ಸುಮಾರು 10 ಗಂಟೆಗೆ ಸಿದ್ದಪ್ಪ ಸರ್ಕಲ್‌ಗೆ ಬಂದಂಥ ಸಂದರ್ಭದಲ್ಲಿ ಅಲ್ಲಿ ಆ ಕಡೆ ಗೊಬ್ಬರದ ಸಲುವಾಗಿ ಜನ ಕ್ಯೂ ನಿಂತಿದ್ದರು. ಆ ಗೊಬ್ಬರಕ್ಕೆ ಕ್ಯೂ ನಿಂತಿದ್ದವರಾರು? ಪೆಟ್ರೋಲ್ ಬಗ್ಗೆ ಕೇಳುತ್ತಿದ್ದೀರಲ್ಲ, ನಮ್ಮ ರೈತರು ಇವತ್ತು ಗೊಬ್ಬರದ ವಿತರಣೆಗೆ ಚಕಾರವೆತ್ತುತ್ತಿಲ್ಲ ಎಂದು ಶಾಸಕರು ಕೇಳಿದಾಗ ಅದರಲ್ಲಿ ಏನು ಘಟನೆಯಾಗಿದೆ ಎನ್ನುವುದನ್ನು ನಾನಲ್ಲ ಸ್ಥಳೀಯವಾಗಿ ಅಲ್ಲಿ ಏನು ನಡೆದಿದೆ ಎನ್ನುವುದನ್ನು ಸದನಕ್ಕೆ ತರಿಸಿಕೊಳ್ಳಬೇಕು. ಪೊಲೀಸ್ ಇಲಾಖೆ ಇದೆ, ಗುಪ್ತಚರ ದಳ ಇದೆ, ಎಲ್ಲಾ ಕಡೆಯಿಂದ ನೀವು ಮಾಹಿತಿ ತರಿಸಿಕೊಳ್ಳಬೇಕು. ಆದರೆ, ಹಾವೇರಿಯಲ್ಲಿ ಏನು ಗೊಬ್ಬರ ವಿತರಣೆ ಮಾಡುತ್ತಿದ್ದಾರೆ ಅದರಲ್ಲಿ ಯಾರಿದ್ದಾರೆ? ಯಾರ್ಯಾರು ವಿತರಣೆಕಾರರು ಇದ್ದಾರೆ, ಯಾರ್ಯಾರಿಗೆ ಆ ಗೊಬ್ಬರವನ್ನು ವಿತರಣೆ ಮಾಡುವುದಕ್ಕೆ ಎಷ್ಟೆಷ್ಟು ವಿತರಣೆಕಾರರಿಗೆ ಕೊಟ್ಟಿದ್ದಾರೆ, ಅವರು ಯಾರು? ಅವರೇನು ಖಾಸಗಿಯವರೋ ಸೊಸೈಟಿ ಕಡೆಯಿಂದ ಕೊಟ್ಟಿದ್ದಾರೋ? ಈ ಬಗ್ಗೆ ಮಾಹಿತಿಯನ್ನು ಉತ್ತರ ಕೊಡುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು

ಕೊಡಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಕಳೆದ ಆರು ತಿಂಗಳಲ್ಲಿ ರಾಜ್ಯಕ್ಕೆ ಎಷ್ಟು ಗೊಬ್ಬರ ಬಂತು? ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಗೊಬ್ಬರ ಕೊಟ್ಟಿದ್ದೀರಿ? ಗೊಬ್ಬರವನ್ನು VSSN ಮೂಲಕ ಕೊಟ್ಟಿದ್ದೀರೋ? ಸಹಕಾರಿ ಸಂಸ್ಥೆಯ ಕಡೆಯಿಂದ ಕೊಟ್ಟಿದ್ದೀರೋ? ಖಾಸಗಿಯವರ ಕಡೆಯಿಂದ ಕೊಡುತ್ತಿದ್ದೀರೋ? ಖಾಸಗಿಯವರಿಂದ ಕೊಡುವಂಥ ಸಂದರ್ಭದಲ್ಲಿ ಕಳ್ಳ ಮಾರಾಟ ಏನಾದರೂ ಆಗುತ್ತದೆಯೋ? ಇದರ ಬಗ್ಗೆ ಏನು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರ ಗೊಬ್ಬರ ಕೊಡಿಸಲಿಲ್ಲ, ಒಂದು ಕಡೆ ಸಾಕಷ್ಟು ಗೊಬ್ಬರ ಇದೆ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳೇ ಹೇಳುತ್ತಾರೆ, ಇನ್ನೊಂದು ಕಡೆ ಗೊಬ್ಬರ ಇಲ್ಲ ಎನ್ನುವ ಮಾತನ್ನು ಕೂಡ ಹೇಳುತ್ತಾರೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಹೇಳುವಂಥದ್ದು. ಏಕೆಂದರೆ, ಒಂದು ಕಡೆ ಪೋಸ್ಟ್‌ಮಾಸ್ಟರ್ ಕೆಲಸ, ಇನ್ನೊಂದು ಕಡೆ ಸನ್ಮಾನ್ಯ ಮುಖ್ಯಮಂತ್ರಿಗಳೇ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಹೇಳಿದ್ದಾರೆ. ರಾಜ್ಯಕ್ಕೆ ಅಗತ್ಯ ಪ್ರಮಾಣದ ರಸ ಗೊಬ್ಬರ ಪೂರೈಸದಿದ್ದರೆ ಕೇಂದ್ರ ಸರ್ಕಾರದ ವಿರುದ್ಧ ಬೀದಿಗಿಳಿದು ಹೋರಾಟ ಮಾರಾಟ ಮಾಡುವುದಾಗಿ ಮುಖ್ಯಮಂತ್ರಿಯಾದ ಯಡಿಯೂರಪ್ಪನವರು ಗುಡುಗಿದರು ಎಂದು ಬಂದಿದೆ. ಅಂದರೆ ನಾನೇ ಬೀದಿಗೆ ಇಳಿಯುತ್ತೇನೆಂದು ಹೇಳಿದ್ದಾರೆ. ಇವತ್ತು ಯಾವ ಪರಿಸ್ಥಿತಿಗೆ ಬಂದಿದೆ ಎಂದರೆ, ಈ ರಾಜ್ಯದಲ್ಲಿ ಈ ಸರ್ಕಾರ ಬಂದು ಕೇವಲ 23 ದಿವಸಗಳಾಗಿವೆ. 23 ದಿವಸಗಳಲ್ಲಿ ಎಷ್ಟು ಘಟನೆಗಳಾಗಿವೆ? ವಿರೋಧ ಪಕ್ಷದವರು ಗೊಬ್ಬರದಲ್ಲಿ ರಾಜಕೀಯ ಮಾಡುತ್ತಿದ್ದಾರೆ, ನಾವು ಹಾಸನದಲ್ಲಿ ಇಂಥ ಕೆಲಸ ಮಾಡಿದ್ದೇವೆಯೆ? ಎಲ್ಲಿ ಬಿಜೆಪಿಗೆ ಇವತ್ತು ಜನ ಮತ ಕೊಟ್ಟಿದ್ದಾರೆ ಅಲ್ಲಿ ಗಲಾಟೆಯಾಗುತ್ತಿರುವುದು, ಎನಾದರೂ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಮತ ಕೊಟ್ಟಿರುವಂಥ ಕಡೆ ಗಲಾಟೆಯಾಗುತ್ತಿಲ್ಲ. ನನ್ನನ್ನು ಮತ್ತು ಬಿ.ಸಿ.ಪಾಟೀಲ್‌ರನ್ನು ಸೇರಿಸಿಕೊಂಡು ತನಿಖೆ ಮಾಡಿ ಎಂದು ಆ ಭಾಗದ ಶಾಸಕರೆ ಹೇಳಿದರು. ಹಾಗಾದರೆ ತನಿಖೆ ಮಾಡಿ ಸದನದಲ್ಲಿ ಹೇಳಲಿ. ಬಿಸಿ ಪಾಟೀಲ್‌ರನ್ನು ಸೇರಿಸಿಕೊಳ್ಳಲಿ ಮತ್ತು ಹಾವೇರಿ ಶಾಸಕರನ್ನು ಸೇರಿಸಿಕೊಳ್ಳಲಿ, ಇಬ್ಬರನ್ನು ಸೇರಿಸಿ ನ್ಯಾಯಾಂಗ ತನಿಖೆಗೆ ಆದೇಶ ಮಾಡಿರಿ. ಏಕೆ ಅವರ ಮೇಲೆ ಗೂಬೆ ಕೂರಿಸಬೇಕೆಂದು ಹೇಳುವುದು. ಅವರು ಪಾಪ ಎರಡನೇ ಸಲ ಶಾಸಕರಾಗಿದ್ದಾರೆ. ಗೂಬೆ ಕೂರಿಸಬೇಕೆನ್ನುವುದನ್ನು ಬಿ.ಸಿ ಪಾಟೀಲ್‌ರವರು ಮಾಡುತ್ತಾರೆನ್ನುವುದು ಬರುವುದು ಬೇಡ. ಎರಡನ್ನು ಸೇರಿಸಿ ತನಿಖೆಯಯನ್ನು ಮಾಡಲಿ. ನಮ್ಮದೇನೂ ಅಭ್ಯಂತರವಿಲ್ಲ. ಅದಕ್ಕೆ ನಾವು ರೆಡಿ ಇದ್ದೇವೆ. ಏಕೆಂದರೆ, ಆ ದಿವಸ ಘಟನೆ ಏನು ಆಯಿತು, 10 ಗಂಟೆಗೆ

ಕೇಂದ್ರ ಸರ್ಕಾರದ ವಿರುದ್ಧ ಪೆಟ್ರೋಲಿಯಂ ಬಗ್ಗೆ ಮೆರವಣಿಗೆ ಬಂದರು. 12 ಗಂಟೆಗೆ ಗೋಲಿಬಾರ್ ಆಯಿತು. ಗೋಲಿಬಾರ್ 12 ಅಥವಾ 12–15ಕ್ಕೆ ಆಗಿರಬಹುದು. ಹಾಗಾದರೆ ಎಷ್ಟು ಹೊತ್ತಿಗೆ ಆಗಿರಬಹುದು ಸ್ವಾಮಿ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರೇವಣ್ಣನವರ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಘಟನೆ ನಡೆದಿದ್ದು 3–45ರ ನಂತರ. ಹೀಗಿರುವಾಗ ನ್ಯಾಯಾಂಗ ತನಿಖೆಯಾಗಬೇಕಾಗಿದೆ. ಇದು ಆಗಬೇಕಾದಾಗ ಏನೇನು ಘಟನೆ ನಡೆದಿದೆ ಅದು ಎಲ್ಲಾ ಸಂಪೂರ್ಣವಾಗಿ ವಿವರವಾಗಿ ಚರ್ಚೆಯಾಗುತ್ತದೆ. ಇಲ್ಲಿ ವೈಯಕ್ತಿಕವಾಗಿ ಯಾರ ಮೇಲೆ ಆರೋಪ ಮಾಡುವುದು ಚೆನ್ನಾಗಿರುವುದಿಲ್ಲ. ಇವರು ಕ್ಷೇತ್ರ ಬದಲಾಯಿಸಿದರೂ ಶಾಸಕರಾಗಿ ಆಯ್ಕೆಯಾಗಿದ್ದಾರೆ, ಅವರು ಪಕ್ಷ ಬದಲಿಸಿದರೂ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಇಬ್ಬರನ್ನು ಸೇರಿಸಿ ಮಾಡಬೇಕೆನ್ನುವ ಬೇಡಿಕೆಯನ್ನು ಮಾನ್ಯ ರೇವಣ್ಣನವರು ಇಡುತ್ತಿದ್ದಾರೆ. ನ್ಯಾಯಾಂಗ ತನಿಖೆಗೆ ನಾವು ಕೊಟ್ಟಿರುವಾಗ, ಅಲ್ಲಿಂದ ಸತ್ಯ ಹೊರಗೆ ಬರುತ್ತದೆ ವಿನಃ ವೈಯಕ್ತಿಕವಾಗಿ ನಾವು ಇಲ್ಲಿ ಮಾತನಾಡುವುದು ಬೇಡ. ಹೆಸರುಗಳನ್ನು ಹೇಳುವುದು ಎಷ್ಟರ ಮಟ್ಟಿಗೆ ಸಮಂಜಸವೆಂದು ದಯವಿಟ್ಟು ಗಮನಿಸಬೇಕಾಗಿದೆ. ನಾವು ಇದ್ದಾಗ 1–45ರವರೆಗೆ ಸಭೆಯಲ್ಲಿ ಎಲ್ಲಾ ವಿಷಯದ ಬಗ್ಗೆ ಚರ್ಚೆಯಾಯಿತು. ರೈತರ ಜೊತೆಗೆ ಚರ್ಚೆಯಾದ ಮೇಲೆ ನಾನು ಅಲ್ಲಿಂದ ಹೋಗಿದ್ದೇನೆ. ನಾನಿದ್ದರೂ ಘಟನೆಯಾಗಿದೆ ಎಂದು ಪತ್ರಿಕೆಯಲ್ಲಿ ಬರೆದಿದ್ದಾರೆ. ನಾನು ಇದ್ದಾಗ ಘಟನೆಯಾಗಿದೆ ಎಂದು ಪತ್ರಿಕೆಯಲ್ಲಿ ಬರೆದಿದ್ದಾರೆ, ನಾನು ಇದ್ದಾಗ ಘಟನೆಯಾಗಿಲ್ಲ. ಇವೆಲ್ಲವೂ ಗೊತ್ತಿದ್ದರೂ ಸಹಿತ ಪತ್ರಿಕೆಯಲ್ಲಿ ಬರೆದಿರುವ ಎಲ್ಲರನ್ನೂ ಸಹಿತ ಸಂಪೂರ್ಣ ಸತ್ಯವೆಂದು ನಾವು ತಿಳಿದುಕೊಂಡು ಮಾತನಾಡುವುದು ಎಷ್ಟರ ಮಟ್ಟಿಗೆ ಸಮಂಜಸ ಎಂದು ಇಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ವೈಯಕ್ತಿಕವಾಗಿ ವ್ಯಕ್ತಿಗತವಾಗಿ ಆರೋಪ ಪ್ರತ್ಯಾರೋಪ ಮಾಡುವುದು ಸಮಂಜಸವಾಗುವುದಿಲ್ಲ. ನ್ಯಾಯಾಧೀಶರನ್ನು ನಾವು ನೇಮಿಸಿದ್ದೇವೆ. ಅವರಿಂದ ವಿಚಾರಣೆಯಾದ ಮೇಲೆ ಸತ್ಯ ಹೊರಗೆ ಬರುತ್ತದೆ. ಇದರಲ್ಲಿ ಯಾರು ಇದ್ದಾರೆ, ಆರೋಪಿಗಳು ಯಾರು? ಇದಕ್ಕೆ ಯಾರು ಕಾರಣ? ಅದೆಲ್ಲಾ ಬಯಲಿಗೆ ಬರುತ್ತದೆ ಎಂದು ಅತ್ಯಂತ ವಿನಯಪೂರ್ವಕವಾಗಿ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರಿ ಹೆಚ್.ಡಿ. ರೇವಣ್ಣ: ಮಾನ್ಯ ಉದಾಸಿಯವರು ಹಿರಿಯ ಸದಸ್ಯರು. ತನಿಖೆ

ಮಾಡಿ ಎಂದು ನಾನು ಕೇಳುತ್ತಿಲ್ಲ. ನಮ್ಮ ಹಾವೇರಿ ಶಾಸಕರೇ ಈ ತನಿಖೆಗೆ ಸೇರಿಸಿ ಎಂದು ಕೇಳುತ್ತಿದ್ದಾರೆ. ನಾನು ವೈಯಕ್ತಿಕವಾಗಿ ಅವರನ್ನು ಗುರಿ ಮಾಡಿ ಹೇಳುತ್ತಿಲ್ಲ. ಮಾನ್ಯ ಉದಾಸಿಯವರು ತಾವು ಮೊದಲು ಇರಲಿಲ್ಲ. ಅರ್ಧಗಂಟೆಗಳ ಕಾಲ ಅವರು ಈಗ ಮಾತನಾಡಿದರು ಮಾನ್ಯ ಸಭಾಧ್ಯಕ್ಷರು ಕುಳಿತುಕೊಳ್ಳಿ ಎಂದರೂ ಅವರು ಕೇಳಲಿಲ್ಲ. ತನಿಖೆಗೆ ನನ್ನನ್ನು ಸೇರಿಸಬೇಕು ಎಂದು ಹೇಳಿದರು. ನಾನು ಹೇಳಲಿಲ್ಲ.

ಶ್ರೀ ನೆಹರೂ ಓಲೇಕಾರ್ ಚೆನ್ನಬಸಪ್ಪ: ತನಿಖೆ ಮಾಡಿ ಎಂದು ಹೇಳಿದೆ ತನಿಖೆಗೆ ಸೇರಿಸಿ ಎಂದು ಹೆಳಿಲ್ಲ. ಈಗ ನೀವು ಮಾತನಾಡುತ್ತಿದ್ದೀರಿ ಎಂದರೆ ನಿಮ್ಮನ್ನು ಸೇರಿಸಿ ಎಂದರ್ಥವಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ನನ್ನನ್ನು ಸೇರಿಸಿ ಎಂದು ಅವರು ಹೇಳುತ್ತಿರುವುದರಿಂದ ನಾನು ಬೇಡ ಎಂದು ಏಕೆ ಹೇಳಲಿ? ಮಾನ್ಯ ಸದಸ್ಯರು ಹೇಳಿದ್ದಾರೆ ಬೇಕಾದರೆ ಕಡತದಲ್ಲಿ ಇದೆ ತೆಗೆಸಿ ನೋಡಿ.

ಶ್ರೀ ನೆಹರೂ ಓಲೇಕಾರ್ ಚೆನ್ನಬಸಪ್ಪ: ಮಾತನಾಡಿದವರೆಲ್ಲರನ್ನೂ ತನಿಖೆಗೆ ಸೇರಿಸಿ ಎಂದರ್ಥವಲ್ಲ, ಹಾಗಾದರೆ ನೀವು ಈಗ ಮಾತನಾಡಿದರೆ ನಿಮ್ಮನ್ನು ಸೇರಿಸಿ ಎಂದರ್ಥವಲ್ಲ.

ಶ್ರೀ ಸಿ.ಎಂ. ಉದಾಸಿ: ತನಿಖೆಗೊಳಗಾಗಬೇಕಾದ ವ್ಯಕ್ತಿಗಳಿದ್ದರೆ ಯಾರನ್ನು ಕೈ ಬಿಡುವುದಕ್ಕೆ ಬರುವುದಿಲ್ಲ. ಅದನ್ನು ಮಾಡೇ ಮಾಡುತ್ತಾರೆ. ಹೀಗಾಗಿ ನಾವೇ ಮೊದಲು ತೀರ್ಮಾನ ತೆಗೆದುಕೊಳ್ಳುವುದು ಬೇಡ.

ಶ್ರೀ ಹೆಚ್.ಡಿ. ರೇವಣ್ಣ: ಸ್ವಲ್ಪ ತಾಳ್ಮೆಯಿಂದ ಇದ್ದರೆ ನಾನು ಹೇಳುತ್ತೇನೆ. ಅವರು ಕೇಳುತ್ತಿರುವುದು ನಾವು ಕೇಳುತ್ತಿಲ್ಲ. ಬಿ.ಸಿ. ಪಾಟೀಲ್‌ರವರು ಸುಳ್ಳು ಫೋಟೋ ತಂದಿದ್ದಾರೆ. ಎಲೆಕ್ಟ್ರಾನಿಕ್ ಮೀಡಿಯಾದಲ್ಲಿದೆ. ತಾವು ಬೇಕಾದರೆ ಆ ಕಡತ ತರಿಸಿ ಸನ್ಮಾನ್ಯ ಸಭಾಧ್ಯಕ್ಷರು ಸಭೆಯ ಗಮನಕ್ಕೆ ತರಲಿ. ಅವರು ಹೇಳುವುದು ಎಲೆಕ್ಟ್ರಾನಿಕ್ ಮೀಡಿಯಾದಲ್ಲಿದೆ, ಅದರಲ್ಲಿ ಎಲ್ಲಾ ಸತ್ಯವಿದೆ, ನಾನೇನು ಸಪರೇಟಾಗಿ ಹೇಳುತ್ತಿಲ್ಲ.. ಎರಡು ನಿಮಿಷ, ದಯಮಾಡಿ ತಾವು ಕುಳಿತುಕೊಳ್ಳಿ. ನೀವು ವಕಾಲತ್ತು ಹಾಕಬೇಡಿ.

ಶ್ರೀ ಸಿ.ಎಂ. ಉದಾಸಿ: ಇದೆಲ್ಲಾ ನ್ಯಾಯಾಧೀಶರ ವ್ಯಾಪ್ತಿಯಲ್ಲಿ ಬಂದೇ ಬರುತ್ತದೆ, ನಂತರ ಸತ್ಯ ಹೊರಗೆ ಬರುತ್ತದೆ ಎನ್ನುವ ದೃಷ್ಟಯಿಂದಲೇ ನಾನು ಹೇಳುತ್ತಿರುವುದು.

ಮೀಡಿಯಾದವರು ಮಾಡಿರುವಂಥ ವೀಡಿಯೋ ಆಗಿರಲಿ, ಪೋಲಿಸ್ ಡಿಪಾರ್ಟ್‌ಮೆಂಟ್‌ನವರು ಮಾಡಿರುವಂಥ ವೀಡಿಯೋ ರೆಕಾರ್ಡ್ ಆಗಿರಲಿ, ಎಲ್ಲವೂ ಚರ್ಚೆಯಾಗಲಿ, ಈ ಎಲ್ಲ ವಿಚಾರಣೆ ಮಾಡುವ ಅಧಿಕಾರಿಗಳ ವ್ಯಾಪ್ತಿಯಲ್ಲಿ ಬರುತ್ತದೆ. ಅದು ಬಂದ ಮೇಲೆ ತೀರ್ಮಾನವಾಗುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಹೆಚ್.ಡಿ. ರೇವಣ್ಣ: ತನಿಖೆ ಬೇಡ ಎನ್ನುವುದು ಮಾನ್ಯ ಉದಾಸಿ ಸಾಹೇಬರದ್ದು ಇದ್ದರೆ ಅದನ್ನು ಬೇಡ, ಏಕೆಂದರೆ...

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ತನಿಖೆ ಮಾಡಿ ಎಂದು ಹೇಳಿರುವುದು ಬೇಡವೆಂದು ಎಲ್ಲಿ ಹೇಳಿರುವುದಿಲ್ಲ. ತಾವು ಬೇಕಾದರೆ ಬೇಡವೆಂದು ಹೇಳಿ...

ಶ್ರೀ ಹೆಚ್.ಡಿ. ರೇವಣ್ಣ: ಹಾಸನದಲ್ಲಿ ಗೋಲಿಬಾರ್ ಮಾಡಿಸಿದಿರಿ ಏನಕ್ಕೆ... (ಗೊಂದಲ)

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ನ್ಯಾಯಸಮ್ಮತವಾಗಿ ತನಿಖೆಯಾಗಲಿ ಎಂದು ನಾವು ಹೇಳಿರುವುದು. ಬೇಡವೆಂದು ಹೇಳಿಲ್ಲವಲ್ಲ. ನೀವು ಬೇಕಾದರೆ ಹೇಳಿ.

(ಇ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್.ಡಿ. ರೇವಣ್ಣ: ಅವರು ಮಾತನಾಡುವಾಗ ನಾವು ಸುಮ್ಮನೆ ಕುಳಿತಿದ್ದೆವು ಸ್ವಾಮಿ. ಅವರು ಹೇಳಿದ್ದೆಲ್ಲವನ್ನು ಕೇಳಿದ್ದೇವೆ. ಅವರು ತನಿಖೆ ಮಾಡಿ ಎಂದು ಹೇಳಿದ್ದಾರೆ. ಮಾಡುವುದಾದರೆ ಮಾಡಿ, ಒಬ್ಬ ಆಡಳಿತ ಪಕ್ಷದ ಸದಸ್ಯ ಹೇಳುವಾಗ ಏಕೆ ಹಿಂಜರಿಯುತ್ತೀರಿ. ಉದಾಸಿ ಸಾಹೇಬರು ಏಕೆ ಅಂಜುತ್ತಿದ್ದಾರೆ? ಏಕೆಂದರೆ ಒಬ್ಬ ಆಡಳಿತ ಪಕ್ಷದ ಸದಸ್ಯರು, ಆ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವಂಥ ಒಬ್ಬ ಶಾಸಕರು, ಹೇಳುವಾಗ ಏಕೆ ಉದಾಸಿ ಸಾಹೇಬರು ಹಿಂಜರಿಯುತ್ತಾರೆ. ಇದು ನನಗೆ ಗೊತ್ತಿಲ್ಲ.

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ರೀ ಸ್ವಾಮಿ ಅವರು ತನಿಖೆಯಾಗಲಿ ಎಂದು ಹೇಳಿದರು. ನಾವೂ ತನಿಖೆಯಾಗಲಿ ಎಂದು ಹೇಳಿರುವುದು. ಹೊಸ ಸೃಷ್ಟಿ ಏನು ಎನ್ನುವುದು ನಿಮ್ಮದು ಸ್ಪಷ್ಟವಾಗಿ ಹೇಳಿ. ಬೇಕಾದರೆ ನೀವು ಬೇಡವೆಂದು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಒಂದು ನಿಮಿಷ ಆಯಿತು ಬಿಡಿ. 12.05 ನಿಮಿಷಕ್ಕೆ ಕೆಲವೊಬ್ಬರು ಹೇಳುತ್ತಾರೆ. 3.30 ಗಂಟೆಗೆ ಎಂದು ಮಾನ್ಯ ಉದಾಸಿ ಸಾಹೇಬರು

ಹೇಳುತ್ತಾರೆ. 1.45ಕ್ಕೆ ಬಿಟ್ಟಿದ್ದೇನೆ. ಅಲ್ಲಿಂದ ಎಂದು ಮಾನ್ಯ ಉದಾಸಿ ಸಾಹೇಬರು ಹೇಳುತ್ತಾರೆ. ತಾವು ಈಗ ಹೇಳಿದಿರಲ್ಲಾ ಸರ್. ಒಂದೆರಡು ನಿಮಿಷ ದಯಮಾಡಿ ತಡೆಯಿರಿ. 1.45 ಕ್ಕೆ ತಾವು ಬಿಟ್ಟಿರಿ, 3.30 ಕ್ಕೆ ಗೋಲಿಬಾರ್ ಆಯಿತು. ಈಗ ರಾಜ್ಯದಲ್ಲಿ 6.30 ಮತ್ತು 7.30 ರ ನ್ಯೂಸ್‌ನಲ್ಲಿ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು ಏನು ಹೇಳಿದರೆ ಮಾನ್ಯ ನಮ್ಮ ಬಿ.ಸಿ. ಪಾಟೀಲ್ ಸಾಹೇಬರು ಹೇಳಿದರಲ್ಲಾ ನಮ್ಮ ರಾಜ್ಯ ಪೊಲೀಸ್ ಹಿರಿಯ ಅಧಿಕಾರಿಗಳು ಗೋಲಿಬಾರ್‌ನಲ್ಲಿ ಮೃತಪಟ್ಟಿರುವ ಬಗ್ಗೆ ಇನ್ನು ರುಜುವಾತು ಪಡಿಸುವುದಕ್ಕೆ ಆಗಿಲ್ಲವೆಂದು ಹೇಳಿ. 6.00 ಗಂಟೆಯಾದರು ಹೇಳುವುದಕ್ಕೆ ಆಗಿಲ್ಲವಲ್ಲ, ಜಿಲ್ಲಾ ಮಂತ್ರಿಗಳಿಗೆ ಈ ವಿಷಯ ಗೊತ್ತಾಗದೇ ಹೋದರೆ ಏನು ಈ ಸರ್ಕಾರ ಸತ್ತು ಹೋಗಿದೆಯೋ, ಇದೆಯೋ ಗೊತ್ತಾಗಲಿಲ್ಲವಲ್ಲಾ. ಏಕೆಂದರೆ 3.30 ಗಂಟೆಗೆ ಘಟನೆ ನಡೆದಿದೆ ಎಂದ ಮೇಲೆ ಸಾಯಂಕಾಲ 7.00 ಗಂಟೆಯಲ್ಲಿ ನಿಮ್ಮ ADGP ಯವರು ಈ ರೀತಿ statement ಮಾಡುತ್ತಾರೆಂದ ಮೇಲೆ ಈ ರಾಜ್ಯದಲ್ಲಿ ಸರ್ಕಾರ ಏನಾಗಿದೆ. ತಾವು ಬೇಕಾದರೆ ಒಪ್ಪಿಕೊಂಡು ಬಿಡಿ. ತಾವು ಒಬ್ಬ ಜಿಲ್ಲಾ ಮಂತ್ರಿಗಳು, ಜವಾಬ್ದಾರಿಯುತವಾದವರು, ಬೇರೆಯವರು ಅಲ್ಲ. ಜಿಲ್ಲಾ ಮಂತ್ರಿಗಳು ತಾವು ವಿಮಾನದಲ್ಲಿ ಬಂದಿರಿ, ಸಾಯಂಕಾಲ 5.00 ಗಂಟೆಯಲ್ಲಿ ನೀವು ಪ್ರೆಸ್‌ನಲ್ಲಿ ಪತ್ರಿಕೆಯವರ ಮುಂದೆ ಹೇಳಿದಿರಿ. ಅವರು 7.00 ಗಂಟೆಯಲ್ಲಿ ಇಲ್ಲವೆಂದು ಹೇಳಿದ ಮೇಳೆ ಅವರನ್ನು ನೀವು ಸಸ್ಪೆಂಡ್ ಮಾಡಿ. ನೀವು ಈ ತರಹ ಹೇಳುವುದಕ್ಕೆ ಹೋಗಬಾರದು. ಏಕೆಂದರೆ, ಆಡಳಿತದಲ್ಲಿ ಒಂದು ಕಡೆ DGP ಯವರು ಹೇಳುತ್ತಾರೆ. ಪ್ರಾಣ ರಕ್ಷಣೆಗೋಸ್ಕರ ಗುಂಡು ಹಾರಿಸಿದರು ಎಂದು. ಎನ್ನೊಂದು ಸಾರಿ ಅಲ್ಲಿ ಎಸ್.ಪಿ.ಯವರು ಏನು ಹೇಳುತ್ತಾರೆ. ಗೊತ್ತೆ? ಸ್ವಲ್ಪ ದಯಮಾಡಿ ಹೇಳುತ್ತೇನೆ. ತಾಳ್ಮೆಯಿಂದ ಇರಬೇಕು ನೀವು ಜಿಲ್ಲಾ ಮಂತ್ರಿಗಳು ಇಲ್ಲದಿದ್ದರೆ ನಾನು ಕುಳಿತುಕೊಂಡು ಬಿಡುತ್ತೇನೆ. ಎಸ್.ಪಿ.ಯವರು ಏನು ಹೇಳುತ್ತಾರೆ. ನನ್ನ ರಕ್ಷಣೆಗೋಸ್ಕರ ಯಾರೋ ಗುಂಡು ಹಾರಿಸಿದರು. ಎಂದು ಹೇಳುತ್ತಾರೆ. DGP ಸಾಹೇಬರು ಏನು ಹೇಳುತ್ತಾರೆ. ಪ್ರಾಣರಕ್ಷಣೆಗೋಸ್ಕರ ಗುಂಡು ಹಾರಿಸಿದ್ದಾರೆಂದು ಹೇಳುತ್ತಾರೆ. ನಾವು DGP ಯವರನ್ನು ನಂಬಲೇಬೇಕ್ರೀ SP ಯವರನ್ನು ನಂಬಲೇಬೇಕೇ ಯಾರನ್ನು ನಂಬಬೇಕು ಹೇಳಿ. ಮಾನ್ಯ ಮಂತ್ರಿಗಳು 3.15 ಕ್ಕೆ ಎಂದು ಹೇಳುತ್ತಾರೆ. ಈಗ ಒಬ್ಬೊಬ್ಬರು ಒಂದೊಂದು ಹೇಳಿಕೆಯನ್ನು ಈ ತರಹ ಕೊಟ್ಟಾಗ ಏನು ಹೇಳಬೇಕಾಗಿರುತ್ತದೆ. ದಯಮಾಡಿ ತಾವು ಈ ಸಭೆಗೆ ಹೇಳಿ. ಇದು ಒಂದು ಭಾಗ, ಉದಾಸಿ ಸಾಹೇಬರು ಹಿರಿಯರು ಇದ್ದಾರೆ. ನಾನು ನಿಮ್ಮ ಬಗ್ಗೆ ಏನು ಹೇಳುವುದಿಲ್ಲ. ನೀವು ದೇವರ ಸಮಾನ ಇದ್ದಂತೆ. ಏಕೆಂದರೆ ಸಿದ್ದಲಿಂಗಪ್ಪನ

ಮಕ್ಕಳಿಗೆ ವಿದ್ಯಾಭ್ಯಾಸ. ನೌಕರಿ ಎಲ್ಲವನ್ನು ಕೊಡಿಸಿದಿರಲ್ಲಾ ಅವರ ಹೆಂಡತಿಗೆ ನೀವೆ ಆದೇಶವನ್ನು ಕೊಟ್ಟು ಬಂದಿರುತ್ತೀರಿ. ಈ ಪುಟ್ಟಪ್ಪನ ಮನೆಯವರಿಗೆ ಏನಾಗಿತ್ತು ಸ್ವಾಮಿ. ಏಕೆಂದರೆ ಅವನು ಬಿ.ಜಿ.ಪಿ.ಯ ಕಾರ್ಯಕರ್ತನಲ್ಲವಾ? ಅವರು ಬಿ.ಜೆ.ಪಿ.ಯ ಪ್ರೆಸಿಡೆಂಟ್ ಅದಕ್ಕೆ ಅವರಿಗೆ ವಿದ್ಯಾಭ್ಯಾಸವನ್ನು ಕೊಟ್ಟಿರುತ್ತೀರಿ. ಏಕೆಂದರೆ ಸಿದ್ದಲಿಂಗಪ್ಪನವರ ಹೆಂಡತಿಗೆ ಕೆಲಸವನ್ನು ಕೊಟ್ಟಿರುತ್ತೀರಿ. ಮಕ್ಕಳಿಗೆ ವಿದ್ಯಾಭ್ಯಾಸ ಕೊಡುತ್ತೀರಿ. ಆದರೆ ಈ ಪುಟ್ಟಪ್ಪನ ಕಡೆ ಮೂರು ದಿವಸವಾದರೂ ಯಾರು ತಿರುಗಿ ನೋಡುವುದಿಲ್ಲವಲ್ಲಾ ಸರ್. ಉದಾಸಿ ಸಾಹೇಬರೆ, ಗೂಟದ ಕಾರು ಎಲ್ಲಾ ವ್ಯವಸ್ಥೆ ಇರುವಾಗ ನೀವು ಏನು ಮಾಡುತ್ತಿದ್ದೀರಿ. ನಾನಲ್ಲಾ ಮಾನ್ಯ ಯಡಿಯೂರಪ್ಪ ಸಾಹೇಬರು ಹೇಳಿದ್ದು, ಗೂಟದ ಕಾರು, ವಿಮಾನ ಎಲ್ಲಾ ವ್ಯವಸ್ಥೆ ಇರುವಾಗ ಜಿಲ್ಲಾಮಂತ್ರಿಗಳು ಏನು ಮಾಡುತ್ತಾರೆಂದು ಕೇಳಿದ್ದಾರೆ. ಅದು ಮಾನ್ಯ ಜೆ.ಹೆಚ್. ಪಟೇಲ್‌ರ ಕಾಲದಲ್ಲಿ ನಾನು ಹೇಳುವುದು. ಈ ಪುಟ್ಟಪ್ಪನ ಮನೆಗೆ ಯಾರಾದರೂ ಹೋಗಿದ್ದೀರಾ? ಜಿಲ್ಲಾಧಿಕಾರಿಗಳು ಹೋಗಿದ್ದರಾ? ಪೋಲೀಸ್ ಹಿರಿಯ ಅಧಿಕಾರಿಗಳು ಹೋಗಿದ್ದರಾ? ಪುಟ್ಟಪ್ಪನನ್ನು ಯಾರು ನೋಡಿಲ್ಲಾ. ಅವನ ಮೂರು ಮಕ್ಕಳಿಗೆ ಏನಾದರೂ ಕೊಟ್ಟಿದ್ದೀರಾ?

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ನಾವು ಎರಡು ಮೂರು ಬಾರಿ ಹೋಗಿ ಬಂದಿದ್ದೇವೆ ಸ್ವಾಮಿ. ನಿಮ್ಮಲ್ಲಿ ಮಾಹಿತಿ ಇಲ್ಲವಲ್ಲಾ ಅದಕ್ಕೆ ನಾವು ಮಾಹಿತಿಯನ್ನು ಕೊಟ್ಟೆವು. ಯಾರು ಭೇಟಿ ಕೊಟ್ಟಿಲ್ಲವೆಂದು ಹೇಳಿದರು. ನಾವು ಹಾಗೂ ಜಿಲ್ಲಾ ಮಂತ್ರಿಗಳು ಭೇಟಿ ಕೊಟ್ಟು ಬಂದಿದ್ದೇವೆಂದು ಹೇಳಿದೆವು. ನೀವು ಸುಳ್ಳು ಹೇಳಿದರೆ ನಾವು ಸುಮ್ಮನೆ ಕುಳಿತುಕೊಳ್ಳೋಣವೇ? 3,4 ಬಾರಿ ಹೋಗಿ ಬಂದಿರುವ ಬಗೆ ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತಂದಿರುತ್ತೇವೆ. ಅಧಿಕಾರಿಗಳು ಹೋಗಿದ್ದಾರೆ ಎನ್ನುವಂಥ ಮಾತನ್ನು ಹೇಳಿದೆವು.

ಶ್ರೀ ಹೆಚ್.ಡಿ. ರೇವಣ್ಣ: ನೀವು ಎರಡನೇ ಬಾರಿ ಶಾಸಕರು ಆಗಿರುವುದು. ಮಾನ್ಯ ಉದಾಸಿ ಸಾಹೇಬರು 6ನೇ ಸಲ ಸದಸ್ಯರಾಗಿರುವುದು. ಅವರಿಗೆ ಅಷ್ಟೊಂದು ಹೇಳುವುದಕ್ಕೆ ಏಕೆ ಹೋಗುತ್ತೀರಿ. ಅವರು ಜಿಲ್ಲಾ ಮಂತ್ರಿಗಳು ಅವರಿಗೆ ಉತ್ತರ ಕೊಡುವ ಶಕ್ತಿ ಇದೆ. ದಯಮಾಡಿ ನೀವು interfere ಆಗಬೇಡಿ. ಏಕೆಂದರೆ ಪುಟ್ಟಪ್ಪ ಹಾಸ್ಪಿಟಲ್‌ನಲ್ಲಿ ಇದ್ದಾರೆ. ಕೊನೆಗೆ ಏನು ಮಾಡುತ್ತಾರೆಂದರೆ, ಮಾಜಿ ಪ್ರಧಾನ ಮಂತ್ರಿಗಳಾದ ದೇವೇಗೌಡರು ಟಿ.ವಿ. ನೋಡಿದ ಮೇಲೆ ಪುಟ್ಟಪ್ಪ ಇರುವ ಆಸ್ಪತ್ರೆಗೆ ಹೋಗುತ್ತಾರೆ. ಅವರ ಮನೆಯ ಪರಿಸ್ಥಿತಿ ಎಲ್ಲವನ್ನು ನೋಡಿದ ಮೇಲೆ, ಅದು ಆದ ಮೇಲೆ ಪುಟ್ಟಪ್ಪನನ್ನು ನೋಡುವುದಕ್ಕೆ

ಸಂಜಯಗಾಂಧಿ ಹಾಸ್ಪಿಟಲ್‌ಗೆ ಯಾರು ಹೋಗಿಲ್ಲ. ತಾಳ್ಮೆಯಿಂದ ಅಲ್ಲಿಯವರೆಗೆ ಇದ್ದರೆ ಹೇಳುತ್ತೇನೆ. ಆಮೇಲೆ ಮಾಜಿ ಪ್ರಧಾನ ಮಂತ್ರಿಗಳು ಹೋಗಿ, ಅಲ್ಲಿಂದ ಮಾರನೇ ಬೆಳಗ್ಗೆ ಹುಬ್ಬಳ್ಳಿಯ ಅವರ ಮನೆಗೆ ಹೋಗುತ್ತಾರೆ. ಅಲ್ಲಿ ಹೋಗಿ ದುಡ್ಡು ಕೊಟ್ಟ ಮೇಲೆ, ಮಾರನೇ ದಿವಸ ಮುಖ್ಯಮಂತ್ರಿಗಳು ಮತ್ತು ಉದಾಸಿ ಸಾಹೇಬರು ಅವರ ಮನೆಗೆ ಹೋಗಿದ್ದು. ಪುಟ್ಟಪ್ಪನ ಮನೆಗೆ ಎಷ್ಟು ರೂ.ಗಳನ್ನು ಕೊಟ್ಟರು. ಅವರ ಮಕ್ಕಳಿಗೆ ಏನಾದರೂ ದುಡ್ಡು ಕೊಟ್ಟಿದ್ದಾರಾ? ಅವನು ಹಾಸ್ಪಿಟಲ್‌ನಲ್ಲಿ ಇದ್ದಾನೆ. ಮಾನ್ಯ ದೇವೇಗೌಡರು ಹೋದಾಗ ಕೈ ಮುಗಿದು ಏನು ಮಾಡುತ್ತಾರೆಂದರೆ, ಸ್ವಾಮಿ ನಾನು ಸಾಯುತ್ತಿದ್ದೇನೆ. ಕೊನೆಗೆ ನನ್ನ ಹೆಂಡತಿ ಮಕ್ಕಳನ್ನು ತೋರಿಸಿ ಎಂದಾಗ ಏನು ಮಾಡಿದ್ದಾರೆ ನಿಮ್ಮ ಅಧಿಕಾರಿಗಳು ಎಂದರೆ, ಜನರಲ್ ಕ್ಲಾಸಿನ ಎರಡು ಟಿಕೇಟ್‌ಗಳನ್ನು ನಿಮ್ಮ Second Division Clerk ತೆಗೆದುಕೊಂಡು ಹೋಗಿ ಅವರ ಮನೆಗೆ ಎಸೆದು ಬಂದಿದ್ದಾರೆ. ನಿಜವೇ ಇಲ್ಲವೇ ಎನ್ನುವುದನ್ನು ತಾವು ದಯಮಾಡಿ ಹೇಳಿ. ಟಿಕೇಟ್ ಕೊಟ್ಟು ಅವರ ಹೆಂಡತಿಗೆ ಹೋಗಿ ಎಂದು ಹೇಳಿದ್ದಾರೆ. ಅಧಿಕಾರಿಗಳು ಯಾರಾದರೂ ಹೋಗಿ ಕರೆದುಕೊಂಡು ಬಂದು ಅವರ ಹೆಂಡತಿಗೆ ಗಂಡನನ್ನು ತೋರಿಸಿದ್ದಾರಾ? ನಾನು ಮಾನವೀಯತೆಯ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಹೋಗಲಿ ಅವನು ಈಗ ಉಳಿಯುತ್ತಾನಾ? ಆ ಪರಿಸ್ಥಿತಿ ಇದೆ. ಅದು ತಮಗೆ ಗೊತ್ತಿರುವಂಥ ವಿಷಯ. ಅವರು ಇವತ್ತು ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದಾನೆ. ಅವನ ಮಗನಿಗೆ ಕೆಲಸವನ್ನು ಕೊಡುತ್ತೇವೆಂದು ಹೇಳಿದ್ದೀರಾ? ಮಕ್ಕಳಿಗೆ ವಿದ್ಯಾಭ್ಯಾಸ ಕೊಡುತ್ತೇವೆಂದು ಏನಾದರೂ ಹೇಳಿದ್ದೀರಾ? ಇದು ಒಂದು ಕಡೆ, ನಾನು ನಿಮ್ಮನ್ನು ಇಷ್ಟೆ ಕೇಳುವುದು. ಏಕೆಂದರೆ ನಾನು ವೈಯಕ್ತಿಕವಾಗಿ ಏನು ಬೆರೆಸುವುದಿಲ್ಲ. ಗೋಲಿಬಾರ್ ನಡೆದಿದೆ ಮತ್ತು ಇದರಲ್ಲಿ 5-6 ವಿಷಯಗಳು ಇವೆ. ಗೊಬ್ಬರ ಇವತ್ತು ಸರಿಯಾಗಿ ವಿತರಣೆಯಾಗುತ್ತಿದೆಯಾ? ಏನಾದರೂ ಖಾಸಗಿಯವರು ಮಾಡುತ್ತಿದ್ದಾರಾ? ಏಕೆಂದರೆ ಒಂದು ಭಾವನೆ ಇದೆ. ಪತ್ರಿಕೆಯವರು ಉದಾಸಿ ಸಾಹೇಬರು ಇದ್ದರೆಂದು ಹೇಳಿದ್ದಾರೆ. ಈ ಪತ್ರಿಕೆಯವರು ಸುಳ್ಳು ಎಂದು ಹೇಳಿ ಬಿಡೋಣ ಬಿಡಿ. ನೀವು ಚುನಾವಣೆಯಲ್ಲಿ ಗೆಲ್ಲುವವರೆಗೆ ಪತ್ರಿಕೆಯವರೆಲ್ಲಾ ನಿಜವಾಗಿದ್ದರು. ಚುನಾವಣೆ ಗೆದ್ದು ಬಂದು 23 ದಿವಸವಾದ ಮೇಲೆ ಪತ್ರಿಕೆಯವರು ಕಳ್ಳರು ಎನ್ನುವ ಪರಿಸ್ಥಿತಿ ಬಂದು ಆಯಿತು. ಏಕೆಂದರೆ ನಾನು ಹೇಳುವುದು ಚುನಾವಣೆ ಕಳೆಯುವವರೆಗೂ ಪತ್ರಿಕೆಯವರು ಒಳ್ಳೆಯವರು. ಉದಾಸಿಯವರ ಮೇಲೆ ಅಥವಾ ಬಿ.ಜೆ.ಪಿ.ಯವರ ಮೇಲೆ ಏನೋ ಸಿಟ್ಟಾಗಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಾವು ಏನಾದರೂ ಬರೆಸಿದ್ದೇವೆಂದರೆ, ಇಲ್ಲಿ

VOL-XV, P-XVI

ಯಾರಾದರೂ ಹೇಳಿ ಬರೆಸಿದ್ದಾರೆಂದರೆ ಅದು ಬೇರೆ. ಅದು ಹಾವೇರಿ ಪತ್ರಿಕೆಯಲ್ಲಿ ಬರೆದಿರುವುದು. ಉದಾಸಿಯವರ ಕಡೆಗೆ ಜಾಸ್ತಿ ಸಂಪರ್ಕ ಇರುವುದು. ಪತ್ರಿಕೆಯವರಿಗೆ ಮಾನ್ಯ ಉದಾಸಿಯವರನ್ನು ಕಂಡರೆ ಜಾಸ್ತಿ ಪ್ರೀತಿ. ನನ್ನನ್ನು ಹಾಗೂ ಮಾನ್ಯ ಬಿ.ಸಿ. ಪಾಟೀಲ್‌ರನ್ನು ಕಂಡರೆ ಪತ್ರಿಕೆಯವರು ಸ್ವಲ್ಪ ದೂರ ಇರುತ್ತಾರೆ. ಏಕೆಂದರೆ ಆ ಉದ್ದೇಶದಿಂದ ನಾನು ಹೇಳುತ್ತಿದ್ದೇನೆ. ಉದಾಸಿ ಸಾಹೇಬರು ನಾನು ಗನ್ ಕೊಡಿಸಿದ್ದಾರೆಂದು ಹೇಳುತ್ತಿಲ್ಲ. ಈ ಘಟನೆಯಾದಾಗ ಎಸ್.ಪಿ.ಯವರು ಎಲ್ಲಿ ಇದ್ದರೆಂದು ಕೇಳಿ. ಹಾವೇರಿ ಪ್ರವಾಸಿ ಮಂದಿರದಲ್ಲಿ ಇದ್ದರೋ ಇಲ್ಲವೋ ಕೇಳಿ. ಡಿ.ಸಿ.ಯವರು ಎಲ್ಲಿ ಇದ್ದರು ಕೇಳಿ. ಹಾವೇರಿ ಪ್ರವಾಸಿ ಮಂದಿರದಲ್ಲಿ ಇದ್ದರೋ ಇಲ್ಲವೋ ಕೇಳಿ. ಆಯಿತು ಈ ಘಟನೆ ನಡೆದ ತಕ್ಷಣ ಯಾರ್ಯಾರು ಹೋಗಿದ್ದಾರೆ, ಮಾನವೀಯತೆಯ ದೃಷ್ಟಿಯ ಬಗ್ಗೆ ಮಾನ್ಯ ಶಾಸಕರು ಮಾತನಾಡುತ್ತಿದ್ದಾರಲ್ಲವೆ, 3.15 ನಲ್ಲಿ ಘಟನೆಯಾಯಿತು, ನೀವು ಫ್ಲೈಟ್‌ನಲ್ಲಿ ಬಂದಿರಿ. ಇಲ್ಲಿ ಪ್ರೆಸ್ ಕಾನ್‌ಫರೆನ್ಸ್ ಕರೆದಿರಿ. ನಿಮ್ಮ ಬಗ್ಗೆ ನಾನು ಆಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಶಾಸಕರು ಎಸ್.ಪಿ.ಯವರ ಜೊತೆಯಲ್ಲಿ ಹೋಗಿ ಕರೆದುಕೊಂಡು ಅವರನ್ನು ತೋರಿಸಿದರಾ? ಆಯಿತು ಎಸ್.ಪಿ.ಯವರು ಈ ತರಹ ಹೇಳಿದರಲ್ಲಾ. ತಹಶೀಲ್ದಾರ್‌ವರಿಗೆ ಬರೆದುಕೊಡಿ ಎಂದು ಪ್ರೆಶರ್ ಮಾಡಿದರು. ಎಂದು ಹೇಳಿ. ಗೋಲಿಬಾರ್ ಮಾಡುವುದಕ್ಕೆ ಆರ್ಡರ್ ಮಾಡಿದೆವು ಎಂದಿರಲ್ಲಾ ಯಾವ ಅಧಿಕಾರಿ ಪ್ರೆಶರ್ ಮಾಡಿದರು ಅವರನ್ನು ಏಕೆ ಸಸ್ಪೆಂಡ್ ನೀವು ಮಾಡಲಿಲ್ಲ. ಬರೆದು ಕೊಡಿ ಎಂದು ಬೇರೆ ಅಧಿಕಾರಿಗಳ ಮೇಲೆ ಒತ್ತಡವನ್ನು ತಂದ ಅಧಿಕಾರಿಯನ್ನು ಇವತ್ತಿನವರೆಗೆ ಅವನ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ. ದಯಮಾಡಿ ಹೇಳಿ ಹೇಗೆ ನೀವು ನ್ಯಾಯಾಂಗ ತನಿಖೆಯನ್ನು ಮಾಡುತ್ತೀರಿ? ಈ ತನಿಖೆಯನ್ನು ಮಾಡಬೇಕಾದರೆ, ಎಸ್.ಪಿ.ಯವರನ್ನು ಅಲ್ಲಿಯೇ ಇಡುತ್ತೀರಿ, ಡಿ.ಸಿ.ಯವರನ್ನು ಅಲ್ಲಿಯೇ ಇಡುತ್ತೀರಿ. ಅಲ್ಲಿಂದ ಡಿ.ಸಿ.ಯವರನ್ನು ಚಿನ್ನದ ಗಣಿಗೆ ಕೊಟ್ಟಿರಬೇಕು ಗೊತ್ತಿಲ್ಲ. ನೀನು ಗೋಲಿಬಾರ್ ಮಾಡಿಸಿ ಬಂದಿದ್ದೀಯಾ ಅದಕ್ಕಾಗಿ ನಿನಗೆ ಚಿನ್ನದ ಗಣಿಯನ್ನು ಕೊಟ್ಟಿದ್ದೇವೆಂದು ಹೇಳಿ. ಅವರದು ವರ್ಗಾವಣೆ ಅಗಿರಬಹುದು. ಎಲ್ಲಿಗಾದರೂ ಕೊಡಲಿ ಬಿಡಿ, ವೈಯಕ್ತಿಕವಾಗಿ ನಾನು ಯಾರ ಬಗ್ಗೆ ಆರೋಪ ಮಾಡುವುದಕ್ಕೆ ಹೋಗುವುದಿಲ್ಲ. ಹೋಗಲಿ ಬಿಡಿ ಪಾಪ. ನನಗೆ ಇಷ್ಟೆ ಬೇಕಾಗಿರುವುದು, ನ್ಯಾಯಾಂಗ ತನಿಖೆ ಮಾಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬಯ್ಯುವುದನ್ನು ಬಿಟ್ಟು, ಹೋಗಲಿ ಬಿಡಿ ಪಾಪ,

ಹೋಗಲಿ ಬಿಡಿ ಪಾಪ ಎಂದು ಎಷ್ಟು ಸಲ ಅನ್ನುತ್ತೀರಿ.

ಶ್ರೀ ಹೆಚ್.ಡಿ. ರೇವಣ್ಣ: ನಾವು ಇನ್ನು ಏನು ಮಾಡುವುದಕ್ಕಾಗುತ್ತದೆ ಸರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಂದರೆ ಏನು ಅರ್ಥ. ನೀವು ಅವರು ಇಬ್ಬರು ರಾಜಿಯಾಗಿದ್ದೀರೋ ಏನು ನಮಗೆ ಗೊತ್ತಾಗುತ್ತಿಲ್ಲ. ಏಕೆಂದರೆ ಪ್ರತಿಯೊಂದು ಮಾತಿಗೂ ಪಾಪ, ಪಾಪ ಎಂದರೆ ಪುಣ್ಯ ಯಾರು ಮಾಡಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಕೊನೆಗೆ ಸ್ವಲ್ಪ ಅದನ್ನು ಕನ್‌ಕ್ಲೂಡ್ ಮಾಡೋಣ ಬಿಡಿ ಸರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಅದಕ್ಕೆ ಬಂದಿರುವುದು.

ಅಧ್ಯಕ್ಷರು: ಇಲ್ಲಾ ಅವರು ಮಾತನಾಡುವ ಸ್ಟೈಲ್ ಹಾಗೆ ಇದೆ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಮನವಿ ಮಾಡುವುದು ಇಷ್ಟೆ. ನ್ಯಾಯಾಂಗ ತನಿಖೆಯನ್ನು ಮಾಡಬೇಕಾದರೆ, ಕೆಲವೊಂದು ರೂಲ್ಸ್‌ನ್ನು ನೋಡಬೇಕು. ಯಾರ್ಯಾರು ಇದರಲ್ಲಿ ವಿಫಲತೆಯಾಗಿದ್ದಾರೆ. ಎಸ್.ಪಿ.ಯವರು ಆಗಿದ್ದಾರೋ, ಡಿ.ಸಿ.ಯವರು ಆಗದ್ದರೋ, ಏಕೆಂದರೆ ನಮ್ಮ ಶಾಸಕರು ಪಾಪ ಅವರ ಮೇಲೆ ಆರೋಪ ಬರಬಾರದು. ಪ್ರಾಮಾಣಿಕವಾದ ಶಾಸಕರಿದ್ದಾರೆ. ಅದರಲ್ಲಿ ಅವರನ್ನು ಇನ್‌ಕ್ಲೂಡ್ ಮಾಡಬೇಕಾಗುತ್ತದೆ. ಏಕೆಂದರೆ ಅವರೆ ಹೇಳಿಬಿಟ್ಟಿದ್ದಾರೆ. ಬಿ.ಸಿ. ಪಾಟೀಲ್‌ರನ್ನು ಮಾಡಿ.

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ಧನ್ಯವಾದಗಳು, ಶಾಸಕರು ನೀವು ಪ್ರಾಮಾಣಿಕವಾಗಿದ್ದಾರೆಂದು ನೀವು ಹೇಳಿದಿರಿ, ನಿಮಗೂ ಗೊತ್ತಾಗಿ ಬಿಟ್ಟಿದೆ ನಮ್ಮ ವಿಚಾರ.

ಶ್ರೀ ಬಿ.ಸಿ. ಪಾಟೀಲ್: ನಾನು ಪಕ್ಕದ ಕ್ಷೇತ್ರದವನು. ಎಲ್ಲಾ ವಿರೋಧ ಪಕ್ಷದ ಶಾಸಕರನ್ನು ಇನ್‌ಕ್ಲೂಡ್ ಮಾಡಿಬಿಡಿ, ಒಬ್ಬರೇ ಏಕೆ?

ಶ್ರೀ ಹೆಚ್.ಡಿ. ರೇವಣ್ಣ: ಸರ್ ಅವರ ಕೇಳುತ್ತಿದ್ದಾರೆ, ಬಿ.ಸಿ. ಪಾಟೀಲ್‌ರನ್ನು ಸೇರಿಸಬೇಕೆಂದು.

ಶ್ರೀ ಬಿ.ಸಿ. ಪಾಟೀಲ್: ನ್ಯಾಯವನ್ನು ಕೇಳಿದ ತಕ್ಷಣ ಈ ತರಹ ಹೇಳಿದರೆ ಹೇಗೆ?

ಶ್ರೀ ನೆಹರು ಚನ್ನಬಸಪ್ಪ ಓಲೇಕಾರ್: ನಾವು ಮಾತನಾಡುವಾಗ ನೀವು ಎದ್ದೆದ್ದು ಮಾತನಾಡುತ್ತಿದ್ದೀರಿ. ಮಾನ್ಯ ರೇವಣ್ಣನವರು ಮಾತನಾಡುವಾಗ ಗಪ್ಪಚುಪ್ಪ ಕುಳಿತಿದ್ದೀರಲ್ಲಾ ಏಕೆ? ಏನು ಎನ್ನುವುದನ್ನು ಈಗ ಹೇಳಿ.

ಶ್ರೀ ಬಿ.ಸಿ. ಪಾಟೀಲ್: ನಾವು ಈಗ ಸರ್ಕಾರದ ವಿರುದ್ಧ ಆಪಾದನೆಯನ್ನು ಮಾಡುತ್ತಿದ್ದೇವೆ. ನೀವು ಸಮರ್ಥಿಸಿಕೊಳ್ಳುತ್ತಿದ್ದೀರಿ ಅದಕ್ಕೆ.

ಶ್ರೀ ಹೆಚ್.ಡಿ. ರೇವಣ್ಣ: ಸ್ವಾಮಿ ಗೊಬ್ಬರದ ಬಗ್ಗೆ ಇಷ್ಟೆ. ಇವತ್ತು ರಾಜಕೀಯ ಮಾಡುವುದು ಬೇಡ. ರಾಜಕೀಯ ಬೇಕಾದರೆ ಹೊರಗಡೆ ಮಾಡುತ್ತೇವೆ. ಸ್ವಾಮಿ. ರಾಜಕೀಯ ಮಾಡುವುದಕ್ಕೆ ಈಗ ಚುನಾವಣೆ ಸದ್ಯಕ್ಕೆ ಯಾವುದು ಇಲ್ಲ. ಸದ್ಯಕ್ಕೆ ಪಾರ್ಲಿಮೆಂಟ್ ಚುನಾವಣೆ ಬಂದರೆ ಬರಬೇಕು. ಅಲ್ಲಿಯವರೆಗೆ ಯಾವುದೆ ಚುನಾವಣೆ ಇಲ್ಲ. ನಾನು ಒಂದನ್ನು ಹೇಳುವುದು, ಸನ್ಮಾನ್ಯ ಮುಖ್ಯಮಂತ್ರಿಗಳು ಮನವಿ ಮಾಡುವುದು. ಇವತ್ತು ಏನು ಗೋಲಿಬಾರ್ ಘಟನೆಯಾಗಿದೆ. ನ್ಯಾಯಾಂಗ ತನಿಖೆ ಮಾಡಬೇಕಾದರೆ, ಸುಮ್ಮನೆ ನ್ಯಾಯಾಂತ ತನಿಖೆ ಮಾಡುತ್ತೇವೆಂದರೆ ಸಮಂಜಸವಾಗಿ ಇರುವುದಿಲ್ಲ. ನ್ಯಾಯಾಂಗ ತನಿಖೆಯಲ್ಲಿ ಪೂರ್ತಿ ಏನೇನು ಒಳಪಡಿಸಬೇಕು ಎನ್ನುವುದರ ಬಗ್ಗೆ ಸದನದ ಮುಂದೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಹೇಳಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಹೇಳಿದ್ದಾರೆ. ಮಾನ್ಯ. ಬಿ.ಸಿ. ಪಾಟೀಲ್‌ರು ಹೇಳಿದ್ದಾರೆ. ಈಗ ನ್ಯಾಯಂಗ ತನಿಖೆಯನ್ನು ಮಾಡಬೇಕಾದರೆ ಇದರಲ್ಲಿ ಯಾರ್ಯಾರು ಅಧಿಕಾರಿಗಳು ಇದ್ದಾರೆ. ಅವರನ್ನು ಮೊದಲು ಅಮಾನತ್ತು ಮಾಡಬೇಕಾಗುತ್ತದೆ. ರೆಕಾರ್ಡ್‌ನ್ನು ತಿದ್ದುವಂಥ ಸನ್ನಿವೇಶ ಇರುತ್ತದೆ. ಏಕೆಂದರೆ DGP ಸಾಹೇಬರೆ ಒಂದು ಹೇಳಿಕೆಯನ್ನು ಕೊಟ್ಟಾಗ, ಎಸ್.ಪಿ.ಯವರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ. ಎಂದರೆ, ಗನ್ನನ್ನು ಕಿತ್ತುಕೊಂಡು ಹೋದರು. ಅದಕ್ಕೋಸ್ಕರ ದಯಮಾಡಿ ಇದನ್ನು ಮಾಡಬೇಕಾಗುತ್ತದೆ. ಅದರೊಂದಿಗೆ ಉದಾಸಿಯವರು ನಿಷ್ಪಕ್ಷಪಾತವಾಗಿ ತನಿಖೆಯು ನಡೆಯಲಿ. ನನ್ನ ಮೇಲೆ ಅನುಮಾನ ಬರುವುದು ಬೇಡ. ಪತ್ರಿಕೆಯವರು ನನ್ನ ಹೆಸರು ಬರೆದಿದ್ದಾರೆಂದು ಹೇಳುತ್ತಾರೆ. ಬೇಕಾದರೆ ಅವರು ರಾಜನಾಮೆ ಕೊಡುವುದಿದ್ದರೆ ಅವರು ಕೊಡಲಿ ನಮ್ಮದೇನೂ ಅಭ್ಯಂತರವಿಲ್ಲ. ನಾವು ಕೊಡಿ ಎಂದು ಒತ್ತಾಯ ಮಾಡುವುದಿಲ್ಲ. ಅವರು ವಿಷ್ಪಕ್ಷಪಾತವಾಗಿ ನಡೆಯಲಿ, ಏಕೆಂದರೆ ನಾಳೆ ಅವರು ಕೆಲಸ ಮಾಡದೇ ಹೋದರೆ ನಮ್ಮ ಕೆಲಸವೆಲ್ಲಾ ನಿಂತು ಹೋಗುತ್ತದೆ. ಆ ರೀತಿ ಆಗುವುದು ಬೇಡ. ಅವರೇನಾದರು ಪತ್ರಕೆಯವರ ಮೇಲೆ ಅನುಮಾನ ಬಂದು ಯಾರಾದರೂ

ಪತ್ರಿಕೆಯವರು ಅವರ ಮೇಲೆ ಸುಳ್ಳು ಬರೆದಿದ್ದಾರೆಂದರೆ ರಾಜೀನಾಮೆ ಕೊಡಲಿ. ಇಲ್ಲದೇ ಹೋದರೆ ಪತ್ರಿಕೆಯವರು ಸುಳ್ಳು ಬರೆದಿದ್ದಾರೆಂದರೆ ಬೇಡ. ನಾನು ಅವರಿಗೆ ಒತ್ತಾಯ ಮಾಡಲಿಕ್ಕೆ ಹೋಗುವುದಿಲ್ಲ. ಇಷ್ಟು ಹೇಳಿ ಬಿಡುತ್ತೇನೆ. ತಿರುಚುವುದು ಬೇಡ. ಶಾಸಕರೇ ಇವತ್ತು ನನ್ನನ್ನು ಸೇರಿಸಿ ಮಾಡಿ ಎಂದು ಹೇಳಿದ್ದಾರೆ. ದಯಮಾಡಿ ಎಲ್ಲವನ್ನು ಸೇರಿಸಿ ಎರಡು ಜಂಟಿ ಸದನ ಸಮಿತಿ ಮಾಡಿ ಏಕೆಂದರೆ ಗೊಬ್ಬರದಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆಯೆಂದು ಹೇಳುತ್ತಿದ್ದಾರೆ. ಅದಕ್ಕೆ ಯಾರ್ಯಾರು ಅಧಿಕಾರಿಗಳು ಕಾರಣಕರ್ತರು ಇದ್ದಾರೋ ಅದಕ್ಕೋಸ್ಕರ ಸದನ ಸಮಿತಿಯನ್ನು ಮಾಡಲಿ ಜೊತೆಗೆ ಗೋಲಿಬಾರ್‌ನಲ್ಲಿ ಇವೆಲ್ಲಾ ಸೇರಿಸಿ ಸದನದ ಮುಂದೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಗೋಲಿಬಾರ್ ಬಗ್ಗೆ ಯಾವ ರೀತಿ ನ್ಯಾಯಾಂಗ ತನಿಖೆ ಮಾಡುತ್ತೀರಿ ಎಂಬುದರ ಬಗ್ಗೆ ಪೂರ್ತಿ ಒಂದು ಗೈಡ್‌ಲೈನ್ಸ್ ಕೊಟ್ಟು ಆಮೇಲೆ ಮಾಡಿದರೆ ಇದೊಂದು ನಿಷ್ಪಕ್ಷಪಾತವಾದ ನ್ಯಾಯಾಂಗ ತನಿಖೆಯಾಗುತ್ತದೆ ಅಲ್ಲದೆ ಹೋದರೆ ಕಾಟಾಚಾರ ನ್ಯಾಯಾಂಗ ತನಿಖೆಯಾಗುತ್ತದೆಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಎಂ ಉದಾಸಿ (ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವರು):– ಪುಟ್ಟಪ್ಪ ಆಸ್ಪತ್ರೆಗೆ ದಾಖಲಾದಾಗ ಒಬ್ಬರು ಹೋಗಲಿಲ್ಲವೆಂದು ಹೇಳಿದರು. ಇದು ಸತ್ಯಕ್ಕೆ ದೂರವಾದುದುದೆಂದು ಇಲ್ಲಿ ಹೇಳಬಯಸುತ್ತೇನೆ. ನಾನು ಸ್ವತಃ ಹೋಗಿ ಭೇಟಿಯಾಗಿದ್ದೇನೆ. ನನ್ನ ಮಿತ್ರರಾದಂಥ ಬೊಮ್ಮಾಯಿಯವರು ಸಹ ಸ್ವತಃ ಹೋಗಿ ಭೇಟಿಯಾಗಿ ಅವರಿಗೆ ಹಣಕಾಸು ನೆರವು ಕೊಡುವುದರೊಂದಿಗೆ ಎರಡು ಸಲ ಆಸ್ಪತೆಗೆ ಹೋಗಿ ಭೇಟಿಯಾಗಿದ್ದೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿರುವಂಥ ಸಂದರ್ಭದಲ್ಲಿ ಅವರಿಗೆ ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇದೆ ಎಂದು ಗೊತ್ತಾದ ಮೇಲೆ ಬೆಂಗಳೂರಿಗೆ ಕರೆಸುವ ವ್ಯವಸ್ಥೆಯನ್ನು ನಾನು ಮಾಡಿ ಅವರೊಂದಿಗೆ ಒಬ್ಬ ಡಾಕ್ಟರ್ ಅನ್ನು ಕಳುಹಿಸಿ ಪ್ರತಿ ಗಂಟೆಗೊಮ್ಮೆಗೆ ಅವರ ಆರೋಗ್ಯದ ಬಗ್ಗೆ ವಿವರವನ್ನು ನಾನು ಪಡೆಯುತ್ತಿದ್ದ. ಆಸ್ಪತ್ರೆಗೆ ತಲುಪಿದ ಮರುದಿನ ಬೆಳಿಗ್ಗೆಯೇ ನಾನು ಹೋಗಿ ಆಸ್ಪತ್ರೆಯಲ್ಲಿ ಆತನನ್ನು ಭೇಟಿಯಾಗಿದ್ದೇನೆ. ಅವರೊಂದಿಗೆ ಸಮಾಲೋಚನೆ ಮಾಡಿ ಅವರಿಗೆ ಸಂಪೂರ್ಣವಾದ ವ್ಯವಸ್ಥೆ ಮಾಡುವಂಥ ಕಾರ್ಯಕ್ರಮವನ್ನು ಜರುಗಿಸಿದ್ದೇನೆ. ನಾನು ಮತ್ತು ಮುಖ್ಯಮಂತ್ರಿಗಳು ಹೋಗಿ ಅವರ ಭೇಟಿ ಮಾಡಿದಾಗ ಪುಟ್ಟಪ್ಪನ ಮೂರು ಮಕ್ಕಳ ಹೆಸರಿನಲ್ಲಿ ಒಂದೊಂದು ಲಕ್ಷ ರೂ.ಗಳ ಠೇವಣಿ ಇಡುತ್ತೇವೆಂಬ ಭರವಸೆಯನ್ನು ಸಹಿತ ಕೊಟ್ಟು ನಾವು ಬಂದಿದ್ದೇವೆ. ಆತನ

ಆರೋಗ್ಯದ ದೃಷ್ಟಿಯಿಂದ ಮಾಡಬೇಕಾದ ಎಲ್ಲಾ ವ್ಯವಸ್ಥೆಯನ್ನು ಮಾಡಲಿಕ್ಕೆ ಹೇಳಿದ್ದೇವೆ. ಅವರ ಮಕ್ಕಳು ಮತ್ತು ಹೆಂಡತಿ ಬರುವ ಸಲುವಾಗಿ ವಾಹನದ ವ್ಯವಸ್ಥೆಯನ್ನು ನಾವು ಮಾಡಿಯಾಗಿತ್ತು. ಅಷ್ಟರಲ್ಲಿಯೇ ಜೆ.ಡಿ.ಎಸ್.ನ ಮಿತ್ರರು ಅವರಿಗೆ ವಾಹನದ ವ್ಯವಸ್ಥೆಯನ್ನು ಮಾಡಿ ಕರೆದುಕೊಂಡು ಬರಲಿಕ್ಕೆ ಪ್ರಯತ್ನ ಪಟ್ಟಿದ್ದಾರೆ. ಇದನ್ನು ರಾಜಕಾರಣಕ್ಕೆ ಬೆರೆಸಬೇಕಾದಂಥ ಅವಶ್ಯಕತೆ ಇಲ್ಲ. ಇದರಲ್ಲಿ ಯಾವ ಪಕ್ಷದವರು ಏನು ಮಾಡಿದ್ದಾರೆ. ಯಾವ ದುಷ್ಕರ್ಮಿಗಳು ಏನು ಮಾಡಿದ್ದಾರೆ. ಯಾರು ಇದರ ದುರುಪಯೋಗ ಮಾಡಿಕೊಂಡಿದ್ದಾರೆಂಬುದೆಲ್ಲವೂ ಹೊರ ಬರಬೇಕಾದರೆ ದಾಖಲೆಗಳಿವೆ. ಅಧಿಕಾರಿಗಳು ತಪ್ಪು ಮಾಡಿದ್ದರೆ, ಪಕ್ಷದವರನ್ನು ಹೊರತಪಡಿಸಿ ಹೊರಗಿನವರು ಏನಾದರೂ ಮಾಡಿದ್ದಾರೆ ಯಾರು ಅಪರಾಧಿಗಳು ಎಂಬುದು ಹೊರಬರಬೇಕಾದರೆ ಎಲ್ಲಾ ವೀಡಿಯೋ ಚಿತ್ರೀಕರಣ ಇರುವುದರಿಂದ ಅದನ್ನು ನಾವು ತಪಾಸಣೆ ಮಾಡಿದ ಮೇಲೆ ಅವೆಲ್ಲಾ ಹೊರಗೆ ಬರುತ್ತದೆ. ಆದ್ದರಿಂದ ನಾವು ಅನಾವಶ್ಯಕವಾಗಿ ಯಾರದೇ ಹೆಸರುಗಳನ್ನು ಹೇಳುವುದಕ್ಕೆ ಬಯಸುವುದಿಲ್ಲ. ಇದೆಲ್ಲದರ ಜೊತೆಗೆ ಸನ್ಮಾನ್ಯ ರೇವಣ್ಣನವರು ಮಾತನಾಡುತ್ತಾ ನಾನು ಪತ್ರಕೆಯವರೆಲ್ಲರ ಮೇಲೆ ದೂಷಣೆ ಮಾಡಿದೆ ಎಂಬುದು ಸರಿಯಲ್ಲ. ಒಂದು ಪತ್ರಿಕೆಯವರ ನನ್ನ ಹೆಸರನ್ನು ಬರೆದರು, ಪಾಪ ಅವರಿಗೆ ಮಾಹಿತಿಯ ಕೊರತೆ ಇರಬಹುದು. ಈ ಮಾಹಿತಿಯ ಕೊರತೆಯಿಂದ ಬರೆದದ್ದನ್ನೇ ಬೇರೆಯವರು ಅದನ್ನು ಅನರ್ಥ ಮಾಡಿಕೊಂಡಿದ್ದಾರೆ. ಆ ಕಾರಣದಿಂದ ಅದರ ಬಗ್ಗೆ ಒಂದು ಪತ್ರಿಕೆಯವರು ಎಂದು ಇಷ್ಟು ಹೇಳಿದ್ದೇನೆ. ಅದೇನು ಎನ್ನುವುದನ್ನು ವಿಚಾರಣೆ ನಡೆದಾಗ ಎಲ್ಲವೂ ಬಯಲಿಗೆ ಬರುತ್ತದೆ. ದಯವಿಟ್ಟು ಗೊಬ್ಬರದ ವಿಷಯದಲ್ಲಿ ನಡೆದಿರುವ ಘಟನೆ ಏನು? ಅಥವಾ ಗೊಬ್ಬರದ ಹಿಂದೆ ರಾಜಕಾರಣ ಮಾಡಿದರು ಎಂಬ ವಿಷಯವೆ ಇರಲಿ ಅಥವಾ ದುಷ್ಕರ್ಮಿಗಳೂ ಏನಾದರೂ ಮಾಡಿದ್ದರೆ ಅದೆಲ್ಲವು ಬಯಲಿಗೆ ಬರುವಂಥ ದಿವಸ ಬಹಳ ದಿವಸಗಳು ಉಳಿದಿಲ್ಲ. ನ್ಯಾಯಾಂಗ ತನಿಖೆಯಾಗುತ್ತದೆಂದು ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ. ಅವರು ಕೇಳಿದಂಥ ಪುಟ್ಟಪ್ಪನವರ ವಿಷಯದಲ್ಲಿ, ಕಾರಿನ ವಿಷಯದಲ್ಲಿ ಪತ್ರಿಕೆಯ ವಿಷಯದಲ್ಲಿ, ಪುಟ್ಟಪ್ಪನ ಮೂರು ಮಕ್ಕಳಿಗೆ ನಾವು ಯಾವ ರೀತಿ ಸಹಾಯ ಮಾಡಬೇಕೆಂದು ಅವರ ಮನೆಗೆ ಹೋಗಿ ನಾನು ಭೇಟಿಯಾಗಿ ಬಂದುದು, ಸಾಧ್ಯವಾದ ಹಣಕಾಸು ನೆರವು ಕೊಟ್ಟಿದ್ದನ್ನು ಸಹ ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮೂರು ಲಕ್ಷ ರೂ.ಗಳ ನೆರವು ಕೊಟ್ಟಿದ್ದೇವೆಂದರು. ದೇವೇಗೌಡರು ಆಸ್ಪತ್ರೆಗೆ ಹೋಗಿ ನೋಡಿ, ಪುಟ್ಟಪ್ಪನನ್ನು ಅವರ ಹೆಂಡತಿಯನ್ನು ಹಾವೇರಿಯಲ್ಲಿ ಅವರ ಮನೆ ಪರಿಸ್ಥಿತಿಯನ್ನು ನೋಡಿ ಮೂರು ಲಕ್ಷ ರೂ.ಗಳನ್ನು ಕೊಟ್ಟ ಮೇಲೆ ಮಾರನೇ ದಿವಸ ಬೆಳಿಗ್ಗೆ ಇದನ್ನು ಮಾಡಿದ್ದಾರೆಂದು ಅವರ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ಸಿದ್ದಲಿಂಗಪ್ಪನಿಗೆ ನಿಮ್ಮ ಬಿ.ಜೆ.ಪಿ. ಅಧ್ಯಕ್ಷರು ತಮ್ಮ ವಿ.ಎಸ್.ಎಸ್.ಎಲ್. ಅಧ್ಯಕ್ಷರಿಗೆ ಕೊಟ್ಟರಲ್ಲ ನೀವು ಅವತ್ತೇ ಸರ್ಕಾರದಿಂದ ಮೂರು ಲಕ್ಷ ರೂ.ಗಳನ್ನು ಅನೌನ್ಸ್ ಮಾಡಿಬಿಟ್ಟಿದ್ದಿದ್ದರೆ ಉದಾಸಿ ಸಾಹೇಬರು ಮಾಡಿದ್ದಾರೆಂದು ಹೇಳುತ್ತಿದ್ದೆ. ಆದರೆ ದೇವೇಗೌಡರು ಮೂರು ಲಕ್ಷ ರೂ.ಗಳನ್ನು ಕೊಟ್ಟ ಬಂದ ಮೇಲೆ ತಾವು ಮಾರನೇ ದಿವಸ ಸಂಜಯಗಾಂಧಿ ಆಸ್ಪತ್ರೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ತಾವು ಹೋಗಿ ಸಹಾಯ ಮಾಡಿಸುವುದು ಎಂದು ಸಭೆಯ ಗಮನಕ್ಕೆ ತರಬಯಸುತ್ತೇನೆ. ಪತ್ರಿಕೆ ಸುಳ್ಳು ಹೇಳಬೇಕು. ಎಲೆಕ್ಟ್ರಾನಿಕ್ ಮೀಡಿಯಾದವರು ಸುಳ್ಳು ಹೇಳಬೇಕು. ತಾವು ನೋಡಿ.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ): ಹಾವೇರಿ ಗೋಲಿಬಾರ್ ಹಾಗೂ ರಾಸಾಯನಿಕ ಗೊಬ್ಬರಗಳ ವಿತರಣೆಯಲ್ಲಿ ಅವ್ಯವಸ್ಥೆಯಾಗಿರುವಂಥ ವಿಚಾರದ ಬಗ್ಗೆ ತಾವು ಇವತ್ತು ನಮಗೆ ಅನುಮತಿ ಕೊಟ್ಟಿದ್ದೀರಿ. ಬಹುಶಃ ಇವತ್ತು ರಾಜ್ಯದಲ್ಲಿ ಇಂಥ ಅತ್ಯಂತ ಗಂಭೀರವಾದಂಥ ವಿಚಾರ ಇನ್ನೊಂದಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ರಾಸಾಯನಿಕ ಗೊಬ್ಬರ ಯಾವ ಕಾಲಕ್ಕೆ ಯಾವಾಗ ಎಷ್ಟೆಷ್ಟು ಬೇಕು ಎನ್ನತಕ್ಕದ್ದು ಇಲಾಖೆಯವರ ಹತ್ತಿರ ಅಂಕಿ ಅಂಶಗಳ ಸಹಿತ ಅವರ ಹತ್ತಿರ ಮಾಹಿತಿ ಇರುತ್ತದೆ. ಬಹಶಃ ಸನ್ಮಾನ್ಯ ಯಡಿಯೂರಪ್ಪನವರ ಸರ್ಕಾರ ಬಂದ ತಕ್ಷಣ ಅವರ ಜೊತೆಯಲ್ಲೇ ಮಳೆಯು ಬಹಳ ಚೆನ್ನಾಗಿ ಬಂತು. ಇವರು ಬಂದಾಗ ಮಳೆ ಬಂತು ಎಂದು ಬಹಳ ಜನ ಸಂತೋಷ ಪಟ್ಟರು. ತಕ್ಷಣ ಅವರೇನು ಕಾರ್ಯಕ್ರಮ ಕೈಗೆತ್ತಿಕೊಳ್ಳಬೇಕಾಗಿತ್ತು ಎಂದರೆ ಮಳೆ ಬಂದ ತಕ್ಷಣ ರೈತರು ಬಿತ್ತನೆ ಬೀಜ ಮತ್ತು ಅದಕ್ಕೆ ಬೇಕಾದ ಗೊಬ್ಬರ ರೆಡಿ ಇಟ್ಟುಕೊಂಡಿರುತ್ತಾರೆ. ಆದರೆ ಮಳೆ ಅನಿರೀಕ್ಷಿತವಾಗಿ ಮುಂಚೆಯೇ ಬಂದದ್ದರಿಂದ ಈ ಗೊಬ್ಬರ ರೈತರಿಗೆ ಬೇಕಾಗಿ ಬಂತು. ಅದು ಕೇವಲ ಐದಾರು ಜಿಲ್ಲೆಗಳಲ್ಲಿ ಮಾತ್ರ ಮಳೆ ಬಂತು. ನಮ್ಮ ವಿರೋಧ ಪಕ್ಷದ ನಾಯಕರು ಕೊಟ್ಟ ಮಾಹಿತಿ ಪ್ರಕಾರ ಪ್ರತಿ ತಿಂಗಳು ಏನು requirement ಇತ್ತು. ಸ್ವಲ್ಪ ಹೆಚ್ಚು ಕಡಿಮೆ by and large ಅವರು supply ಕೊಟ್ಟಿದ್ದಾರೆ. ಕೊಟ್ಟರತಕ್ಕಂಥ ಸಪ್ಲೈ ಪ್ರತಿ ಜಿಲ್ಲೆಗೂ ವಿತರಣೆಯಾಗಿತ್ತು. ಎಲ್ಲಿ ಅವಶ್ಯಕತೆ ಇತ್ತೋ ಅಲ್ಲಿ

ತಕ್ಷಣ ಅವರು ಡೈವರ್ಟ್ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕಿತ್ತು. ಬಹುಶಃ ಅವರು ಸರಿಯಾದಂಥ ಪ್ಲಾನ್ ಮಾಡಲಿಲ್ಲ. ವಿತರಣೆ ವ್ಯವಸ್ಥೆ ಬಗ್ಗೆ ಎಷ್ಟು ಗಮನ ಕೊಡಬೇಕಾಗಿತ್ತೋ ಅಷ್ಟು ಗಮನ ಸರ್ಕಾರ ಕೊಡಲಿಲ್ಲ. ಬಿತ್ತನೆ ಕಾಲ ಪ್ರಾರಂಭವಾಗುತ್ತಿದೆ. ಮಳೆ ಬಂದಿದೆ ಎಂದರೆ ಅಂದಿನ ಬೆಳೆಗೆ ಬಿತ್ತನೆ ಬೀಜ, ಗೊಬ್ಬರ ಬೇಕು ಎಂಬುದು ಎಲ್ಲಾ ರೈತರಿಗೂ ಗೊತ್ತಿರುವಂಥ ವಿಚಾರ. ಅದಕ್ಕೆಷ್ಟು ಪ್ರಾಮುಖ್ಯತೆ ಕೊಡಬೇಕಾಗಿತ್ತೋ ಬಹುಶಃ ಅಷ್ಟು ಪ್ರಾಮುಖ್ಯತೆಯನ್ನು ಸರ್ಕಾರ ಕೊಡಲಿಲ್ಲ. ಆ ಇಲಾಖೆ ಸಂಪೂರ್ಣವಾಗಿ ವಿಫಲವಾಯಿತು. ಅದರ ಜೊತೆಗೆ ನಿಮಗೆ ಗೊತ್ತಿದೆ. ಇವತ್ತು fertilizer companies ಒಂದು ಕಡೆ ಇರಬಹುದು, petroleum products ಇರಬಹುದು. chemical products ಇರಬಹುದು. ಅದು international market ನಲ್ಲಿ ಜಾಸ್ತಿಯಾಗಿದೆ. ಅದರ ಪರಿಣಾಮ ಈಗ ಇಡೀ ಅಂತರಾಷ್ಟ್ರೀಯ ವ್ಯಾಪ್ತಿಯಲ್ಲಿ ಬೆಲೆಗಳು ಜಾಸ್ತಿಯಗುವಂಥ ಪರಿಸ್ಥಿತಿಯೂ ಇದೆ. ಅಂಥ ಸಂದರ್ಭದಲ್ಲಿ ಈ ಗೊಬ್ಬರದ ಕಾರ್ಖಾನೆಗಳು ಇವತ್ತು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿಲ್ಲ. Decontrol ಮಾಡಿದ್ದಾರೆ. ಅವು ಸ್ವತಂತ್ರವಾಗಿ ಉತ್ಪಾದನೆಯನ್ನು ಮಾಡುತ್ತಿವೆ. ಕೇಂದ್ರ ಸರ್ಕಾರಕ್ಕೇನಾದರೂ ಅಧಿಕಾರ ಇದ್ದರೆ ಆ ಬೆಲೆಗಳನ್ನು ನಿಯಂತ್ರಣ ಮಾಡತಕ್ಕಂಥ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ, ಸಬ್ಸಿಡಿ ಕೊಡುತ್ತಾರೆ. ಬೆಲೆ ನಿಗದಿ ಮಾಡಿ ನಿಯಂತ್ರಣ ಮಾಡುವಂಥ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. ಇವತ್ತು ಫ್ಯಾಕ್ಟರೀಸ್ ಮೇಲೆ ಸರ್ಕಾರಕ್ಕೆ ನೇರವಾದ ನಿಯಂತ್ರಣ ಇಲ್ಲ. ಇಂಥ ಒಂದು ಸಂದರ್ಭದಲ್ಲಿ ಬಹಶಃ ಅವರು ಉತ್ಪಾದನೆ ಮಾಡುವಂಥದ್ದರಲ್ಲಿ ಅಲ್ಲಿ ಅಂತರ್ರಾಷ್ಟ್ರೀಯ ಮಾರುಕಟ್ಟೆಗಳ ಪರಿಸ್ಥಿತಿಗನುಗುಣವಾಗಿ ಸ್ವಲ್ಪ ಹೆಚ್ಚು ಕಡಿಮೆ ಆಗಿರಬಹುದು. ಆದರೆ Fertilizer factories ನಲ್ಲಿ ಉತ್ಪಾದನೆ ಆಗಿದೆ. ಅನೇಕ ಗೊಬ್ಬರದ ವಿತರಕರು ಗೊಬ್ಬರವನ್ನು ತಂದಿದ್ದಾರೆ. ಪರಿಸ್ಥಿತಿಯನ್ನು ಅವಲೋಕಿಸಿ ತಕ್ಷಣ ಮಳೆ ಬಂದಾಗ ಈ black market ಅಗತಕ್ಕಂಥದ್ದು ಮಾರಾಟಗಾರರಿಗೆ ಅನುಭವ ಇದೆ. ಆ traders ಗೆ ಅನುಭವ ಇರುವುದನ್ನು ಸರ್ಕಾರ ಅವರ ಮೇಲೆ ಎಷ್ಟು ತೀಕ್ಷ್ಣವಾಗಿ ಅವರ ಮೇಲೆ ನಿಗಾ ಇಟ್ಟು ಆ ವಿತರಣಾ ವ್ಯವಸ್ಥೆಗೆ ಏನು ಯೋಜನೆ ಮಾಡ ಬೇಕಾಗಿತ್ತು ಅದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಅದರಿಂದಲೇ ಇವತ್ತು ನಮ್ಮ ರಾಜ್ಯದಲ್ಲಿ ಈ ರೀತಿಯ ದುಷ್ಪರಿಣಾಮಗಳಾಗಿರುವುದು. ನಾವು ಬಹಳ ನಿರೀಕ್ಷೆ ಮಾಡಿದ್ದೆವು. ಕೇಂದ್ರ ಸರ್ಕಾರ ಡಾ॥ ಮನಮೋಹನ್‌ಸಿಂಗ್ ರವರ ನೇತೃತ್ವದಲ್ಲಿ 5 ಎಕರೆ ಒಳಗಿರುವ ರೈತರಿಗೆ ಸುಮಾರು 60 ಸಾವಿರ ಕೋಟಿ ಸಾಲ ಮನ್ನಾ ಮಾಡಿದೆ. ನೀವು ಬಹುಶಃ ಅದಕ್ಕಿಂತ ಹೆಚ್ಚಿನ ಸಹಾಯ ರೈತರಿಗೆ ಕೊಡುತ್ತಾರೆ ಎಂಬ ನಿರೀಕ್ಷೆಯಲ್ಲಿ ನಾವು ಇದ್ದೆವು.

ಅಂಥ ಸಂದರ್ಭದಲ್ಲಿ ಬಹಶಃ ಅನಿರೀಕ್ಷಿತವಾಗಿ ಈ ಘಟನೆಗಳು ರಾಜ್ಯದಲ್ಲಿ ನಡೆದಿದೆ. ಈ ಘಟನೆ ನಡೆಯತಕ್ಕ ಸಂದರ್ಭದಲ್ಲಿ ನಿರ್ಲಕ್ಷವೇ ಮೂಲ ಕಾರಣ. ಸರ್ಕಾರ ಅದರ ಬಗ್ಗೆ ಎಷ್ಟು ಗಮನ ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿಲ್ಲ. ಏನು ಬಿತ್ತನೆ ಕಾಲ ಪ್ರಾರಂಭವಾಯಿತೋ ಆ ಸಂದರ್ಭಕ್ಕೆ ತಕ್ಕಂತೆ ಸರ್ಕಾರದಲ್ಲಿ ಏನು ವ್ಯವಸ್ಥೆಗಳನ್ನು ಮಾಡಬೇಕಾಗಿತ್ತೋ ಅದರ ಬಗ್ಗೆ ಗಮನ ಕೊಡದೇ ಸಂಪೂರ್ಣವಾಗಿ ವಿಫಲವಾಗಿದೆ. ಆ ಕಾರಣದಿಂದಲೇ ಈ ದುರ್ಘಟನೆಗಳು ನಡೆಯಲು ಸಾಧ್ಯವಾಯಿತು. ಬಹಶಃ ಅದಾದನಂತರ ಕೇಂದ್ರದ ಕಾರ್ಯದರ್ಶಿಯವರು ಬರುತ್ತಾರೆ.ಅವರೊಂದಿಗೆ ಮಾನ್ಯ ಮುಖ್ಯಮಂತ್ರಿಯವರು, ಅಧಿಕಾರಿಗಳು ಚರ್ಚೆ ಮಾಡುತ್ತಾರೆ. ಅವರು ಒಂದು ಶೆಡ್ಯೂಲ್ ಕೊಟ್ಟು ಹೋಗುತ್ತಾರೆ. ಅದರ ಪ್ರಕಾರ ನಾವು ನಿಮ್ಮ ರಾಜ್ಯಕ್ಕೆ ಏನು ಅಲಾಟ್‌ಮೆಂಟ್ ಕೊಟ್ಟಿದ್ದೇವೆ ಅದನ್ನು ವ್ಯವಸ್ಥಿತ ರೀತಿಯಲ್ಲಿ ವಿತರಣೆ ಮಾಡಿ ಎಂದು ಸಲಹೆ ಕೊಟ್ಟು ಹೋಗುತ್ತಾರೆ. ಎಲ್ಲಿ ಬೇಡಿಕೆ ಇದೆ ಅಲ್ಲಿಗೆ ಗೊಬ್ಬರವನ್ನು ಶಿಫ್ಟ್ ಮಾಡಿ ಎಂದು. ನಿಮಗೆ ಬೇರೆ ಗೊಬ್ಬರ monthly ಪೈಸ್ ನಿಮ್ಮ ಬೇಡಿಕೆ ಏನಿದೆ ಅದನ್ನು ಸರಬರಾಜು ಮಾಡುತ್ತೇವೆ ಎನ್ನತಕ್ಕ ಸಲಹೆಯನ್ನು ಕೇಂದ್ರ ಸರ್ಕಾರದ ಕಾರ್ಯದರ್ಶಿಯವರು ಕೊಟ್ಟಿದ್ದಾರೆ. ದುರಾದೃಷ್ಟ ಆ ವ್ಯವಸ್ಥೆಯ ಬಗ್ಗೆ ಸಹ ಸರ್ಕಾರ ಗಮನ ಕೊಡಲಿಲ್ಲ. ಆದ್ದರಿಂದಲೆ ಸಬ್ಸಿಕ್ವೆಂಟ್ ಆಗಿ ರೈತರು ಹೋರಾಟ ಮಾಡುವುದು, ಆತ್ಮಹತ್ಯೆ ಮಾಡಿಕೊಳ್ಳುವುದು ಜಾಸ್ತಿಯಾಯಿತು. ಇವತ್ತಿನವರೆಗೂ ಅಗತ್ಯವಿರುವಷ್ಟು ಗೊಬ್ಬರ ಯಾವ ರೈತರಿಗೂ ಸಿಗುತ್ತಿಲ್ಲ. ಎಲ್ಲೆಲ್ಲೆ ಬಿತ್ತನೆ ನಡೆಯುತ್ತಿದೆ. ಆ ಭಾಗದಲ್ಲಿ ಬೇಕಾದಷ್ಟು ರಾಸಾಯನಿಕ ಗೊಬ್ಬರ ಇವತ್ತಿಗೂ ದೊರೆಯುತ್ತಿಲ್ಲ. ಪಹಣಿ ತನ್ನಿ, ಅದನ್ನು ತನ್ನಿ ಇದನ್ನು ತನ್ನಿ ಎಂದು ಸುಮ್ಮನೆ ಸತಾಯಿಸಿ ಎರಡು, ನಾಲ್ಕು ಮೂಟೆ ಕೊಡಿ ಎನ್ನುವುದು ಇದೆಯೇ ಹೊರತು ದೊಡ್ಡ ದೊಡ್ಡ ರೈತರಿಗಂತು ತುಂಬಾ ತೊಂದರೆಯಾಗಿದೆ. ನಮ್ಮ ನಾಯಕರು ಹೇಳಿದಂತೆ ನೂರಕ್ಕೆ ಎಪ್ಪತ್ತೈದು ಪರ್ಸೆಂಟ್ ಮಳೆ ಆಶ್ರಯದ ಜಮೀನು ಇರತಕ್ಕದ್ದು. ರೈತ ವರ್ಷಕ್ಕೆ ಒಂದು ಸಲ ಮಳೆ ಆಶ್ರಯದ ಬೆಳೆ ತೆಗೆದುಕೊಳ್ಳುವುದಕ್ಕೆ ಕಾಯುತ್ತಿರುತ್ತಾನೆ. ಆ ಸಂದರ್ಭದಲ್ಲಿ ಅವನಿಗೆ ಬೇಕಾದ ಬಿತ್ತನೆ ಬೀಜ ಮತ್ತು ರಾಸಾಯನಿಕ ಗೊಬ್ಬರವನ್ನು ಕೊಡದಿದ್ದರೆ ಬಹುಶಃ ಅವನಷ್ಟು ಡೆಸ್ಪರೇಟ್ ಆಗತಕ್ಕವನು ಬೇರೆ ಇಲ್ಲ. ಏಕೆಂದರೆ ಅದನ್ನು ಬಿಟ್ಟರೆ ಅವನಿಗೆ ಜೀವನಕ್ಕೆ ಬೇರೆ ದಾರಿಯೇ ಇಲ್ಲ. ಮಳೆಯ ಆಶ್ರಯದಿಂದಲೇ ಅವನು ಪೂರ್ತಿ ಹೊಟ್ಟೆ ತುಂಬಿಸಿಕೊಳ್ಳಬೇಕು. ಅಂಥ ಸಂದರ್ಭದಲ್ಲಿ ಅವನಿಗೆ ಕನಿಷ್ಟ ಬಿತ್ತನೆ ಬೀಜ ಮತ್ತು ರಾಸಾಯನಿಕ ಗೊಬ್ಬರವನ್ನು ಜವಾಬ್ದಾರಿಯುತವಾದ ಸರ್ಕಾರ ಒದಗಿಸಬೇಕಾಗಿರುವುದರಲ್ಲಿ ಸಂಪೂರ್ಣವಾಗಿ

VBL-2, F-22

ವಿಫಲವಾಗಿರುವುದರಿಂದ ಇವತ್ತು ಈ ರಾಜ್ಯದಲ್ಲಿ ಇಷ್ಟೊಂದು ಹಾಹಾಕಾರ ಆಗತಕ್ಕ ಅವಕಾಶ ಬಂದಿದೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ಇಷ್ಟೇ ಹೇಳತಕ್ಕದ್ದು. ನೀವು ಸಂಘರ್ಷ ಮಾಡುವುದಿಲ್ಲ ಎಂದು ಹೇಳಿದ್ದೀರಿ ಬಹಳ ಸಂತೋಷ. ನಿಜವಾಗಿ ಇವತ್ತು ಇರತಕ್ಕ ಪರಿಸ್ಥಿತಿ, ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಸಂಘರ್ಷಕ್ಕೆ ಹೋಗಬಾರದು. ತಾವು ದೊಡ್ಡ ಮನಸ್ಸು ಮಾಡಿ ಬ್ರಾಡ್‌ಕಾನ್‌ಸೆಪ್ಟ್ ಇಟ್ಟುಕೊಂಡು ತಾವು ನಿಜವಾಗಿ ರಾಜ್ಯದ ಅಭಿವೃದ್ಧಿಯ ಕಡೆ ಹೋಗಬೇಕಾಗಿರುವುದನ್ನು ನಾನು ಒಪ್ಪುತ್ತೇನೆ. ಆದರೆ ಇಂಥ ಕ್ರೈಸ್ ಬಂದಿದೆ. ರಾಜ್ಯದಲ್ಲಿ ಗೋಲಿಬಾರ್ ಆಗಿದೆ. ದಿನಾ ಆತ್ಮಹತ್ಯೆಯಾಗುತ್ತಿದೆ. ಇಂಥ ಸಂದರ್ಭದಲ್ಲಿ ಪತ್ರಿಕೆಯನ್ನು ನೋಡಿದರೆ ಯಾಕೋ ಮುಖ್ಯಮಂತ್ರಿಗಳು ಮತ್ತೆ ಎಲ್ಲೋ ಸಿಡುಕು, ಮೊದಲು ವಿರೋಧ ಪಕ್ಷದಲ್ಲಿ ಇದ್ದಾಗ ಇತ್ತಲ್ಲ. ಆ ರೀತಿ ಇದ್ದಂತೆ ಆಗುತ್ತಿದೆ. ಇಂಥ ಇಶ್ಯೂಗಳು ನಿಮ್ಮ ಕೈಯಲ್ಲಿ ಏನಾದರೂ ಸಿಕ್ಕಿದ್ದರೆ ಈ ಸಭೆಯನ್ನು ಗಡಗಡ ನಡುಗಿಸಿಬಿಡುತ್ತಿದ್ದೀರಿ. ಆದರೆ ಇಲ್ಲಿರುವ ನಾವೆಲ್ಲರೂ ಸೌಮ್ಯವಾದವರೆ, ನಿಜ ಹೇಳಬೇಕಾದರೆ ನಾವು ಯಾರೂ ಅಗ್ರೆಸಿವ್ ಆಗಿಲ್ಲ. ನೀವು ಮಾತನಾಡುತ್ತಿದ್ದಕ್ಕೆ ನಮ್ಮನ್ನು ಹೋಲಿಕೆ ಮಾಡಿದಾಗ ನಾವು ಏನೇನೂ ಇಲ್ಲ. ಮಾನ್ಯ ಜಗದೀಶ್ ಶೆಟ್ಟರ್ ಸಾಹೇಬರು ಇಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾಗ ನಾವು ಈ ಸಭೆಯಲ್ಲಿ ಇದ್ದೆವು. ಅವರು ಅವರದ್ದೇ ಆದ ದಾಟಿಯಲ್ಲಿ ಮಾತನಾಡುತ್ತಿದ್ದರು. ಆದರೆ ತಾವು ಮಾತ್ರ ಇಂಥ ವಿಚಾರಗಳು ಬಂದಾಗ ತಡೆದುಕೊಳ್ಳಲು ಆಗುತ್ತಿರಲಿಲ್ಲ. ಆದರೆ ದುರಾದೃಷ್ಟ ಇವತ್ತಿನ ಪತ್ರಿಕೆಯನ್ನು ನೋಡಿದಾಗ ಒಂದು ಕಡೆ ಸದನದ ಎಲ್ಲಾ ಪಕ್ಷದ ಸದಸ್ಯರ ನಿಯೋಗವನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳುತ್ತೀರಿ. ನಾನು ಮುಖ್ಯಮಂತ್ರಿಯವರಿಗೆ ಒಂದು ಮಾತನ್ನು ಹೇಳುತ್ತೇನೆ. ಈ ಸಮಸ್ಯೆ ಬಂದಾಗ ನಿಮ್ಮ ಮಂತ್ರಿಮಂಡಲದ ಸದಸ್ಯರೇ ಹೋಗಿದ್ದೀರಿ ಆವತ್ತೇ ಎಲ್ಲಾ ಪಕ್ಷದ ಸದಸ್ಯರನ್ನು ಕರೆದುಕೊಂಡು ಹೋಗುವ ಬಗ್ಗೆ ಏಕೆ ಪ್ಲಾನ್ ಮಾಡಲಿಲ್ಲ? ಏಕೆ ಎಲ್ಲಾ ಪಕ್ಷದ ಸದಸ್ಯರನ್ನು ಕರೆದುಕೊಂಡು ಹೋಗಲಿಲ್ಲ ಎಂದು ನಮಗೆ ನೋವು.

ಶ್ರೀ ಡಿ. ಕೆ, ಶಿವಕುಮಾರ್: ಏಕೆಂದರೆ ಕೇಂದ್ರದವರು ಏನಾದರೂ ಕೊಡುವುದು ಇದ್ದರೆ ಕೊಟ್ಟೇ ಕೊಡುತ್ತಾರೆ. ಕಾಂಗ್ರೆಸ್ ನವರಿಗೆ ಎಲ್ಲಿ ಒಳ್ಳೆಯ ಹೆಸರು ಬಂದು ಬಿಡತ್ತದೋ, ತಮಗೆ ಮಾತ್ರ ಆ ಕ್ರೆಡಿಟ್ ತೆಗೆದುಕೊಳ್ಳಬೇಕೆಂದು ಆ ರೀತಿ ಮಾಡಲಿಲ್ಲ!

ಶ್ರೀ ವಿ. ಮುನಿಯಪ್ಪ: ಇಲ್ಲ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ: ಇಬ್ಬರದ್ದೂ ತಪ್ಪು ಪಾಪ ಅವರು ದೆಹಲಿಗೆ ಹೋಗಿ ಮುಂದೆ ವೈಷ್ಣವದೇವಿಗೆ ಹೋಗಬೇಕಾಗಿತ್ತು. ಆಗ ಅಷ್ಟು ದೂರ ನಿಮಗೆಲ್ಲಾ ಕರೆದುಕೊಂಡು ಹೋಗುತ್ತಾರೆ?

ಶ್ರೀ ವಿ. ಮುನಿಯಪ್ಪ: ಆ ಕೆಲಸ ಆವತ್ತೇ ಮಾಡಿದ್ದರೆ ಬಹುಶಃ ಇಷ್ಟೊಂದು ದುಷ್ಪರಿಣಾಮ ಆಗುತ್ತಿರಲಿಲ್ಲ. ತಾವು ವಿಶ್ವಾಸ ಮತ ಕೇಳತಕ್ಕ ಸಂದರ್ಭದಲ್ಲಿ ಈ ಪ್ರಸ್ತಾಪ ಬಂತು. ಮಳೆ ಬರುತ್ತಿದೆ, ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರದ ಸಮಸ್ಯೆಯಾಗುತ್ತಿದೆ ಎಂಬುದು ಬಂತು ತಾವೇ ಕಾರ್ಯದರ್ಶಿಯವರು ಇಲ್ಲಿಗೆ ಬರುತ್ತಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಅದರ ಬಗ್ಗೆ ಗಮನ ಹರಿಸಿದ್ದೇವೆ. ಸಮಸ್ಯೆ ಇಲ್ಲ ಎಂದು ಹೇಳಿದಿರಿ, ಕಾರ್ಯದರ್ಶಿಯವರು ಇಲ್ಲಿಗೆ ಬಂದು ಒಂದು ನಿರ್ದಿಷ್ಟವಾದ ಶೆಡ್ಯೂಲನ್ನು ಕೊಟ್ಟು ಹೋದರು. ನಿಮಗೆ ಇಷ್ಟು ಅಲಾಟ್‌ಮೆಂಟ್ ಕೊಟ್ಟಿದ್ದೇವೆ. ನಿಮಗೆ ಇಷ್ಟು ಸಪ್ಲೈ ಇದೆ, ಅದಕ್ಕೆ ಅನುಗುಣವಾಗಿ ನಿಮಗೆ ಎಲ್ಲೆಲ್ಲಿ ಬೇಡಿಕೆ ಇದೆ ಅಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳಿ ಎಂದು ಸೂಚನೆ ಕೊಟ್ಟುಹೋದರೆ ಅದರ ಬಗ್ಗೆ ಇಲಾಖೆಯವರು ಏನು ಕ್ರಮ ಕೈಗೊಂಡರು ಎಂಬುದು ನಮಗೆ ಸರಿಯಾದ ವಿವರಣೆ ಬೇಕು. ಕೇಂದ್ರದ ಕಾರ್ಯದರ್ಶಿಯವರು ಒಂದು ಶೆಡ್ಯೂಲ್ ಕೊಟ್ಟಿದ್ದಾರೆ. ಅದರ ಪ್ರಕಾರ ಇವರು ಕ್ರಮ ತೆಗೆದುಕೊಂಡಿಲ್ಲ. ಸೂಸೈಡ್ಸ್ ಆಗಬೇಕಾದರೆ ಅದೂ ಒಂದು ದುಷ್ಪರಿಣಾಮ.ಇಂಥ ಒಂದು ಸಂದರ್ಭ ಬಹುಶಃ ರಾಜ್ಯದ ಇತಿಹಾಸದಲ್ಲಿ ಇಷ್ಟು ಬೇಗ ಬಂದಿರತಕ್ಕದ್ದು ನಾವು ಹೊಸದಾಗಿ ನೋಡುತ್ತಿದ್ದೇವೆ. ನಾವು ನಾಲ್ಕೈದು ಸಲ ಈ ಸಭೆಗೆ ಬಂದಾಗ ಬಹುಶಃ ಹೊಸ ಸರ್ಕಾರಗಳು ಬಂದಾಗ ನಾವೂ ವಿರೋಧ ಪಕ್ಷದವರೂ ಸೇರಿ ಬಹಳ ನಿರೀಕ್ಷೆ ಇಟ್ಟುಕೊಳ್ಳುತ್ತೇವೆ. ಏನೋ ಇವರ ಸರ್ಕಾರ ಬಂದಿದೆ, ಆಡಳಿತ ಪಕ್ಷ ನಮಗೂ ಸ್ವಲ್ಪ ಸಹಾಯ ಮಾಡಿ ನಮ್ಮ ಕ್ಷೇತ್ರಗಳನ್ನು ಅಭಿವೃದ್ಧಿ ಮಾಡುತ್ತಾರೆ. ಅಭಿವೃದ್ಧಿಯ ಮಂತ್ರವನ್ನು ಇವರು ಜಪಿಸುತ್ತಿರುವುದರಿಂದ ನಾವು ಒಂದು ಹೊಸ ಕನಸನ್ನು ನಿರೀಕ್ಷೆ ಇಟ್ಟುಕೊಂಡೆವು. ಆದರೆ ಕೇವಲ 23 ದಿವಸದಲ್ಲಿ ಆದಂಥ ದುರ್ಘಟನೆಗಳನ್ನು ನಾವು ಈ ರಾಜ್ಯದಲ್ಲಿ ಕಂಡಾಗ ಬಹಶಃ ನಮ್ಮ ನಿರೀಕ್ಷೆ ಬಹಳ ದೂರಕ್ಕೆ ಹೋಗುತ್ತಿದೆ, ಎಲ್ಲೋ ಹೋಗುತ್ತಿದೆ. ಸರ್ಕಾರ ನಿಯಂತ್ರಣ ಇಲ್ಲ. ನಿಯಂತ್ರಣ ತಪ್ಪಿ ಹೋಗುತ್ತಿದೆ ಎಂಬ ಭಾವನೆ ನಮಗೆ ಮತ್ತು ಸಾರ್ವಜನಿಕರಿಗೆ ಬರುತ್ತಿದೆ.

ಆದ್ದರಿಂದ ದಯಮಾಡಿ ಇದಕ್ಕೆ ಅವಕಾಶ ಆಗಬಾರದು. ಇವತ್ತು ನಿಯಮ 69ರ ಪ್ರಕಾರ ನಮ್ಮ ನಾಯಕರೇನು ಒತ್ತಾಯ ತಂದಿದ್ದಾರೆ ಈ ರೀತಿ ಆಗುವ ದುರ್ಘಟನೆಯ ಬಗ್ಗೆ ನಿಷ್ಪಕ್ಷಪಾತವಾಗಿ ಯಾರು ಗೋಲಿಬಾರ್‌ಗೆ ಕಾರಣಕರ್ತರಾದರೋ ಅವರ ಮೇಲೆ ನಿಜವಾದ ಕ್ರಮ ಜರುಗಿಸಲೇ ಬೇಕು. ಇಂಥ ದುರ್ಘಟನೆಗಳು ಆಗಲು ಅವಕಾಶ ಕೊಡಬಾರದು. ಇಲ್ಲದಿದ್ದರೆ ಸರ್ಕಾರಕ್ಕೆ ನಿಯಂತ್ರಣ ಇಲ್ಲ ಎನ್ನುವ ಭಾವನೆ ಸಾರ್ವಜನಿಕರಲ್ಲಿ ಬರುತ್ತದೆ. ಬಹಳ ತೊಂದರೆ ಬಂದಾಗ ಅನೇಕ ನಿಯಮ ಇದೆ. ಯಾವ ರೀತಿ ಗೋಲಿಬಾರ್ ಮಾಡಬೇಕು ಎಂಬ ಬಗ್ಗೆ ಸರ್ಕಾರದಲ್ಲಿ, ಪೊಲೀಸ್ ಇಲಾಖೆಯಲ್ಲಿ ನಿಯಮವಿದೆ. ಅವನ್ನೆಲ್ಲ ಉಲ್ಲಂಘನೆ ಮಾಡಿ ಅವರಿಗೆ ಅನುಕೂಲಕರವಾದ ರೀತಿಯಲ್ಲಿ ವಿಚಾರಗಳನ್ನು ಟ್ವಿಸ್ಟ್ ಮಾಡತಕ್ಕದ್ದು ಸರಿ ಕಾಣುವುದಿಲ್ಲ. ಯಾರೋ ಬಂದೂಕನ್ನು ಕಿತ್ತುಕೊಂಡರು, ಯೋರೋ fire ಮಾಡಿದರು ಎಂಬ ರೀತಿಯಾಗಿ ಬೇಜವಾಬ್ದಾರಿಯುತವಾದ ಹೇಳಿಕೆಯನ್ನು ಕೊಡುವುದರಲ್ಲಿ ಅರ್ಥವಿಲ್ಲ. ಆ ಘಟನೆ ಯಾವ ಕಾರಣಕ್ಕೆ ಆಯಿತು ಎಂಬ ಬಗ್ಗೆ ಜನರ ಒತ್ತಾಯ ಇದೆ. ಅದು ಬಂದಿರತಕ್ಕದ್ದು ಕೋಪೋದ್ರೇಕರಾಗಿ ಸ್ವಾನ್‌ಟೇನಿಯಸ್ ಆಗಿದೆ. ಆ ಸಂದರ್ಭದಲ್ಲಿ ಸರ್ಕಾರ ಯಾವ ರೀತಿ ನಡೆದುಕೊಳ್ಳಬೇಕೋ, ಯಾವ ರೀತಿಯಾಗಿ ಶಾಂತಯುತವಾಗಿ ಲಾ ಅಂಡ್ ಆರ್ಡರ್ ಕಾಪಾಡುವುದಕ್ಕೆ ಜವಾಬ್ದಾರಿಯುತವಾಗಿ ಆ ಸನ್ನಿವೇಶವನ್ನು ಅವರು ಭೇದಿಸಬೇಕೋ ಆ ರೀತಿ ಭೇದಿಸದೆ ಬೇರೆ ರೀತಿ ಬಲಪ್ರಯೋಗ ಮಾಡತಕ್ಕ ಪ್ರಯತ್ನವನ್ನು ಸ್ಥಳೀಯವಾಗಿರತಕ್ಕ ಪೊಲೀಸ್ ಅಧಿಕಾರಿಗಳು ಮಾಡಿದ್ದರಿಂದಲೆ ಇವತ್ತು ಸರ್ಕಾರಕ್ಕೆ ಈ ಅನಿಶ್ಚಿತವಾದ ಸನ್ನಿವೇಶ ಉದ್ಭವಿಸಿದೆ. ಈ ಸಂದರ್ಭದಲ್ಲಿ ನಾನು ಇಷ್ಟೆ ಸಲಹೆ ಮಾಡತಕ್ಕದ್ದು ಇವತ್ತು ಏನು ತಾವು ಎಲ್ಲಾ ಪಕ್ಷದ ಮುಖಂಡರುಗಳ ನಿಯೋಗವನ್ನು ಕರೆದುಕೊಂಡು ಹೋಗುತ್ತೇವೆಂದು ಹೇಳಿದ್ದೀರಿ, ಮತ್ತೊಂದು ಕಡೆ ಸಂಘರ್ಷವನ್ನು ಮಾಡಬೇಕೆಂದು, ಬೀದಿಗೆ ಇಳಿಯುತ್ತೇವೆಂದು ಹೇಳುತ್ತಿದ್ದೀರಿ. ತಾವು ಮುಖ್ಯ ಮಂತ್ರಿಗಳು, ಅಲ್ಲಿ ಇಲ್ಲದೆ ಇದ್ದರೆ ಹೋಗಲಿ, ಇನ್ನು ಮಳೆ ಬಾರದಿರತಕ್ಕ ಬೇರೆ ರಾಜ್ಯಗಳಿಂದ ತಕ್ಷಣ ಗೊಬ್ಬರ ತರಿಸಬಹುದಾಗಿತ್ತು. ಅಷ್ಟೇ ಅಲ್ಲ ನಮ್ಮ ಹತ್ತಿರ ಬಯೋ ಫರ್ಟಿಲೈಸರ್ಸ್‌ನ sufficient ಆಗಿದೆ. ಯಾವ ಹಿಂಡಿ ಬೇಕು, ಬೇವಿನಿಂಡಿಬೇಕೊ, ಹೊಂಗೆ ಕಡಲೆ ಹಿಂಡಿ ಈ ರೀತಿ ಎಲ್ಲವೂ ಇದೆ. ಬಯೋ ಫರ್ಟಿಲೈಸರ್ಸ್ ಬೇರೆ ಬೇರೆ ಫರ್ಟಿಲೈಸರ್ಸ್‌ನ್ನು ಮಿಕ್ಸ್ ಮಾಡತಕ್ಕ ಕಾಂಪ್ಲೆಕ್ಸ್ ಮಾಡತಕ್ಕ ಅವಕಾಶ ಇವೆ. ಇಂಥ ಕ್ಲಿಷ್ಟವಾದ ಪರಿಸ್ಥಿತಿಯಲ್ಲಿ ಅದನ್ನು ತರಿಸಿ ಸಬ್ಸಿಡಿ ಕೊಟ್ಟು emergency ಇರುವ ಕಡೆ ಏಕೆ ಅದನ್ನು ನಿಮ್ಮ ಕೈಯಿಂದ ಒದಗಿಸಲು ಆಗಲಿಲ್ಲ? ನಮ್ಮ ಹತ್ತಿರ ಬೇಕಾದಷ್ಟು ಹೊಂಗೆ ಹಿಂಡಿ ಇದೆ. ಅದನ್ನು

ಕೇಳುವವರು ಇಲ್ಲ. ಆ ಬಯೋ ಫರ್ಟಿಲೈಸರ್ಸ್‌ನ್ನು ಇಂಥ ಸಂದರ್ಭದಲ್ಲಿ introduce ಮಾಡಬಹುದಾಗಿತ್ತು. ಅದಕ್ಕೆ 50 ಪರ್‌ಸೆಂಟ್ ಸಬ್ಸಿಡಿಯನ್ನು ರೈತರಿಗೆ ಕೊಡಿ. ಏನೂ ತೊಂದರೆ ಇರಲಿಲ್ಲ. ಅದರ ಬಗ್ಗೆ ಇಲಾಖೆಯವರು ಗಮನಹರಿಸಿ ನಿಮಗೆ ಸಲಹೆ ಕೊಡಲಿಲ್ಲ. ಬಯೋಫರ್ಟಿಲೈಸರ್ಸ್ ಇಷ್ಟು ಇರುವಾಗ ಅದನ್ನು ಉಪಯೋಗ ಮಾಡುವ knowledge ಯಾರಿಗೂ ಬರಲಿಲ್ಲ. ಈ ರೀತಿ ಪರಿಸ್ಥಿತಿ ಇದೆ. ಜೊತೆಗೆ ಇವತ್ತು ನಮ್ಮ ಮಂಗಳೂರು ಕೆಮಿಕಲ್ ಫರ್ಟಿಲೈಸರ್ಸ್ (ಎಂ.ಸಿ.ಎಫ್.) ಅವರು experts ಆಗಿದ್ದಾರೆ, ಸಲ್ಫರ್, ಪೊಟ್ಯಾಷ್, ಯೂರಿಯ ಆಗಬಹುದು ಅದನ್ನು ಮಿಕ್ಸ್ ಕಾಂಪ್ಲೆಕ್ಸ್ ಮಾಡಿ within no time ಮಾಡಿಕೊಡಲು ಅವಕಾಶ ಇತ್ತು. ಅದು ನಿಮ್ಮ ಕೈಯಲ್ಲೇ ಇತ್ತು. ಆ ಕಂಪನಿಯ director... ಸಲ್ಫರ್, ಪೊಟ್ಯಾಷ್, ಯೂರಿಯಾ ಆಗಬಹುದು, ಕೊರತೆ ಇರಲಿಲ್ಲ. ನಮ್ಮ ಹತ್ತಿರ sufficient ಆಗಿ ಇತ್ತು. ಕಾಂಪ್ಲೆಕ್ಸ್‌ಗೇ ನಮ್ಮ ಹತ್ತಿರ ಕೊರತೆ ಇದ್ದದ್ದು. ಅದಕ್ಕೆ ಪರ್ಯಾಯವಾಗಿ ಇದನ್ನು ಮಾಡಲು ಅವಕಾಶ ಇತ್ತು. ತಮ್ಮ ಇಲಾಖೆಯವರು, ತಾಂತ್ರಿಕ ವರ್ಗದವರು ಇದರ ಬಗ್ಗೆ ತಮಗೆ ಸಲಹೆ ಕೊಡಬೇಕಾಗಿತ್ತು. ಅದರಲ್ಲೂ ವಿಫಲರಾಗಿದ್ದಾರೆ. ಈ ರೀತಿ ವಿಫಲರಾಗಿ ಬಹುಶಃ ಈ ರಾಜ್ಯದ ಜನ ಅದರಲ್ಲೂ ವಿಶೇಷವಾಗಿ ಇವತ್ತು ಎಲ್ಲರೂ ಹೇಳಿದಂತೆ ರೈತರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡಿರಿ. ರೈತರ ಮಕ್ಕಳಾಗಿ ನಾವೂ ಅದಕ್ಕೆ ಸಂತೋಷಪಟ್ಟೆವು. ಆದರೆ ಕೇವಲ 23 ದಿವಸಗಳಲ್ಲಿ ನಡೆದ ಘಟನೆಗಳನ್ನು ನೋಡಿದಾಗ ರೈತರು ನಿಜವಾಗಿಯೂ ಬಹಳ ನೊಂದಿದ್ದಾರೆ. ಈ ವಿಚಾರದ ಬಗ್ಗೆ ನಿಷ್ಪಕ್ಷಪಾತವಾದ ಕ್ರಮ ತೆಗೆದುಕೊಳ್ಳಬೇಕು. ಆ ರೈತರಿಗೆ ನಿಜಕ್ಕೂ ಇವತ್ತೂ ಸಹ ಗೊಬ್ಬರ ಸಿಗುತ್ತಿಲ್ಲ. ಅವರಿಗೆ ಬೇಕಾಗಿರತಕ್ಕ ಅವರ ಬೇಡಿಕೆ ಏನಿದೆ ಅದರ ಪ್ರಕಾರ ಗೊಬ್ಬರವನ್ನು ಒದಗಿಸುವ ಕೆಲಸವನ್ನು ಮಾಡಬೇಕು. ಇದರ ಬಗ್ಗೆ ಸದನದ ಸಮಿತಿಯನ್ನು ಕೇಳಿದ್ದೇವೆ. ಗೋಲಿಬಾರ್ ಬಗ್ಗೆ ತನಿಖೆ ಮಾಡಲು ನ್ಯಾಯಾಂಗ ಸಮಿತಿ ಮಾಡಿದ್ದೀರಿ, ಸಂತೋಷ, ಅದನ್ನು ನಮ್ಮ ನಾಯಕರು ನಾವೆಲ್ಲರೂ ಸ್ವಾಗತ ಮಾಡುತ್ತೇವೆ. ಅದರ ಜೊತೆಗೆ ಸಬ್ಸಿಡೈಂಟ್ ಆದ ಆತ್ಮಹತ್ಯೆಗಳ ಪ್ರಕರಣಗಳೇನಿದೆ ಮತ್ತು ಗೊಬ್ಬರ ಸಿಗದೆ ಅದು ಸ್ಕೇರ್‌ಸಿಟಿ ಮಾಡಲು ಯಾರು ಕಾರಣಕರ್ತರು ಎನ್ನುವ ಬಗ್ಗೆ ವಿಚಾರ ಮಾಡಬೇಕು ಇದರಲ್ಲಿ ಬಹಳ traders ಶಾಮೀಲಾಗಿದ್ದಾರೆ. ನಿಮಗೂ ನಮಗೂ ಯಾರಿಗೂ ಗೊತ್ತಿಲ್ಲದೆಯೇ ಬಿತ್ತನೆ ಕಾಲದಲ್ಲಿ situation exploit ಮಾಡುವುದರಲ್ಲಿ ಕೆಲವು traders expert ಆಗಿದ್ದಾರೆ. ಅದರ ಬಗ್ಗೆ ಇಲಾಖೆಯವರು ಗಮನ ಕೊಟ್ಟಿಲ್ಲ. Traders ಒಳಗೊಳಗೇ ಅವರಿಗೆ ಎಲ್ಲೆಲ್ಲಿ black market ಮಾಡಲಿಕ್ಕೆ ಅವಕಾಶ ಇರುತ್ತದೋ.

ಅಲ್ಲೆಲ್ಲಾ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ಅದರ ಬಗ್ಗೆ ಸರ್ಕಾರ ಗಮನ ಕೊಡಬೇಕಾಗಿತ್ತು. ಇದೆಲ್ಲದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ರೈತರಿಗೆ ಕೊಡಬೇಕಾಗಿರುವಂತಹ fertilizers sufficient ಆಗಿ ರಾಜ್ಯದಲ್ಲಿ ಕೊಡಿ. ನಮ್ಮ ಬಯಲು ಸೀಮೆ ಪ್ರದೇಶದಲ್ಲೂ ಸಹ ಈಗ ಮಳೆ ಪ್ರಾರಂಭವಾಗುತ್ತಿದೆ. 15 ದಿವಸಗಳಿಂದ ನಮ್ಮಲ್ಲೂ ಮಳೆಯೇ ಇರಲಿಲ್ಲ. ಈಗ ನಮ್ಮ ಕೋಲಾರ ಇರಬಹುದು Bangalore Rural ಇರಬಹುದು. ಚಿಕ್ಕಬಳ್ಳಾಪುರ ಇರಬಹುದು, ತುಮಕೂರು ಇರಬಹುದು, ಈ ಕಡೆಯಲ್ಲೆಲ್ಲಾ ಇದುವರೆವಿಗೂ ಮಳೆ ಇರಲಿಲ್ಲ. ನೂರಕ್ಕೆ 75–80 ಭಾಗ ನಾವು ಮಳೆ ಆಶ್ರಿತ ವ್ಯವಸಾಯ ಮಾಡತಕ್ಕ ರೈತರು. ಇದುವರೆಗೂ ಅವರಿಗೆ fertilizers ಕಡೆ ಗಮನ ಇರಲಿಲ್ಲ. ಇವತ್ತು ರಾತ್ರಿ ಅಥವಾ ಬೆಳಿಗ್ಗೆ ಮಳೆ ಬಂದರೆ, ನಾಳೆಯೇ ನಮಗೆ complex ಗೊಬ್ಬರ ಬೇಕಾಗುತ್ತದೆ. ಅದರ ಕಡೆಯೂ ಸಹ ನೀವು ಹೆಚ್ಚಿಗೆ ಗಮನ ಕೊಡಬೇಕಾದಂತಹ ಅವಶ್ಯಕತೆ ಇದೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ಸರಿದೂಗಿಸತಕ್ಕಂಥ ಕೆಲಸವಾಗಬೇಕು. ಸದನ ಸಮಿತಿಗೆ ನಮ್ಮ ನಾಯಕರು ಒತ್ತಾಯ ಮಾಡಿದ್ದಾರೆ, ತಕ್ಷಣ ಸದನ ಸಮಿತಿ ರಚಿಸುವುದಕ್ಕೆ ನಿಷ್ಪಕ್ಷಪಾತವಾಗಿ ಒಪ್ಪಿಕೊಳ್ಳಿ ಅದರಲ್ಲೇನೂ ತೊಂದರೆ ಇಲ್ಲ. ಎಲ್ಲರೂ ಸೇರಿ ರೈತರಿಗೆ ಅನುಕೂಲ ಮಾಡಬೇಕೆಂದೇ ಇದ್ದೇವೆ, ರೈತರಿಗೋಸ್ಕರವೇ ನಾವೆಲ್ಲಾ ಇಲ್ಲಿದ್ದೇವೆ. ತಾವೂ ಸಹ ನಾವು ರೈತರ ಪರವಾಗಿದ್ದೇವೆಂದು ಹೇಳಿದ್ದೀರಿ. ರೈತರಿಗೆ ಆಗಿರತಕ್ಕಂಥ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಪಕ್ಷಾತೀತವಾಗಿ ನಿಯೋಗವೊಂದನ್ನು ಕರೆದುಕೊಂಡು ಹೋಗಬೇಕೆಂದು ತಾವೇನು ಹೇಳಿದ್ದೀರಿ, ಅದಕ್ಕೆ ಕಾರ್ಯಕ್ರಮವನ್ನೂ ಕೂಡ ಪಕ್ಷಾತೀತವಾಗಿ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಮಾಡಬೇಕೆಂದು ನಾನು ಸನ್ಮಾನ್ಯ ಅಧ್ಯಕ್ಷರ ಮೂಲಕ ತಮ್ಮನ್ನು ಒತ್ತಾಯಿಸುತ್ತೇನೆ. ನಮ್ಮ ನಾಯಕರು ತಂದಿರತಕ್ಕಂಥ ಒತ್ತಾಯವೇನಿದೆ ಅದಕ್ಕೆ ಸಂಪೂರ್ಣವಾದಂತಹ ಬೆಂಬಲವನ್ನು ಕೊಟ್ಟು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ (ಕೊಳ್ಳೇಗಾಲ): ಮಾನ್ಯ ಅಧ್ಯಕ್ಷರೆ, ಸರ್ಕಾರ ಬಂದು 22 ದಿವಸಗಳಾಗಿದೆ. ನಾವು ಬಹಳ ನಿರೀಕ್ಷೆ ಇಟ್ಟಿದ್ದೆವು. ಮಾನ್ಯ ಯಡಿಯೂರಪ್ಪ ಸಾಹೇಬರು ಮುಖ್ಯಮಂತ್ರಿಗಳಾಗಿದ್ದಾರೆ, ಅವರು ರೈತರ ಪರವೆಂದು ಭಾವಿಸಿದ್ದೆವು. ಯಾರಾದರೂ ಒಬ್ಬರು ಮುಖ್ಯಮಂತ್ರಿಗಳಾದರೆ ಅವರು ಯಾರ ಪರವೆಂದು ನಾವು ಹೇಳಬಹುದು. ನಮಗೆ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಮುಖ್ಯಮಂತ್ರಿಗಳಾಗಿದ್ದರೆ ಶೋಷಿತರ ಪರವಾಗಿ ಅವರು ಒಳ್ಳೆಯ ಕೆಲಸ ಮಾಡುತ್ತಾರೆ ಎನ್ನತಕ್ಕಂಥ ನಂಬಿಕೆ ಇತ್ತು ಅದೇ ರೀತಿ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಲಾಗಿದ್ದಾಗ ಹಿಂದುಳಿದ ವರ್ಗಗಳಿಗೆ ಬಹಳ

ಆಶಾದಾಯಕವೆಂದು ತಿಳಿದುಕೊಂಡಿದ್ದೆವು. ಆದರೆ ಮಾನ್ಯ ಯಡಿಯೂರಪ್ಪ ಸಾಹೇಬರು ಮುಖ್ಯಮಂತ್ರಿಗಳಾದ ಮೇಲೆ ನಿಜವಾಗಿಯೂ ಕೂಡ ರೈತರಿಗೆ ಬಹಳಷ್ಟು ಅನುಕೂಲವಾಗುತ್ತದೆಂದು ಬಹಳ ಆಸೆ ಇಟ್ಟುಕೊಂಡಿದ್ದೆವು. ಆದರೆ ದುರ್ದೈವ 22 ದಿವಸಗಳಲ್ಲಿ 12 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, 1 ಗೋಲಿಬಾರ್ ನಡೆದಿದೆ. ಇದೊಂದು ದಾಖಲೆ. ಇತಿಹಾಸದಲ್ಲಿ ಯಾವಾಗಲೂ ಕೂಡ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದ 22 ದಿವಸಕ್ಕೆ 12 ಜನ ರೈತರ ಆತ್ಮಹತ್ಯೆಯಾಗಿರುವುದು ನಿಜವಾಗಿಯೂ ಒಂದು ರೆಕಾರ್ಡ್ ಆಗಿದೆ. ಯಾವುದೇ ಸರ್ಕಾರ ಬಂದರೂ ಕೂಡ ರೈತರ ಬಗ್ಗೆ ಗಮನ ಹರಿಸುತ್ತಿಲ್ಲ. ಎಲ್ಲರೂ ಚುನಾವಣೆಗೆ ಮುನ್ನ ನಾವು ಮಾತನಾಡುತ್ತೇವೆ, ನಾವು ಅಧಿಕಾರಕ್ಕೆ ಬಂದರೆ ರೈತರಿಗೆ ಒಳ್ಳೆಯ ರೀತಿಯಾದ ಕೆಲಸ ಮಾಡುತ್ತೇವೆ ಎಂಬ ಮಾತನ್ನು ಹೇಳುತ್ತೇವೆ. ಅದೇ ರೀತಿ ವಿರೋಧ ಪಕ್ಷದ ನಾಯಕರಾಗಿದ್ದಾಗ ಮಾನ್ಯ ಯಡಿಯೂರಪ್ಪ ಸಾಹೇಬರು ಇರಬಹುದು ಅಥವಾ ಮಾನ್ಯ ಈಶ್ವರಪ್ಪ ಇರಬಹುದು, ಎಲ್ಲರೂ ಕೂಡ ಬಹಳ ಆರ್ಭಟಿಸುತ್ತಿದ್ದರು. ಆದರೆ ಈಗ ಅವರ ಕೈಯಲ್ಲೇ ಅಧಿಕಾರ ಇದೆ. ಇಂತಹ ಸಂದರ್ಭದಲ್ಲಿ ರೈತರಿಗೆ ಧೈರ್ಯ ಹೇಳತಕ್ಕದ್ದು ಆಗಬೇಕು. ಮಾನ್ಯ ಮುಖ್ಯಮಂತ್ರಿಗಳು ಗೋಲಿಬಾರ್ ನಡೆದಂತಹ ಸ್ಥಳಕ್ಕೆ ಹೋದಾಗ ಅವರು ಅಳುತ್ತಿದ್ದರೆ ತಾವು ಸಹ ಅಳುತ್ತಿದ್ದೀರಿ. ಮನುಷ್ಯತ್ವದಿಂದ ತಮಗೆ ಆ ಅಳು ಬಂದಿದೆ. ಆದರೆ ತಾವು ಅವರ ಕಣ್ಣೀರನ್ನು ಒರೆಸಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳಾಗಿರತಕ್ಕ ನೀವು ಅವರಿಗೆ ಧೈರ್ಯ ಹೇಳಬೇಕಾಗಿತ್ತು. ತಾವೇ ಅತ್ತರೆ ಅವರಿಗೆ ಇನ್ನಷ್ಟು ದುಃಖ ಬರತಕ್ಕದ್ದಾಗುತ್ತದೆ. ತಮಗೆ ಎಲ್ಲಾ ರೀತಿಯ ಅಧಿಕಾರ ಇದೆ. ರೈತರಿಗೆ ಎಲ್ಲಾ ರೀತಿಯಾದಂತಹ support ಮಾಡತಕ್ಕದ್ದು ಆಗಬೇಕು. ಇವತ್ತು ರಸಗೊಬ್ಬರದ ಕೊರತೆ ಬಗ್ಗೆ ಹೇಳುವುದಾದರೆ, ಮೇ ಅಥವಾ ಏಪ್ರಿಲ್ ತಿಂಗಳಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟು ಬರಬೇಕಾಗಿತ್ತೋ ಅಷ್ಟೆಲ್ಲವೂ ಬಂದಿದೆ. ಆದರೆ ಜೂನ್ ತಿಂಗಳಿನಲ್ಲಿ ತಮಗೆ ಕೊರತೆಯಾಗಿದೆ. ಮುಂಜಾಗ್ರತಾ ಕ್ರಮವಾಗಿ ತಾವೇ ಸಂಬಂಧಪಟ್ಟವರಿಗೆ ಮೇಲ್ಕಟ್ಟದಲ್ಲಿ ತಿಳಿಸಿ, ಆ ಒಂದು ಇಂಡೆಂಟ್ ಅನ್ನು ತರಿಸಿಕೊಂಡು ಸಮರ್ಪಕವಾಗಿ ವಿತರಣೆ ಮಾಡಿದ್ದರೆ, ಯಾವುದೇ ಈ ರೀತಿಯಾದಂತಹ ಘಟನೆ ಆಗುತ್ತಿರಲಿಲ್ಲ. ತಾವು ಸರಿಯಾದ ರೀತಿಯಲ್ಲಿ ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡಿ ಸೂಕ್ತ ಸಮಯಕ್ಕೆ ಇವತ್ತು ರಸಗೊಬ್ಬರದ ಪೂರೈಕೆ ಮಾಡಬೇಕಾಗಿತ್ತು. ಇದು ಸರ್ಕಾರದ ನಿಷ್ಕ್ರಿಯತೆಯನ್ನು ತೋರುತ್ತದೆ. ನಾನೂ ಕೂಡ ನಮ್ಮ ಚಾಮರಾಜನಗರದಲ್ಲಿ ಈ ಕೊರತೆ ಸಂಭವಿಸಿದಂತಹ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಜೊತೆಯಲ್ಲಿ ಕಳೆದ ಐದು ದಿವಸದ ಹಿಂದೆ ಫೋನ್ ಮಾಡಿ

ಮಾತನಾಡಿದೆ. ನಮ್ಮಲ್ಲಿ ರಸಗೊಬ್ಬರದ ಕೊರತೆ ಇದೆ, DAP ಗೊಬ್ಬರ ಇಲ್ಲ, ಪೊಟಾಷ್ ಕೊರತೆ ಇದೆ ಎಂಬುದನ್ನು Director of Agriculture ಜೊತೆಗೂ ಮಾತನಾಡಿದೆ ಮತ್ತು ತಮ್ಮ ಜೊತೆಗೂ ಕೂಡ ಮಾತನಾಡಿದೆ. ಆದರೆ ಇದುವರೆಗೂ ಕೂಡ ನಮ್ಮ ಜಿಲ್ಲೆಗೆ ರಸಗೊಬ್ಬರದ ಪೂರೈಕೆ ಆಗಿಲ್ಲ. ತಕ್ಷಣ ಸರ್ಕಾರ ಕೆಲಸ ಮಾಡಬೇಕು. ಇಡೀ ದೇಶದಲ್ಲಿ ಪ್ರಪ್ರಥಮ ಬಾರಿಗೆ ಮುಂಗಾರು ಮಳೆ ನಮ್ಮ ಚಾಮರಾಜನಗರ ಜಿಲ್ಲೆ ಮತ್ತು ಮೈಸೂರು ಜಿಲ್ಲೆಗೆ ಆಗಮಿಸುತ್ತದೆ. ಇಂತಹ ಸಮಯ ಮತ್ತು ಸಂದರ್ಭದಲ್ಲಿ ನಮ್ಮಲ್ಲಿ ಗೊಬ್ಬರವಿಲ್ಲವೆಂದರೆ ತೊಂದರೆಯಾಗುತ್ತದೆ. ಇವತ್ತು ಮಳೆ ಎಂದರೆ ಒಂದು ರೀತಿಯಲ್ಲಿ gambling ಇದ್ದಂತೆ. ಮಳೆ ಬರಲೂ ಬಹುದು, ಬಾರದಿರಲೂ ಬಹುದು. ಮಳೆ ಬಂದಂತಹ ಸಮಯದಲ್ಲಿ ರೈತರಿಗೆ ಬೀಜ ಮತ್ತು ಗೊಬ್ಬರವನ್ನು ಕೊಡತಕ್ಕಂಥದ್ದು ಸರ್ಕಾರದಿಂದ ಆಗಬೇಕು. ದಯಮಾಡಿ ತಾವು ತಮ್ಮ ನಿಷ್ಕ್ರಿಯತೆಯನ್ನು ತೋರಬಾರದು. ಸಕಾಲದಲ್ಲಿ ಗೊಬ್ಬರಗಳನ್ನು ಪೂರೈಸತಕ್ಕಂಥದ್ದು ಆಗಬೇಕು ಎನ್ನುವುದು ನನ್ನ ಕಳಕಳಿಯ ಮನವಿ. ತಾವು ಅಂಕಿ ಅಂಶಗಳನ್ನು ಮಂಡಿಸಿದ್ದೀರಿ. ಮಾತೆತ್ತಿದರೆ ತಾವು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುತ್ತೀರಿ. ದಯಮಾಡಿ ತಾವು ಮಾತನಾಡತಕ್ಕಂಥ ಸಮಯದಲ್ಲಿ ಯಾವ್ಯಾವ ತಿಂಗಳಿನಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟಷ್ಟು ಗೊಬ್ಬರಗಳು ಬಂದಿವೆ? ಎಂಬ ಅಂಕಿ ಅಂಶಗಳನ್ನು ತಾವು ಸದನದ ಮುಂದೆ ಇಟ್ಟಾಗ ಜನತೆಗೂ ಕೂಡ ಗೊತ್ತಾಗುತ್ತದೆ. ಇದರಲ್ಲಿ ಯಾರ ತಪ್ಪು ಇದೆ ಎಂಬುದು ಸಾರ್ವಜನಿಕರಿಗೆ ಗೊತ್ತಾಗಬೇಕು. ನೀವು ಏನು ಮಾಡುತ್ತಿದ್ದೀರಿ ಎಂದರೆ, ರೈತರು ಈಗ ಆತ್ಮಹತ್ಯೆ ಮಾಡಿಕೊಂಡರೆ, ಅವರ ಆತ್ಮಹತ್ಯೆ ನಿಜವಾಗಿಯೂ ಕೂಡ ಸಾಲದಿಂದ ಅಥವಾ ಗೊಬ್ಬರದಿದಂದ ಆಗಿಲ್ಲ. ಅವರದು ಆತ್ಮಹತ್ಯೆಯೇ ಅಲ್ಲ, ಅವರು ಬೇರೆ ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಅಂಶವನ್ನು ತಾವು ಹೇಳುತ್ತೀರಿ. ಕೆಲವು ಜಿಲ್ಲೆಗಳಲ್ಲಿ ಅಧಿಕಾರಿಗಳನ್ನು ಕಳುಹಿಸಿ, ಮನೆಯವರಿಗೆ 'ಈ ಆತ್ಮಹತ್ಯೆ ರಸಗೊಬ್ಬರದಿಂದ ಅಥವಾ ಇನ್ನೊಂದರಿಂದ ಆಗಿಲ್ಲ' ಎಂದು ಹೇಳುವಂತೆ ಹಿಂಸೆ ಕೊಡಲಾಗುತ್ತಿರುವುದು ಬೆಳಕಿಗೆ ಬಂದಿದೆ. ಸರ್ಕಾರ ಸರಿಯಾದ ರೀತಿಯಲ್ಲಿ ಸ್ಪಂದಿಸಿ ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ಮತ್ತು ಬೀಜಗಳನ್ನು ವಿತರಣೆ ಮಾಡಬೇಕು. ನಮ್ಮ ವಿರೋಧ ಪಕ್ಷದ ನಾಯಕರು ಏನು ಇದು ಸರಿಯಾದ ರೀತಿಯಲ್ಲಿ ತನಿಖೆಯಾಗಬೇಕು, ಇದಕ್ಕಾಗಿ ಜಂಟಿ ಸದನದ ಸಮಿತಿಯಿಂದ ತನಿಖೆಯಾಗಬೇಕೆಂದು ಹೇಳಿದ್ದಾರೆ. ತಕ್ಷಣವೇ ಆ ಸದನ ಸಮಿತಿಯಿಂದ ತನಿಖೆಯಾದರೆ ನ್ಯಾಯ ಎಂಬುದು ಬೆಳಕಿಗೆ ಬರುತ್ತದೆ ಎಂದು ತಿಳಿಸಿ ನನಗೆ ಮಾತನಾಡಲಿಕ್ಕೆ ಅನುಮತಿ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ

ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಒಂದು ಪ್ರಕಟಣೆ ಇದೆ

7. ಪ್ರಕಟಣೆ

ವಿಷಯ: ಜನತಾದಳ (ಜಾತ್ಯಾತೀತ) ಪಕ್ಷದ ಶಾಸಕಾಂಗ ಪಕ್ಷದ ಪದಾಧಿಕಾರಿಗಳ ಆಯ್ಕೆ ಬಗ್ಗೆ.

***

ಜನತಾದಳ (ಜಾತ್ಯಾತೀತ) ಪಕ್ಷದ ರಾಜ್ಯಾಧ್ಯಕ್ಷರು ದಿನಾಂಕ 23ನೇ ಜೂನ್ 2008 ರಂದು ನೀಡಿರುವ ಪತ್ರಗಳಲ್ಲಿ ಕೋರಿರುವಂತೆ ಕೆಳಕಂಡವರನ್ನು ಜನತಾ ದಳ (ಜಾತ್ಯಾತೀತ) ಶಾಸಕಾಂಗ ಪಕ್ಷದ ಪದಾಧಿಕಾರಿಗಳಾಗಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಶ್ರೀ ಹೆಚ್. ಡಿ. ಕುಮಾರ ಸ್ವಾಮಿ ... *ಶಾಸಕಾಂಗ ಪಕ್ಷದ ನಾಯಕರು*

ಶ್ರೀ ಉಮೇಶ್ ಕತ್ತಿ ... *ಶಾಸಕಾಂಗ ಪಕ್ಷದ ಉಪ ನಾಯಕರು*

ಶ್ರೀ ವೆಂಕಟರಾವ್ ನಾಡಗೌಡ ... *ಸಚೇತಕರು*

ಈಗ ಸದನವನ್ನು ನಾಳೆ ಬೆಳಿಗ್ಗೆ 10–30 ಘಂಟೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ರಾತ್ರಿ 6 ಘಂಟೆ 57 ನಿಮಿಷಗಳಿಗೆ ಪುನಃ ನಾಳೆ ಬೆಳಿಗ್ಗೆ 10–30 ಘಂಟೆಗೆ ಸೇರುವಂತೆ ಮುಂದೂಡಲಾಯಿತು)

VR. 9, F 9?

ಕರ್ನಾಟಕ ವಿಧಾನಸಭೆ

ಮಂಗಳವಾರ 24 ನೇ ಜೂನ್ 2008ರಂದು ಸದನವು
ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10 ಗಂಟೆ 30 ನಿಮಿಷಗಳಿಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್ ರವರು
ಪೀಠವನ್ನು ಅಲಂಕರಿಸಿದ್ದರು.

1. ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನಸಭೆ ಮಾಜಿ ಸದಸ್ಯರಾಗಿದ್ದ ಶ್ರೀ ಸಿ.ಜೆ. ಮುಕ್ಕಣ್ಣಪ್ಪ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ವಿಧಾನಸಭೆ ಮಾಜಿ ಸದಸ್ಯರಾಗಿದ್ದ ಶ್ರೀ ಸಿ.ಜೆ. ಮುಕ್ಕಣ್ಣಪ್ಪ ಅವರು 1918ನೇ ಮಾರ್ಚ್ 12 ರಂದು ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಚಿನ್ನೇನಹಳ್ಳಿಯಲ್ಲಿ ಜನಿಸಿದ್ದು, ಕೃಷಿಕರಾಗಿದ್ದರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀಯುತರು ನಾಲ್ಕು ಬಾರಿ ಬಂಧನಕ್ಕೆ ಒಳಗಾಗಿದ್ದರು ರಾಷ್ಟ್ರದಲ್ಲಿನ ರಾಜಕೀಯ ಪರಿಸ್ಥಿತಿಯನ್ನು ಗಮನಿಸಿ ಕಾಂಗ್ರೆಸ್ ಚಳುವಳಿಯಲ್ಲಿ ಸೇರಿದ ಶ್ರೀಯುತರು ಮಹಾತ್ಮಗಾಂಧಿ ನಿಧಿ ಸಮಿತಿ ಹಾಗೂ ಕಸ್ತೂರಬಾ ನಿಧಿ ಸಮಿತಿ, ತುಮಕೂರು ಜಿಲ್ಲೆ ಹಿಂದುಳಿದ ವರ್ಗಗಳ ವಿದ್ಯಾರ್ಥಿ ವೇತನ ಸಮಿತಿ, ಶಿರಾದ ನಿಯಂತ್ರಿತ ಮಾರುಕಟ್ಟೆ ಸಮಿತಿ, ಆಪತ್ತು ನಿವಾರಣ ಸಮಿತಿ, ಶಿರಾ ಪುರಸಭೆಯ ಸದಸ್ಯರಾಗಿ, ಟೌನ್ ಬ್ಯಾಂಕಿನ ಗೌರವ ಕಾರ್ಯದರ್ಶಿಯಾಗಿ ಹಾಗೂ ರಾಜ್ಯ ಮಾಜಿ ಶಾಸಕರ ವೇದಿಕೆಯ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. ಶ್ರೀಯುತರು ಕರ್ನಾಟಕ 1946 ರಲ್ಲಿ ತುಮಕೂರು, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಉಂಟಾಗಿದ್ದ ಕ್ಷಾಮ ನಿವಾರಣೆಗಾಗಿ ಅಪಾರ ಶ್ರಮಪಟ್ಟಿದ್ದರು. ಎರಡನೇ ವಿಧಾನ ಸಭೆಗೆ ಗುಬ್ಬಿ ಕ್ಷೇತ್ರದಿಂದ ಹಾಗೂ ಮೂರನೇ ವಿಧಾನಸಭೆಗೆ ಶಿರಾ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 23.06.2008ರಂದು ನಿಧನ ಹೊಂದಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು):– ಸನ್ಮಾನ್ಯ ಸಭಾಧ್ಯಕ್ಷರೇ, ಶ್ರೀ ಸಿ.ಜೆ. ಮುಕ್ಕಣ್ಣಪ್ಪ ಅವರು ನಿಧನ ಹೊಂದಿರುವ ಬಗ್ಗೆ ತಾವು ತಂದಿರುವ ಸಂತಾಪಸೂಚನೆಗೆ ನನ್ನ ಅನುಮೋದನೆಯನ್ನು ಸಲ್ಲಿಸುತ್ತಾ ಈ ಮನೆಯ ಮಾಜಿ ಸದಸ್ಯರಾದಂಥ ಶ್ರೀ ಸಿ.ಜೆ. ಮುಕ್ಕಣ್ಣಪ್ಪನವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಆ ಹೋರಾಟದಲ್ಲಿ ಜೈಲುವಾಸ ಅನುಭವಿಸಿ ರಾಷ್ಟ್ರದಲ್ಲಿನ ರಾಜಕೀಯದ ಪರಿಸ್ಥಿತಿಯಲ್ಲಿ ಮಹಾತ್ಮಾ ಗಾಂಧೀಜಿಯವರ ಒಂದು ಹೋರಾಟದಲ್ಲಿ ಭಾಗವಹಿಸಿ ತುಮಕೂರು ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿ ವೇತನ ಸಮಿತಿ, ಇತರೆ ಅನೇಕ ಸಮಿತಿಗಳಲ್ಲಿ ಕೆಲಸ ಮಾಡಿ ಚಿತ್ರದುರ್ಗ ಜಿಲ್ಲೆಯಲ್ಲಿ ಆಗಿದ್ದಂಥ ಕ್ಷಾಮ ನಿವಾರಣೆಗಾಗಿ ಅವರು ಯಾವರೀತಿ ಶ್ರಮ ಪಟ್ಟಿದ್ದರು ಅದನ್ನು ತಾವು ಈ ಮನೆಯ ಗಮನಕ್ಕೆ ತಂದಿದ್ದೀರಿ. ಎರಡನೇ ವಿಧಾನಸಭೆಗೆ

ಗುಬ್ಬಿ ಕ್ಷೇತ್ರದಿಂದ ಹಾಗೂ ಮೂರನೇ ವಿಧಾನಸಭೆಗೆ ಶಿರಾ ಕ್ಷೇತ್ರದಿಂದ ಚುನಾಯಿತರಾಗಿ ಈ ನಾಡಿನ ಅಭಿವೃದ್ಧಿಗಾಗಿ ಅನೇಕ ರೀತಿಯ ಸೇವೆ ಮಾಡಿದಂಥ ಶ್ರೀ ಸಿ.ಜೆ. ಮುಕ್ಕಣ್ಣಪ್ಪನವರನ್ನು ಕಳೆದುಕೊಂಡು ಈ ಮನೆ, ನಾಡು ಬಡವಾಗಿದೆ. ಅವರ ಆತ್ಮಕ್ಕೆ ಶಾಂತಿ ಕೋರಿ ನನ್ನ ಈ ಸಂತಾಪ ಸೂಚನೆಗೆ ಬೆಂಬಲವನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ):– ಶ್ರೀ ಸಿ.ಜೆ. ಮುಕ್ಕಣ್ಣಪ್ಪನವರ ನಿಧನದಿಂದಾಗಿ ಸಂತಾಪ ಸೂಚನೆಯನ್ನು ಈ ಸಭೆಯ ಮುಂದೆ ತಂದಿದ್ದೀರಿ. ಅದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ಬಹುಶಃ ಮುಕ್ಕಣ್ಣಪ್ಪನವರು ಎಂದು ಹೇಳಿದರೆ ಅವರು ಎರಡು ಮತ್ತು ಮೂರನೇ ವಿಧಾನಸಭೆಯ ಸದಸ್ಯರಾಗಿದ್ದರೂ ಕೂಡ ಇವತ್ತು ಕೂಡ ಎಲ್ಲಿ ನೋಡಿದರೂ ಕೂಡ ವಿಧಾನಸೌಧದಲ್ಲಿ ಯಾವುದೇ ಮೂಲೆಯಲ್ಲಿ ಹೋದರೂ ಕೂಡ ಶಿರಾ ಎಂದು ಹೇಳಿದಾಗ ಮುಕ್ಕಣ್ಣಪ್ಪ ಎಂದು ನೆನೆಸತಕ್ಕಂಥ ಜನರು ಸಹ ಬಹಳ ಮಂದಿ ಇದ್ದಾರೆ. ಕಾರಣ ಇವತ್ತು ಅವರ oratory ಬಗ್ಗೆ ಎರಡನೇ ಮಾತಿಲ್ಲ. ಅದರ ಜೊತೆಯಲ್ಲಿ ಅದಕ್ಕೆ ನಿರ್ಭಯವಾಗಿ ನಿಸ್ಸಂಕೋಚವಾಗಿ ಯಾವುದೇ ವಿಚಾರವನ್ನು ಪ್ರತಿಪಾದನೆ ಮಾಡತಕ್ಕಂಥ ಒಬ್ಬ ಸಮರ್ಥ ನಾಯಕರಾಗಿದ್ದರು. ಅವರು ಸ್ವಾತಂತ್ರ್ಯದ ಪೂರ್ವದಲ್ಲಿ ಅವರ ಹೋರಾಟ, ನಾಲ್ಕಾರು ಬಾರಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದರು. ಅವರು ಜೈಲಿಗೆ ಹೋಗತಕ್ಕಂಥ ಸಂದರ್ಭ ಕೂಡ ಬಂತು. ಎಲ್ಲದಕ್ಕಿಂತ ಹೆಚ್ಚಾಗಿ ಅತ್ಯಂತ ಹಿರಿಯ ಗಾಂಧಿವಾದಿಗಳಾಗಿದ್ದರು. ಅವರು ಹುಟ್ಟಿನಿಂದ ಸಾಯುವವರೆಗೂ ಕೂಡ ಖಾದಿಯನ್ನು ಬಿಟ್ಟು ಬೇರೆ ಬಟ್ಟೆಯನ್ನು ಮುಟ್ಟುವಂಥ ಕೆಲಸವನ್ನು ಮಾಡಲಿಲ್ಲ. ಗಾಂಧೀವಾದಿಗಳಾಗಿದ್ದರು. ಮಹಾತ್ಮಗಾಂಧಿಯವರ ಯಾವುದೇ ಸಂಘ ಸಂಸ್ಥೆಗಳಿದ್ದರೂ ಕೂಡ ಅದರಲ್ಲಿ ತಾವೇ ತೊಡಗಿಸಿಕೊಂಡು ಕೆಲಸವನ್ನು ಮಾಡುತ್ತಿದ್ದರು. ಅವರು ಶಾಸಕರಾಗಿ ಒಂದು ಸಾರಿ ಗುಬ್ಬಿ ಕ್ಷೇತ್ರದಿಂದ ಆಯ್ಕೆಯಾದರು. ಕಳ್ಳಂಬೆಳ್ಳ ನನ್ನ ಮತಕ್ಷೇತಕ್ಕೆ ಸೇರಿದವರಾಗಿದ್ದರು. ಆಗ ಅದು ಗುಬ್ಬಿ ಕ್ಷೇತ್ರಕ್ಕೆ ಸೇರಿತ್ತು. ಆ ಕ್ಷೇತ್ರ ಪುನರ್ ವಿಂಗಡಣೆಯಾದ ಮೇಲೆ ಶಿರಾ ಕ್ಷೇತ್ರಕ್ಕೆ ಬಂದು ಅದು ಸ್ವತಂತ್ರರಾಗಿ ಆಯ್ಕೆಯಾಗುವಂಥ ಕೆಲಸವನ್ನು ಮಾಡಿದರು. ಬಹಳ ವರ್ಷಗಳ ಕಾಲ ಕಾಂಗ್ರೆಸ್‌ನಲ್ಲಿ ಅವರು ನಿಕಟವಾದ ಸಂಪರ್ಕ ಬಾಂಧವ್ಯವನ್ನು ಇಟ್ಟುಕೊಂಡಿದ್ದರು. ಎರಡು ಬಾರಿ ಶಾಸಕರಾಗಿದ್ದರು. ಕೊನೆಗೆ ಅವರು ಯಾವ ರೀತಿಯಾಗಿ ಹೋರಾಟವನ್ನು ಮಾಡುತ್ತಿದ್ದರೆಂದರೆ 1946 ರಲ್ಲಿ ಫ್ಯಾಮಿನ್ ಬಂದಂಥ ಸಂದರ್ಭದಲ್ಲಿ ಬಹುಶಃ ತುಮಕೂರು, ಕೋಲಾರ,

ಚಿತ್ರದುರ್ಗ ಭಾಗದಲ್ಲಿ ಅವರಿಗೆ ಸವಲತ್ತನ್ನು ಕೊಡತಕ್ಕಂಥ ಸಂದರ್ಭದಲ್ಲಿ ಆಗಿನ ಬ್ರಿಟಿಷರ ಕಾಲದಲ್ಲಿಯೂ ಕೂಡ ಅಮೆರಿಕದ ಮಾಜಿ ಅಧ್ಯಕ್ಷರನ್ನು ಹೋಗಿ ಕಂಡು ಸವಲತ್ತನ್ನು ಪಡೆಯುವುದರಲ್ಲಿ ಬಹಳ ಮುಂದಾದಂತಾದವರು. ಅವರು ಹೆಚ್ಚಿನ ಸಹಾಯವನ್ನು ನಮ್ಮ ತುಮಕೂರು, ಕೋಲಾರ, ಚಿತ್ರದುರ್ಗ ಭಾಗಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸಿದರು. ಅವರು ಕೊನೆಯವರೆಗೂ, ಎಲ್ಲಾದರೂ ಕೂಡ ನೀರಾವರಿ ಹೋರಾಟಕ್ಕೆ ನಮಗೆ ಬಹಳ ಪ್ರೋತ್ಸಾಹವನ್ನು ಕೊಡುತ್ತಿದ್ದರು. ನಾನು ರಾಜಕೀಯವಾಗಿ ಭಿನ್ನಾಬಿಪ್ರಾಯ ಹೊಂದಿದವನಾಗಿದ್ದರೂ ಕೂಡ ಅವರು ನನಗೆ ನೀರಾವರಿ ವಿಚಾರದಲ್ಲಿ ಸಾಕಷ್ಟು ರೀತಿಯಲ್ಲಿ ಪ್ರೋತ್ಸಾಹವನ್ನು ಕೊಡುತ್ತಿದ್ದರು. ನೀರಾವರಿಯಿಂದಾಗಿ ಇವತ್ತು ನಮ್ಮ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಬೇಕೆಂದು ಮಹದಾಸೆಯನ್ನು ಇಟ್ಟುಕೊಂಡಿದ್ದರು. ಬಹುಶಃ ನಾನು ಹಿಂದಿನ ಅವಧಿಯಲ್ಲಿ ಹೇಮಾವತಿ ನೀರನ್ನು ಶಿರಾಕ್ಕೆ ಕೊಟ್ಟಂಥ ಸಂದರ್ಭದಲ್ಲಿ ಅವರು ಅತ್ಯಂತ ಸಂತೋಷವನ್ನು ಪಟ್ಟು ನನಗೆ ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸಿ ನನ್ನನ್ನು ಬಹಳ ಅಭಿಮಾನದಿಂದ ಮಾತನಾಡಿಸಲಿಕ್ಕೆ ಪ್ರಾರಂಭಿಸಿದರು. ಅಂದರೆ ಅವರಿಗೆ ಯಾವತ್ತಿಗೂ ಕೂಡ ಜನಗಳ ಬಗ್ಗೆ ಕಳಕಳಿ ಇತ್ತು. ಜನಗಳ ಬಗ್ಗೆ ಯಾವುದೇ ವಿಚಾರದಲ್ಲಿಯೂ ಕೂಡ ತಮ್ಮನ್ನು ತಾವೇ ತೊಡಗಿಸಿಕೊಳ್ಳುತ್ತಿದ್ದರು. ಅವರು ಮಾಜಿ ಶಾಸಕರ ಅಧ್ಯಕ್ಷರಾಗಿಯೂ ಕೂಡ ಕೊನೆಯವರೆಗೆ ಬಹಳಷ್ಟು active ಆಗಿ ಅತ್ಯಂತ ಚುರುಕಾಗಿ ಕೆಲಸವನ್ನು ಮಾಡತಕ್ಕಂಥವರಾಗಿದ್ದರು. 91 ವರ್ಷಗಳ ಕಾಲ ಅವರು ಒಂದು ದಿವಸವೂ ಆಸ್ಪತ್ರೆಗೆ ಹೋದಂಥವರಲ್ಲ. ಕೇವಲ 15 ದಿವಸಗಳ ಹಿಂದೆ ಮಾತ್ರ ಅವರಿಗೆ ಸ್ವಲ್ಪ ಕಿಡ್ನಿ ಪ್ರಾಬ್ಲಮ್ ಆಗಿ ನಿಧನ ಹೊಂದಿದ್ದಾರೆ. ಅವರು ಸ್ವಾತಂತ್ರ್ಯ ಪೂರ್ವದಲ್ಲಿ ಅವರು ಮಾಡಿದಂಥ ಕೆಲಸ ಅಪಾರವಾದುದು. ಇವತ್ತು ಆ ಕೊಂಡಿ ಕಳಚಿ ಬಿದ್ದಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತೇ ಅವರ ಅಂತಿಮ ಸಂಸ್ಕಾರ ಹರಿಶ್ಚಂದ್ರ ಘಾಟಿನಲ್ಲಿ ನಡೆಯಲಿದೆ. ಒಟ್ಟಿನಲ್ಲಿ ಇವತ್ತಿಗೆ ಅವರು ಪ್ರಕೃತಿಯ ಗರ್ಭದಲ್ಲಿ ಸೇರಿ ಹೋದರು ಅವರೇನು ಹೋರಾಟವನ್ನು ಮಾಡಿದ್ದರು, ಅದನ್ನು ಯಾರೂ ಕೂಡ ಮರೆಯುವಂತಿಲ್ಲವೆಂದು ಈ ಸಂದರ್ಭದಲ್ಲಿ ಹೇಳಿ, ಅವರಿಗೆ ಇರುವವರು ಒಬ್ಬಳೇ ಮಗಳು, ಇಬ್ಬರು ಮೊಮ್ಮಕ್ಕಳು, ಅವರನ್ನು ನಾನು ಬೆಳಿಗ್ಗೆ ಹೋಗಿ ನೋಡಿಕೊಂಡು ಬಂದೆ. ಅವರಿಗೆ ಈ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಅವರ ಅಭಿಮಾನಿಗಳಿಗೆ ದೇವರು ದಯಪಾಲಿಸಲಿ ಎಂದು ಆಶಿಸಿ ನನ್ನ ಮಾತು ಮುಗಿಸುತ್ತೇನೆ.

ಅಧ್ಯಕ್ಷರು:– ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನಾಚರಣೆ ಮಾಡಬೇಕೆಂದು ಕೋರುತ್ತೇನೆ.

(ಸದನದ ಎಲ್ಲಾ ಸದಸ್ಯರು ಮೃತರ ಗೌರವಾರ್ಥ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)

2. ಪ್ರಕಟಣೆ

ವಿಷಯ: ಕಾರ್ಯ ಕಲಾಪಗಳ ಸಲಹಾ ಸಮಿತಿಯಲ್ಲಿ ದಿ: 24–06–08 ಮತ್ತು ದಿ: 25–06–08 ರಂದು ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣಾ ನಿರ್ಣಯದ ಮೇಲೆ ಚರ್ಚೆ ಹಾಗೂ ಅಂಗೀಕಾರ.

ಅಧ್ಯಕ್ಷರು: ದಿನಾಂಕ 23ನೇ ಜೂನ್ 2008 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ.

ದಿನಾಂಕ 24.06.2008 ಮತ್ತು 25.06.2008 ರಂದು ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣಾ ನಿರ್ಣಯದ ಮೇಲೆ ಚರ್ಚೆ ಹಾಗೂ ಅಂಗೀಕಾರ.

ದಿನಾಂಕ 26.06.2008 ರಂದು ಅಧಿವೇಶನ ಇರುವುದಿಲ್ಲ.

ಇದಕ್ಕೆ ಸದನದ ಸಹಮತಿಯಿದೆಯೆಂದು ಭಾವಿಸುತ್ತೇನೆ.

3. ನಿಯಮ 69 ರ ಮೇರೆಗೆ ಚರ್ಚೆ ಮುಂದುವರೆದುದು

ವಿಷಯ: ರಾಜ್ಯದಲ್ಲಿ ಉಂಟಾಗಿರುವ ರಸಗೊಬ್ಬರದ ತೀವ್ರ ಅಭಾವದ ಹಿನ್ನೆಲೆಯಲ್ಲಿ ರೈತರು ಹೋರಾಟ ನಡೆಸುತ್ತಿದ್ದ ಸಂದರ್ಭದಲ್ಲಿ ಪೊಲೀಸರು ನಡೆಸಿರುವ ಗೋಲಿಬಾರ್ ಘಟನೆ ಕುರಿತು.

ಅಧ್ಯಕ್ಷರು : ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಚರ್ಚೆ ಏನು ಪ್ರಾರಂಭವಾಗಿದೆ. ಅದನ್ನು ಮುಂದುವರೆಸೋಣ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಈ ಒಂದು ಸಭೆಯಲ್ಲಿ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿರತಕ್ಕಂಥ ಮಾನ್ಯ ಸಭಾಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ ಕಳೆದ ಕೆಲವು ದಿನಗಳಲ್ಲಿ ಈ ನಮ್ಮ ರಾಜ್ಯದಲ್ಲಿ ನಡೆಯತಕ್ಕಂಥ ಘಟನೆಗಳ

ಬಗ್ಗೆ ನಮ್ಮ ರಾಜ್ಯದಲ್ಲಿರುವಂಥ ಎಲ್ಲಾ ರಾಜಕಾರಣಿಗಳಲ್ಲದೇನೇ ಎಲ್ಲಾ ಅಧಿಕಾರಿಗಳು ವಹಿಸಿರತಕ್ಕಂಥ ನಿರ್ಲಕ್ಷ್ಯದಿಂದ ನಮ್ಮ ರಾಜ್ಯದಲ್ಲಿ ಆಗಿರತಕ್ಕಂಥ ಅನಾಹುತದ ಬಗ್ಗೆ ಇವತ್ತು ಕರ್ನಾಟಕ ರಾಜ್ಯಾದ್ಯಂತ ರೈತರಿಗೆ ಆಗಿರತಕ್ಕಂಥ ತೊಂದರೆಯನ್ನು ಯಾವ ರೀತಿಯಾಗಿ ನಾವು ಹೇಳಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಈ ಸರ್ಕಾರ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಮೇಲೆ ರೈತರಿಗೆ ಮುಂದೆ ಬೇಕಾಗಿರುವ ರಕ್ಷಣೆ, ಯಾವುದೇ ರೈತರಿಗೆ ನಾವು ಮಾಡಬೇಕಾದಂಥ ಸಹಾಯ ಏನು ಎಂಬುದನ್ನು ಮೊದಲು ಮನಗಾಣಬೇಕು. ರೈತನಿಗೆ ಯಾವುದೇ ಸರ್ಕಾರವಿರಲಿ ಒಂದು ಬಿತ್ತನೆ ಬೀಜ, ಒಂದು ರಸ ಗೊಬ್ಬರ, ಈ ಎರಡು ಬಹಳ ಪ್ರಮುಖವಾದಂಥ ಒಂದು ಸರ್ಕಾರದಿಂದ ನಾವು ಮಾಡತಕ್ಕಂಥ ಸಹಾಯ ಯಾವುದು? ಸಹಾಯವೆಂದರೆ ಬೀಜದಲ್ಲೇನೋ ಸಬ್ಸಿಡಿ ಕೊಡುತ್ತೇವೆ. ಸಮರ್ಪಕವಾಗಿ ಬೀಜದ availability ಯನ್ನು ನೋಡಬೇಕಾಗಿರುವಂಥದ್ದು ಸರ್ಕಾರದ ಜವಾಬ್ದಾರಿ. ಇಂತಹ ಒಂದು ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ಇದೊಂದು ನಿರಂತರವಾಗಿ ನಡೆದುಕೊಂಡು ಬಂದಿರುವಂಥ ಪ್ರಕ್ರಿಯೆ. ಇದೇನು ವಿಶೇಷವಾಗಿ ಇದೇ ಸರ್ಕಾರವೆಂದು ನಾನೇನು ಹೇಳುತ್ತಿಲ್ಲ. ಆದರೆ ಸರ್ಕಾರ ಇರಲಿ, ಇಲ್ಲದೇ ಇರಲಿ, ಅದು ರಾಜ್ಯಪಾಲರ ಆಡಳಿತವಾಗಿತ್ತು. ಸರ್ಕಾರ ಇತ್ತು ಎನ್ನುವುದರ ಬಗ್ಗೆ ಚರ್ಚೆ ಮಾಡುತ್ತಾ ಕುಳಿತರೆ ನಾವು ಏನೂ ರೈತರಿಗೆ ಪರಿಹಾರ ಕೊಡಲಿಕ್ಕಾಗುವುದಿಲ್ಲ. ಯಾವುದೇ ಒಂದು ನಿರಂತರವಾಗಿರುವಂಥ ಪ್ರಕ್ರಿಯೆಯಲ್ಲಿ ಆ ಸಂಬಂಧಪಟ್ಟ ಇಲಾಖಾಧಿಕಾರಿಗಳು ಕೂಡ ನಿಗಾ ವಹಿಸಬೇಕಾಗಿತ್ತು. ಏನೆಂದರೆ ಗವರ್ನರ್‌ರವರ ಮೇಲೆ, ಇನ್ನೊಬ್ಬರ ಮೇಲೆ ಗೂಬೆ ಕೂರಿಸುವುದಕ್ಕಿಂತಲೂ, ಯಾವುದೇ ಒಂದು ಸರ್ಕಾರವಿರಲಿ, ಸರ್ಕಾರ ಇಲ್ಲದೇ ಇರಲಿ, ಈ ಸಾರಿ ಮಾನ್ಸೂನ್ ಬರುವಾಗ ನಮಗೆ ಬೇಕಾಗಿರುವ ಬಿತ್ತನೆ ಬೀಜ ಎಷ್ಟು, ಗೊಬ್ಬರ ಎಷ್ಟು ಎನ್ನುವುದನ್ನು ಸಂಬಂಧಪಟ್ಟ ಇಲಾಖೆಯವರು ನಿಗಾ ವಹಿಸಬೇಕಾಗಿತ್ತು.

ಅದರಲ್ಲಿ ವಿಫಲರಾಗಿದ್ದಾರೆಂದು ನಮ್ಮ ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ನಾನು ಒಂದು ಮಾತನ್ನು ಅವರಲ್ಲಿ ಕೇಳಲಿಚ್ಛಿಸುತ್ತೇನೆ. ಇಲ್ಲಿಯವರೆಗೆ ಸರ್ಕಾರ ಸ್ಪಷ್ಟವಾಗಿರುವಂಥ ಹೇಳಿಕೆ ಕೊಟ್ಟಿಲ್ಲ. ಏನೆಂದರೆ ನಮಗೆ ಈವರೆಗೆ ಏಪ್ರಿಲ್ ತಿಂಗಳಾಗಿರಬಹುದು, ಮೇ ತಿಂಗಳಾಗಿರಬಹುದು ಅಥವಾ ವಿಶೇಷವಾಗಿ ಜೂನ್ ತಿಂಗಳಲ್ಲಿ ನಮ್ಮ ಕರ್ನಾಟಕ ರಾಜ್ಯಕ್ಕೆ allocate ಆಗಿರುವಂಥ fertilizers ಎಷ್ಟು? ಇವರು requirement ಕೊಟ್ಟದ್ದೆಷ್ಟು? Fertilizers release ಆಗಿದ್ದೆಷ್ಟು? ಅದರಲ್ಲಿ ಖರ್ಚಾಗಿದ್ದೆಷ್ಟು ಎಂಬುದನ್ನು

Vol 2. F24

ನಿರ್ದಿಷ್ಟವಾಗಿ ಯಾರೂ ಕೂಡ, ಇವತ್ತು ಮುಖ್ಯಮಂತ್ರಿಯವರಾಗಲಿ, ನಮ್ಮ ಕೃಷಿ ಸಚಿವರಾಗಲಿ ನಿರ್ದಿಷ್ಟವಾದಂಥ ಹೇಳಿಕೆಯನ್ನು ಕೊಟ್ಟಿಲ್ಲ. ಇವತ್ತು ಕೊರತೆ ಇದೆ. ಕೇಂದ್ರ ಸರ್ಕಾರವೇ ಕಾರಣ, ಅವರು ಕಾರಣ, ಇವರು ಕಾರಣ ಎಂದು ಹೇಳಿಕೊಂಡು ನಮ್ಮ ರಾಜ್ಯದಲ್ಲಿ ಏನು ಅನಾಹುತವಾಗಿದೆ, ಮೊದಲನೆಯದಾಗಿ ಇವತ್ತು ಎಂಥದ್ದೇ ಪರಿಸ್ಥಿತಿ ಇದ್ದರೂ ಕೂಡ ಸರ್ಕಾರ ನಿಯಂತ್ರಣದಿಂದ ಜವಾಬ್ದಾರಿಯನ್ನು ನಿಭಾಯಿಸಬೇಕಾಗಿತ್ತು. ಗೋಲಿಬಾರ್ ಮಾಡುವಂಥ ಅವಶ್ಯಕತೆ ಇರಲಿಲ್ಲ. ಅದರ ಬಗ್ಗೆ ಸರ್ಕಾರ ಇವತ್ತು ನ್ಯಾಯಾಂಗ ತನಿಖೆಗೆ ಆದೇಶ ಮಾಡಿದೆ, ನಾವು ಕೂಡ ಅದನ್ನು welcome ಮಾಡಿದ್ದೇವೆ ಅದರ terms of references ಏನೇನು ಇರಬೇಕೆಂಬುದನ್ನು ಸ್ಪಷ್ಟವಾಗಿ ಹೇಳಬೇಕೆಂದು ನಮ್ಮ ನಾಯಕರು ಹೇಳಿದ್ದಾರೆ. ಅದಕ್ಕೆ ನಮ್ಮೆಲ್ಲರ ಸಮರ್ಥನೆ ಇದೆ. ಆ ವಿಚಾರದ ಬಗ್ಗೆ ನಾನು ಹೆಚ್ಚು ಹೇಳಲು ಹೋಗುವುದಿಲ್ಲ. ಏಕೆಂದರೆ ನಿನ್ನೆ ಬಿ.ಸಿ. ಪಾಟೀಲರು ಮತ್ತು ಇತರರೆಲ್ಲರೂ ಚರ್ಚೆ ಮಾಡಿದ್ದಾರೆ. ಬಹಳ ಮುಖ್ಯವಾಗಿರುವ ಎರಡನೇ ವಿಚಾರ ಇಲ್ಲಿ ಚರ್ಚೆಯಾಗದಿರುವುದೆಂದರೆ, ಆ ಗೋಲಿಬಾರ್ ಘಟನೆಯನ್ನು ಹೊರತುಪಡಿಸಿ ಎಷ್ಟು ಜನ ರೈತರು ಇವತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು. ಏಕೆಂದರೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇಲ್ಲಿಯವರೆಗೆ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವತ್ತಿನ ದಿನಪತ್ರಿಕೆಯನ್ನು ನೋಡಿದೆ. ನಿನ್ನೆ ಮೂರು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪತ್ರಿಕೆಯಲ್ಲಿ ಬಂದಿರುವ ವಿಶ್ಲೇಷಣೆಯ ಪ್ರಕಾರ ಇಬ್ಬರು ಅದರಲ್ಲಿ ರೈತರಾಗಿದ್ದರು, ಒಬ್ಬರು ಸಂಶಯಾಸ್ಪದವಾಗಿದೆಯೆಂದು ಬಂದಿದೆ. ಆದರೆ ಅದು ಏನಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. ನಿನ್ನೆ ಸದನದಲ್ಲಿ ಇದರ ಬಗ್ಗೆ ಮಹತ್ತರವಾದ ಚರ್ಚೆ ನಡೆದಿದ್ದರೂ ಕೂಡ ಇವತ್ತು ರಾಜ್ಯದ ರೈತರಿಗೆ ಈ ಸರ್ಕಾರದ ಮೇಲೆ ವಿಶ್ವಾಸ ಇಲ್ಲ. ಇಡೀ ಸದನ ಎಲ್ಲಾ ಕಾರ್ಯಕಲಾಪಗಳನ್ನು ಮುಂದೂಡಿ ಅದರ ಬಗ್ಗೆಯೇ ಚರ್ಚೆ ಮಾಡುತ್ತಿದ್ದರೂ ಇವತ್ತು ಮೂರು ಜನ ರೈತರು ಮತ್ತೆ ಆತ್ಮಹತ್ಯೆ ಮಾಡಿಕೊಂಡಿರುವುದು ನಾವು ವಿಚಾರ ಮಾಡತಕ್ಕ ವಿಚಾರವಾಗಿದೆ. ನಮ್ಮ ರಾಜ್ಯದ ರೈತರಿಗೆ ಈ ಸದನದ ಮೇಲೆ ವಿಶ್ವಾಸ ಇದೆಯೋ ಇಲ್ಲವೋ ಎಂಬ ವಾತಾವರಣ ಮೂಡಲು ಯಾರು ಕಾರಣ? ಅದರ ಬಗ್ಗೆ ಸಹ ಬಹಳ ಚರ್ಚೆ ಆಗಬೇಕಾಗುತ್ತದೆ. ಏಕೆಂದರೆ ಬೇಜವಾಬ್ದಾರಿತನದಿಂದ ಸರ್ಕಾರ ವರ್ತಿಸಬಾರದು. ಯಾವುದೇ ರೈತ ಆತ್ಮಹತ್ಯೆ ಮಾಡಿಕೊಂಡರೆ ಆ ರೀತಿ ಆತ್ಮಹತ್ಯೆ ಮಾಡಿಕೊಂಡಿರುವವರು ರೈತರಾಗಿದ್ದಾನೊ ಇಲ್ಲವೊ ಎಂಬುದನ್ನು ಆಮೇಲೆ

ಪರಿಶೀಲನೆ ಮಾಡಿ. ನಿಮ್ಮ ಮಾನದಂಡ ಏನಿದೆಯೊ ಅದನ್ನು ನಾನು ನೋಡಿದ್ದೇನೆ. ಯಾವುದೇ ಒಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡರೆ ಅದು ರೈತ ಆತ್ಮಹತ್ಯೆ ಪ್ರಕರಣವೆಂದು ಇತ್ಯರ್ಥ ಮಾಡಬೇಕಾದರೆ, ಅದಕ್ಕೆ ಒಂದು ಲಕ್ಷ ರೂಪಾಯಿ ಪರಿಹಾರವನ್ನು ಕೊಡುತ್ತಾರೆ. ಆ ರೀತಿ ಇತ್ಯರ್ಥ ಮಾಡಬೇಕಾದರೆ ನೀವು ಏನು ಬಂಧನಗಳನ್ನು ಹಾಕಿದ್ದೀರೆಂದರೆ ಅವನು ಮೊದಲು ರೈತನಾಗಿರಬೇಕು, ಅವನ ಹೆಸರಿನಲ್ಲಿ ಜಮೀನು ಇರಬೇಕು, ಎರಡನೆಯದು, ಅವನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಅಥವಾ ಸಹಕಾರಿ ಬ್ಯಾಂಕಿನಿಂದ ಸಾಲ ಪಡೆದಿರಬೇಕು. ಇದು ತಾವು ಮಾಡಿರುವ ಮಾನದಂಡದಲ್ಲಿ ಕಡ್ಡಾಯವಾಗಿದೆ. ಆದರೆ ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಈ ಒಂದು ಪರಿಸ್ಥಿತಿ ವಿಶೇಷ ಪ್ರಕರಣ ಎಂದು ಪರಿಗಣಿಸಬೇಕಾಗುತ್ತದೆ. ಏಕೆಂದರೆ ಕೆಲವೊಂದು ರೈತರು ಯಾರು ತೀರಿಕೊಂಡಿದ್ದಾರೆ, ಇವತ್ತು ಚಿಂಚೋಳಿ ತಾಲ್ಲೂಕಿನ ನನ್ನ ಮತ ಕ್ಷೇತ್ರದ ಪಕ್ಕದಲ್ಲಿರುವ ಪೂಲಕ್‌ಪಲ್ಲಿಯಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡ. ಸರಿಯಾದ ಸಮಯಕ್ಕೆ ರಸಗೊಬ್ಬರ ಸಿಗಲಿಲ್ಲವೆಂದು ಅವನು ಆತ್ಮಹತ್ಯೆ ಮಾಡಿಕೊಂಡಿದ್ದಂತೂ ನಿಜ. ಅದರ ಬಗ್ಗೆ ಸರ್ಕಾರದವರು ತನಿಖೆ ಮಾಡಿಸಿ. ಆದರೆ ನನಗೆ ಆಶ್ಚರ್ಯ ಮೂಡಿಸುವ ಸಂಗತಿ ಏನೆಂದರೆ, ಅಲ್ಲಿರುವ ಸ್ಥಳೀಯ ಕಂದಾಯಾಧಿಕಾರಿಗಳು ಆ ರೈತನ ಮನೆಗೆ ಹೋಗಿ ಅವನ ಹೆಂಡತಿ ಕೈಯಿಂದ ನನ್ನ ಗಂಡ ಕುಡುಕನಾಗಿದ್ದ ಎಂದು ಬರೆದುಕೊಡು ಎಂದು ಒತ್ತಾಯ ಮಾಡಿದ್ದು ಕೆಟ್ಟ ಸಂಪ್ರದಾಯವೆಂದು ನಾನು ಅಂದುಕೊಳ್ಳುತ್ತೇನೆ. ಏಕೆಂದರೆ, ಈ ಸರ್ಕಾರ ಮೃತರ ಮನೆಗೆ ಹೋಗಿ ನಿನ್ನ ಗಂಡ ಕುಡುಕನಾಗಿದ್ದ ಎಂದು ಬರೆದುಕೊಡು ಎಂಬ ಕೀಳು ಮಟ್ಟಕ್ಕೆ ಅಧಿಕಾರಿಗಳು ಹೋಗುತ್ತಾರೆಂದರೆ ಇದು ಯಾರ ನಿರ್ದೇಶನವಿದೆ? ಒಬ್ಬ ಜನಪ್ರತಿನಿಧಿಯಾಗಿ ನಾವು ಕೇಳಬೇಕಾಗುತ್ತದೆ. ಈ ಸರ್ಕಾರದಿಂದ ಅಧಿಕಾರಿಗಳಿಗೆ ಏನಾದರೂ ಈ ರೀತಿ ನಿರ್ದೇಶನ ಕೊಟ್ಟಿದ್ದೀರಾ? ಒಬ್ಬ ಅಧಿಕಾರಿ ಹೋಗಿ ಮೃತರ ಪತ್ನಿಯಿಂದ ಖಾಲಿ ಪೇಪರ್‌ನಲ್ಲಿ ಸಹಿ ಮಾಡಿಸಿಕೊಂಡಿದ್ದಾರೆ. ಈ ರೀತಿ ಇರತಕ್ಕ ಅಸಹನೆಯ ಭಾವನೆಯಿಂದ ಇದೇನೊ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನವನ್ನು ಸರ್ಕಾರ ಮಾಡಬಾರದು. ಕೂಲಂಕುಷವಾಗಿ ಇದರ ಬಗ್ಗೆ ಚರ್ಚೆ ಮಾಡಿ, ತನಿಖೆ ಮಾಡಿ. ಆದರೆ ಈ ಪ್ರಕರಣಗಳನ್ನು ಮುಚ್ಚಿ ಹಾಕಿ ರೈತರನ್ನು ಸಪ್ರೆಸ್ ಮಾಡುವುದು ಈ ಸರ್ಕಾರದಿಂದ ಸಾಧ್ಯವಾಗುವುದಿಲ್ಲ ಎಂಬ ಎಚ್ಚರಿಕೆಯನ್ನು ನೀವು ವಹಿಸಬೇಕು. ಈ ತಪ್ಪನ್ನು ಅಧಿಕಾರಿಗಳು ಮಾಡಿದ್ದಾರೊ, ಮೇಲಿನಿಂದ ಆದೇಶ ಬಂದಿದೆಯೊ ಎಂಬ ಬಗ್ಗೆ ಇವತ್ತು ನಾವೆಲ್ಲ ಆತ್ಮಶೋಧನೆ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ನಾವು ಅಧಿಕಾರದಲ್ಲಿ

ಇದ್ದೇವೆ, ಆಡಳಿತ ನಮ್ಮ ಕೈಯಲ್ಲಿದೆ ಎಂದು ಇಂಥ ಘಟನೆಗಳನ್ನು ಸಪ್ರೆಸ್ ಮಾಡುವುದಕ್ಕೆ, ನೀವು ವಿರೋಧ ಪಕ್ಷದಲ್ಲಿದ್ದಾಗ ಏನು ಹೇಳಿದ್ದೀರಿ? ನಿಮ್ಮ ಹೇಳಿಕೆಗಳು ಏನು ಇತ್ತು? ಆದರೆ ನೀವು ಇವತ್ತು ಅಧಿಕಾರಕ್ಕೆ ಬಂದಾಗ ಯಾವ ರೀತಿಯಾಗಿ ವರ್ತನೆ ಮಾಡಿತ್ತಿದ್ದೀರಿ? ಖಂಡಿತವಾಗಿ ಸಂಬಂಧಪಟ್ಟಿರುವ ಮಂತ್ರಿಗಳಾಗಲಿ, ಮುಖ್ಯ ಮಂತ್ರಿಗಳಾಗಲಿ ಇದರ ಬಗ್ಗೆ ತನಿಖೆಯಾಗಬೇಕು. ಈ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ನಮ್ಮ ರಾಜ್ಯದಲ್ಲಿ 15 ರೈತರ ಆತ್ಮಹತ್ಯೆಯ ಪ್ರಕರಣಗಳಾಗಿದೆ. ಅದರಲ್ಲಿ ಪರಿಹಾರ ಕೊಡುವಾಗ ನಾನು ಏನು ಮನವಿ ಮಾಡುತ್ತೇನೆಂದರೆ, ಅವನು ಕಡ್ಡಾಯವಾಗಿ ಸಾಲ ತೆಗೆದುಕೊಂಡಿರಬೇಕು ಎನ್ನತಕ್ಕ ನಿಬಂಧನೆಯನ್ನು ತೆಗೆದು ಹಾಕಬೇಕು. ಏಕೆಂದರೆ ಇದು ವಿಶೇಷವಾದದ್ದು. ಸರ್ಕಾರ ಬಂದ 25 ದಿವಸಗಳಲ್ಲಿ ಗೊಬ್ಬರದ ಅಭಾವದಿಂದ ಆಗಿರುವ ಸಂದರ್ಭದಲ್ಲಿ ಇವತ್ತು ಯಾರಾದರೂ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೆ ಖಂಡಿತಾ ಅವರಿಗೆ ಪರಿಹಾರ ಕೊಡತಕ್ಕದ್ದನ್ನು ಮಾಡಲೇಬೇಕು. ಎರಡನೆಯದು, ಕೇಂದ್ರ ಸರ್ಕಾರದಿಂದ ನಿಮಗೆ ಬರಬೇಕಾದ ದಾಸ್ತಾನು ಬಂದಿಲ್ಲವೆಂಬ ಮಾತನ್ನು ಹೇಳುತ್ತಿದ್ದೀರಿ. ಆದರೆ, ನಮ್ಮ ಹತ್ತಿರ ಇರುವ ಮಾಹಿತಿಯ ಪ್ರಕಾರ, ನಾನು ಬೇರೆ ಜಿಲ್ಲೆಗಳ ಬಗ್ಗೆ ಮಾತನಾಡಲು ಹೋಗುವುದಿಲ್ಲ, ಆದರೆ ನಮ್ಮ ಗುಲ್ಬರ್ಗಾ ಜಿಲ್ಲೆಗೆ ಜೂನ್ ತಿಂಗಳಿಗೆ ನಿಮ್ಮ action plan ನಲ್ಲಿ ನೀವು ಅವರಿಗೆ 17 ಸಾವಿರ ಮೆಟ್ರಿಕ್ ಟನ್ ಗೊಬ್ಬರ ಬೇಕು ಎಂದು ಕೇಳಿದ್ದೀರಿ. ನಾನು ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಕೇಳಿದಾಗ ಇವತ್ತಿನವರೆಗೆ 16 ಸಾವಿರ ಮೆಟ್ರಿಕ್ ಟನ್ ಗೊಬ್ಬರ ನಮ್ಮ ಜಿಲ್ಲೆಗೆ ಬಂದಿದೆ. ಆದರೆ ಇನ್ನೂ ಅಭಾವ ಏಕಿದೆ? ನಿಮ್ಮ ಅಸೆಸ್‌ಮೆಂಟ್‌ನಲ್ಲಿ ಏನಾದರೂ ವ್ಯತ್ಯಾಸ ಇದೆಯೆ? ಅಥವಾ ವಿತರಣೆ ಮಾಡುವ ನಿಮ್ಮ ವ್ಯವಸ್ಥೆಯಲ್ಲಿ ಏನಾದರೂ ಲೋಪದೋಷ ಇದೆಯೆ? ಇದರ ಬಗ್ಗೆ ಸರ್ಕಾರ ಯಾವಾಗಲಾದರೂ ಚಿಂತನೆ ಮಾಡಿದೆಯೆ? ಯಾವ ರೀತಿಯಾಗಿ ನಮ್ಮಲ್ಲಿರುವ ಸ್ಟಾಕನ್ನು ಸ್ಥಳೀಯವಾಗಿ ವಿತರಣೆ ಮಾಡುತ್ತಿರುವ ಬಗ್ಗೆ ಯಾರು ನಿಗಾವಹಿಸುತ್ತಿದ್ದಾರೆ? ಈ ಸರ್ಕಾರ ಬಂದು 30 ದಿವಸವಾಯಿತು, ಜಿಲ್ಲಾ ಉಸ್ತುವಾರಿ ಸಚಿವರನ್ನು ಮಾಡಿದ್ದೀರಿ, ಯಾವ ಜಿಲ್ಲೆಯಲ್ಲಿ ಅಲ್ಲಿರುವ ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಿರುವ ಎಲ್ಲರನ್ನೂ ಕರೆದು ಗೊಬ್ಬರದ ವಿತರಣೆ ಬಗ್ಗೆ ವಿವರವಾಗಿ ರಿವ್ಯೂ ಮಾಡಿದ್ದಾರೆ? ತಮ್ಮ ತಮ್ಮ ಜಿಲ್ಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ್ಯಾರು ವಾಸ್ತವ್ಯ ಹೂಡಿಲ್ಲ, ಆಸ್ಪೈನ್ಡ್ ಡಿಸ್ಟ್ರಿಕ್ಟ್‌ನಲ್ಲಿ ಅಲ್ಲಿ ಯಾರು ವಾಸ ಮಾಡುತ್ತಿಲ್ಲ. ಇವತ್ತು ರಸಗೊಬ್ಬರದ ಪರಿಸ್ಥಿತಿಯಿಂದ ನಾವು ನಮ್ಮ ನಮ್ಮ ಕ್ಷೇತ್ರಕ್ಕೆ ಹೋಗುವಂತೆ ಇಲ್ಲ. ಅಲ್ಲಿಗೆ ಹೋದರೆ ಜನರು ಅವರು ಮಾತನಾಡತಕ್ಕ ರೀತಿ, ಅವರು

ನಮ್ಮನ್ನು ತರಾಟೆಗೆ ತೆಗೆದುಕೊಂಡರೆ ನಾವು ಏನೂ ಉತ್ತರವನ್ನು ಹೇಳದಿರುವ ಪರಿಸ್ಥಿತಿಯಲ್ಲಿ ಇದ್ದೇವೆ. ಆದರೆ, ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳು ಏನು ಮಾಡುತ್ತಿದ್ದಾರೆ, ಈ ರಾಜ್ಯದಲ್ಲಿ ಗೊಬ್ಬರದ ವಿತರಣೆಯಲ್ಲಿ ಏನು ಕೊರತೆಯಾಗಿದೆ ಎಂಬ ಬಗ್ಗೆ ನಿಮಗೆ ಒಂದು ನಿದರ್ಶನವನ್ನು ಕೊಡುತ್ತೇನೆ. ಇವತ್ತು ಪ್ರೈವೇಟ್ ಕಂಪನಿಗಳಿಂದ ಬಂದಿರುವ ಗೊಬ್ಬರವೇನಿದೆ, ಅದು ತಾಲ್ಲೂಕುವಾರು ವಿತರಣೆಯಾಗುತ್ತಿಲ್ಲ ಗುಲ್ಬರ್ಗಾ ಜಿಲ್ಲೆಯದನ್ನು ತಾವು ತರಿಸಿನೋಡಿ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಿದ್ದರು. ನಾನು ಫೋನ್ ಮಾಡಿ ಹೇಳಿದೆ. ಏನೆಂದರೆ ಅವರು ಡೀಲರ್‌ವೈಸ್ ವಿತರಣೆ ಮಾಡುತ್ತಿದ್ದಾರೆ. ಇವತ್ತು ಡೀಲರ್‌ವೈಸ್ ವಿತರಣೆ ಹೇಗೆ ಇರುತ್ತದೆಂದರೆ ಗುಲ್ಬರ್ಗಾ ಸಿಟಿಯಲ್ಲೇ ಇವತ್ತು ಡೀಲರ್ಸ್ ಕಾನ್‌ಸೆಂಟ್ರೇಟ್ ಆಗಿದ್ದಾರೆ. ಇವತ್ತು ಗೋದಾವರಿಯಿಂದ ಗೊಬ್ಬರ ಬಂದರೆ ಗುಲ್ಬರ್ಗಾ ಸಿಟಿಗೆ 600 ಮೆಟ್ರಿಕ್‌ಟನ್ ಗೊಬ್ಬರ ವಿತರಣೆಯಾಗುತ್ತದೆ. ಆದರೆ ನಮ್ಮ ಸೇಡಂ ತಾಲ್ಲೂಕಿಗೆ 60 ಮೆಟ್ರಿಕ್ ಟನ್ ಕೊಟ್ಟಿದ್ದರು. ಆದರೆ ನಾನು ಜಗಳ ಆಡಿದ ಮೇಲೆ ಇನ್ನೊಂದು 50 ಮೆಟ್ರಿಕ್ ಟನ್ ಹೆಚ್ಚುವರಿ ಕೊಟ್ಟರು. ಸೇಡಂ, ಚಿಂಚೋಳಿ, ಚಿತಾಪುರ್‌ನಲ್ಲಿ ಬಿತ್ತುತ್ತಿರುವ ರೈತರಿಗೆ ಅದು ವಿತರಣೆಯಾಗುತ್ತಿಲ್ಲ. ಆ ಕಂಪನಿಯ ಡಿಸ್ಟ್ರಿಬ್ಯೂಟರ್ಸ್ ಎಲ್ಲರೂ ಗುಲ್ಬರ್ಗಾ ಸಿಟಿಯಲ್ಲಿ ಇದ್ದಾರೆಂದು ಅವರಿಗೇ ಎಲ್ಲಾ ಗೊಬ್ಬರವನ್ನು ಕೊಟ್ಟುಬಿಟ್ಟಿದ್ದಾರೆ. ಇದರಿಂದ ಗುಲ್ಬರ್ಗಾ ಸಿಟಿಯಲ್ಲಿ ಕಾಳಸಂತೆಯಲ್ಲಿ ಗೊಬ್ಬರ ಹೋಗುತ್ತಿದೆ. ಇದರ ಬಗ್ಗೆ ಯಾರೂ ನಿಗಾವಹಿಸುತ್ತಿಲ್ಲ. ಇದರ ಬಗ್ಗೆ ಡೆಪ್ಯೂಟಿ ಕಮೀಷನರ್ ಜೊತೆ ವಾದ ಮಾಡಿದ ಮೇಲೆ ಅವರು ಸ್ವಲ್ಪ ವ್ಯತ್ಯಾಸವನ್ನು ಮಾಡಲು ಪ್ರಯತ್ನ ಮಾಡಿದರು. ಆದರೆ ಇದನ್ನು ಯಾರು ಮಾಡಬೇಕಾಗಿತ್ತು. ಜಿಲ್ಲಾ ಉಸ್ತುವಾರಿ ಮಂತ್ರಿಯವರು ಅಲ್ಲೇ ಇವತ್ತು ವಾಸ್ತವ್ಯ ಹೂಡಿ ಬಂದಿರತಕ್ಕ ಗೊಬ್ಬರವನ್ನು ಜಿಲ್ಲಾವಾರು ಹಂಚಿಕೆ ಮಾಡಿಯೆಂದು ನಾನು ಅವರಿಗೆ ದೂರವಾಣಿ ಮೂಲಕ ಹೇಳಿದೆ. ಆದರೆ ಅದಕ್ಕೆ ಏನೂ ಉತ್ತರ ಮತ್ತು ಪರಿಹಾರ ಸಿಗಲಿಲ್ಲ. ಅಂದರೆ ನೀವು ಅರ್ಥ ಮಾಡಿಕೊಳ್ಳಬೇಕು. ಯಾವುದೇ ಜನಪ್ರತಿನಿಧಿ ನಮ್ಮ ಕ್ಷೇತ್ರದಲ್ಲಿರುವ ಸಮಸ್ಯೆಗಳನ್ನು ಹೇಳಿದಾಗ ಇರತಕ್ಕ ಮಂತ್ರಿಯವರೂ ಸ್ಪಂದಿಸದಿದ್ದಾಗ ಅಲ್ಲಿ ವಾತಾವರಣ ಹೆಚ್ಚಿನ ಪರಿಣಾಮಕ್ಕೆ ಹೋಗುತ್ತದೆ. ಅದಕ್ಕೆ ನಾವು ಯಾರೂ ನಮ್ಮ ನಮ್ಮ ಮತಕ್ಷೇತ್ರಗಳಲ್ಲಿ ಜನರನ್ನು ಏನಾದರೂ ತಪ್ಪುದಾರಿಗೆ ಎಳೆಯುವ ಪ್ರಯತ್ನವನ್ನು ಮಾಡಿಲ್ಲ. ನಾವು ಆದಷ್ಟು ಹೆಚ್ಚಿನ ಮಟ್ಟಿಗೆ ಗೊಬ್ಬರವನ್ನು ತರಿಸುತ್ತೇವೆ, ತಾಳ್ಮೆಯಿಂದ ಇರಿ ಎನ್ನತಕ್ಕ ಮಾತನ್ನೇ ಹೇಳಿದ್ದೇವೆ. ಸರ್ಕಾರ ಇವತ್ತು ವಿಫಲವಾಗಿದೆ ಎಂದು ನಾವು ಅವರ ಮೇಲೆ ಗೂಬೆ ಕೂರಿಸಿ ರಾಜಕೀಯ ಮಾಡಬೇಕು ಎಂಬ ಉದ್ದೇಶ ನಮಗೆ ಇಲ್ಲ. ನಮ್ಮ

ಮೊದಲ ಉದ್ದೇಶವೇನೆಂದರೆ ರೈತರಿಗೆ ಇವತ್ತು ಇರುವ ಆತಂಕವನ್ನು ದೂರ ಮಾಡಬೇಕು. ಅಲ್ಲಿರುವ ಸಮಸ್ಯೆಗೆ ಪರಿಹಾರ ಹುಡುಕತಕ್ಕದ್ದು ಬಹಳ ಮುಖ್ಯವಾಗಿದೆ. ಅದಕ್ಕಾಗಿ ನನ್ನ ಸಲಹೆ ಇದೆ, ಏನೆಂದರೆ ಜಿಲ್ಲಾ ಉಸ್ತುವಾರಿ ಸಚಿವರು ಈ ಅಧಿವೇಶನ ಮುಗಿದ ನಂತರ ತಮ್ಮತಮ್ಮ ಅಸೈನ್ಡ್ ಡಿಸ್ಟ್ರಿಕ್ಟ್‌ನಲ್ಲಿ ವಾಸ್ತವ್ಯ ಹೂಡಬೇಕು. ಇರತಕ್ಕ ರಸಗೊಬ್ಬರದ ವಿತರಣೆಯಲ್ಲಿ ಅವರು ಸ್ವಂತವಾಗಿ ನಿಗಾವಹಿಸಬೇಕು. ಜಿಲ್ಲಾವಾರು ವಿತರಣೆಯಾಗಬೇಕು. ಏಕೆಂದರೆ, ಮಾನ್ಯ ಕೃಷಿ ಸಚಿವರು ಕ್ಲಾರಿಫಿಕೇಷನ್ ಕೊಡಬೇಕು. ನಾನು ಕೇಳಿದಾಗ ಕೃಷಿ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ, ನಮಗೆ ಆ ರೀತಿ ಯಾವುದೇ ನಿರ್ದೇಶನವಿಲ್ಲ. ನಾವು ತಾಲ್ಲೂಕುವಾರು ಹಂಚಬೇಕು, ಬಂದಿರುವ ಸ್ಟಾಕನ್ನು ನೀವು ಜವಾಬ್ದಾರಿಯಿಂದ ತೆಗೆದುಕೊಂಡು ವಿತರಣೆಯನ್ನು ಅವಶ್ಯಕತೆಗೆ ಅನುಗುಣವಾಗಿ ಹಂಚಬೇಕು ಎಂಬ ನಮಗೆ ಯಾವುದೇ ಆದೇಶವಿಲ್ಲ. ಅವರು ಡೀಲರ್ಸ್ ಪ್ರಕಾರ ಹಂಚುತ್ತಿದ್ದಾರೆ. ನಾವು ಏನು ಮಾಡೋಣ. ನಾವು ಜಾಸ್ತಿ ಒತ್ತಾಯ ಮಾಡಿದರೆ next trip ನಮಗೆ ಬರುವುದಿಲ್ಲವೆಂದು ಉಲ್ಟಾ ಅವರು ನಮಗೆ ಹೆದರಿಸುತ್ತಾರೆ. ಅಂದರೆ ಸರ್ಕಾರ ಮತ್ತು ಕೃಷಿ ಸಚಿವರು ಏನು ನಿರ್ದೇಶನ ಕೊಟ್ಟಿದ್ದಾರೆ, ಅದರ ಪ್ರತಿಯೊಂದನ್ನು ನನಗೆ ಕೊಡಿ. ನೀವು ಏನು ನಿರ್ದೇಶನ ಕೊಟ್ಟಿದ್ದೀರಿ, ನೀವು ಯಾವ ರೀತಿಯಾಗಿ ಅಲ್ಲಿ ಸಮರ್ಪಕವಾಗಿ ಸ್ಟಾಕ್ ತೆಗೆದುಕೊಂಡು ನೀವೇ ಹಂಚತಕ್ಕ ನಿರ್ದೇಶನವನ್ನೇನಾದರೂ ನಮ್ಮ ಜಿಲ್ಲೆಗೆ ಕೊಟ್ಟಿದ್ದೀರಾ? ಕೊಟ್ಟಿಲ್ಲ. ಆದ್ದರಿಂದ ಈ ಕೊರತೆ ಆಗುತ್ತಿದೆ. ಆದರೆ ನೀವು ಇರತಕ್ಕ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸದೆ ಬೇರೆ ಯಾರದೋ ಮೇಲೆ ಗೂಬೆ ಕೂರಿಸಿ ರೈತರನ್ನು ಈ ರೀತಿ ಆತಂಕಕ್ಕೆ ಸಿಲುಕಿಸತಕ್ಕದ್ದು, ಇದಕ್ಕೆ ಯಾವ ರೀತಿ ಪರಿಹಾರ ಕಂಡುಕೊಳ್ಳಬೇಕು ಎಂದು ಎರಡು ಮೂರು ಸಲಹೆಯನ್ನು ನಾನು ಕೊಡಬಯಸುತ್ತೇನೆ. ಸರ್ಕಾರವನ್ನು ಟೀಕೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಕೆಲವು ಸಲಹೆಗಳನ್ನು ಕೊಡಲು ಪ್ರಯತ್ನ ಮಾಡುತ್ತೇನೆ. ನಮ್ಮ ಮಂತ್ರಿಯವರು ಅದನ್ನು ಜಾರಿಗೆ ತರುವ ಪ್ರಯತ್ನ ಮಾಡಬೇಕು. ಇನ್ನೊಂದು ಪ್ರಮುಖವಾಗಿರುವ ಅಂಶ ಏನೆಂದರೆ ನಮಗೆ ಪ್ರತಿವರ್ಷ ಬೇಕಾಗಿರುವ ಕೆಮಿಕಲ್ ಫರ್ಟಿಲೈಸರ್ಸ್‌ನ್ನು ರೆಡ್ಯೂಸ್ ಮಾಡುವುದಕ್ಕೆ ಸರ್ಕಾರ ಏನಾದರೂ ಒಂದು ಪಾಲಿಸಿಯನ್ನು ತರುತ್ತದೆಯೆ? Bio fertilizers use ಮಾಡುವುದಕ್ಕೆ ಸರ್ಕಾರ ಸಬ್ಸಿಡಿಯನ್ನು announce ಮಾಡುವುದರ ಬಗ್ಗೆ long term ನಲ್ಲಿ ವಿಚಾರ ಮಾಡಬೇಕು. ರೈತರ ಆತ್ಮಹತ್ಯೆ ಪ್ರಕರಣ ಈ ಒಂದು ಸಮಯದಲ್ಲಿ ಬಹಳ ಹೆಚ್ಚಿನ ತೀವ್ರತೆಯನ್ನು ಹೊಂದಿದ್ದರೂ ಕೂಡ ಇದು ಬಹಳ ದಿನಗಳಿಂದ ನಡೆದುಕೊಂಡು ಬಂದಿದೆ. ಇದಕ್ಕೊಂದು ಶಾಶ್ವತವಾಗಿ ಇರತಕ್ಕಂಥ

ಪರಿಹಾರವನ್ನು ಏನಾದರೂ ಸರ್ಕಾರ ಹುಡುಕಲಿಕ್ಕೆ ಪ್ರಯತ್ನ ಮಾಡಿದೆಯೇ? ರೈತ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಕಾರಣಗಳ ಬಗ್ಗೆ ನೀವು ಏನಾದರೂ ಪರಿಹಾರ ಹುಡುಕಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರಾ? ಹೊಸದಾಗಿ ಬಂದಿರತಕ್ಕಂಥ ಸರ್ಕಾರ ಏನಾದರೂ ಪ್ರಯತ್ನ ಮಾಡುತ್ತದೆಯೇ? ಎಂದು ಕೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನೊಂದು ಸಲಹೆಯನ್ನು ಕೊಡುತ್ತೇನೆ. Proper credit distribution ಕೊರತೆ ಇರುವುದರಿಂದ ರೈತರು ಇವತ್ತು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಿಂದಿನ ಸರ್ಕಾರ ಶೇಕಡ 4ರಷ್ಟು ಬಡ್ಡಿ ದರದಲ್ಲಿ ಸಾಲ ಕೊಟ್ಟರೂ ಕೂಡ ಇವತ್ತು ನಮ್ಮ ಭಾಗದಲ್ಲಿ ಅದು ವಿತರಣೆಯಾಗುತ್ತಿಲ್ಲ. ಏಕೆಂದರೆ, ನಮ್ಮ ಹತ್ತಿರ ಯಾವುದೇ co-operative banks, VSSN banks ಯಾವುದೂ functioning ಮಾಡುತ್ತಿಲ್ಲ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಏನೊಂದು ಸಲಹೆಯನ್ನು ನೀಡಬಯಸುತ್ತೇನೆಂದರೆ, ಇದೆಲ್ಲಾ VSSN banks ಅನ್ನು re-structure ಮಾಡಿ. ಇದರ ಬಗ್ಗೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು Co-operative Minister ಕೇಳಬೇಕು. ಏಕೆಂದರೆ, ನೀವೇ co-operative ಸಚಿವರಾಗಿದ್ದೀರಿ. ಇದಕ್ಕೆ permanent solution ಕಂಡು ಹಿಡಿಯಬೇಕಾದರೆ, ರೈತರ ಆತಂಕವನ್ನು reduce ಮಾಡಬೇಕಾದರೆ, ಇರತಕ್ಕಂಥ ಎಲ್ಲಾ VSSN ಗಳನ್ನು re-structure ಮಾಡಿ Gram panchayath wise ಮಾಡಿ ಅದರ ಮುಖಾಂತರ ನೀವು ರೈತರಿಗೆ ಸಾಲವನ್ನು ನೀವು ಕಡಿಮೆ ದರದಲ್ಲಿ ಕೊಡಲಿಕ್ಕೆ ಪ್ರಯತ್ನ ಮಾಡಿದರೆ ಖಂಡಿತವಾಗಿಯೂ ರೈತ ಸಾಲದ ಬಾಧೆಗೆ ಸಿಲುಕದಂತೆ ತಪ್ಪಿಸತಕ್ಕ ಪ್ರಾಮಾಣಿಕ ಪ್ರಯತ್ನ ಸರ್ಕಾರ ಮಾಡಬಹುದು. ಎಲ್ಲೆಲ್ಲಿ co-operative sector active ಆಗಿದೆ. ಎಲ್ಲೆಲ್ಲಿ ಅದು ಜೀವಂತವಾಗಿದೆ, ಅಲ್ಲಿ ಮಾತ್ರ ಈ ಸವಲತ್ತು ಜನರಿಗೆ ಹೋಗುತ್ತಿದೆ. ನಮ್ಮ ಕಡೆಯಲ್ಲಿ ಅದು ಹೋಗುತ್ತಿಲ್ಲ. ಅದಕ್ಕಾಗಿ ಇಡೀ ರಾಜ್ಯದಲ್ಲಿ VSSN bank ಗಳನ್ನು Gram-Panchath-wise revive ಮಾಡಲಿಕ್ಕೆ ಸರ್ಕಾರ ಮತ್ತು Co-operative ಸಚಿವರು initiative ತೆಗೆದುಕೊಳ್ಳಬೇಕೆಂಬುದು ನನ್ನ ಸಲಹೆಯಾಗಿದೆ. ಬೀಜದ ಬಗ್ಗೆ ಹೇಳುವುದಾದರೆ, ಇವತ್ತು ನಾನು Metrological Department ನವರ report ಅನ್ನು ನೋಡಿದೆ. ಇನ್ನೆರಡು ದಿನಗಳಲ್ಲಿ ಮಳೆ ಚುರುಕಾಗತಕ್ಕ ಅಂದಾಜಿದೆ. ಆದ್ದರಿಂದ as an emergency measure ಗೊಬ್ಬರ ಮತ್ತು seed ನ್ನು, ಏನು ಇವತ್ತು ನಿಮ್ಮ ಹತ್ತಿರ ದಾಸ್ತಾನಿದೆ, ಅದನ್ನು District in-charge ministers review ಮಾಡಲಿ ಇನ್ನೊಂದು ಮಾತನ್ನು ನಾನು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಗಮನ ಕೊಡಬೇಕು. ಕಳೆದ ಸರ್ಕಾರ ಶೇಕಡ 75ರಷ್ಟು seed

subsidy ಕೊಟ್ಟಿತ್ತು. ಆದರೆ ಈ ಸರ್ಕಾರ ಕೇವಲ ಶೇಕಡ 50ರಷ್ಟು ಮಾತ್ರ seed subsidy ಕೊಟ್ಟಿದೆ. ಈ seed subsidy ರೈತರಿಗೆ ಮುಟ್ಟುತ್ತಿಲ್ಲ. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇವತ್ತು Black gram ಆಗಲಿ, Green gram ಆಗಲಿ, ತೊಗರಿಯಾಗಲಿ, ಇವತ್ತು ನೀವೇನು ದರವನ್ನು offer ಮಾಡುತ್ತಿದ್ದೀರಿ, ಅದು ಸೂಕ್ತ ದರವಲ್ಲ. ನೀವು 'ನಾವು ಟೆಂಡರ್ ಕರೆದಿದ್ದೇವೆ' ಎಂದು ಹೇಳುತ್ತೀರಿ. ನಾನು ಈ ಬಗ್ಗೆ ಕೇಳಿದಾಗ Agriculture Department ನವರು 'ನಾವು ಟೆಂಡರ್ ಕರೆದಿದ್ದೇವೆ, ಎಲ್ಲವನ್ನೂ ಆ ರೇಟಿಗೇ ಕೊಡುತ್ತಿದ್ದೇವೆ' ಎಂದು ಹೇಳಿದರು. ಇವತ್ತು ಉದ್ದಿಗೆ 45 ರೂ. ರೇಟ್ ನಿಗದಿ ಮಾಡಿದ್ದಾರೆ. 50% ಸಬ್ಸಿಡಿ ಅಂದರೆ 22 ರೂ.ಗಳಿಗೆ ನೀವು ಕೊಡುತ್ತೀರಿ. ಆದರೆ ಅದು ಮಾರ್ಕೆಟ್‌ನಲ್ಲಿ 22 ರೂ.ಗಳಿಗೇ ಸಿಕ್ಕುತ್ತಿದೆ. ಹಾಗಾದರೆ, ನೀವು ಯಾರಿಗೆ ಸಬ್ಸಿಡಿ ಕೊಟ್ಟಂತಾಯಿತು? 'ಇದು ಟೆಂಡರ್ ಆಗಿದೆ, ನಾವೇನು ಮಾಡೋಣ' ಎನ್ನುತ್ತೀರಿ. ಆ ಟೆಂಡರ್‌ನಲ್ಲಿ ಯಾರ್ಯಾರು participate ಮಾಡಿದ್ದರು ಎಂದು ನಾನು ಕೇಳಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ Karnataka state seed Corporation ಎಂಬ ಸಂಸ್ಥೆಯೊಂದಿದೆ. principal Secretary ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಅವರೂ ಕೂಡ ಟೆಂಡರ್‌ನಲ್ಲಿ participate ಮಾಡಿದ್ದರು. ಅವರು ಟೆಂಡರ್‌ನಲ್ಲಿ ಯಾವ ರೇಟ್ ಅನ್ನು ಕೋಟ್ ಮಾಡಿದ್ದಾರೆ ಎಂಬುದು ಗೊತ್ತೇ? ಅವರು 50 ರೂ.ಗಳನ್ನು ಕೋಟ್ ಮಾಡಿದ್ದಾರೆ. ಅವರು ಬೀಜವನ್ನು ರೈತರಿಂದ 28 ರೂ.ಗಳನ್ನು ಕೊಟ್ಟು ತಂದಿದ್ದರು. 28 ರೂ.ಗಳಿಗೆ ಬೀಜ ತಂದಿರುವುದರಿಂದ, processing cost ಎಲ್ಲಾ ಸೇರಿಸಿ 32 ರೂ.ಗಳಿಗೆ ಅವರು ಟೆಂಡರ್ ಕೋಟ್ ಮಾಡಬಹುದಾಗಿತ್ತು. ಆದರೆ ಅವರು 50 ರೂ.ಗಳಿಗೆ ಕೋಟ್ ಮಾಡಿದರು. ಯಾರೋ ಬೇರೆ ಕಂಪನಿ 45 ರೂ.ಗಳನ್ನು ಕೋಚ್ ಮಾಡಿದ್ದಾನೆಂದು ಅವರಿಗೆ ಟೆಂಡರ್ ಕೊಟ್ಟಿದ್ದಾರೆ. ಅವರು 45 ರೂ.ಗಳಿಗೆ supply ಮಾಡುವುದಕ್ಕೆ ready ಆಗಿದ್ದಾರೆ. Karnataka State seed Corporation ಅನ್ನು ನೀವೇನು profit making industry ಯನ್ನಾಗಿ ಮಾಡಬೇಕೆಂದು ಹೊರಟಿದ್ದೀರಾ? ರೈತರಿಗೆ ನೀವು ಸಬ್ಸಿಡಿ ಮುಟ್ಟಿಸಬೇಕೆಂದರೆ ನೀವು less ಹಾಕಬಹುದಾಗಿತ್ತು. Karnataka State Seed Corporation ನ ಕೆಲವು ಅಧಿಕಾರಿಗಳು ಕೆಲವೊಂದು private companies ಜೊತೆಗೆ ಶಾಮೀಲಾಗಿ ಜಾಸ್ತಿ ರೇಟ್ ಅನ್ನ ಕೋಟ್ ಮಾಡುತ್ತಿದ್ದಾರೆ. ನಿಮಗೆ ಸಿಕ್ಕಿರತಕ್ಕಂಥ ರೇಟ್ ಅನ್ನೇ, no profit, no loss basis ನಲ್ಲಿ ಹಾಕಿದ್ದರೂ ಕೂಡ, ರೈತರಿಗೆ ಆ ಸಬ್ಸಿಡಿ ಮುಟ್ಟುತ್ತಿತ್ತು. ಆದರೆ ಅಲ್ಲಿ ಇರತಕ್ಕಂಥ ಭ್ರಷ್ಟಾಚಾರದಿಂದಾಗಿ ರೈತರಿಗೆ ಆ ಸಬ್ಸಿಡಿ ಮುಟ್ಟಿಲ್ಲ. ಇದರ ಕಡೆಗೆ ಮಾನ್ಯ ಮುಖ್ಯಮಂತ್ರಿಗಳು

ಮತ್ತು ಮಾನ್ಯ Agricultural Minister ರವರು ಗಮನ ಕೊಡಬೇಕು. Karnataka State Seed Corporation ಎಷ್ಟು costಗೆ ಬೀಜ ಖರೀದಿಸಿರುತ್ತಾರೋ, ಅಷ್ಟು ರೇಟ್‌ಗೆ ನೀವು ಟೆಂಡರ್‌ನಲ್ಲಿ ಕೋಟ್ ಮಾಡಿ. Private company ಯವರಂತೆ ನೀವು ಕೋಟ್ ಮಾಡುತ್ತಿರುವುದರಿಂದ ಆ ಸಬ್ಸಿಡಿ ಇವತ್ತು ರೈತರಿಗೆ ಮುಟ್ಟುತ್ತಿಲ್ಲ. ಆದ್ದರಿಂದ ಇವತ್ತು ಶೇಕಡ 75 ರಷ್ಟು ಸಬ್ಸಿಡಿಯನ್ನು ನೀವು ಮಾಡಲೇಬೇಕು. ಇನ್ನೊಂದು ಸಲಹೆಯನ್ನು ನಾನು ಕೊಡಬಯಸುತ್ತೇನೆ. ಕೇವಲ ಗೋಲಿಬಾರ್ ಆಗಿರತಕ್ಕ ಪ್ರಕರಣದ ಬಗ್ಗೆ ಮಾತ್ರ ನ್ಯಾಯಾಂಗ ತನಿಖೆ ಮಾಡಿದರೆ ಸರಿ ಹೋಗುವುದಿಲ್ಲ. ಇವತ್ತು ಎಲ್ಲಾ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಖಂಡಿತವಾಗಿಯೂ ಸದನ ಸಮಿತಿ ಆಗಬೇಕು. ಹೊಸ ಸರ್ಕಾರ ಮುಂದಿನ ತಿಂಗಳು present ಮಾಡಲಿರುವ Budget ನಲ್ಲಿ ನಿರ್ಮೂಲನೆಗೆ ಕ್ರಮಗಳನ್ನು ತೆಗೆದುಕೊಂಡಿರುವ ಬಗ್ಗೆ ತಿಳಿಸಬೇಕು. ಏಕೆಂದರೆ, ಇದು Farmer's suicide ಗೆ link ಆಗಿದೆ. ಬಡತನ ನಿರ್ಮೂಲನೆಗೆ ನೀವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಿ ಎಂಬುದನ್ನು ನೀವು ಸ್ಪಷ್ಟವಾಗಿ ಹೇಳಬೇಕು. ಈ ಸರ್ಕಾರ ಬಡವರ ಪರವಾಗಿದೆ, ರೈತರ ಪರವಾಗಿದೆ ಎಂದು ನೀವು ಹೇಳಿಕೊಂಡಿದ್ದೀರಿ. ಈಗ ಇರತಕ್ಕಂಥ ಕಾರ್ಯಕ್ರಮಗಳಲ್ಲಿ ಯಾವುದೂ poverty elimination programme ಇಲ್ಲವೆಂದು ಎಂದು ನಾನು ಹೇಳುವುದಿಲ್ಲ. Specific ಆಗಿ ಬಡತನ ನಿರ್ಮೂಲನೆಗೆ ನಾವು ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ನಮ್ಮಲ್ಲಿ ಇರತಕ್ಕಂಥ credit distribution system ಸುಧಾರಣೆ ಮತ್ತು ನಮ್ಮ ಬಡತನ ನಿರ್ಮೂಲನ ಕಾರ್ಯಕ್ರಮದಿಂದ ಮಾತ್ರ ನಾವು Farmer's suicide ಅನ್ನು ಕಡಿಮೆ ಮಾಡಬಹುದೇ ವಿನಃ ಬೇರೆ ಏನು ಮಾಡಿದರೂ ಕೂಡ ಅದು ಕಡಿಮೆ ಆಗಲಿಕ್ಕೆ ಸಾಧ್ಯತೆ ಇಲ್ಲ. ನಮ್ಮ ನಾಯಕರಾದ ಮಾನ್ಯ ಮಲ್ಲಿಕಾರ್ಜುನ್ ಖರ್ಗೆ ಸಾಹೇಬರು ಏನು ಹೇಳಿದ್ದಾರೋ, ಅದನ್ನು ನಾನು ಸಮರ್ಥನೆ ಮಾಡುತ್ತೇನೆ. ಇದರ ಬಗ್ಗೆ ಸದನ ಸಮಿತಿಯೊಂದನ್ನು ಸರ್ಕಾರ ರಚಿಸಬೇಕು. ಶಾಶ್ವತವಾಗಿ ರೈತರ ಆತ್ಮಹತ್ಯೆಯನ್ನು ತಡೆಹಿಡಿಯಲಿಕ್ಕೆ ಸಹ ಸಮಿತಿ ಗಮನ ಹರಿಸಬೇಕು. ಆ ಬಗ್ಗೆ ಈಗಾಗಲೇ ಸಾಕಷ್ಟು ಕಮಿಟಿಗಳ reports ಇದ್ದರೂ ಕೂಡ, ಜನಪ್ರತಿನಿಧಿಗಳಾದ ನಾವು field ನಲ್ಲಿ ಇರುತ್ತೇವೆ, ಜನರ pulse ಅನ್ನು ನಾವು ಅರ್ಥ ಮಾಡಿಕೊಂಡಿರುತ್ತೇವೆ. ಜನಪ್ರತಿನಿಧಿಗಳಿಂದ ಕೂಡಿರುವ ಈ ಸದನ ಸಮಿತಿಯು ಕೊಡುವಂತಹ ಈ Committee Report ಮುಂದೆ ಯಾವ ರೀತಿಯಲ್ಲಿ ನಾವು farmers' suicide ತಡೆಹಿಡಿಯಬಹುದು ಎನ್ನುವುದಕ್ಕೆ ಅದು ಟೈಟಲ್

Vol. 9. P. 25

ಆಗುತ್ತದೆ. ಅದಕ್ಕಾಗಿ ಇದನ್ನು ಮಾಡಲೇಬೇಕು, ಸರ್ಕಾರ ಇದಕ್ಕೆ ಒಪ್ಪಲೇಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ನಾನೊಂದು ವಿನಂತಿಯನ್ನು ಮಾಡಿಕೊಳ್ಳಬಯಸುತ್ತೇನೆ. ಇನ್ನೂ ಮಾತನಾಡುವಂತಹ ಸದಸ್ಯರು ಬಹಳ ಜನರಿದ್ದಾರೆ. ಆದಷ್ಟೂ briefಆಗಿ ಹೇಳಿ. ಯಾರು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿರುತ್ತಾರೋ, ಅದನ್ನು repeat ಮಾಡದೆ, ಹೊಸ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದರೆ ಒಳ್ಳೆಯದಾಗುತ್ತದೆ ಎಂದು ನಾನು ಸಲಹೆ ಕೊಡುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ [ನಂಜನಗೂಡು] ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಸಕಾಲಕ್ಕೆ ಮುಂಗಾರು ಮಳೆ ಪ್ರವೇಶ ಮಾಡುತ್ತದೆಂದು ಹವಾಮಾನ ಇಲಾಖೆಯವರು ಹವಾಮಾನ ಮುನ್ಸೂಚನೆಯನ್ನು ಕೊಟ್ಟಿದ್ದರು. ನಮ್ಮಲ್ಲಿ ನೀರಾವರಿ ಇಲ್ಲದಿರತಕ್ಕಂಥ ಪ್ರದೇಶಗಳಲ್ಲಿ ಮಾನ್ಸೂನ್ ಬಹಳ ವಿಫಲವಾಗುತ್ತಿದೆ. ಅಂತಹ ಪ್ರದೇಶಗಳಲ್ಲಿ ನಾವು erratic monsoon ಮೇಲೆಯೇ depend ಆಗಿರುತ್ತೇವೆ. ಹುಚ್ಚು ಮುಂಗಾರು ಮಳೆ ಮೇಲೆಯೇ ಆಶ್ರಯಿಸಿರುತ್ತೇವೆ. ಆದರೆ ಈ ಸಾರಿ ರೈತರು ಬಹಳ ಸಂತೋಷ ಪಟ್ಟರು. ಯಾರು ಮುಂಗಾರು ಮಳೆಯನ್ನು ಆಶ್ರಯಿಸಿ, ಬೇಸಾಯ ಮಾಡುತ್ತಿದ್ದರೋ, ಅವರು ಈ ಸಾರಿ ಮುಂಗಾರು ಬಹಳ ಬೇಗ ನಮ್ಮ ರಾಜ್ಯವನ್ನು ಪ್ರವೇಶಿಸುತ್ತಿದೆ, ಬಹಳ ಉತ್ತಮವಾದ ಮಳೆಯಾಗುತ್ತಿದೆ ಎಂದು ಸಂತೋಷ ಪಟ್ಟರು. ಈ ಮುನ್ಸೂಚನೆ ಬಹುಶಃ ರೈತರಿಗೆ ಮಾತ್ರವಲ್ಲ. ಆಡಳಿತ ನಡೆಸತಕ್ಕವರಿಗೆ ಕೂಡ ಇತ್ತು. ವಿಶೇಷವಾಗಿ ಕೃಷಿ ಇಲಾಖೆಯವರು ಬಹಳ ಎಚ್ಚರಿಕೆಯಿಂದ ಇರಬೇಕಾಗಿತ್ತು. ಮುಂಗಾರು ಮಳೆ ಬರುತ್ತಿದೆ, ಮುಂಗಾರು ಮಳೆ ಬಹಳ ಬೇಗ ಸಕಾಲದಲ್ಲಿ ಬರುತ್ತಿದೆ ಎಂದರೆ, ಆ ಭಾಗದ ರೈತನಿಗೆ ಬೇಕಾಗಿರತಕ್ಕಂಥದ್ದು ರಸಗೊಬ್ಬರ ಮತ್ತು ಬಿತ್ತನೆ ಬೀಜ. ಈ ಎರಡನ್ನೂ ಕೂಡ ಸಿಗುವಂತೆ ಅವರು ನೋಡಿಕೊಳ್ಳಬೇಕಾಗಿತ್ತು. ನಮ್ಮಲ್ಲಿ ಎಷ್ಟು ರಸಗೊಬ್ಬರದ ಸಂಗ್ರಹವಿದೆ, ಬಿತ್ತನೆ ಬೀಜ ಹೇಗಿದೆ? ಎಂಬುದನ್ನು ಯೋಚನೆ ಮಾಡಿ, ರೈತನ ನೆರವಿಗೆ ನಾವು ಹೋಗಿದ್ದರೆ, ಬಹುಶಃ ಇವತ್ತು ಕರ್ನಾಟಕ ರಾಜ್ಯದಲ್ಲಿ ಆಗಿರತಕ್ಕಂಥ ಒಂದು ಅನಾಹುತವೇನಿದೆ, ಅದನ್ನು ತಪ್ಪಿಸಬಹುದಾಗಿತ್ತು. ರೈತ ಇವತ್ತು ಪೂರ್ಣವಾಗಿ ಹತಾಶನಾಗಿದ್ದಾನೆ. ಒಂದು ರೀತಿಯ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗಿದೆ. ಇವತ್ತೂ ಕೂಡ ಆ ಸರಣಿ ಆತ್ಮಹತ್ಯೆ ಎಂಬುದು ನಿಂತಿಲ್ಲ. ರೈತನ ಮೇಲೆ ಇವತ್ತು ಗೋಲಿಬಾರ್ ಆಗಿದೆ, ಲಾಠಿ ಚಾರ್ಜ್ ಆಗಿದೆ. ಈ

ಹಿನ್ನೆಲೆಯಲ್ಲೇ ನಾವು ಇವತ್ತು ಬಹು ಮುಖ್ಯವಾಗಿ ತಮಗೆ ನಿಯಮ 60ರ ಅಡಿಯಲ್ಲೇ ತೆಗೆದುಕೊಳ್ಳಿ ಎಂದು ನಿವೇದನೆ ಮಾಡಿದ್ದೆವು. ನಿಯಮ 60 ಮತ್ತು 69ಕ್ಕೆ ವ್ಯತ್ಯಾಸ ಇದೆ. ಹತಾಶನಾಗಿ, ಕಂಗಾಲಾಗಿರತಕ್ಕ ರೈತನಿಗೆ ಇವತ್ತು ಸದನದಲ್ಲಿ ಆ Adjournment Motion ಮುಖಾಂತರ ಚರ್ಚೆ ಮಾಡಿದ್ದಲ್ಲಿ, ಈ ಸದನದ ಬಗ್ಗೆ ಅವನಿಗೆ ವಿಶ್ವಾಸ ಮತ್ತು ಗೌರವ ಬರುತ್ತಿತ್ತು. ಆದರೆ ತಾವು ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಆದರೆ ನಾವು adjournment motion ಅಡಿಯಲ್ಲಿ ಇದನ್ನು ಪ್ರಸ್ತಾಪಿಸಲು ಕೋರಿದ್ದೆವು. ಅದರಲ್ಲು ವಿರೋಧ ಪಕ್ಷದವರಾದ ನಾವು, ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಇದಕ್ಕೆ ಒಪ್ಪಿಕೊಳ್ಳತ್ತಾರೆಂದು ಮನಸ್ಸಿನಲ್ಲಿ ಅಂದುಕೊಂಡಿದ್ದೆವು. ಮಾನ್ಯ ಮುಖ್ಯಮಂತ್ರಿಗಳ ರಾಜಕೀಯ ಹಿನ್ನೆಲೆಯಲ್ಲಿ ನೋಡಿದಂತಹ ಸಂದರ್ಭದಲ್ಲಿ ಮಧ್ಯೆ 1999ರಲ್ಲಿ ಬಿಟ್ಟು 1983ರಿಂದಲೂ ಅವರು ಈ ಸದನದಲ್ಲಿದ್ದಾರೆ. ಆಗಲೂ ಕೂಡ ಅವರು ಮೇಲ್ಮನೆ ಸದಸ್ಯರಾಗಿದ್ದರು. ರೈತರ ಸಂಘಟನೆಯನ್ನು ಮಾಡಿರುವ ಅವರು, ತಮ್ಮ ಹೋರಾಟದಿಂದಲೇ ಈ ಸದನದಲ್ಲಿ ಜನಪ್ರತಿನಿಧಿಗಳಾಗಿ ಬಂದವರಾಗಿದ್ದಾರೆ. ಅವರು ಉಪ ಮುಖ್ಯಮಂತ್ರಿಗಳಾಗಿ ಹಣಕಾಸಿನ ಸಚಿವರೂ ಆಗಿದ್ದರು. ತಾವು ಹಣಕಾಸಿನ ಸಚಿವರಾಗಿದ್ದಾಗ ಕೂಡ ರೈತರ ಬಗ್ಗೆ ಅಪಾರವಾದ ಕಾಳಜಿಯನ್ನು ತೋರಿಸಿದವರಾಗಿದ್ದಿರಿ. ಅವರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಗಬೇಕು, ಇನ್ನಿತರ ಸೌಲಭ್ಯಗಳು ಸಿಗಬೇಕು, ಬಿತ್ತನೆ ಬೀಜ ಮತ್ತು ರಸಗೊಬ್ಬರಗಳು ಎಲ್ಲವೂ ಕೂಡ ಅವನಿಗೆ ಸಕಾಲದಲ್ಲಿ ಸಿಗಬೇಕು ಎಂದು ಸದಾ ತಾವು ಅವರ ಬಗ್ಗೆ ವಿರೋಧ ಪಕ್ಷದಲ್ಲಿದ್ದಾಗ ಅಥವಾ ಸಚಿವರಾಗಿದ್ದಾಗ ಕೂಡ ಸಾಕಷ್ಟು ಹೇಳಿದ್ದೀರಿ. ಇತ್ತೀಚೆಗೆ ನಡೆದಂತಹ ಚುನಾವಣೆಯಲ್ಲೂ ಕೂಡ ತಾವು ಮುಂಚೂಣಿಯಲ್ಲಿದ್ದಂಥವರು, ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ರೈತರ ಬಗ್ಗೆ ಸಾಕಷ್ಟು ಹೇಳಿದ್ದೀರಿ. ರೈತನಿಗೆ ಉಚಿತವಾದ ವಿದ್ಯುತ್, ಈ ರಾಷ್ಟ್ರದ ಬೆನ್ನೆಲುಬಾಗಿರುವವನಿಗೆ ನಾವು ಅವನಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಿಕೊಡಬೇಕು, ಅವನ ಬಗ್ಗೆ ಚಿಂತನೆಯನ್ನು ಮಾಡಬೇಕು ಎನ್ನುವುದಿತ್ತು. ಬಹುಶಃ ತಮಗೆ ಮತ್ತೆ ಮುಖ್ಯಮಂತ್ರಿಗಳಾಗಿ ಸಿಕ್ಕಂತಹ ಅವಕಾಶವೇನಿತ್ತು, ಅದು ಸಂವಿಧಾನ ಬಾಹಿರವೊ ಏನು ಎನ್ನುವುದು ಎರಡನೇ ಪ್ರಶ್ನೆ, ಆದರೆ ರೈತರ ಹೆಸರಿನಲ್ಲಿ ನೀವು ಪ್ರಮಾಣವಚನ ಸ್ವೀಕರಿಸಿದಾಗ, ಬಹುಶಃ ರೈತ, ನಿಮ್ಮ ಹಿನ್ನೆಲೆಯಲ್ಲಿ ನೀವೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಿದ ಸಂದರ್ಭದಲ್ಲಿ ನನಗನಿಸಿದ್ದು, ಸ್ವರ್ಗಕ್ಕೆ ಎರಡೇ ಗೇಣು ಉಳಿದಿರುವುದು ಎನ್ನುವಷ್ಟು ಖುಷಿಪಟ್ಟಿದ್ದನ್ನು ನಾವು ಕಂಡೆವು. ಆದರೆ ಇವತ್ತು ಆದದ್ದೇನು? ಅದೇ ರೈತ ಹತಾಶನಾಗಿದ್ದಾನೆ,

ಯಾರಿಂದ ಏನನ್ನು ನಿರೀಕ್ಷೆ ಮಾಡಿದ್ದನೊ, ಬಹುಶಃ ಅವನಿಗೆ ಇವತ್ತು ಯಾವ ರೀತಿಯಾಗಿ ಹತಾಶನಾಗಿದ್ದಾನೆ ಎಂದು ನೋಡಬೇಕು. ಆ ಹಿನ್ನೆಲೆಯಲ್ಲಿ ಬಹುಶಃ ಮುಖ್ಯಮಂತ್ರಿಗಳೆ ಈ ಬಗ್ಗೆ ನಿಯಮ 60ರ ಪ್ರಕಾರ ಚರ್ಚೆ ಮಾಡಲು ಅವರು ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಳ್ಳಲಾಗಿತ್ತು. ಆದದ್ದು ಕೂಡ ತಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡುವುದಲ್ಲ. ನಿಯಮ 69ರ ಅಡಿಯಲ್ಲಿ ಇವತ್ತು ಚರ್ಚೆಯಾಗುವುದಿದೆ. ಏಕೊ ನಮ್ಮ ಆಡಳಿತ ಪಕ್ಷದ ವತಿಯಿಂದ ಯಾರು ಮಾತನಾಡುತ್ತಿಲ್ಲ. ಏಕೆ ನಮ್ಮ ಮುಖ್ಯಮಂತ್ರಿಗಳು ಅವರ ಬಾಯನ್ನು ಮುಚ್ಚಿಸಿದ್ದಾರೋ ಗೊತ್ತಿಲ್ಲ, ಅವರು ಕೂಡ ಈ ಸದನದಲ್ಲಿ ಮನಸ್ಸು ಬಿಚ್ಚಿ ಮಾತನಾಡಬೇಕಾಗಿತ್ತು. ಆದರೆ ಒಂದೇ ಕಡೆ ವಿರೋಧಪಕ್ಷದಲ್ಲಿರುವುದು ಮಾತ್ರ ಮಾತನಾಡುತ್ತಿದ್ದೇವೆ. ನನಗೆ ಇವತ್ತು ರೈತರ ಬಗ್ಗೆ ಗೋಲಿಬಾರ್, ಹಿಂಸಾಚಾರ, ವಾಹನಗಳಿಗೆ ಬೆಂಕಿ ಹಚ್ಚುವುದು law and order problem ಅನ್ನು ನೋಡಿದಾಗ ಸ್ವಲ್ಪ ಹಿಂದಕ್ಕೆ ನೋಡಿದಂತಹ ಸಂದರ್ಭದಲ್ಲಿ, ನಮ್ಮ ಮುಖ್ಯಮಂತ್ರಿಗಳು ಬಹಳ ದೈವಭಕ್ತರಾಗಿದ್ದಾರೆ. ಸಾರ್ವಜನಿಕವಾಗಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡಿ ಅವರ ಕಚೇರಿಗೆ ಹೋಗುವಷ್ಟರಲ್ಲಿ ಸುಮಾರು ಐದೂವರೆ ಗಂಟೆಗಳ ಕಾಲ ಹೋಮ, ಹವನ ಎಲ್ಲವನ್ನು ಮಾಡಿದರು. ನಿಮ್ಮ ವೈಯಕ್ತಿಕವಾಗಿರುವುದನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ರಾಜ್ಯಕ್ಕೆ ಒಳ್ಳೆಯದಾಗಲಿ. ಮತ್ತೆ ನಿಮಗೆ ಸಾಕಾಗಿತ್ತು. ಹಿಂದೆ 7 ದಿವಸ ಮುಖ್ಯಮಂತ್ರಿಗಳಾಗಿದ್ದು ನಿಮ್ಮ ಮನಸ್ಸಿನಲ್ಲಿ ನೋವಿತ್ತು. ಒಂದು ರೀತಿ "ಸಾತ್ ದಿನ್ ಕಾ ಸುಲ್ತಾನ್ ಆಗಿದ್ದಿರಿ. ಯಾವುದಕ್ಕೋಸ್ಕರ ಈ ರೀತಿ ಪ್ರಾಯಶ್ಚಿತವಾಯಿತು. ಯಾವುದಕ್ಕೋಸ್ಕರ ನಾನು 7 ದಿವಸ ಮುಖ್ಯಮಂತ್ರಿಯಾಗಿ ಅಧಿಕಾರದಿಂದ ಇಳಿದಿದ್ದೆ ಎನ್ನುವ ಕೊರಗು ತಮ್ಮಲ್ಲಿ ಇತ್ತು, ಈಗ ತಮಗೆ ಅವಕಾಶ ಸಿಕ್ಕಿದೆ. ಸಿಕ್ಕಂತಹ ಸಮಯದಲ್ಲಿ ಮಾಡಿದ್ದೀರಿ, ನಿನ್ನೆ, ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರು ಅವರ ತಂದೆ ಮತ್ತು ತಮ್ಮನ್ನ over take ಮಾಡಿಬಿಟ್ಟಿದ್ದೀರಾ ಎಂದು ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹೇಳುತ್ತಿದ್ದರು. ಪೂಜೆ ಪುನಸ್ಕಾರಗಳೆಲ್ಲಾ ಆಗಬೇಕು, ಇಲ್ಲವೆಂದಲ್ಲ. ಆದರೆ ಮುಖ್ಯಮಂತ್ರಿಗಳೆ, ಎಡವಟ್ಟಾಗುವಂತಹದ್ದು ಏನಾಯಿತೆಂದರೆ, ಮಾನ್ಯ ಈಶ್ವರಪ್ಪನವರೆ, ನಿಮ್ಮಲ್ಲಿ, ನಿಮ್ಮ ಮಂತ್ರಿಮಂಡಲ ರಚನೆಯಾದ ನಂತರ, ಈ ದೇಶದಲ್ಲಿ ಈ ರಾಜ್ಯದಲ್ಲಿ ಮೊದಲು ಇವತ್ತು ವಾಹನಗಳಿಗೆ ಬೆಂಕಿ, ಗಲಾಟೆ, law and order problem ಶುರು ಆಗಿದ್ದೇ ನಿಮ್ಮ ಪಕ್ಷದ ಕಾರ್ಯಕರ್ತರಿಂದ, ಬಹುಶ: ಇದೇನು ಅತಿಶಯೋಕ್ತಿಯಲ್ಲ. ಮಾನ್ಯ ಸಭಾಧ್ಯಕ್ಷರಿದ್ದಾರೆ, ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ, ಆರಂಭವಾಗಿದ್ದೇ ಹುಬ್ಬಳ್ಳಿಯಿಂದ. ಅಲ್ಲಿ

ಏನಾಯಿತು, ಬಿಜೆಪಿಯ ಕಾರ್ಯಕರ್ತರು ಬೀದಿಗೆ ಇಳಿದು ವಾಹನಗಳನ್ನು ಸುಡಲಿಲ್ಲವೇ? ರೋಡ್ ಅನ್ನು ಬ್ಲಾಕ್ ಮಾಡಲಿಲ್ಲವೇ? law and order problem creat ಮಾಡಲಿಲ್ಲವೆ? ಅವರು ಎಲ್ಲೋ ಒಂದು ಕಡೆ ಹಿರಿಯರಿದ್ದಾರೆ, ಅವರು ಸಚಿವರಾಗಬೇಕೆನ್ನುವ ರೀತಿಯಲ್ಲಿ ಅಕ್ರೋಶವಾಗಲಿಲ್ಲವೇ? ಹಾಗಾಗಿ ಅಲ್ಲಿಂದ ಶುರುವಾಗಿದ್ದು, ನಿಮ್ಮ ಕಾರ್ಯಕರ್ತರೆ ಅನೇಕಲ್ ಬಂದ್ ಮಾಡಿದರು. ಯಾವ ರೀತಿಯಲ್ಲಿ ನಿಮ್ಮ ಕಾರ್ಯಕರ್ತರು ತಮ್ಮ ಅಸಮಾಧಾನ ಏನೆಂಬುದನ್ನು ವಾಹನಗಳಿಗೆ ಬೆಂಕಿ ಹಚ್ಚುತ್ತಿದ್ದು, ಲೂಟಿ ಮಾಡುತ್ತಿದ್ದನ್ನು ದೂರದರ್ಶನದಲ್ಲೂ ನೋಡುತ್ತಿದ್ದೆವು. ಬಹುಶ: ನಮ್ಮ ಮೈಸೂರಿನಲ್ಲಿ ಅದಕ್ಕೆ ಅವಕಾಶ ಸಿಗಲಿಲ್ಲ. ಈ ಸಚಿವಸಂಪುಟದಲ್ಲಿ ನಮ್ಮ ರಾಮದಾಸ್ ಅವರಾಗಲಿ, ಶಂಕರಲಿಂಗೇಗೌಡರಾಗಲಿ, ಇವತ್ತೇನು ಆತ್ಮಹತ್ಯೆಗೆ ರೈತರು ವಿಷವನ್ನು ತೆಗೆದುಕೊಳ್ಳುತ್ತಿದ್ದಾರೆ, ಬಹುಶ: ಬಿಜೆಪಿ ಕಾರ್ಯಕರ್ತರಿಂದ ಅಲ್ಲಿ ಪ್ರಾರಂಭವಾಯಿತು. ವಿಷದ ಬಾಟಲನ್ನು ಹಿಡಿದುಕೊಂಡು ಗಾಂಧಿ ವೃತ್ತದಲ್ಲಿ ಕುಳಿತಿದ್ದರು, ಇನ್ನೇನು ಕುಡಿಯುವುದರಲ್ಲಿದ್ದರು, ಆದರೆ ಅದನ್ನು ಪೋಲಿಸ್‌ನವರು ತಡೆಗಟ್ಟಿದರು. ನಾನು ಏತಕ್ಕೆ ಈ ವಿಷಯವನ್ನು ಹೇಳುತ್ತಿದ್ದೇನೆಂದರೆ, ರಾಜ್ಯದಲ್ಲಿ ಇವತ್ತು ಇದೆಲ್ಲಾ ನಿಮ್ಮಿಂದಲೇ ಆರಂಭವಾಗಿದ್ದು. ಇವತ್ತು ಈ ರೀತಿಯಾಗಿ ವಾಹನಗಳಿಗೆ ಬೆಂಕಿ ಹಚ್ಚುವುದು, ರಸ್ತೆಗಳನ್ನು ಬ್ಲಾಕ್ ಮಾಡುವುದು, ವಿಷ ಕುಡಿಯುವ ಗಲಾಟೆಗಳು ನಿಮ್ಮ ಮಂತ್ರಿಮಂಡಲ ಬಂದ ತಕ್ಷಣ ಉತ್ತರ ಕರ್ನಾಟಕದಿಂದ ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ರೈತರ ವಿಷಯಕ್ಕೆ ಬಂದಾಗ ವಿರೋಧ ಪಕ್ಷ ಆಡಳಿತ ಪಕ್ಷದಲ್ಲಿ ಹೊಂದಾಣಿಕೆ ಬೇಕು, ಒಬ್ಬರಿಗೊಬ್ಬರು ಕೆಸರು ಎರಚತಕ್ಕಂಥದ್ದಲ್ಲ. ಹೌದು, ಈಗ ನಿಮ್ಮ responsible Government, ಜವಾಬ್ದಾರಿಯುತ ಸರ್ಕಾರ ಬರುವುದಕ್ಕೂ ಹಿಂದೆ ಇಲ್ಲಿ 6 ತಿಂಗಳುಗಳ ಕಾಲ ರಾಜ್ಯಪಾಲರ ಆಳ್ವಿಕೆ ಇತ್ತು. ನೀವು ಏನು ಹೇಳುತ್ತಿದ್ದೀರೆಂದರೆ, ರಾಜ್ಯಪಾಲರ ಆಡಳಿತದಲ್ಲಿ ರೈತರ ಬಗ್ಗೆ ಸರಿಯಾದ ರೀತಿಯಲ್ಲಿ ಯೋಚನೆ ಮಾಡಲಿಲ್ಲ. ಈ ಮುಂಗಾರು ಸಕಾಲಕ್ಕೆ ಬರುತ್ತದೆಂದು ಗೊತ್ತಿದ್ದಾಗಲೂ ಕೂಡ, ಈ ರಾಜ್ಯದಲ್ಲಿರುವ ರಸಗೊಬ್ಬರ, ಬಿತ್ತನೆ ಬೀಜದ ಬಗ್ಗೆ ಅವರು ಯೋಚನೆ ಮಾಡಲಿಲ್ಲ, ಕೇಂದ್ರ ಸರ್ಕಾರದ ಗಮನಕ್ಕೆ ತರಲಿಲ್ಲ, ಒತ್ತಾಯ ಮಾಡಲಿಲ್ಲವೆಂದು ಹೇಳುತ್ತಿದ್ದೀರಿ. ಮತ್ತೊಂದೆಡೆ ನೀವು ಕೇಂದ್ರ ಸರ್ಕಾರದ ಮೇಲೂ ಕೂಡ ನಮಗೆ ಸರಿಯಾದ ಸಮಯದಲ್ಲಿ ಅಗತ್ಯವಾಗಿರುವ ರಸಗೊಬ್ಬರವನ್ನು ಸರಿಯಾಗಿ ಕೊಡಲಿಲ್ಲವೆನ್ನುವ ರೀತಿಯಲ್ಲಿ ಇವತ್ತು ಮಾತನಾಡುವ ಸಂದರ್ಭದಲ್ಲಿ ಹೇಳುತ್ತಿದ್ದೇವೆ. ಹಾಗಾಗಿ ನಾನು ಈ ಸಮಯದಲ್ಲಿ ಹೇಳುವುದು, ಒಬ್ಬರಿಗೊಬ್ಬರು, ರಾಜ್ಯಪಾಲರ ಆಡಳಿತವಿತ್ತು, ಕೇಂದ್ರ ಸರ್ಕಾರದ್ದು ಅಥವಾ

ನೀವು ಬಂದ ಮೇಲೆ ನಡೆದಿರತಕ್ಕಂತಹದ್ದಲ್ಲ, ಇವತ್ತು ರೈತನಿಗೆ ಇದನ್ನು you must put an end ಎನ್ನುವುದು, ರೈತರ ಆತ್ಮಹತ್ಯೆ ನಿಲ್ಲಬೇಕು, ಇವತ್ತು ಕಂಗಾಲಾಗಿದ್ದಾನೆ, ಅವನಿಗೆ ಅಗತ್ಯವಾಗಿರುವ ರಸಗೊಬ್ಬರ, ಬಿತ್ತನೆ ಬೀಜ, ನಮ್ಮ ಸದಸ್ಯರಾದ ಜಯಚಂದ್ರರವರು ಮಾತನಾಡುವಾಗ ಹೇಳುತ್ತಿದ್ದರು, ಮುಂದೆ ಕೂಡ ನಮಗೆ pesticides, ಮತ್ತೆ ಯುರಿಯಾ ಇದೆಲ್ಲಾ ಕೊಡುವ ಜವಾಬ್ದಾರಿ ಇದೆ. ರೈತನ ಬಗ್ಗೆ ಈಗಲೇ ಬಹಳ ಏಚ್ಚರಿಕೆಯಿಂದಿರಿ ಎನ್ನುವ ರೀತಿಯಲ್ಲಿ ತಮ್ಮ ಗಮನವನ್ನು ಇವತ್ತು ಸೆಳೆದಿರುವುದನ್ನು ನಾನು ನೋಡಿದ್ದೇನೆ. ನಮ್ಮ ಮುಖ್ಯಮಂತ್ರಿಗಳು ಗೊಬ್ಬರದ ಸಮಸ್ಯೆಯನ್ನು ರಾಜಕೀಯವಾಗಿ ಮಾಡಬೇಡಿ ಎಂದು ಹೇಳಿದಿರಿ. ಮುಖ್ಯಮಂತ್ರಿಗಳೆ, ತಾವು ರಾಜ್ಯಪಾಲರ ಅವಧಿಯಲ್ಲಾಗಿರುವ ಈ ಸಮಸ್ಯೆಗೆ ನಾನು ಪರಿಹಾರವನ್ನು ಕೊಡುತ್ತೇನೆ ಎಂದು ಒಂದು ಮಾತನ್ನು ಹೇಳಿದಿರಿ. ನಿಮ್ಮ ಸರ್ಕಾರ ಏನು ಪರಿಹಾರ ಕೊಟ್ಟಿದೆ? ಇದಕ್ಕೆ ಗುಂಡು ಹಾರಿಸುವುದೇ ಪರಿಹಾರವೇ? ಅಥವಾ ಅನ್ನದಾತನಿಗೆ ಗುಂಡೇಟು ಹಾಕುವುದು ಪರಿಹಾರವೇ? ಯಾವ ರೀತಿಯಾದ ಪರಿಹಾರವನ್ನು ಇವತ್ತು ತಾವು ಮಾಡುತ್ತಿದ್ದೀರೆಂಬುದನ್ನು, ಯಾವ ಮಟ್ಟಕ್ಕೆ ಮಾಡುತ್ತಿದ್ದೀರಿ, ನಿಮ್ಮ ಅಧಿಕಾರಿಗಳೊಡನೆ ಅಥವಾ ನಿಮ್ಮ ಮಂತ್ರಿಮಂಡಲದಲ್ಲಿ ಯಾವ ರೀತಿಯಾದ ಚರ್ಚೆಯನ್ನು ಮಾಡಿದ್ದೀರಿ ಎಂಬುದನ್ನು ಇವತ್ತು ಯೋಚನೆ ಮಾಡಬೇಕಾಗಿದೆ. ನಿಜ, ಇದಾದಂತಹ ಸಂದರ್ಭದಲ್ಲಿ ಒಂದು ನಿಯೋಗ ಹೋಗಿ ಪ್ರಧಾನ ಮಂತ್ರಿಗಳನ್ನು ಕೂಡ ಭೇಟಿ ಮಾಡಿದ್ದೀರಿ, ಪ್ರಧಾನ ಮಂತ್ರಿಗಳು ಕೂಡ ಆದೇಶ ಕೊಟ್ಟಿದ್ದಾರೆ, ಸಂಬಂಧಿಸಿದಂತಹ Chemicals and Fertilizers ಸಚಿವರಿಗೂ ಕೂಡ ಅವರು ಹೇಳಿದ್ದಾರೆ, ಅವರು ಕೂಡ ನಮ್ಮ ರಾಜ್ಯಕ್ಕೆ ಎಷ್ಟು ಬೇಕೊ ಅಷ್ಟನ್ನು ನಾವು ಕೊಡುತ್ತೇವೆಂದು ಒಪ್ಪಿದ್ದಾರೆಂದು ಹೇಳಿದ್ದಿರಿ. ಈಗಾಗಲೆ ನಿಯೋಗದಲ್ಲಿ ಹೋಗಿ ಭೇಟಿ ತಾವು ಮಾಡಿದ್ದಿರಿ, ಮಾತನಾಡಿದ್ದಿರಿ. ಆದರೆ ಬಹು ಮುಖ್ಯವಾಗಿ ಆಗಬೇಕಾಗಿದ್ದು, ಇವತ್ತು ಒಂದರ ಮೇಲೆ ಮತ್ತೊಂದು ವೈಫಲ್ಯಗಳನ್ನು ರಾಜ್ಯದಲ್ಲಿ ನಾವು ಕಾಣುತ್ತಿದ್ದೇವೆ, ಈ ಸರ್ಕಾರ alert ಆಗಲಿಲ್ಲ. ಇಷ್ಟೆಲ್ಲಾ ಆಗುತ್ತಿದ್ದರೂ ಕೂಡ ಜೂನ್ 9ನೇ ತಾರೀಖು ಆದಂತಹ ಘಟನೆಗಳು, ಬಹುಶ: ಧಾರವಾಡ ಜಿಲ್ಲೆಯಲ್ಲಿ ಅದು ಆರಂಭವಾಯಿತು, ಬಹುಶ: ಏಚ್ಚರಿಕೆಯಿಂದ ಇರಬೇಕಾಗಿತ್ತು. ಎಲ್ಲಿಯವರೆಗೆ ಹೋಯಿತು, ಅಲ್ಲಿ DCP (Law & Order) ಅನ್ನು ಬೀದಿನಲ್ಲಿ ಅಟ್ಟಾಡಿಸಿಕೊಂಡು ಹೊಡೆದರು. ರೈತನಿಗೆ ತನ್ನ ಬದುಕಿನ ಪ್ರಶ್ನೆ ಬಂದಾಗ, ಬೇಸಾಯವನ್ನು ಆಧಾರಿಸಿ ಆತ ಬದುಕಬೇಕು, ಮುಂಗಾರು ಮಳೆ ಬಂದಂತಹ ಸಂದರ್ಭದಲ್ಲಿ ಆತನ ಬದುಕು ನಿಂತಿದೆ ಎಂದು ಗೊತ್ತಾದ ಸಮಯದಲ್ಲಿ ಆತನ ಕಷ್ಟಕ್ಕೆ ನೀವು ಹೋಗಲಿಲ್ಲವೆಂದರೆ, ರೈತರ ಸಮಸ್ಯೆ ಬಂದಾಗ

ನಾನು ಪಾರ್ಲಿಮೆಂಟ್‌ನಲ್ಲೂ, ರೈತನಿಗೆ ಕಾನೂನಿಗಿಂತ ತನ್ನ ಹೊಟ್ಟೆ ದೊಡ್ಡದು, ಬಹಳ ಎಚ್ಚರಿಕೆಯಿಂದಿರಬೇಕೆಂದು ನಾನು ಮಾತನಾಡಿದ್ದೇನೆ. ನೀವು ಗೋಲಿಬಾರ್ ಮಾಡುತ್ತೀರೊ, ಲಾಟಿ ಚಾರ್ಜ್ ಮಾಡುತ್ತೀರೊ, ರೈತನಿಗೆ ತನ್ನ ಬದುಕಿನ ಪ್ರಶ್ನೆ ಬಂದಾಗ ಇದೆಲ್ಲಾ ಲೆಕ್ಕಕ್ಕೆ ಬರುವುದಿಲ್ಲ, ಆತ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಕೊನೆಗೆ ಅದರ ಮೇಲೂ desperate ಆದರೆ ಆತ ಇವತ್ತು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಸರಣಿಯಾಗಿ ಆಗುವುದನ್ನು ನಾವು ಕಾಣುತ್ತಿದ್ದೇವೆ. ಹಾಗಾಗಿ, ಇವತ್ತು ಡಿಸಿಪಿಯನ್ನು ಅಟ್ಟಾಡಿಸಿಕೊಂಡು ಹೊಡೆದಾಗ ಆತನ ಭಾವನೆಗಳನ್ನು ನೀವು ಅರ್ಥ ಮಾಡಿಕೊಳ್ಳಲಿಲ್ಲ, ಅದರ ಬಗ್ಗೆ ನೀವು ಏಚ್ಚರಗೊಳ್ಳಲಿಲ್ಲ. ಅದೇ ರೀತಿ ಹುಬ್ಬಳ್ಳಿಯಲ್ಲಿ ರಸ್ತೆ ತಡೆಗಳಾಯಿತು, ದಾವಣಗೆರೆಯಲ್ಲಿ ಗೂಡ್ಸ್ ರೈಲ್ ತಡೆ, ಲಾಠಿ ಚಾರ್ಜ್, ನಿಷೇಧಾಜ್ಞೆ ಎಲ್ಲಾ ಆದಂತಹ ಸಮಯದಲ್ಲೂ ಕೂಡ ಸರ್ಕಾರ ನೀವೀಗ ಬಹಳ ಅದನ್ನು ಹಗುರವಾಗಿ ತೆಗೆದುಕೊಂಡುಬಿಟ್ಟಿರಿ ಆ ಬಗ್ಗೆ ಸರಿಯಾದ ರೀತಿಯಲ್ಲಿ ಏಚ್ಚೆತ್ತುಕೊಳ್ಳಲಿಲ್ಲ. ಅದರ ಪರಿಣಾಮವೇನಾಯಿತು ಜೂನ್ 10ನೇ ತಾರೀಖಿನಂದು ಹಾವೇರಿಯಲ್ಲಿ ಗೋಲಿಬಾರ್ ಆಯಿತು. ನನಂತೂ ಅನಿಸುತ್ತದೆ, ಆ ಸಿದ್ದಲಿಂಗಪ್ಪಚೂರಿ, ಆತ ಗೋಲಿಬಾರ್ ಆಗುತ್ತದೆ ಹೊಡೆಯುತ್ತಾರೆಂದು ಅಲ್ಲಿ ಬಂದಿರಲಿಲ್ಲ. ಏಕೆಂದರೆ, ಆತನಿಗೆ ಈ ಸರ್ಕಾರ ಬರಬೇಕೆಂದು ಹಗಲುರಾತ್ರಿ ಪರಿತಪಿಸಿ ದುಡಿದಂತಹ ವ್ಯಕ್ತಿ, ನೀವು ಗೋಲಿಬಾರ್ ಮಾಡಿಸುತ್ತೀರೆಂದು ಆತನಿಗೆ ಹೇಗೆ ಗೊತು? ಇದೆಲ್ಲವನ್ನು ನಾವು ಮಾಧ್ಯಮದ ಮುಖಾಂತರ ನೋಡಿದ ಮೇಲೆ, ಅಥವಾ ನೀವೆಲ್ಲಾ ಅವನ ಮನೆಗೆ ಭೇಟಿ ಕೊಟ್ಟು ಆ ಹಿನ್ನೆಲೆಯನ್ನು ತಿಳಿದುಕೊಂಡಾಗ, ಸಿದ್ದಲಿಂಗಪ್ಪಚೂರಿ ಯಾರೆಂದರೆ, ಕಳೆದ ಚುನಾವಣೆಯಲ್ಲಿ ಹಗಲುರಾತ್ರಿ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಬೇಕು, ಬಿಜೆಪಿ ಅಧಿಕಾರಕ್ಕೆ ಬರಬೇಕೆಂಬ ಎನ್ನುವ ಹಂಬಲವನ್ನಿಟ್ಟುಕೊಂಡಂತಹವನು. ನೀವು ಗುಂಡು ಹಾರಿಸುತ್ತೀರೆಂದು ಪಾಪ ಆತನಿಗೆ ಗೊತ್ತಿಲ್ಲ, ನಮ್ಮ ಸರ್ಕಾರವಿದೆ, ರೈತರ ಸಮಸ್ಯೆ ಇದೆ ಎಂದು ಧೈರ್ಯವಾಗಿ ಬಂದ. ಮನೆಯಲ್ಲಿ, ನನಗೆ ಗೊಬ್ಬರ ಸಿಗುತ್ತದೆ, ನಮ್ಮ ಸರ್ಕಾರವಿದೆ, ನಾನು ರಸಗೊಬ್ಬರವನ್ನು ತರುತ್ತೇನೆಂದು ಹೇಳಿ ಬಂದ, ನೀವು ಆತನಿಗೆ ರಸಗೊಬ್ಬರವನ್ನು ಕೊಡಲಿಲ್ಲ, ಆತನ ಹೆಣವನ್ನು ಕಳುಹಿಸಿದಿರಿ. ಬಹುತೇಕ ರೈತರು ಏತಕ್ಕೆ ಹಾಗೆ ಮುಂದೆ ಬರುತ್ತಿದ್ದಾರೆಂದರೆ, ನಿಮ್ಮ ಮೇಲೆ ನಂಬಿಕೆ ಇದೆ, ನಿಮ್ಮ ಮೇಲೆ ಅವರಿಗೆ ಆತ್ಮವಿಶ್ವಾಸವಿತ್ತು, ನಮ್ಮ ಸರ್ಕಾರ ಬಂದಿದೆ, ಯಡಿಯೂರಪ್ಪ ಸರ್ಕಾರವಿದೆ, ರೈತರ ಪರ ಹೋರಾಟ ಮಾಡಿ ಬಂದಿರುವವರು, ಬಹುಶ: ನಮಗೆ ಅನ್ಯಾಯವಾಗುವುದಿಲ್ಲ, ಮುಂಗಾರು ಮಳೆಯಾಗಿದೆ, ನಮಗೆ ರಸಗೊಬ್ಬರ ಸಿಗುತ್ತದೆಂದು ಬಂದಂತಹವನು ಅವನು ಇವತ್ತು ಗೋಲಿಬಾರ್‌ಗೆ ಆಹುತಿಯಾದ. ಆದಾದ

ಮೇಲೂ ಬಹುಶ: ನಮ್ಮ Home Ministerಗೆ ಅರ್ಥವಾಗುವುದಿಲ್ಲ. ಎಡಿಜಿಪಿ ಯಾರು ಅವರು ADGP (Law & Order) ಅವತ್ತು ಗೋಲಿಬಾರ್ ಆದರೆ ಏನು ಹೇಳುತ್ತಿದ್ದಾರೆ, ಗೋಲಿಬಾರ್ ಮಾಡಿದ್ದು ನಾವಲ್ಲ. ಅವತ್ತು ಯಾವಾಗ ಹಾವೇರಿಯಲ್ಲಿ ಹೆಚ್ಚು ಹೆಚ್ಚು ರೈತರು ಹೊರಗಡೆಗೆ ಪ್ರತಿಭಟಿಸಲು ಬಂದಂತಹ ಸಂದರ್ಭದಲ್ಲಿ ಹೊರಗಡೆಯಿಂದ police force ತರಿಸುವಾಗ ಅದಕ್ಕೆ ಅಟ್ಯಾಕ್ ಮಾಡಿದರು. ಅಟ್ಯಾಕ್ ಮಾಡಲು ಹೋದಾಗ ಅಲ್ಲಿ ಒಳಗಡೆ ಇದ್ದಂತಹ ಒಬ್ಬ ಡಿಆರ್ಓ ಅಥವಾ ಕೆಎಸ್ಆರ್ಪಿ ಪೊಲೀಸ್ ಗುಂಡು ಹಾರಿಸುವಂತಹ ಸಂದರ್ಭದಲ್ಲಿ ಬಹುಶ: ಆತನ ಗನ್ ಅನ್ನು ಕಿತ್ತುಕೊಂಡರು. ಕಿತ್ತುಕೊಂಡು ರೈತರ ಮಧ್ಯೆಯಲ್ಲಿದ್ದಂಥವನಿಗೆ ಗುಂಡು ಹಾರಿಸಿದ್ದಾನೆ, ಯಾವುದೋ ಒಂದು ಬೀಡಿ ಅಂಗಡಿಯ ಮುಂದೆ ಬಿಸಾಡಿ ಹೋದ ಎನ್ನುವ ರೀತಿಯಲ್ಲಿ ಇವತ್ತು ADGP (Law & Order) statement ಅನ್ನು ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ನೀವು ಬಹುಶ: judicial enquiry ನೀವು ಮಾಡುತ್ತಿರಲಿಲ್ಲ. ನೀವು, ಸರ್ಕಾರ ಏನು ಯೋಚನೆ ಮಾಡಿದಿರಿ? ನಾವು ಉನ್ನತವಾದ ಅಧಿಕಾರಿಗಳ ಕೈನಲ್ಲಿ ತನಿಖೆಯನ್ನು ನಡೆಸುತ್ತೇವೆಂದು ಬಹಳ ಹಗುರವಾಗಿ ತೆಗೆದುಕೊಂಡಿದ್ದೀರಿ. ಆದರೆ ಅದೇ ನಮ್ಮ ಶಾಸಕಾಂಗಪಕ್ಷದ ನಾಯಕರು ಅದರಲ್ಲಿ ಒತ್ತಾಯ ತಂದರು. ಇಲ್ಲಾ, ಇದರ ಬಗ್ಗೆ judicial enquiry ಆಗಬೇಕು, ಇವತ್ತು ಬೇರೆ ಬೇರೆಯಾದ ರೀತಿಯಲ್ಲಿ ಸರ್ಕಾರ ಬಹಳ ಹಗುರವಾಗಿ ಹೇಳಿಕೆ ಕೊಡುತ್ತಿದೆ, ಸರ್ಕಾರವಿರುವಾಗ ಅಧಿಕಾರಿಗಳು ಇವತ್ತು ಏನು ಮಾಡುತ್ತಾರೆ?

ಅವರಿಗೆ ಒಂದು obligation ಇರುತ್ತದೆ. ಅಧಿಕಾರಿಗಳಿಗೆ ಹಂಗಿನಲ್ಲಿ ಇರತಕ್ಕಂತಹವರು ಅವರು ತನಿಖೆ ನಡೆಸಿ, ಇವತ್ತು ಯಾರ್ಯಾರು ಎಲ್ಲೆಲ್ಲಿ ಸರ್ಕಾರದ ವತಿಯಿಂದ ಪೊಲೀಸ್ ಇಲಾಖೆಯಿಂದ ಆಗಿರುವ ಅವರ ವೈಫಲ್ಯಗಳನ್ನು ಧೈರ್ಯವಾಗಿ ಹೊರಗಿಡುವ ಪ್ರಯತ್ನ ಮಾಡಬೇಕು. judicial enquiry ಮಾಡಬೇಕೆಂದು ಇದೆ. ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿಯವರಿಗೆ ಹಾಕಿದ್ದೀರಿ. ಆದಷ್ಟು ಬೇಗ ಅದು ಬರಲಿ. judicial enquiry ಬರಲಿ delay tactics ಆಗಬಾರದು. ಇದು ತಡ ಮಾಡುವುದು ಆಗಬಾರದು. ಇದು ನ್ಯಾಯಾಂಗ ಸಮಿತಿಯಿಂದ ತನಿಖೆ ನಡೆಯಬೇಕು. ಅದನ್ನು ಆದಷ್ಟು ಬೇಗ ಮುಖ್ಯ ಮಂತ್ರಿಗಳು ಆಸಕ್ತಿ ವಹಿಸಿ ಮಾಡಬೇಕಾಗಿದೆ. ರೈತರಿಗೆ ಆಗಿರುವುದು ಅವರು ಮರೆಯುವುದಕ್ಕೆ ಆಗುವುದಿಲ್ಲ. ಹಿಂದೆ ನಾವು ನೋಡಿದ್ದೇವೆ. ಹಿಂದೆ ರೈತರ ಕಷ್ಟ ಬಂದಾಗ ರೈತ ಸಿಡಿದೆದ್ದಾಗ ನವಲಗುಂದ ಮತ್ತು ನರಗುಂದದಲ್ಲಿ ಮೊಟ್ಟಮೊದಲು ಆ ಹಿನ್ನೆಲೆಯಲ್ಲಿ ಪ್ರಪ್ರಥಮವಾಗಿ ಕಾಂಗ್ರೆಸ್ ಪಕ್ಷ

ಕರ್ನಾಟಕ ರಾಜ್ಯದಲ್ಲಿ ಅಧಿಕಾರ ಕಳೆದುಕೊಳ್ಳಬೇಕಾಯಿತು. ಅಲ್ಲಿಯವರೆಗೆ ಯಾರೂ ಕಾಂಗ್ರೆಸ್ಸನ್ನು ಅಧಿಕಾರದಿಂದ ಕೆಳಗಿಳಿಸುವುದಕ್ಕೆ ಸಾಧ್ಯವಾಗಲಿಲ್ಲ. ನವಲಗುಂದ ಮತ್ತು ನರಗುಂದದಲ್ಲಿ ರೈತನ ಆ ಶಾಪ, ರೈತನಿಗಿದ್ದ ಆಕ್ರೋಶ, ಅದು ಭುಗಿಲೆದ್ದು 1983 ರಲ್ಲಿ ಮೊಟ್ಟಮೊದಲಿಗೆ ಕಾಂಗ್ರೆಸ್ ಪಕ್ಷ ಸರ್ಕಾರವನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಬಂದಿತ್ತು. ಈಗ ನಡೆದಿರತಕ್ಕಂತಹ ಪ್ರತಿಕೂಲ ಪರಿಸ್ಥಿಯಲ್ಲಿ ಬಹಳ ಎಚ್ಚರಿಕೆಯಿಂದ ಮಾನ್ಯ ಮುಖ್ಯ ಮಂತ್ರಿಗಳು ಏನು ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ, ಅದರಲ್ಲಿ ಯಾವುದೇ ರೀತಿಯ ರಾಜಕೀಯ ದುರುದ್ದೇಶ ಇಲ್ಲ ಎನ್ನತಕ್ಕಂಥದ್ದು ತಾವು ಇವತ್ತು ಅರ್ಥಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ತಮಗೆ ತಿಳಿಸಿ, ತಾವು ಇವತ್ತಿಗೂ ಕೂಡ ಹೇಳುತ್ತಿದ್ದೀರಿ, ರಸಗೊಬ್ಬರಕ್ಕೋಸ್ಕರ ರೈತರ ಆತ್ಮಹತ್ಯೆ ಆಗಿಲ್ಲವೆಂದು. ಮಾನ್ಯ ಯಡಿಯೂರಪ್ಪನವರೇ, ನಾವು ಮಾಧ್ಯಮದಲ್ಲಿ ಎಲ್ಲಾ ಹೆಸರುಗಳನ್ನು ನೋಡುತ್ತಿದ್ದೇವೆ. ಮಾಧ್ಯಮದಲ್ಲಿ ಬರುವ ಪ್ರತಿಯೊಬ್ಬ ವ್ಯಕ್ತಿ ಕೂಡ ಆತ್ಮಹತ್ಯೆ ಮಾಡಿಕೊಂಡ ಪ್ರತಿಯೊಬ್ಬ ವ್ಯಕ್ತಿಯ ಹಿನ್ನೆಲೆಯನ್ನು ಇವತ್ತು ಕೊಡುತ್ತಿದ್ದಾರೆ. ಏನು, ಏಕೆ ಆತ್ಮಹತ್ಯೆ ಮಾಡಿಕೊಂಡ, ಅವರಿಗೆ ಎಷ್ಟು ಎಕರೆ ಭೂಮಿ ಇದೆ, ಏನು ಸಾಲ ಇದೆ, ಅವನು ರಸಗೊಬ್ಬರಕ್ಕೋಸ್ಕರ ಆತ್ಮಹತ್ಯೆ ಮಾಡಿಕೊಂಡನೋ, ಅಥವಾ ಬೇರೆ ಕಾರಣಗಳಿಗಾಗಿ ಆತ್ಮಹತ್ಯೆ ಮಾಡಿಕೊಂಡನೋ ಎನ್ನುವುದನ್ನು ನೋಡುತ್ತಿದ್ದೇವೆ. ಪ್ರತಿಯೊಬ್ಬ ರೈತನ ಹೆಸರುಗಳನ್ನು ನಾವು ಇಲ್ಲಿ ಎಲ್ಲಾ ಹೇಳುವುದಕ್ಕಾಗುವುದಿಲ್ಲ. ಉದಾಹರಣೆಗಾಗಿ ಹೇಳುವುದಾದರೆ, ತಮ್ಮ ಚಿಂಚೋಳಿ ಗುಲ್ಬರ್ಗ ಜಿಲ್ಲೆಯ ಮಾನ್ಯ ವಿರೋಧ ಪಕ್ಷದ ನಾಯಕರ ಜಿಲ್ಲೆಯ ಬೇನಕ ಹಳ್ಳಿಯ ಒಬ್ಬ ರೈತ ವೀರಶೆಟ್ಟಿ ರಂಗನಾಥ ಎಂಬುವವನು ಏಕೆ ಆತ ಆತ್ಮಹತ್ಯೆ ಮಾಡಿಕೊಂಡ, ಸುಮ್ಮನೆ ಒಂದು classic example ತಮಗೆ ತಿಳಿಸುವುದಕ್ಕೋಸ್ಕರ ಹೇಳುತ್ತಿದ್ದೇನೆ. ನಾಲ್ಕು ದಿನಗಳ ಕಾಲ ಆತ ರಸಗೊಬ್ಬರಕ್ಕೋಸ್ಕರ ಕ್ಯೂ ನಲ್ಲಿ ನಿಂತು ಅಲೆದಿದ್ದಾನೆ. ಅದು ಕಾಳಸಂತೆಕೋರರಿಂದ ಆಗುತ್ತಿತ್ತೋ ಏನೋ, ಈಗ streamline ಮಾಡಿದ್ದೀರಿ. ಯಾವ ರೀತಿ ಗೊಬ್ಬರ ಸಿಗಬೇಕೆಂದು ತಾವು ಬಹಳ ಯೋಚನೆ ಮಾಡಿ ಮಂತ್ರಿಮಂಡಲದಲ್ಲಿ ಚರ್ಚೆ ಮಾಡಿ ಇಲಾಖೆಯವರ ಜೊತೆ ಚರ್ಚೆ ಮಾಡಿ ಇವತ್ತು ಮಾಡಿದ್ದೀರಿ. ಆದರೆ ನಾನು ಹೇಳುವಂಥದ್ದು ನಾಲ್ಕು ದಿನಗಳ ಕಾಲ ಈತ ಹೋಗಿ ಗೊಬ್ಬರಕ್ಕೋಸ್ಕರ ನಿಂತಿದ್ದಾನೆ. ಗೊಬ್ಬರ ಸಿಗಲಿಲ್ಲ. ಬದಲಾಗಿ ಖರ್ಚಿಗಾಗಿ 500 ರೂ. ತೆಗೆದುಕೊಂಡು ಹೋದ ಸ್ವಲ್ಪ ಹಣವೂ ಪಿಕ್‌ಪ್ಯಾಕೆಟ್ ಆಗಿ, ಹತಾಶನಾಗಿ, ಗೊಬ್ಬರವೂ ಸಿಗಲಿಲ್ಲ, ಜೇಬಿನಲ್ಲಿದ್ದಂತಹ ಹಣವೂ ಹೋಯಿತು. ಎಂದು ಅವನು ಆತ್ಮಹತ್ಯೆ ಮಾಡಿಕೊಂಡ.

ರಸಗೊಬ್ಬರ ಸಿಗಲಿಲ್ಲವೆನ್ನುವುದಕ್ಕೋಸ್ಕರ ಅವನು ಆತ್ಮಹತ್ಯೆ ಮಾಡಿಕೊಂಡಿರುವುದು. ಹೊನ್ನಾಳಿಯಲ್ಲಿ ಪಲವನಹಳ್ಳಿ ರಂಗಪ್ಪ ಎಂದು ನಾನು ನೋಡಿದೆ. ಮಾಧ್ಯಮದಲ್ಲಿ ನೋಡಿದ ಕೆಲವೇ ಕೆಲವೇ ಹೆಸರುಗಳನ್ನು ನಾನು ತೆಗೆದುಕೊಂಡೆ. ಅವನು ರಸಗೊಬ್ಬರಕ್ಕಾಗಿ 15 ದಿವಸಗಳ ಕಾಲ ಅವನ ಹೆಂಡತಿ ಜೊತೆಯಲ್ಲಿ ಅಲೆದಿದ್ದಾನೆ. ಹೊನ್ನಾಳಿ ದಾವಣಗೆರೆ ಜಿಲ್ಲೆಗೆ ಸೇರಿದ್ದು, ನಿಮ್ಮ ಶಿವಮೊಗ್ಗಕ್ಕೆ ಹತ್ತಿರದಲ್ಲಿದೆ. 15 ದಿನಗಳ ಕಾಲ ಅವನು ರಸಗೊಬ್ಬರಕ್ಕಾಗಿ ಅಲೆದಿದ್ದಾನೆ, ರಸಗೊಬ್ಬರ ಸಿಗಲಿಲ್ಲ. ಹತಾಶನಾದ. ಹೆಂಡತಿ ಅವನಿಗೆ ಅವಮಾನ ಮಾಡಿ ಮೂದಲಿಸಿದಳು. 15 ದಿನಗಳಿಂದ ಹೋಗುತ್ತಿದ್ದೀಯ, ನಾನು ಕೆಲ ದಿನ ಜೊತೆಯಲ್ಲಿ ಬಂದೆ, ರಸಗೊಬ್ಬರ ಸಿಗಲಿಲ್ಲ. ನಿನಗೆ ನಾಚಿಕೆ ಆಗುವುದಿಲ್ಲವೇ ಎಂದು ಹೇಳಿದಳು. ಅಷ್ಟಕ್ಕೆ ಆತ ರಸಗೊಬ್ಬರ ಸಿಗಲಿಲ್ಲವೆಂದು ಹೋಗಿ ವಿಷದ ಗುಳಿಗೆಯನ್ನು ನುಂಗಿ ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥದ್ದನ್ನು ನೋಡಿದ್ದೇವೆ. ನಮ್ಮ ಕೃಷಿ ಸಚಿವರು ಬಹಳ ಹಗುರವಾಗಿ ಮಾತನಾಡುವುದನ್ನು ನೋಡುತ್ತಿದ್ದೇವೆ. ಅವರು ನನಗೆ ಸರಿಯಾದ ಮಾಹಿತಿ ಇಲ್ಲವೆಂದು ಅವರು ಹೇಳುತ್ತಾರೆ. ಹೊಸದಾಗಿ ಕೃಷಿ ಸಚಿವರಾಗಿದ್ದಾರೆ. ಇನ್ನು ಕೂಡ ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ಸರಿಯಾದ ರೀತಿಯಲ್ಲಿ ತಿಳುವಳಿಕೆ ಕೊಡಬೇಕು. ಇಲಾಖೆ ಅಧಿಕಾರಿಗಳಿಗೆ ಸೂಚನೆ ಕೊಡಿ. ಅವರಿಗೆ ಸರಿಯಾದ ಮಾಹಿತಿ ಕೊಟ್ಟು, ಸರಿಯಾದ ರೀತಿಯಲ್ಲಿ ಹೇಳಿಕೆಗಳನ್ನು ಕೊಡತಕ್ಕಂಥದ್ದನ್ನು ಕೂಡ ತಾವು ಮಾಡಿಸಬೇಕು. ಏಕೆಂದರೆ, ನಾನು ಒಂದು ನೋಡಿದೆ, ದಾವಣಗೆರೆ ಜಿಲ್ಲೆಯಲ್ಲಿ ಒಬ್ಬ ಅಜ್ಜಪ್ಪ ಎಂದು ಸತ್ತರು. ಗೃಹ ಸಚಿವರು ಒಂದು ಸ್ಟೇಟ್‌ಮೆಂಟನ್ನು ಕೊಡುತ್ತಾರೆ, ಮತ್ತು ಕೃಷಿ ಸಚಿವರು ಒಂದು ಸ್ಟೇಟ್‌ಮೆಂಟ್ ಕೊಡುತ್ತಾರೆ. ಹೋಮ್ ಮಿನಿಸ್ಟರ್ ಹೇಳುತ್ತಾರೆ, ಇದು ಆತನಿಗೆ ಭೂಮಿಯೇ ಇರಲಿಲ್ಲ. ಹಾಗಾಗಿ ಆತನ ಆತ್ಮಹತ್ಯೆಗೂ ಈ ರಸಗೊಬ್ಬರಕ್ಕೂ ಸಂಬಂಧವೇ ಇಲ್ಲವೆಂದು ಹೇಳುತ್ತಾರೆ. ಮತ್ತೆ ಅದಕ್ಕೆ ಸಬ್‌ಸಿಕ್ವೆಂಟಾಗಿ ಮತ್ತೆ ಹೇಳುತ್ತಾರೆ, ಹರಿಹರದಲ್ಲಿ ಅಜ್ಜಪ್ಪ ಎಂದು ಯಾರಿದ್ದಾರೆ, ಅವರಿಗೆ ಪರಿಹಾರ ಕೊಟ್ಟಿದ್ದೇವೆಂದು ಹೇಳುತ್ತಾರೆ. ನಂತರ ಹೇಳುತ್ತೀರಿ, ಇಲ್ಲ, ಅವನು ಧಾರವಾಡ ಜಿಲ್ಲೆಯಿಂದ ಬಂದಿರತಕ್ಕಂಥವನು ಅಲ್ಲಿ ಮದುವೆ ಆಗಿ ಅಲ್ಲಿ ನೆಲೆಸಿದ್ದಾನೆ, ಲೀಸ್ ಬೇಸಿಸ್‌ನಲ್ಲಿ ಅವನು ಜಮೀನು ತೆಗೆದುಕೊಂಡಿದ್ದಾನೆ. ಅವನು ಕೃಷಿಕ ಜೊತೆಗೆ ಆತನಿಗೆ ಬಗರ್ ಹುಕುಂನಲ್ಲಿ ಎರಡು ಎಕರೆ ಭೂಮಿ ಕೊಟ್ಟಿರುವ ಸ್ಟೇಟ್‌ಮೆಂಟ್ ಇದೆ. ಗೃಹ ಸಚಿವರು ಮತ್ತು ಕೃಷಿ ಇಲಾಖೆ ಸಚಿವರಲ್ಲಿ ಇರುವ ವ್ಯತ್ಯಾಸವನ್ನು ಹೇಳುತ್ತೇನೆ, ಅವರು ಇಲ್ಲ ಇದೆ, 80,000 ರೂ. ಸಾಲ ಕೂಡ ಇದೆ, ಎನ್ನತಕ್ಕಂಥದ್ದು ಹೇಳುತ್ತಾರೆ. ಒಂದು ಕಡೆ ರೈತನೇ ಅಲ್ಲವೆಂದು ಹೇಳುತ್ತೀರಿ, ಇದು ಎಷ್ಟು ಅಭಾಸವಾಗುತ್ತಿದೆ.

ಇದರಿಂದ ನಿಮಗೆ ರೈತರ ಬಗ್ಗೆ ಎಷ್ಟು ಕಾಳಜಿ ಎನ್ನತಕ್ಕಂಥದ್ದು ತೋರಿಸುತ್ತಿದೆ. ಹಾಗಾಗಿ ನಾನು ಮೊದಲೇ ಹೇಳಿದ ಹಾಗೆ ತಾವು ಪೂರ್ಣವಾಗಿ weather prediction ನೀವು ಪ್ರಯತ್ನಗಳನ್ನು ಮಾಡಿದ್ದೀರಿ ಇಲ್ಲವೆಂದು ಅಲ್ಲ. ತಮಗೂ ಕೂಡ ಗೊತ್ತಿದೆ. ಜೂನ್ ತಿಂಗಳಲ್ಲಿ ನಮಗೆ ಬರಬೇಕಾದ ಗೊಬ್ಬರ ಸಂಗ್ರಹ ಎಷ್ಟು ಇರಬೇಕು, ಕನಿಷ್ಟ ಎಂದರೆ 1.4 ಲಕ್ಷ ಬೇಕಾಗಿರತಕ್ಕಂಥದ್ದು, ನಮ್ಮ ರಿಕ್ವೈರ್‌ಮೆಂಟ್ ಎಷ್ಟಿದೆ ಎಂದು ಕೂಡ ತಮಗೆ ಗೊತ್ತಿದೆ. ನಮ್ಮಲಿರತಕ್ಕಂತಹ ಡಿಎಪಿ ಕಾಂಪ್ಲೆಕ್ಸ್ ಎಷ್ಟು ಇದೆ, ಏನು ಆಗಬೇಕೆಂದು ಸಮಗ್ರವಾದ ವಿವರಗಳು ಕೂಡ ಇದೆ. ಕೇಂದ್ರ ಸರ್ಕಾರದಿಂದ ಸರಿಯಾದ ಸಮಯಕ್ಕೆ ಅದು ಬರಲಿಲ್ಲ, ಎನ್ನತಕ್ಕಂಥದ್ದು ಕೂಡ ಇರತಕ್ಕಂಥದ್ದು ಇದೆ. ನನಗನ್ನಿಸುತ್ತದೆ, ಈ ಮುಂಗಾರಿನಲ್ಲಿ ಏನು ರಸಗೊಬ್ಬರ ಬರಬೇಕಾಗಿತ್ತು, ಈಗ ಎಲ್ಲಿ ಮುಂಗಾರು ಆಗಿದೆ. ಅಥವಾ ಇಡೀ ರಾಜ್ಯಕ್ಕೆ ಮುಂದೆ ಬರುವಂತಹ ಮುಂಗಾರಿಗೆ ಏನು ನೀರಿಕ್ಷೆ ಮಾಡಿದಷ್ಟು ರಸಗೊಬ್ಬರ ಬೇಕು quantity ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅಥವಾ ಈಗ ಮುಂಗಾರು ಇರತಕ್ಕಂತಹ ಪ್ರದೇಶಗಳಿಗೆ ಕೊಟ್ಟು, ಈಗಿರತಕ್ಕಂತಹ ರಸಗೊಬ್ಬರದಲ್ಲಿ ಎಲ್ಲಿ ಸಕಾಲದಲ್ಲಿ ಮುಂಗಾರು ಬಂದಿತು ಅಲ್ಲಿಗೆ ಕೊಟ್ಟು ಮುಂದೆ ಬರತಕ್ಕಂತಹ ಮುಂಗಾರಿಗೆ ಮುಂದೆ ಕೇಂದ್ರ ಸರ್ಕಾರದಿಂದ ಬರತಕ್ಕಂತಹ ರಸಗೊಬ್ಬರವನ್ನು ಮುಂದೆ ಒತ್ತಾಯ ಮಾಡಿ ಅದನ್ನು ತರಿಸಿಕೊಂಡು ಕೊಡಬಹುದಾದ ಕೆಲಸವನ್ನು ನಾವು ಮಾಡಬಹುದಾಗಿತ್ತು. ಹಾಗಾಗಿ ಇರತಕ್ಕಂಥದ್ದು ಕೂಡ ಸಮರ್ಪಕ ರೀತಿಯಲ್ಲಿ ವಿತರಣೆ ಆಗಿಲ್ಲ. Block market ನಲ್ಲಿ ತುಂಬಾ ಇದೆ. ಅದರ ಬಗ್ಗೆ ನೀವು ಯಾವ ರೀತಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೀರಿ, ಸ್ಟ್ರೀಮ್‌ಲೈನ್ ಮಾಡಿ ಬಿಟ್ಟಿದ್ದೀರಿ. ಅದು ಸರಿಯಾದ ರೀತಿಯಲ್ಲಿ ಜಾರಿ ಆಗಿಲ್ಲ. ಸರಿಯಾದ ರೀತಿಯಲ್ಲಿ ಇಂಪ್ಲಿಮೆಂಟ್ ಮಾಡುವುದಕ್ಕೆ ನಿಮಗೆ ಆಗುತ್ತಿಲ್ಲ. ನೀವು ಬೇರೆ ಬೇರೆ ದೃಷ್ಟಿಕೋನದಿಂದ ಇವತ್ತು ನೋಡಬೇಡಿ. ಇದರಲ್ಲಿ ಯಾವುದೇ ರಾಜಕೀಯ ದುರುದ್ದೇಶ ಇಲ್ಲ ಎನ್ನತಕ್ಕಂತಹ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ತಮಗೆ ತಿಳಿಸಿ ಹೇಳಿ, ಇವತ್ತು ನಾವೆಲ್ಲರೂ ಕೂಡ ಯೋಚನೆ ಮಾಡಬೇಕಾಗಿರತಕ್ಕಂಥದ್ದು ರೈತನಿಗೆ ಕೇಂದ್ರ ಸರ್ಕಾರ ಈ ದೇಶದ ಇತಿಹಾಸದಲ್ಲಿ ರೈತನಿಗೆ ಸುಮಾರು 60,000 ಕೋಟಿಗಿಂತಲೂ ಹೆಚ್ಚು ಸಾಲ ಮನ್ನಾ ಮಾಡಿದೆ. ರೈತರ ಸಾಲ ಮನ್ನಾ ಈ ರಾಜ್ಯದಲ್ಲಿ ಎಷ್ಟರ ಮಟ್ಟಿಗೆ ಉಪಯೋಗಿಸಿಕೊಂಡಿದ್ದೇವೆಂದು ಇದುವರೆಗೂ ಸರಿಯಾಗಿ ಗೊತ್ತಾಗುತ್ತಿಲ್ಲ. ಹೊಸ ಸರ್ಕಾರ ಇವತ್ತು ಬಂದಿರತಕ್ಕಂಥದ್ದು ರೈತರ ಬಗ್ಗೆ ಅಪಾರವಾದ ಚಿಂತನೆ, ಮತ್ತು ಕಾಳಜಿ ಇಟ್ಟುಕೊಂಡು ಇಲ್ಲಿ ಬಂದಿರತಕ್ಕಂಥದ್ದು. ಉಚಿತವಾದ ವಿದ್ಯುತ್ತನ್ನು

ಕೊಡುವುದು, ಬಜೆಟ್ ಸಮಯದಲ್ಲಿ ಅದು ಬರುತ್ತದೆ, ಅದರ ಬಗ್ಗೆ ಮಾತನಾಡೋಣ. ಆದರೆ ಅದಕ್ಕೆ ಬದಲಾಗಿ ಈಗ ಈ ಮುಂಗಾರು ಆಗಿರತಕ್ಕಂತಹ ಸಂದರ್ಭದಲ್ಲಿ ನಾವು ಅವರಿಗೆ ಹೆಚ್ಚಿನ ರೀತಿಯಲ್ಲಿ ನೆರವಿಗೆ ಹೋಗುವುದು ಆಗಬೇಕು. ರೈತನ ಆತ್ಮಹತ್ಯೆ ನಿಲ್ಲಿಸುವುದು ಆಗಬೇಕು. ಬಹುಶ: ಆತನಿಗೆ ಬೇಕಾಗಿರತಕ್ಕಂತಹ ಈ ರಸಗೊಬ್ಬರ ಬಿತ್ತನೆ ಬೀಜವನ್ನು ನಾವು ಕೊಡಿಸತಕ್ಕಂತಹ ರೀತಿಯಲ್ಲಿ ಮುಂದೆ ಇದು ಯಾವುದೇ ರೀತಿಯಾದ ಗೊಂದಲ ಇರಬಾರದು, ಇವತ್ತು ಇದಕ್ಕೆ ಕೊನೆಗಾಣಿಸಲೇ ಬೇಕಾಗಿದೆ, ಎನ್ನತಕ್ಕಂತಹ ರೀತಿಯಲ್ಲಿ, ನಾವೆಲ್ಲರೂ ಪರಸ್ಪರ ಇರಬೇಕು. ನಾನು ಮೊದಲೇ ಹೇಳಿದೆ, ಇದಕ್ಕೆ ರಾಜಕೀಯ ಕೆಸರಾಟ ಬೇಡ. ನಾವೆಲ್ಲರೂ ಕೂಡ ಒಂದಾಗೋಣ. ಈ ಸದನದ ಮುಖಾಂತರ ರೈತನಿಗೆ ಧೈರ್ಯ ತುಂಬೋಣ. ಅವನಿಗೆ ನಾವೆಲ್ಲರೂ ಆತ್ಮಸ್ಥೈರ್ಯವನ್ನು ಕೊಡೋಣ, ನಾವಿದ್ದೇವೆ, ಸರ್ಕಾರವಿದೆ, ಇದರಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎಂಬ ರಾಜಕೀಯ ಇಲ್ಲ. ಯಾವುದೇ ರೀತಿಯ ಆ ತರಹದ ನಿಲುವು ಮತ್ತು ಯೋಚನೆಗಳಿಲ್ಲ. ಎನ್ನತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ತಿಳಿಸಿ ಹೇಳಿ, ನಾವೆಲ್ಲರೂ ಕೂಡ ಒಟ್ಟಾಗಿ ಸದನದ ಮುಖಾಂತರ ರೈತನಿಗೆ ಮುಂದೆ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ಆತ ಆತ್ಮಹತ್ಯೆಗೆ ಹೋಗದೆ ಇರುವಂತಹ ರೀತಿಯಲ್ಲಿ ನಾವೆಲ್ಲರೂ ಪ್ರಯತ್ನ ಮಾಡೋಣ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ನಾನು ತಿಳಿಸಿ ಹೇಳಿ, ಇಡೀ ಸದನ ಒಗ್ಗಟ್ಟಾಗಿ, ಈ ಹಿನ್ನೆಲೆಯಲ್ಲಿ ನಾವು ನಿಯಮ 60ರ ಅಡಿಯಲ್ಲಿ ತೆಗೆದುಕೊಳ್ಳೋಣ ನಮಗೆಲ್ಲರಿಗೂ ಗೌರವ ಬರುತ್ತದೆ. ಸದನದಲ್ಲಿ ನಾವೆಲ್ಲರೂ ಕೂಡ Adjournment Motion means, by adjourning all other business we should have taken up this farmers' issue. It is a burning issue. ಇದನ್ನು ತೆಗೆದುಕೊಳ್ಳಬೇಕಾಗಿತ್ತು. ಒಂದು ಸಂದೇಶ ಹೋಗಬೇಕಾಗಿತ್ತು. ನಾವು ಇಲ್ಲಿಯೇ ನಿನ್ನೆ ಮೀನಮೇಷ ಎಣಿಸಿದ್ದೇವೆ. ನಿಯಮ 69 ಏಕೆ, ನಿಯಮ 60 ಏಕೆ ಎಂದು ಮೀನಮೇಷ ಎಣಿಸಿದ್ದೇವೆ. ಹಾಗಾಗಿ ನಾವು ನಿಯಮ 60ರ ಅಡಿಯಲ್ಲಿ ಏಕೆ ವಿಶೇಷವಾಗಿ ತೆಗೆದುಕೊಂಡಿದ್ದೇವೆನ್ನುವುದನ್ನು ತಿಳಿಸಬಹುದಾಗಿತ್ತು. ಆದರೂ ಕೂಡ ಪರವಾಗಿಲ್ಲ. ನಿಯಮ 69ರ ಅಡಿಯಲ್ಲಿ ನಾವು ಚರ್ಚೆ ಮಾಡುತ್ತಿದ್ದೇವೆ. ಆ ಕಡೆ ಕೂಡ ರೈತರ ಬಗ್ಗೆ ಕಾಳಜಿ ಇರುವವರು ನೀವೂ ಕೂಡ ಮಾತನಾಡಬಹುದಾಗಿತ್ತು. ಬಹಳಷ್ಟು ಜನ ಇದ್ದೀರಿ, ಏಕೆ ಸುಮ್ಮನೆ ಕುಳಿತಿದ್ದೀರಿ? ಈ ವಿಷಯದಲ್ಲಿ ನೀವು ಕುಳಿತುಕೊಳ್ಳಬಾರದಾಗಿತ್ತು. ನಾವು ಮಾತನಾಡಿದ್ದೇವೆ, ಅದಕ್ಕೆ ಮುಖ್ಯ ಮಂತ್ರಿಗಳಿದ್ದಾರೆ, ಅದಕ್ಕೆ ಉತ್ತರ ಕೊಡುತ್ತಾರೆ, ಕೊಡಲಿ ಎನ್ನುವುದು ಆಗಬಾರದಾಗಿತ್ತು.

ಅಧ್ಯಕ್ಷರು: ಅವರೂ ಮಾತನಾಡಲಿಕ್ಕೆ ಹೆಸರುಗಳನ್ನು ಕೊಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಸದನದ ಮುಖ್ಯ ಮಂತ್ರಿಗಳು ಅವರ ಕ್ಯಾಪ್ಷನ್ ಏನು ಹೇಳಿದ್ದಾರೆಂದರೆ, ನೀವು ಒಬ್ಬರಾದರೂ ನನ್ನ ಪರ್ಮಿಷನ್ ಇಲ್ಲದೆ ಬಾಯಿ ತೆರೆದರೆ ಮುಂದೆ ಎಲ್ಲ ನೋಡಿಕೊಳ್ಳುತ್ತೇನೆಂದು ಹೇಳಿದ್ದಾರೆ. ಅದಕ್ಕೆ ಪಾಪ ಒಬ್ಬರೂ ಕೂಡ ರೈತರ ಸಮಸ್ಯೆ ಬಗ್ಗೆ ಮಾತನಾಡುವುದಕ್ಕೆ ತಯಾರಿಲ್ಲ. ಅವರ ಪರ್ಮಿಷನ್ ಬೇಕು. ಅವರು ಮಾತನಾಡುತ್ತಾರೆಂದು ನೀವೇ ಹೇಳುತ್ತಿದ್ದೀರಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಜ್ಯುಡಿಷಿಯಲ್ ಎನ್‌ಕ್ವೈರಿ ನಡೆಯುವುದು ಬಹಳ ತಡವಾಗುತ್ತದೆ. ನಮ್ಮ ಶಾಸಕಾಂಗ ಪಕ್ಷದ ನಾಯಕರು ಸಲಹೆ ನೀಡಿದರು, ಜಂಟಿ ಸದನ ಸಮಿತಿ ಮಾಡಿ ಅದರಲ್ಲಿ ನಾವೆಲ್ಲರೂ ಇರುತ್ತೇವೆ. ಅದು ಬಹಳ ಬೇಗ ಮಾಡಬಹುದು. ನಮಗೆ ಗೊತ್ತಿರುತ್ತದೆ, ಅಲ್ಲಿ ನಡೆದ ಗೋಲಿಬಾರ್ ಲಾಠಿಛಾರ್ಜ್, ನಮ್ಮಲ್ಲಿರತಕ್ಕಂತಹ ರಸಗೊಬ್ಬರ ಸಂಗ್ರಹ ಎಷ್ಟು, ಏಕೆ ವಿತರಣೆ ಆಗುತ್ತಿಲ್ಲ, ರೈತ ಆತ್ಮಹತ್ಯೆ ಏಕೆ ದಿನೇ ದಿನೇ ಹೆಚ್ಚಾಗುತ್ತಿದೆ, ಪ್ರತಿಯೊಂದನ್ನು ನಾವು ಚುನಾಯಿತ ಪ್ರತಿನಿಧಿಗಳು. ನಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇರತಕ್ಕಂಥವರು ನಾವು ಬಹಳ ಮುಖ್ಯವಾಗಿ ರೈತರ ಬೆಂಬಲದಿಂದ ಚುನಾಯಿತರಾಗಿ ಬಂದಿರತಕ್ಕಂತಹವರು. ನಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಇದರಲ್ಲಿ ತಾವು ಮೀನ ಮೇಷ ನಡೆಸದೆ ಒಂದು ಕಡೆ ನಡೆಯಲಿ.

ಬಹುಶ: ರೈತರಿಗೆ ನಮ್ಮ ಬಗ್ಗೆ ವಿಶ್ವಾಸ ಬರುತ್ತದೆ. ನಮ್ಮ ಬಗ್ಗೆ ಆತ ಮುಕ್ತವಾಗಿ ಮುಂದೆ ಹೇಳಬಹುದು. ಹಾಗಾಗಿ, ಇವತ್ತು judicial enquiry ಬಗ್ಗೆ ಕೂಡ ಜಂಟಿ ಸದನ ಸಮಿತಿಯನ್ನು ರಚಿಸಬೇಕೆಂದು ನಮ್ಮ ಶಾಸಕಾಂಗ ಪಕ್ಷದ ನಾಯಕರು ಏನು ಹೇಳಿದ್ದಾರೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಈ ಸದನ ಸಂಪೂರ್ಣವಾಗಿ ಒಪ್ಪಿಗೆ ಕೊಟ್ಟು ಸದನ ಸಮಿತಿ ರಚನೆ ಮಾಡಿ ಆದಷ್ಟು ಬೇಗ ರೈತರ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿದು, ಮುಂದೆ ಈ ರೀತಿಯಾದ ಅನಾಹುತಗಳಿಗೆ ಅವಕಾಶ ಮಾಡಿಕೊಡದ ರೀತಿಯಲ್ಲಿ ನಾವೆಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡೋಣ ಎಂದು ತಮ್ಮಲ್ಲಿ ಅರಿಕೆ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀನಿವಾಸ ಪ್ರಸಾದ್‌ರವರು ಇಡೀ ಸದನವನ್ನು ಒಂದು ರೀತಿಯ ಸರಿಯಾದ ದಿಕ್ಕಿನತ್ತ

ತೆಗೆದುಕೊಂಡು ಹೋಗಿ ಮಾತನಾಡಿದ್ದಾರೆ. ರಸಗೊಬ್ಬರ ಇವತ್ತು ಕರ್ನಾಟಕ ರಾಜ್ಯದಲ್ಲಿ ಕೊರತೆ ಇರುವ ಸಂದರ್ಭದಲ್ಲಿ ರೈತರ ಸಮಸ್ಯೆಗಳಿಗೆ ತುರ್ತು ಪರಿಹಾರವಾಗಬೇಕು ಎನ್ನುವುದಾದರೆ, ರಸಗೊಬ್ಬರ ತಕ್ಷಣದಿಂದ ಬೇಕಾಗಿದೆ ಎಂದು ಏನು ಸಲಹೆ ಕೊಟ್ಟಿದ್ದಾರೆ, ಅದು ಬಹಳ ಒಳ್ಳೆಯ ಸಲಹೆ. ಇವತ್ತು ನಾವು, ಮಾನ್ಯ ಮುಖ್ಯಮಂತ್ರಿಗಳು ಸೇರಿಕೊಂಡು ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದಾಗ ಮೊದಲನೇ ಬಾರಿ ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನು ಹಾಗೂ ಸದನದ ಅನೇಕ ಮಂತ್ರಿಗಳನ್ನು ಕರೆದುಕೊಂಡು ಹೋದಂತಹ ಸಂದರ್ಭದಲ್ಲಿ ಕೇಂದ್ರದ ಕೃಷಿ ಸಚಿವರು ಮತ್ತು ಪ್ರಧಾನ ಮಂತ್ರಿಗಳು 20ನೇ ತಾರೀಖಿನೊಳಗೆ 1,40,000 ಮೆಟ್ರಿಕ್ ಟನ್ನಿನಷ್ಟು ಕಳುಹಿಸಿಕೊಡುತ್ತೇವೆ ಎಂದು ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ, ಇವತ್ತಿನವರೆವಿಗೂ ಬಂದಿಲ್ಲ. ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡುತ್ತಿದ್ದೇವೆ. ಸಾಕಷ್ಟು ಗೊಂದಲಗಳಿವೆ. ಮಾನ್ಯ ಮಂತ್ರಿಗಳಿಗೆ ನಾನು ಮನವಿ ಮಾಡುವುದೇನೆಂದರೆ, ರಸಗೊಬ್ಬರ ಸಮಸ್ಯೆಗೆ ತುರ್ತು ಪರಿಹಾರ ಆಗಬೇಕಾದರೆ ಗೊಬ್ಬರ ಬರಲೇಬೇಕು. ಗೊಬ್ಬರವನ್ನು ಕೇಂದ್ರದವರು ಕಳುಹಿಸುತ್ತೇವೆ ಎಂದು ಹೇಳಿದರೂ ಇನ್ನೂ ಬಂದಿಲ್ಲದಿರುವ ಈ ಸಂದರ್ಭದಲ್ಲಿ 1,40,000 ಮೆಟ್ರಿಕ್ ಟನ್‌ನಷ್ಟು ಕಳುಹಿಸುತ್ತೇವೆ ಎಂದು ಹೇಳಿದ್ದರು. ಆದರೆ, 60–70 ಟನ್‌ಗಳಷ್ಟು ಮಾತ್ರ ಬಂದಿದೆ. ನನ್ನ ಮನವಿ ಇಷ್ಟೆ. ಸದನದ ಎಲ್ಲಾ ಪ್ರಮುಖರನ್ನೂ, ವಿರೋಧ ಪಕ್ಷದ ನಾಯಕರನ್ನೂ ಹಾಗೂ ಎಲ್ಲಾ ಪಕ್ಷದ ಪ್ರಮುಖರನ್ನೊಳಗೊಂಡಂತೆ ಮಾನ್ಯ ಮುಖ್ಯಮಂತ್ರಿಗಳು ನಿಯೋಗವೊಂದನ್ನು ತಕ್ಷಣ ಕರೆದುಕೊಂಡು ಹೋಗಿ ಕೇಂದ್ರದ ಕೃಷಿ ಸಚಿವರನ್ನು, ಪ್ರಧಾನ ಮಂತ್ರಿಗಳನ್ನು ಕಂಡು ಮನವಿ ಮಾಡಿ ಇಂತಿಷ್ಟು ಪ್ರಮಾಣದಲ್ಲಿ ರಸಗೊಬ್ಬರವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಕರ್ನಾಟಕ ರಾಜ್ಯದ ಸಮಸ್ಯೆಯನ್ನು ಅರಿತುಕೊಂಡು ಇವತ್ತು ತಕ್ಷಣ ಕಳುಹಿಸುವ ವ್ಯವಸ್ಥೆ ಮಾಡಿ ಎಂದು ಮನವಿ ಮಾಡುತ್ತೇನೆ. ಈಗಲಾದರೂ ಕೇಂದ್ರದ ಗಮನ ಸೆಳೆಯಿರಿ. ಏಕೆಂದರೆ, ಶ್ರೀನಿವಾಸಪ್ರಸಾದ್ ತುಂಬಾ ಸ್ಪಷ್ಟವಾಗಿ ಬೆಳಕು ಚೆಲ್ಲಿದ್ದಾರೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಬಹುಶ: ಮಾಧ್ಯಮದಲ್ಲಿ ನಾವು ನೋಡಿದ ಪ್ರಕಾರ ಸಾಗಾಣಿಕೆಯ ಸಮಸ್ಯೆ ಇದೆ. ಗುಜ್ಜಾರ್ ಚಳುವಳಿ ನಡೆಯುತ್ತಿರುವುದರಿಂದ ಅಲ್ಲಿನ ಪರಿಸ್ಥಿತಿಯಲ್ಲಿ ಸ್ವಲ್ಪ ತೊಂದರೆ ಇದೆ. ಬೇರೆ ಏನಾದರೂ ತೊಂದರೆ ಇದ್ದರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಂತಹ ಸಂದರ್ಭದಲ್ಲಿ ತಿಳಿಸಿ ಹೇಳಲಿ.

ಶ್ರೀ ಕೆ.ಎಸ್. ಈಶ್ವರಪ್ಪ: ರಸಗೊಬ್ಬರ ಇಲ್ಲಿಗೆ ಬಾರದೇ, ನಾವೆಲ್ಲರೂ ರಸಗೊಬ್ಬರದ ಬಗ್ಗೆ ಎಷ್ಟೇ ಚರ್ಚೆ ಮಾಡಿದರೂ ರೈತರ ಸಮಸ್ಯೆ ಬಗೆಹರಿಯುವುದಿಲ್ಲ. ಸರ್ವ ಪಕ್ಷ ನಿಯೋಗವನ್ನು ಮಾನ್ಯ ಮುಖ್ಯಮಂತ್ರಿಗಳು ಕರೆದುಕೊಂಡು ಹೋಗಬೇಕಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಎದ್ದು ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು: ಮಾನ್ಯ ಶರಣ ಪ್ರಕಾಶ್ ಪಾಟೀಲ್‌ರವರೆ, ನೀವು ಪದೇ ಪದೇ intervention ಮಾಡುವುದು ಸರಿಯಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ (ಸಿರಾ): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಪ್ರಧಾನ ಮಂತ್ರಿಗಳ ಹತ್ತಿರ ಹೋಗಿ ಚರ್ಚೆ ಮಾಡಿದ ನಂತರ 1,20,000 ಟನ್‌ಗಳಷ್ಟು ರಸಗೊಬ್ಬರವನ್ನು ಕಳುಹಿಸಿಕೊಡುತ್ತಾರೆ ಎಂದು ಹೇಳಿದ್ದೀರಿ. ಆದರೆ, ಇನ್ನೂ ಅವರು ಕಳುಹಿಸಿಕೊಟ್ಟಿಲ್ಲ. ನಮಗೆ 60ರಿಂದ 70 ಟನ್‌ಗಳಷ್ಟು ರಸಗೊಬ್ಬರ ಮಾತ್ರ ಬಂದಿದೆ ಎಂದು ತಾವು ಹೇಳುತ್ತಿದ್ದೀರಿ. ದಯಮಾಡಿ ನಾನು ನಿನ್ನೆ ಅದನ್ನೇ ಒತ್ತಾಯ ಮಾಡಿ ಹೇಳಿದ್ದು. ರಸಗೊಬ್ಬರವನ್ನು ಅವರು ಕಳುಹಿಸತಕ್ಕಂತಹ ಪ್ರಶ್ನೆಯೇ ಇಲ್ಲ. ಕಂಪನಿಗಳಿಗೆ ನೀವು ಸರಬರಾಜು ಮಾಡಿ ಎಂದು ಅವರು ನಿಮ್ಮೆದುರಿಗೇ ಆದೇಶ ಕೊಟ್ಟಿದ್ದಾರೆ. ಆ ಪ್ಲಾನ್ ಕಂಪನಿಯವರ ಹತ್ತಿರವೇ ಡಿಸೈಡ್ ಆಗಿದೆ. ಆದರೆ, ನಿಮ್ಮ ಜವಾಬ್ದಾರಿ ಏನೆಂದರೆ, ಅವರಿಗೆ ರಸಗೊಬ್ಬರವನ್ನು ಕಳುಹಿಸಿ ಎಂದು ಹೇಳುವ ಬದಲು ತಾವು ತರುವುದನ್ನು ಕಲಿತುಕೊಳ್ಳಿ. ಅದು ಹೇಗೆಂದರೆ, ಉದಾಹರಣೆಗೆ, ನಾನು ಹೇಳುವುದೇನೆಂದರೆ, ಪ್ರಾಕ್ಟಿಕಲ್ ಪ್ರಾಬ್ಲಮ್ ಇರತಕ್ಕಂತದ್ದು ಏನೆಂದರೆ, ಕೇಂದ್ರ ಸರ್ಕಾರದವರು ಕಾಂಪ್ಲೆಕ್ಸ್ ಗೊಬ್ಬರ ಸೇರಿದಂತೆ ಎಲ್ಲಾ ಗೊಬ್ಬರಗಳ, ಎಲ್ಲಾ ಗ್ರೇಡ್‌ಗಳ ಬೆಲೆಯನ್ನು ಕಡಿಮೆ ಮಾಡಿದರು. ಬೆಲೆಗಳನ್ನು ಕಡಿಮೆ ಮಾಡಿದ ಮೇಲೆ **"ಪ್ರಜಾವಾಣಿ"** ಹಾಗೂ **ಟೈಮ್ಸ್ ಆಫ್ ಇಂಡಿಯಾ"** ಹೀಗೆ ಎಲ್ಲಾ ಪತ್ರಿಕೆಗಳಲ್ಲೂ ನೋಟಿಫಿಕೇಶನ್ ಬಂತು. ಅದು ಬಂದ ಮೇಲೂ ಇನ್ನೂ ರೇಟ್ ಬಂದಿಲ್ಲ ಎನ್ನುವ ಕಾರಣಕ್ಕೋಸ್ಕರ ರೈತರಿಗೆ ಗೊಬ್ಬರ ಕೊಡುತ್ತಿಲ್ಲ. ಇದೇನು ಸ್ವಾಮಿ?

ಶ್ರೀ ಬಿ.ಎನ್. ಬಚ್ಚೇಗೌಡ: ನೋಟಿಫಿಕೇಶನ್ ಮಾಡಿದ್ದಾರೆ. ಕಡಿಮೆ ಆದ ರೇಟಿನಲ್ಲಿ ಎಲ್ಲಾ ಕಡೆಗಳಲ್ಲೂ ಹಂಚಲಿ ಎಂದು ಅಧಿಕಾರಿಗಳು ನೋಟಿಫೈ ಮಾಡಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಸಭಾಧ್ಯಕ್ಷರೆ, ನೋಟಿಫಿಕೇಶನ್ ಆದನಂತರ, ಅದನ್ನು ನೀವು, ಅಧಿಕಾರಿಗಳು, ಫ್ಯಾಕ್ಸ್ ಮುಖಾಂತರ ತರಿಸಿಕೊಳ್ಳುವುದಕ್ಕೆ ಆಗುವುದಿಲ್ಲವೇ? Government of Indiaದ Notification ಪತ್ರಿಕೆಯಲ್ಲಿ ಬಂದ ಮೇಲೆ ರೇಟ್ ಇನ್ನೂ ಫಿಕ್ಸ್ ಆಗಿಲ್ಲ, ನಮಗೆ ಅಫಿಷಿಯಲ್ ಆಗಿ ಬಂದಿಲ್ಲವೆಂದರೆ, What does it mean? ಆ ಕಾರಣಕ್ಕೋಸ್ಕರ, ಇವತ್ತು ಸರಬರಾಜು ಆಗುವುದಕ್ಕೆ ನಿಧಾನವಾಗುತ್ತಿದೆ. ಗೋದಾಮಿನಲ್ಲಿ ಇದೆ. ಆದರೆ, ರೈತರಿಗೆ ತಲುಪುತ್ತಿಲ್ಲ ಎನ್ನುವ ಮಾತನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನೀವು ಕಂಪನಿಗಳಿಂದಲೇ ನೇರವಾಗಿ ತರಿಸಿಕೊಳ್ಳುವ ವ್ಯವಸ್ಥೆ ಮಾಡಿದರೆ ಮಾತ್ರ ಸಮಸ್ಯೆ ಬಗೆಹರಿಯುತ್ತದೆಯೇ ವಿನಾ ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡಿ ತೋರಿಸುವುದರಿಂದ ಪ್ರಯೋಜನವಾಗುವುದಿಲ್ಲ.. ಅಲ್ಲಿ ಟೀಕೆ ಮಾಡಿ, ನಾನು ಬೇಡ ಎಂದು ಹೇಳುವುದಿಲ್ಲ. ಅದಕ್ಕಿಂತ ಜಾಸ್ತಿ ಎಂದರೆ, ಕಂಪನಿಗಳ ಜೊತೆಗೆ ಇವತ್ತು ಚರ್ಚೆ ಮಾಡಬೇಕು. ಏಕೆಂದರೆ, ನಾನು ನೇರವಾಗಿ ಕಂಪನಿಗಳ ಜೊತೆಗೆ ಚರ್ಚೆ ಮಾಡಿ ನಮ್ಮ ಕ್ಷೇತ್ರಕ್ಕೆ ಗೊಬ್ಬರ ತರಿಸಿಕೊಟ್ಟಿದ್ದೇನೆ. ದಯಮಾಡಿ ಇದನ್ನು ಅರ್ಥಮಾಡಿಕೊಳ್ಳಬೇಕು. ನೇರವಾಗಿ ಅವರು ಮಾತನಾಡತಕ್ಕಂತಹ ಕೆಲಸ ಮಾಡಿದರೆ ಪರಿಸ್ಥಿತಿ ಬಗೆಹರಿಯುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಸಾಗಾಣಿಕೆ ವೆಚ್ಚ ಭರಿಸುವುದು ಯಾರು? ಈಗ ಭರಿಸುವುದು ಕಂಪನಿಗಳು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಸಭಾಧ್ಯಕ್ಷರೆ, ಸಾಗಾಣಿಕೆ ವೆಚ್ಚವನ್ನು ಭರಿಸುತ್ತೇವೆ ಎಂದು ಮೊನ್ನೆ ನೋಟಿಫಿಕೇಶನ್ ಕೂಡ ಮಾಡಿದ್ದಾರೆ. ತಾವು ಅರ್ಥ ಮಾಡಿಕೊಳ್ಳಿ. ಸಾಗಾಣಿಕೆ ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುತ್ತದೆ ಎಂಬ ಮಾತನ್ನು ಹೇಳಿದೆ.

ಶ್ರೀ ಬಿ.ಎನ್. ಬಚ್ಚೇಗೌಡ: ನಾವು ಚೆನ್ನೈನಿಂದ ಲಿಫ್ಟ್ ಮಾಡಬೇಕು. 30 ರೂಪಾಯಿ ಸಾಗಾಣಿಕೆ ವೆಚ್ಚ ಆಗುತ್ತದೆ. ರಸಗೊಬ್ಬರವನ್ನು FCI godownನಿಂದ ತೆಗೆದುಕೊಂಡರೆ 6 ರೂಪಾಯಿ ಆಗುತ್ತದೆ. ಆ 30 ರೂಪಾಯಿ ಯಾರ ಮೇಲೆ ವಿಧಿಸುತ್ತೀರಿ?

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಸಭಾಧ್ಯಕ್ಷರೆ, Fertilizer's Controll Order ಪ್ರಕಾರ ನಿಮ್ಮ ಜವಾಬ್ದಾರಿಯೇ ಜಾಸ್ತಿ ಇರುವುದು. ಗೊಬ್ಬರ ಬೇಕಾಗಿರುವುದು ನಮ್ಮ ರೈತರಿಗೆ ಸ್ವಾಮಿ, ತಾವು ಸಚಿವರಾಗಿದ್ದೀರಿ, ಅರ್ಥ ಮಾಡಿಕೊಳ್ಳಿ. ಇದೇ ಪ್ರಶ್ನೆ ನಮಗೆ ಹಿಂದೆ ಬಂದಾಗ ನಾವು **"ಆವರ್ತ ನಿಧಿ"** ಯಿಂದ ಕೊಳ್ಳಬೇಕು ಎನ್ನುವ ಪ್ರಶ್ನೆ ಬಂದಾಗ

ನಾವು ಮುಂಗಡವಾಗಿ ಕೊಂಡು ಆಮೇಲೆ ಕೇಂದ್ರ ಸರ್ಕಾರದಿಂದ ರೀ–ಇಂಬರ್ಸ್ ಮಾಡಿವ ನಿದರ್ಶನಗಳು ಬೇಕಾದಷ್ಟಿವೆ. 30 ರೂಪಾಯಿ ಸಾಗಾಣಿಕೆ ವೆಚ್ಚ ಕೊಡುವುದು ಯಾರು ಎಂದು ತಾವು ಸಚಿವರಾಗಿ ಈ ತರಹ ಕೇಳಿದರೆ ಹೇಗೆ? ದಯಮಾಡಿ ನಿಮ್ಮ ಆವರ್ತ ನಿಧಿಯಾಗಿ 1,000 ಕೋಟಿ ಇಡುತ್ತೇವೆ ಎಂದು ಹೇಳಿದ್ದೀರಿ. ಏತಕ್ಕೆ ಆವರ್ತ ನಿಧಿಯನ್ನು ಇಟ್ಟಿದ್ದೀರಿ? ಅದರಲ್ಲಿ ಖರ್ಚು ಮಾಡಿ ನಂತರ ಅದರಿಂದ ರೀ–ಇಂಬರ್ಸ್ ಮಾಡಿಕೊಳ್ಳಿರಿ. ತಾವು ಕ್ಯಾಬಿನೆಟ್‌ನಲ್ಲಿ ಈ ವಿಚಾರಗಳನ್ನು ಸಲಹೆ ಮಾಡಿ, ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಬೇಡಿ.

ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ): ಮಾನ್ಯ ಸಭಾಧ್ಯಕ್ಷರೆ, ದೇಶದ ಬೆನ್ನೆಲುಬಾದ ರೈತ ಅನ್ನದಾತ. ಈ ಅನ್ನದಾತನ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಮೊದಲನೆಯದಾಗಿ, ನಾನು ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. 1947ರಲ್ಲಿ ಅಂದಿನ ಪ್ರಧಾನ ಮಂತ್ರಿಗಳಾದ ಪಂಡಿತ್ ಜವಾಹರ್‌ಲಾಲ್ ನೆಹರೂರವರು ಒಂದು ಮಾತನ್ನು ಹೇಳಿದ್ದರು. "Everything else can wait, but not Agriculture". ಹಾಗಾಗಿ, ಎಲ್ಲಾ ತಾಳುತ್ತದೆ. ಆದರೆ, Agriculture ಅಲ್ಲವೆಂದು ಹೇಳುತ್ತೇನೆ. ಆಗ ಬೀಜ ಯಾವಾಗ ಬೇಕು, ಗೊಬ್ಬರ ಯಾವಾಗ ಬೇಕು? ಅದು ತಕ್ಷಣವೇ ಆಗಬೇಕು. ನಾವು ಒಂದೆರಡು ದಿನ ನಾವು ನಿಂತು ಹಾಕುತ್ತೇವೆ ಎಂದರೆ ಆಗುವುದಿಲ್ಲ. ಹಾಗಾಗಿ, ಇವತ್ತು ಎಲ್ಲಾ ಮಾಧ್ಯಮಗಳಲ್ಲಿ ಹಾಗೂ Meteorological Department prediction ಈ ವರ್ಷ ಏನು ಇತ್ತು ಎಂದರೆ, early monsoon ಪ್ರಾರಂಭವಾಗುತ್ತಿದೆ. ಹಾಗಾಗಿ, ಜೂನ್ 1ನೇ ತಾರೀಖು ಎಲ್ಲಾ ಬೀಜಗಳು ಹಾಗೂ ಗೊಬ್ಬರಗಳಿಗೆ pre-occupation ಆಗಬೇಕಾಗಿತ್ತು. ಈಗ ತಮಗೆ ಗೊತ್ತಿದೆ. ಹಿಂದಿನ ಕುಮಾರಸ್ವಾಮಿಯವರ ನೇತೃತ್ವದ ಸರ್ಕಾರದಲ್ಲಿ, ನಾನು ಕೃಷಿ ಸಚಿವನಾಗಿದ್ದೆ. ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಸಚಿವರಾಗಿದ್ದರು. ಆಗ ನಾವು 75 ಪರ್ಸೆಂಟ್ ಸಬ್ಸಿಡಿ ಮುಖಾಂತರ ಇಡೀ ರಾಜ್ಯಾದ್ಯಂತ ಬೀಜಗಳನ್ನು ವಿತರಿಸಿದ್ದೆವು. ಮೊದನೆಯ ವರ್ಷ ಸುಮಾರು 87 ಕೋಟಿ ರೂಪಾಯಿಗಳಷ್ಟು ಹಣಕಾಸು ನೆರವು ಕೊಟ್ಟಿದ್ದೆವು. ಹೋದ ವರ್ಷ ಸುಮಾರು 97 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಒದಗಿಸಿಕೊಟ್ಟಿದ್ದೆವು. ಆದರೆ, ಯಾವ ಸರ್ಕಾರ ರೈತರ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕಾರ ಮಾಡಿದೆ, ಅದು ಏನು ಮಾಡಿದೆ? ಮೊಟ್ಟಮೊದಲನೆಯ ಬಾರಿಗೆ ನಾನು ಅಂದು ಟಿ.ವಿ. ನೋಡುತ್ತಾ ಕುಳಿತಿದ್ದೆ. ಅಂದು ಸಂಜೆ ಮಾನ್ಯ ಯಡಿಯೂರಪ್ಪನವರು

VOL. XI, 24.6.2008

ಅಧಿಕಾರಿಗಳನ್ನು ಕರೆಸಿ ಕಡಿತ ಮಾಡಿದ್ದರು. ನೀವು 75 ಪರ್ಸೆಂಟ್‌ನಿಂದ 50 ಪರ್ಸೆಂಟ್‌ಗೆ ಕಡಿತಗೊಳಿಸಿ ತ್ವರಿತ ಜಾರಿಗೆ ಬರುವಂತೆ ಕೆಲಸ ಮಾಡುತ್ತೀರಿ ಎಂದು ಹೇಳಿದ್ದೀರಿ. ಆದರೆ, ಇವತ್ತಿನವರೆಗೆ ಅದು ಜಾರಿಗೆ ಬರಲಿಲ್ಲ. ಅಂದು ನಾನು ಸದನದಲ್ಲಿ ಹೇಳಿದ್ದೆ. ಇವತ್ತು ಸೀಡ್ ಸಬ್ಸಿಡಿಯಲ್ಲಿ ರೈತರಿಗೆ ಸುಮಾರು 22 ಲಕ್ಷ ರೂಪಾಯಿಗಳಷ್ಟು ಸಾಲ ನೇರವಾಗಿ ದೊರಕುತ್ತಿದೆ. ಮೊಟ್ಟಮೊದಲನೆಯ ಬಾರಿಗೆ ಇವತ್ತು ರೈತನ ಜೇಬಿನಲ್ಲಿರುವ ದುಡ್ಡಿಗೆ 25 ಪರ್ಸೆಂಟ್‌ನಷ್ಟು ಕತ್ತರಿ ಹಾಕಿ ತನ್ಮೂಲಕ ಅವನಿಗೆ ಹೆಚ್ಚಿಗೆ ಭಾರ ಹೊರಿಸಿ ಆತನನ್ನು ಕಷ್ಟಕ್ಕೆ ಸಿಲುಕಿಸಿದ್ದೀರಿ. ಇವತ್ತು ಬಹಳಷ್ಟು ಕಡೆಯಲ್ಲಿ ರೈತ ಸಂಪರ್ಕ ಕೇಂದ್ರಗಳಲ್ಲಿ ಬೀಜಗಳು ವಿತರಣೆ ಆಗುತ್ತಿವೆ. ಇವತ್ತು 50 ಪರ್ಸೆಂಟ್ ಬಂದರೂ ರೈತರೂ ಇನ್ನೂ ಅದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಏಕೆಂದರೆ, ಅವರು ಗೊಬ್ಬರದ ಬಗ್ಗೆ ತಲೆಕೆಡಿಸಿಕೊಂಡಿದ್ದಾರೆ. 70 ರಿಂದ 50 ಪರ್ಸೆಂಟ್‌ಗೆ ಇಳಿದಿದ್ದರೂ ಇನ್ನೂ ತಲೆಕೆಡಿಸಿಕೊಂಡಿಲ್ಲ. ಹಾಗಾಗಿ, ಇನ್ನೂ ಸಮಯ ಮೀರಿಲ್ಲದ ಕಾರಣ ಮಾನ್ಯ ಕೃಷಿ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಹರಿಸಬೇಕು. ಏಕೆಂದರೆ ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ 25 ರಿಂದ 50 ಪರ್ಸೆಂಟ್ ಸಬ್ಸಿಡಿ ಆದಾಗಲೂ ಕೂಡ ಮತ್ತೆ ಅಡಿಶನಲ್ ಆಗಿ ರೈತರಿಂದ 25 ರಷ್ಟು ಸಬ್ಸಿಡಿಗೆ ಹೆಚ್ಚಿಗೆ ಬೇಡಿಕೆ ಬರುತ್ತಿತ್ತು. ಹೀಗಾಗಿ ಇವತ್ತೂ ಕೂಡ ನೀವು ಅನೌನ್ಸ್ ಮಾಡಿ. 50 ರಿಂದ 75 ಪರ್ಸೆಂಟ್ ಸಬ್ಸಿಡಿ ಏನಿದೆಯಲ್ಲಾ, ಅದನ್ನು ಕೊಡುವಂಥ ಪ್ರಯತ್ನವನ್ನು ತಾವು ರೈತರ ಪರವಾಗಿ ಮಾಡಬೇಕೆಂದು ನಾನು ಸರ್ಕಾರಕ್ಕೆ ಇಂದು ಸಲಹೆ ಕೊಡಬಯಸುತ್ತೇನೆ. ಅದೇ ರೀತಿ ನಾವು ರಸಗೊಬ್ಬರದ ಬಗ್ಗೆ ಮಾತನಾಡಬೇಕಾದರೆ ಹಿಂದೆ ಎರಡು ವರ್ಷ ನಾವು ಮೊಟ್ಟಮೊದಲನೆಯ ವರ್ಷದಲ್ಲಿ ನಾನು ಫೆಬ್ರವರಿ 18ನೆಯ ತಾರೀಖು 2006 ರಲ್ಲಿ ಪ್ರಮಾಣವಚನವನ್ನು ತೆಗೆದುಕೊಂಡ ಮೇಲೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರ ನೇತೃತ್ವದಲ್ಲಿ ಕೇಂದ್ರ ಸರ್ಕಾರದಲ್ಲಿದ್ದ ಕೃಷಿ ಸಚಿವರಾದ ಮಾನ್ಯ ರಾಮ್‌ವಿಲಾಸ್ ಪಾಸ್ವಾನ್‌ರವರನ್ನು ಭೇಟಿಯಾಗಿದ್ದೆವು. ಆಗ ನಮ್ಮ ಬೇಡಿಕೆ 75 ಸಾವಿರ ಟನ್‌ನಷ್ಟು ಹೆಚ್ಚಿಗೆ ಇತ್ತು. ಈ ಹೆಚ್ಚಿನ ಬೇಡಿಕೆ ಬಗ್ಗೆ ನಾವು ರಾಮ್ ವಿಲಾಸ್ ಪಾಸ್ವಾನ್‌ರವರ ಮನೆಯಲ್ಲಿ ಕುಳಿತು ಚರ್ಚೆ ಮಾಡಿದಾಗ ಅವರು ಅವತ್ತು ಒಂದು ಸಲಹೆಯನ್ನು ನಮಗೆ ಕೊಟ್ಟಿದ್ದರು. ಅದೇನೆಂದರೆ, ನೋಡಿ ನಾವು ಆದಷ್ಟು ಮಟ್ಟಿಗೆ ರಸಗೊಬ್ಬರವನ್ನು ಸರಬರಾಜು ಮಾಡುತ್ತೇವೆ, ಆದರೆ ಈ ರೀತಿಯಲ್ಲಿ ಅಡಿಶನಲ್ ಬೇಡಿಕೆ ಏನು ನಿಮ್ಮಿಂದ ಬರುತ್ತಿದೆ ಅದಕ್ಕಾಗಿ ನಿಮ್ಮ ರಾಜ್ಯದಲ್ಲಿಯೇ ನಿಮ್ಮದೇ ಆದಂಥ

ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು, ಇದಕ್ಕಾಗಿ ಯಾವುದಾದರೂ ಒಂದು ಏಜೆನ್ಸಿ ಮುಖಾಂತರ ಅಥವಾ ನೇರವಾಗಿ ರಾಜ್ಯ ಸರ್ಕಾರವೇ ಸ್ಟಾಕ್ ತರಿಸುವಂಥ ಕೆಲಸವನ್ನು ಮಾಡಿ, ನಮಗೆ ಸಬ್ಸಿಡಿ ಬಂದಾಗ ನಾವು ನಿಮಗೆ ಸಬ್ಸಿಡಿ ಕೊಡುತ್ತೇವೆ ಎಂದು 2006 ರಲ್ಲಿಯೇ ಹೇಳಿದ್ದರು. ಆ ರೀತಿ ಹೇಳಿದ ಮೇಲೆ ಹಲವಾರು ಸಭೆಗಳು ಈ ವಿಚಾರದಲ್ಲಿ ಆಯಿತು. ಕಳೆದ ವರ್ಷ ಕೂಡ ನಾವು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಹೇಳಿದ ಸಂದರ್ಭದಲ್ಲಿ ಡಿ.ಎ.ಪಿ. ಸ್ವಲ್ಪ ಶಾರ್ಟೇಜ್ ಆಯಿತು. ಆ ರೀತಿ ಶಾರ್ಟೇಜ್ ಆದಾಗ ನಾವು ಸುಮಾರು ಕಾಂಪ್ಲೆಕ್ಸ್‌ನಲ್ಲಿಯೇ ಅಡ್ಜೆಸ್ಟ್ ಮಾಡಿ ರೈತರುಗಳಿಗೆ ಸಾಕಷ್ಟು ಹೆಲ್ಪ್ ಮಾಡಿದ್ದೇವೆ. ಆದರೆ ಇವತ್ತು ಬೇಸಿಕ್ ಮಿಸ್ಟೇಕ್ ಎಲ್ಲಾಗಿದೆಯೆಂದರೆ ಜೂನ್‌ನಲ್ಲಿ ಯಾವಾಗಲೂ ಮುಂಗಾರು ಸ್ಟಾರ್ಟ್ ಆಗುತ್ತದೆಯೋ ಆಗಲೇ ಓಪನಿಂಗ್ ಬ್ಯಾಲೆನ್ಸ್ ಎಂದು ಇರಬೇಕಾಗುತ್ತದೆ. ಆದರೆ ಈಗ ಇಲ್ಲಿ ಓಪನಿಂಗ್ ಬ್ಯಾಲೆನ್ಸ್ ಎಂಬುದೇ ಇರಲಿಲ್ಲ. ಈ ಬಗ್ಗೆ ಹಿಂದೆಯೇ ಘನತೆವೆತ್ತ ರಾಜ್ಯಪಾಲರು ಲೆಕ್ಕ ಹಾಕಬೇಕಾಗಿತ್ತು. ಆದರೆ ಅವರ ಅಧಿಕಾರಾವಧಿ ಆದಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಆ ಓಪನಿಂಗ್ ಬ್ಯಾಲೆನ್ಸ್ ಬಗ್ಗೆ ನೋಡಬೇಕಾಗಿತ್ತು. ಏಕೆಂದರೆ ಜೂನ್ ಒಂದನೆಯ ತಾರೀಖು ಮುಂಗಾರು ಸ್ಟಾರ್ಟ್ ಆಗುತ್ತದೆ, ಆದರೆ ಈಗ ಎಂಟು ದಿವಸ ಮೊದಲೇ ಮುಂಗಾರು ಬರುತ್ತಿದೆ. ಆಗ ರೈತರು ಸಂಕಷ್ಟದಲ್ಲಿರುತ್ತಾರೆ. ಆದಕಾರಣ, ಸಂಕಷ್ಟ ಬರದ ಹಾಗೆ ಮಾಡಲು ಇವತ್ತೇ ನಾನು ಏನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಲೆಕ್ಕಾಚಾರ ಹಾಕಬೇಕಾಗಿತ್ತು. ಆದರೆ ನನಗೆ ತಿಳಿದಂತೆ ಇವತ್ತಿನವರೆವಿಗೂ ಈ ವಿಚಾರದಲ್ಲಿ ಕಾಂಕ್ರೀಟ್ ಪ್ರಪೋಸಲ್ ಬಗ್ಗೆ ಸರ್ಕಾರ ಹೊರಗಡೆ ಹೇಳಿದೆ ಎನ್ನುವುದರ ಬಗ್ಗೆ ನಾನು ನೋಡಿಲ್ಲ. ಸರ್ಕಾರ ಬರುವುದಕ್ಕಿಂತ ಮೊದಲೇ ನಾವು ಹಲವಾರು ಟಿ.ವಿ. ಚಾನಲ್‌ಗಳಲ್ಲಿ ನೋಡಿದ್ದೇವೆ, ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದ್ದೇವೆ, ಹಲವಾರು ಕಡೆ ರಸಗೊಬ್ಬರದ ಕೊರತೆ ಇರುವ ಬಗ್ಗೆ ಜನರು ಪ್ರತಿಭಟನೆಯನ್ನು ಮಾಡಿದ್ದಾರೆ. ದಾವಣಗೆರೆಯಲ್ಲಿಯೂ ಹೆಚ್ಚು ಪ್ರತಿಭಟನೆಯಾಗಿದೆ. 9ನೆಯ ತಾರೀಖು ಪ್ರತಿಭಟನೆಯ ಘಟನೆಗಳು ನಡೆಯಿತು. 10ನೆಯ ತಾರೀಖು ಗೋಲಿಬಾರ್ ಆಯಿತು. ರೈತರು ನಿಜಕ್ಕೂ ಬಹಳಷ್ಟು ಕಷ್ಟದಲ್ಲಿದ್ದಾರೆ. ಇಂಥ ಸಂದರ್ಭದಲ್ಲಿಯೂ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಿಂದ ದೊಡ್ಡ ರೀತಿಯಲ್ಲಿ ರೈತರಿಗೆ ಸೌಲಭ್ಯಗಳನ್ನು ಕೊಡುತ್ತಿದ್ದೀರಿ ಹೇಳಿ. ನಮ್ಮ ರಾಜ್ಯ ಸರ್ಕಾರದಲ್ಲಿ ಬೀಜ ವಿತರಣೆ ಮಾಡುವ ದೊಡ್ಡ ಸ್ಕೀಂ ಇದೆ. ಅದೂ ಎಷ್ಟು ವರ್ಷವಾಯಿತು, ಈ ಬೀಜ ವಿತರಣೆ ಮಾಡುವುದೆಂದರೆ ನಾಲ್ಕೈದು ವರ್ಷವಾಯಿತು. ಮೊದಲು 25 ಇತ್ತು, ಆಮೇಲೆ 50

ಆಯಿತು, ಈಗ 75 ಬರುತ್ತಿದೆ. ಹೀಗಾಗಿ ನಾವು ಕೊಡುತ್ತಿದ್ದೇವೆ ಎಂದು ಜನರು ನಂಬಿ ಅವರಿಂದ ಬೇಡಿಕೆ ಬರುತ್ತಿದೆ. ಹಿಂದಿನ ಕಾಲದಲ್ಲಿ ನಡೆಯುತ್ತಿದ್ದದ್ದನ್ನು ನೋಡಿದರೆ ಮನೆಯಲ್ಲಿ ಹಿಂಡಿಯಂಥದ್ದನ್ನು ಉಪಯೋಗಿಸಿ ಬೆಳೆ ತೆಗೆಯುತ್ತಿದ್ದಂಥ ಇತಿಹಾಸವಿದೆ. ಆದರೆ ಇವತ್ತು ರಸಗೊಬ್ಬರವನ್ನು ಉಪಯೋಗಿಸುವುದು ರೈತರಿಗೆ ಒಂದು ಆದತ್ ಆದಂತಾಗಿದೆ. ಆದುದರಿಂದ ನಾವು ಮೊಟ್ಟಮೊದಲನೆಯದಾಗಿ ಚಿಂತನೆ ಮಾಡಬೇಕಾಗಿರುವುದೇನೆಂದರೆ ಎರಡು ವರ್ಷ ಮೊದಲೇ buffer stock ಸಲುವಾಗಿ ನಮ್ಮ ರಾಜ್ಯ ಸರ್ಕಾರದಿಂದ ಮೊಟ್ಟಮೊದಲನೆಯದಾಗಿ ಆವರ್ತ ನಿಧಿಯೆಂದು ಇಟ್ಟಿದ್ದೇವು. ಅದರಲ್ಲಿ ಮಾರ್ಕೆಟಿಂಗ್ ಫೆಡರೇಶನ್‌ನವರಿಗೆ 50 ಪರ್ಸೆಂಟ್ ಸಬ್ಸಿಡಿಯನ್ನು ಸರ್ಕಾರದಿಂದ ಕೊಡುತ್ತೇವೆ ಎನ್ನುವ ನಿಟ್ಟಿನಲ್ಲಿ ಅದರಲ್ಲಿ ಎಂಟೆಂಟು ಕೋಟಿ ಇಬ್ಬರೂ ಸೇರಿ ಒಟ್ಟು ಹದಿನಾರು ಕೋಟಿ ರೂಪಾಯಿಗಳೇನಿದೆಯಲ್ಲಾ, ಅದನ್ನು import ಮಾಡಿದಂಥ ದಾಖಲೆ ಇದೆ. ಹೀಗಾಗಿ ಈ ವರ್ಷ ಗೊಬ್ಬರದ ಕೊರತೆ ಇಷ್ಟಿದೆಯೆಂಬ ವಿಚಾರ ಗೊತ್ತಾದಾಗ ನಮ್ಮದೇ ಆದಂಥ ಆವರ್ತ ನಿಧಿಯಲ್ಲಿ ಸುಮಾರು ಒಂದಿನ್ನೂರು, ಮುನ್ನೂರು ಕೋಟಿ....

ಅಧ್ಯಕ್ಷರು:– ಸದನದಲ್ಲಿರುವ ಗೌರವಾನ್ವಿತ ಸದಸ್ಯರಲ್ಲಿ ಒಂದು ವಿನಂತಿಯೇನೆಂದರೆ ಈಗ ಒಬ್ಬ ಸದಸ್ಯರು ಮಾತನಾಡುತ್ತಿರುವಾಗ ಬೇರೆಯವರು ತಮ್ಮ ತಮ್ಮಲ್ಲಿಯೇ ಪರಸ್ಪರ ಮಾತನಾಡಬೇಡಿ. ಇದರ ಜೊತೆಗೆ ಅಲ್ಲಲ್ಲಿಯೇ ಗುಂಪು ಗುಂಪಾಗಿ ನಿಲ್ಲುವಂಥದ್ದೂ ಕೂಡ ಆಗಬಾರದು. ಏಕೆಂದರೆ ಈ ರೀತಿ ಮಾಡಿದರೆ ಸದನದ ಗೌರವಕ್ಕೆ ಒಳ್ಳೆಯ ರೀತಿಯಲ್ಲಿ ನಡೆದುಕೊಂಡಂತಾಗುವುದಿಲ್ಲ. ಸಿ.ಟಿ. ರವಿಯವರೆ, ಸದನದಲ್ಲಿ ಪರಸ್ಪರ ಮಾತನಾಡುವುದಕ್ಕೆ ಈ ಸದನ ಲೌಂಜ್ ಅಲ್ಲ. ಈಗಾಗಲೇ ಒಬ್ಬರು ಗೌರವಾನ್ವಿತ ಸದಸ್ಯರು ಮಾತನಾಡುತ್ತಿರುವಾಗ ಅದನ್ನು ಕೇಳುವಂಥ ಕೆಲಸವನ್ನು ಮಾಡಿ. ಅದು ಬಿಟ್ಟು ತಾವುಗಳೇ ಪರಸ್ಪರ ಮಾತನಾಡಿದರೆ ಸದನಕ್ಕೆ ಗೌರವ ಬರುವುದಿಲ್ಲ. ಕಾಶೆಂಪುರ್‌ರವರೆ, ತಾವು ಮುಂದುವರೆಸಿ.

ಶ್ರೀ ಬಂಡೆಪ್ಪ ಕಾಶೆಂಪುರ್:– ಮಾನ್ಯ ಅಧ್ಯಕ್ಷರೆ, ಹಿಂದೆ ನಾವು trial ಎಂದು ಹೇಳಿ ಚಾಲೂ ಮಾಡಿದ್ದೆವು. ಅದೇ ಈ ವರ್ಷ ಬಹಳ ಮೇಜರ್ ಆಗಿ ಒಂದು ಆವರ್ತ ನಿಧಿಯನ್ನು ಇವತ್ತು ಕ್ರಿಯೇಟ್ ಮಾಡಿ additional butter stock ಬಗ್ಗೆ ಚಿಂತನೆ ಮಾಡಿ. buffer stock ಎಂದರೆ ಎಲ್ಲೆಲ್ಲಿ ಕೇಂದ್ರ ಸರ್ಕಾರದಿಂದ ಗೊಬ್ಬರ ಬರುವುದಕ್ಕೆ ಸಮಯವಾಗುತ್ತದೆಯೋ ಆಗ ಈ buffer stock ನಿಂದ ಆಯಾಯ ಜಿಲ್ಲೆಗಳಲ್ಲಿ ಅವಶ್ಯಕತೆ

ಇರುವ ತಾಲ್ಲೂಕುಗಳಿಗೆ ಕಳುಹಿಸಿ ಆಮೇಲೆ ಜಮಾ–ಖರ್ಚು ಮಾಡಬೇಕು. ಇಂಥ ಒಂದು ಪದ್ಧತಿಯನ್ನು ಸಿಸ್ಟಂನಲ್ಲಿ ತರಬೇಕೆಂದು ಕಳೆದ ವರ್ಷವೇ ಸಲಹೆಯನ್ನು ಕೊಡಲಾಗಿತ್ತು. ಆದರೆ ಇದುವರೆವಿಗೂ ಆ ಸಿಸ್ಟಂ ಅನ್ನು ಚಾಲನೆಗೆ ಏಕೆ ತರಲಿಲ್ಲ ಎನ್ನುವುದರ ಬಗ್ಗೆ ಸರ್ಕಾರದವರು ಹೇಳಬೇಕಾಗುತ್ತದೆ. ಇದುವರೆವಿಗೂ buffer stock ರಿಲೀಸ್ ಮಾಡಲಿಲ್ಲ. ಹಿಂದೆ ರಾಸಾಯನಿಕ ಗೊಬ್ಬರವನ್ನು ಯೂಸ್ ಮಾಡಿ ಹೊಲದಲ್ಲಿ ಬೆಳೆಯನ್ನು ಬೆಳೆಯುತ್ತಿರಲಿಲ್ಲ. ತಿಪ್ಪೆಗೊಬ್ಬರ, ಹಿಂಡಿ ಇಂಥವುಗಳನ್ನೇ ಬಹಳಷ್ಟು ಹಾಕುತ್ತಿದ್ದರು. ಅದಕ್ಕಾಗಿ ಸರ್ಕಾರ ರೈತರ ಬಗ್ಗೆ ಚಿಂತನೆ ಒಂದು ಪ್ಯಾಕೆಟ್ ಅನ್ನು ಅನೌನ್ಸ್ ಮಾಡಬೇಕಾಗಿತ್ತು. ಈಗಲೂ ಕೆಲವು ಕಡೆ ತಿಪ್ಪೆ ಗೊಬ್ಬರ ಯೂಸ್ ಮಾಡುವುದು ಸ್ವಲ್ಪ ಸ್ವಲ್ಪ ಮಟ್ಟಿಗೆ ಇದೆ. ಆದರೆ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಇವತ್ತು ಆರ್ಗ್ಯಾನಿಕ್ ಮೆನ್ಯೂರ್ ಯೂಸ್ ಮಾಡಿದರೆ ನಾವು ಇಷ್ಟು ಸಬ್ಸಿಡಿ ಕೊಡುತ್ತೇವೆ ಎಂದು ಹೇಳಬೇಕು, ಅದರಲ್ಲಿಯೂ ವರ್ಮಿ ಕಾಂಪೋಸ್ಟ್ ಮಾಡಿದರೆ ಇಷ್ಟು ಎಂದು ಈ ರೀತಿಯಲ್ಲಿಯೇ ಆಲ್ಟರ್‌ನೇಟಿವ್ ಯೂಸ್ ಮಾಡಲು ಸಬ್ಸಿಡಿ ಕೊಡುವಂತೆ ಸರ್ಕಾರ ಮಾಡಬೇಕು. ನಮಗೆ ಏನು ಬೇಕಾಗಿದೆಯೆಂದರೆ ಒಟ್ಟಾರೆ ರೈತರು ಟೆನ್‌ಶನ್ ಇಲ್ಲದೇ ಇರಬೇಕು, ಆದರೆ ಇವತ್ತೇನಾಗಿದೆಯೆಂದರೆ ರಸಗೊಬ್ಬರ ಸಿಗುತ್ತಿಲ್ಲ, ನಾವು ಏನು ಮಾಡಬೇಕಪ್ಪಾ ಎಂದು ರೈತರುಗಳು ಬಹಳ ಟೆನ್‌ಶನ್‌ನಲ್ಲಿದ್ದಾರೆ. ಆ ಟೆನ್‌ಶನ್ ಇಲ್ಲದಂತೆ ಮಾಡಬೇಕಾಗಿದ್ದರೆ ರಸಗೊಬ್ಬರದ ಆಲ್ಟರ್‌ನೇಟಿವ್ ನಮ್ಮಲ್ಲಿಯೇ ಇದೆ. ಇದಕ್ಕೆ ಬೇಕಾಗಿರುವ ಸಂಪನ್ಮೂಲಗಳು ನಮ್ಮ ರೈತರ ಹತ್ತಿರವೇ ಇದೆ. ಅವನೇ ಅದನ್ನು ಬೆಳೆಯುತ್ತಾನೆ. ಅಂಥ ಒಂದು ವಿಷಯದ ಬಗ್ಗೆ ನಾವು ಇನ್ನೂ ಪ್ರೋತ್ಸಾಹ ಕೊಟ್ಟಿಲ್ಲ. ಇವತ್ತು ಬಹಳಷ್ಟು ಆರ್ಗ್ಯಾನಿಕ್ ಮೆನ್ಯೂರ್‌ನ್ನು ಉತ್ಪಾದನೆ ಮಾಡತಕ್ಕಂಥ ಬಹಳಷ್ಟು ಘಟಕಗಳಿವೆ. ಅವರನ್ನು ಕರೆದು ಈ ಬಗ್ಗೆ ಮಾತನಾಡಿ. ರಸಗೊಬ್ಬರದ ಆಲ್ಟರ್‌ನೇಟಿವ್ ಏನಿದೆಯಲ್ಲಾ, ಇದನ್ನು ನೀವು ಸಪ್ಲೈ ಮಾಡಿ ಎಂದು ನೀವು ಅವರಿಗೆ ಹೇಳಿ. ನನ್ನ ಹತ್ತಿರ ಒಂದು ಮಾಹಿತಿ ಇದೆ. ಪ್ರತಿ ಹೆಕ್ಟೇರ್‌ಗೆ ಐದು ಕ್ವಿಂಟಾಲ್ ಎರೆಹುಳ ಗೊಬ್ಬರ ಹಾಕಬೇಕು, 125 ಕೆ.ಜಿ. ಬೇವಿನ ಹಿಂಡಿಯನ್ನು ಹಾಕಬೇಕು, 2400 ಗ್ರಾಂ ಜೈವಿಕ ಗೊಬ್ಬರವನ್ನು ಹಾಕಬೇಕು. ಅಂದರೆ ರಸಗೊಬ್ಬರವನ್ನು ಒಂದು ಹೆಕ್ಟೇರ್‌ಗೆ ನಾವು ಎಷ್ಟು ಉಪಯೋಗ ಮಾಡುತ್ತೇವೋ ಅದರಿಂದಾಗಿ ಎಷ್ಟು ಯೀಲ್ಡ್ ಬರುತ್ತದೆಯೋ ಅಷ್ಟೇ ಯೀಲ್ಡ್ ಬರಬೇಕೆಂದರೆ ನಾನು ಹೇಳಿದಂತೆ ಎರೆಹುಳ ಗೊಬ್ಬರ, ಬೇವಿನ ಹಿಂಡಿ ಮತ್ತು ಜೈವಿಕ ಗೊಬ್ಬರವನ್ನು ಯೂಸ್ ಮಾಡಿದರೆ ಅಷ್ಟೇ ಯೀಲ್ಡ್ ಬರುತ್ತದೆ. ಆದರೆ ಈ ರೀತಿಯ ಆಲ್ಟರ್‌ನೇಟಿವ್ ಪ್ಯಾಕೇಜ್ ಬಗ್ಗೆ ರೈತರ ಪರವಾಗಿ

ಇದುವರೆವಿಗೆ ಸರ್ಕಾರ ಚಿಂತನೆ ಮಾಡಿಲ್ಲ. ಮುಖ್ಯಮಂತ್ರಿಗಳು ಇನ್ನು ಮುಂದಿನ ದಿನಗಳಲ್ಲಿ ಇದರ ಬಗ್ಗೆ ಚಿಂತನೆ ಮಾಡಬೇಕು. ಆದರೆ ತಕ್ಷಣಕ್ಕೆ ಇದನ್ನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಈಗಾಗಲೇ ರಸಗೊಬ್ಬರದ ವಿಚಾರದಲ್ಲಿ ಗಲಾಟೆಗಳಾಗಿ ಗಲಭೆಗಳಾಗಿ ಗೋಲಿಬಾರ್ ಕೂಡ ಆಗಿಹೋಗಿದೆ. ಇವತ್ತು ರಸಗೊಬ್ಬರದ ಬಗ್ಗೆ ರೈತರುಗಳು ಬಹಳ ಟೆನ್‌ಶನ್‌ನಲ್ಲಿದ್ದಾರೆ. ಹೀಗಾಗಿ ಇವತ್ತು ಬೈ ಕಾಂಪೋಸ್ಟ್ ಇದೆ. ಇವತ್ತು ಎಷ್ಟೋ ಶುಗರ್ ಫ್ಯಾಕ್ಟರಿಗಳು ಇವೆ. ಅವುಗಳ ಅಧ್ಯಕ್ಷರುಗಳು ಕೂಡ ಇದ್ದಾರೆ. ಇವತ್ತು pressmud ಮುಖಾಂತರ, splinters ಮುಖಾಂತರ ಇವತ್ತು ಬಯೋ ಕಾಂಪೋಸ್ಟ್ ರೆಡಿಯಾಗುತ್ತದೆ. ಅದನ್ನೂ ಕೂಡ ಇವತ್ತು ರೈತರು ಅಲ್ಟರ್‌ನೇಟಿವ್ ಆಗಿ ಯೂಸ್ ಮಾಡಿಕೊಳ್ಳಬಹುದು. ಅದೇ ರೀತಿ ತಿಪ್ಪೆ ಗೊಬ್ಬರ ಯೂಸ್ ಮಾಡಿಕೊಳ್ಳಬಹುದು. ಇವತ್ತು ಇವ್ಯಾವುಗಳ ಬಗ್ಗೆಯೂ ಕೂಡ ಸರ್ಕಾರ ಚಿಂತನೆಯನ್ನು ಮಾಡುತ್ತಿಲ್ಲ. ಮುಂದಿನ ದಿನಗಳಲ್ಲಿ ರಸಗೊಬ್ಬರದ ಕೊರತೆಯ ಸಮಸ್ಯೆಗಳು ಬರುತ್ತವೆ. ಇವತ್ತು ಬಹಳಷ್ಟು ಕಡೆ ಬಯೋ ಫರ್ಟಿಲೈಸರ್ಸ್ ಇದೆ. ಬಯೋ ಫರ್ಟಿಲೈಸರ್ಸ್‌ನಲ್ಲಿ ಬಹಳಷ್ಟು ಪದಾರ್ಥಗಳು ಇವೆ. ಇದನ್ನು ಯೂಸ್ ಮಾಡಿದರೆ ಯೀಲ್ಡ್ ಲಾಸ್ ಬರಬಹುದು ಎನ್ನುವ ಭಯ ರೈತರಿಗೆ ಇದ್ದರೆ, ಅದಕ್ಕಾಗಿ ಯೀಲ್ಡ್ ಲಾಸ್ ಆದರೆ ನಾವು ಅದಕ್ಕೆ ಸಮನಾಗಿ ನಾವು ಕಾಂಪನ್‌ಸೇಟ್ ಮಾಡುತ್ತೇವೆ ಎನ್ನುವಂತೆ ಪ್ಯಾಕೇಜ್ ತರುವ ನಿಟ್ಟಿನಲ್ಲಿ ರೈತರಿಗೆ ಧೈರ್ಯ ತುಂಬುವಂಥದ್ದನ್ನು ಸರ್ಕಾರ ಮಾಡಬೇಕು. ಆದರೆ ಇದುವರೆವಿಗೂ ಕೂಡ ಇಂಥವುಗಳ ಬಗ್ಗೆ ಸರ್ಕಾರ ಚಿಂತನೆ ಮಾಡಿಲ್ಲ. ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ ಸರ್ಕಾರದ ಮುಖ್ಯಮಂತ್ರಿಗಳು ಇವತ್ತಿನವರೆವಿಗೂ ರಸಗೊಬ್ಬರದ ಆಲ್ಟರ್‌ನೇಟಿವ್ ಬಗ್ಗೆ ಚಿಂತನೆಯನ್ನು ಮಾಡಿಲ್ಲ. ಇನ್ನೊಂದು ಕೃಷಿ ಸಚಿವರ ಗಮನಕ್ಕೆ ನಾನು ತರಬಯಸುತ್ತೇನೆ. ನಮ್ಮ ಕಾಲಕ್ಕೂ ಪೂರ್ವದಲ್ಲಿ ಬೀಜ ವಿತರಣೆ ಮಾಡುವಾಗ ಪಹಣಿಯನ್ನು ರೈತರು ತರಬೇಕೆಂದು ನಿಯಮ ಇತ್ತು. ಆದರೆ ನಾನು ಕೃಷಿ ಸಚಿವನಾದ ಮೇಲೆ ಆ ನಿಯಮವನ್ನು ತೆಗೆದು ಹಾಕಿದೆ. ನಾನು ಕೃಷಿ ಸಚಿವನಾಗಿದ್ದಾಗ ಸುಮಾರು 22 ಲಕ್ಷ ರೈತರಿಗೆ ಬೀಜವನ್ನು ಕೊಡಲಾಯಿತು. ಇವತ್ತು ಆ 22 ಲಕ್ಷ ರೈತರು ಬೀಜ ತೆಗೆದುಕೊಳ್ಳುವುದಕ್ಕೆ ಪೂರ್ವದಲ್ಲಿ ವಿಲೇಜ್ ಅಕೌಂಟೆಂಟ್ ಹತ್ತಿರ ಹೋಗಿ ಪಹಣಿ ತೆಗೆದುಕೊಂಡು ಅಥವಾ ಏನಾದರೂ ಒಂದು ದೃಢೀಕರಣ ಪತ್ರ ತೆಗೆದುಕೊಂಡು ಬಂದರೆ ಸುಮಾರು ಒಂದು ತಲೆಗೆ 50 ರೂಪಾಯಿ ಖರ್ಚು ಎಂದರೂ ಏಳೆಂಟು ಕೋಟಿ ರೂಪಾಯಿ ದುಡ್ಡು ಈ ಸಲುವಾಗಿಯೇ ಹೋಗುತ್ತದೆ. ಅಂಥ ಒಂದು ಸಿಸ್ಟಂ ಅನ್ನು ನಾನು ಕೃಷಿ ಸಚಿವನಾಗಿದ್ದಾಗ ಮೊದಲನೆಯ

ಬಾರಿ ತೆಗೆದು ಹಾಕಿದೆ. ಏಕೆಂದರೆ ಆ ರೈತರುಗಳ ಪಟ್ಟಿಯನ್ನು ಎಲ್ಲಾ ರೈತ ಸಂಪರ್ಕ ಕೇಂದ್ರದಲ್ಲಿ ಇಟ್ಟುಕೊಂಡಿರಬೇಕು. ಆ ರೈತ ಸಂಪರ್ಕ ಕೇಂದ್ರಕ್ಕೆ ರೈತ ಬಂದರೆ ಅವನ ಹತ್ತಿರ ಏನು ಅಧಿಕೃತ ದಾಖಲೆ ಇರುತ್ತದೆಯೋ ಅದನ್ನೇ ನೋಡಿದರೆ ಸಾಕು. ಅದು ಗುರುತಿನ ಚೀಟಿ ಜಟಜಛಿಣಠಡಿಚಿಟ ರೋಲ್ ಇದ್ದರೂ ಸಾಕು ಅಥವಾ ರೇಶನ್ ಕಾರ್ಡ್ ಇದ್ದರೂ ಸಾಕು, ಮನೆಯಲ್ಲಿ ಯಾವ ದಾಖಲೆ ಇರುತ್ತದೋ ಅದನ್ನು ತೆಗೆದುಕೊಂಡು ಹೋಗಿ ತೋರಿಸಿ ಬೀಜವನ್ನು ಒಯ್ಯಬೇಕೆನ್ನುವ ಪದ್ಧತಿಯನ್ನು ನಾವು ಮಾಡಿದ್ದೆವು. ಆದರೆ ಇವತ್ತು ಈ ವರ್ಷ ಮತ್ತೆ ಪಹಣಿ ತೋರಿಸಬೇಕೆನ್ನುವುದನ್ನು ಏಕೆ ಇಂಟ್ರಡ್ಯೂಸ್ ಮಾಡಿದರೋ ನಮಗೆ ಗೊತ್ತಿಲ್ಲ. ಇದರಿಂದಾಗಿ ರೈತರೂ ಇನ್ನೂ ಸಂಕಷ್ಟದಲ್ಲಿ ಇದ್ದಾರೆ. ಏಕೆಂದರೆ ನಾನು ಒಂದೆರಡ್ಮೂರು ರೈತ ಸಂಪರ್ಕ ಕೇಂದ್ರಗಳಿಗೆ ಹೋಗಿದ್ದೆ. ಇದರಲ್ಲಿ ಇವರು ಕೊಟ್ಟಿರುವುದರಲ್ಲಿ ಏನು ಹೇಳಿದ್ದಾರೆಂದರೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ವಿತರಿಸಲು ಕಂದಾಯ ಇಲಾಖೆಯಿಂದ ಪಡೆದಿರುವ ಅಧಿಕೃತ ರೈತರ ಚೀಟಿ ಪಟ್ಟಿಯ ಆಧಾರದ ಮೇಲೆ ಬಿತ್ತನೆ ಬೀಜವನ್ನು ವಿತರಿಸಲಾಗುತ್ತಿದೆ. ಇದು ಏಕೆ ಈ ವರ್ಷ ಮಾಡಿದಿರಿ ? ಪಾಪ, ಆ ರೈತ ತೆಗೆದುಕೊಳ್ಳುವ ಸ್ವಲ್ಪ ಬೀಜದ ಕಡೆಯಿಂದ ಅಲೆದಾಡಿ village accountant ಹತ್ತಿರ ಹೋಗಿ ಪಹಣಿ ತೆಗೆದುಕೊಳ್ಳಬೇಕು, village accountant ಕೆಲವು ಸಲ ನನ್ನಿಂದಲೇ ಸಬ್ಸಿಡಿ ಸಿಗುತ್ತಿದೆ, ಸರ್ಕಾರ ಕೊಡುತ್ತಿಲ್ಲ ಎಂದು ಅದಕ್ಕೂ ಹೆಚ್ಚುವರಿ ದುಡ್ಡನ್ನು ತೆಗೆದುಕೊಂಡು ಕೊಡುವಂತಹ ನಿದರ್ಶನಗಳು ಹಿಂದೆ ಇದ್ದ ಹಾಗೆ, ಆ systemನ್ನು ತೆಗೆದುಬಿಟ್ಟಿದ್ದೇವೆ. ಎರಡು ವರ್ಷ ಒಳ್ಳೆಯ ರೀತಿ ನಡೆದಿತ್ತು. ಸುಮಾರು 22 ಲಕ್ಷ ರೈತರಿಗೆ ನಾವು ಬೀಜ ಕೊಟ್ಟಿದ್ದೆವು. ಈ ವರ್ಷ 50 ಪರ್ಸೆಂಟ್ ಎಂದು ಹೇಳಿದರು, ಮತ್ತೆ ಏಕೆ ಈ ಥಿಣಜಟನ್ನು ತಂದಿದ್ದೀರಿ ಎಂಬುದು ನನಗೆ ಗೊತ್ತಾಗಿಲ್ಲ. ಆ systemನ್ನು immediate ತೆಗೆದುಬಿಡಬೇಕು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಹಲವಾರು ಕಡೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇವತ್ತು ಸರ್ಕಾರ ಮೊದಲ ಹೆಜ್ಜೆಯಾಗಿ, ರೈತರಿಗೆ ಧೈರ್ಯ ಕೊಡುವಂತ ಕೆಲಸವನ್ನು ಮಾಡಬೇಕಾಗಿತ್ತು. ಏಕೆಂದರೆ, ನಮ್ಮ ಕಡೆ ಕಬ್ಬಿನ ಸಮಸ್ಯೆ ಬಂದಾಗ ಆಗಿನ ಮುಖ್ಯಮಂತ್ರಿಗಳಾದ ಮಾನ್ಯ ಹೆಚ್. ಡಿ. ಕುಮಾರಸ್ವಾಮಿ ಅವರು, ಜಿತಜಟಿ ಬೀದರ್‌ನಲ್ಲಿ ಕಬ್ಬಿನ ಬೆಳೆ ಜಾಸ್ತಿಯಾಗಿತ್ತು. ಆಗ ಮುಖ್ಯಮಂತ್ರಿಯವರು ಬಂದು ಮೂರು ದಿವಸ ಬೀದರ್‌ನಲ್ಲೇ ಇದ್ದು ಉಳಿದಿರುವ ಕಬ್ಬಿಗೆ ಪ್ರತಿ ಎಕರೆಗೆ 25 ಸಾವಿರ ಪರಿಹಾರವನ್ನು ಕೊಟ್ಟಿರುವ ದಾಖಲೆ ಇದೆ. ಹಾಗಾಗಿ ಇವತ್ತು ರೈತರ ಪರವಾಗಿ ಬಹಳಷ್ಟು

ಚಿಂತನೆ ಮಾಡಬೇಕಾಗಿತ್ತು. ಆದರೆ ಇವತ್ತು ಸನ್ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಗಳನ್ನು ನೋಡಿದೆ. ರೈತರು ಈ ಒಂದು ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿಲ್ಲ ಇನ್ನು ಹಲವಾರು ಕಾರಣಗಳು ಇದೆ ಎಂದು ಅವರು ಹೇಳಿದ್ದಾರೆ. ನಾನು ಸಚಿವನಾಗಿದ್ದಾಗ ಡಾ॥ ವೀರೇಶ್ ಕಮಿಟಿಯ ವರದಿಯನ್ನು ನೋಡಿದ್ದೆ. ನಿನ್ನೆ ಜಯಚಂದ್ರ ಅವರು ಮಾತನಾಡುತ್ತಾ, ಆ ವರದಿ ಪ್ರಸ್ತಾವನೆಯಾದಾಗ ಯಾವ ರೀತಿ ಗಲಭೆಯಾಗಿತ್ತು ಎಂಬುದನ್ನು ಹೇಳಿದರು. ಇವತ್ತು ನಮ್ಮ ರಾಜ್ಯದಲ್ಲಿ ರೈತರು ನಿಜಕ್ಕೂ ಸಂಕಷ್ಟದಲ್ಲಿದ್ದಾರೆ. ಇವತ್ತು ಅವರ ಬಗ್ಗೆ ಶಂಕೆ ಮಾಡುವುದು ಎಲ್ಲಕ್ಕಿಂತ ಮಹಾ ತಪ್ಪು ಎಂದು ನಾನು ಹೇಳಲು ಬಯಸುತ್ತೇನೆ. ಇವತ್ತು ಅವರದ್ದೇ ಆದ ಒಂದು ಸಮಿತಿ ಇದೆ. ನಾವು ನೀವು ಹೇಳಿದರೆ ದುಡ್ಡನ್ನು ಕೊಡುವುದಿಲ್ಲ. ಎ.ಸಿ. ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಇದೆ. ಆ ಕಮಿಟಿಯಲ್ಲಿ ಸುಮಾರು ಅಧಿಕಾರಿಗಳಿದ್ದಾರೆ. ರೈತರ ಆತ್ಮಹತ್ಯೆ ಪ್ರಕರಣ ಆದ ತಕ್ಷಣ ಆ ಕಮಿಟಿ ಮುಂದೆ ಹೋಗಿ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಸೇರಿಸಿ ಆ ಕಮಿಟಿ ಅದನ್ನು ಪರಿಗಣಿಸಿ ಇದು ನಿಜಕ್ಕೂ ಆತ್ಮಹತ್ಯೆ ಎಂದು ಹೇಳಿದರೆ, ಮಾತ್ರ ಇದು ಪಾಸ್ ಆಗುತ್ತದೆ. ಆಗ ಮಾತ್ರ ಇಲ್ಲಿಂದ ಒಂದು ಲಕ್ಷ ರೂಪಾಯಿ release ಆಗುತ್ತದೆ. ಇವತ್ತು ಮಂತ್ರಿಗಳು ಹೇಳುತ್ತಾರೆ ಅಂದರೂ ಅದು ಆಗುವುದಿಲ್ಲ, ಮುಖ್ಯಮಂತ್ರಿಗಳು ಹೇಳಿದರೂ ಅದು ಆಗುವುದಿಲ್ಲ. ನಮ್ಮ ಕೈಯಿಂದ ಸಹಾಯಧನ ಕೊಡಬಹುದು. ತಾವು ಹುಬ್ಬಳ್ಳಿಯಲ್ಲಿ ಒಂದು ಲಕ್ಷ ರೂಪಾಯಿ deposit ಮಾಡಿದಿರಿ, ಅದನ್ನು ಮಾಡಬಹುದು. ಆದರೆ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದಕ್ಕೆ ಒಂದು ಕಮಿಟಿ ಇದೆ. ಆದುದರಿಂದ ಕೃಷಿ ಸಚಿವರು ಇವತ್ತೇ ಒಂದು ಆದೇಶವನ್ನು ಹೊರಡಿಸಬೇಕು. ಏನೆಂದರೆ, ಸಾಲದ ಬಾಧೆಯಿಂದ ರೈತ ಆತ್ಮಹತ್ಯೆ ಮಾಡಿಕೊಂಡರೆ ಅದನ್ನು ಪರಿಗಣಿಸಬೇಕೆಂದು ಈ ಮೊದಲು ಇತ್ತು. ಈಗ ಏನಾಗಿದೆ ಎಂದರೆ, ಈ ವರ್ಷ ಬೀಜ ಸಿಗದಿದ್ದರೂ ರೈತರು ಆತಂಕದಲ್ಲಿ ಇದ್ದಾರೆ, ರಸಗೊಬ್ಬರ ಸಿಗದಿದ್ದರೂ ಆತಂಕದಲ್ಲಿದ್ದಾರೆ. ಆದ್ದರಿಂದ ರೈತರು ಆತ್ಮಹತ್ಯೆ ಮಾಡಿಕೊಂಡ ನಿದರ್ಶನ ನಮ್ಮ ಎದುರಾಗಿದೆ. ಆದ್ದರಿಂದ ತಾವು ಇವತ್ತೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ, ಸಂಬಂಧಪಟ್ಟ ಕಮಿಟಿಯ ಅಧ್ಯಕ್ಷರಿಗೆ ಇವತ್ತಿನಿಂದ ಹಿಡಿದು ಈ ಹಿಂದಿನವರೆಗೆ ಬೀಜ ಮತ್ತು ಗೊಬ್ಬರ ಸಮಸ್ಯೆಯಿಂದ ಏನಾದರೂ ರೈತ ಆತ್ಮಹತ್ಯೆ ಮಾಡಿಕೊಂಡಿದ್ದರೆ ಅದನ್ನೂ ರೈತನ ಆತ್ಮಹತ್ಯೆ ಪ್ರಕರಣ ಎಂದು ಪರಿಗಣಿಸಬೇಕೆಂಬ ನಿರ್ದೇಶನ ಕಳುಹಿಸಬೇಕೆಂದು ಹೇಳಬಯಸುತ್ತೇನೆ. ಇವತ್ತು ಕೇಂದ್ರ ಸರ್ಕಾರವು ಇಡೀ ಭಾರತದಲ್ಲಿ ನಾಲ್ಕು ರಾಜ್ಯಗಳಲ್ಲಿ ಮಾತ್ರ ರೈತರ ಆತ್ಮಹತ್ಯೆ ಪ್ಯಾಕೇಜ್ ಕೊಟ್ಟಿದೆ. ಅದರಲ್ಲಿ ನಮ್ಮ ರಾಜ್ಯದ ಸುಮಾರು ಆರು ಜಿಲ್ಲೆಗಳಲ್ಲಿ ಆ

ಒಂದು ಪ್ಯಾಕೇಜಿನ ಕೆಲಸ ನಡೆಯುತ್ತಿದೆ. ಹಾಗಾಗಿ ನಾವು ರೈತರ ಆತ್ಮಹತ್ಯೆ ಬಗ್ಗೆ ಅಷ್ಟು ಹಗುರವಾಗಿ ಮಾತನಾಡಿದರೆ ಸೂಕ್ತವಲ್ಲವೆಂದು ಹೇಳಲು ಬಯಸುತ್ತೇನೆ. ಇವತ್ತು ರೈತರ ಹೆಸರಿನ ಮೇಲೆ ಬಂದಿರುವ ಸರ್ಕಾರವನ್ನು ರೈತರು ನೋಡುತ್ತಿದ್ದಾರೆ. ಇವತ್ತು ರೈತರ ಬಗ್ಗೆ ಬಹಳಷ್ಟು ಚರ್ಚೆಯಾಗಬೇಕಾಗಿದೆ. ನಾವಿದ್ದಾಗ ಹೊಸ ಕೃಷಿ ನೀತಿಯನ್ನು ತೆಗೆದುಕೊಂಡು ಬಂದಿದ್ದೆವು. ಅದರ ಬಗ್ಗೆ ಇವತ್ತು ಸಮಗ್ರವಾಗಿ ಯೋಜನೆಗಳು ಆಗಬೇಕಾಗಿದೆ. ಹಿಂದಿನ ಸರ್ಕಾರದಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಹೆಚ್.ಡಿ. ಕುಮಾರಸ್ವಾಮಿ ಅವರು ಸಾಲ ಮನ್ನಾ ಮಾಡುವಂಥ ಯೋಜನೆಯನ್ನು ಜಾರಿಗೆ ತಂದರು. ಅದರಿಂದ ಎಷ್ಟೋ ಮಂದಿಗೆ ರಿಲೀಫ್ ಆಗಿದೆ. ಇವತ್ತು ಕೇಂದ್ರ ಸರ್ಕಾರವು ಸಾಲ ಮನ್ನಾ ಮಾಡಿದೆ. ಏಕೆ ಮಾಡಿದೆ ? ಇವತ್ತು ಇಡೀ ಭಾರತದಲ್ಲಿ ರೈತರು ಆತಂಕದಿಂದ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇನ್ನು ಮುಂದೆ ಇಂತಹ ಆತ್ಮಹತ್ಯೆಯ ಕೆಲಸ–ಕಾರ್ಯಗಳಿಗೆ ರೈತರು ಮುಂದಾಗಬಾರದು ಎಂದು ಧೈರ್ಯ ತುಂಬುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿಕೊಂಡು ಬಂದಂತಹ ಸರ್ಕಾರ ತಮ್ಮದು. ಆದ್ದರಿಂದ ನನ್ನದೊಂದು ಅಪೇಕ್ಷೆ ಇದೆ, ಈ ಸಮಯದಲ್ಲಿ ಮುಂದಿನ ದಿನಗಳಲ್ಲಿ minimum 15 ದಿವಸ ರೈತರ ಬಗ್ಗೆಯೇ ಚರ್ಚೆ ಮಾಡುವಂತಹ ಒಂದು ಅಧಿವೇಶನವನ್ನು ಕರೆಯಬೇಕೆಂದು ಈ ಸರ್ಕಾರಕ್ಕೆ ಮತ್ತು ಮುಖ್ಯಮಂತ್ರಿಯವರಿಗೆ ಹೇಳಬಯಸುತ್ತೇನೆ. ಬೀಜ ಮತ್ತು ಗೊಬ್ಬರದ ಬಗ್ಗೆ ಮುಗಿಯಿತು, ಈಗ ಮಳೆ ಇಲ್ಲ, ನಮ್ಮ ಬೀದರ್‌ನಲ್ಲಿ ಇನ್ನೂ ಮಳೆ ಬಿದ್ದಿಲ್ಲ, ಬಿತ್ತನೆಯೇ ಪ್ರಾರಂಭವಾಗಿಲ್ಲ. ಆದ್ದರಿಂದ ಬೆಳೆ ವಿಮೆ ಯೋಜನೆಯನ್ನು ಬಹಳ ಪರಿಣಾಮಕಾರಿಯಾಗಿ ಜಾರಿಗೆ ತರಬೇಕಾಗುತ್ತದೆ. ಏಕೆಂದರೆ ಎಲ್ಲೆಲ್ಲಿ ನಷ್ಟವಾಗುತ್ತದೆ, ಅಲ್ಲಿ ರೈತರಿಗೆ ಸ್ವಲ್ಪ ಬೆಂಬಲ ಕೊಡುವಂತಹ ಕೆಲಸವಾಗುತ್ತದೆ. ಮೊದಲು ಇದ್ದಂತಹ ಬೆಳೆ ವಿಮೆ ಯೋಜನೆ ಅಷ್ಟು ಪರಿಣಾಮಕಾರಿಯಾಗಿರಲಿಲ್ಲ, ನಾನು ಅದರಲ್ಲಿ ಸ್ವಲ್ಪ ಬದಲಾವಣೆ ಮಾಡಿದೆ. ಆದ್ದರಿಂದ ಇವತ್ತು ಒಂದು ಪರಿಣಾಮಕಾರಿಯಾದ ಬೆಳೆ ವಿಮೆ ಯೋಜನೆಯನ್ನು ಜಾರಿಗೆ ತರುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳಿ, ಇವತ್ತು ನನಗೆ ಮಾತನಾಡಲಿಕ್ಕೆ ತಾವು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ) : ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಮೊದಲನೆ ಬಾರಿಗೆ ಸದಸ್ಯನಾದ ನನಗೆ, ಈ ವಿಷಯದಲ್ಲಿ ಮಾತನಾಡಲು ಅವಕಾಶ

VOL. 2, T.R.N

ಮಾಡಿಕೊಟ್ಟಿರುವಂಥ ತಮಗೆ ಹಾರ್ದಿಕ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿನ್ನೆಯಿಂದ ಕರ್ನಾಟಕ ರಾಜ್ಯದ ರೈತರ ರಸಗೊಬ್ಬರದ ಸಮಸ್ಯೆ ಬಗ್ಗೆ ಮತ್ತು ರೈತರ ಆತ್ಮಹತ್ಯೆ ಹಿನ್ನೆಲೆಯಲ್ಲಿ ಅನೇಕ ವಿಷಯಗಳು ಚರ್ಚೆಯಾಗಿದೆ. ನನಗೊಂದು ಆಶ್ಚರ್ಯ ತರುತ್ತಿರುವ ಸಂಗತಿ ಏನೆಂದರೆ, ವಿರೋಧಪಕ್ಷದ ಮುಖಂಡರು ಹಾಗೂ ಸನ್ಮಾನ್ಯ ಅನೇಕ ಹಿರಿಯ ಸದಸ್ಯರು, ಸನ್ಮಾನ್ಯ ಯಡಿಯೂರಪ್ಪನವರು ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ತೆಗೆದುಕೊಂಡಿದ್ದನ್ನು ಅನೇಕ ಸಂದರ್ಭಗಳಲ್ಲಿ ಆಕ್ಷೇಪ ಮಾಡಿದ್ದು, ಏಕೆಂದರೆ, ನಾವು ಮತ್ತು ಸನ್ಮಾನ್ಯ ಯಡಿಯೂರಪ್ಪನವರು "ಜನಸೇವೆಯೇ ಜನಾರ್ಧನ ಸೇವೆ" ಎಂದು ನಂಬಿಕೊಂಡಿರತಕ್ಕಂಥ ಜನ, ರೈತರೇ ಇವತ್ತು ದೇವರು ಎಂದು ನಂಬಿ, ರೈತರ ಹೆಸರಿನಲ್ಲಿ ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಮಾಡಿದ್ದು ಸ್ವಾಭಾವಿಕ ಎಂದು ನನ್ನ ಭಾವನೆ. ಸನ್ಮಾನ್ಯ ಯಡಿಯೂರಪ್ಪನವರು ಹಸಿರು ಶಾಲು ಧರಿಸಿಕೊಂಡ ವಿಷಯದ ಬಗ್ಗೆ ಅನೇಕ ಬಾರಿ ಹಿರಿಯರು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಕೇಸರಿ ಬಣ್ಣದ ಬಗ್ಗೆಯೂ ಕೂಡ ಪ್ರಸ್ತಾಪವಾಗಿದೆ. ಕೇಸರಿ ಬಣ್ಣ ತ್ಯಾಗ, ಬಲಿದಾನ, ಶಾಂತಿಯ ಸಂಕೇತವಾದರೆ, ಹಸಿರು ಬಣ್ಣ ಅಭಿವೃದ್ಧಿ ಹಾಗೂ ವಿಕಾಸದ ಸಂಕೇತ. ಹಸಿರು ಬಣ್ಣವನ್ನು ಇಲ್ಲಿ ಕೆಲವರು ಗುತ್ತಿಗೆ ಹಿಡಿದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಹಸಿರು ಬಣ್ಣವು ವಿಕಾಸದ ಸಂಕೇತವಾಗಿರುವುದರಿಂದ ಕರ್ನಾಟಕ ರಾಜ್ಯವನ್ನು ಅಭಿವೃದ್ಧಿಗೊಳಿಸಿ ಒಂದು ವಿಶೇಷವಾದಂಥ ಸಮೃದ್ಧ ಕರ್ನಾಟಕವನ್ನಾಗಿ ಮಾಡಬೇಕೆನ್ನುವ ದೃಷ್ಟಿಯಲ್ಲಿ ಸಂಕಲ್ಪ ತೊಟ್ಟಿರುವಂಥ ಸನ್ಮಾನ್ಯ ಯಡಿಯೂರಪ್ಪನವರು ಇವತ್ತು ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದಾರೆ. ಅವರು ತಮ್ಮ ಎರಡು ಬಜೆಟ್‌ನಲ್ಲಿ ಕರ್ನಾಟಕ ರಾಜ್ಯದ ರೈತರಿಗೆ ವಿಶೇಷ ಕೊಡುಗೆಯನ್ನು ಕೊಟ್ಟಿರುವುದರಿಂದ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸುವಂತಹ ಹಕ್ಕು ಕೂಡ ಮುಖ್ಯಮಂತ್ರಿಗಳಾದ ಸನ್ಮಾನ್ಯ ಯಡಿಯೂರಪ್ಪನವರಿಗೆ ಇದೆ ಎಂದು ಭಾವಿಸಿದ್ದೇನೆ. ರಸಗೊಬ್ಬರದ ಅಭಾವ ಕರ್ನಾಟಕ ರಾಜ್ಯದಲ್ಲಿ ಮಾತ್ರ ಇಲ್ಲ. ದೇಶದ ಅನೇಕ ರಾಜ್ಯಗಳಲ್ಲಿ ರಸಗೊಬ್ಬರದ ಅಭಾವ ಎದ್ದು ಕಾಣುತ್ತಿದೆ. ಅದಕ್ಕೆ ಕೇಂದ್ರ ಸರ್ಕಾರ ಕೊಡಬೇಕಾದಂತಹ ಸಬ್ಸಿಡಿಯನ್ನು ರಸಗೊಬ್ಬರ ಕಾರ್ಖಾನೆಗಳಲ್ಲಿ ಕೊಟ್ಟಿಲ್ಲ ಎನ್ನುವುದು ಒಂದು ಕಾರಣ. ಇನ್ನೊಂದು ವಿಚಾರವೇನೆಂದರೆ, ಘನತೆವೆತ್ತ ರಾಜ್ಯಪಾಲರ ಸರ್ಕಾರ ಇದ್ದಾಗ, ರಾಜ್ಯಪಾಲರ ಸರ್ಕಾರ ಎಂದರೆ ಅದು indirect ಆಗಿ ಕೇಂದ್ರ ಸರ್ಕಾರ ಇದ್ದಂತೆ. ಕೇಂದ್ರ ಸರ್ಕಾರದ ಆಡಳಿತ ಎಂದರೆ ಬಹಶಃ ಈ ಸದನದಲ್ಲಿ ವಿರೋಧಪಕ್ಷವಾಗಿ ಇರುವಂತಹ ಕಾಂಗ್ರೆಸ್ಸಿನ ಸರ್ಕಾರ ಎಂದು ನಾವು ಹೇಳಬೇಕಾಗುತ್ತದೆ. ಏಪ್ರಿಲ್ ತಿಂಗಳಿನಲ್ಲಿ

monsoon ಬರುತ್ತದೆನ್ನುವ ಸಂದರ್ಭ ಇದ್ದಾಗ ಆವತ್ತಿನ ಅಧಿಕಾರಿಗಳು ಕರ್ನಾಟಕ ರಾಜ್ಯಕ್ಕೆ ಮುಂಗಾರು ಬೆಳೆಗೆ ಬೇಕಾಗುವಂತಹ ರಾಸಾಯನಿಕ ಗೊಬ್ಬರದ ಚಿಂತನೆಯನ್ನು ಮಾಡಿ ಸಕಾಲಕ್ಕೆ ಇಲ್ಲಿ ಸಂಗ್ರಹ ಮಾಡಿಕೊಂಡಿದ್ದರೆ ಬಹುಶಃ ಕರ್ನಾಟಕ ರಾಜ್ಯದಲ್ಲಿ ಇವತ್ತು ಬಂದಿರತಕ್ಕಂಥ ಪರಿಸ್ಥಿತಿ ರಸಗೊಬ್ಬರದ ಸಮಸ್ಯೆ ಆಗುತ್ತಿರಲಿಲ್ಲ. ಹೋದ ವರ್ಷ ದಿನಾಂಕ : 01–04–2007ರಲ್ಲಿ DAP ಗೊಬ್ಬರ ವಿಶೇಷವಾಗಿ ಬಿತ್ತನೆ ಮಾಡುವ ಸಂದರ್ಭದಲ್ಲಿ ರೈತನಿಗೆ ಬೇಕಾಗುತ್ತದೆ. 31,001 metric ton ಇದ್ದಾಗ, ದಿನಾಂಕ : 01–04–2006ನೇ ಇಸವಿಯಲ್ಲಿ DAP ಗೊಬ್ಬರದ ಸಂಗ್ರಹ ಕೇವಲ 3,782 ಇತ್ತು. ಅದರ ಹೋದ ವರ್ಷ ಸಂಗ್ರಹವಿರುವ ಗೊಬ್ಬರಕ್ಕೆ ಕೇವಲ 12% ಮಾತ್ರ ಇತ್ತು. ಮ್ಯುರೇಟ ಪೊಟಾಶ್ ಕಳೆದ ವರ್ಷ ಇದು 37,270 ಟನ್, ಈ ವರ್ಷ ಕೇವಲ 12,107 ಟನ್ ಇತ್ತು. ಅಂದರೆ ಶೇಕಡ 32 ರಷ್ಟು ಮಾತ್ರ ಸಂಗ್ರಹ ಇತ್ತು. Complex ಗೊಬ್ಬರವನ್ನು ವಿಶೇಷವಾಗಿ ಮುಂಗಾರು ಬಿತ್ತನೆಗೆ ರೈತರು ಬಳಸುತ್ತಾರೆ. ಅದು ಕಳೆದ ವರ್ಷ ಏಪ್ರಿಲ್ 1ನೇ ತಾರೀಖು 78,131 ಟನ್‌ನಷ್ಟು stock ಇದ್ದರೆ, ಇವತ್ತು ಅದು ಕೇವಲ 9,031 ಟನ್ ಅಂದರೆ ಶೇಕಡ 11ರಷ್ಟು ಮಾತ್ರ ಇಲ್ಲಿ ಸಂಗ್ರಹ ಇರುವುದರಿಂದ ಇದರ ಬಗ್ಗೆ ಸಕಾಲಕ್ಕೆ ಕೃಷಿ ಅಧಿಕಾರಿಗಳು ಗಮನ ಕೊಟ್ಟಿದ್ದರೆ ಬಹುಶಃ ಈ ಸಮಸ್ಯೆ ಇವತ್ತು ಆಗುತ್ತಿರಲಿಲ್ಲ ಎಂದು ನನಗೆ ಅನ್ನಿಸುತ್ತಿದೆ. ಇವತ್ತು ಹಾವೇರಿಯಲ್ಲಿ ಒಂದು ಘಟನೆ ನಡೆಯಿತು. ಅದರ ಬಗ್ಗೆ ನಿನ್ನೆ ಹಾವೇರಿಯ ಶಾಸಕರು, ಮತ್ತು ಆ ಭಾಗದ ಅನೇಕ ಹಿರಿಯ ಶಾಸಕರು ಬೆಳಕನ್ನು ಚಲ್ಲಿದ್ದಾರೆ. ಇವತ್ತು ಕರ್ನಾಟಕದಲ್ಲಿ ಸನ್ಮಾನ್ಯ ಯಡಿಯೂರಪ್ಪನವರ ಸರ್ಕಾರ ರೈತರ ಮೇಲೆ ಗುಂಡು ಹಾಕಿದೆ ಎನ್ನುವ ವಿಚಾರ ಇಲ್ಲಿ ಪ್ರಸ್ತಾಪ ಮಾಡುವುದು ನಗೆಪಾಟಲಾಗುತ್ತದೆ. ಕರ್ನಾಟಕ ರಾಜ್ಯದ ಜನರಿಗೆ ಯಾರು ರೈತ ವಿರೋಧಿಗಳು ಎನ್ನುವುದು ಗೊತ್ತಿದೆ. ಈ ರಾಜ್ಯದಲ್ಲಿ ಈಗಾಗಲೇ ರೈತರ ಮೇಲೆ ಗುಂಡು ಹಾರಿಸಿದ ಸರ್ಕಾರ ಯಾವುದಿತ್ತು ? ಎಲ್ಲಿ ಗುಂಡು ಹಾರಿತ್ತು ? ಎಷ್ಟು ಜನ ರೈತರ ಬಲಿದಾನವಾಯಿತು ಎನ್ನುವುದನ್ನು ನಮ್ಮ ವಿರೋಧ ಪಕ್ಷದ ಪ್ರಮುಖರು ನರಗುಂದ, ನವಲಗುಂದಕ್ಕೆ ಹೋಗಿ ಅಲ್ಲಿರುವಂತಹ ವೀರಗಲ್ಲನ್ನು ನೋಡಿದರೆ ಬಹುಶಃ ಹಿಂದಿನ ಘಟನೆಗಳು ನೆನಪಾಗುತ್ತವೆ ಎಂದು ನಾನು ತಿಳಿದುಕೊಂಡಿದ್ದೇನೆ. ರೈತರ ಪರವಾಗಿರುವಂತಹ ಈ ಸರ್ಕಾರಕ್ಕೆ, ಸರ್ಕಾರ ಸ್ಥಾಪನೆಯಾದ ಕೆಲವೇ ದಿವಸಗಳಲ್ಲಿ ಉಲ್ಬಣಗೊಂಡಿರುವಂತಹ ಸಮಸ್ಯೆಯನ್ನು ಬಿಡಸಬೇಕಾಗಿತ್ತು ಎಂದು ಆರೋಪ ಮಾಡುವುದು ಸರಿಯಲ್ಲ. ಇವತ್ತು ಗೋಲಿಬಾರ್ ಆಗುವಂತಹ ಸಂದರ್ಭ ಏಕೆ ಬಂತು ? ಇವತ್ತು ಸರ್ಕಾರ ಸ್ಥಾಪನೆಯಾದ ಕೆಲವೇ ದಿವಸಗಳಲ್ಲಿ ಈ ರೀತಿಯಾಗಿ ರೈತರ ಹೆಸರಿನಲ್ಲಿ

ಕೆಲವು ಗೂಂಡಾಗಳು, ಕೆಲವು ಸಮಾಜ ವಿರೋಧಿ ಶಕ್ತಿಗಳು ಸರ್ಕಾರದ ಹೆಸರನ್ನು ಕೆಡಿಸುವಂತಹ ಪ್ರಯತ್ನವನ್ನು ಮಾಡಿದೆ ಎನ್ನುವಂತಹ ಚರ್ಚೆ ಸಾಮಾನ್ಯವಾಗಿ ಸಾರ್ವಜನಿಕರಲ್ಲಿ ನಡೆಯುತ್ತಿದೆ. ಈ ಒಂದು ಘಟನೆಯನ್ನು ಸನ್ಮಾನ್ಯ ಯಡಿಯೂರಪ್ಪನವರ ಸರ್ಕಾರದ ಮೇಲೆ ಹಾಕಿ, ಈ ಸರ್ಕಾರದ ಹೆಸರನ್ನು ಕೆಡಿಸುವಂತಹ ಒಂದು ಷಡ್ಯಂತರ ನಡೆದಿದೆ ಎಂದು ನಾನು ಇವತ್ತು ಈ ಸದನದಲ್ಲಿ ಆರೋಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈ ಪಿತೂರಿ ಹಿಂದೆ ಯಾರ ಕೈವಾಡ ಇದೆ. ಯಾವ ಜನರಿಂದ ಈ ಸಮಸ್ಯೆ ಉಂಟಾಯಿತು, ಇವೆಲ್ಲವೂ ಸಂಪೂರ್ಣವಾಗಿ ಬೆಳಕಿಗೆ ಬರಬೇಕಾದರೆ ಸರ್ಕಾರ ಇವತ್ತು ಇದರ ಬಗ್ಗೆ ನ್ಯಾಯಾಂಗ ತನಿಖೆ ಮಾಡಬೇಕೆಂದು ಏನು ತೀರ್ಮಾನ ತೆಗೆದುಕೊಂಡಿದೆ, ಅದು ಬಹಳ ಸ್ವಾಗತಾರ್ಹವಾದುದು.

(ಈ ಹಂತದಲ್ಲಿ ಶ್ರೀ ಚಂದ್ರಕಾಂತ್ ಬೆಲ್ಲದ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಆ ನ್ಯಾಯಾಂಗ ತನಿಖೆ ವರದಿ ಬಂದನಂತರ ಸತ್ಯಾಂಶ ಬೆಳಕಿಗೆ ಬರುತ್ತದೆ. ಆ ಸಂದರ್ಭದಲ್ಲಿ ಯಾರು ತಪ್ಪು ಮಾಡಿದ್ದಾರೆ ಎನ್ನುವುದರ ಬಗ್ಗೆ ಸರ್ಕಾರ ಸರಿಯಾದ ವಿಚಾರಣೆಯನ್ನು ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ದೇಶದಲ್ಲಿ ಮತ್ತು ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳು ನಡೆಯುತ್ತಿರುವ ಬಗ್ಗೆ ಇಲ್ಲಿ ನಿನ್ನೆಯಿಂದ ಅನೇಕ ಹಿರಿಯರು ಪ್ರಸ್ತಾಪ ಮಾಡಿದ್ದಾರೆ. ದೇಶಕ್ಕೆ, ಜಗತ್ತಿಗೆ ಅನ್ನ ಹಾಕುವಂತಹ ರೈತ ಇವತ್ತು ಆತ್ಮಹತ್ಯೆ ಮಾಡಿಕೊಳ್ಳುವಂತಹ ಸಂದರ್ಭ ಬರಬಾರದು. ಇದು ಕಳವಳಕಾರಿಯಾದ ಸಂಗತಿ. ಇದರಲ್ಲಿ ಎರಡು ಮಾತಿಲ್ಲ. ರೈತರ ಆತ್ಮಹತ್ಯೆ ಬಗ್ಗೆ ನಾವು ಯೋಚನೆಯನ್ನು ಮಾಡಬೇಕಾದರೆ ಬಹುಶಃ ರಾಜಕೀಯವನ್ನು ಮರೆತು, ಇಡೀ ದೇಶದ ರೈತರಲ್ಲಿ ಬರುವಂತಹ ಸಮಸ್ಯೆಗಳ ಬಗ್ಗೆ ಸಂಪೂರ್ಣವಾಗಿ ಚರ್ಚೆಯನ್ನು ಮಾಡಿ ಒಂದು ಹೊಸ ವ್ಯವಸ್ಥೆಯನ್ನು ಮಾಡಬೆಕಾಗುತ್ತದೆ. ಕೇವಲ 24 ದಿವಸಗಳ ಹಿಂದೆ ಹುಟ್ಟಿದಂತಹ ಈ ಸರ್ಕಾರವಿದು, ಇವತ್ತು ಹನ್ನೊಂದರಿಂದ ಹನ್ನೆರಡು ಜನ ರೈತರು ಮಾಡಿಕೊಂಡಿರುವಂತಹ ಆತ್ಮಹತ್ಯೆಯನ್ನು ಸರ್ಕಾರದ ತಲೆಗೆ ಕಟ್ಟುವಂತಹ ಪ್ರಯತ್ನ ಏನು ನಡೆದಿದೆ, ಇದು ಅತ್ಯಂತ ಖಂಡನೀಯ ಏಕೆಂದರೆ, ಇದು ರಸಗೊಬ್ಬರ ಸಮಸ್ಯೆ ಇರಬಹುದು, ರೈತರ ಆತ್ಮಹತ್ಯೆ ಸಮಸ್ಯೆ ಇರಬಹುದು, ಇದು ಕರ್ನಾಟಕ ರಾಜ್ಯದೊಂದೇ ಸಮಸ್ಯೆ ಅಲ್ಲ. ಇವತ್ತು ಮಹಾರಾಷ್ಟ್ರದಲ್ಲೂ, ಆಂಧ್ರ ಪ್ರದೇಶದಲ್ಲೂ ರಸಗೊಬ್ಬರ ಸಿಕ್ಕಿಲ್ಲ ಎನ್ನುವ ಕೂಗಿದೆ. ಆಂಧ್ರ, ಮಹಾರಾಷ್ಟ್ರ, ಬಿಹಾರ ಹೀಗೆ ಅನೇಕ

ರಾಜ್ಯಗಳಲ್ಲಿ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿರುವಂತಹ ಸುದ್ದಿಯನ್ನು ನಾವು ಪತ್ರಿಕೆಯಲ್ಲಿ ಓದುತ್ತೇವೆ. ಈ ರೈತರ ಆತ್ಮಹತ್ಯೆ ನಿಲ್ಲಬೇಕೆಂದರೆ ಇಡೀ ರಾಷ್ಟ್ರದಲ್ಲಿ ಒಂದು ಹೊಸ ಕೃಷಿ ನೀತಿ ಜಾರಿಗೆ ಬರಬೇಕು. ರೈತ ಯಾವ ಬೆಳಯನ್ನು ಉತ್ಪಾದನೆ ಮಾಡುತ್ತಾನೆ, ಆ ಬೆಳೆಗೆ ಬೆಲೆಯನ್ನು ಕಟ್ಟುವಂತಹ ಹಕ್ಕನ್ನು ಕೂಡ ರೈತನಿಗೆ ಕೊಡಬೇಕು ಎನ್ನುವುದು ಬೇಡಿಕೆ ಇವತ್ತು ಇದೆ. ಯಾವುದೇ ಒಂದು ವಸ್ತುವನ್ನು ಉತ್ಪಾದನೆಯನ್ನು ಮಾಡಿದಂತಹ ಉತ್ಪಾದಕ ಮಾರುಕಟ್ಟೆಯಲ್ಲಿ ಅದಕ್ಕೆ ಬೆಲೆಯನ್ನು ಯಾವ ರೀತಿ ಕಟ್ಟುತ್ತಾನೋ ಆ ರೀತಿ ರೈತ ಬೆಳದಂತಹ ಬೆಳೆಗೆ ತನ್ನ ಪರಿಶ್ರಮಕ್ಕೆ ತನ್ನ ಬೆವರಿನ ಬೆಲೆಯನ್ನು ಅವನೇ ಕಟ್ಟುವಂತಹ ಒಂದು ಹೊಸ ಕೃಷಿ ನೀತಿ ಈ ದೇಶದಲ್ಲಿ ಬರಬೇಕಾಗಿದೆ. ಇವತ್ತು ರೈತ ಪರಿಶ್ರಮ ಪಟ್ಟು ಏನು ಬೆಳೆಯನ್ನು ಬೆಳೆಯುತ್ತಾನೆ, ಈ ದೇಶದಲ್ಲಿ ಸ್ವಾತಂತ್ರ್ಯ ಬಂದ ನಂತರ ರೈತ ಬೆಳೆದಂತಹ ಬೆಳೆಗೆ ಇನ್ಯಾರೋ ಅದರಲ್ಲಿ ಲಾಭ ಪಡೆದು ದೊಡ್ಡವರಾಗುತ್ತಾ ಬಂದಿದ್ದಾರೆ. ಅದಕ್ಕೆ ಹಿಂದಿಯಲ್ಲಿ "ಮೆಹನತ್‌ಕೆಯಾ ಮುರ್‌ಗಿನೆ ಅಂಡಕಾಯ ಫಕೀರ್‌ನೆ" ಎಂದು ಒಂದು ಗಾದೆ ಮಾತು ಬರುತ್ತದೆ. ಆ ರೀತಿ ಇವತ್ತು ರೈತರ ಶ್ರಮ ವ್ಯರ್ಥವಾಗುವಂತಹ ಪರಿಸ್ಥಿತಿ ಇಲ್ಲಿ ಇದೆ. ಈ ಒಂದು ಸಂದರ್ಭದಲ್ಲಿ ರೈತನ ಆತ್ಮಹತ್ಯೆ ನಿಲ್ಲಬೇಕೆಂದರೆ ನಾವು ವಿಶೇಷವಾಗಿ ರೈತನಿಗೆ ಹೊಸ ಹೊಸ ಯೋಜನೆಗಳನ್ನು ಜಾರಿಗೆ ತರಬೇಕಾಗುತ್ತದೆ. ಈ ಹಿಂದೆ ಸರ್ಕಾರ ಡಾ॥ ಜಿ.ಕೆ. ವೀರೇಶ್ ಎನ್ನುವವರ ಒಂದು ಉನ್ನತ ಮಟ್ಟದ ತಜ್ಞರ ಸಮಿತಿಯನ್ನು 2001ರಲ್ಲಿ ರಚನೆ ಮಾಡಿತ್ತು. ಅದರ ವರದಿ ಕೂಡ ಸರ್ಕಾರದ ಮುಂದಿದೆ. ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಬರತಕ್ಕಂಥ ಕಾರಣಗಳು ಮತ್ತು ಆತ್ಮಹತ್ಯೆಯನ್ನು ತಡೆಯಬೇಕಾದರೆ ಏನೇನು ಮಾಡಬೇಕು ಎನ್ನುವ ಕೆಲವು ಅಂಶಗಳನ್ನು ಆ ವರದಿಯಲ್ಲಿ ಕೊಟ್ಟಿದ್ದಾರೆ. ಆ ವರದಿ ಸ್ವೀಕಾರಕ್ಕೆ ಅರ್ಹ ಇದೆಯೋ, ಇಲ್ಲವೋ ಎನ್ನುವ ಚರ್ಚೆ ಈ ಸಂದರ್ಭದಲ್ಲಿ ಬೇಡ. ಆದರೆ ಒಟ್ಟಾರೆ ಇವತ್ತು ಸಾಲದಿಂದ ಸಾಯುತ್ತಿರುವಂತಹ ರೈತನಿಗೆ ಅವನು ಪುನಃ ಸಾಲಗಾರನಾಗಬಾರದು ಎನ್ನುವ ದೃಷ್ಟಿಯಲ್ಲಿ ಯೋಚನೆ ಮಾಡಬೇಕಾಗಿದೆ. ಇಡೀ ದೇಶದಲ್ಲಿ ಈ ರಾಸಾಯನಿಕ ಗೊಬ್ಬರದ ಅತಿಯಾದ ಬಳಕೆಯಿಂದ ರೈತ ಈ ರೀತಿ ಸಾಲಗಾರನಾಗಿ, ಸಾಲಕ್ಕೆ ಹೆದರಿ ಸ್ವಾಭಿಮಾನಿ ರೈತ ಆತ್ಮಹತ್ಯೆ ಮಾಡಿಕೊಳ್ಳುವಂತಹ ದಾರಿಯನ್ನು ಹಿಡಿದಿದ್ದಾನೆ ಎಂದರೆ ತಪ್ಪಿಲ್ಲ. ಅದರಿಂದ ನನ್ನದೊಂದು ವೈಯಕ್ತಿಕ ವಿಚಾರವೇನೆಂದರೆ ಅತಿಯಾದ ರಾಸಾಯನಿಕ ಗೊಬ್ಬರ ಹಾಗೂ ಅತಿಯಾದ ನೀರಿನ ಬಳಕೆಯನ್ನು ಕಡಿಮೆ ಮಾಡಿಸಿ, ವಿಶೇಷವಾದ ತರಬೇತಿಯನ್ನು ರೈತರಿಗೆ ಕೊಟ್ಟು, ರೈತರು ಸಂಪೂರ್ಣವಾಗಿ ಸ್ವಾವಲಂಬಿಯಾಗಿ ಜೀವನ ಮಾಡುವಂತಹ, ಅದರಲ್ಲೂ ಶೂನ್ಯ

ಬಂಡವಾಳದ ಕೃಷಿ ಬಗ್ಗೆ ಇಡೀ ರೈತ ಸಮುದಾಯಕ್ಕೆ ಒಂದು ತರಬೇತಿಯನ್ನು ಕೊಡಬೇಕೆಂದು ನನ್ನ ಇಚ್ಛೆ ಇದೆ. ಏಕೆಂದರೆ ಇವತ್ತು ಹಲವು ಹಿರಿಯ ಸದಸ್ಯರು ಇಲ್ಲಿ ಸಾವಯವ ಕೃಷಿ ಬಗ್ಗೆ ಹೇಳುತ್ತಾ, ಬೇವಿನ ಹಿಂಡಿ, ಮತ್ತೊಂದು ಖರೀದಿ ಮಾಡಿ ಹಾಕಬೇಕು ಎಂದು ಹೇಳಿದರು. ಅದೂ ಕೂಡ ಇವತ್ತು ದುಬಾರಿಯಾಗುತ್ತದೆ. ರಾಸಾಯನಿಕ ಗೊಬ್ಬರ ರೈತನಿಗೆ ಯಾವ ರೀತಿ ದುಬಾರಿಯೋ ಅದೇ ರೀತಿ ಸಾವಯವ ವಸ್ತುಗಳ ಖರೀದಿ ಕೂಡ ದುಬಾರಿಯಾಗುತ್ತದೆ. ಹೀಗಾಗಿ ದೇಶಿಯ ಗೋವಿನ ಆಧಾರದ ಮೇಲೆ ಕೃಷಿಯನ್ನು ಮಾಡಬೇಕು. ನಮ್ಮ ದೇಶದ ಕೃಷಿ ಗೋವು ಆಧಾರಿತ ಕೃಷಿ, ದೇಸಿಯ ಆಕಳುಗಳ ಮೂತ್ರ ಮತ್ತು ಸಗಣಿಯನ್ನು ಬಳಸಿ ಜೀವಾಮೃತವನ್ನು ತಯಾರು ಮಾಡಿ, ಆ ಜೀವಾಮೃತದ ಮೂಲಕ ರೈತರು ಬೆಳೆಯನ್ನು ಬೆಳೆದರೆ ಬಹುಶಃ ರಾಸಾಯನಿಕ ಗೊಬ್ಬರದ ಅವಶ್ಯಕತೆ ಬರುವುದಿಲ್ಲ ಮತ್ತು ನಮ್ಮ ಭೂಮಿಯ ಫಲವತ್ತತೆಯನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಹೀಗಾಗಿ ಈ ಒಂದು ರಾಸಾಯನಿಕ ವಸ್ತುವಿನ ಬಳಕೆ ತಡೆಯುವಂತಹ ಪ್ರಯತ್ನ ಕೂಡ ನಡೆಯಬೇಕು. ಕೃಷಿಯ ಬಗ್ಗೆ ಒಬ್ಬ ಚಿಂತಕ, ರಾಸಾಯನಿಕದ long form ಅಂದರೆ ರೈತರನ್ನು ಸಾಯಿಸಿ ಯಮದೂತನೆಡೆಗೆ ಕೊಂಡೊಯ್ಯುವ ವಸ್ತು ಎಂದು ಹೇಳುತ್ತಾನೆ. ಈ ರಾಸಾಯನಿಕ ವಸ್ತುಗಳ ಬಳಕೆಯನ್ನು ಕಡಿಮೆ ಮಾಡುತ್ತಾ, ಈ ಸಾವಯವ ಕೃಷಿಯ ಬಗ್ಗೆ ಜನರಲ್ಲಿ ಜಾಗೃತಿಯನ್ನು ಉಂಟು ಮಾಡುವುದರಿಂದ ಭೂಮಿಯ ಫಲವತ್ತತೆಯೂ ಕೂಡ ಹೆಚ್ಚುತ್ತದೆ ಮತ್ತು ಒಳ್ಳೆಯ ಆಹಾರವನ್ನು ದೇಶಕ್ಕೆ ಮತ್ತು ಜನತೆಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆ ಹಿನ್ನೆಲೆಯಲ್ಲಿ ಇವತ್ತು ಈ ಬಗ್ಗೆ ವಿಶೇಷವಾದ ಚಿಂತನೆ ನಡೆಯಬೇಕು. ಕರ್ನಾಟಕ ರಾಜ್ಯದಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರದ ಕೊರತೆ ಆದಾಗ, ಅದರಿಂದ ಕರ್ನಾಟಕ ಸರ್ಕಾರದ ಮೇಲೆ ಗೂಬೆ ಕೂರಿಸುವಂಥ ಪ್ರಯತ್ನ ಏನು ನಡೆಯುತ್ತದೆ, ಇದು ಸರಿಯಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ರೈತರಿಗೆ ಮುಂದೆ ಬರುವಂಥ ಮಳೆಗಾಲದಲ್ಲಿ ಮಳೆಯಾದ ನಂತರ ಬೇಕಾಗುವಂಥ ಬಿತ್ತನೆ ಬೀಜ ಮತ್ತು ರಸಗೊಬ್ಬರ, ಇತ್ಯಾದಿಗಳ ಬಗ್ಗೆ ಸರ್ಕಾರ ಸಕಾಲದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಂಡು ರೈತರಿಗೆ ವ್ಯವಸ್ಥೆಯನ್ನು ಮಾಡುತ್ತದೆನ್ನುವಂಥ ಭರವಸೆಯೊಂದಿಗೆ ನಾನು ಇಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ತಮಗೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ವಿ. ರಾಮಚಂದ್ರಪ್ಪ (ಜಗಳೂರು) : ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಸದನಕ್ಕೆ ಹೊಸ ಸದಸ್ಯನಾಗಿದ್ದು, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಗೋಲಿಬಾರ್‌ನ ವಿಚಾರವಾಗಿ ತಮ್ಮ ಹಿರಿಯ ನಾಯಕರು ಹಾಗೂ ವಿರೋಧಪಕ್ಷದ ನಾಯಕರು ಆದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಸದನದ ಗಮನಕ್ಕೆ ತಂದಿದ್ದಾರೆ. ಅದೇ ರೀತಿಯಲ್ಲಿ ಬಹಳ ಜನ ನನ್ನ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಕಳೆದ ಬಾರಿ ಮಾನ್ಯ ಬಂಡೆಪ್ಪ ಕಾಶೆಂಪೂರ್‌ರವರು ಕೃಷಿ ಸಚಿವರಾಗಿದ್ದಾಗ, ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಸುಮಾರು 75% ಬಿತ್ತನೆ ಬೀಜಕ್ಕೆ ಸಹಾಯ ಧನವನ್ನು ಕೊಟ್ಟಿದ್ದರು. ಈಗ 50% ಕೊಟ್ಟಿದ್ದಾರೆ. ಅದರ ಬಗ್ಗೆ ಬಹಳ ಜನ ಶಾಸಕರು ಮಾತನಾಡಿದ್ದಾರೆ. ಆದರೆ ಕಳೆದ ಬಾರಿ 97 ಕೋಟಿ ರೂಪಾಯಿಗಳನ್ನು ಸಹಾಯಧನವಾಗಿ ಕೊಟ್ಟಿದ್ದರು. ಈಗ ಈ ಸರ್ಕಾರ ರೈತರಿಗೆ ನೋವು ಉಂಟು ಮಾಡಿದೆ. ಅವರಿಗೆ ಸಾಂತ್ವನ ಹೇಳುವುದಕ್ಕೆ ಇನ್ನು ಕಾಲಾವಕಾಶ ಬಹಳ ಇದೆ. ಆದುದರಿಂದ 100% ಬಿತ್ತನೆ ಬೀಜವನ್ನು freeಯಾಗಿ ಕೊಡಬೇಕೆಂದು ವಿನಂತಿಸುತ್ತೇನೆ. ಇದರಿಂದ ಸರ್ಕಾರಕ್ಕೆ ಕೇವಲ 25 ಕೋಟಿ ರೂಪಾಯಿಗಳಿಂದ 37 ಕೋಟಿ ರೂಪಾಯಿಗಳ ಹೊರೆ ಬೀಳಬಹುದು. ಮಾನ್ಯ ಕೃಷಿ ಸಚಿವರು ಸದನದಲ್ಲೇ ಇದ್ದಾರೆ. ಇನ್ನು ಮುಂಗಾರು ಈಗ ಪ್ರಾರಂಭವಾಗಿದೆ, ರೈತರಿಗೆ ಇನ್ನೂ ಅವಕಾಶವಿದೆ. ಆದುದರಿಂದ ಅವರಿಗೆ ಬೀಜವನ್ನು free ಆಗಿ ಕೊಡಬೇಕೆಂದು ತಮ್ಮನ್ನು ವಿನಂತಿಸುತ್ತೇನೆ, ಮತ್ತೆ ನಾನು ಸಹಿತ ಕರ್ನಾಟಕ ರಾಜ್ಯ ಬೀಜ ಮತ್ತು ಮಾರಾಟಗಾರರ ಸಂಘದ ಅಧ್ಯಕ್ಷನಾಗಿದ್ದೇನೆ. ಬಿತ್ತನೆ ಬೀಜ ಸರಬರಾಜಿನ ಬಗ್ಗೆ ನನಗೂ ಬಹಳ ಕಳಕಳಿ ಇದೆ, ಕಾಳಜಿ ಇದೆ. ಕೆಲವೊಂದು ಮಧ್ಯವರ್ತಿಗಳ ಮುಖಾಂತರ ಸರಿಯಾದ ರೀತಿಯಲ್ಲಿ ರೈತರಿಗೆ ಬಿತ್ತನೆ ಬೀಜ ತಲುಪುತ್ತಿಲ್ಲ. ಕಳೆದ ಬಾರಿ ಕೃಷಿ ಆಯುಕ್ತರು ಕೆಲವು ಕಂಪನಿಗಳು ಸರಬರಾಜು ಮಾಡಿದಂಥವರನ್ನು de-list ನಲ್ಲಿ ಸೇರಿಸಿ ಅವರನ್ನು ಹೊರಗಟ್ಟಿದ್ದಾರೆ. ಅವರಿಗೆ ಇನ್ನು payment ಮಾಡಿಲ್ಲ. ಅದನ್ನು ಮುಂದುವರೆಸಿಕೊಂಡು ಈ ಬಾರಿಯೂ ಉತ್ತಮವಾಗಿ ರೈತರಿಗೆ ಬಿತ್ತನೆ ಬೀಜ ತಲುಪುವಂತೆ ನೋಡಿಕೊಳ್ಳಬೇಕೆಂದು ನನ್ನ ವಿನಂತಿಯಾಗಿದೆ. ನಾನು ಜಗಳೂರು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದೇನೆ. ನನ್ನ ಕ್ಷೇತ್ರ ಬಹಳ ಹಿಂದುಳಿದಿರುವಂಥ ಕ್ಷೇತ್ರವಾಗಿದೆ. ಯಾವಾಗಲೂ ಬರಗಾಲದಿಂದ ಬಳಲುತ್ತಿರುವಂಥ ಜನರು ಅಲ್ಲಿ ಇದ್ದಾರೆ. ಅವರಿಗೆ ಸರಿಯಾದ ಗೊಬ್ಬರ ಮತ್ತು ಬಿತ್ತನೆ ಬೀಜ ಸಿಗುತ್ತಿಲ್ಲ. ಇಲ್ಲಿ ಮಳೆ ಕಾಣದ ಈ ಜಾಗದಲ್ಲಿ ಈಗ ಅಪರೂಪಕ್ಕೊಮ್ಮೆ ಮಳೆ

ಬಂದಿದೆ. ದಯಮಾಡಿ ಮಾನ್ಯ ಕೃಷಿ ಸಚಿವರು, ಮಾನ್ಯ ಮುಖ್ಯಮಂತ್ರಿಯವರು ಬಿತ್ತನೆ ಬೀಜ, ಗೊಬ್ಬರ ಮತ್ತಿತರ ಸಾಮಗ್ರಿಗಳನ್ನು ಸರಿಯಾಗಿ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ರೈತರ ಆತ್ಮಹತ್ಯೆ ಬಗ್ಗೆ, ರೈತರ ಜೀವಗಳ ಬಗ್ಗೆ ನಾನು ಒಂದು ಸಣ್ಣ ಉಪಕತೆಯನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನನ್ನ ಜಗಳೂರು ಅಂಥ ಕ್ಷೇತ್ರಕ್ಕೆ ದೈವ ಸಂಭೂತರಾದ ಒಬ್ಬ ಮುನಿಗಳು ಗ್ರಾಮಕ್ಕೆ ಬರುತ್ತಾರೆ. ಆಗ ಎಲ್ಲಾ ಜನರು ಭಕ್ತಿ ಪರವಶದಿಂದ ಅವರು ಏನು ಕೇಳುತ್ತಾರೋ, ಅವರಿಗೆಲ್ಲಾ ಆ ಸ್ವಾಮಿಗಳು ಸಾಧ್ಯವಾದಷ್ಟು ವರಗಳನ್ನು ಕೊಡುತ್ತಿರುತ್ತಾರೆ. ಜನರ ನೂಕು ನುಗ್ಗಲು ಆಗುತ್ತಿರುತ್ತದೆ. ಆಗ ನಮ್ಮ ಸಿ.ಟಿ. ರವಿಯಂಥ ಚಾಣಾಕ್ಷರು, ಬುದ್ಧಿವಂತರು ಆದ ಒಬ್ಬ ಹುಡುಗನು ಬರುತ್ತಾರೆ. ಅವನು ಒಂದು ಗಿಳಿಯನ್ನು ಸ್ವಾಮಿಯ ಬಳಿಗೆ ಹಿಡಿದುಕೊಂಡು ಬರುತ್ತಾರೆ. ಅವನು ಸ್ವಾಮಿಗಳ ಬಳಿಗೆ ಬಂದು, ಸ್ವಾಮಿಗಳೇ ನನ್ನ ಕೈಯಲ್ಲಿ ಒಂದು ಗಿಳಿ ಇದೆ, ಅದು ಸತ್ತಿದೆಯೋ, ಬದುಕಿದೆಯೋ, ಎಂಬುದನ್ನು ಹೇಳಬೇಕೆಂದು ಕೇಳುತ್ತಾನೆ. ಆಗ ಆ ಮುನಿಗಳಿಗೆ ಬಹಳ ಸಂಕಟವಾಗುತ್ತದೆ. ಇವನು ಗಿಳಿಯನ್ನು ಹಿಡಿದುಕೊಂಡಿದ್ದಾನೆ. ನಾನು ಬದುಕಿದೆಯೆಂದರೆ, ಅವನು ಕತ್ತು ಹಿಡಿದು ಸಾಯಿಸುತ್ತಾನೆ. ನಾನು ಸತ್ತಿದೆಯೇಂದರೆ ಅದನ್ನು ಜೀವಂತವಾಗಿ ಹಾರಿ ಬಿಡುತ್ತಾನೆ. ನಾನು ಇವನಿಗೆ ಹೇಗೆ ಹೇಳುವುದು ಅಂದುಕೊಳ್ಳುತ್ತಾ, ಕೊನೆಗೆ ಮುನಿಗಳು ಹೇಳುತ್ತಾರೆ, ನೋಡಪ್ಪಾ, ಆ ಜೀವ ನಿನ್ನ ಕೈಯಲ್ಲಿದೆ. ಅದನ್ನು ಕಾಪಾಡುವುದು, ಬಿಡುವುದು, ನಿನ್ನ ಕೈಯಲ್ಲಿದೆ ಎಂದರು. ಅದೇ ರೀತಿಯಲ್ಲಿ ಈ ರೈತರೆಲ್ಲರ ಜೀವ ನಿಮ್ಮ ಸರ್ಕಾರದ ಕೈಯಲ್ಲಿದೆ, ಮಾನ್ಯ ಮುಖ್ಯಮಂತ್ರಿಯವರ ಕೈಯಲ್ಲಿದೆ. ಆದುದರಿಂದ ಆ ಜೀವಕ್ಕೆ ಜೀವವನ್ನು ತುಂಬುವುದು ನಿಮ್ಮ ಕೈಯಲ್ಲಿದೆ. ಆದುದರಿಂದ ಮಣ್ಣಿನ ಮಕ್ಕಳ ಬಗ್ಗೆ ಕಾಳಜಿಯನ್ನು ಕೊಡಿ, ಅವರಿಗೆ ಸಹಾಯವನ್ನು ಮಾಡಿ, ನೀವು ಮಣ್ಣಿನ ಮಕ್ಕಳೆಂದರೆ, ಬಳ್ಳಾರಿ ಗಣಿಗಳ ಹತ್ತಿರ ಹೋಗಿ ಬಿಡಬೇಡಿ, ಅವರಲ್ಲ, ನಮ್ಮ ನಿಜವಾದ ರೈತ ಮಕ್ಕಳು ಕರ್ನಾಟಕ ಜನತೆ, ಇವರಿಗೆ ಸರ್ಕಾರದಿಂದ ಕೊಡಬೇಕಾದ ಸವಲತ್ತುಗಳನ್ನು ಕೊಡಿ. ಗೋಲಿಬಾರ್, ಲಾಠಿ ಚಾರ್ಜ್ ಇಂಥಾದ್ದನ್ನು ನಿಲ್ಲಿಸಿ. ನಮ್ಮ ರೈತರನ್ನು ಕಾಪಾಡಿಯೆಂದು, ನಾನು ಈ ಸದನದಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು) : ಸನ್ಮಾನ್ಯ ಅಧ್ಯಕ್ಷರೆ, ನಾನು ಮೊದಲ ಬಾರಿಗೆ ಶಾಸಕನಾಗಿ ಆಯ್ಕೆಯಾಗಿದ್ದು, ನನಗೆ ಮಾತನಾಡಲು ಅವಕಾಶ

ಕೊಟ್ಟಿದ್ದಕ್ಕಾಗಿ ತಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸದನದಲ್ಲಿ ನಿನ್ನೆಯಿಂದ ರೈತರಿಗೆ ಗೊಬ್ಬರ ಮತ್ತು ಬಿತ್ತನೆ ಬೀಜಗಳ ಪೂರೈಕೆಯಲ್ಲಿ ಆಗಿರುವಂಥ ಅಸ್ತವ್ಯಸ್ಥತೆ ಹಾಗೂ ರೈತರ ಮೇಲೆ ಆಗಿರುವ ಗೋಲಿಬಾರ್‌ನ ವಿಷಯವಾಗಿ ಬಹಳಷ್ಟು ಚರ್ಚೆಗಳು ನಡೆದಿದೆ. ಹಾವೇರಿ ಜಿಲ್ಲೆಯಲ್ಲಿ ಈ ಘಟನೆ ನಡೆದು ಈಗಾಗಲೇ 15 ದಿವಸಗಳು ಕಳೆದಿದೆ. ಈ 15 ದಿವಸಗಳು ಕಳೆದರೂ ಎಲ್ಲಾ ವಿಷಯಗಳು ಇನ್ನು ನಿಚ್ಚಳವಾಗಿ ಗೊತ್ತಾಗಿಲ್ಲ. ಇಲ್ಲಿ ಏನಾಗಿದೆ ಎನ್ನುವುದರ ಬಗ್ಗೆ, ಎಲ್ಲವೂ ಅನುಮಾನಗಳು, ಎಲ್ಲರ ಸುತ್ತಲೂ ಸುತ್ತುತ್ತಾ ಇವೆ. ಒಂದೇ ಒಂದು ನಿಚ್ಚಳವಾಗಿರುವುದೇನೆಂದರೆ, 10ನೇ ತಾರೀಖಿನಂದು ಗೋಲಿಬಾರ್ ಆಗಿದೆಯೆನ್ನುವ ಸತ್ಯ ಮಾತ್ರ ಹೊರಗೆ ಬಂದಿದೆ. ಯಾವ ಸಮಯದಲ್ಲಿ ಆಗಿದೆಯೆಂಬುದರ ಬಗ್ಗೆಯೂ ಸಹ ಅನುಮಾನಗಳು ಇವೆ. ಕೆಲವರು 10 ಗಂಟೆಗೆ ಆಗಿದೆಯೆಂದು ಹೇಳುತ್ತಾರೆ. ಕೆಲವರು 12 ಗಂಟೆಗೆ ಆಗಿದೆಯೆಂದು ಹೇಳುತ್ತಾರೆ. ಇನ್ನು ಕೆಲವರು 3.30 ಗಂಟೆಗೆ ಆಗಿದೆಯೆಂದು ಹೇಳುತ್ತಾರೆ. ಅದನ್ನು ಯಾರು ಮಾಡಿದರೆಂಬ ಬಗ್ಗೆಯೂ ಕೂಡ ಅನುಮಾನಗಳು ಇವೆ. ಒಬ್ಬ ಅಧಿಕಾರಿ ನಮ್ಮ ರಕ್ಷಣೆಗೆ ನಾವು ಮಾಡಿದ್ದೇವೆಂದು ಹೇಳುತ್ತಾರೆ. ಇನ್ನೊಬ್ಬ ಅಧಿಕಾರಿ ಹೇಳುತ್ತಾರೆ, ಇಲ್ಲ, ಯಾವನೋ ಒಬ್ಬ ಗನ್ ಅನ್ನು ಕಸಿದುಕೊಂಡು ಹೊಡೆದ ಎಂದು ಹೇಳುತ್ತಾರೆ. ಅಂದರೆ ಗನ್ ಅನ್ನೇ ರಕ್ಷಣೆ ಮಾಡಿಕೊಳ್ಳುವುದಕ್ಕೆ ಆಗದೇ ಇರುವಂಥ ಪೊಲೀಸ್‌ನವರು ಇದ್ದಾರೆನ್ನುವುದಾದರೆ, ಜನರ ರಕ್ಷಣೆಯನ್ನು ನಾವು ಹೇಗೆ ನಿರೀಕ್ಷೆ ಮಾಡಬೇಕೆಂಬ ಅನುಮಾನಗಳು ಕೂಡ ಬರುತ್ತವೆ. ಅದು ಅಲ್ಲದೇ ಆವತ್ತು ಜಿಲ್ಲಾಧಿಕಾರಿಗಳು ಅಲ್ಲಿದ್ದರು, ಪೊಲೀಸ್ ವರಿಷ್ಠಾಧಿಕಾರಿಗಳು ಅಲ್ಲಿದ್ದರು. ಜಿಲ್ಲಾ ಮಂತ್ರಿಗಳು ಇದ್ದಾರೆನ್ನುವಂಥದ್ದು ಕೂಡ ನಡೆಯುತ್ತಿದೆ. ಇಲ್ಲಿ ಯಾರು ಎಲ್ಲಿದ್ದರು ಎಂಬ ಬಗ್ಗೆ ಇನ್ನು ನಿಶ್ಚಿತವಾಗಿ ಹೇಳುತ್ತಾ ಇಲ್ಲ. ಅಲ್ಲಿ ಗೋಲಿಬಾರ್‌ಗೆ ಯಾರು ಆದೇಶವನ್ನು ಕೊಟ್ಟರು, ಎಂಬುದು ಕೂಡ ಇನ್ನು ಅನುಮಾನ ಇದೆ. ಎಲ್ಲಾ ಅನುಮಾನದಲ್ಲೇ ಇದೆ, ಒಂದೇ ಒಂದು ವಿಚಾರ ಗೊತ್ತಾಗಿರುವುದೆಂದರೆ 10ನೇ ತಾರೀಖಿನಂದು ಗೋಲಿಬಾರ್ ಆಗಿರುವುದಷ್ಟೆ ಎಲ್ಲರಿಗೂ ಗೊತ್ತಾಗಿದೆ. ಉಳಿದ ಎಲ್ಲಾ ವಿಷಯಗಳು ಅನುಮಾನವಾಗಿದ್ದು, ಸುತ್ತುವರಿಯುತ್ತಿದೆ. ಯಾರು ಎಲ್ಲಿದ್ದರು ? ಅದು ಏಕೆ ಆಗುತ್ತಿದೆ ? ಇದುವರೆಗೂ ಇದು ಆಗಿ 15 ದಿವಸಗಳು ಕಳೆದಿದ್ದರೂ ನಿಶ್ಚಿತವಾಗಿ ಇದು ಮಾಡಿದ್ದಾರೆ, ಇವರು ಮಾಡಿದ್ದಾರೆಂಬುದು ಗೊತ್ತಾಗಿಲ್ಲ. ಇದು ಏಕೆ ಆಗುತ್ತಿದೆಯೆಂಬ ಬಗ್ಗೆ ತಾವು ಯೋಚನೆ ಮಾಡಬೇಕು. ನಾವು ಇವತ್ತು ಇಲ್ಲಿ ಒಬ್ಬರನ್ನು ಒಬ್ಬರು ದೂಷಣೆ ಮಾಡುವುದು ಅಥವಾ ಇದಕ್ಕೆ ಸರ್ಕಾರವೇ ಜವಾಬ್ದಾರಿ, ಸರ್ಕಾರವೇ ಮಾಡಿದೆಯೆಂದು ನಾನು ಹೇಳುವುದಕ್ಕೆ

ಹೋಗುವುದಿಲ್ಲ, ಏಕೆಂದರೆ ಯಾವ ಸರ್ಕಾರ ಕೂಡ ರೈತನನ್ನು ಕೊಲ್ಲಬೇಕೆಂದು ಹೇಳುವುದಿಲ್ಲ. ಆದರೆ ಈ ಘಟನೆ ನಡೆದಿದ್ದು ಅಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಈ ಘಟನೆ ನಡೆದಿದೆ, ಈ ಘಟನೆ ಮುಂದೆ ನಡೆಯಬಾರದೆಂಬ ಬಗ್ಗೆ ಅರ್ಥ ಪೂರ್ಣ ಚರ್ಚೆಗಳು ಇಲ್ಲಿ ಆಗಬೇಕಾಗಿದೆ. ಇವತ್ತು ಆ ಘಟನೆ ನಡೆಯುವುದಕ್ಕೆ ಏನು ಕಾರಣವೇನು ಎನ್ನುವ ಎಂಬ ಬಗ್ಗೆ ಕೂಡ ನಾವು ಯೋಚನೆ ಮಾಡಬೇಕು. ಇವತ್ತು ಹೋರಾಟಗಳನ್ನು ಮಾಡುತ್ತಿದ್ದೇವೆ. ಈ ಹೋರಾಟಗಳು ಅರ್ಥಪೂರ್ಣ ಹೋರಾಟಗಳಲ್ಲ, ಏಕೆ ಹೋರಾಟ ಮಾಡುತ್ತೇವೆಂಬುದು ನನಗೂ ಗೊತ್ತಿಲ್ಲ. ನನ್ನ ಆನಿಸಿಕೆಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೋರಾಟ ಬತ್ತಳಿಕೆಯ ಕೊನೆಯ ಬಾಣವಾಗಬೇಕು. ಆದರೆ ಅದನ್ನು ನಾವೆಲ್ಲರೂ ಕುಡ cheap popularityಗೆ ನಮ್ಮ ಮೊದಲನೆಯ ಬಾಣವಾಗಿ ಬಳಸುತ್ತಿದ್ದೇವೆ. ಮೊನ್ನೆ ಒಂದು ಘಟನೆ ನಡೆಯಿತು. ಪೆಟ್ರೋಲ್ ಬೆಲೆ, ಡೀಸೆಲ್ ಬೆಲೆ ಇಳಿಸುವುದಕ್ಕೆ ಒಂದು ಹೋರಾಟವನ್ನು ಮಾಡಿದ್ದಾರೆ. ಅಲ್ಲಿಗೆ ಹೋಗಿ ಒಂದು Memorandum ಕೊಟ್ಟರು. ಆ Memorandum ಕೊಟ್ಟ ತಕ್ಷಣ ಪೆಟ್ರೋಲ್ ಬೆಲೆ, ಡೀಸಲ್ ಬೆಲೆ ಇಳಿಯುತ್ತದೆಯೇ ? ಇಳಿಯುವುದಿಲ್ಲ ಎಂದು ಎಲ್ಲರಿಗೂ ಗೊತ್ತಿದೆ. ಆದರೂ ಇದು ನಡೆದಿದೆ. ಇದು ನಡೆಯದಿದ್ದರೆ ಈ ಘಟನೆ ಆಗುತ್ತಿತ್ತೇ ಎನ್ನುವ ಬಗ್ಗೆ ಸ್ವಲ್ಪ ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ನಾವು ಮುಂದಾಲೋಚನೆ ಇಲ್ಲದೆ, ನಾಯಕತ್ವವನ್ನು ವಹಿಸಿಕೊಂಡು ಏನಾದರೂ ಮಾಡುವುದಕ್ಕೆ ಹೋದರೆ ಇಂಥ ಘಟನೆಗಳು ನಡೆಯುತ್ತವೆ. ಆವತ್ತು ಅದನ್ನು ಕೊಡುವ ಅವಶ್ಯಕತೆ ಇತ್ತೇ ? ಅದನ್ನು ಮಾಡದೇ ಇದ್ದಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ. ಅಲ್ಲಿ ಸ್ಥಳೀಯ ನಾಯಕರು ಅಥವಾ ಸ್ಥಳೀಯ ಶಾಸಕರು, ಜನ ಪ್ರತಿನಿಧಿಗಳಿದ್ದರು ಎನ್ನುವ ಕಾರಣದಿಂದ ರೈತರು ಅಲ್ಲಿಗೆ ಹೋಗಿ ನೀವು ಅದರ ಬಗ್ಗೆ ನೋಡುತ್ತಿದ್ದೀರಿ, ನಮಗೆ ರಸಗೊಬ್ಬರ ಇಲ್ಲ ಎಂದು ಕೇಳುವುದಕ್ಕೆ ಹೋಗಿದ್ದಾರೆ. ಹೀಗೆ ಕೇಳುವುದಕ್ಕೆ ಹೋದ ಹಿನ್ನೆಲೆಯಲ್ಲಿ ಗಲಾಟೆ ಪ್ರಾರಂಭವಾಗಿದೆ, ಈ ಘಟನೆಯಾಗಿದೆ. ಒಂದು ವೇಳೆ ನೀವು ಆ strike ಅನ್ನು ಮಾಡದಿದ್ದರೆ ಈ ಘಟನೆ ನಡೆಯುತ್ತಲೇ ಇರಲಿಲ್ಲ. ಇವತ್ತು ನಾನು ಒಂದು ಹೆಜ್ಜೆ ಮುಂದೆ ಹೋಗಿ ಮಾತನಾಡಬೇಕಾಗುತ್ತದೆ. ಇವತ್ತು ಮತ್ತೆ ಬಿ.ಜೆ.ಪಿ ಯವರು ರಾಜ್ಯಾದ್ಯಂತ ರಸಗೊಬ್ಬರದ ಬಗ್ಗೆ ಹೋರಾಟವನ್ನು ಪ್ರಾರಂಭ ಮಾಡಿದ್ದಾರೆ. ನಾಳೆ ಇನ್ನೊಂದು ಇಂಥ ಘಟನೆ ನಡೆಯಬೇಕು ಎನ್ನುವ ಉದ್ದೇಶ ನಿಮಗಿದೆಯೇ, ಹೇಗೆ ? ಏಕೆಂದರೆ, ನೀವು ಅಲ್ಲಿಗೆ ಹೋಗಿ ರಸಗೊಬ್ಬರಕ್ಕಾಗಿ strike ಮಾಡಿ ಒಂದು memorandum ಕೊಟ್ಟುಬಿಟ್ಟರೆ ರಸಗೊಬ್ಬರ ಸಿಗುತ್ತದೆ ಎನ್ನುವುದಾದರೆ ನಾವೂ ಸಹ

ನಿಮ್ಮ ಜೊತೆ ಬಂದುಬಿಡುತ್ತೇವೆ, ಇದು ಮುಗಿದು ಹೋಗಲಿ, ಕೊಡಿಸಿಬಿಡಿ, ಸಂತೋಷವಾದರೂ ಆಗುತ್ತದೆ. ನೀವು strike ಮಾಡುತ್ತೀರಿ. ಅಲ್ಲಿ ಜನ ಸೇರುತ್ತಾರೆ. ಗೊಬ್ಬರದ ಅಭಾವ ಇರುವುದರಿಂದ ಮತ್ತೆ ಜಾಸ್ತಿ ಜನ ಸೇರುತ್ತಾರೆ. ಸಾವಿರಾರು ಜನಸಂಖ್ಯೆ ಸೇರಿದಾಗ ಪರಿಸ್ಥಿತಿ ಕೈಮೀರಿ ಹೋದರೆ ಮತ್ತೆ ಇಂಥ ಘಟನೆ ಆಗುವುದಿಲ್ಲ ಎನ್ನುವುದಕ್ಕೆ ಏನು ಭರವಸೆ ? ಇಂಥ ಹೋರಾಟಗಳನ್ನು ಮಾಡುವ ಅವಶ್ಯಕತೆ ಇದೆಯೇ ಎನ್ನುವುದನ್ನು ನಾವೆಲ್ಲಾ ಈ ಸಭೆಯಲ್ಲಿ ಅತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ನಾವು ಯಾವುದೋ ಒಂದು cheap popularityಗೆ ಹೋಗುತ್ತಿದ್ದೇವೆ. ಅವರು, ಇವರು ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಯಾವುದೋ cheap popularity ಮಾಡುವುದರ ಉದ್ದೇಶವೇನು ? ಇವತ್ತು ಈ ರೀತಿ strike ಮಾಡಲು ಹೋಗುತ್ತಿರುವುದರ ಉದ್ದೇಶವೇನು? ಆ ಜವಾಬ್ದಾರಿ ನಮ್ಮದಲ್ಲ. ಆ ಜವಾಬ್ದಾರಿ ಇನ್ನೊಬ್ಬರ ಮೇಲಿದೆ ಎಂದು ತೋರಿಸುವುದಕ್ಕೋಸ್ಕರ ಎಲ್ಲ ಕಡೆಯಲ್ಲಿಯೂ strikeಗಳು ಪ್ರಾರಂಭವಾಗಿವೆ. ಆ strikeಗೆ ಮತ್ತೆ ಯಾರ್‍ಯಾರೋ ಜನರು ಸೇರುತ್ತಾರೆ. ಆ ರೀತಿ ಜನರು ಸೇರಿದ ಮೇಲೆ ಮತ್ತೆ ಇಂಥ ಘಟನೆ ಆಗುವುದಿಲ್ಲ ಎನ್ನುವುದು ಹೇಗೆ ? ನಾವು ಮುಂದಾಲೋಚನೆ ಇಲ್ಲದೇ ಏನಾದರೂ ಮಾಡಲು ಹೋದರೆ ಇಂಥ ಘಟನೆಗಳು ಮರುಕಳಿಸುತ್ತವೆ. ಇದರ ಬಗ್ಗೆ ಇವತ್ತು ಯೋಚನೆ ಮಾಡಬೇಕು. ಅದನ್ನು ಕೊಟ್ಟುಬಿಟ್ಟರೆ ಗೊಬ್ಬರ ಸಿಗುತ್ತದೆ ಎನ್ನುವುದಾದರೆ ಸರಿ. ಅಥವಾ ಅದರ ಬಗ್ಗೆ ನಮ್ಮದು ಜವಾಬ್ದಾರಿಯಿಲ್ಲ, ಅದು ಕೇಂದ್ರದ ಜವಾಬ್ದಾರಿ ಎಂದ ತಕ್ಷಣ ನಮ್ಮೆಲ್ಲರ ಜವಾಬ್ದಾರಿ ಮುಗಿಯಿತು ಎನ್ನುವುದಾದರೆ ಆ ಬಗ್ಗೆಯಾದರೂ ಒಂದು ತೀರ್ಮಾನಕ್ಕೆ ಬರಬೇಕಲ್ಲವೇ ? ಇವತ್ತು ಕೇಂದ್ರದವರು ಕೊಟ್ಟಿಲ್ಲವೆಂದರೆ ಮುಂದೇನು ಎನ್ನುವ ಬಗ್ಗೆ ಚರ್ಚೆಯಾಗಬೇಕಲ್ಲವೆ ? ಅಥವಾ ಗೊಬ್ಬರವನ್ನು ಕೊಡುವುದಿಲ್ಲ ಎನ್ನುವಂಥ ತೀರ್ಮಾನಕ್ಕಾದರೂ ಬರಬೇಕಲ್ಲವೇ ? ಇವತ್ತು ಇವರು ಗೊಬ್ಬರ ಇದೆಯೋ, ಇಲ್ಲವೋ ಎನ್ನುವುದನ್ನೂ ಸಹ ಸ್ಪಷ್ಟವಾಗಿ ಹೇಳುವುದಕ್ಕೆ ತಯಾರಿಲ್ಲ. ಮುಂದೆ ಗೊಬ್ಬರ ಬರುತ್ತದೋ, ಇಲ್ಲವೋ ಎನ್ನುವುದೂ ಸಹ ಎಲ್ಲರಿಗೂ ಅನುಮಾನವಾಗಿದೆ. ಏಕೆಂದರೆ, ಆಡಳಿತ ಪಕ್ಷದವರೇ ಹೋರಾಟ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ ಎಂದರೆ ಅದು ಬರುವುದಿಲ್ಲ ಎನ್ನುವುದು guarantee ಆಗುತ್ತದೆ. ಬರುತ್ತದೆ ಎನ್ನುವುದನ್ನಾದರೂ ಹೇಳಬೇಕು. ಇಲ್ಲದಿದ್ದರೆ, ಬರುವುದಿಲ್ಲ ಎನ್ನುವುದನ್ನಾದರೂ ತೀರ್ಮಾನ ಮಾಡಬೇಕಾಗುತ್ತದೆ. ನನಗೆ ಗೊತ್ತಿರುವ ಮಾಹಿತಿ ಪ್ರಕಾರ, ನಾವು ಏನು ನಿರೀಕ್ಷೆ ಮಾಡುತ್ತಿದ್ದೇವೆ, ಅಷ್ಟು ಗೊಬ್ಬರ ಸಿಗುವುದಕ್ಕೆ ಸಾಧ್ಯವಿಲ್ಲ. Manufacturing unitಗಳು ಬಂದ್ ಆಗಿರುವುದರಿಂದ DAP Production ಇಲ್ಲ. ಅದನ್ನು

ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಬರುತ್ತದೆ, ಬರುತ್ತದೆ ಎಂದು ಹೇಳುತ್ತಾ, ನೀವು ಸತ್ಯವನ್ನು ಬಹಳ ದಿನ ಮುಚ್ಚಿಟ್ಟರೆ ನಂತರ ಅದು ಹೊರಗೆ ಬಂದೇ ಬರುತ್ತದೆ. ಇವತ್ತು ಗಲಾಟೆಯಾಗುತ್ತದೆ ಎಂದು ಹೆದರಿ ನೀವು ಅದು ಬರುತ್ತದೆ, ಬರುತ್ತದೆ ಎಂದು ಹೇಳುತ್ತಾ ಮುಂದೆ ಹಾಕುವುದಕ್ಕೆ ಹೋದರೆ ನಾಳೆಯಾದರೂ ಗಲಾಟೆ ಆಗಿಯೇ ಆಗುತ್ತದೆ. ಇಲ್ಲವೆಂದರೆ, ಅದಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ಇವತ್ತು ಈ ಸದನದಲ್ಲಿ ಅರ್ಥಪೂರ್ಣ ಚರ್ಚೆಯಾಗಬೇಕು ಎಂದು ನಾನು ಬಯಸುತ್ತೇನೆ. ಇವತ್ತು ಏನಾಗಿದೆ ಎಂದರೆ ಮಳೆ ಇನ್ನೂ ಸಂಪೂರ್ಣವಾಗಿ ಬಂದಿಲ್ಲ. ಅಲ್ಲಲ್ಲಿ ಮಳೆ ಬಂದಿದ್ದಕ್ಕೇ ಈ ಪರಿಣಾಮವಾಗಿದೆ. ನಮ್ಮ ಕಡೆಯ ಪರಿಸ್ಥಿತಿ ಏನಿದೆ ಎಂದರೆ, ನಾಳೆ ಕಾಲುವೆಗಳು ಚಾಲೂ ಆಗುತ್ತವೆ. Command area ದಲ್ಲಿ ನೀರು ಇನ್ನೂ ಯಾವುದೇ ಕಾಲುವೆಗಳಲ್ಲೂ ಬಿಟ್ಟಿಲ್ಲ. ನಮ್ಮಲ್ಲಿ 5ನೇ ತಾರೀಖಿಗೆ ನೀರು ಬಿಡಲು ತೀರ್ಮಾನವಾಗಿದೆ. 5ನೇ ತಾರೀಖಿಗೆ ನೀರು ಬಂದರೆ, ಆ Command area ದಲ್ಲಿ ರಸಗೊಬ್ಬರಕ್ಕೆ ಎಷ್ಟು demand ಇದೆ ಎನ್ನುವುದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ನಮ್ಮ ರಾಯಚೂರು ಜಿಲ್ಲೆ ಒಂದಕ್ಕೇ ಈ ಟ್ಯಾರೀಫ್‌ಗೆ ಬೇಕಾಗಿರುವುದು 1,47,000 ಮೆಟ್ರಿಕ್ ಟನ್. 1,15,470 ಮೆಟ್ರಿಕ್ ಟನ್ ಬೇಕಾಗುತ್ತದೆ ಎಂದು easy allocation ಮಾಡಿದ್ದಾರೆ. ಇದು ಸರ್ಕಾರದ ಇಲಾಖೆಯವರೇ ಕೊಟ್ಟಿರುವ ಮಾಹಿತಿ, 1,47,000 ಮೆಟ್ರಿಕ್ ಟನ್ ಬರೇ ಒಂದು ಜಿಲ್ಲೆಗೆ ಬೇಕಾಗುತ್ತದೆ. ಅದರಲ್ಲೂ ವಿಶೇಷವಾಗಿ, ನಾನು ಪ್ರತಿನಿಧಿಸುವ ಸಿಂಧನೂರಿಗೆ 32,000 ಟನ್ ಬೇಕಾಗುತ್ತದೆ. ಹಾವೇರಿ ಜಿಲ್ಲೆಗೆ ಎಷ್ಟು ಬೇಕೋ, ಅಷ್ಟು ಗೊಬ್ಬರ ಒಂದೇ ಒಂದು command areaಗೆ ಬೇಕಾಗುತ್ತದೆ. ಅದು productivity ಇರತಕ್ಕಂಥ ಸ್ಥಳ. ಅಲ್ಲಿಗೆ ತಾವು ಕೊಡಲೇಬೇಕಾಗುತ್ತದೆ. ಇದನ್ನು ತಾವು ಯೋಚನೆ ಮಾಡಬೇಕು. ಅಲ್ಲೇನಾದರೂ ಗೊಬ್ಬರ ಕೊಡಲಿಲ್ಲವೆಂದರೆ productivity ಏನಾಗುತ್ತದೆ ? ನಾಳೆ ಆಹಾರ ಧಾನ್ಯದ ಕೊರತೆ ಏನಾಗುತ್ತದೆ ಎನ್ನುವುದರ ಬಗ್ಗೆಯೂ ಚಿಂತನೆ ಮಾಡಬೇಕಾಗುತ್ತದೆ. ಎಲ್ಲಿ assured ಬೆಳೆ ಬರುತ್ತದೆ, ಅಲ್ಲಿ ನೀವು ಈ ಗೊಬ್ಬರವನ್ನು ಕೊಡಲೇಬೇಕಾಗುತ್ತದೆ. ಇದು ಸರ್ಕಾರದ ನಿಯಮ ಕೂಡ. ಜೂನ್‌ನಲ್ಲಿ ನಮಗೆ 13,500 ಮೆಟ್ರಿಕ್ ಟನ್ ಬರಬೇಕಾಗಿತ್ತು. 10,000 ಟನ್ ಮಾತ್ರ ಬಂದಿದೆ. ಇನ್ನೂ 3,500 ಟನ್ ನಮಗೆ ಬರಬೇಕು. ನಮಗೆ ಗೊಬ್ಬರ ಮೇಜರ್ ಆಗಿ ಬೇಕಾಗುವುದು ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ. ಜುಲೈನಲ್ಲಿ ನಮಗೆ 35,000 ಮೆಟ್ರಿಕ್ ಟನ್ ಬೇಕು. ಸರ್ಕಾರಿ ಇಲಾಖೆ ಕೇಳಿರುವ ಪ್ರಕಾರವೇ 35,000 ಮೆಟ್ರಿಕ್ ಟನ್ ಜುಲೈನಲ್ಲಿ ಬೇಕಾಗುತ್ತದೆ. ಆಗಸ್ಟ್‌ನಲ್ಲಿ ಇದಕ್ಕಿಂತ ಜಾಸ್ತಿ ಬೇಕಾಗುತ್ತದೆ. ನನ್ನ ಸಿಂಧನೂರಿಗೇ ಜೂನ್–

ಜುಲೈನಲ್ಲಿ 27,000 ಟನ್ ಬೇಕಾಗುತ್ತದೆ. ಇದನ್ನು ನೀವು arrange ಮಾಡದಿದ್ದರೆ ಇದಕ್ಕಿಂತ ದೊಡ್ಡ ಗಲಾಟೆ ಅಲ್ಲಿ ಆಗುತ್ತದೆ. ನಾವು ಇದನ್ನು ಹೇಗೆ ಎದುರಿಸಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಇವತ್ತು ರಸಗೊಬ್ಬರದ ಕೊರತೆ ಇದೆ. ಕೊರತೆ ಇದೆ ಎಂದಾಗ ಅದಕ್ಕೆ alternative ಏನು, ಏನನ್ನು ಕೊಟ್ಟರೆ ಸರಿಯಾಗುತ್ತದೆ ಎನ್ನುವ ಬಗ್ಗೆ ನಾವು ಯೋಚನೆಯನ್ನು ಮಾಡಬೇಕು. ನಾನು ಅಧಿಕಾರಿಗಳ ಜೊತೆ ಚರ್ಚೆ ಮಾಡಿದಾಗ ತಿಳಿದು ಬಂದಂತೆ, mixturing unit ಗಳಿಗೆ M.A.P.ಅನ್ನು ಕೊಟ್ಟರೆ ಆಗುತ್ತದೆ. Mixturing unit ಗಳಿಗೆ 5 ಸಾವಿರ ಕ್ವಿಂಟಾಲ್ ಕೊಟ್ಟರೆ 15 ಸಾವಿರ ಕ್ವಿಂಟಾಲ್ production ಆಗುತ್ತದೆ. ಆ 5 ಸಾವಿರ ಕ್ವಿಂಟಾಲ್ ಕೊಡುವುದಕ್ಕೆ ಏನು ತೊಂದರೆ ಇದೆ ? ಇವರ ಹತ್ತಿರ M.A.P. ಇದೆ. I.P.L. ನವರು ತರಿಸಿ ಇಟ್ಟಿದ್ದಾರೆ. ಅದನ್ನು mixturing unitsಗೆ ಕೊಡಲು ತೊಂದರೆ ಏನಿದೆ ಎಂದರೆ mixturing unitಗೆ ಕೇಂದ್ರ ಸರ್ಕಾರ ಇನ್ನೂ ಬೆಲೆಯನ್ನೇ ನಿಗದಿ ಮಾಡಿಲ್ಲ ಎಂದು ಇವರು ಹೇಳುತ್ತಾರೆ. ಅದನ್ನು ಬೇಗ ಮಾಡಿಸಿ ಎಂದರೆ ಅದು ಕೇಂದ್ರದ ಕ್ಯಾಬಿನೆಟ್‌ಗೆ ಹೋಗಬೇಕು. ಕ್ಯಾಬಿನೆಟ್‌ನಲ್ಲಿ ಬೆಲೆ ನಿಗದಿಯಾದ ನಂತರ ಕೊಡಬೇಕು ಎನ್ನತಕ್ಕಂಥ ಮಾತುಗಳನ್ನು ಹೇಳುತ್ತಾರೆ. ಆ mixture ಆದರೂ ಬಂದರೆ ಒಂದು ಸ್ವಲ್ಪ relief ಆದರೂ ಆಗುತ್ತದೆ. ಅದೂ ಇಲ್ಲ. ಈ ಕಡೆ, complex ಗೊಬ್ಬರವೂ ಇಲ್ಲ. ಇವತ್ತು ನಿಜವಾಗಲೂ ರೈತರ ಬಗ್ಗೆ ಕಾಳಜಿ ಇದೆ ಎನ್ನುವುದಾದರೆ, ಇದಕ್ಕೆ ನಾವು ಏನಾದರೂ ಪರಿಹಾರ ಕಂಡು ಹಿಡಿದುಕೊಳ್ಳಬೇಕಾದರೆ ನಿಮಗೆ ಇರುವ ಒಂದೇ ಒಂದು ಅವಕಾಶವೆಂದರೆ ನೀವು import ಮಾಡಿಕೊಳ್ಳಬೇಕು. Import ಗೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ನೀವು ಕೊಡಬೇಕಾಗುತ್ತದೆ. ನನ್ನ ಮಾಹಿತಿ ಪ್ರಕಾರ, ಒಂದು ಚೀಲ ಗೊಬ್ಬರಕ್ಕೆ ಎರಡು ಸಾವಿರ ರೂಪಾಯಿಗಳನ್ನು ನೀವು ಕೊಡಬೇಕಾಗುತ್ತದೆ. ಒಂದು ಚೀಲ ಗೊಬ್ಬರವನ್ನು import ಮಾಡಿಕೊಳ್ಳಬೇಕಾದರೆ ಎರಡು ಸಾವಿರ ರೂಪಾಯಿಗಳನ್ನು ಸರ್ಕಾರ ಕೊಡಬೇಕಾಗುತ್ತದೆ. ಇದು ನನ್ನಲ್ಲಿರುವ ಮಾಹಿತಿ. I may be right or I may be wrong also. ಆದರೆ ಎರಡು ಸಾವಿರ ರೂಪಾಯಿಗಳು ಬೇಕು ಎನ್ನುವ ಮಾಹಿತಿ ನನಗೆ ಇದೆ. ನೀವು ಅಷ್ಟು ಹಣವನ್ನು ಕೊಟ್ಟು ನಂತರ ಕೇಂದ್ರದಿಂದ reimburse ಮಾಡಿಕೊಳ್ಳಬೇಕು. ಕೇಂದ್ರದವರು ಆ ಹಣವನ್ನು ಕೊಟ್ಟಮೇಲೆಯೇ ನಾವು ಮಾಡುತ್ತೇವೆ ಎಂದು ನೀವು ಕೈಕಟ್ಟಿಕೊಂಡು ಕುಳಿತರೆ ಈ ಸಮಸ್ಯೆಗೆ ಪರಿಹಾರವಿಲ್ಲ. ಇವತ್ತು ಹಾವೇರಿಯಲ್ಲಿ ಆಗಿರುವ ಘಟನೆ ನಾಳೆ ಇನ್ನೊಂದು ಕಡೆ ಆಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಸ್ವಲ್ಪ ಜನ ಗಲಾಟೆ ಮಾಡಿದ್ದಾರೆ. ಆದರೆ, ನಾಳೆ command

areaಗಳಲ್ಲಿ ನೀರು ಬಂದ ತಕ್ಷಣ ಒಂದೇ ಸಾರಿ demand create ಆಗುತ್ತದೆ. ಇದು ನನ್ನ ಒಂದು command areaದಲ್ಲಿ ಮಾತ್ರವಲ್ಲ, ಎಲ್ಲಾ command areaಗಳಲ್ಲೂ ಆಗುತ್ತದೆ. ಭದ್ರಾದಿಂದ ನಾಳೆ ನೀರು ಬಿಟ್ಟ ಕೂಡಲೇ ಗೊಬ್ಬರ ಬೇಕಾಗುತ್ತದೆ. ಇನ್ನೊಂದು ಕಡೆ ನೀರು ಬಿಟ್ಟರೂ ಬೇಕಾಗುತ್ತದೆ. ನಮ್ಮಲ್ಲಿ 5ನೇ ತಾರೀಖಿಗೆ ನೀರು ಬಿಟ್ಟರೆ, ಅದು ನಮಗೆ 10–15ನೇ ತಾರೀಖು ನೀರು ಬಂದ ತಕ್ಷಣವೇ ಗೊಬ್ಬರಕ್ಕೆ ಬೇಡಿಕೆ ಪ್ರಾರಂಭವಾಗುತ್ತದೆ. ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಗಲಾಟೆಗಳು ಆಗುತ್ತವೆ. ಆಗ Law and Order control ಮಾಡುವುದು ತೊಂದರೆಯಾಗುತ್ತದೆ. ಅದಕ್ಕೆ ಈಗಿನಿಂದಲೇ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಬೇಕು. Mixture units ಅನ್ನಾದರೂ ಪ್ರಾರಂಭ ಮಾಡಿ, ಇಲ್ಲವೆಂದರೆ import ಅನ್ನಾದರೂ ಮಾಡಿ. Import ಮಾಡಿಕೊಳ್ಳುವುದಕ್ಕೆ ನಿಮ್ಮ ಹತ್ತಿರ I.P.L. company ಇದೆ. I.P.L. companyಯವರೊಂದಿಗೆ ಮಾತನಾಡಿ. ಅವರಿಗೆ ಆ efficiency ಇಲ್ಲವೆಂದರೆ privateನವರನ್ನು ಕರೆದು ಮಾತನಾಡಿ. ಅವರ ಹತ್ತಿರ ಆ efficiency ಇದೆ. ನಾನು ಅವರ ಹತ್ತಿರ ಮಾತನಾಡಿದರೆ ಅವರು ಹೇಳುತ್ತಾರೆ, ಸರ್ಕಾರ ಮುಂದೆ ಬಂದು ನಮ್ಮ ಜೊತೆ ಮಾತನಾಡಿ ದುಡ್ಡು ಕೊಡುವುದಾದರೆ ತಿಂಗಳಿನಲ್ಲೇ ತರಿಸಿ ಕೊಡುತ್ತೇವೆ ಎನ್ನತಕ್ಕಂಥ ಭರವಸೆಗಳನ್ನು ಕೊಡುತ್ತಾರೆ. ನೀವು ಅವರನ್ನಾದರೂ ಕರೆದು ಮಾತನಾಡಬೇಕಲ್ಲವೇ ? ಇದುವರೆಗೆ ಏನು ಮಾಡಿದ್ದೀರಿ ? ಬರೀ strike ಮಾಡುವುದರಿಂದ ಇದು ಬಗೆಹರಿಯುತ್ತದೆ ಎನ್ನುವುದಾದರೆ ನಾವೂ ಮಾಡಿಬಿಡೋಣ ಕೇಂದ್ರ ಸರ್ಕಾರ ಕೊಟ್ಟಿಲ್ಲವೆಂದರೆ, ನಮ್ಮ M.P.ಗಳಾದರೂ ಒಂದು ಸಭೆ ಕರೆದು ಅಲ್ಲಿ ಹೋಗಿ ಚರ್ಚೆಯನ್ನಾದರೂ ಮಾಡಿದ್ದಾರೆಯೇ? ಅವರನ್ನಾದರೂ ಕರೆದು ಚರ್ಚೆ ಮಾಡಿ, ಪರಿಸ್ಥಿತಿ ಹೀಗಿದೆ ಎಂದು ಅವರಿಗಾದರೂ highlight ಮಾಡಿರುವಿರಾ? ಏನು ನಡೆಯುತ್ತಿದೆ ? ನಮ್ಮ ಜವಾಬ್ದಾರಿ ಇಲ್ಲ ಎಂದು ಹೇಳಿ ಬೇರೆಯವರ ಕಡೆ ಬೊಟ್ಟು ಮಾಡಿ ತೋರಿಸುವುದು ಬಹಳ ಸುಲಭ. ಆದರೆ ಮೂರು ಬೊಟ್ಟು ನಮ್ಮನ್ನು ನೋಡುತ್ತಿರುತ್ತವೆ. ನಾವೇನು ಮಾಡಿದ್ದೇವೆ ಎಂದೂ ಕೇಳುತ್ತವೆ. ಅದಕ್ಕೆ ಉತ್ತರವನ್ನು ತಾವು ಹೇಳಬೇಕಾಗುತ್ತದೆ. ಅರ್ಥಪೂರ್ಣ ಚರ್ಚೆಗಳು ಆಗದೇ ಇದ್ದರೆ, ಸುಮ್ಮನೆ ನಾವು ನಿಮ್ಮ ಮೇಲೆ ಗೂಬೆ ಕೂರಿಸುವುದು, ನೀವು ನಮ್ಮ ಮೇಲೆ ಗೂಬೆ ಕೂರಿಸಿ ಎದ್ದು ಹೋಗಿಬಿಟ್ಟರೆ ನಮ್ಮ ಜವಾಬ್ದಾರಿ ಮುಗಿಯಿತೇ ? ಇವತ್ತು ನಾನು ಒಬ್ಬ ಶಾಸಕನಾಗಿ ಇಲ್ಲಿಗೆ ಬಂದಿದ್ದೇನೆ. ನಾನು ಇಲ್ಲಿ ಮಾತನಾಡಿಬಿಟ್ಟೆ ಎಂದ ಮಾತ್ರಕ್ಕೆ ನನ್ನ ಜವಾಬ್ದಾರಿ ಮುಗಿದು ಹೋಯಿತೇ ? ನಾಳೆಯ ದಿವಸ ರೈತರಿಗೆ ಗೊಬ್ಬರ ಕೊಡಿಸಲಿಲ್ಲವೆಂದರೆ ನನ್ನ ಜವಾಬ್ದಾರಿ ಮುಗಿದು ಹೋಯಿತೇ ? ನಾನು ಅಲ್ಲಿ ಹೋಗಿ

ಹೇಳಬಹುದು, ನಾನು ಸದನದಲ್ಲಿ ಮಾತನಾಡಿಬಿಟ್ಟಿದ್ದೇನೆ, ನನ್ನ ಜವಾಬ್ದಾರಿ ಆಯಿತು, ಉಳಿದ ಎಲ್ಲಾ ಜವಾಬ್ದಾರಿ ಎಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ನೀವು ಇದು ಕೇಂದ್ರ ಸರ್ಕಾರದ ಜವಾಬ್ದಾರಿ ಎಂದು ಹೇಳಿಬಿಟ್ಟರೆ ನಿಮ್ಮ ಜವಾಬ್ದಾರಿ ಮುಗಿದು ಹೋಯಿತೇ ? ಆ ರೀತಿ ಆಗುವುದಿಲ್ಲ. ಇದಕ್ಕೆ ನಾವು ನೀವು ಎಲ್ಲರೂ ಸೇರಿ ಪ್ರಯತ್ನ ಮಾಡಿ ಇದನ್ನು solve ಮಾಡಬೇಕು. ಈಗ problem ಅಂತೂ ಆಗಿದೆ. There is a solution. ಆದರೆ ನೀವು ಅದನ್ನು ಹುಡುಕುವುದಕ್ಕೆ ಪ್ರಯತ್ನವನ್ನೇ ಮಾಡುತ್ತಿಲ್ಲ. Seriousness ಇಲ್ಲ. ಇದು ನಮ್ಮ ಜವಾಬ್ದಾರಿಯಲ್ಲ ಎಂದು ಹೇಳಿ ಜವಾಬ್ದಾರಿಯಿಂದ ನುಣಿಚಿಕೊಂಡು ಬಿಟ್ಟರೆ ಜವಾಬ್ದಾರಿ ಮುಗಿದು ಹೋಗುತ್ತದೇನು ? ಅಲ್ಲಿಗೆ ಇದು ಮುಗಿಯುವುದಿಲ್ಲ. ಇನ್ನು ಮೇಲೆ, ಇನ್ನು ಹೆಚ್ಚು ಇಂಥ complications ಜಾಸ್ತಿಯಾಗುತ್ತದೆ. ಇದನ್ನು ಪರಿಹರಿಸಲು ನೀವು ಅರ್ಥಪೂರ್ಣವಾಗಿ ಏನು ಮಾಡಬೇಕು ? ನಮ್ಮಿಂದ ನೀವು ಏನು ಸಹಕಾರವನ್ನು ನಿರೀಕ್ಷೆ ಮಾಡುತ್ತೀರಿ ? ಆ ಬಗ್ಗೆ ಚರ್ಚೆಯಾಗಬೇಕು. ಸುಮ್ಮನೆ ನಾವು ನಿಮ್ಮನ್ನು blame ಮಾಡುವುದು ನೀವು ನಮ್ಮನ್ನು blame ಮಾಡುವುದು, ಮಧ್ಯೆ ರೈತ ಹಾಳಾಗುವುದು, ಇದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಅದಕ್ಕೆ ನಾನು ವಿನಂತಿ ಮಾಡುವುದೇನೆಂದರೆ, ಸರ್ಕಾರ ಅರ್ಥಪೂರ್ಣ ಚರ್ಚೆಗೆ ವ್ಯವಸ್ಥೆ ಮಾಡಬೇಕು. ನಾವು ಹೋಗಿ ಮಾತನಾಡಿದರೆ ಅಲ್ಲಿ ಏನೂ ಹೇಳುವುದಕ್ಕೆ ಆಗಲಾರದ ಪರಿಸ್ಥಿತಿ ಇದೆ. ನಾನು ಮಾನ್ಯ ಕೃಷಿ ಸಚಿವರಲ್ಲಿ ಹೋಗಿ ಸಾರ್ ನಮ್ಮಲ್ಲಿ ಈ ತರಹ ತೊಂದರೆ ಇದೆ, ಜೂನ್‌ನಲ್ಲಿ ಗೊಬ್ಬರ ಬೇಕಾಗುತ್ತದೆ ಎಂದು ಕೇಳಿದರೆ ಅವರು ಏನು ಹೇಳುತ್ತಾರೆಂದರೆ ನೋಡೋಣ, ಸಿಗುತ್ತದೆ, ತರಿಸುತ್ತಿದ್ದೇವೆ, ವಿಚಾರ ಮಾಡುತ್ತೇವೆಂದು ಹೇಳಿದರೆ, ಇದು ಆಗುವುದಿಲ್ಲ. ಇದುವರೆಗೂ ಯಾರನ್ನೂ ಕರೆದು ಕೂಡ ಚರ್ಚೆ ಮಾಡಿಲ್ಲ. ಸಮಸ್ಯೆಗೆ ಪರಿಹಾರವೇನು ಎನ್ನುವುದಕ್ಕೆ ಬೇರೆ ಬೇರೆ ಮಾರ್ಗಗಳಿವೆ. ಅದಕ್ಕಾದರೂ ಒತ್ತು ಕೊಡಬೇಕಾಗುತ್ತದೆ. ಒತ್ತು ಕೊಟ್ಟು mixture unit ಅಂಥಾದರೂ ಚಾಲು ಮಾಡಿ, import ಆದರೂ ಮಾಡಿ, ನಿಜವಾಗಿಯೂ ತರಿಸಬೇಕೆನ್ನುವ ಮನಸ್ಸಿದ್ದರೆ ಅನೇಕ ಮಾರ್ಗಗಳಿವೆ. ಸಮಸ್ಯೆ ನಿವಾರಣೆ ಮಾಡಬೇಕೆನ್ನುವ ಮನಸ್ಸಿದ್ದರೆ ಮಾರ್ಗಗಳು ಹತ್ತಾರಿವೆ. ಅದರ ಬಗ್ಗೆ ತಾವು ಅರ್ಥಪೂರ್ಣವಾದ ಚರ್ಚೆ ಮಾಡಿ ಈಗಿರುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಅಲ್ಲಿ ಹೋಗಿ strike ಮಾಡಿ ಒಂದು ಕೊಡಿಸಿದೆವು, ನಮ್ಮ ಜವಾಬ್ದಾರಿ ಮುಗಿಯಿತೆನ್ನುವುದಲ್ಲ. ಅಲ್ಲಿ ಆದರೆ ನಿಮ್ಮ ಡಿ.ಸಿ. ಮುಂದೆ ಹೋಗಿ ಕೊಟ್ಟರೆ ನಮಗೆ ಗೊಬ್ಬರ ಸಿಗುತ್ತದೆಂದರೆ ನಾವೂ ಸಹಾ ಬರುತ್ತೇವೆ, ಎಲ್ಲರೂ ಕೂಡಿ ಹೋಗಿ ಡಿ.ಸಿ.ಗೆ ಕೊಟ್ಟುಬಿಡೋಣ, ಗೊಬ್ಬರ ಕೊಡುವುದಾದರೆ

ಬಹಳ ಸಂತೋಷ. ಇದನ್ನು ನಾವು ಏನೋ popularityಗೆ ಹೋಗಿ ಕೊಡುವುದು ಬೇರೆ ವಿಷಯ. ಅದನ್ನು ಬಿಟ್ಟು ಇವತ್ತು ಅರ್ಥಪೂರ್ಣವಾದ ಚರ್ಚೆಗಳಾಗಬೇಕು. ನಮ್ಮೆಲ್ಲರನ್ನೂ ನೋಡುತ್ತಿದ್ದಾರೆ. ನಾವೇನು ಮಾತನಾಡಿದೆವು ? ಚರ್ಚೆ ಮಾಡಿಲ್ಲ ? ಅವರು ಇವರನ್ನು blame ಮಾಡಿದರು, ಇವರು ಅವರನ್ನು ದೂಷಣೆ ಮಾಡಿದರು, ಮನೆಗೆ ಹೋದರೆನ್ನುವುದಾಗಬಾರದು ಆ ದಿಸೆಯಲ್ಲಿ ಇಲ್ಲಿ ಅರ್ಥಪೂರ್ಣವಾದ ಚರ್ಚೆಯಾಗಲಿ, ಸಮಸ್ಯೆಯಂತೂ ಬಂದಿದೆ. ಏನಾಗಿದೆ ಎನ್ನುವುದರ ಬಗ್ಗೆ ಏನು ಪರಿಹಾರ ಎನ್ನುವುದರ ಬಗ್ಗೆ ಚರ್ಚೆ ಮಾಡಿ, ರೈತರಿಗೆ ಈಗ ಗೊಬ್ಬರ ಕೊಡಬೇಕಾದ ಅವಶ್ಯಕತೆ ಇದೆ. ಸರ್ಕಾರ ಎಷ್ಟು ಕೊಡುತ್ತದೆ ? ಇನ್ನೆಷ್ಟು ಗೊಬ್ಬರವನ್ನು ಬೇರೆ ಕಡೆಯಿಂದ ತರಬೇಕು ? ಕೇಂದ್ರ ಸರ್ಕಾರ ಎಷ್ಟು ಗೊಬ್ಬರ ಕೊಡುತ್ತದೆ ? ನೀವೆಷ್ಟು ತರಿಸುವುದಕ್ಕಾಗುತ್ತದೆ ? ಎನ್ನುವುದರ ಮೇಲೆ ಇದನ್ನು ಹೇಗೆ distribute ಮಾಡಬೇಕೆನ್ನುವುದು ಕೂಡ ಬಹಳ ಪ್ರಮುಖವಾಗುತ್ತದೆ. ಈಗೇನಾಗಿದೆಯೆಂದರೆ, ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಗುಜರಾತ್‌ನಲ್ಲಿ private traders ಇಲ್ಲ. ಸಹಕಾರಿ ಸಂಸ್ಥೆಗಳಿಂದ ಮಾರಾಟ ಮಾಡುತ್ತಿರುವುದರಿಂದ ಅಲ್ಲಿ unofficial ಆಗಿ shortage create ಮಾಡುವುದಿಲ್ಲ. ನಮ್ಮಲ್ಲಿ 90% ಮಾಡುವುದು private traders. ಆ private traders ತಮ್ಮ ಹತ್ತಿರವೇ ಇಟ್ಟುಕೊಂಡು artificial shortage create ಮಾಡುವ ಸಾಧ್ಯತೆಗಳು ಬಹಳಷ್ಟು ಇವೆ. ಇದನ್ನೂ ಸಹ ತಾವು ಯೋಚನೆ ಮಾಡಬೇಕಾಗುತ್ತದೆ. ಅಲ್ಲಿ artificial shortage ಆಗುವುದಿಲ್ಲ. ಒಂದು ಸಹಕಾರಿ ಸಂಸ್ಥೆ ಅಲ್ಲಿದ್ದರೆ ಅದನ್ನು ಯಾರೂ artificial ಆಗಿ create ಮಾಡುವುದಕ್ಕಾಗುವುದಿಲ್ಲ. Private trade ಇದ್ದಲ್ಲಿ artificial shortage ಬಹಳಷ್ಟು create ಆಗುತ್ತದೆ. ಬಹಳಷ್ಟು ಜನ ಎತ್ತಿಟ್ಟುಕೊಂಡಿದ್ದಾರೆ. ಅದನ್ನು ಒಂದಕ್ಕೆ ಎರಡು ಪಟ್ಟು ದುಡ್ಡಿಗೆ ಕೊಡುವ ವ್ಯವಸ್ಥೆ ಇಲ್ಲಿ ನಡೆಯುತ್ತಿದೆ. ಇದರ ಬಗ್ಗೆಯೂ ಕೂಡ ಸರ್ಕಾರ ಸರಿಯಾದ ವ್ಯವಸ್ಥೆಯನ್ನು ಮಾಡದಿದ್ದರೆ ಮತ್ತೆ ನಾವೇನು ಮಾಡಿದರೂ ಪುನಃ ಗೊಂದಲಕ್ಕೀಡಾಗುತ್ತೇವೆ ಎನ್ನುವ ಮಾತನ್ನು ಹೇಳಿ ದಯವಿಟ್ಟು ಇದಕ್ಕೊಂದು ವ್ಯವಸ್ಥೆಯನ್ನು ಮಾಡಬೇಕೆನ್ನುವ ಮನವಿಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡಿ ಇದುವರೆಗೆ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ (ಚನ್ನಗಿರಿ) : ಮಾನ್ಯ ಛೇರ್ಮನ್‌ರವರೆ, ಈ ಸದನದಲ್ಲಿ ಹಿರಿಯ ಸದಸ್ಯರು ಬಹಳ ಕಳಕಳಿಯಿಂದ ರೈತರ ಬಗ್ಗೆ ಮಾತನಾಡಿದರು. ರೈತರ ಬಗ್ಗೆ

ಎಲ್ಲಾ ಜನ ಪ್ರತಿನಿಧಿಗಳಿಗೂ ಕಳಕಳಿ ಇರುತ್ತದೆ. ರೈತರ ಹೆಸರಿನಲ್ಲಿ ಸಮಾಜಘಾತುಕ ಶಕ್ತಿಗಳು ರೈತರ ಹೆಸರಿಗೆ ಮಸಿ ಬಳಿಯುತ್ತಿವೆ ಎನ್ನುವುದನ್ನು ನಡೆದ ಘಟನೆಗಳ ಮೂಲಕ ಈ ಸದನಕ್ಕೆ ತಿಳಿಸಬಯಸುತ್ತೇನೆ. ಚನ್ನಗಿರಿಯಲ್ಲಿ ದಿನಾಂಕ : 21–06–2008ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಕೃಷಿ ಉಪ ನಿರ್ದೇಶಕರ ಕಛೇರಿ ಹತ್ತಿರ barricade ಕಟ್ಟಿಸಿ ರೈತರನ್ನು ಸಾಲಾಗಿ ನಿಲ್ಲಿಸಿ ಅಲ್ಲಿಗೆ ಬರಲಿದ್ದ ಎರಡು ಲೋಡ್ ಗೊಬ್ಬರಕ್ಕೆ ಕೃಷಿ ಜಮೀನಿನ ಹಿಡುವಳಿ ಹೊಂದಿದ್ದ ರೈತರನ್ನು ಸಾಲಾಗಿ ನಿಲ್ಲಿಸಿ ಅವರಿಂದ ಹಣ ಪಡೆದುಕೊಂಡು ಬಿಲ್ ಹಾಕಿಸುತ್ತಿದ್ದರು. ಸುಮಾರು 20–25 ಜನ ರೈತರಲ್ಲದ ಸಮಾಜಘಾತುಕ ಶಕ್ತಿಗಳು ನಮಗೆ ಗೊಬ್ಬರ ಬೇಕೆಂದು ಕೂಗುತ್ತಾ, ಬಿಲ್ ಹಾಕುತ್ತಿದ್ದ ಗುಮಾಸ್ತನ ಬಳಿ ಹೋಗಿ ಅವನ ಬಳಿ ಇದ್ದ ಹಣಕ್ಕೆ ಕೈ ಹಾಕಿದರು. ಅಲ್ಲದೆ ಸಾಲಾಗಿ ನಿಂತಿದ್ದ ರೈತರನ್ನು ಬೆದರಿಸಿ ಗಲಾಟೆ ಆರಂಭಿಸಿ ಜನಗಳ ಮೇಲೆ ಕಲ್ಲು ತೂರುತ್ತಾ ಬ್ಯಾರಿಕೇಡ್‌ಗಳನ್ನು ಕಿತ್ತುಕೊಂಡು ಅಂಗಡಿಗಳಿಗೆ ಮತ್ತು ರಸ್ತೆಯಲ್ಲಿ ಸಂಚರಿಸುತ್ತಿದ್ದ ವಾಹನಗಳಿಗೆ ಹೊಡೆಯಲು ಪ್ರಾರಂಭಿಸಿದರು. ಈ ಘಟನೆಯನ್ನು ಪೊಲೀಸರು video ಮೂಲಕ ಚಿತ್ರಿಸಿಕೊಂಡು ಗಲಾಟೆ ಮಾಡುತ್ತಿದ್ದ 8 ಜನರನ್ನು ಬಂಧಿಸಿದಾಗ ಉಳಿದವರು ಓಡಿಹೋದರು. ಈ 8 ಜನರು ರೈತರಾಗಿರಲಿಲ್ಲ. ಅವರ ಮೇಲೆ Section 143, 147, 148, 149, 324,427 IPC Section ಅನ್ನು ವಿಧಿಸಿ ಬಂಧಿಸಿದರು. ಆ ದಿನದಿಂದ ಯಾವುದೇ ತೊಂದರೆ ಇಲ್ಲದೆ ರೈತರು ಚನ್ನಗಿರಿ ತಾಲ್ಲೂಕಿನಾದ್ಯಂತ ಗೊಬ್ಬರವನ್ನು ಪಡೆಯುತ್ತಿದ್ದಾರೆ. ಗೊಬ್ಬರವನ್ನು ಹಳ್ಳಿ ಹಳ್ಳಿಗಳಿಗೆ society ಗಳಿಗೆ ಕಳುಹಿಸಿ ಜಮೀನು ಹಿಡುವಳಿ ಹೊಂದಿರುವ ರೈತರಿಗೆ ಗೊಬ್ಬರವನ್ನು ಮಾರಾಟ ಮಾಡಲಾಗುತ್ತಿದೆ ಮತ್ತು ಲೈಸೆನ್ಸ್ ಹೊಂದಿದ ಡೀಲರ್‌ಗಳ ಮೂಲಕ ಪಡೆಯುತ್ತಿದ್ದಾರೆ. ದಿನಾಂಕ : 22–06–2008ರಂದು ನಾನು ದಾವಣಗೆರೆಯಲ್ಲಿ ಕೃಷಿ ಜಂಟಿ ನಿರ್ದೇಶಕರ ಬಳಿ ಚನ್ನಗಿರಿ ತಾಲ್ಲೂಕಿನ ಗೊಬ್ಬರದ allotment ಬಗ್ಗೆ ಚರ್ಚಿಸುತ್ತಿದ್ದೆ. ಆ ಸಂದರ್ಭದಲ್ಲಿ ಚನ್ನಗಿರಿ ತಾಲ್ಲೂಕಿನ ಗರಗ ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ರಾಜಪ್ಪ ಇವರು ದೂರವಾಣಿಯ ಮೂಲಕ ಮಾತನಾಡಿ ಗರಗ ಗ್ರಾಮದಲ್ಲಿ ರೈತ ಮಹಿಳೆ ಶ್ರೀಮತಿ ಪಾರ್ವತಮ್ಮ, ಗೊಬ್ಬರ ಸಿಗದಿರುವುದರಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ತಿಳಿಸಿದರು. ತಕ್ಷಣ ನಾನು ಆ ಗ್ರಾಮಕ್ಕೆ ಹೋದೆನು. ಅಲ್ಲಿ ಸುಮಾರು 200 ರಿಂದ 300 ಜನ ರೈತ ಮಹಿಳೆ ಗೊಬ್ಬರ ಸಿಗದೆ ನೇಣು ಹಾಕಿಕೊಂಡು ಸತ್ತಿದ್ದಾಳೆಂದೂ, ಅವರಿಗೆ ಸರ್ಕಾರದಿಂದ ಪರಿಹಾರ ಕೊಡಿಸಿ ಎಂದು ನನಗೆ ತಿಳಿಸಿದರು. ನಾನು ಮೃತಳ ಪತಿ ಶ್ರೀ ಮೂರ್ತಪ್ಪನನ್ನು ಮತ್ತು

Vol. 9. F. 20.

ಕುಟುಂಬದ ಸದಸ್ಯರನ್ನು ಸಂತೈಸಿ ಮೃತ ದೇಹಕ್ಕೆ ಗೌರವ ಅರ್ಪಿಸಿದೆನು. ನಂತರ, ಪರಿಹಾರ ಕೊಡಿಸಲು ದುಂಬಾಲು ಬಿದ್ದ ಜನರಿಗೆ ಸರ್ಕಾರದ ಅಧಿಕಾರಿಗಳನ್ನು ಮೃತ ದೇಹದ ಬಳಿ ಕಳುಹಿಸಿಕೊಡುತ್ತೇನೆ, ನೀವು ಅವರಿಗೆ ಈ ಪಾರ್ವತಮ್ಮ ಗೊಬ್ಬರ ಸಿಗದೆ ನೇಣು ಹಾಕಿಕೊಂಡು ಮೃತಪಟ್ಟಿರುವುದನ್ನು ಮನವರಿಕೆ ಮಾಡಿಕೊಡಿ. ಅದು ಸತ್ಯವಾಗಿದ್ದಲ್ಲಿ, ಸರ್ಕಾರದಿಂದ ಪರಿಹಾರ ಕೊಡಿಸಲು ಶಿಫಾರಸ್ಸು ಮಾಡುತ್ತೇನೆಂದು ತಿಳಿಸಿದೆನು. ನಂತರ, ಶ್ರೀ ಪಾರ್ವತಮ್ಮನವರ ಪತಿ ಶ್ರೀ ಮೂರ್ತಪ್ಪನನ್ನು ಕರೆದು ನೀನು ಎಷ್ಟು ಎಕರೆ ಜಮೀನು ಹೊಂದಿದ್ದೀಯ ಎಂದು ಕೇಳಿದಾಗ ಯಾವುದೇ ಜಮೀನೂ ಇಲ್ಲದಿರುವುದು ತಿಳಿದು ಬಂತು. ಹಾಗಾದರೆ, ನಿನಗೆ ಗೊಬ್ಬರ ಚೀಟಿ ಏಕೆ ಬೇಕೆಂದು ಕೇಳಿದಾಗ ನಾನು ಬಗರ್‌ಹುಕುಂ ಜಮೀನು ಮಾಡಿದ್ದೇನೆಂದು ಹೇಳಿದನು. ಅದಕ್ಕೆ ಆ ಜಮೀನನ್ನು ತೋರಿಸೆಂದು ನಾನು ಹೇಳಿದಾಗ, ಆತ ಮಾತನಾಡದೆ ಸುಮ್ಮನಾದನು. ನಾನು ಸರ್ಕಾರಿ ಅಧಿಕಾರಿಗಳಿಗೆ ದೂರವಾಣಿ ಮೂಲಕ ಮಾತನಾಡಿ ಈ ಘಟನೆಯ ವಿವರಗಳನ್ನು ತಿಳಿಸಿದೆನು. ತಹಸೀಲ್ದಾರ್, DYSP, Circle Inspector ಸ್ಥಳಕ್ಕೆ ಭೇಟಿ ನೀಡಿ ಮೃತ ದೇಹವನ್ನು ಕಂಡು ನೇಣು ಹಾಕಿಕೊಂಡಿರುವುದರಿಂದ Post Mortem ಮಾಡಿಸುವಂತೆ ಕುಟುಂಬಕ್ಕೆ ತಿಳಿಸಿದರು. ಅಲ್ಲಿದ್ದ 200 ರಿಂದ 300 ಜನ ಸರ್ಕಾರದಿಂದ ಪರಿಹಾರ ಕೊಡಿಸುವಂತೆ ಸರ್ಕಾರಿ ಅಧಿಕಾರಿಗಳಿಗೆ ಒತ್ತಾಯಿಸಿದರು. ದಾವಣಗೆರೆಯಿಂದ ಬಂದ ಕೆಲವು ಸಂಘಟನೆಗಳ ಮುಖಂಡರು ಮತ್ತು ಸ್ಥಳೀಯ ರಾಜಕೀಯ ಪಕ್ಷದ ಮುಖಂಡರು ಮೃತದೇಹವನ್ನು ಹೊತ್ತುಕೊಳ್ಳಿ, ರಸ್ತೆ ತಡೆ ನಡೆಸೋಣ, ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಬಂದು ಪರಿಹಾರ ಕೊಡುವವರೆಗೆ ಬಿಡಬಾರದೆಂದು ಕೂಗುತ್ತಾ ಗರಗ ಗ್ರಾಮದಿಂದ 2.5 ಕಿ.ಮೀ. ದೂರದಲ್ಲಿರುವ ರಾಷ್ಟ್ರೀಯ ಹೆದ್ದಾರಿಯ ರಸ್ತೆಗೆ ತಂದು ಮೃತ ದೇಹವನ್ನಿಟ್ಟುಕೊಂಡು ರಸ್ತೆ ತಡೆ ನಡೆಸಿದರು. ಇಲ್ಲಿ ಅಧಿಕಾರಿಗಳು ಕುಟುಂಬ ವರ್ಗದವರ ಮನವೊಲಿಸಿ Post Mortem ಮಾಡಿಸಿದಾಗ ಶ್ರೀಮತಿ ಪಾರ್ವತಮ್ಮ ನೇಣು ಹಾಕಿಕೊಂಡು ಮೃತಪಟ್ಟಿರುವುದಿಲ್ಲವೆಂದು ಕರಳು ಬೇನೆ ಮತ್ತು ಹೃದಯಾಘಾತದಿಂದ ಮೃತಪಟ್ಟಿರುವುದಾಗಿ ವೈದ್ಯರು ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಿದರು. ಮೃತಳ ಪತಿ ಶ್ರೀ ಮೂರ್ತಪ್ಪನನ್ನು ಕರೆದು ಈ ವಿಷಯವನ್ನು ಅವರಿಗೆ ತಿಳಿಸಿದರು. ಸಹಜವಾಗಿ ಮೃತಪಟ್ಟಿರುವುದರಿಂದ ಸರ್ಕಾರದಿಂದ ಪರಿಹಾರ ಕೊಡಿಸಲು ಸಾಧ್ಯವಿಲ್ಲ. ಶವಸಂಸ್ಕಾರ ಮಾಡಿ ಎಂದು ತಿಳಿಸಿದರು. ನೀವು ಈ ರೀತಿ ಏಕೆ ಮಾಡಿದಿರಿ ಎಂದು ಅಧಿಕಾರಿಗಳು ಶ್ರೀ ಮೂರ್ತಪ್ಪನವರನ್ನು ಕೇಳಿದಾಗ ಅವರು ಇದರ ಬಗ್ಗೆ ನನಗೇನು ಗೊತ್ತಿಲ್ಲ ಸ್ವಾಮಿ, ನಾನು ನನ್ನ ಹೆಂಡತಿಯನ್ನು ಕಳೆದುಕೊಂಡು

ದುಃಖದಲ್ಲಿದ್ದೇನೆ. ಕೆಲವು ರಾಜಕೀಯ ಮುಖಂಡರು ಹಾಗೂ ಕೆಲವು ಸಂಘಟನೆಗಳ ಮುಖಂಡರು ನನ್ನ ಬಳಿ ಬಂದು ನಿನಗೆ ಸರ್ಕಾರದಿಂದ ಹಣ ಬರುತ್ತದೆ, ಗೊಬ್ಬರ ಸಿಗದೆ ನೇಣು ಹಾಕಿಕೊಂಡು ಮೃತಪಟ್ಟಿರುವುದಾಗಿ ನಾಟಕ ಮಾಡು ಎಂದು ತಿಳಿಸಿದರು. ಅದಕ್ಕೆ ನಾನು ಆ ತರಹ ಮಾಡಿದೆನು ಎಂದು ತಿಳಿಸಿದನು. ಅದಕ್ಕೆ ನಾವು ಆ ರೀತಿ ಎಲ್ಲ ಮಾಡಬಾರದೆಂದು ಹೇಳಿ ಶವ ಸಂಸ್ಕಾರಕ್ಕೆ ಹಣ ಕೊಟ್ಟು ರಸ್ತೆ ತಡೆ ಮಾಡುತ್ತಿದ್ದ ರಾಜಕೀಯ ಮತ್ತು ಸಂಘಟನೆಗಳ ಮುಖಂಡರುಗಳಿಗೆ ಸಹಜವಾಗಿ ಮೃತಪಟ್ಟಿರುವ ವೈದ್ಯಕೀಯ ಪತ್ರವನ್ನು ತೋರಿಸಿ ಮುಖಂಡರುಗಳಿಗೆ ಮನವರಿಕೆ ಮಾಡಿಕೊಟ್ಟಾಗ ಆ ಜಾಗದಿಂದ ವಾಪಸ್ ಹೋದರು. ಗರಗ ಗ್ರಾಮಸ್ಥರು ಮತ್ತು ಆತನ ಬಂಧುವರ್ಗದವರು ಶವ ಸಂಸ್ಕಾರ ನಡೆಸಿದರು. ಗೊಬ್ಬರದ ಅಭಾವ ಪರಿಸ್ಥಿತಿಯ ಲಾಭವನ್ನು ಕೆಲವು ಸಮಾಜಘಾತುಕ ಶಕ್ತಿಗಳು ಮತ್ತು ಕೆಲವು ರಾಜಕೀಯ ಮುಖಂಡರುಗಳು ಸರ್ಕಾರವನ್ನು ಪೇಚಿಗೆ ಸಿಲುಕಿಸಲು ಯಾವ ರೀತಿಯಾಗಿ ರೈತರನ್ನು ಪ್ರಚೋದಿಸುತ್ತಿದ್ದಾರೆನ್ನುವುದನ್ನು ಈ ಸದನದ ಗಮನಕ್ಕೆ ತಂದಿದ್ದೇನೆ. ರಸ್ತೆಯಲ್ಲಿ ಶವ ಇಟ್ಟುಕೊಂಡು ಪ್ರತಿಭಟನೆ ಮಾಡಿದ್ದಾರೆಂದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಯಾವುದೇ ಪತ್ರಿಕೆಗಳನ್ನು ನೋಡಬಹುದು.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರು yield ಆಗುವುದಾದರೆ, ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ.

(ಗೊಂದಲ)

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಒಂದು ನಿಮಿಷ ನಾನು ಮಾತನಾಡಿ ಮುಗಿಸುತ್ತೇನೆ. ನೀವು ಮಾತನಾಡುವಾಗ ನಾನು ಮಧ್ಯೆ ಎದ್ದು ಮಾತನಾಡಲಿಲ್ಲ. ನಾನು ಮಾತನಾಡಿಯಾದ ಮೇಲೆ ನೀವು ಮಾತನಾಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾವುದೋ ಒಂದು incident ಹೇಳಿ .....

(ಗೊಂದಲ)

ಛೇರ್ಮನ್ : ಅವರು yield ಆಗುತ್ತಿಲ್ಲ. ಆಮೇಲೆ ನೀವು ಮಾತನಾಡಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾವುದೋ ಒಂದು incident

ತೋರಿಸಿ ಎಲ್ಲಾ ಪ್ರಕರಣಗಳಲ್ಲೂ ಅದೇ ರೀತಿ ಆಗಿದೆಯೇ ?

(ಗೊಂದಲ)

ಛೇರ್ಮನ್ : ನಿಮಗೆ ಅವಕಾಶ ಸಿಕ್ಕಿದಾಗ ನೀವು ಹೇಳಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : (ಗೊಂದಲ) ನಿಮಗೆ ಅವಕಾಶವಿದೆ ಎಂದು ಹೇಳಿ ನೀವು ರೈತರ ಆತ್ಮಹತ್ಯೆಯನ್ನು ಸುಳ್ಳು ಆತ್ಮಹತ್ಯೆ ಎಂದು ಹೇಳುತ್ತೀರೇನು?

ಛೇರ್ಮನ್ : ಆಯಿತು, ಕುಳಿತುಕೊಳ್ಳಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾವ ಸರ್ಕಾರವಿದು ? ನೀವು ಮುಂದಿನ ಬೆಂಚಿನಲ್ಲಿರುವವರಿಗೆ please ಮಾಡುವುದಕ್ಕೆ ಮಾತನಾಡುತ್ತಿದ್ದೀರಾ ? (ಗೊಂದಲ) ರೈತರಿಗೆ ಇನ್ನೂ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಸೂಚನೆ ಕೊಡುತ್ತಿದ್ದೀರಾ? (ಗೊಂದಲ) ಮಾನ್ಯ ಛೇರ್ಮನ್‌ರವರೆ, ನೀವು ಇದಕ್ಕೆಲ್ಲ allow ಮಾಡಬಾರದು.

ಛೇರ್ಮನ್ : ನಿಮಗೆ ಅವಕಾಶ ಬಂದಾಗ ನೀವು ಮಾತನಾಡಿ.

ಶ್ರೀ ಕೆ. ಎಂ. ವಿರೂಪಾಕ್ಷಪ್ಪ : ಮಾಡಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಅವಕಾಶವಿದೆ ಎಂದು ಹೇಳಿ ರೈತರ (ಗೊಂದಲ) ಬಗ್ಗೆ ಈ ತರಹ (ಗೊಂದಲ) ಮಾಡಿಕೊಳ್ಳುತ್ತಾರೆಂದು ಹೇಳುವುದಿದೆಯಲ್ಲ, ಇದು ಸದನಕ್ಕೆ ಗೌರವ ತರುವಂಥದ್ದಲ್ಲ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಎಲ್ಲಾ ಪ್ರಕರಣಗಳೂ ಸುಳ್ಳು ಇವೆಯೇ? ಹಾಗಾದರೆ, JPC ಮಾಡಿ. (ಗೊಂದಲ) ಯಾವುದು ಸುಳ್ಳಿದೆ, ಯಾವುದು ಸತ್ಯವಿದೆ ಎಂದು ಆಗ ಗೊತ್ತಾಗುತ್ತದಲ್ಲ. ಈ ರೀತಿ ನಿಮ್ಮ attitude ಇದ್ದರೆ ನಾವು opposition ಕಡೆಯಿಂದ ಸಹಿಸುವುದಕ್ಕಾಗುವುದಿಲ್ಲ. ನಾವು ರೈತರ ಪರವಾಗಿ ಇಲ್ಲಿ ಬಂದಿದ್ದೇವೆ. ಇವರು ಏನೋ ಒಂದು incident ಹೇಳಿ ಎಲ್ಲಾ ಪ್ರಕರಣ ಸುಳ್ಳೆಂದು ಹೇಳುತ್ತೀರಾ ? ಅಂದರೆ, ಈ ರಾಜ್ಯದಲ್ಲಿ ಗೊಬ್ಬರದ ಕೊರತೆಯಿಲ್ಲವೇ ? ಈ ರೀತಿ ನೀವು cover up

ಮಾಡುವುದಕ್ಕೆ Ruling Party ಸದಸ್ಯರು ಈ ರೀತಿ ಸಮಸ್ಯೆಯನ್ನು ಹುಟ್ಟು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ.

ಛೇರ್ಮನ್ : ನೀವು ಕುಳಿತುಕೊಳ್ಳಿ, ನೀವು ಮಾತನಾಡಿದ್ದೀರಿ. ಈಗ ಅವರಿಗೆ ಮಾತನಾಡಲು ಅವಕಾಶ ಕೊಡಲಾಗಿದೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅವರು ಬರೆದುಕೊಂಡು ಬಂದು ಓದುತ್ತಿದ್ದಾರೆ. ಬರೆದುಕೊಂಡು ಬಂದು ಓದುವುದು ಯಾವ ನಿಯಮದಲ್ಲಿದೆ ಹೇಳಿ ? ನನ್ನದು point of order ಇದೆ. (ಗೊಂದಲ) ಬರೆದುಕೊಂಡು ಬಂದು ಓದುವುದಕ್ಕೆ ಅವಕಾಶವಿಲ್ಲ.

(ಗೊಂದಲ)

ಛೇರ್ಮನ್ : ನೀವು ನೇರವಾಗಿ ನನ್ನ ಕಡೆಗೆ ನೋಡಿಕೊಂಡು ಮಾತನಾಡಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಛೇರ್ಮನ್‌ರವರೆ, ನನ್ನದು point of order ಇದೆ.

(ಗೊಂದಲ)

ಛೇರ್ಮನ್ : ನೀವು ಮಾತನಾಡಿ. ಅವರನ್ನು ಸಂಬೋಧನೆ ಮಾಡುವ ಅವಶ್ಯಕತೆ ಇಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಛೇರ್ಮನ್‌ರವರೆ, ನನ್ನದು point of order ಇದೆ. ಅವರು ಬರೆದುಕೊಂಡು ಓದುತ್ತಿದ್ದಾರೆ. ಬರೆದುಕೊಂಡು ಬಂದು ಓದುವುದನ್ನು allow ಮಾಡಬೇಡಿ.

(ಗೊಂದಲ)

ಛೇರ್ಮನ್ : ನೀವು ನನ್ನ ಕಡೆಗೆ ನೋಡಿಕೊಂಡು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸದಸ್ಯರು ಏನಾದರೂ ಹೇಳಬೇಕಾಗಿರುವುದಿದ್ದರೆ, ಅವನ್ನು ಸಭಾಧ್ಯಕ್ಷರ ಪೀಠವನ್ನು ನೋಡಿಕೊಂಡು ಹೇಳಲಿ. ಬೇರೆ ಸದಸ್ಯರ ಹತ್ತಿರ ಮಾತನಾಡುವ ಅವಶ್ಯಕತೆ ಇಲ್ಲ.

ಛೇರ್ಮನ್ : ನನ್ನ ಕಡೆಗೆ ನೋಡಿಕೊಂಡು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಿರೂಪಾಕ್ಷಪ್ಪನವರು ಹೊಸದಾಗಿ ಆರಿಸಿ

ಬಂದಿದ್ದಾರೆ. ಆ ಹಿನ್ನೆಲೆಯಲ್ಲಿ ರವೀಂದ್ರನಾಥ್ ರವರು ..... (ಗೊಂದಲ) ವಿರೂಪಾಕ್ಷಪ್ಪನವರು ಹೊಸದಾಗಿ ಆರಿಸಿ ಬಂದಿದ್ದಾರೆ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಛೇರ್ಮನ್‌ರವರೆ, ನೀವು direction ಕೊಡಿ. (ಗೊಂದಲ) ಕಾನೂನು ಗೊತ್ತಿದೆ .....

(ಗೊಂದಲ)

ಛೇರ್ಮನ್ : ನೀವು ನನ್ನ ಕಡೆ ನೋಡಿಕೊಂಡು ಮಾತನಾಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : I am on a point of order. You have to allow me.

(ಗೊಂದಲ)

ಛೇರ್ಮನ್ : ನಿಮಗೆ ಮಾತನಾಡಲು ಅವಕಾಶವಿದೆ. ಅವರು yield ಆಗುತ್ತಿಲ್ಲ. ಇದರಲ್ಲೇನೂ point of order ಇಲ್ಲ. ಅವರಿಗೆ ಮಾತನಾಡುವ ಅವಕಾಶವಿದೆ. ಆಮೇಲೆ, ನಿಮ್ಮವರು ಮಾತನಾಡಲಿ. ಈಗ ನೀವು ಮಾತನಾಡುವುದಕ್ಕೆ ಅವಕಾಶವಿಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಹಾಗಲ್ಲ ಛೇರ್ಮನ್‌ರವರೆ, ನಾನು point of order ಮೇಲಿದ್ದೇನೆ, you have to allow me first. You have to listen me. (ಗೊಂದಲ) you have to give ruling. (ಗೊಂದಲ) ನಾನು point of order ಮೇಲಿದ್ದಾಗ ನನಗೆ allow ಮಾಡುವುದಿಲ್ಲವೇ ?

(ಗೊಂದಲ)

ಛೇರ್ಮನ್ : ಅವರು ಮಾತನಾಡಿದ ಮೇಲೆ ನಿಮ್ಮ ಕಡೆಯವರಿಗೆ ಮಾತನಾಡಲು ಅವಕಾಶವಿದೆ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾವ ರೀತಿಯ ಸರ್ಕಾರ ನಡೆಯುತ್ತಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು point of order rise ಮಾಡಿದ್ದಾರೆ. ನೀವು point of order ಅನ್ನು ಬೇಕಾದರೆ ತಳ್ಳಿ ಹಾಕಿ. ಆದರೆ, ಆ point of order ಏನು ಎನ್ನುವುದನ್ನು ಕೇಳಿ. Point of order ಅನ್ನು ಹಾಗೆ reject ಮಾಡುವುದಕ್ಕೆ ಬರುವುದಿಲ್ಲ. ನೀವು ಕೇಳಿ, ಬೇಕಾದರೆ ತಳ್ಳಿ ಹಾಕಿ. ಅವರು ಏನು ಹೇಳುತ್ತಾರೆ. ಕೇಳಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : You have to allow me. ನಾನು ಹೇಳುವುದು ತಪ್ಪಿದೆಯೋ, ಇಲ್ಲವೋ ಎಂದು ನೀವು ನಾನು ಹೇಳಿದ ಮೇಲೆ ruling ಕೊಡಿ.

(ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

(ಗೊಂದಲ)

ಶ್ರೀ ಕೆ. ಎಂ. ವಿರೂಪಾಕ್ಷಪ್ಪ: ಸದನದ ಗೌರವವನ್ನು ಕಾಪಾಡಬೇಕು. ಮೊದಲು ಒಬ್ಬರು ಮಾತನಾಡುವಾಗ ಇನ್ನೊಬ್ಬರು ಮಾತನಾಡಬಾರದು.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: I am on a point of order ಮೇಲೆ ನಾನು ನಿಂತಿದ್ದೇನೆ.

ಶ್ರೀ ಕೆ. ಎಂ. ವಿರೂಪಾಕ್ಷಪ್ಪ: ರೈತರ ಬಗ್ಗೆ ನಿಮಗೆ ಮಾತ್ರ ಕಳಕಳಿ ಇರುವುದಲ್ಲ. ಎಲ್ಲ ಜನಪ್ರತಿನಿಧಿಗಳಿಗೂ ಕಳಕಳಿ ಇದೆ. ಯಾವ್ಯಾವ ಕಾಲದಲ್ಲಿ ಎಷ್ಟೆಷ್ಟು ಗೋಲಿಬಾರ್ ಆಗಿದೆ? ಎಷ್ಟೆಷ್ಟು ಆತ್ಮಹತ್ಯೆಗಳಾಗಿವೆ? ಎನ್ನುವುದನ್ನು ನಾನು ತಮಗೆ ತಿಳಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ. ನಾನು ಮಾತನಾಡುತ್ತಿದ್ದೇನೆ. ಅವರು ಎದ್ದು ನಿಂತು .....

(ಗೊಂದಲ)

ಅಧ್ಯಕ್ಷರು: ವಿರೂಪಾಕ್ಷಪ್ಪನವರೆ, ಒಂದು ನಿಮಿಷ ಸುಮ್ಮನಿರಿ

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಗೌರವಾನ್ವಿತ ಸದಸ್ಯರು reading a prepared text and is not allowed.

ಅಧ್ಯಕ್ಷರು: ಅವರು ಓದುತ್ತಿದ್ದಾರೆಯೇ?

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಅವರು ಓದುತ್ತಿದ್ದಾರೆ and it is not allowed and that is my point of order. ಕೆಲವು ಹೊಸ ಸದಸ್ಯರು ಬಂದಿದ್ದಾರೆ. ನೀವು ಅವರಿಗೆ training ಕೊಡಿಸಿ. ನಾವು last time ಹೊಸದಾಗಿ ಆರಿಸಿ ಬಂದಿದ್ದಾಗ ನಮಗೆ training ಕೊಡಿಸಿದ್ದೀರಿ. ಏಕೆಂದರೆ, when I am standing on point of order you have to allow me. Allow ಮಾಡುತ್ತಿಲ್ಲ.

ಅಧ್ಯಕ್ಷರು: ಶರಣ್ ಪ್ರಕಾಶ್‌ರವರೆ, ನೀವೇನು point of order ಹೇಳುತ್ತಿದ್ದೀರಿ, printed text ಅನ್ನು ಓದಬಾರದೆಂದು, ಹೇಳಬಾರದೆಂದು ಹೇಳುತ್ತಿದ್ದೀರಿ. ನಾನು ಹೇಳುತ್ತಿದ್ದೇನೆ. ಅವರು ಭಾಷಣ ಮಾಡುವ ಸಂದರ್ಭದಲ್ಲಿ ಯಾವುದಾದರೊಂದು reference ಅನ್ನು ಮಾಡಬಹುದು, ಪತ್ರಿಕೆಯಲ್ಲಿರುವುದನ್ನು, ಪುಸ್ತಕದಲ್ಲಿರುವುದನ್ನು ಯಾರದೋ statement ಅನ್ನು ಸಾಕಷ್ಟು ಸಲ ಇಲ್ಲಿದ್ದ ನಾಯಕರು refer ಮಾಡಿದ್ದಾರೆ. ಅದನ್ನು ಓದುವುದನ್ನು ಮಾಡಿದ್ದಾರೆ. ಹೀಗಾಗಿ, ಇವತ್ತು ಅಂಥದ್ದೇನಾದರೂ ಓದಿದರೆ, ಅದನ್ನೇ point of order ನಲ್ಲಿ ಎತ್ತಲಿಕ್ಕಾಗುವುದಿಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಅಧ್ಯಕ್ಷರೆ, ನೀವು ಪೂರ್ತಿ ಕೇಳಬೇಕು. ಏಕೆಂದರೆ, ಮೊದಲು ನನ್ನ submission ಕೇಳಿ. ಅವರು ಯಾವುದೇ reference ಮಾಡಿದ್ದರೆ ನಾನು ಒಪ್ಪುತ್ತಿದ್ದೆ. He has read whole text. ಅವರು prepare ಮಾಡಿಕೊಂಡು ಬಂದಿರುವುದನ್ನು ಇಲ್ಲಿ ಓದುತ್ತಿದ್ದಾರೆ. ಬೇರೆ ಎಲ್ಲ ಸದಸ್ಯರನ್ನು ಕೇಳಿ. ಬೇಕಿದ್ದರೆ, ಬೇರೆ ಸದಸ್ಯರನ್ನು ನೀವು ಕೇಳಿ. ನೀವು ತರಿಸಿ ನೋಡಿ. ಅವರು ಯಾವುದೇ reference ಮಾಡಿಲ್ಲ. ಅವರು prepared text ಅನ್ನು ಓದುತ್ತಿದ್ದಾರೆ.

(ಈ ಹಂತದಲ್ಲಿ ಶ್ರೀ ಸೋಮಶೇಖರರೆಡ್ಡಿಯವರು ತಮ್ಮ ಸ್ಥಾನ ಬಿಟ್ಟು ಬೇರೆ ಸ್ಥಾನದಿಂದ ಮಾತನಾಡಲು ಆರಂಭಿಸಿದರು)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಆ ಸದಸ್ಯರು ತಮ್ಮ ಸ್ಥಾನ ಬಿಟ್ಟು ಬೇರೆ ಸ್ಥಾನದಿಂದ ಮಾತನಾಡುವ ಹಾಗಿಲ್ಲ. He is not a member . . . (ಗೊಂದಲ) ಅವರು ಅವರ seat ಗೆ ಹೋಗಿ ಮಾತನಾಡಲಿ. (ಗೊಂದಲ) ನೀವು ಸದನವನ್ನು ನಡೆಸುತ್ತಿದ್ದೀರೋ . . . (ಗೊಂದಲ) ಎಲ್ಲಿಂದ ಮಾತನಾಡಬೇಕೆಂದೂ ಸದಸ್ಯರಿಗೆ ಗೊತ್ತಿಲ್ಲ. (ಗೊಂದಲ) What is this?

(ಗೊಂದಲ)

ಅಧ್ಯಕ್ಷರು: ದಯವಿಟ್ಟು, ಕುಳಿತುಕೊಳ್ಳಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನಾನೀಗ ಪ್ರಸ್ತಾಪಿಸಿದ್ದು ಮಾನ್ಯ ಸದಸ್ಯರೇನು ಹೇಳುತ್ತಿದ್ದಾರೆ, ಅದನ್ನು curb ಮಾಡಬೇಕೆಂದಲ್ಲ. ಈ ಸದನ ಕೆಲವೊಂದು ನಿಯಮಾವಳಿಗಳಿಗೆ ಬದ್ಧವಾಗಿದೆ. ಆ ನಿಯಮಾವಳಿಗಳನ್ನು ನಾವೆಲ್ಲರೂ ಪಾಲಿಸಿದರೆ ಮಾತ್ರ ಈ ಸದನ

ಸರಿಯಾಗಿ ನಡೆಯಲಿಕ್ಕೆ ಸಾಧ್ಯವಿದೆ. ನಾನೇನು ಹೇಳುತ್ತಿದ್ದೇನೆಂದರೆ, ಆ ಸದಸ್ಯರು complete prepare ಮಾಡಿರುವ text ಅನ್ನು ಓದಿದ್ದಾರೆ. ಎಲ್ಲಾದರೂ reference ಕೊಟ್ಟಿದ್ದರೆ ನಾನು ನಿಮ್ಮ ಮಾತನ್ನು ಒಪ್ಪಿಕೊಳ್ಳುತ್ತಿದ್ದೆ. ಬೇಕಿದ್ದರೆ ನೀವು ಕಾಪಿ ತರಿಸಿ. ನೀವು record ಗೆ ಹೋಗಿ. ಅವರು ಅವರ ಕೈಯಲ್ಲಿರುವ text ಅನ್ನು ಓದಿದ್ದಾರೆಯೋ, ಇಲ್ಲವೋ? ಎನ್ನುವುದನ್ನು ನೀವು ನೋಡಿ. ಇದೇ ನನ್ನ ಪಾಯಿಂಟ್. ಯಾವುದೋ ಒಂದು reference ಕೊಟ್ಟು ನೀವು entire ಆಗಿರುವ ಪ್ರಕರಣಗಳು ಸುಳ್ಳು ಪ್ರಕರಣವೆಂದು ಹೇಳಿ ಹೊರಗೆ ಇರುವ ರೈತರ ಗಮನಕ್ಕೆ ಹೋದರೆ, ನಮ್ಮ ಸದನದಲ್ಲಿ ಇವತ್ತು ಯಾವ ರೀತಿಯಾಗಿ ನಮ್ಮ ಬಗ್ಗೆ ಭಾವನೆ ಇದೆ ಎನ್ನುವ ತಪ್ಪು ಮಾಹಿತಿ ಅವರಿಗೆ ಹೋಗಬಾರದೆಂದು ಹೇಳುತ್ತಿದ್ದೇನೆ. ಆ ಸದಸ್ಯರ ಮಾತನ್ನು curb ಮಾಡಬೇಕು. Govt. ಅವರು protect ಮಾಡುತ್ತಿದ್ದಾರೆಂದು ನಾನು ಹೇಳುತ್ತಿಲ್ಲ. ಆದರೆ, ಅವರು prepare ಮಾಡಿಕೊಂಡು ಬಂದಿರುವ text ಅನ್ನು ಓದುವುದಕ್ಕೆ ಸರ್ಕಾರದವರು ಕೊಟ್ಟಿದ್ದಾರೆಯೇ? Please examine this. It should be expunged.

ಅಧ್ಯಕ್ಷರು: ನೋಡೋಣ ನಾನು ನೋಡಿಕೊಂಡು ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆ. ವಿರೂಪಾಕ್ಷಪ್ಪನವರೆ, ನೀವು ಚರ್ಚೆಯಲ್ಲಿ ಇಲ್ಲಿ ಭಾಗವಹಿಸಲಿಕ್ಕೆ ಅವಕಾಶ ಕೊಟ್ಟಿದೆ. ನೀವು ಚರ್ಚೆಯಲ್ಲಿ ಭಾಗವಹಿಸಿ. ನಿಮಗೇನು ಮಾತನಾಡಲು ವಿಷಯವಿದೆ ಮಾತನಾಡಿ. ಎಲ್ಲಿಯಾದರೂ ಯಾವುದಾದರೂ ಪಾಯಿಂಟ್ ಬಗ್ಗೆ ಯಾವುದಾದರೂ statement ಬಗ್ಗೆ reference ಮಾಡುವುದಾದರೆ reference ಮಾಡಿ ಅಥವಾ ಪೂರ್ಣವಾಗಿ ನೀವು written speech ಮಾಡಬೇಕಾದರೆ ಮೊದಲೇ ನಮ್ಮಿಂದ ಪರ್ಮಿಷನ್ ತೆಗೆದುಕೊಳ್ಳಬೇಕಾಗುತ್ತದೆ. ನೀವು ಇಡೀ ನಿಮ್ಮ ಭಾಷಣವನ್ನು written ಆಗಿ ಇರುವುದನ್ನು ಓದಬೇಕಾಗಿದ್ದರೆ ನಮ್ಮ permission ತೆಗೆದುಕೊಳ್ಳಬೇಕು. ಎಲ್ಲಿಯಾದರೂ reference ಮಾಡುವುದಾಗಿದ್ದರೆ ನೀವು reference ಮಾಡಬಹುದಷ್ಟೆ.

ಶ್ರೀ ಕೆ. ಎಂ. ವಿರೂಪಾಕ್ಷಪ್ಪ: ರೈತರ ಬಗ್ಗೆ ಎಲ್ಲಾ ಚುನಾಯಿತ ಪ್ರತಿನಿಧಿಗಳಿಗೆ ಇರುವಷ್ಟೇ ಕಳಕಳಿ ನಮಗೂ ಇದೆ. ಆ ಕಳಕಳಿಯನ್ನು . . .

(ಗೊಂದಲ)

ಶ್ರೀ ಕೆ. ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ . . .

ಅಧ್ಯಕ್ಷರು: ಆ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಈಗ ನಾನು ruling

ಕೊಟ್ಟಿದ್ದೇನೆ. ಅವರು speech ಮಾಡುತ್ತಿದ್ದಾರೆ.

ಶ್ರೀ ಕೆ. ಎಂ. ಕೃಷ್ಣಮೂರ್ತಿ: ಅವರು ಭಾಷಣ ಮಾಡಲಿಲ್ಲ. ಅವರು written statement ಅನ್ನು ಓದಿದ್ದಾರೆ. ಹಾಗಾದರೆ, ಅವರು ನಿಮ್ಮ permission ತೆಗೆದುಕೊಂಡಿದ್ದಾರೆಯೇ?

ಅಧ್ಯಕ್ಷರು: ಅವರು ಮಾತನಾಡಲಿ. ನೀವು ಕುಳುತುಕೊಳ್ಳಿ. ನಾನು ಅದರ ಬಗ್ಗೆ decision ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಎಂ. ಕೃಷ್ಣಮೂರ್ತಿ: ಅವರು ಓದಿರುವುದು record ಗೆ ಹೋಗಿದೆ.

(ಗೊಂದಲ)

ಅಧ್ಯಕ್ಷರು: I will take decision. (ಗೊಂದಲ) ನಾನು ಅದರ ಬಗ್ಗೆ ನೋಡುತ್ತೇನೆ.

ಶ್ರೀ ಕೆ. ಎಂ. ವಿರೂಪಾಕ್ಷಪ್ಪ: ರೈತರ ಬಗ್ಗೆ ಅವರಿಗೆಷ್ಟು ಕಳಕಳಿ ಇದೆಯೋ ಅದಕ್ಕಿಂತ ಹೆಚ್ಚಿನ ಕಳಕಳಿ ನಮಗಿದೆ. ಈ ಭಾಗದ ರೈತ, ಅನ್ನದಾತ ಅವನು ಬೆಳೆಯನ್ನು ಬೆಳೆಯಬೇಕು, ಅವನಿಗೆ ಗೊಬ್ಬರ ಸಿಗಬೇಕೆನ್ನುವುದು ನನ್ನ ಕಳಕಳಿ. ಆದರೆ, ಇಲ್ಲಿ ನಡೆಯುತ್ತಿರುವುದೇನು? ನಕಲಿ ರೈತರ ಹೆಸರಿನಲ್ಲಿ ಅತ್ಮಹತ್ಯೆಗಳನ್ನು ಸೃಷ್ಟಿ ಮಾಡಿ ಸಮಾಜಘಾತುಕ ಶಕ್ತಿಗಳು ಇದರ ಲಾಭವನ್ನು ಪಡೆಯುತ್ತಿವೆ. ಅದನ್ನೇ ನಾನು ಉದಾಹರಣೆ ಮೂಲಕ ಈ ಸದನಕ್ಕೆ ತಿಳಿಸುವ ಪ್ರಯತ್ನ ಮಾಡಿದೆ. 2006–07ನೇ ಸಾಲಿನಲ್ಲಿ ಸುಮಾರು 70 ಜನರು, 2007–08ನೇ ಸಾಲಿನಲ್ಲಿ 151 ಜನರು, 2008–07ರಲ್ಲಿ 45 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಭಾರತೀಯ ಜನತಾ ಪಕ್ಷದ ಸರ್ಕಾರವಿರುವಂಥ ಸಂದರ್ಭದಲ್ಲಿ ಮಾತ್ರವೇ ಆಗಿಲ್ಲ. ಎಲ್ಲ ಸರ್ಕಾರಗಳು ಇದ್ದ ಸಂದರ್ಭದಲ್ಲಿಯೂ ಆತ್ಮಹತ್ಯೆಗಳಾಗಿವೆ. ಇವತ್ತಿಗೂ ನರಗುಂದ ಮತ್ತು ನವಲಗುಂದದಲ್ಲಿ, ನಾಗಸಮುದ್ರದಲ್ಲಿ ನಡೆದ ಗೋಲಿಬಾರ್ ಅನ್ನು ಈ ಜನರು ಇವತ್ತಿಗೂ ಮರೆತಿಲ್ಲ. ಆ ಕಾಲದಲ್ಲಿ ದಿನ ಬಿಟ್ಟು ದಿನ ಗೋಲಿಬಾರ್‌ಗಳು ನಡೆಯುತ್ತಿದ್ದವು. ಇದನ್ನು ಇವತ್ತು ಯಾರೂ ಮರೆಯುವುದಕ್ಕೆ ಸಾಧ್ಯವಿಲ್ಲ. ಆದರೆ, ಇವತ್ತು ಇವರು ಮಾತನಾಡುತ್ತಿದ್ದಾರೆ. ಈ ಕಡೆ ಕುಳಿತಿದ್ದವರು ಆ ಕಡೆ ಕುಳಿತಿದ್ದಾರೆ. ಆ ಕಡೆ ಕುಳಿತಿದ್ದವರು ಈ ಕಡೆ ಕುಳಿತಾಗ ಎಷ್ಟೆಷ್ಟು ಗೋಲಿಬಾರ್ ಗಳನ್ನು ಮಾಡಿಸಿದ್ದೇವೆ, ಎಷ್ಟೆಷ್ಟು ರೈತರ ಜೀವಗಳನ್ನು ತಿಂದಿವೆ, ಎಷ್ಟೆಷ್ಟು ರೈತರ ರಕ್ತವನ್ನು ಹರಿಸಿವೆ ಎನ್ನತಕ್ಕಂಥದ್ದು ಅವರಿಗೆ ಗೊತ್ತಿಲ್ಲವೆ? ರೈತರ ರಕ್ತವನ್ನು ಹರಿಸಿವೆ ಎನ್ನತಕ್ಕಂಥದ್ದು ಅವರಿಗೆ ಗೊತ್ತಿಲ್ಲವೆ? ರೈತರ ರಕ್ತವನ್ನು ಹರಿಸಿದಂಥ ಸಂದರ್ಭದಲ್ಲಿ ಬಹಳಷ್ಟು ಜನ ಈ ಕಡೆ ಇರತಕ್ಕಂಥವರು

ಮಂತ್ರಿಗಳಾಗಿದ್ದರು . . . ನನಗೆ ಮೊದಲು ಮಾತನಾಡಲಿಕ್ಕೆ ಬಿಡಿ. ನೀವು ಎಲ್ಲಾ ಹಿರಿಯ ಸದಸ್ಯರು ಇದ್ದೀರಿ, ಗೌರವಯುತವಾಗಿ ನಡೆದುಕೊಳ್ಳಿ, ಮೊದಲು ಹೊಸದಾಗಿ ಬಂದಂಥ ಒಬ್ಬ ಜನಪ್ರತಿನಿಧಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ . . . ಮಾಡಿ ಕೊಟ್ಟಿದ್ದೀರಾ? ಈಗ ನೀವು ಏನು ಮಾಡಿಕೊಟ್ಟಿದ್ದೀರಿ ಎಂಬುದು ಗೊತ್ತಿಲ್ಲವೆ?

ಅಧ್ಯಕ್ಷರು: ವಿರೂಪಾಕ್ಷಪ್ಪನವರೆ, ನೀವು ಕಂಟಿನ್ಯೂ ಮಾಡಿ, ಅವರ ಜೊತೆಯಲ್ಲಿ ಚರ್ಚೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಕೆ. ಎಂ. ವಿರೂಪಾಕ್ಷಪ್ಪ: ಮಾನ್ಯ ಹಿರಿಯ ಸದಸ್ಯರೆಲ್ಲರೂ ಮಾತನಾಡತಕ್ಕಂಥ ಸಂದರ್ಭದಲ್ಲಿ ಸಮಾಜಘಾತುಕ ಶಕ್ತಿಗಳು ಇದರಲ್ಲಿ ಎಂಟ್ರಿಯಾಗಿಲ್ಲ. ರಾಜಕೀಯ ಪಕ್ಷಗಳು ಇದರಲ್ಲಿ ಎಂಟ್ರಿಯಾಗಿಲ್ಲವೆಂದು ಹೇಳಿದರು. ಪತ್ರಿಕೆಗಳಲ್ಲಿ ಬಂದಿದೆ, ಆತ್ಮಹತ್ಯೆ ಮಾಡಿಕೊಂಡಂಥ ರೈತನಿಗೆ ಪರಿಹಾರ ಕೊಡಿಸಬೇಕೆಂದು ರಸ್ತೆಯಲ್ಲಿ ಶವ ಇಟ್ಟುಕೊಂಡು ಇವರು ರಸ್ತೆತಡೆ ಮಾಡಿದರು, ಏಕೆ ಮಾಡಿದರು? ಅವನು ಸಹಜವಾಗಿ ಸತ್ತಂಥ ವ್ಯಕ್ತಿಯ ಬಗ್ಗೆ ಪ್ರೇರಣೆ ಮಾಡಿ ರಸ್ತೆಯಲ್ಲಿ ತಡೆ ಮಾಡಿದರು. ಆಗ ನಾವು ಅವನಿಗೆ ಇದಲ್ಲವೆಂದು ಮನವರಿಕೆ ಮಾಡಿಕೊಟ್ಟಾಗ ಅವನು ಹೆಣ ತೆಗೆದುಕೊಂಡು ಹೋಗಿ ಹೂತು ಹಾಕಿದ. ಹಾಗಾದರೆ ಇದರಲ್ಲಿ ಭಾಗವಹಿಸಿರುವ ರಾಜಕೀಯ ಪಕ್ಷದ ಮುಖಂಡರುಗಳು ಮತ್ತು ಸಂಘಟನೆಯ ಶಕ್ತಿಗಳ ಹೆಸರುಗಳು ಇವೆ. ಆದರೆ, ನಾವು ಅವುಗಳನ್ನು ಇಲ್ಲಿ ಹೇಳಿ ಬಾಯಿಯನ್ನು ಹೊಲಸು ಮಾಡಿಕೊಳ್ಳುವುದಕ್ಕೆ ತಯಾರಿಲ್ಲ. ಬಹಳ ಜನರ ಹೆಸರುಗಳು ಪತ್ರಿಕೆಗಳಲ್ಲಿ ಇವೆ, ಬೇಕಾದರೆ ನಮ್ಮ ಬಗ್ಗೆ ಮಾತನಾಡತಕ್ಕಂಥವರು ನೋಡಲಿ. ಆತ್ಮೀಯ ಮಿತ್ರರೆ, ಮಾನ್ಯ ಶ್ರೀನಿವಾಸ ಪ್ರಸಾದ್ ರವರು ಮಾತನಾಡುತ್ತಾ, ಬೊಮ್ಮರಾನಹಳ್ಳಿ ಅಜ್ಜಪ್ಪನ ಬಗ್ಗೆ ಹೇಳಿದರು. ಇವರು ದಾವಣಗೆರೆ ಜಿಲ್ಲೆಯ ಮಲೆಬೆನ್ನೂರಿನವರು. ಅವರುಒಂದು ತಿಂಗಳ ಹಿಂದೆ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದರು. ಆತ ಬಹಳ ದಿವಸಗಳಿಂದ ಕುಡಿಯುತ್ತಾ ಇದ್ದ, ಆತ ಒಬ್ಬ ಅಲೆಮಾರಿ ಎಂದು ವರದಿ ಇದೆ. ನಮ್ಮ ದಾವಣಗೆರೆ ಜಿಲ್ಲೆಯಲ್ಲಿ ಮಾನ್ಯ ಕೃಷಿ ಸಚಿವರ ನೇತೃತ್ವದಲ್ಲಿ ನಾವು ಒಂದು ಸಭೆ ಕರೆದೆವು ಆ ಸಭೆಯಲ್ಲಿ ಎಲ್ಲಾ ಶಾಸಕರು. ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು, ಎಲ್ಲರೂ ಇದ್ದರು. ಅವರೆಲ್ಲರೂ ಇದ್ದಂಥ ಸಂದರ್ಭದಲ್ಲಿ ಈ ಗೊಬ್ಬರದ ಅಭಾವವನ್ನು ಯಾವ ರೀತಿಯಾಗಿ ವಿತರಿಸಬೇಕು ಎನ್ನುವುದರ ಬಗ್ಗೆ ಚರ್ಚೆ ನಡೆಯಿತು. ಈ ಸಂದರ್ಭದಲ್ಲಿ ಕೆಲವರು ಪಹಣಿ ತರಬೇಕೆಂದರು, ಇನ್ನೂ ಕೆಲವರು ಏನನ್ನಾದರೂ ಕೊಡಬೇಕೆಂದರು. ಆಗ ನಾವು

ಮತ್ತು ಮಂತ್ರಿಗಳೆಲ್ಲರೂ ಸೇರಿ, ಒಟ್ಟು ಜಮೀನು ಹೊಂದಿರತಕ್ಕಂಥ ಹಿಡುವಳಿ ಪತ್ರವನ್ನು ವಿಲೇಜ್ ಅಕೌಂಟೆಂಟ್ ನಿಂದ ತಂದು ತೋರಿಸಿದರೆ ಅವನಿಗೆ ಗೊಬ್ಬರವನ್ನು ವಿತರಿಸತಕ್ಕಂಥ ಸೊಸೈಟಿಗಳು ಮತ್ತು ಡೀಲರ್ ಗಳ ಮೂಲಕ ವಿತರಿಸತಕ್ಕಂಥ ವ್ಯವಸ್ಥೆ ಮಾಡಬೇಕೆಂದು ನಾವೆಲ್ಲರೂ ಅಲ್ಲಿ ತೀರ್ಮಾನ ತೆಗೆದುಕೊಂಡೆವು. ಹಾಗಾದರೆ ಸತ್ತಂಥ ಅಜ್ಜಪ್ಪ ಅವನು ಯಾವುದೇ ಜಮೀನನ್ನು ಹೊಂದಿಲ್ಲ ಮತ್ತು ಬಗರ್ ಹುಕುಂ ಜಮೀನನ್ನು ಸಾಗುವಳಿ ಮಾಡಿಲ್ಲ ಮತ್ತು ಗೊಬ್ಬರ ತೆಗೆದುಕೊಳ್ಳುವುದಕ್ಕೆ ಚೀಟಿ ಏನು ಇತ್ತು, ಅದು ಕೂಡ ಅವನ ಬಳಿ ಇರಲಿಲ್ಲ, ಹಾಗಾದರೆ ಅದನ್ನೇ ನೀವು ಆತ್ಮಹತ್ಯೆ ಪ್ರಕರಣ ಎಂದು ಹೇಗೆ ನಿರ್ಣಹಿಸುತ್ತೀರಿ/ ಈ ರೀತಿ ನಕಲಿ ಆತ್ಮಹತ್ಯೆ ಪ್ರಕರಣಗಳು ಸರ್ಕಾರದಿಂದ ಪರಿಹಾರ ಪಡೆಯುವುದಕ್ಕಾಗಿ ಮಾತಕ್ಕಂಥದ್ದನ್ನು ವಿರೋಧ ಪಕ್ಷಗಳು ಬಹಳ ದೊಡ್ಡದಾಗಿ ಮಾಡುತ್ತಿರುವುದರಿಂದ ನಿಜವಾದ ರೈತನಿಗೆ ಅನ್ಯಾಯವಾಗುತ್ತಿದೆ. ನಿಜವಾದ ಕಳಕಳಿ ಇದ್ದರೆ ನಿಜವಾಗಿ ರೈತನಿಗೆ ಆಗತಕ್ಕಂಥ ಅನ್ಯಾಯವನ್ನು ಇವರು ಪ್ರತಿಭಟಿಸಲಿ. ನಿಜವಾದ ರೈತನಿಗೆ ಗೊಬ್ಬರವನ್ನು ತರಿಸಿಕೊಡಲಿಕ್ಕೆ ಇವರು ಸಹಕಾರ ಕೊಡಲಿ, ಕೇಂದ್ರ ಸರ್ಕಾರದಿಂದ ಬಹಳಷ್ಟು ಪ್ರಮಾಣದಲ್ಲಿ ಗೊಬ್ಬರ ತರಿಸುವುದರಲ್ಲಿ ಮಾನ್ಯ ಮಂತ್ರಿಗಳು ಜೊತೆ ಇವರು ಕೂಡ ಹೋಗಿ ತರಿಸಲಿ. ಇವತ್ತು ಕೇಂದ್ರ ಸರ್ಕಾರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಏನು ಇದೆ. ಅಲ್ಲಿಂದ ಗೊಬ್ಬರವನ್ನು ತರಿಸಿ ರಾಜ್ಯಾದ್ಯಂತ ವಿತರಿಸಲಿ ಎಂದು ಹೇಳುತ್ತಾ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಂಥ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾತನಾಡುವುದಕ್ಕೆ ಎಲ್ಲರಿಗೂ ಹಕ್ಕಿಗೆ ಅವರು ಮಾತನಾಡಲಿ. ಸ್ವಾಭಾವಿಕವಾಗಿ ಡಿಫೆಂಡ್ ಮಾಡಿಕೊಳ್ಳುವ ದೃಷ್ಟಿಯಿಂದ ಸರ್ಕಾರದವರು ಪಾಪ ಅವರಿಗೆ ಏನೇನು ಮಾಹಿತಿಗಳನ್ನು ಕೊಡುತ್ತಾರೋ ಅದನ್ನು ಸದನದಲ್ಲಿ ಪ್ರಸ್ತಾಪಿಸುತ್ತಾರೆ. ಓದುತ್ತಾರೆ, ಹೇಳುತ್ತಾರೆ. ಅಥೆಂಟಿಕ್ ರೆಕಾರ್ಡ್ ಇದ್ದರೆ ತಂದು ಈ ರೀತಿಯಾಗಿ ಮಾತನಾಡುತ್ತಾರೆ. ಆದರೆ, ನಿಮಗೆ ಅವನು ರೈತನೋ ಇಲ್ಲವೋ ಎನ್ನುವ ಸತ್ಯಾಂಶವನ್ನು ನಾಳೆ ನೀವು ತನಿಖೆ ಮಾಡಿದಾಗ ಗೊತ್ತಾಗುತ್ತದೆ. ಆಗ ಅದು ಹೊರ ಬರಲಿ. ಆದರೆ, ನೀವು ಸಾರಾಸಗಟಾಗಿ ಎಲ್ಲಾ ರೈತರ ಬಗ್ಗೆ ಇದೇ ರೀತಿಯಾಗಿ ಹೇಳಿಕೊಂಡು ಹೋದರೆ, ನೀವಾಗಿ ರೈತರಿಗೆ ಅವಮಾನ ಮಾಡಿದ ಹಾಗೆ ಆಗುತ್ತದೆ ಮತ್ತು ರೈತರ ಬಗ್ಗೆ ನಿಮಗಿರುವ ಕಾಳಜಿ ಏನು ಎನ್ನುವುದು ಇದು ತೋರಿಸುತ್ತದೆ. ನಾವೆಲ್ಲರೂ ಕೂಡಿ ಸದನದಲ್ಲಿ ಅದಕ್ಕೆ ಪರಿಹಾರ ಕಂಡು ಹಿಡಿಯುವುದನ್ನು ಬಿಟ್ಟು ನಾವು

ಕೇವಲ ಅವನು ರೈತ ಅಲ್ಲ, ಅವನು ಕುಡುಕ, ಅವನು ಅಲೆಮಾರಿ, ಅವನು ಅಲ್ಲಿಂದ ಬಂದ, ಇಲ್ಲಿಂದ ಬಂದ, ಎಂದು ಹೇಳಿ ಈ ರೀತಿಯಾಗಿ ಹೀಯಾಳಿಸಿ ಮಾತನಾಡತಕ್ಕಂಥದ್ದು ಮಾಡಿದರೆ ನನಗೆ ಅನ್ನಿಸುತ್ತದೆ: ಈ ಸದನದಿಂದ ನಾವು ಕರ್ನಾಟಕ ಜನತೆಗೆ ರಾಂಗ್ ಮೆಸೇಜ್ ಅನ್ನು ಕಳುಹಿಸುತ್ತೇವೆ ಎನ್ನತಕ್ಕಂಥ ಮಾತನ್ನು ನಿಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ನೆ. ಲ ನರೇಂದ್ರ ಬಾಬು (ಮಹಾಲಕ್ಷ್ಮೀ ಬಡಾವಣೆ): ಮಾನ್ಯ ಅಧ್ಯಕ್ಷರೆ, ಮಾತನಾಡಿದಂಥ ಎಲ್ಲಾ ಹಿರಿಯ ಸದಸ್ಯರು ರೈತರ ಬಗ್ಗೆ ಕಳಕಳಿ ಇರತಕ್ಕಂಥವರು, ಗೋಲಿಬಾರ್ ಮತ್ತು ರಸಗೊಬ್ಬರದ ವಿತರಣೆಯಲ್ಲಿ ಆಗಿರುವ ಲೋಪದ ಪರಿಣಾಮದಿಂದಾಗಿ, ಗೋಲಿಬಾರ್ ನಲ್ಲಿ ರೈತ ಸತ್ತಿರುವುದು ಮತ್ತು ರೈತಾಪಿ ಜನ ಮುಂಗಾರು ಮಳೆಯ ಹಿನ್ನೆಲೆಯಲ್ಲಿ ಮತ್ತು ಮುಂಗಾರು ಮಳೆ ನಂತರ ಆಗಿರತಕ್ಕಂಥ ಪ್ರಸಂಗದಲ್ಲಿ ಆಗಿರತಕ್ಕಂಥ ತೊಳಲಾಟದಲ್ಲಿ ಬಹಳಷ್ಟು ವಿಚಾರಗಳನ್ನು ತಿಳಿಸಿದ್ದಾರೆ. ನಾನಾದರೂ ಈ ಸಂದರ್ಭದಲ್ಲಿ ಹೇಳುವುದೇನೆಂದರೆ, "ವ್ಯವಸಾಯ ಮನೆಯ ಮಂದಿ ಎಲ್ಲಾ ಸಾಯ" ಎನ್ನುವ ಒಂದು ಗಾದೆ ಕನ್ನಡದಲ್ಲಿದೆ. ಈಒಂದು ಪ್ರಕರಣ ನೋಡಿದಾಗ ಪಕ್ಷಾತೀತವಾಗಿ ರೈತನ ಹಿತದ ಬಗ್ಗೆ ನಾವೆಲ್ಲರೂ ಸೇರಿ ಚಿಂತನೆ ಮಾಡಬೇಕಾಗುತ್ತದೆ. ಇವತ್ತು ಅವರ ಬಗ್ಗೆ ಚಿಂತನೆ ಮಾಡಿಲಿಲ್ಲವೆಂದರೆ, ಅದಕ್ಕಿಂತ ದ್ರೋಹ ಮತ್ತೊಂದಿಲ್ಲ. 224 ಜನ ಶಾಸಕರನ್ನು ಕರ್ನಾಟಕದ ಮೂಲೆ ಮೂಲೆಗಳಿಂದ ಜನ ಆಯ್ಕೆ ಮಾಡಿ ಕಳುಹಿಸಿದ್ದಾರೆ. ರೈತನಿಗೆ ಆ ಋಣ ತೀರಿಸಬೇಕಾದರೆ, ರೈತರ ಹಿತವನ್ನು ಕಾಪಾಡಬೇಕಾದರೆ, ನಾನು ನಿರೀಕ್ಷೆ ಮಾಡಿದ್ದೇನೆಂದರೆ, ನಮ್ಮ ಮುಖ್ಯಮಂತ್ರಿಗಳಾದ ಸನ್ಮಾನ್ಯ ಯಡಿಯೂರಪ್ಪನವರು ಹಸಿರು ಶಾಲನ್ನು ಹೊದ್ದು ರೈತರ ಹೆಸರಿನಲ್ಲಿ ಸಂಕಲ್ಪ ಮಾಡಿ ಆ ದಿವಸ ಪ್ರಮಾಣ ವಚನ ತೆಗೆದುಕೊಂಡಾಗ ಬಹಳಷ್ಟು ಸಮಸ್ಯೆಗಳ ಬಗ್ಗೆ ಇವರು ಸಮರೋಪಾದಿಯಲ್ಲಿ ತ್ವರಿತವಾಗಿ ತೆಗೆದುಕೊಳ್ಳುತ್ತಾರೆಂದುಕೊಂಡಿದ್ದೆ. ಇವತ್ತು ನಿಮಗೆ ಗೊತ್ತಿರಬಹುದು. ಸರ್ವೇಸಾಮಾನ್ಯವಾಗಿ ರಾಜ್ಯದಲ್ಲಿ ಮುಂಗಾರು ಮೇ ಅಂತ್ಯದಲ್ಲಿ ಆರಂಭವಾಗುತ್ತದೆ. 13 ಜಿಲ್ಲೆಗಳು ಈ ಒಂದು ವ್ಯಾಪ್ತಿಯಲ್ಲಿ ಬರತಕ್ಕಂಥ ನಿಟ್ಟಿನಲ್ಲಿ ಈಗಾಗಲೇ ಬಹಳ ಜನ ರೈತರು ಮಳೆಯನ್ನೇ ಅವಲಂಬಿಸಿಕೊಂಡಿರುವ ರೈತರು ಕೃಷಿ ಮಾಡುತ್ತಿರುತ್ತಾರೆ. ನಮಗೆ ಬೇಡಿಕೆ ಇದ್ದ ರಸಗೊಬ್ಬರದ ಅಂಕಿ ಅಂಶಗಳು ನಮ್ಮ ಅಧಿಕಾರಿಗಳಿಗೂ ಗೊತ್ತಿತ್ತು ಮತ್ತು ಹಿಂದೆ ಇದ್ದಂಥ ರಾಷ್ಟ್ರಪತಿಗಳ ಆಡಳಿತದಲ್ಲೂ ಸಹ ಇದರ ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕಾಗಿತ್ತು ಎನ್ನುವ ಧ್ವನಿ ಇದೆ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ, ನಾವು ಹಂತ ಹಂತವಾಗಿ ಗಮನಿಸಿದಾಗ ಎಲ್ಲೋ ಒಂದು ಕಡೆ ಆಡಳಿತ ಚುಕ್ಕಾಣಿ ಹಿಡಿದಂಥ

ಆಡಳಿತ ಪಕ್ಷ ಇವತ್ತು ವಿಫಲವಾಗಿದೆ. ಇದೇಕೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಪ್ರಮಾಣ ವಚನ ತೆಗೆದುಕೊಂಡ ನಂತರ ಮಾನ್ಯ ಮುಖ್ಯಮಂತ್ರಿಗಳು ಖಾತೆಗಳನ್ನು ಹಂಚುವುದಕ್ಕೆ ವಿಳಂಬ ಮಾಡಿದರು. ಬಹುಶಃ ಖಾತೆಗಳನ್ನು ಹಂಚುವುದಕ್ಕೆ ವಿಳಂಬ ಮಾಡಿರುವುದು ಒಂದು ಕಾರಣ ಎಂದು ಹೇಳಬಯಸುತ್ತೇನೆ. ಮುಖ್ಯಮಂತ್ರಿಗಳಾಗಲಿ ಅಥವಾ ಮಂತ್ರಿಗಳೆಂದು ಏನು ಕೆರೆಯಲ್ಪಟ್ಟರೋ ಆ ಒಂದು ಜವಾಬ್ದಾರಿಯನ್ನು ಕೊಟ್ಟಿದ್ದರೆ ಬಹಶಃ ಬಹಳಷ್ಟು ಸಮಸ್ಯೆಗಳ ಬಗ್ಗೆ ಗಮನಹರಿಸಲಿಕ್ಕೆ ಸಾಧ್ಯವಾಗುತ್ತಿತ್ತು ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇವತ್ತು ಸಮರೋಪಾದಿಯಲ್ಲಿ ಕ್ಷಿಪ್ರಗತಿಯಲ್ಲಿ ಸಮಸ್ಯೆಯ ಬಗ್ಗೆ ಚಿಂತನೆ ಮಾಡಿದ್ದರೆ, ರಸಗೊಬ್ಬರದ ಕೊರತೆಯ ಬಗ್ಗೆ ಚಿಂತನೆ ಮಾಡಿದ್ದರೆ, ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. ಏಕೆಂದರೆ, ಇಡೀ ವಿಶ್ವದಲ್ಲಿ ಕರ್ನಾಟಕ ರಸಗೊಬ್ಬರ ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿದೆ. ಇದರ ಹಿನ್ನೆಲೆಯಲ್ಲಿ ಅವಶ್ಯಕವಾಗಿ ಎಷ್ಟು ಬೇಕು ಎಂಬುದರ ಬಗ್ಗೆ ಮೊದಲೇ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಆಡಳಿತ ಬಂದ ಕೂಡಲೇ ಇದರ ಬಗ್ಗೆ ಗಮನಹರಿಸುವಲ್ಲಿ ವಿಫಲವಾಗಿದ್ದರಿಂದ ಈ ಒಂದು ಗಲಭೆ ಶುರವಾಯಿತು. ಜನಗಳು ಹೋರಾಟಕ್ಕೆ ಬೀದಿಗಿಳಿದ ಸಂದರ್ಭದಲ್ಲಿ ಅಧಿಕಾರವನ್ನು ತೆಗೆದುಕೊಂಡು ಉತ್ಸವ ಮಾಡುವುದೆಲ್ಲವನ್ನು ಬಿಟ್ಟು ಸಮಸ್ಯೆ ಬಗ್ಗೆ ಸಂಬಂಧಪಟ್ಟಂಥ ಸಚಿವರುಗಳು, ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಇವರೆಲ್ಲರೂ ಗಮನಹರಿಸಿದ್ದರೆ ಈ ಪರಿಸ್ಥಿತಿ ಬರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ತಮಗೆ ಗೊತ್ತಿದೆ, ಕೃಷಿಕನ ಬೆಲೆ ನಿಮಗೆ ಹೇಳಬೇಕೆಂದರೆ . . ಕಾಳಸಂತೆಕೋರರ ಹಾವಳಿಯನ್ನು ತಡೆಗಟ್ಟುವುದರಲ್ಲಿ ವಿಫಲರಾಗಿದ್ದಾರೆ ಕೃತಕ ಡಿಮ್ಯಾಂಡ್‌ನ್ನು ಕ್ರಿಯೇಟ್ ಮಾಡುವುದಕ್ಕೆ ಬಹುಶಃ ಇವತ್ತು ಅವರ ಹೇಳಿಕೆಯೇ ಕಾರಣ. ಮಂತ್ರಿಗಳು ಕೊಟ್ಟಂಥ ಹೇಳಿಕೆಗಳು ರೈತರಲ್ಲಿ ಗೊಂದಲ ಉಂಟು ಮಾಡಿರುವುದು. ಆ ದಿವಸ ತಮಗೆ ಗೊತ್ತಿರಬಹುದು, ಸನ್ಮಾನ್ಯ ಸಚಿವರಾದ ಆಚಾರ್ಯರವರು, ಮಾನ್ಯ ರವೀಂದ್ರನಾಥ್ ರವರು, ಒಂದು ಮಾತನ್ನು ಹೇಳಿದ್ದು ಏನೆಂದರೆ, ಆತ್ಮಹತ್ಯೆ ಮಾಡಿಕೊಂಡಂಥವರು ರೈತರಲ್ಲವೆಂದು ಹೇಳಿದ್ದಾರೆ. ಬಹುಶಃ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬಗ್ಗೆ ನಿಜವಾಗಿಯೂ ಕೂಡ ನಾಚಿಕೆಯಾಗುತ್ತದೆ. ರಾಜ್ಯಾದ್ಯಂತ ಇನ್ನು ಎಷ್ಟು ಜನ ರೈತರು ಆತ್ಮಹತ್ಯೆಗೆ ಬಲಿಯಾಗುತ್ತಾರೆಯೋ ಗೊತ್ತಿಲ್ಲ. ಒಟ್ಟಿನಲ್ಲಿ ಇದರ ಬಗ್ಗೆ ಸರ್ಕಾರ ಮುನ್ನೆಚ್ಚರಿಕೆ ವಹಿಸಬೇಕಾಗುತ್ತದೆ. ಇವತ್ತಿನ ದಿವಸ ಒಬ್ಬ ಸಚಿವರು ಮಾತನಾಡಿದರೆ ಅದು ಸರ್ಕಾರ ಮಾತನಾಡಿದಾಗೆ ಅಗುತ್ತದೆ. ಮೊನ್ನೆ ದಿವಸ ಮಾನ್ಯ ರವೀಂದ್ರನಾಥರವರು ನೀಡಿರುವ

ಹೇಳಿಕೆಯನ್ನು ಕಸ್ತೂರಿ ಟಿ.ವಿ. ಚಾನಲ್‌ನಲ್ಲಿ ನೋಡಿದಾಗ ನಮಗೆ ನಿಜವಾಗಿಯೂ ನಾಚಿಕೆಯಾಗುತ್ತದೆ. ಗಂಡ ಹೆಂಡತಿ ಜಗಳದಿಂದ ಆತ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಹೇಳಿದ್ದಾರೆ. ಇಲ್ಲಿ ಇಡೀ ಮಹಿಳಾ ಸಮಾಜವೇ ಬಹುಶಃ ತಲೆ ತಗ್ಗಿಸುವಂಥ ಒಂದು ಹೇಳಿಕೆಯನ್ನು ಮೊನ್ನೆದಿವಸ ಮಾನ್ಯ ಸಚಿವರು ಟಿ.ವಿ.ಯಲ್ಲಿ ನೀಡಿದ್ದಾರೆ. ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಕೊಡುವಾಗ ಏಕೆ ಈ ರೀತಿಯಾಗಿ ಹಗುರವಾಗಿ ಮಾತನಾಡುತ್ತಾರೆಂದು ಮತ್ತು ಅವರು ಸರ್ಕಾರದವರಲ್ಲವೇ ಎಂಬ ಸಂಶಯ ಬರುತ್ತದೆ ಮತ್ತೆ ಮಾನ್ಯ ಶ್ರೀರಾಮುಲುರವರು ಸಹಾ ಮಾತನಾಡುತ್ತಾ ಏನು ಹೇಳಿದ್ದಾರೆಂದರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಎಸ್.ಎಂ. ಕೃಷ್ಣರವರು ಹಾಗೂ ಮಾನ್ಯ ಕುಮಾರ ಸ್ವಾಮಿಯವರು ಹಾವೇರಿಯಲ್ಲಿ ರೈತರ ಮೇಲೆ ನಡೆದಂಥ ಗೋಲಿಬಾರ್‌ನಲ್ಲಿ ಶಾಮೀಲಾಗಿದ್ದಾರೆಂದು ಹೇಳಿದ್ದಾರೆ. ಬಹುಶಃ ಹೇಳಿಕೆಯನ್ನು ಕೊಡುವುದಕ್ಕಿಂಥ ಮುಂಚೆ ಅವರು ಇದರಲ್ಲಿ ನಿಜವಾಗಿಯೂ ಶಾಮೀಲಾಗಿದ್ದರೆ ಮೊದಲು ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ, ಇಲ್ಲದಿದ್ದರೆ ಅವರು ರಾಜೀನಾಮೆ ಕೊಟ್ಟು ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಲಿ ಒಂದು ಸರ್ಕಾರದಲಿರತಕ್ಕಂಥ ಮಂತ್ರಿಗಳು ಈ ರೀತಿಯಾಗಿ ಹೇಳಿಕೆ ಕೊಡತಕ್ಕಂಥದಲ್ಲ. ಇದು ಏನು ತೋರಿಸುತ್ತದೆಂದರೆ, ಬಹಳ ಹಗುರವಾಗಿ ಮತ್ತು ಬಾಲಿಶ ವರ್ತನೆ ಮಾಡಿರತಕ್ಕಂಥದ್ದು ಎದ್ದು ಕಾಣುತ್ತದೆ. ಈ ಒಂದು ನಿಟ್ಟಿನಲ್ಲಿ ಸರ್ಕಾರ ಈ ರೀತಿಯಾಗಿ ಮಾಡುತ್ತಾ ಹೋದರೆ ಮುಂದಿನ ದಿನಗಳಲಿ ಗೋಲಿಬಾರ್‌ನ ಪ್ರಕರಣಗಳು ಇನ್ನೆಲ್ಲೆಲ್ಲಿ ಆಗುತ್ತವೆಯೋ ಗೊತ್ತಿಲ್ಲ. ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಪಡಿಸುವುದಕ್ಕೆ ಬಯಸುವುದೇನೆಂದರೆ, ಗೋಲಿಬಾರ್ ಮಾಡುವಾಗ ಯಾವ ಅಧಿಕಾರಿ ಅಲ್ಲಿದ್ದರು? ಗೋಲಿಬಾರ್ ಮಾಡುವುದಕ್ಕಿಂಥ ಮುಂಚೆ ಒಬ್ಬ ತಹಶೀಲ್ದಾರ್ ಆಗಲಿ ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು ಅನುಮತಿ ಕೊಡಲಾಗಿತ್ತಾ? ಅಥವಾ ಜಿಲ್ಲಾ ದಂಡಾಧಿಕಾರಿಯವರ ಅನುಮತಿ ಕೊಡಲಾಗಿತ್ತಾ? ಇದಕ್ಕೆ ಯಾರು ಅನುಮತಿ ಕೊಟ್ಟರೆಂಬುದು ತಿಳಿಯಬೇಕು. ಇವತ್ತಿನ ದಿವಸ ಈ ಒಂದು ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ನೀವು ಒಳಪಡಿಸಿರಬಹುದು. ಆದರೆ, ಈ ಸದನ ಇದರ ಬಗ್ಗೆ ತಿಳಿದುಕೊಳ್ಳುವುದಕ್ಕೆ ಬಯಸುತ್ತದೆ. ಏಕೆಂದರೆ, ಈಗಾಗಲೇ ತನಿಖೆಯಾಗಿರತಕ್ಕಂಥ ಎಷ್ಟೋ ವರದಿಗಳು ಬಂದಿದ್ದರೂ ಸಹ ಇದುವರೆಗೂ ಯಾರೊಬ್ಬರಿಗೂ ಶಿಕ್ಷೆಯಾಗಿರತಕ್ಕಂಥದ್ದನ್ನು ನಾನು ನೋಡಿಲ್ಲ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಸರ್ಕಾರ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಗೋಲಿಬಾರ್

ಮಾಡುವಾಗ ಅಲ್ಲಿ ಯಾರು ಇದ್ದರು ಮತ್ತು ಇದಕ್ಕೆ ಯಾರು ಆದೇಶ ಕೊಟ್ಟರು ಎನ್ನತಕ್ಕಂಥ ಕನಿಷ್ಟ ಈ ಒಂದು ಮಾಹಿತಿಯನ್ನಾದರೂ ಈ ಸದನಕ್ಕೆ ಕೊಡತಕ್ಕಂಥ ಅಗತ್ಯತೆ ಇದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅಂದು ಮುಖ್ಯಮಂತ್ರಿಗಳಾಗಿದ್ದಂಥ ಮಾನ್ಯ ಎಸ್. ಎಂ. ಕೃಷ್ಣರವರು ರೈತರ ಆತ್ಮಹತ್ಯೆಯಾದಾಗ ಸಂಬಂಧಪಟ್ಟವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಕೊಡುವುದಕ್ಕೆ ಘೋಷಣೆ ಮಾಡಿದ್ದರು. ಈಗ 3 ಲಕ್ಷ ರೂಪಾಯಿಗಳೆಂದು ತಾವು ಹೇಳಿದ್ದೀರಿ. ಆದ್ದರಿಂದ ಮುಂದಿನ ದಿನಗಳಲಿಯೂ ಇದೇ ರೀತಿಯಾಗಿ ಮಾಡುತ್ತೀರಾ ಎಂಬ ಬಗ್ಗೆ ತಾವು ಸ್ಪಷ್ಟೀಕರಣಪಡಿಸಬೇಕು ಮತ್ತೆ 200 ಕೋಟಿ ರೂಪಾಯಿಗಳ Social Security Fund ಎಂದು ಅಂದರೆ, ಆವತ್ತಿನ ದಿವಸ ಫಾರ್ಮರ್ ವೆಲ್‌ಫೇರ್ ಫಂಡ್ ಎಂದು ಏನು ಮಾಡಿತ್ತು, ಆದರೆ, ಅದು ಏನಾಗಿದೆ? ಬಹಶಃ ಯಾವ ದಿಕ್ಕಿನಲ್ಲಿ ನಮ್ಮ ಸರ್ಕಾರ ಮತ್ತು ಅಧಿಕಾರಿಗಳು ಕಾರ್ಯೋನ್ಮುಖರಾಗಿದ್ದಾರೆಂಬುದು ಗೊತ್ತಾಗುತ್ತದೆ. ಹಿಂದೆ ಮಾನ್ಯ ಕಾಶಪ್ಪನವರು ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಕೇಂದ್ರದ ಸಚಿವರಾದ ಮಾನ್ಯ ಪಾಸ್ವಾನ್ ರವರು ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ ಮುಂದೆ ರಸಗೊಬ್ಬರದ ಅಭಾವ ಸೃಷ್ಟಿಯಾಗುವ ಸಾಧ್ಯತೆ ಇದೆ. ಅಗತ್ಯವಾಗಿ ಬೇಕಾಗಿರತಕ್ಕಂಥದನ್ನು ನೀವೇ ಮಾಡಿಕೊಳ್ಳಿ ಎಂದು ಮಾನ್ಯ ಕೇಂದ್ರ ಸಚಿವರು ಹೇಳಿರತಕ್ಕಂಥ ಮಾತನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಇವತ್ತು ಆಗಿರುವ ಸಮಸ್ಯೆಯನ್ನು ಮುಂದಿಟ್ಟುಕೊಂಡು ಹೇಳುತ್ತಿಲ್ಲ. ಇವತ್ತು ಬಿ.ಜೆ.ಪಿ. ಸರ್ಕಾರ ಇರಬಹುದು ಅಥವಾ ಮುಂದಿನ ದಿನಗಳಲ್ಲಿ ಬೇರೆ ಸರ್ಕಾರ ಬರಬಹುದು. ಆದರೆ, ಇವತ್ತು ಈ ವ್ಯವಸ್ಥೆ ಏಕೆ ಸತ್ತಿದೆ, ಅಧಿಕಾರದ ಚುಕ್ಕಾಣಿ ಹಿಡಿದ ತಕ್ಷಣವೇ ಏಕೆ ಚುರುಕು ಗೊಳಿಸಲಿಲ್ಲ. ಎನ್ನತಕ್ಕಂಥದ್ದು ಮೂಲಭೂತವಾದ ಪ್ರಶ್ನೆಯಾಗಿದೆ. ಇವತ್ತಿನ ದಿವಸ ಹೇಗಾಗಿದೆಯೆಂದರೆ ಪೆಟ್ರೋಲ್ ಬೆಲೆ ಜಾಸ್ತಿಯಾಗುತ್ತಿದೆ ಎಂದು ತಿಳಿದ ತಕ್ಷಣವೇ ಯಾವ ರೀತಿಯಾಗಿ ಕ್ಯೂ ನಿಂತಿಕೊಳ್ಳುತ್ತಾರೆಯೋ ಅದೇ ರೀತಿಯಾಗಿ ಇದು ಶಾರ್ಟ್ ಫಾಲ್ ಆಗಿರುವುದರಿಂದ ನಮಗೆ ಸಿಗುವುದಿಲ್ಲವೆಂದು ಸಾಮಾನ್ಯವಾಗಿ ಕ್ಯೂ ನಿಂತುಕೊಂಡು ಒಂದಕ್ಕಿಂಥ ಎರಡರಷ್ಟು ಕೊಡುವಂಥ ಪರಿಸ್ಥಿತಿ ಉಂಟಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಹೇಳಿಕೆಗಳನ್ನು ಕೊಡತಕ್ಕಂಥವರು ಯಾರು? ಮತ್ತೆ ಕಾಳಸಂತೆಕೋರರ ಏಜೆಂಟ್‌ಗಳಾಗಿ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಯಾರು? ಈ ಒಂದು ಘಟನೆಯ ಬಗ್ಗೆ ನ್ಯಾಯಾಂಗ ತನಿಖೆಗೆ ಒಳಪಡಿಸುವಂಥ ಸಂದರ್ಭದಲ್ಲಿ ಅದೇ ಅಧಿಕಾರಿಗಳನ್ನು ನೀವು ಅಲ್ಲಿಟ್ಟುಕೊಂಡು ನ್ಯಾಯಾಂಗ ತನಿಖೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟಂತೆ

ಮೇಲ್ನೋಟಕ್ಕೆ ಕಂಡು ಬಂದಂಥವರನ್ನು ಕೂಡಲೇ ಅಮಾನತ್ತಿನಲ್ಲಿಡತಕ್ಕಂಥ ಒಂದು ಕಠಿಣವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ನ್ಯಾಯದ ಪರವಾಗಿ ಮತ್ತು ತನ್ನ ಬೇಡಿಕೆಯ ಪರವಾಗಿ ಹೋರಾಟ ಮಾಡಿದಂಥ ರೈತನ ಮೇಲೆ ಇವತ್ತು ಗೋಲಿಬಾರ್ ಮಾಡಿರತಕ್ಕಂಥದ್ದರ ಬಗ್ಗೆ ಬಹಶಃ ನಾನು ಹೇಳುವುದೇನೆಂದರೆ, ರಸಗೊಬ್ಬರ ಹಸಿರು ಕ್ರಾಂತಿಯ ಒಂದು ಮೂಲ ಮಂತ್ರ ಎಂದು ಹೇಳತಕ್ಕಂಥ ಜನ ಇವತ್ತು ರಸಗೊಬ್ಬರದಂಥ ಒಂದು ನ್ಯಾಯಯುತವಾದ ಒಂದು ಬೇಡಿಕೆಯ ಹಿನ್ನೆಲೆಯಲ್ಲಿ ಆತ ಮುಂದೆ ಹೋದಾಗ ಆತನ ಮೇಲೆ ಗೋಲಿಬಾರ್ ಮಾಡಿರತಕ್ಕಂಥದ್ದು ನಿಜವಾಗಿಯೂ ಖಂಡನೀಯವಾದ ವಿಚಾರ. ಈ ರೈತರ ಕೂಗು ಅರಣ್ಯರೋದನವಾಗಿದೆ. ಇವತ್ತಿನ ಈ ಸದನ ಮೂಲಕ ಹೇಳುವುದೇನೆಂದರೆ, ಹೊಸದಾಗಿ ಬಂದಿರತಕ್ಕಂಥ ಶಾಸಕರು ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇವತ್ತಿನ ದಿವಸ ಬೆಂಗಳೂರಿನಂಥ ನಗರದಲ್ಲಿ ಒಂದು ಮಾರ್ಕೆಟಿಂಗ್ ವ್ಯವಸ್ಥೆ ಮಾಡುವುದಕ್ಕೆ ವಿಫಲರಾಗಿದ್ದೇವೆ. ನಾನು ಒಬ್ಬ ಕೃಷಿ ಹಿನ್ನೆಲೆಯಲ್ಲಿ ಬಂದಿರತಕ್ಕಂಥ ಒಬ್ಬ ಯುವಕನಾಗಿ ಒಂದು ಮಾತನ್ನು ಬಹಳ ನೊಂದು ಹೇಳುತ್ತಿದ್ದೇನೆ. ಇವತ್ತು ಸಣ್ಣ ತೋಟ ಮಾಡಿಕೊಂಡು ಕೃಷಿಯಲ್ಲಿ ಅವಲಂಬಿತರಾಗಿರುವವರಿಗೆ ಮಾರುಕಟ್ಟೆಯ ವ್ಯವಸ್ಥೆ ಸಿಗದೆ ಅವರು ನಾಶರಾಗಿದ್ದಾರೆ. ಆ ವ್ಯವಸ್ಥೆಯನ್ನು ಮಾಡತಕ್ಕಂಥದ್ದರ ಬಗ್ಗೆ ಚಿಂತನೆಯೇ ಇಲ್ಲ. ಈ ಒಂದು ದಿಕ್ಕಿನಲ್ಲಿ ಸರ್ಕಾರ ಆಲೋಚನೆ ಮಾಡಬೇಕಾಗುತ್ತದೆ. ಬಿಜೆಪಿ ಪಕ್ಷದ ನೇತೃತ್ವದ ಸರ್ಕಾರದಲ್ಲಿ ರೈತರ ಮೇಲೆ ಆಗಿರತಕ್ಕಂಥ ಈ ಗುಂಡಿನ ಒಂದು ಪ್ರಕರಣವನ್ನು ಇವತ್ತು ಪಕ್ಷಾತೀತವಾಗಿ ಖಂಡಿಸುತ್ತೇವೆ. ಆದರೆ, ಅದಕ್ಕೆ ಕಾರಣರಾದಂಥ ಅಧಿಕಾರಿಯನ್ನು ಡಿಫರೆಂಟ್ ಮಾಡತಕ್ಕಂಥದ್ದು ಸೂಕ್ತವಲ್ಲ. ಆ ದಿಕ್ಕಿನಲ್ಲಿ ಅವರ ಮೇಲೆ ನಿರ್ಧಾಕ್ಷಣವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು. ಆವತ್ತಿನ ದಿವಸ ರಬ್ಬರ್ ಗುಂಡನ್ನು ಅಥವಾ ನೀರಿನ ಜೆಟ್ ಮೆಷಿನ್‌ನ್ನು ಉಪಯೋಗಿಸ ಬಹುದಾಗಿತ್ತು. ಗೋಲಿಬಾರ್ ಮಾಡುವುದಕ್ಕೆ ಅನುಮತಿಯನ್ನು ತೆಗೆದುಕೊಂಡಿದ್ದಾರೆಯೇ ಪರಿಹಾರ ಕೊಡತಕ್ಕಂಥದ್ದರಲ್ಲಿಯೂ ಕೂಡ ಅನ್ಯಾಯವಾಗಿದೆ. ಜಿಜೆಪಿ ಪಕ್ಷದ ಕಾರ್ಯಕರ್ತನೆಂಬ ಉದ್ದೇಶದಿಂದ ಒಬ್ಬನಿಗೆ ಪರಿಹಾರ ಕೊಟ್ಟು ಅನಾಥನಾಗಿ ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿರತಕ್ಕಂಥ ಮತ್ತೊಬ್ಬ ರೈತನಿಗೆ ಕೊಟ್ಟಿಲ್ಲ. ಅಂದರೆ, ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ಹಾಕತಕ್ಕಂಥದ್ದು ಬೇಡ. ಅವನು ಯಾರೇ ಆಗಿರಲಿ ರೈತ ರೈತನೇ ಆಗಿರುತ್ತಾನೆ. ಆದ್ದರಿಂದ ಇದಕ್ಕೆ ಕಾರಣಕರ್ತರಾಗಿರುವವರ ಮೇಲೆ ನಿರ್ಧಾಕ್ಷಿಣ್ಯವಾಗಿ ಮತ್ತು ಮಾನವೀಯತೆಯಿಂದ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

Vol 42 F 32

ಮತ್ತೆ ರೈತರಿಗೆ ರಕ್ಷಣೆ ಕೊಡುವುದರ ಜೊತೆಗೆ ಆತನ ಚಿಕಿತ್ಸೆಗೆ ವ್ಯವಸ್ಥೆಯನ್ನು ಮಾಡಬೇಕು. ಮತ್ತೆ ಉಭಯ ಸದನಗಳ ಜಂಟಿ ಸದನ ಸಮಿತಿಯಿಂದ ತನಿಖೆಯಾಗಬೇಕು. ಇನ್ನು ಮುಂದೆ ಈ ರೀತಿಯಾಗಿ ಮರುಕಳಿಸದ ರೀತಿಯಲ್ಲಿ ಮತ್ತು ರಸಗೊಬ್ಬರದ ಅಭಾವದ ಕೊರತೆಗೆ ತುರ್ತು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಅಗ್ರಹಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ (ಕೊಪ್ಪಳ): ಸನ್ಮಾನ್ಯ ಅಧ್ಯಕ್ಷರೆ, ರಸಗೊಬ್ಬರ ಮತ್ತು ಲಾಠಿಚಾರ್ಜ್ ಹಾಗೂ ಗೋಲಿಬಾರ್‌ಗೆ ಸಂಬಂಧಪಟ್ಟಂತೆ ಅನೇಕ ಜನ ನಾಯಕರುಗಳು ಈಗಾಗಲೇ ಮಾತನಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರು ಒಂದು ಕಡೆ ರಾಜ್ಯದ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ವಿಪರ್ಯಾಸ ಏನೆಂದರೆ, ಬಾಂಬೆ ಕರ್ನಾಟಕ ಮತ್ತು ಮಧ್ಯ ಕರ್ನಾಟಕ ಭಾಗದ ಜನರು ಭಾರತೀಯ ಜನತಾ ಪಕ್ಷದ ಕಾರ್ಯಕ್ರಮಗಳನ್ನು ಮೆಚ್ಚಿ ಈ ಒಂದು ಪಕ್ಷವನ್ನು ಆಡಳಿತಕ್ಕೆ ತರಬೇಕೆಂದು ನಿಮಗೆ ಆಶೀರ್ವಾದ ಮಾಡಿದರು. ಆದರೆ, ಏನಾಗಿದೆ ಎಂದರೆ, ಮೊದಲನೆಯದಾಗಿ ರಸಗೊಬ್ಬರದ ಅಭಾವ ಮತ್ತು ಬೀಜ ಕೊರತೆಯ ವಿಪರ್ಯಾಸ ಉಂಟಾಗಿದೆ. ಕೃಷಿ ಪ್ರಾರಂಭವಾದಂಥ ಸಂದರ್ಭದಲ್ಲಿ ಮಳೆ ಬಿದ್ದ ಮೇಲೆ ಭೂಮಿಯ ತೇವಾಂಶದ ಆಧಾರದ ಮೇಲೆ ಕೃಷಿಕ ಬೀಜವನ್ನು ನೆಡುತ್ತಾರೆ. ಆ ಬೀಜ ನೆಡತಕ್ಕಂಥ ಸಂದರ್ಭದಲ್ಲಿ ರಾಸಾಯನಿಕ ಗೊಬ್ಬರ ಬಹಳ ಅವಶ್ಯಕ ಎನ್ನತಕ್ಕಂಥದ್ದನ್ನು ನಾವೆಲ್ಲಾ ಮನಗಂಡಿದ್ದೇವೆ. ಇವತ್ತಿನ ದಿವಸ ರಾಸಾಯನಿಕ ಗೊಬ್ಬರವನ್ನು ಬಳಸದೆ ಯಾವುದೆ ಬೀಜವನ್ನು ನಾವು ಭೂಮಿಗೆ ಹಾಕಿದರೆ ಅದು ಉತ್ಪಾದನೆಯಾಗಲಾರದಂಥ ಒಂದು ವಾತಾವರಣವನ್ನು ನಾವು ಕಾಣುತ್ತಿದ್ದೇವೆ. ಈ ಒಂದು ದಿಸೆಯಲ್ಲಿ ಮಾನ್ಯ ಯಡಿಯೂರಪ್ಪನವರು ಮೊನ್ನೆ ದಿವಸ ಒಂದು ಸ್ಟೇಟ್‌ಮೆಂಟ್‌ನ್ನು ಸಹಾ ಮಾಡಿದ್ದಾರೆ. ಮಾನ್ಯ ರಾಜ್ಯಪಾಲರ ಆಡಳಿತ ದಿನಗಳ ನಿರ್ಧಾರಗಳೆಂದು ಗೊಬ್ಬರದ ವಿಚಾರದಲ್ಲಿ ಅವರು ಹೇಳಿದ್ದಾರೆ. ಡಿಎಪಿ ಗೊಬ್ಬರದ ಬೇಡಿಕೆ 1.1 ಲಕ್ಷ ಮೆಟ್ರಿಕ್ ಟನ್ ಮತ್ತು ಎನ್.ಪಿ.ಕೆ. ಗೊಬ್ಬರದ ಬೇಡಿಕೆ 1.2 ಲಕ್ಷ ಮೆಟ್ರಿಕ್ ಟನ್, ಈಗ ಸರ್ಕಾರದ ಸಂಗ್ರಹದಲ್ಲಿರುವುದು ಮತ್ತು ಕ್ರಮವಾಗಿ 11 ಮತ್ತು 9 ಸಾವಿರ ಟನ್ ಕೊರತೆಯನ್ನು ನಿವಾರಿಸುವುದರಿಂದ ರೈತರು ಇದರ ಬಗ್ಗೆ ಆತಂಕ ಪಡಬೇಕಾಗಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡಿದ ಹಿನ್ನೆಲೆಯಲ್ಲಿ ಈ ರಾಜ್ಯದ ರೈತರು ಆಕ್ರೋಶಕ್ಕೆ ಒಳಗಾದರು. ಒಂದು ಕಡೆ ಈ ರಾಜ್ಯದ ಚುಕ್ಕಾಣಿಯನ್ನು ಹಿಡಿದಿರತಕ್ಕಂಥ ಒಬ್ಬ ನಾಯಕ ಗೊಬ್ಬರದ ಕೊರತೆ ಇಲ್ಲವೆಂದು ಹೇಳಿಕೆಯನ್ನು ಕೊಡುತ್ತಾರೆಂದರೆ, ಇದಕ್ಕೆ ಸಂಬಂಧಪಟ್ಟಂತೆ

ಒಂದುಕಡೆ ಅವರಿಗೆ ಅಧಿಕಾರಿಗಳು ದಿಕ್ಕು ತಪ್ಪಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆಯೋ ಅಥವಾ ಇಲ್ಲವೋ? ಈ ಒಂದು ಸಂದರ್ಭದಲ್ಲಿ ರೈತರು ಆಕ್ರೋಶಕ್ಕೆ ಬಂದಾಗ ಅನೇಕ ಕಡೆ ಇವತ್ತು ಲಾಠಿ ಚಾರ್ಜ್ ಆಗಿವೆ. ಮತ್ತೆ ರೈತರು ಧರಣಿ ಮತ್ತು ಅನೇಕ ಕಡೆ ಚಳವಳಿ ಹಾಗೂ ಹೋರಾಟವನ್ನು ಪ್ರಾರಂಭ ಮಾಡಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ಹಾವೇರಿಯಲ್ಲಿ ರೈತ ಗೋಲಿಬಾರ್ ನಿಂದ ಮರಣವನ್ನು ಹೊಂದಿದ್ದಾನೆ. ಆದ್ದರಿಂದ, ಇದರ ಪೂರ್ವಾಪರ ವಿಚಾರಗಳನ್ನು ಇವತ್ತು ತಿಳಿದುಕೊಳ್ಳುತ್ತಾರೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಅವರನ್ನು ಕೇಳುವುದಕ್ಕೆ ಬಯಸುತ್ತೇನೆ. ಒಂದು ಕಡೆ ನಮಗೆ ಬೇಕಾಗಿರತಕ್ಕಂಥ requirement ಬಗ್ಗೆ ಹೇಳುತ್ತಾರೆ. ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಎಷ್ಟು ಸ್ಟಾಕ್ ಇತ್ತೆಂದರೆ, ಏಪ್ರಿಲ್ ತಿಂಗಳಲ್ಲಿ ಡಿಎಪಿ 31.1 ಸಾವಿರ ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 78,130 ಮೆಟ್ರಿಕ್ ಟನ್‌ನಷ್ಟು ಇತ್ತು. ಆದರೆ ಈ ವರ್ಷದ ಏಪ್ರಿಲ್ ತಿಂಗಳಲ್ಲಿ 3782 ಮೆಟ್ರಿಕ್ ಟನ್ ಮತ್ತು ಡಿಎಪಿ 12107 ಮೆಟ್ರಿಕ್ ಟನ್‌ನಷ್ಟು ಇದೆ. ಅಂದರೆ ಕೇವಲ 11% ನಷ್ಟು ಮಾತ್ರ ಸ್ಟಾಕ್ ಇತ್ತು. ಇದಾದ ನಂತರ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ಜೂನ್ 30 ರೊಳಗೆ 1.39 ಲಕ್ಷ ಮೆಟ್ರಿಕ್ ಟನ್ ಡಿಎಪಿ ಮತ್ತು 1.14 ಲಕ್ಷ ಮೆಟ್ರಿಕ್ ಟನ್ ಕಾಂಪ್ಲೆಕ್ಸ್‌ನ್ನು ರಾಜ್ಯಕ್ಕೆ ಒದಗಿಸಬೇಕೆಂಬ ಬೇಡಿಕೆಯನ್ನು ಸಲ್ಲಿಸಿದ್ದೀರಿ. ಆದರೆ, ಇವತ್ತಿನ ದಿವಸ ಅದು ಸರಬರಾಜು ಆಗಿರತಕ್ಕಂಥದ್ದು 61.18 ಸಾವಿರ ಮೆಟ್ರಿಕ್ ಟನ್ ಡಿಎಪಿ ಮತ್ತು 56327 ಮೆಟ್ರಿಕ್ ಟನ್ ಕಾಂಪ್ಲೆಕ್ಸ್ ಸರಬರಾಜಾಗಿದೆ. ಅಂದರೆ, ಬೇಡಿಕೆಯ ಅರ್ಧದಷ್ಟು ಕೂಡ ಸರಬರಾಜು ಆಗಿಲ್ಲವೆಂಬ ವರದಿಯನ್ನು ನಾವೂ ಕೂಡ ಗಮನಿಸಿದ್ದೇವೆ ಮತ್ತು ಗೊಬ್ಬರದ ಕೊರತೆ ಇಲ್ಲವೆಂದು ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ಮತ್ತೊಂದು ಕಡೆ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಇಷ್ಟಿಷ್ಟು ಬೇಡಿಕೆ ಇದೆ ಎಂದು ಒಂದು ಕಡೆ ಹೇಳಿತಕ್ಕಂಥದ್ದನ್ನು ನೋಡಿದಾಗ ಈ ರಾಜ್ಯದ ಜನ ಒಂದು ರೀತಿಯ ಗೊಂದಲದ ವಾತಾವರಣದಲಿದ್ದಾರೆ. ಇವತ್ತಿನ ದಿವಸ ಇನ್ನೂ ಕೆಲವು ಭಾಗಗಳಲ್ಲಿ ಸಂಪೂರ್ಣವಾದಂಥ ಮಳೆಯಾಗಿಲ್ಲ. ಇನ್ನು ಮುಂದಾದರೂ ಕೂಡ ಇದರ ಒಂದು ಪೂರೈಕೆ ಬಗ್ಗೆ ನಿಮ್ಮಿಂದ ಆಗುತ್ತದೆಯೋ ಅಥವಾ ಇಲ್ಲವೋ ಎಂಬುದರ ಬಗೆ ಇವೆತ್ತು ನೀವು ಸ್ಪಷ್ಟಪಡಿಸಬೇಕು. ಮತ್ತೆ ನೀವು ಮಾತು ಪ್ರಾರಂಭ ಮಾಡಿದರೆ ಕೇಂದ್ರ ಸರ್ಕಾರದ ಮೇಲೆ ಬೊಟ್ಟು ಮಾಡಿ ತೋರಿಸುತ್ತಿದ್ದೀರಿ. ಆದರೆ, ರಾಜ್ಯ ಸರ್ಕಾರದಲ್ಲಿ ಏನು ಕೊರತೆ ಇದೆ ಎನ್ನತಕ್ಕಂಥದ್ದನ್ನು ತಾವು ಅರಿತುಕೊಳ್ಳಬೇಕಾಗುತ್ತದೆ. ಆ ದಿಶೆಯಲ್ಲಿ ಇವತ್ತು ರೈತನನ್ನು ನೀವು ಮತ್ತೆ ಅವನಿಗೆ ಬದುಕಿನ ಆಸರೆಯನ್ನು ಮತ್ತು ಭದ್ರತೆಯನ್ನು ಒದಗಿಸುವುದಕ್ಕೆ ರಸಗೊಬ್ಬರದ ಪೂರೈಕೆಯನ್ನು

ಮಾಡತಕ್ಕಂಥದ್ದು ಬಹಳ ಸೂಕ್ತವೆಂದು ಹೇಳಿ ನಾನು ಭಾವಿಸುತ್ತೇನೆ. ಇವತ್ತು ಬೀಜದ ಬಗ್ಗೆ ರೈತ ಸಂಪರ್ಕ ಕೇಂದ್ರವನ್ನು ಸಂಪರ್ಕ ಮಾಡಿದಾಗ ನಮ್ಮದು ಕಮಾಂಡ್ ಏರಿಯಾ ರಾಯಚೂರು ಮತ್ತು ಕೊಪ್ಪಳದ ಸ್ವಲ್ಪ ಭಾಗದಲ್ಲಿ ಇವತ್ತು ಮೇಜ್‌ನ್ನು ಕೊಡುತ್ತಾರೆ ಆಮೇಜನ್ನು ಕೊಟ್ಟರೆ ತೊಗರೆಯ ಬೆಳೆಯನ್ನು ಬೆಳೆಯಬೇಕೆಂದು ಬೀಜದಲ್ಲಿ ಅವರು ಸಜೆಸ್ಟ್ ಮಾಡುತ್ತಾರೆ. ಅಲ್ಲಿ ಜೂನ್ 5ನೇ ತಾರೀಖಿಗೆ ನಾವು ನೀರನ್ನು ಬಿಡುತ್ತೇವೆ. ನವೆಂಬರ್‌ನಲ್ಲಿ ನೀರಿನ ಕ್ಲೋಸರ್ ಪೀರಿಯಡ್ ಬರುತ್ತದೆ. ಅಲ್ಲಿ ನಾವು ತೊಗರಿಯ ಬೆಳೆಯನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಏನು ಇವರು ಅನೌನ್ಸ್ ಮಾಡಿದ್ದಾರೆ, 5 ಎಕರೆಗೆ ಮೇಜ್‌ನ್ನು ಏನು ಸಬ್ಸಿಡಿ ದರದಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ಅಲ್ಲಿ ಇವರು interruption ಮಾಡಿ ತೊಗರಿಯ ಬೆಳೆ ಅಥವಾ ಇನ್ನಾವುದಾದರೊಂದು ಬೆಳೆಯನ್ನು ಬೆಳೆಯಿರಿ ಎಂದರೆ ಆಗ ನಮಗೆ ಅಲ್ಲಿ ನೀರು ಇರುವುದಿಲ್ಲ. ತೊಗರಿಯ ಬೆಳೆಯ period ಬೇರೆ, ಮೇಜ್‌ನ ಒಂದು ಅವಧಿಯೇ ಬೇರೆ ಅಂಥದ್ದನ್ನು ಅಲ್ಲಿಯ ಸಣ್ಣಪುಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಒಂದು ನಿರ್ದೇಶನವನ್ನು ಇವತ್ತುಕೊಡಬೇಕಾಗುತ್ತದೆ. ಎಲ್ಲಿ ಯಾವ ಬೆಳೆಯನ್ನು ಎಷ್ಟು ದಿವಸದಲ್ಲಿ ಬೆಳೆಯುತ್ತೇವೆ, ಅಂಥದ್ದರಲ್ಲಿ ಮಾತ್ರ ನೀವು ಅಂತಹ ಬೆಳೆಯನ್ನು ಕೊಡಬೇಕು. ಎರಡು ರೀತಿಯ ಬೆಳೆಯನ್ನು ನೀವು ಎಲ್ಲಾ ಕಡೆ ಪ್ರಪೋಸ್ ಮಾಡಬಾರದು ಎನ್ನುವುದನ್ನು ಸರ್ಕಾರದಿಂದ ಒಂದು ಆದೇಶವನ್ನು ಕಳುಹಿಸಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಕಳೆದ ಬಾರಿ ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿಯವರ ಆಡಳಿತದಲ್ಲಿ ಅವರು ಯೋಜನಾ ಮಂತ್ರಿಗಳು ಆಗಿದ್ದರು. 100ಕ್ಕೆ 75 ಭಾಗ ಸಬ್ಸಿಡಿಯನ್ನು ಕೊಡುವಂಥದ್ದು ಏನು ಇತ್ತು ಈಗ ತಾವು ಅದನ್ನು ಕೊಡಬೇಕಾಗುತ್ತದೆ. ಒಂದು ಕಡೆ ಗೊಬ್ಬರದ ಅಭಾವ ಇದೆ, ಗೊಬ್ಬರ ಇವತ್ತು ಕಾಳಸಂತೆಯಲ್ಲಿ ಮಾರಾಟವಾಗುತ್ತದೆಂದು ಹೇಳಿ, ಅನೇಕ ಕಡೆ ಇವತ್ತು ಜಿಲ್ಲಾ ಮಟ್ಟದ ಕೃಷಿ ಅಧಿಕಾರಿಗಳು ಮಾರಾಟಗಾರರು ಏನಿದ್ದಾರೆ, ಅವರಿಗೆ ನೋಟೀಸ್ ಇಸ್ಯು ಮಾಡಿದ್ದರೆ. ಎಷ್ಟು ಕಾಳಸಂತೆಯಲ್ಲಿ ಇದೆ, ಎಷ್ಟು ಸ್ಟಾಕ್ ಇದೆ, ಅದರ ವಿವರಣೆ ಕೂಡ ಇವತ್ತು ನಮಗೆ ಸಿಗುತ್ತಿಲ್ಲ. ಆ ದಿಶೆಯಲ್ಲಿ ಅದಕ್ಕೂ ಕೂಡ ಇವತ್ತು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ, ಇವತ್ತು ಪ್ರತಿಶತ 75% ಸಬ್ಸಿಡಿಯನ್ನು ಪುನಃ ಜಾರಿ ಮಾಡಬೇಕೆಂದು ಒತ್ತಾಯವನ್ನು ಮಾಡುತ್ತೇನೆ. ತಾವು ರೈತರ ವಿಷಯದ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯ ಮೂರನೆಯವರಾಗಿ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾರೆ. ಮೊದಲನೆಯದಾಗಿ ಕಡಿದಾಳ ಮಂಜಪ್ಪನವರು ಶಿವಮೊಗ್ಗ ಜಿಲ್ಲೆಯಿಂದ, ಅನಂತರದಲ್ಲಿ ಮಾನ್ಯ ಬಂಗಾರಪ್ಪನವರು ಶಿವಮೊಗ್ಗ ಜಿಲ್ಲೆ ದಾವಣಗೆರೆಯಿಂದ ಬೈಫರ್‌ಕೇಟ್ ಆದ ಮೇಲೆ ಮಾನ್ಯ ಜೆ. ಹೆಚ್. ಪಟೇಲ್‌ರು ಮುಖ್ಯಮಂತ್ರಿ ಆಗಿದ್ದರು. ಜೆ. ಹೆಚ್. ಪಟೇಲ್ ರವರು ಕೂಡ ಶಿವಮೊಗ್ಗ ಜಿಲ್ಲೆಯಿಂದ ಮುಖ್ಯಮಂತ್ರಿಯಾಗಿದ್ದರು. ನಂತರ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿ ರೈತರ ಮೇಲೆ ಅಪಾರವಾದ ನಂಬಿಕೆ ಮತ್ತು ವಿಶ್ವಾಸ ಅವರ ಆಶೋತ್ತರಗಳನ್ನು ಈಡೇರಿಸುವ ದೃಷ್ಟಿಯಲ್ಲಿ ಮಾನ್ಯ ನಮ್ಮ ಮುಖ್ಯಮಂತ್ರಿಗಳು ಪ್ರಮಾಣ ವಚನ ಸ್ವೀಕರಿಸಿ ರಾಜ್ಯದ ಆಡಳಿತವನ್ನು ಕೈಗೆತ್ತಿಕೊಂಡ ನಂತರ ಶಿವಮೊಗ್ಗ ಜಿಲ್ಲೆ ರೈತರ ಪರ ಹೋರಾಟಕ್ಕೆ ಒಂದು ನಾಂದಿಯನ್ನು ಹಾಡಿತು. 1951–52ರಲಿ ಕಾಗೋಡು ಸತ್ಯಾಗ್ರಹದ ಮೂಲಕ ಶಾಂತವೇರಿ ಗೋಪಾಲ ಗೌಡರು, ಕಡಿದಾಳ ಮಂಜಪ್ಪನವರು ಈ ಮೂಲಕ ನಂತರದಲ್ಲಿ ಹೊರಟಿರತಕ್ಕಂಥ ಈ ಒಂದು ಹೋರಾಟದಲ್ಲಿ ಅದೇ ಸಮಾಜವಾದಿ ಚಿಂತನೆಯಿಂದ ಬಂದಿರತಕ್ಕಂಥ ಮಾನ್ಯ ಜೆ. ಹೆಚ್. ಪಟೇಲ್‌ರು ಕೂಡ ಮುಖ್ಯಮಂತ್ರಿಗಳಾಗಿದ್ದರು. ಆ ನಂತರದಲ್ಲಿ ಬಂಗಾರಪ್ಪನವರು ಕೂಡ ಸಮಾಜವಾದಿ ಚಿಂತನೆಯಿಂದ ಬಂದಿರತಕ್ಕಂಥವರು ಮುಖ್ಯಮಂತ್ರಿಯಾಗಿದ್ದರು ಈ ಎಲ್ಲಾ ಸಂದರ್ಭಗಳಲ್ಲಿ ಮೊದಲ ಭಾಗ ಹೊರತು ಪಡಿಸಿ ಎಲ್ಲಾ ಸಂದರ್ಭಗಳಲ್ಲಿ 1978 ರಿಂದ ಈಚೆ ಮಾನ್ಯ ಮುಖ್ಯಮಂತ್ರಿಗಳು ರೈತ ಸಮುದಾಯದ ಬಗ್ಗೆ ಹೋರಾಟವನ್ನು ನಡೆಸುತ್ತಿದ್ದರು. ಆ ಎಲ್ಲಾ ಸಂದರ್ಭಗಳಲ್ಲಿ ಆಗಿನ ಮುಖ್ಯಮಂತ್ರಿಗಳನ್ನು ಮತ್ತು ಮಂತ್ರಿಗಳನ್ನು ಪ್ರತಿಯೊಂದು ಘಟನೆಯಲ್ಲಿಯೂ ಕೂಡ ರಾಜೀನಾಮೆ ಕೊಡಬೇಕು ಎನ್ನುವಂಥ ಮಾತನ್ನು ಸದನದಲ್ಲಿ ಮತ್ತು ಹೊರಗಡೆ ಇಂತಹ ಎಲ್ಲಾ ಸಂದರ್ಭಗಳಲ್ಲಿ ಪ್ರತಿಪಾದನೆ ಮಾಡಿರತಕ್ಕಂಥದ್ದು ಇಡೀ ನಾಡಿಗೆ ಗೊತ್ತಿರತಕ್ಕಂಥದ್ದು. ನಮಗೆ ಸಂತೋಷವಿದೆ, ನಮ್ಮ ಜಿಲ್ಲೆಯವರು ಮುಖ್ಯಮಂತ್ರಿಗಳಾಗಿದ್ದಾರೆ. ಆ ಬಗ್ಗೆ ನಮಗೆ ಅಪಾರವಾದ, ನಮ್ಮ ಕ್ಷೇತ್ರಕ್ಕೆ ಅಭಿವೃದ್ಧಿ ಕೆಲಸಗಳು ಆಗುತ್ತವೆ. ಆದರೆ ಎಲ್ಲೋ ಒಂದು ಕಡೆ, ಕಳೆದ 20 ದಿವಸಗಳ ಇವರ ಒಂದು ಆಡಳಿತದಲ್ಲಿ ಕಾರ್ಯವೈಫಲ್ಯದಿಂದಲೇ ಹಾವೇರಿ ಗುಂಡಿನ ಘಟನೆಯಿಂದ ರೈತ ಸತ್ತು ಹೋಗಿರತಕ್ಕಂಥದ್ದು ಇಡೀ ನಾಡಿಗೆ ಅವಮಾನವಾಗ ತಕ್ಕಂಥದ್ದು ಮತ್ತು ಇವರ ಆಡಳಿತದಲ್ಲಿ ಅದು ಆಗಿರತಕ್ಕಂಥದ್ದು ನಮಗೆ ಬಹಳ ದುಃಖಕರವಾಗಿದೆ. ಮಾನ್ಯ ನಮ್ಮ ಆಡಳಿತ ಪಕ್ಷದ ಗೌರವಾನ್ವಿತ ಸದಸ್ಯರೊಬ್ಬರು ಮಾತನಾಡುವಾಗ ಹೇಳಿದರು. ಯಾವುದೋ

ಒಂದು ಅಸಹಜ ಸಾವಿನ ಘಟನೆಯನ್ನು ಇಟ್ಟುಕೊಂಡು ಅದನ್ನು ಸಮರ್ಥನೆ ಮಾಡಿ, ಈಗ ನಮ್ಮ ಎದುರುಗಡೆ ಇರುವಂಥದ್ದು ಬಹಳ ಪ್ರಮುಖವಾಗಿ ಹಾವೇರಿಯ ಘಟನೆಯನ್ನು ಆಧರಿಸಿ ಈ ಘಟನೆಯನ್ನು ಕೈಗೆತ್ತಿಕೊಂಡಿದ್ದೇವೆ. ಇನ್ನು ಅವರು ಸಮರ್ಥನೆ ಮಾಡುತ್ತಾರೆಯೇ ಅದು ಬಹಳ ಪ್ರಮುಖ. ಹತ್ತಾರು ಘಟನೆಯಲ್ಲಿ ಯಾವುದೋ ಒಂದು ನ್ಯೂನತೆಯ ಘಟನೆಯನ್ನು ಹಿಡಿದು ಕೊಂಡು ಆಡಳಿತ ಪಕ್ಷದ ಶಾಸಕರ ಮಾತನ್ನು ಆಧರಿಸಿ ಅದನ್ನು ಸಮರ್ಥನೆ ಮಾಡತಕ್ಕಂಥದ್ದು ಅಲ್ಲ ಇವರು ಹಾವೇರಿಯ ಘಟನೆಯನ್ನು ಸಮರ್ಥನೆ ಮಾಡುತ್ತಾರಾ? ಇದು ಯಾವ ಕಾರಣದಿಂದ ಆಯಿತು. 6 ತಿಂಗಳು ಮಾತ್ರ ಇವರು ಸಚಿವರಾಗಿರಲಿಲ್ಲ. 6 ತಿಂಗಳ ಹಿಂದೆ, ಇವರೇ 20 ತಿಂಗಳು ಆಡಳಿತವನ್ನು ಮಾಡಿದ್ದು. ಕಳೆದ ಅವಧಿಯಲ್ಲಿ ಇವರೇ ಉಪ ಮುಖ್ಯಮಂತ್ರಿಗಳಾಗಿದ್ದರು. ಯಾವ್ಯಾವ ಕಾಲಕ್ಕೆ ಏನೇನು ಗೊಬ್ಬರ shortage ಆಗುತ್ತದೆ ಏನು ಅದರ ಎಲ್ಲಾ ಸಮರ್ಪಕವಾದ ರೀತಿಯಲ್ಲಿ ವಿತರಣೆ ಆಗಿದೆಯೇ ಇಲ್ಲವೆ ಎನ್ನತಕ್ಕಂಥದ್ದು ಮಾಹಿತಿ ಇರುತ್ತದೆ. ಆಡಳಿತದ ಚುಕ್ಕಾಣಿ ಹಿಡಿದವರಿಗೆ ತತ್‌ಕ್ಷಣದ ಮಾಹಿತಿ ಎಲ್ಲಾ ಇರುತ್ತದೆ. ಯಾವ್ಯಾವ ಸಂದರ್ಭದಲ್ಲಿ ನಾವು ಏನೇನು ತೊಡಗಿಸಿಕೊಳ್ಳಬೇಕು. ಅಕಸ್ಮಾತ್ ಗೊಬ್ಬರದ ವಿತರಣೆಯಲ್ಲಿ ವಿಳಂಬವಾಗಿದ್ದರೆ ಅದಕ್ಕೆ ತತ್‌ಕ್ಷಣದಲ್ಲಿ ಕ್ರಮವನ್ನು ತೆಗೆದುಕೊಂಡು ಅದನ್ನು ನಿಭಾಯಿಸತಕ್ಕಂಥ ಶಕ್ತಿ, ಸಾಮರ್ಥ್ಯ ಸರ್ಕಾರಕ್ಕೆ ಇಲ್ಲದಿದ್ದರೆ ಗೌರವದಿಂದ ರಾಜೀನಾಮೆ ಕೊಟ್ಟು ಹೋಗತಕ್ಕಂಥದ್ದು ಮಾತ್ರ ರಾಜಮಾರ್ಗ ಇರುವಂಥದ್ದು ಎನ್ನುವುದು ನನ್ನವಾದ. ಈ ನಿಟ್ಟಿನಲ್ಲಿ ಗೋಲಿಬಾರ್ ಏನು ನಡೆದಿದೆ, ಆ ಗೋಲಿಬಾರ್‌ನ ವಿವಿಧ ಹೇಳಿಕೆಗಳು ಆ ಗೋಲಿಬಾರ್ ಬಗ್ಗೆ ನಡೆದಿರತಕ್ಕಂಥ ಎಲ್ಲಾ ಹೇಳಿಕೆಗಳು ಕೂಡ ಒಂದಕ್ಕೆ ಇನ್ನೊಂದು ತದ್ವಿರುದ್ಧವಾಗಿರತಕ್ಕಂಥವು. ಆ ನಿಟ್ಟಿನಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಏನು ಒಂದು ನ್ಯಾಯಾಂಗ ತನಿಖೆಯನ್ನಾದರೂ ಮಾಡಿ ಎಂದಾಗ, ಅದನ್ನು ಒಪ್ಪಿಕೊಂಡಿದ್ದಾರೆ. ಆದರೆ ಅದಕ್ಕೆ ಒಂದು ಕಾಲಮಿತಿ ಬೇಕು. ಜೊತೆಗೆ ಅದರ ಬಗ್ಗೆ ಬಹಳ ದೀರ್ಘಕಾಲದವರೆಗೆ ವೇಟ್ ಮಾಡತಕ್ಕಂಥದ್ದು ಅಲ್ಲ. ತೀರಾ ಅಲ್ಪಕಾಲದಲ್ಲಿ ಆ ನ್ಯಾಯಾಂಗ ತನಿಖೆಯ ತೀರ್ಪು ಹೊರಗೆ ಬರಬೇಕು. ಏಕೆಂದರೆ ಅಲ್ಲಿಯವರೆಗೆ ಈಗ ಆಗಿರತಕ್ಕಂಥ ಏನು ನ್ಯೂನ್ಯತೆ ನಡೆದಿದೆ, ಆಡಳಿತದ ಅಧಿಕಾರಿಗಳ ಮೂಲಕ ಹಾವೇರಿಯಲ್ಲಿ ಏನು ಗೋಲಿಬಾರ್ ನಡೆದಿದೆ. ಆ ಎಲ್ಲಾ ಸಂಬಂಧಿಸಿದ ಅಧಿಕಾರಿಗಳನ್ನು ಮೊದಲು ಅಮಾನತ್ತುಪಡಿಸಬೇಕು ಎನ್ನುವಂಥದ್ದನ್ನು ನಾನು ಈ ಸಭೆಯ ಮೂಲಕ ಮಾನ್ಯ ಅಧ್ಯಕ್ಷರಲ್ಲಿ ಒತ್ತಾಯವನ್ನು ಮಾಡುತ್ತೇನೆ. ಏಕೆಂದರೆ ಆ ಅಧಿಕಾರಿಗಳ ಬಗ್ಗೆ ಆಗಲೇ ನಮ್ಮ ಸಹ ಸದಸ್ಯರು ಹೇಳಿದ್ದಾರೆ. DIG ಯವರ

ಹೇಳಿಕೆಯನ್ನು ಟಿ.ವಿ.ಯಲ್ಲಿ ರಾತ್ರಿ 8.00 ಘಂಟೆಗೆ interview ಕೊಡತಕ್ಕಂಥ ಸಂದರ್ಭದಲ್ಲಿ ಹೇಳಿರತಕ್ಕಂಥದ್ದು. ವಿವಿಧ ಸಂದರ್ಭದಲ್ಲಿ ಹೇಳಿರತಕ್ಕಂಥದ್ದು Agriculture Minister ಬೇರೆ ಹೇಳಿಕೆಯನ್ನು ಕೊಡುತ್ತಾರೆ. ಜಿಲ್ಲಾ ಮಂತ್ರಿಗಳು ಬೇರೆ ಹೇಳಿಕೆಯನ್ನು ಕೊಡುತ್ತಾರೆ. DIG ಯವರು ಬೇರೆ ಹೇಳಿಕೆಯನ್ನು ಕೊಡುತ್ತಾರೆ. ಇದೆಲ್ಲವನ್ನು ಯಾವ ರೀತಿಯಾಗಿ ಸಮರ್ಥನೆ ಮಾಡಿಕೊಳ್ಳುವಂಥದ್ದು, ನಾನು ಹೇಳತಕ್ಕಂಥದ್ದು ಎಲ್ಲಾ ಸಂಬಂಧಿಸಿದ ಅಧಿಕಾರಿಗಳನ್ನು ಅಮಾನತ್ತುಪಡಿಸಿ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಮತ್ತು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನುವಂಥ ಮಾತನ್ನು ಹೇಳುತ್ತೇನೆ. ಜೊತೆಗೆ ಗೊಬ್ಬರದ ವಿತರಣೆಯಲ್ಲಿಯೂ ಕೂಡ ಅಸಮರ್ಪಕ ವಿತರಣೆಯ ಜೊತೆಗೆ ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ತೀರ್ಥಹಳ್ಳಿಯಲ್ಲಿಯೂ ಕೂಡ ನಮ್ಮ ತಾಲ್ಲೂಕು ಸೊಸೈಟಿಯವರು, ಅದು ಬಿಜೆಪಿಯ ನೇತೃತ್ವದಲ್ಲಿ ಇದೆ ಅವರು ಸುಮಾರು 100 ರಿಂದ 150 ರೂ.ಗಳ ಹೆಚ್ಚಿಗೆ ಹಣವನ್ನು ಗೊಬ್ಬರದ ಮೇಲೆ ವಸೂಲು ಮಾಡುತ್ತಿದ್ದಾರೆ. ಅವರು ಜಿಲ್ಲಾ ಜಿಜೆಪಿಯ ಉಪಾಧ್ಯಕ್ಷರಾಗಿದ್ದಾರೆ. ಇದಕ್ಕೆ ತಾವು ಏನು ಉತ್ತರವನ್ನು ಹೇಳುತ್ತೀರಾ? ತಾಲ್ಲೂಕು ಸೊಸೈಟಿಯಲ್ಲಿ ರಸೀದಿ ಹಾಕಿ ಬಂದಿರುವಂಥದ್ದು, ರಸೀದಿ ನನ್ನ ಹತ್ತಿರ ಇದೆ.

ಅಧ್ಯಕ್ಷರು: ಈ ಸದನದಲ್ಲಿ ಇಲ್ಲದಿರತಕ್ಕಂಥ ಸದಸ್ಯರ ಬಗ್ಗೆ

ಶ್ರೀ ಕಿಮ್ಮನೆ ರತ್ನಾಕರ್: ನಾನು ಯಾರ ಹೆಸರನ್ನು ಹೇಳಲಿಲ್ಲ.

ಅಧ್ಯಕ್ಷರು: ರಾಜಕೀಯ ಪಕ್ಷದ ಹೆಸರನ್ನು ಉಪಯೋಗ ಮಾಡುತ್ತಿದ್ದೀರಿ.

ಶ್ರೀ ಕಿಮ್ಮನೆ ರತ್ನಾಕರ್: ನಾನು ಯಾರ ಹೆಸರನ್ನು ಉಲ್ಲೇಖ ಮಾಡಲಿಲ್ಲ. ನಾನು ಹೇಳಿರತಕ್ಕಂಥದ್ದು ಇವತ್ತು ಗೊಬ್ಬರದ ವಿತರಣೆ ವಿಚಾರದಲ್ಲಿ ಈ ಸಭೆ ನಡೆಯುತ್ತಿರುವಂಥದ್ದು. ಹಾವೇರಿ ಘಟನೆಗೆ ಕಾರಣವೇನು?

ಒಬ್ಬ ಮಾನ್ಯ ಸದಸ್ಯರು: ಸೊಸೈಟಿಯಲ್ಲಿ ಆಡಳಿತ ಮಂಡಳಿಯವರು ಗೊಬ್ಬರವನ್ನು ವಿತರಣೆ ಮಾಡುತ್ತಾರೆ, ಯಾವುದೇ ಪಕ್ಷ ವಿತರಣೆ ಮಾಡುವುದಿಲ್ಲವೆಂದು ದಯಮಾಡಿ ತಾವು ಹೇಳಬೇಕು.

ಶ್ರೀ ಕಿಮ್ಮನೆ ರತ್ನಾಕರ್: ನನ್ನ ಹತ್ತಿರ ಫ್ಯಾಕ್ಟ್ ಇದೆ, ಗೊಬ್ಬರದ ವಿತರಣೆಯಲ್ಲಿ ಅಸಮರ್ಪಕ ವಿತರಣೆಯಿಂದಾಗಿ ಈ ಘಟನೆಗಳು ನಡೆಯುತ್ತಿವೆ.

ಅಧ್ಯಕ್ಷರು: ಅದನ್ನು ಹೇಳಿ, ಆದರೆ ಯಾರದೋ particular ಹೆಸರನ್ನು ಹೇಳುವುದಾದರೆ, ಒಂದು ರಾಜಕೀಯ ಪಕ್ಷದ ಹೆಸರನ್ನು ಹೇಳುತ್ತಿದ್ದೀರಿ.

ಶ್ರೀ ಕಿಮ್ಮನೆ ರತ್ನಾಕರ್: ತಮಗೆ ಮಾಹಿತಿಯನ್ನು ಕೊಡುತ್ತೇನೆ.

ಅಧ್ಯಕ್ಷರು: ಆ ಸೊಸೈಟಿಯವರು ಅವ್ಯವಹಾರ ಮಾಡುತ್ತಿದ್ದರೆ ಅದರ ಬಗ್ಗೆ ಹೇಳಿ.

ಶ್ರೀ ಕಿಮ್ಮನೆ ರತ್ನಾಕರ್: ಉದ್ದೇಶಪೂರ್ವಕವಾಗಿ ನಾನು ಹೆಸರನ್ನು ಹೇಳಲಿಲ್ಲ. ನನಗೆಲ್ಲಾ ಗೊತ್ತಿದೆ. ನಾನು ಇದನ್ನು ಸಭೆಯ ಗಮನಕ್ಕೆ ತಂದೆ ಅಷ್ಟೆ. ಆಡಳಿತದ ಚುಕ್ಕಾಣಿ ಹಿಡಿದವರ ಗಮನಕ್ಕೆ ತಂದಿದ್ದೇನೆ ಅಷ್ಟೆ. ನಿಮ್ಮದೇ ಆಡಳಿತ ಇರತಕ್ಕಂಥದ್ದು ಈ ರೀತಿ ಮಾಡಿದ್ದಾರೆ, ಅದರ ಪೂರ್ಣ ಪ್ರತಿ ನನ್ನ ಹತ್ತಿರ ಇದೆ ಎನ್ನುವುದನ್ನು ನಾನು ಈ ಸಭೆಯ ಗಮನಕ್ಕೆ ತಂದಿರುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಆಗಲೇ ಹೇಳಿದ್ದಾರೆ. ಜಂಟಿ ಸದನ ಸಮಿತಿಯನ್ನು ಮಾಡಬೇಕು ಈ ನಿಟ್ಟಿನಲ್ಲಿ ಎನ್ನುವುದು ಅದನ್ನು ಕೂಡ ನಾನು ಈ ಸಭೆಯ ಮೂಲಕ ಒತ್ತಾಯ ಮಾಡುತ್ತೇನೆ. ಜೊತೆಗೆ ಈಗ ರೈತರಿಗೆ ಆಗಿರತಕ್ಕಂಥ ನಷ್ಟ ಏನಿದೆ, ಅದಕ್ಕೆ ಭರ್ತಿ ಮಾಡತಕ್ಕಂಥದ್ದನ್ನು ಕೂಡ ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳಬೇಕು. ಈಗ ಏನಾಗಿದೆ, ಅಸಮರ್ಪಕ ಗೊಬ್ಬರದ ವಿತರಣೆಯಿಂದ ಆಗಿರತಕ್ಕಂಥ ನಷ್ಟ ಏನಿದೆ, ಈ ಭಾಗದಲ್ಲಿ ಆಗಿರತಕ್ಕಂಥದ್ದು ಆ ನಿಟ್ಟಿನಲ್ಲಿ ಅದನ್ನು ಕೂಡ ಸರ್ಕಾರ ಜವಾಬ್ದಾರಿ ತೆಗೆದುಕೊಂಡು ಅದನ್ನು ಮಾಡಬೇಕೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದು ಸವದಿ (ತೇರದಾಳ):– ಮಾನ್ಯ ಅಧ್ಯಕ್ಷರೇ, ನಿನ್ನೆ ನಡೆದಿರುವಂತಹ ರೈತರ ಆತ್ಮಹತ್ಯೆ ಮತ್ತು ರಸ ಗೊಬ್ಬರದ ವಿತರಣೆಯಲ್ಲಿ ಆಗಿರುವ ಕೊರತೆಯ ಬಗ್ಗೆ ನಡೆದಿರುವ ಚರ್ಚೆಯಲ್ಲಿ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇಡೀ ದೇಶದಲ್ಲಿರುವ ಹಾಗೆ ರಾಜ್ಯದಲ್ಲಿ ಸಹಿತ ರೈತರ ಆತ್ಮಹತ್ಯೆಗಳು ನಡೆಯುತ್ತಿರುವಂಥ ಸಂಗತಿ ಬಹಳ ವಿಷಾದನೀಯವೆಂದು ನಾನು ಸಹಿತ ಹೇಳಬಯಸುತ್ತೇನೆ. ಈ ಆತ್ಮಹತ್ಯೆಯನ್ನು ರಸಗೊಬ್ಬರದ ಕೊರತೆಗೆ ತಂದು ಜೋಡಿಸಿ ರಾಜಕೀಯ ಪಿತೂರಿ ಮಾಡಿರತಕ್ಕಂಥ ಕರ್ನಾಟಕದಲ್ಲಿ ವಿರೋಧ ಪಕ್ಷಗಳು ನಗೆಪಾಟಲಿಗೆ ಈಡಾಗಿರುವುದನ್ನು ಕೇಳಿ ನನಗೆ ಬಹಳ ನೋವು ಎನಿಸುತ್ತಿದೆ. ಅದಲ್ಲದೆ ದಕ್ಷಿಣ ಭಾರತದ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದ್ದನ್ನು ಸಹಿಸುವಂಥ ಶಕ್ತಿ ವಿರೋಧ ಪಕ್ಷಗಳಲ್ಲಿ ಕಾಣುತ್ತಿಲ್ಲ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:– ನೀವು ರೈತರನ್ನು ಸಹಿಸುತ್ತಿಲ್ಲವೋ ಅಥವಾ ನಿಮ್ಮನ್ನು ರೈತರು ಸಹಿಸುತ್ತಿಲ್ಲವೋ ಗೊತ್ತಾಗುತ್ತಿಲ್ಲ.

ಶ್ರೀ ಸಿದ್ದು ಸವದಿ:– ಮಾನ್ಯ ಅಧ್ಯಕ್ಷರೆ, ರಸ ಗೊಬ್ಬರದ ನಿಯಂತ್ರಣ, ಉತ್ಪಾದನೆ, ಹಂಚಿಕೆ ಯಾರು ಮಾಡುತ್ತಾರೆಂದು ಜನ ಸಾಮಾನ್ಯರಿಗೆ, ಬೀದಿಯಲ್ಲಿ ಹೋಗುವಂಥ ಹುಡುಗರಿಗೆ ಗೊತ್ತಾಗುತ್ತದೆ. ಇದು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವಂಥ ವಿಷಯ. ವಿರೋಧ ಪಕ್ಷದವರ ಆಡಳಿತ ಕೇಂದ್ರ ಸರ್ಕಾರದಲ್ಲಿರುವಾಗ ರೈತರ ಬಗ್ಗೆ ಇಷ್ಟೊಂದು ಮಾತನಾಡುವ ವಿರೋಧ ಪಕ್ಷಗಳು ಕೇಂದ್ರ ಸರ್ಕಾರದಲ್ಲಿ ಹೋಗಿ ಏಕೆ ರೈತರ ಹಿತಚಿಂತನೆಯನ್ನು ಕಾಪಾಡಬಾರದು ಎಂದು ಕೇಳಬೇಕಾಗುತ್ತದೆ. ರೈತರ ಹಿತ ಕಾಪಾಡುವುದು ಕೇವಲ ಸರ್ಕಾರದ ಕರ್ತವ್ಯವಷ್ಟೇ ಅಲ್ಲ. ಒಂದು ಹೆಜ್ಜೆ ಮುಂದೆ ಹೋಗಿ ವಿರೋಧ ಪಕ್ಷದವರ ಜವಾಬ್ದಾರಿ ಸಹ ಇರುತ್ತದೆಂದು ನಾವು ಕೇಳುತ್ತೇವೆ. ಆದರೆ ಇಷ್ಟೊಂದು ಅನಾಹುತ ರಾಜ್ಯದಲ್ಲಿ ನಡೆದಾಗ ನೀವು ಪ್ರಧಾನ ಮಂತ್ರಿಯವರ ಹತ್ತಿರ ಹೋಗಿ ಗೊಬ್ಬರದ ಕೊರತೆಯನ್ನು ನೀಗಿಸುವಂಥ ಪ್ರಯತ್ನವನ್ನು ಮಾಡಲಿಲ್ಲವೆಂಬ ಮಾತನ್ನು ಸಹಿತ ಕೇಳಬೇಕಾಗುತ್ತದೆ. ಅದಲ್ಲದೇ ಅನೇಕ ಅಂಕಿ ಸಂಖ್ಯೆಗಳನ್ನು ಈಗಾಗಲೇ ನಮ್ಮ ಸದಸ್ಯರು ಓದಿದ್ದಾರೆ. ಈ ವ್ಯವಸ್ಥೆಯನ್ನು ಯಾರು ಮಾಡಬೇಕಾಗುತ್ತದೆ? ಸರ್ಕಾರ ಬಂದು 8 ದಿವಸದೊಳಗೆ ಈ ವಿಷಯವನ್ನು ತೆಗೆದುಕೊಂಡು ಬೀದಿ ಬೀದಿ ಹೋರಾಟ ಮಾಡುವಂಥ ಈ ವಿರೋಧ ಪಕ್ಷದವರು ನೀವೇ ಆಡಳಿತದಲ್ಲಿದ್ದಿರಲ್ಲಾ, ಈ ರಾಜ್ಯವನ್ನು ನೀವೇ ಬಹಳ ದಿನಗಳವರೆಗೆ ಆಳಿದ್ದೀರಲ್ಲಾ, ಇದಕ್ಕೊಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯುವಂಥ ವ್ಯವಸ್ಥೆಯನ್ನು ಮಾಡದೇ ಹೋಗಿ ಇವತ್ತು ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗ ಮೀನನ್ನು ಹೊರಗೆ ತೆಗೆದು ಒಗೆದ ಹಾಗೆ ಚಡಪಡಿಸುವಂತಹ ಪರಿಸ್ಥಿತಿಯನ್ನು ನೋಡಿದರೆ ಜನ ಭವಿಷ್ಯದಲ್ಲಿ ಯಾರಿಗೆ ಬುದ್ಧಿ ಕಲಿಸುತ್ತಾರೋ ಗೊತ್ತಾಗುತ್ತದೆ. ಏಕೆಂದರೆ ಇವತ್ತು ಗೊತ್ತಾಗುತ್ತಿದೆ. ಏಕೆಂದರೆ ಸರ್ಕಾರ ರಚನೆಯಾದ ತಕ್ಷಣ ಯಾವ ಸರ್ಕಾರಕ್ಕೂ ಇರುವ ಪರಿಸ್ಥಿತಿಯನ್ನು ಸರಿಪಡಿಸಲಿಕ್ಕೆ ಸಾಧ್ಯವಿಲ್ಲ. ಹಿಂದೆ ಇರತಕ್ಕಂಥ ರಾಜ್ಯಪಾಲರ ಆಡಳಿತದಲ್ಲಿ...

ಅಧ್ಯಕ್ಷರು:– ಸಿದ್ದು ಸವದಿಯವರೇ, ನೇರವಾಗಿ ವಿಷಯಕ್ಕೆ ಬಂದು ಬಿಡಿ.

ಶ್ರೀ ಸಿದ್ದು ಸವದಿ:– ರಾಜ್ಯಪಾಲರ ಆಡಳಿತ ಎಂದರೆ indirect ಆಗಿ ಕೇಂದ್ರ ಸರ್ಕಾರದ ಆಡಳಿತ.

VOL. 24, 245

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್:– ಈ ರೀತಿ ನೀವು ಮಾತನಾಡಲಿಕ್ಕೆ ಆಗುವುದಿಲ್ಲ.

ಶ್ರೀ ಸಿ.ಸಿ.ಪಾಟೀಲ್:– ನಿನ್ನೆಯಿಂದ ಮಾತನಾಡುವುದನ್ನು ಕೇಳುತ್ತಿದ್ದೇವೆ. ಈಗ ಅವರು ಮಾತನಾಡುವುದನ್ನು ಕೇಳಬೇಕು.

ಶ್ರೀ ಸಿದ್ದು ಸವದಿ:– ಯಾವ್ಯಾವ ಋತುಮಾನಕ್ಕೆ ಯಾವ್ಯಾವ ಬೆಳೆಬೇಕೆಂದು ನಾವು ಮುಂಚಿತವಾಗಿ ಪ್ಲಾನ್ ಮಾಡಿ ಗೊಬ್ಬರವನ್ನು ಸ್ಟಾಕ್ ಮಾಡುವಂತಹ ವ್ಯವಸ್ಥೆ ಹಿಂದಿನ ಸರ್ಕಾರದಲ್ಲಿ ಆಗಬೇಕಾಗಿತ್ತು. ಅದು ಆಗದೇ ಇರುವುದಕ್ಕೆ ಕಾರಣ ಯಾರು ಎನ್ನುವ ಬಗ್ಗೆ ಸಹಿತ ಜನ ಪ್ರಶ್ನೆ ಮಾಡುವಂಥದ್ದಾಗಿದೆ. ಅದಕ್ಕಾಗಿ ವಿರೋಧ ಪಕ್ಷಗಳಲ್ಲಿ ಸಹಿತ ನನ್ನ ವಿನಂತಿ ಇದೆ. ನೀವು ರೈತರ ವಿಷಯ, ರೈತರ ಆತ್ಮಹತ್ಯೆಗಳ ಬಗ್ಗೆ ರಾಜಕೀಯ ಮಾಡಲಾರದೆ ಎಲ್ಲರೂ ಒಂದಾಗಿ ಈಗ ಬಂದಿರತಕ್ಕಂಥ ಸಂಕಟವನ್ನು ಯಾವ ರೀತಿ ನಿವಾರಣೆ ಮಾಡಬೇಕು, ಯಾವ ರೀತಿ ನಮ್ಮ ರೈತರಿಗೆ convince ಮಾಡಬೇಕು. ನಿಮ್ಮ ಕೇಂದ್ರ ಸರ್ಕಾರದ ಕಾರ್ಖಾನೆಗಳಲ್ಲಿ ಉತ್ಪಾದನೆ ಕಡಿಮೆ ಆಗಿದ್ದರೆ ಅದಕ್ಕೆ ಕಾರಣವೇನು? ಕಚ್ಚಾ ವಸ್ತುಗಳನ್ನು ಎಲ್ಲಿ ಪೂರೈಸುವಂತೆ ಮಾಡಬೇಕು. ಎಲ್ಲರೂ ನಿಯೋಗ ಹೋಗಿ ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಅದನ್ನು ಸಪ್ಲೈ ಮಾಡುವಂತಹ ವ್ಯವಸ್ಥೆ ಮಾಡಬೇಕೇ ವಿನಃ ಗೂಬೆ ಕೂರಿಸುವಂಥ ವ್ಯವಸ್ಥೆ ಮಾಡಿದರೆ ರೈತರಲ್ಲಿ ಯಾರನ್ನು ನಂಬಬೇಕೋ ಯಾರನ್ನು ಬಿಡಬೇಕೋ ಎಂಬ ವಿಶ್ವಾಸವೇ ಹಾರಿ ಹೋಗುವಂಥ ಸಂದರ್ಭ ಎದುರಿಸುವಂತಾಗಬಾರದು. ಈಗಾಗಲೇ ಅನೇಕ ಸದಸ್ಯರು ಮಾತನಾಡಿ ಸಹಜವಾಗಿ ಮೃತ ಹೊಂದಿರುವ ವ್ಯಕ್ತಿಗಳನ್ನು ರಸ್ತೆಯ ಮೇಲಿಟ್ಟು ಹೋರಾಟ ಮಾಡಿ ಈ ಸರ್ಕಾರದ ಮೇಲೆ ರೈತರನ್ನು ಎತ್ತಿಕಟ್ಟುವಂತಹ ಪ್ರಯತ್ನ ನಡೆಯುತ್ತಿದೆ. ಇದು ಸರಿಯಲ್ಲವೆಂಬ ಮಾತನ್ನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲೂ ಸಹ ಹಾವೇರಿ ಗೋಲಿಬಾರ್ ಬಗ್ಗೆ ಹೋರಾಟ ಮಾಡಿದರು. ಹೋರಾಟ ಮಾಡುವಾಗ ಇವರ ಮುಂದೆ ನಲವತ್ತು ಮಂದಿ ಇರಲಿಲ್ಲ. ಆದರೂ ಸಹಿತ ಅಂಗಡಿಗಳನ್ನು ಮುಚ್ಚಿಸಿ, ಅಮಾಯಕರನ್ನು ಹೊಡೆದು ದಬ್ಬಾಳಿಕೆಯಿಂದ ಅಂಗಡಿಗಳನ್ನು ಮುಚ್ಚಿಸುವಂಥ ಪ್ರಯತ್ನ ಮಾಡಿರುವ ಸಂಗತಿ ಈ ಸದನದಲ್ಲಿ ಹೇಳಬಯಸುತ್ತೇನೆ. ಆದ್ದರಿಂದ ಬರುವಂಥ ದಿವಸದಲ್ಲಿ ಏನಾದರೂ ರೈತರ ಬಗ್ಗೆ ಕಾಳಜಿ ಇದ್ದರೆ ನೀವು ಏನಾದರೂ ಪ್ರಯತ್ನಪಟ್ಟು ಬಿಜೆಪಿ ವಿರುದ್ಧ ರೈತರನ್ನು ಎತ್ತಿ ಕಟ್ಟಬೇಕಾಗಿದ್ದರೆ ಅದು ಆಗುವುದಿಲ್ಲ. ಏಕೆಂದರೆ ಯಡಿಯೂರಪ್ಪನವರು ರಾಜಕೀಯ ಜೀವನ ಪೂರ್ತಿ ರೈತರ ಬಗ್ಗೆ. ರೈತರ ಕುಂದು ಕೊರತೆಗಳ ಬಗ್ಗೆ ಹೋರಾಟ ಮಾಡಿದ್ದಾರೆ.

ರೈತರ ವಿಷಯಗಳ ಬಗ್ಗೆ ಯಡಿಯೂರಪ್ಪರವರ ಕಡೆ ನೀವು ಎತ್ತಿ ತೋರಿಸುವಂಥ ಅವಶ್ಯಕತೆ ಇಲ್ಲ. ಗೋಲಿಬಾರ್ ನೀವಿದ್ದಾಗಲೂ ಆಗಿದೆಯಲ್ಲಾ. ಜನ ಮಾತನಾಡುತ್ತಾರೆ. ನಾವು ಮಾತನಾಡುತ್ತಿಲ್ಲ. ಗೋಲಿಬಾರ್ ಆಗಿರುವುದು ವಿರೋಧ ಪಕ್ಷಗಳ ಕೈವಾಡದಿಂದ. ಅದನ್ನು ಎಷ್ಟರಪಟ್ಟಿಗೆ ನಿವಾರಿಸುತ್ತೀರೋ ಗೊತ್ತಿಲ್ಲ. ನಮ್ಮ ವಿರೂಪಾಕ್ಷಪ್ಪನವರು ಉದಾಹರಣೆಗೆ ಚನ್ನಗಿರಿಯ ವಿಷಯವನ್ನು ಹೇಳಿದರು. ರೈತರನ್ನು ಸಹಿತ ಯಾರನ್ನು ನಂಬಲಾರದ ಪರಿಸ್ಥಿತಿಯಲ್ಲಿಡಬೇಡಿ. ಯಾವುದೇ ಸತ್ಯ ಘಟನೆ ಇದೆ, ಅದನ್ನು ಚರ್ಚೆ ಮಾಡಿ. ಯಾರಿಗೆ ಅನ್ಯಾಯವಾಗಿದೆ, ಅವರಿಗೆ ನ್ಯಾಯ ಒದಗಿಸುವಂಥ ವ್ಯವಸ್ಥೆ ಆಗಬೇಕೇ ವಿನಃ ಸುಳ್ಳನ್ನು ಸತ್ಯ ಮಾಡಲಿಕ್ಕೆ ಹೋಗುವಂಥ ಪ್ರಯತ್ನ ನೀವು ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಪ್ರಥಮ ಬಾರಿಗೆ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಸಾಕಷ್ಟು ಪಕ್ಷಗಳು ಈ ರಾಜ್ಯದಲ್ಲಿ ಅಧಿಕಾರ ಮಾಡಿದರೂ ಯಾವುದೇ ರೈತರ ಪರಿಸ್ಥಿತಿ ಸುಧಾರಣೆಯಾಗಿಲ್ಲ. ಒಂದು ವೇಳೆ ನೀವು ರೈತರ ಹಿತಾಸಕ್ತಿಯನ್ನು ಕಾಪಾಡಿದರೆ ಇವತ್ತು ಇಂಥ ದುರ್ದೈವ ಪರಿಸ್ಥಿತಿ ರೈತರಿಗೆ ಬರುತ್ತಿರಲಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುವಂತಹ ಸಂದರ್ಭ ಬರುತ್ತಿರಲಿಲ್ಲ. ನೀವು ಏನು ಮಾಡಿಲ್ಲವೆಂದು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ. ಅದಕ್ಕಾಗಿ ನಮಗೆ ಒಂದು ಸಾರಿ ಉಸಿರಾಡಲಿಕ್ಕೆ ಅವಕಾಶ ಕೊಡಿ. ನಮಗೆ ನಮ್ಮ ಅಭಿವೃದ್ಧಿ ಕೆಲಸವನ್ನು ಮಾಡಲಿಕ್ಕೆ ನೀವು ಅವಕಾಶ ಕೊಡಿ. ಅದನ್ನು ಬಿಟ್ಟು ಜನರನ್ನು ಎತ್ತಿ ಕಟ್ಟಿ ಏನೋ ಅನಾಹುತ ಆದ ಹಾಗೆ ನೀವು ಬಡಿದಾಡಿದರೆ ಏನೂ ಆಗುವುದಿಲ್ಲ. ಈಗ ರೈತರ ಆತ್ಮಹತ್ಯೆ ಈ ರಾಜ್ಯದಲ್ಲಿ ಆಗುತ್ತಿದೆ, ಅದಕ್ಕೆ ಮೂಲಕಾರಣವನ್ನು ಹುಡುಕುವಂಥ ಕೆಲಸ ಮಾಡಬೇಕು. ನಾವೆಲ್ಲರೂ ಒಂದಾಗಿ ಪಕ್ಷಬೇಧ ಮಾಡಲಾರದೆ ರೈತರಿಗೆ ಯಾವರೀತಿ convince ಮಾಡಬೇಕು, ಏನು shortage ಆಗಿದೆ, ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡು ನಮ್ಮ ಹಿರಿಯ ಸದಸ್ಯರು, ಹಿಂದೆ ಸಚಿವರಾದಂಥವರು ಮಾತನಾಡಿದರು. ರಸಗೊಬ್ಬರದ ಸಪ್ಲೈ ಆಗಿಲ್ಲ. ಸರಿಯಾದ ಸಮಯಕ್ಕೆ ಅವರಿಗೆ ಹಂಚಿಕೆ ಮಾಡಿಲ್ಲವೆಂದು ಇಲ್ಲಿ ಹೇಳಿದರು. ಆದರೆ ಯಾವ ಗೋಡೌನ್ ನಲ್ಲಿ ಸ್ಟಾಕ್ ಇದೆ. ಅಲ್ಲದೆ ಅವರು ಹಂಚಿಕೆ ಮಾಡದೇನೇ ಎಲ್ಲಿ ಸ್ಟಾಕ್ ಇಟ್ಟುಕೊಂಡಿದ್ದಾರೆ ಎಂಬ ಮಾತನ್ನು ಸಹಿತ ಹೇಳಬೇಕು. ಏಕೆಂದರೆ ನಮಗೆ ಸಿಕ್ಕಿರುವ ಅಂಕಿ ಸಂಖ್ಯೆಗಳ ಪ್ರಕಾರ ಹೋದ ವರ್ಷ ಸಪ್ಲೈ ಆಗಿದ್ದು ಕೇವಲ 100% ರಲ್ಲಿ 12% ಮಾತ್ರ. ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಬಂದಿರುವುದು. ಒಂದೊಂದು ಯೂರಿಯ ಒಂದೊಂದು ಕಾಂಪ್ಲೆಕ್ಸ್ 8% ಬಂದಿದೆ ಎಂಬುದನ್ನು ನಮ್ಮ ಸದಸ್ಯರು ಈಗಾಗಲೇ ಹೇಳಿದ್ದಾರೆ. ಸತ್ಯವನ್ನು ಮರೆಮಾಚುವಂಥ ಪ್ರಯತ್ನ ಮಾಡಬಾರದು. ಇದರಿಂದ ರೈತರನ್ನು ರೊಚ್ಚಿಗೆಬ್ಬಿಸುವಂಥ

ಕೆಲಸ ಆಗುತ್ತದೆಯೇ ವಿನಃ ನಿಮ್ಮ ಸಾಧನೆ ಏನು ಆಗುವುದಿಲ್ಲ. ಏನಾದರೂ ತೊಂದರೆ ಇವತ್ತು ಆಡಳಿತ ಮತ್ತು ವಿರೋಧ ಪಕ್ಷದವರು ಸೇರಿಕೊಂಡು ರೈತರಿಗೆ ತಿಳುವಳಿಕೆ ಹೇಳಿ ಈಗ ಇಂಥ ಸಂದರ್ಭ ಬಂದಿದೆ. ನೀವು ಈ ರೀತಿ ಬೇಸಾಯ ಮಾಡಿ, ಮುಂದೆ ಬರುವಂಥ ದಿವಸದಲ್ಲಿ ಈ ರೀತಿ ನಿಮಗೆ ಸಪ್ಲೈ ಮಾಡುವುದೆಂಬ ಮಾತನ್ನು ಹೇಳಬೇಕು. ಇದನ್ನು ದುರುಪಯೋಗಪಡಿಸಿಕೊಂಡು ಆಡಳಿತ ಪಕ್ಷದ ಮೇಲೆ ಗೂಬೆ ಕೂರಿಸಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳತಕ್ಕ ವಾತಾವರಣವೇನು ನಿರ್ಮಾಣವಾಗಿದೆ, ಅಸಹಜವಾಗಿ ಸತ್ತರೂ ಗೊಬ್ಬರದ ವಿಷಯದಲ್ಲಿ ಸತ್ತ ಎಂದು ನಿರೂಪಣೆ ಮಾಡಲು ಹೊರಟಿರುವುದು ಬಹಳ ನಾಚಿಕೆಗೇಡಿನ ಸಂಗತಿಯೆಂದು ಹೇಳಬೇಕಾಗಿದೆ. ಆದ್ದರಿಂದ ವಿರೋಧ ಪಕ್ಷದವರಲ್ಲಿ ನನ್ನ ವಿನಂತಿ ಏನೆಂದರೆ, ನೀವು ದಯಮಾಡಿ ರೈತರ ಆತ್ಮಹತ್ಯೆ ಸಂಗತಿ ಏನು ಇದೆ, ರಾಜ್ಯದಲ್ಲೇನು ಗೊಬ್ಬರದ ಕೊರತೆಯಾಗಿದೆ ಇದು ಆಗಬಾರದು. ಇವತ್ತು ಒಳ್ಳೆಯ ಮಳೆಯಾಗಿದೆ. ಅವರಿಗೆ ಬೀಜ ಮತ್ತು ಗೊಬ್ಬರವನ್ನು ಕೊಡುವ ಜವಾಬ್ದಾರಿ ಸರ್ಕಾರದ್ದು. ಇದರಲ್ಲಿ ಕೇಂದ್ರ ಸರ್ಕಾರದ ಪಾಲೂ ಇದೆ. ಇದರಲ್ಲಿ ಕೇಂದ್ರ ಸರ್ಕಾರ ನುಣುಚಿಕೊಳ್ಳುವ ವ್ಯವಸ್ಥೆ ಇಲ್ಲ. ಏಕೆಂದರೆ ಒಕ್ಕೂಟದ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಕೂಡಿಯೇ ಮಾಡಬೇಕಾಗಿರುತ್ತದೆ. ರಾಜ್ಯ ಸರ್ಕಾರ ಕರ್ತವ್ಯ ಮತ್ತು ಕೇಂದ್ರ ಸರ್ಕಾರದ ಕರ್ತವ್ಯ ಎರಡೂ ಸೇರಿ ರೈತರ ಹಿತವನ್ನು ಕಾಪಾಡಬೇಕೇ ವಿನಃ ಈ ವಿಷಯದಲ್ಲಿ ರಾಜಕೀಯ ಮಾಡಿ, ಬಿ.ಜೆ.ಪಿ ಸರ್ಕಾರವೇನು ಅಧಿಕಾರಕ್ಕೆ ಬಂದಿದೆ, ರೈತ ವಿರೋಧಿಯೆಂದು ನಿರೂಪಣೆ ಮಾಡುವಂಥ ಪದ್ಧತಿಯೇನಿದೆ, ಇದು ಸರಿಯಿಲ್ಲವೆಂದು ಹೇಳಿ ನನಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಚನ್ನರಾಯಪಟ್ಟಣ): ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಪಕ್ಷದ ಮುಖಂಡರು ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಆಡಳಿತ ಪಕ್ಷದ ಮುಖಂಡರು ಮತ್ತು ಸದಸ್ಯರೆಲ್ಲರೂ ಸಹ ಇದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿರುವುದರಿಂದ ನಾನು ಇದರ ಬಗ್ಗೆ ಹೆಚ್ಚು ಮಾತನಾಡಲು ಹೋಗುವಂಥ ಅಗತ್ಯವೂ ಇಲ್ಲ, ನಾನು ಮಾತನಾಡಲೂ ಬಂದವನಲ್ಲ. ಏಕೆಂದರೆ ಮಾದರಿ ರಾಜ್ಯವನ್ನು ಮಾಡುತ್ತೇವೆಂದು ಚುನಾವಣೆಗೆ ಮೊದಲು ನಮ್ಮ ಸುರೇಶ್ ಕುಮಾರ್ ರವರು ಮತ್ತು ಅವರ ಮುಖಂಡರಾದ ಮುಖ್ಯಮಂತ್ರಿ ಯಡಿಯೂರಪ್ಪನವರು ಒಳ್ಳೆಯ advertise ಅನ್ನು ಈ ರಾಜ್ಯದ 5 ಕೋಟಿ ಜನರಿಗೆ ಬಹಳ ಸುಂದರವಾದ ಭಾಷೆಯಲ್ಲಿ 50 ವರ್ಷ ಈ ರಾಜ್ಯವನ್ನು

ಕಾಂಗ್ರೆಸ್‌ನವರು, ಜೆಡಿಎಸ್‌ನವರೆಲ್ಲಾ ಹಾಳುಮಾಡಿಬಿಟ್ಟಿದ್ದಾರೆ, ಅದನ್ನೆಲ್ಲ ಸರಿಪಡಿಸಿ ಒಂದು ಒಳ್ಳೆಯ order ನಲ್ಲಿ ಇಟ್ಟು ಮಾದರಿ ರಾಜ್ಯವನ್ನು ಈ ಕರ್ನಾಟಕಕ್ಕೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ನೋಡುವಂಥ ಕಾತುರದಲ್ಲಿ ಇರುವವನು ನಾನು. ನಾನು ಈಗ ಹೆಚ್ಚು ಮಾತನಾಡಲು ಹೋಗುವುದಿಲ್ಲ. ಈಗಾಗಲೇ ಸಾಕಷ್ಟು ಬೆಳಕನ್ನು ರಸಗೊಬ್ಬರದ ಬಗ್ಗೆ ಚೆಲ್ಲಿದ್ದಾರೆ. ಕಳೆದ 21ನೇ ತಾರೀಖು ಶನಿವಾರ ನಮ್ಮ ಚೆನ್ನರಾಯಪಟ್ಟಣದಲ್ಲಿ ಒಂದು ಘಟನೆ ಗೊಬ್ಬರದ ಸಲುವಾಗಿ ನಡೆದಿದೆ. ಗೊಬ್ಬರಕ್ಕೆ ರಂಗೋಲೆ ಪುಡಿಯನ್ನು ಬೆರೆಸಿ ಅಂಗಡಿಯವರು ಮಾರಾಟ ಮಾಡಿ ರೈತ ತನ್ನ ಮನೆಗೆ ತೆಗೆದುಕೊಂಡು ಹೋದವನು ಹಳ್ಳಿಯಿಂದ ಮತ್ತೆ ಬಂದು ಅಂಗಡಿಯವರು ಕೊಟ್ಟ ಚೀಲವನ್ನು ವಾಪಸ್ ತಂದು ಅಂಗಡಿಯವನಿಗೆ ಮತ್ತು ಅವನಿಗೆ ಗಲಾಟೆಯಾಗಿ, ಆವತ್ತು ಸಂತೆ, ದೊಡ್ಡ ಗಲಾಟೆಯಾಗಿ ದೊಂಬಿಯಾಗಿ ದೊಡ್ಡ ಪರಿಣಾಮವಾಗುತ್ತಿತ್ತು. ಹಾಸನದ ಎಸ್.ಪಿ.ಯವರು ಮತ್ತು ನಮ್ಮ ಚೆನ್ನರಾಯಪಟ್ಟಣದ ಸರ್ಕಲ್ ಇನ್ಸ್‌ಪೆಕ್ಟರ್‌ರವರು ನನಗೆ ಫೋನ್ ಮಾಡಿ ನಾನು ಆವತ್ತು ಮನೆಯಲ್ಲೇ ಇದ್ದಾಗ ಹೇಳಿದರು. ಪುಟ್ಟೇಗೌಡರೆ, ನೋಡಿ ಗಲಾಟೆಯಾಗುತ್ತಿದೆ, ರಾಜ್ಯದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಬ್ಬುತ್ತಿದೆ, ಇದನ್ನು ಏನಾದರೂ ಮಾಡಿ ತಣ್ಣಗೆ ಮಾಡಬೇಕಲ್ಲಾ ಎಂದು ಹೇಳಿದರು. ಅದಕ್ಕೆ ನಾನು ನೋಡಿ ಸಾರ್, ನಾನು ಹೋದರೆ ಅದು ಬೇರೆ ಬಣ್ಣಕ್ಕೆ ತಿರುಗಿ ನನಗು ಕೆಟ್ಟ ಹೆಸರು ಬರುತ್ತದೆ, ಜನರು ಸಹ ನಾನು ಹೋದಾಗ ಆವೇಶಭರಿತರಾಗಿ ಅದು ದೊಡ್ಡದಾಗಬಹುದು. ಆ ರೀತಿ ಆಗುವುದು ಬೇಡ. ನಾನು ಯಾರೋ ನಾಲ್ಕು ಜನ ಹಿರಿಯರನ್ನು ಕಳುಹಿಸಿ ಅದನ್ನು ಸಮಾಧಾನ ಮಾಡುತ್ತೇನೆಂದು ಹೇಳಿ ಅಲ್ಲಿ ಹೋಗಿ ಸ್ವಲ್ಪ ಸಮಾಧಾನ ಮಾಡಿ ಸಣ್ಣಪುಟ್ಟ ಪೋಲಿಸರ ಶ್ರಮದಿಂದ ಅರ್ಧ ಗಂಟೆಯಲ್ಲಿ ಅದು ತಣ್ಣಗಾಯಿತು. ಅನಂತರ ಅವನಿಗೇನು ವಾಪಸ್ ಹಣವನ್ನು ಕೊಡಬೇಕೋ ಮತ್ತು ಆ ಅಂಗಡಿಯವನ ಮೇಲೆ ಕ್ರಮ ತೆಗೆದುಕೊಳ್ಳಬೇಕೊ, ಅದನ್ನು ಸರಿಯಾಗಿ ಪರೀಕ್ಷೆ ಮಾಡಿ ಎಂದು ಎಲ್ಲವೂ ಇತ್ಯರ್ಥವಾದ ಮೇಲೆ ಪೊಲೀಸ್‌ನವರು ಮತ್ತು ಎಸ್.ಪಿ.ಯವರು ಸುಮ್ಮನಾದರು. ಜನರು ಸಹ ಸಂತೆಯನ್ನು ಮುಗಿಸಿಕೊಂಡು ಮನೆಗೆ ಹೋದರು. ಸಂತೆ ಎಂದರೆ ತಮಗೆ ಗೊತ್ತಿದೆ. ವಾರವೆಲ್ಲಾ ಕಷ್ಟಪಟ್ಟು ವಾರದ ಉಪ್ಪು, ಮೆಣಸನ್ನು ತೆಗೆದುಕೊಂಡು ಹೋಗಲು ಹುಣಸೆ ಹಣ್ಣನ್ನು, ಬಾಳೆ ಹಣ್ಣನ್ನು ತಂದಿರುವವರು ಇರುತ್ತಾರೆ, ಸಂತೆಗೆ ಸಾಮಾನ್ಯವಾಗಿ ಮುಗ್ಧರು ಬರುತ್ತಾರೆ. ಅದರ ಮಾರನೇ ದಿವಸ ಇಲ್ಲಿಂದ ಯಾರೋ ಹಿರಿಯ ಪೊಲೀಸ್ ಅಧಿಕಾರಿಗಳು ಅಲ್ಲಿಗೆ ಹೋದ ಮೇಲೆ ಅಲ್ಲಿ ಆಗಿದ್ದ ಗಲಾಟೆಯ ಬಗ್ಗೆ ತರಿಸಿ ನೋಡಿ ಪಾಪ ಅಲ್ಲಿ

ಬಂದವರು ಏನು ಮಾಡಿದ್ದಾರೆಂದರೆ, ಇವರು ಏನು ಟಿ.ವಿ. ಹಿಡಿದಿರುತ್ತಾರೆ, ಆ ಟಿ.ವಿ.ಯಲ್ಲಿ ಯಾರ್ಯಾರ ಫೋಟೋ ಇದೆ, ಅವರನ್ನೆಲ್ಲ ಹಿಡಿದು ಕೇಸನ್ನು ಹಾಕಿ ಎಂದು ನಾನ್‌ಬೇಲೆಬಲ್ ಕೇಸನ್ನು ಹಾಕುತ್ತೀರಿ, ಶಮನವಾಗಿರುವಂಥದ್ದನ್ನು ಕೆದಕುವುದು ಒಳ್ಳೆಯದಲ್ಲ. ಏಕೆಂದರೆ ನಮ್ಮ ಊರಿನ ಜನ ಬಹಳ ಸಂಯಮಪ್ರಿಯರು. ನಾವು ಎಂದೂ ರಾಜಕೀಯಕ್ಕೊ ಇನ್ನೊಂದಕ್ಕೊ ಹೊಡೆದಾಡಿ ದೊಡ್ಡದಾಗಿ ಮಾಡಬೇಕು ಎಂಬ ಅಪೇಕ್ಷೆ ಕೂಡ ನನಗೂ ಶಾಸಕನಾಗಿ 15 ವರ್ಷ ಶಾಸನ ಸಬೆಯಲ್ಲಿ ಕುಳಿತರೂ ಆ ಒಂದು ಕೆಲಸಕ್ಕೆ ಹೋಗಿಲ್ಲ. ದಯಮಾಡಿ ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಇಲ್ಲ. ಸುರೇಶ್‌ಕುಮಾರ್‌ರವರು ಇದ್ದಾರೆ, ಕಾರ್‌ಜೋಳ್‌ರವರು, ರವೀಂದ್ರನಾಥ್‌ರವರು ಇದ್ದಾರೆ. ದಯಮಾಡಿ ವಿನಾ ಕಾರಣ ಕೇಸ್‌ನ್ನು ರೈತರ ಮೇಲೆ ಹಾಕುವುದು ಒಳ್ಳೆಯದಲ್ಲ. ಅವರು ಮುಗ್ಧರು. ಆ ಗಲಾಟೆಯನ್ನು ಕೂಡ ನಾವೇ ಶಮನ ಮಾಡಿದೆವು. ಬೇಕಾದರೆ ನೀವು ಹಿರಿಯ ಪೊಲೀಸ್ ಅಧಿಕಾರಿಗಳಾದ ಹಾಸನದ ಎಸ್.ಪಿ. ಯವರನ್ನಾಗಲೀ, ಚೆನ್ನರಾಯಪಟ್ಟಣದ ಸರ್ಕಲ್ ಇನ್ಸ್‌ಪೆಕ್ಟರ್‌ರವರನ್ನಾಗಲಿ ವಿಚಾರಿಸಿ ನೋಡಿ. ಅವರು ಏಕೆ ಕೇಸನ್ನು ಹಾಕಿದ್ದಾರೆಂದರೆ, ಮಾರನೆ ಬೆಳಿಗ್ಗೆ ಹಿರಿಯ ಅಧಿಕಾರಿಗಳು ರಾಜ್ಯದೆಲ್ಲೆಡೆಗೆ ಹೋಗುತ್ತಾರೆ, ಮುಖ್ಯಮಂತ್ರಿಗಳ ಕಣ್ಣು ಪೋಲಿಸ್ ಅಧಿಕಾರಿಗಳ ಮೇಲೆ ಏನಾದರೂ ಬಿದ್ದೀತೋ ಎಂಬ ಕಾರಣಕ್ಕೆ ಅವರ ಮೇಲೆ ನಾನ್ ಬೇಲಬಲ್ ಕೇಸನ್ನು ಹಾಕಿ ಅವರನ್ನೆಲ್ಲಾ ಕೋರ್ಟಿಗೆ ಕಳುಹಿಸಿದ್ದಾರೆ. ದಯಮಾಡಿ ಅದು ಆಗಬಾರದು. ಆ ಕೇಸನ್ನು ವಾಪಸ್ ತೆಗೆದುಕೊಂಡು ಅಲ್ಲಿ ಯಾರಿಗೂ ಅನಾಹುತ ಆಗಿಲ್ಲ. ಅಲ್ಲಿ ಅಂಗಡಿಯಲ್ಲಿ ಏನು ರಂಗೋಲಿ ಪುಡಿಯನ್ನು ಮಾರುತ್ತಿದ್ದ, ಅದು ಸರಿಯಾಗಿ ಪರೀಕ್ಷೆ ಮಾಡಿ ಅವನ ಮೇಲೆ ಕೇಸು ಹಾಕಿ ಕ್ರಮ ತೆಗದುಕೊಳ್ಳಬೇಕು. ಆದರೆ ವಿನಾಕಾರಣ ರೈತರ ಮೇಲೆ ಕೇಸನ್ನು ಹಾಕುವುದು ಒಳ್ಳೆಯದಲ್ಲ. ನಾನು ಕೂಡ ಶಾಸಕನಾಗಿ ಅದನ್ನು ನೋಡಿಕೊಂಡು ನಿಮ್ಮ ಕೆಲಸವೇನು ಎಂದು ಬಟ್ಟೆ ಹರಿದವರು, ಬಡವರು ಕೇಳುತ್ತಾರೆ. ಅವರಿಗೆ ಉತ್ತರ ಹೇಳುವುದು ಕಷ್ಟ. ಯಾರೊ ಹಿರಿಯ ಪೊಲೀಸ್ ಅಧಿಕಾರಿ ಸುಮ್ಮನೆ ಇರಿಸಿದ್ದನ್ನು ಹೋಗಿ ದೊಡ್ಡದು ಮಾಡುವುದಾದರೆ ಚೆನ್ನಾಗಿ ಇರುವುದಿಲ್ಲ. ದಯಮಾಡಿ ಸುರೇಶ್ ಕುಮಾರ್ ಸಾಹೇಬರೆ, ಅದನ್ನು ಎಸ್.ಪಿ. ಯವರಿಗೆ ಮತ್ತು ಅಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರ್‌ರವರನ್ನು ಕೇಳಿ ಆ ಕೇಸನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಈ ಸದನದ ಮೂಲಕ ಸರ್ಕಾರಕ್ಕೆ ಗಂಭೀರವಾಗಿ ನಾನು ವಿನಂತಿ ಮಾಡುತ್ತೇನೆ. ಮತ್ತು ಈ ಸರ್ಕಾರ ಬಹಳ ಕನಸು ಇಟ್ಟು ನಾವೆಲ್ಲಾ ಕಾಂಗ್ರೆಸ್‌ನವರು, ಜೆ.ಡಿ.ಎಸ್.ನವರು ಮಾಡಿರುವುದು ಸರಿಯಾಗಿಲ್ಲವೆಂದು, ನಿಮಗೆ ಬಹಳ ಅಪರೂಪಕ್ಕೆ ಅವಕಾಶ ಕೊಡಬೇಕು,

ಬಹಳ ದಿವಸಗಳಿಂದ ಕೂಗಾಡುತ್ತಿದ್ದಾರೆ, ಕೇಳುತ್ತಿದ್ದಾರೆಂದು ಏನೂ ಅಧಿಕಾರವನ್ನು ಕೊಟ್ಟಿದ್ದಾರೆ. ಸಂತೋಷ. ನಾವು ಬಹಳ ಅತ್ಯಂತ ಗಂಭೀರವಾಗಿ ಈ ರಾಜ್ಯದ ರೈತರಿಗೆ ಕೇವಲ ಮಾತಿನಲ್ಲಿ ಊಟ ಮಾಡಿಸುವುದು ಬೇಡ. ಏಕೆಂದರೆ ಯಾವ ಸರ್ಕಾರಗಳು ಬಂದರೂ ಯಾರೂ ಈ ಕಡೆ ವಿರೋಧ ಪಕ್ಷದಲ್ಲಿ ಯಡಿಯೂರಪ್ಪನವರು ಕೂತಾಗಲು ಇದೇ ಭಾಷಣವಾಗಿದೆ. ಖರ್ಗೆಯವರು, ನಾವು ಕುಳಿತರೂ ಅದೇ ಮಾಡುತ್ತೇವೆ. ಜನರು ಕೇಳಿ ಕೇಳಿ ಅವರಿಗೂ ಇದು ಪ್ರಾಕ್ಟಿಕಲ್ ಆಗಿ ಇಲ್ಲದೆಯೇ ಒಂದು ರೀತಿ ಸದನ ವಿಧಾನಸೌಧದಲ್ಲಿ ಚರ್ಚೆಯಾಗುತ್ತದೆಂದರೆ ಅದಕ್ಕೆ ಅವರು ಗಂಭೀರ ಕೊಡುವುದು ಕಡಿಮೆಯಾಗಿದೆ. ಅದು ಆಗಬಾರದು. ನಿಮಗೇನು ಹೊಸ ಕಲ್ಪನೆ ಇದೆ, ಈ ರಾಜ್ಯದ 5 ಕೋಟಿ ಜನರಿಗೆ ಅದು ಹರಿಯಲಿ, ನಾವು ನೀವು ಮಾಡುವ್ ಒಳ್ಳೆಯ ಕೆಲಸಕ್ಕೆ ಸಂತೋಷ ಪಡುತ್ತೇವೆ. ಅದು ಆಗಲಿಲ್ಲವೆಂದರೆ ಜನರು ತಿರುಗಿ ಬಿದ್ದಾಗ ಏನು ಯಾರಿಗೆ ಶಿಕ್ಷೆ ಕೊಡಬೇಕೊ ನಾವು ಬರೀ ಎಲ್ಲಾ ಎಂ.ಎ. ಮಾಡಿ ಎಂ.ಎಲ್.ಎ.ಗಳಾಗಿ ಬಂದಿದ್ದರೆ ರಾಜ್ಯದ 5 ಕೋಟಿ ಜನ ಎಂ.ಎ., ಪಿ.ಹೆಚ್.ಡಿ. ಮಾಡಿದ್ದಾರೆ. ಏಕೆಂದರೆ ಈ ಸಲ ಓಟನ್ನು ಕೊಟ್ಟಿರುವ ಧಾಟಿಯನ್ನು ನೋಡಿದರೆ ನಮಗೆಲ್ಲರಿಗೂ ಅರ್ಥವಾಗುತ್ತದೆ. ದಯಮಾಡಿ ಆ ಕೇಸಿನ ಬಗ್ಗೆ ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ಆ ಜನರ್ಯಾರು ಹೊಡೆದಾಟಕ್ಕೆ ಜಗಳಕ್ಕೆ ಬಂದವರಲ್ಲ. ಜಗಳವಾದಾಗ ಏನಾಯಿತು ಎಂದು ಹೋಗಿ ನೋಡಲು ನಿಂತಿದ್ದಾರೆ. ಇವರು ಟಿ.ವಿ.ಯಲ್ಲಿ ಕಾಣಿಸಿಕೊಂಡಿದ್ದಾರೆ, ಅವರ ಮೇಲೆ ಕೇಸನ್ನು ಹಾಕುವುದು ಒಳ್ಳೆಯದಲ್ಲ ಎಂದು ಹೇಳಿ ಈ ಸದನದ ಮೂಲಕ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಪಿ.ಎಂ. ಅಶೋಕ್ (ರಾಮದುರ್ಗ): ಮಾನ್ಯ ಅಧ್ಯಕ್ಷರೆ, ತಮಗೆಲ್ಲ ಗೊತ್ತಿರುವಂತೆ ನಿನ್ನೆಯ ಘಟನೆ ಬೆಳಗಾಂ ಜಿಲ್ಲೆ ರಾಮದುರ್ಗ ತಾಲ್ಲೂಕಿನಲ್ಲಿ ನೆನ್ನೆ ಮಲ್ಲಪ್ಪ ಬಸಪ್ಪ ನಂದಿ ಎಂಬ ಒಬ್ಬ ರೈತ ವಿಷ ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆತ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಿಂದ 8 ಲಕ್ಷ ಮತ್ತು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನಿಂದ 48 ಸಾವಿರ ಸಾಲ ತೆಗೆದುಕೊಂಡಿದ್ದ ಎಂಬ ಮಾಹಿತಿಯನ್ನು ನಾನು ಸಂಗ್ರಹಿಸಿದ್ದೇನೆ. ಇದು ತಮಗೂ ಬಂದಿರಬೇಕು. ರಾಮದುರ್ಗ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶ. ಆ ಭಾಗದಲ್ಲಿ ಎಲ್ಲೂ ಮಳೆಯಾಗುತ್ತಿಲ್ಲ. ರೈತರೆಲ್ಲ ಬಹಳ ಕಷ್ಟದಲ್ಲಿದ್ದಾರೆ. ಬೇಕಾದಷ್ಟು ಜನ ವಿಷ ತೆಗೆದುಕೊಂಡು ಸಾಯಬೇಕು ಎಂದು..., ರೈತರ ಪರವಾಗಿರುವ ಸರ್ಕಾರ ರೈತರ ಪರವಾಗಿ ಏನೂ ಮಾಡುತ್ತಿಲ್ಲವೆಂದು ರೈತರು ಬಹಳ ಬೇಜಾರಾಗಿದ್ದಾರೆ. ಸರ್ಕಾರಕ್ಕೆ

ಕೇಳಿಕೊಳ್ಳುವುದೇನೆಂದೆ, ಮಳೆ ಬಾರದಿರುವುದರಿಂದ ತಾವು ರೈತರಿಗೆ ಎಲ್ಲಾ ಬ್ಯಾಂಕ್ ನವರು ಕೂಡ ಸಾಲದ ವಸೂಲಾತಿಯನ್ನು ಸ್ವಲ್ಪ ದಿವಸ ನಿಲ್ಲಿಸಬೇಕು ಎಂದು ತಾವು ನಿರ್ದೇಶನ ಕೊಟ್ಟರೆ ಸ್ವಲ್ಪ ದಿವಸ ರೈತರಿಗೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಬ್ಯಾಂಕ್‌ನವರು ಎಲ್ಲ ರೆಕವರಿಗೆ ಹೋಗುತ್ತಿದ್ದರೆ ರೈತರ ಸಾವು ಇನ್ನೂ ಜಾಸ್ತಿಯಾಗುತ್ತದೆ. ನಾವು ರೈತರ ಪರವಾಗಿರುವ ಸರ್ಕಾರ ಎಂಬುದನ್ನು ತಾವು ಮೊದಲಿನಿಂದಲೂ ಘೋಷಣೆ ಮಾಡಿಕೊಂಡು ಬಂದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಸರ್ಕಾರ ಬಂದ 22 ದಿವಸಗಳಲ್ಲಿ 24 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರ ಏನೂ ಅಭಿವೃದ್ಧಿ ಮಾಡುತ್ತಿಲ್ಲ. ಕೇವಲ ರೈತರ ಆತ್ಮಹತ್ಯೆಯ ಪ್ರಕರಣಗಳು ಜಾಸ್ತಿಯಾಗುತ್ತಿದೆ. ನಾವು ವಿರೋಧ ಪಕ್ಷದವರು ಕೇವಲ ರೈತರ ಪರವಾಗಿರುವ ಸರ್ಕಾರದಲ್ಲಿ ರೈತರ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬಗ್ಗೆ ಬರೀ ಮಾತನಾಡುವುದು ಆಗುತ್ತಿದೆ. ನಿನ್ನೆ ಅಲ್ಲಿ ರೈತ ಸತ್ತಾದ ಮೇಲೆ ತಮ್ಮ ಸರ್ಕಾರದ ಪರವಾಗಿ ಯಾವುದೇ ಅಧಿಕಾರಿ ಅವರ ಮನೆಗೆ ಹೋಗಿ ಸಮಾಧಾನ ಹೇಳುವ ಕೆಲಸವನ್ನು ಮಾಡಿಲ್ಲ. ಪರಿಹಾರವನ್ನೇನಾದರೂ ಕೊಡುತ್ತೇವೆಂದು ಒಬ್ಬರೂ ಹೇಳಿಲ್ಲ. ಸರ್ಕಾರ ಬಹಳ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ. ಎಂದು ಈ ಸಂದರ್ಭದಲ್ಲಿ ನಾನು ಹೇಳಲು ಇಷ್ಟ ಪಡುತ್ತೇನೆ. ಈಗಲಾದರೂ ಸರ್ಕಾರದ ಪರವಾಗಿ ಅಲ್ಲಿಗೆ ಯಾರು ಹೋಗಿದ್ದಾರೆ, ಏನು ಪರಿಹಾರ ಘೋಷಣೆ ಮಾಡಿದ್ದಾರೆ ಎಂದು ನಾನು ತಿಳಿಯಬಯಸುತ್ತಿದ್ದೇನೆ. ತೀರ್ಥಹಳ್ಳಿಯ ಶಾಸಕರಾದ ನಮ್ಮ ಸ್ನೇಹಿತರು ನೀವು ರೈತರಿಗೆ ಎಷ್ಟು ಗೊಬ್ಬರ ವಿತರಣೆ ಮಾಡುತ್ತೀರಾ ಎಂಬ ಒಂದು ಮಾತನ್ನು ಹೇಳಿದರು. ನನಗೆ ಬೇಜಾರಾಯಿತು, ಅವರು ಫ್ಯಾಕ್ಸ್ ಬಂದಿದೆಯೆಂದು ತೋರಿಸಿದರು. ಅವರು ಯಾವುದೇ ಪಕ್ಷದವರಾಗಿರಲಿ, ಅವರು ಪಕ್ಷದ ಹೆಸರನ್ನು ಹೇಳಲಿಲ್ಲ. ಆ ರೀತಿ ಫ್ಯಾಕ್ಸ್ ತರಿಸಿಕೊಂಡು ಬ್ಲಾಕ್ ಮಾರಾಟ ಮಾಡುತ್ತಿದ್ದಾರೆಂದು ಬೇರೆಯವರ ಮೇಲೆ ನೀವು ಕೇಸನ್ನು ಹಾಕುತ್ತೀರಿ, ಅದರೆ ಆ ಸೊಸೈಟಿಯವರ ಮೇಲೆ ಏಕೆ ಕೇಸನ್ನು ಹಾಕಬಾರದು? ದಯವಿಟ್ಟು ಅದರ ಮಾಹಿತಿಯನ್ನು ತರಿಸಿಕೊಂಡು ಅವರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಭೆಯ ಮೂಲಕ ಆಗ್ರಹಿಸುತ್ತೇನೆ. ಗೋಲೀಬಾರ್ ಪ್ರಕರಣವಾಗಲಿ, ರೈತರ ಆತ್ಮಹತ್ಯೆಯ ಪ್ರಕರಣವಾಗಲಿ ನಮ್ಮ ವಿರೋಧ ಪಕ್ಷದ ನಾಯಕರಾದ ಖರ್ಗೆಯವರು ಹೇಳಿದಂತೆ ಇದರ ಬಗ್ಗೆ ಜಂಟಿ ಸದನದ ಸಮಿತಿಯನ್ನು ರಚನೆ ಮಾಡಬೇಕೆಂದು ಕೇಳಿಕೊಂಡು ಸಭೆಯಲ್ಲಿ ಎರಡು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

ಶ್ರೀ ಎ. ಮಂಜು (ಅರಕಲಗೂಡು):– ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಕ್ಷೇತ್ರದಲ್ಲಿ ಬೆಳಗಿನ ಜಾವ ಕೊಳನೂರು ಹೋಬಳಿಯಲ್ಲಿ ಒಬ್ಬ ರೈತ ಸಾವನ್ನಪ್ಪಿದ್ದಾನೆ. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಆ ಬಗ್ಗೆ ಮಾತನಾಡಿದ್ದೇನೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಮಾನ್ಯ ಸುರೇಶ್‌ಕುಮಾರ್ ರವರೇ, ತಾವು ದಯಮಾಡಿ ಕೂಡಲೇ ನಮ್ಮ ಜಿಲ್ಲಾಧಿಕಾರಿಗಳನ್ನು ಈ ಬಗ್ಗೆ ಸಂಪರ್ಕಿಸಬೇಕು. ನಮ್ಮಲ್ಲಿ ಈಗಾಗಲೇ ವಾರದಲ್ಲಿ ಎರಡು ಸಾವು ಆಗಿದೆ. ಮಲ್ಪಟ್ಟಣ ಹೋಬಳಿಯಲ್ಲಿ ಈ ಮೊದಲು ಸಾವು ಉಂಟಾಗಿತ್ತು. ಕೊಳನೂರು ಹೋಬಳಿಯಲ್ಲಿ ಇವತ್ತು ಬೆಳಗಿನ ಜಾವ ಆಗಿದೆ. ಕಳೆದ 15 ದಿವಸಗಳಲ್ಲಿ ಗೊಬ್ಬರದ ಗಲಾಟೆಯಲ್ಲಿ ಅರಕಲಗೂಡಿನಲ್ಲಿ ರೈತರ ವಿರುದ್ಧ ಪೊಲೀಸರು ಕೇಸ್ ಹಾಕಿದ್ದಾರೆ. ಅದನ್ನು ಈಗಾಗಲೇ ಮಾನ್ಯ ಪುಟ್ಟೇಗೌಡರು ಮಾತನಾಡಿದ ಹಾಗೆ, ಆ ಕೇಸ್ ಅನ್ನು withdraw ಮಾಡಬೇಕು. ಸಂಬಂಧಪಟ್ಟ ಪೊಲೀಸರಿಗೆ ಇದ್ದಕ್ಕಿದ್ದಂತೆ ಕೇಸ್ ಹಾಕುವುದಕ್ಕೆ ನೀವೇನಾದರೂ ಆದೇಶ ಮಾಡಿದ್ದೀರಾ? ಅದರ ಬಗ್ಗೆ serious ಆಗಿ ನೀವು ಯೋಚನೆ ಮಾಡಬೇಕು. ಈಗಾಗಲೇ ನೀವು ನಮ್ಮದು ರೈತರಪರ ಸರ್ಕಾರವೆಂದು ಹೇಳಿಕೊಂಡಿದ್ದೀರಿ. ಬಹುಶಃ ಅದು ನಿಜವಾಗಿಯೂ ಕೂಡ ತಪ್ಪಾಗುತ್ತಿದೆ. ತಾವು ಅದನ್ನು ತಿದ್ದಿಕೊಳ್ಳಬೇಕು. ಕೂಡಲೇ ರೈತರ ಸಮಸ್ಯೆಗೆ ಸ್ಪಂದಿಸಿ ಅವರಿಗೆ ಪರಿಹಾರವನ್ನು ಕೊಡಬೇಕೆಂದು ಆಗ್ರಹಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ ಕೃಷ್ಣಮೂರ್ತಿ (ಕಡೂರು):– ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ಶಾಸಕರೂ ಕೂಡ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಟ್ಟಾರೆಯಾಗಿ ರೈತರ ಆತ್ಮಹತ್ಯೆ, ಗೋಲಿಬಾರ್, ರಸಗೊಬ್ಬರದ ಕೊರತೆ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಶ್ರೀಮಾನ್ ಯಡಿಯೂರಪ್ಪನವರು ಕೇಸರಿ ಶಾಲನ್ನು ಬಿಟ್ಟು, ಹಸಿರು ಶಾಲನ್ನು ಹೊದ್ದು, ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದ್ದಾರೆ. ಯಾವುದೇ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡು, ಪರಿಹಾರವನ್ನು ಕೇಳುವಂತಹ ಪ್ರವೃತ್ತಿ ನಡೆದಿದೆ, ಅದಕ್ಕೆ ವಿರೋಧ ಪಕ್ಷದವರು ಕುಮ್ಮಕ್ಕು ಕೊಡುತ್ತಿದ್ದಾರೆಂದು ಈಗ ಒಬ್ಬ ಶಾಸಕರು ಹೇಳಿದರು. ಪುರಂದರದಾಸರು ಮಾನವ ಜನ್ಮ ಬಲು ದೊಡ್ಡದು, ಅದನ್ನು ಹಾಳು ಮಾಡಬೇಡಿರೋ, ಹುಚ್ಚಪ್ಪಗಳಿರಾ' ಎಂದು ಹೇಳಿದ್ದಾರೆ. ಆದರೆ ಯಾವುದೇ ಒಬ್ಬ ವ್ಯಕ್ತಿ ಆತ್ಮಹತ್ಯೆಯನ್ನು ಮಾಡಿಕೊಳ್ಳಲಿಕ್ಕೆ ಬಯಸುವುದಿಲ್ಲ. ಯಾವಾಗ ಅವನು ಆತ್ಮಹತ್ಯೆಗೆ ಶರಣಾಗುತ್ತಾನೆ ಎಂದರೆ, ನಿಸ್ಸಾಹಯಕನಾಗಿ, ಸಮಾಜದಲ್ಲಿ ಆರ್ಥಿವಾಗಿ ಹಿನ್ನಡೆ ಸಾಧಿಸಿದಾಗ, ಅವನು ಸಮಾಜದಲ್ಲಿ ಸಾಲ ಬಾಧೆಯನ್ನು ತೀರಿಸಲು ಸಾಧ್ಯವಾಗದಿದ್ದಾಗ ಅವನು ಆತ್ಮಹತ್ಯೆಗೆ ಒಳಗಾಗುತ್ತಾನೆ

VOL. 9, P.34

'ಅವನು ರೈತನೇ ಅಲ್ಲ' ಎಂದು ಇಲ್ಲಿ ಒಬ್ಬರು ನಮ್ಮ ಆಡಳಿತ ಪಕ್ಷದ ಶಾಸಕರು ಮಾತನಾಡಬೇಕಾದರೆ ಹೇಳಿದರು. ಹಿಂದೆ ನಮ್ಮ ರಾಜ್ಯದಲ್ಲಿ ಐದು ಜಿಲ್ಲೆಗಳಲ್ಲಿ ವಿದರ್ಭ ಪ್ಯಾಕೇಜ್ ಘೋಷಣೆ ಮಾಡಿದ್ದರು. ಏಕೆಂದರೆ, ಆ ಜಿಲ್ಲೆಗಳಲ್ಲಿ ರೈತರು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದರು. ಆದರೆ ಈಗ ನಿಮ್ಮ ಸರ್ಕಾರ ಬಂದ ಮೇಲೆ, ಇಡೀ ರಾಜ್ಯಕ್ಕೆ ವಿದರ್ಭ ಪ್ಯಾಕೇಜ್ ಮಾಡಬೇಕಾದಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗುತ್ತಿದೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ತಕ್ಷಣ ಸಚಿವರಿಗೆ ಖಾತೆಗಳನ್ನು ನೀಡಿದ್ದರೆ, ಈ ಸಮಸ್ಯೆ ಉದ್ಭವಿಸುತ್ತಿರಲಿಲ್ಲ. ಹಾವೇರಿಯಲ್ಲಿ ರೈತನಾದ ಶಿವಲಿಂಗಪ್ಪ ಚೂರಿ ಸಾಯಬೇಕೆಂದು ಹೋಗಿದ್ದನೇ? ಅವನು ತನ್ನ ಬದುಕಿಗೆ ಕೃಷಿಯನ್ನು ಅವಲಂಬಿಸಿ, ತನ್ನ ಬದುಕಿನಲ್ಲಿ ಏನಾದರೂ ಆರ್ಥಿಕ ಮುನ್ನಡೆಯನ್ನು ಸಾಧಿಸಬೇಕು ಎಂಬ ಉದ್ದೇಶದಿಂದ ಹೋಗಿದ್ದನು. ಏಕಾಏಕಿ ಪೊಲೀಸ್‌ನವರು ಗೋಲಿಬಾರ್ ಮಾಡುವುದರ ಮುಖಾಂತರ ಅವನನ್ನು ಹತ್ಯೆಗೈದರು. ಇವತ್ತು ಮಾನ್ಯ ಯಡಿಯುರಪ್ಪನವರು ಅವರ ಮನೆಗೆ ಹೋದರು, ಕಣ್ಣೀರು ಹಾಕಿದರು, ಸಾಂತ್ವನ ಹೇಳಿದರು. ನೀವು ಪರಿಹಾರ ಕೊಟ್ಟ ಮಾತ್ರಕ್ಕೆ ಅದೇ ಶಿವಲಿಂಗಪ್ಪ ಎದ್ದು ಬರಲಿಕ್ಕೆ ಸಾಧ್ಯವೇ? ಇಲ್ಲವೇ ಅವನ ಮಕ್ಕಳು ಮತ್ತು ಹೆಂಡತಿಗೆ ಪೋಷಕರಾಗಿ ಇರಲಿಕ್ಕೆ ಸಾಧ್ಯವೇ? ರೈತರು ಈ ರಾಜ್ಯದಲ್ಲಿ ಯಾರೂ ಕೂಡ ಸರ್ಕಾರವನ್ನು ಬೇಡುವುದಿಲ್ಲ. ಸರ್ಕಾರದಿಂದ ಪರಿಹಾರವನ್ನು ಸಹ ಅವರು ಕೇಳುವುದಿಲ್ಲ. ಇವತ್ತು ಸಹಕಾರ ಸಂಘಗಳಲ್ಲಿ ಏನಾಗಿದೆ ಎಂದರೆ ಸುಸ್ತಿದಾರನಿಂದಲೂ ವಸೂಲು ಮಾಡುತ್ತಿದ್ದಾರೆ, ದೀರ್ಘಾವಧಿ ಸಾಲಕ್ಕೂ ವಸೂಲು ಮಾಡುತ್ತಿದ್ದಾರೆ. ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ನಾನು ಏಕೆ ಇದನ್ನೂ ಹೇಳುತ್ತಿದ್ದೇನೆ ಎಂದರೆ, ಈಗಾಗಲೇ ಬಿ.ಜೆ.ಪಿ. ಸರ್ಕಾರ ಬಂದು 20 ದಿವಸಗಳಾಗಿದೆ. Mandate ಅವರ ಪರವಾಗಿದೆ. ತಮ್ಮ ಸರ್ಕಾರ ರೈತರ ಪರವಾಗಿದೆ ಎಂದು ಜನ ಆಯ್ಕೆ ಮಾಡಿ, ರಾಜ್ಯದ ಅಧಿಕಾರದ ಚುಕ್ಕಾಣಿಯನ್ನು ಹಿಡಿಯಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇಂತಹ ಸಂದರ್ಭದಲ್ಲಿ ದಿವಸ ಪತ್ರಿಕೆಯನ್ನು ನೋಡುತ್ತಿದ್ದರೆ, ಒಂದು ಜಿಲ್ಲೆಯಲ್ಲಿ ಮೊದಲಾದರೆ ಒಬ್ಬೊಬ್ಬರು ಸಾಯುತ್ತಿದ್ದರು. ಇವತ್ತು 4–5 ಜನ ಸಾಯುತ್ತಿದ್ದಾರೆ. ಒಂದು ಕಡೆ ಮಂತ್ರಿಗಳು ಹೇಳಿಕೆ ಕೊಡುತ್ತಾರೆ. ಅವರು ರೈತರೇ ಅಲ್ಲವೆಂದು ಹೇಳುತ್ತಾರೆ. ಇದಕ್ಕೊಂದು ನಿಯಮಾವಳಿ ಇದೆ. ಆ ನಿಯಮಾವಳಿಯನ್ನು ನೋಡಿ ಆ ಹೇಳಿಕೆಯನ್ನು ಕೊಡಬೇಕೇ ಹೊರತು, ಅವನು ರೈತನಿದ್ದರೂ ಕೂಡ, ಅವನು ರೈತನಲ್ಲವೆಂದು ಹೇಳಬಾರದು. ಸರ್ಕಾರದಲ್ಲಿ ಏನಾಗಿದೆ ಎಂದರೆ, ಯಾರು ಸುಸ್ತಿದಾರ ಅಲ್ಲ, ಇಲ್ಲವೇ ಅವನು ಸುಸ್ತಿದಾರನಾಗಿದ್ದರೂ

ಕೂಡ ಹಣವನ್ನು ಕಟ್ಟಿದ್ದರೆ, ಆತ್ಮಹತ್ಯೆ ಮಾಡಿಕೊಂಡರೆ, ನಿಮ್ಮ ತಹಶೀಲ್ದಾರ್ ಆಗಲಿ ಅಥವಾ ಜಿಲ್ಲಾಧಿಕಾರಿಗಳಾಗಲಿ ಅವರಿಗೆ ಯಾವುದೇ ಪರಿಹಾರವನ್ನು ಕೊಡಲಿಕ್ಕೆ ಮುಂದಾಗುವುದಿಲ್ಲ. ಕಾನೂನಿನ ವಿಚಾರವನ್ನು ನಿಯಮಾವಳಿಯನ್ನು ಅವರು ಅಲ್ಲಿ ತರುತ್ತಾರೆ. ಮಾನ್ಯ ಸುರೇಶ್ ಕುಮಾರ್‌ರವರು ಕಾನೂನು ಮತ್ತು ಸಂಸದೀಯ ಸಚಿವರಾಗಿರುವುದರಿಂದ ಈ ಬಗ್ಗೆ ಕಾನೂನೊಂದನ್ನು ತರಲು ಯೋಚನೆ ಮಾಡಬೇಕು. ಮುಂದಿನ ದಿನಗಳಲ್ಲಿ ಪಕ್ಷಾತೀತವಾಗಿ ನಾವು ಅದಕ್ಕೆ ಬೆಂಬಲಿಸುತ್ತೇವೆ. ಇಲ್ಲಿರುವ 224 ಶಾಸಕರಲ್ಲಿ ಬಹುತೇಕರೆಲ್ಲರೂ ಕೃಷಿ ಕುಟುಂಬದಿಂದಲೇ ಬಂದವರಾಗಿದ್ದೇವೆ. ಎಲ್ಲೋ ಶೇಕಡ 15–20ರಷ್ಟು ಶಾಸಕರು ಬೇರೆ ವ್ಯಾಪಾರ ಮಾಡುವುದರಿಂದಲೋ, Industry ವಹಾಡುವುದರಿಂದಲೋ, ಉದ್ಯೋಗ ವಹಾಡುವುದರಿಂದಲೋ, ಉದ್ಯಮಿಯಾಗಿರುವುದರಿಂದಲೋ ಇಲ್ಲಿಗೆ ಬಂದಿರಬಹುದು. ನಾನೂ ಕೂಡ ನಾಲ್ಕು ಸಲ ವಿಧಾನಸಭೆಯನ್ನು ಪ್ರವೇಶ ಮಾಡಿದ್ದೇನೆ. ನಾನು ರೈತನ ಮಗನಾಗಿ ಬಂದಿದ್ದೇನೆಯೇ ಹೊರತು ಒಬ್ಬ ಉದ್ದಿಮೆದಾರನಾಗಿ ಬಂದಿಲ್ಲ. ರೈತನ ಬದುಕು, ಅವನ ಕಷ್ಟ ಏನು ಎಂಬುದು ನನಗೆ ಸಾಮಾಜಿಕವಾಗಿ ಗೊತ್ತಿದೆ. ಮಾನ್ಯ ನರೇಂದ್ರಬಾಬುರವರು ಆಗಲೇ ಮಾತನಾಡುತ್ತಾ 'ವ್ಯವಸಾಯ ಎಂದರೆ ಮನೆ ಮಂದಿಯೆಲ್ಲಾ ಸಾಯ' ಎಂದು ಹೇಳಿದರು. ಅದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಅವರು ಪಟ್ಟಣದಲ್ಲಿ ಹುಟ್ಟಿದ್ದರೂ ಕೂಡ, ರೈತರ ಬದುಕಿನ ಬಗ್ಗೆ ಅವರಿಗೆ ಚಿಂತನೆ ಇದೆ. ಅದರ ಎರಡರಷ್ಟು ಚಿಂತನೆ ನನಗಿದೆ. ಏಕೆಂದರೆ, ನನ್ನ ಬದುಕೂ ಕೂಡ ಅದೇ ಆಗಿದೆ. ಅದ್ದರಿಂದ ಮಾನ್ಯ ಸುರೇಶ್ ಕುಮಾರ್‌ರವರು ಮುಂದಿನ ಬಜೆಟ್ಟಿನಲ್ಲೋ ಅಥವಾ ಬೇರೆ ಯಾವುದಾದರೂ ಸಂದರ್ಭದಲ್ಲಿ ಬಿಲ್‌ವೊಂದನ್ನು ತರಬೇಕು. ಇವತ್ತು ನಾವು ಏನು ನಿಯಮಾವಳಿಯನ್ನು ಮಾಡಿದ್ದೇವೆ. ಅದರಲ್ಲಿ ಏನು ನ್ಯೂನತೆ ಇದೆ, ಆ ನ್ಯೂನತೆಯನ್ನು ಆಡಳಿತಾತ್ಮಕವಾಗಿ ಸರಿಪಡಿಸಲಿಕ್ಕೆ ಸಾಧ್ಯವೇ? ಎನ್ನುವುದನ್ನು ವಿಚಾರ ಮಾಡಿ, ಅದಕ್ಕಾಗಿ ಬಿಲ್‌ವೊಂದನ್ನು ಮಂಡಿಸಬೇಕೆಂದು ಕೋರುತ್ತೇನೆ. ಏಕೆಂದರೆ, ರೈತರು ಸಾಯುತ್ತಲೇ ಇರುತ್ತಾರೆ. ರೈತರಿಗೆ ಸಾಲ ಮನ್ನಾ ಮಾಡುತ್ತಲೇ ಇರುತ್ತೀರಿ. ಎಲ್ಲಿ ನಾವು ಅವರಿಗೆ ಸರಿಯಾಗಿ ಮಾರ್ಕೆಟ್ ನಲ್ಲಿ ಬೆಲೆ ಕೊಟ್ಟಿದ್ದೇವೆ? ಯಾವತ್ತು ನೀವು ಅವರಿಗೆ ಕೊಟ್ಟಿದ್ದೀರಿ? ಯಾವುದೇ ಸರ್ಕಾರವನ್ನು ನಾನು ಪ್ರಶ್ನೆ ಮಾಡುವುದಾದರೆ, ರಾಜ್ಯದಲ್ಲಾಗಲೀ, ಕೇಂದ್ರದಲ್ಲಾಗಲಿ ಯಾವತ್ತು ಅವನಿಗೆ ಮಾರ್ಕೆಟ್‌ನಲ್ಲಿ ಒಳ್ಳೆಯ ಬೆಲೆ ಕೊಟ್ಟಿದ್ದೀರಿ? ಈರುಳ್ಳಿ ನಾಲ್ಕಾಣೆಗೆ ಮಾರಿರುವುದುಂಟು. ಟೊಮೋಟೋ ಹಣ್ಣು 20 ಪೈಸೆಗೆ ಮಾರಿರುವುದುಂಟು. ಬಜಾರ್‌ನಲ್ಲಿ ಹಾಕದೆ, ರಸ್ತೆ

ಬದಿಯಲ್ಲಿ ಹಾಕಿರುವುದೂ ಉಂಟು. ಶಿರಾದಲ್ಲಿ ರೈತರು ಸರ್ಕಲ್ ಇನ್ಸ್‌ಪೆಕ್ಟರ್ ಒಬ್ಬರನ್ನು ಕೊಂದು ಹಾಕಿದರು. ರೈತರ ಕೈಗೆ ಸಿಟ್ಟು ಏನಾದರೂ ಬಂದರೆ, ಯಾವುದೇ ಸರ್ಕಾರವು ಉಳಿಯುವುದಿಲ್ಲ. ರೈತರ ಹೆಸರಿನಲ್ಲಿ ನೀವು ಬಂದಿರುವವರು. ರೈತರಿಗೆ ಏನಾದರೂ ನಾವು ಮಾಡುತ್ತೇವೆಂದು ನೀವು ಬಂದಿದ್ದೀರಿ. ನಿಮ್ಮ ಬಗ್ಗೆ ಜನಗಳಿಗೆ ಮಹತ್ವಾಕಾಂಕ್ಷೆ ಇದೆ. ಬಿ.ಜೆ.ಪಿಯವರಾದ ಮಾನ್ಯ ಯಡಿಯೂರಪ್ಪನವರು, ಕೇಸರಿ ಶಾಲನ್ನು ಬಿಟ್ಟು ಹಸಿರು ಶಾಲನ್ನು ಹೊದ್ದುಕೊಂಡು ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದ್ದಾರೆ. ಮಾನ್ಯ ಯಡಿಯೂರಪ್ಪನವರ ಕಾರ್ಯಕ್ರಮಗಳು ರೈತರ ಪರವಾಗಿವೆ ಎಂಬ ಉದ್ದೇಶವನ್ನಿಟ್ಟುಕೊಂಡು ಜನರು ನಿಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ. ಅದಕ್ಕೋಸ್ಕರ ನೀವ್ಯಾಕೆ ವಿರೋಧ ಪಕ್ಷದವರನ್ನು ಬಯ್ಯುತ್ತೀರಿ? ವಿರೋಧ ಪಕ್ಷದವರಿಗೆ ಅವರಿಗೆ ಹಚ್ಚಿ ಕೊಡುವುದೇ ಕೆಲಸವಲ್ಲ. ರೈತರ ಬಗ್ಗೆ ನಿಮಗೆಷ್ಟು ಕಳಕಳಿ ಇದೆಯೋ, ವಿರೋಧ ಪಕ್ಷದವರಿಗೂ ಅಷ್ಟೇ ಕಳಕಳಿ ಇದೆ. ಇವತ್ತು ಯಾವುದೇ ಒಬ್ಬ ಶಾಸಕ, ಯಾವುದೇ ಕ್ಷೇತ್ರದಲ್ಲಿ, ನಮ್ಮ ಮಂಜಣ್ಣನವರು ಹೇಳಿದರು, ಇವತ್ತು ಬೆಳಗಿನ ಜಾವ ಒಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರೆ, ಇವತ್ತು ಅವರು ವಿಧಾನಸಭೆಯಲ್ಲಿ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆಂದರೆ, ನಿಮ್ಮ ಅಧಿಕಾರಿ ನಾಳೆ ಬೆಳಿಗ್ಗೆ ವರದಿಯನ್ನು ಕೊಡಬೇಕು. ಕಂದಾಯ ಸಚಿವರು ವರದಿಯನ್ನು ಕೊಡಬೇಕು. ಆಗ ಅದಕ್ಕೆ ಪರಿಹಾರ ಸಿಗುತ್ತದೆಯೇ ಹೊರತು, ಮೂರು ತಿಂಗಳಿಗೋ, ನಾಲ್ಕು ತಿಂಗಳಿಗೋ, ಮೀನ-ಮೇಷ ಎಣಿಸಿ, ಅವನು ರೈತನಲ್ಲ, ಅವನು ಬೇರೆ ಯಾರೋ,, ಅವನು ಬಗರ್ ಹುಕುಂ ಮಾಡಿದ್ದಾನೆ, ಅವನು ಸಾಲವನ್ನೇ ತೆಗೆದುಕೊಂಡಿಲ್ಲ. ಎನ್ನುವುದಲ್ಲ. ಬ್ಯಾಂಕಿನಲ್ಲಿ ಸಾಲವನ್ನು ತೆಗೆದುಕೊಂಡೇ ಸಾಯಬೇಕೇ? ಆಗ ಮಾತ್ರವೇ ನೀವು ಪರಿಹಾರವನ್ನು ಕೊಡುತ್ತೀರಾ? ವಿದರ್ಭ ಪ್ಯಾಕೇಜ್ ಯೋಜನೆ ಈ ಹಿಂದೆ ಏನು ಮಾಡಿದ್ದಾರೆ, ಅದು ಸಮರ್ಪಕವಾಗಿ ನಡೆಯುತ್ತಿಲ್ಲ. ಮಾನ್ಯ ಅಧ್ಯಕ್ಷರು ಸರ್ಕಾರಕ್ಕೆ ಆದೇಶವನ್ನು ನೀಡಬೇಕು. ವಿದರ್ಭ ಪ್ಯಾಕೇಜ್‌ಅನ್ನು ಯಾವುದೇ ಒಂದು ಇಲಾಖೆಯಲ್ಲಿ ಜನ ಪ್ರತಿನಿಧಿಗಳನ್ನು ಬಿಟ್ಟು ಅಧಿಕಾರಿಗಳು ಜಾರಿಗೊಳಿಸಿದ್ದಾರೆಯೇ ಹೊರತು ಶಾಸಕರು ಯಾರೂ ಮಾಡಿಲ್ಲ. ಏಕೆ? ಅಧಿಕಾರಿಗಳಿಗಿಂತ ಶಾಸಕರಿಗೆ ರೈತರ ವಿಚಾರಗಳು, ರೈತರ ಬದುಕಿನ ಬಗ್ಗೆ ಗೊತ್ತಿರುತ್ತದೆ. ಆದ್ದರಿಂದ ಇವತ್ತು ಯಾವ ಪಕ್ಷದವರನ್ನು ದೂಷಣೆ ಮಾಡುವುದನ್ನು ಬಿಟ್ಟು ಎಲ್ಲರೂ ಒಂದಾಗಿ ರೈತರ ಬಗ್ಗೆ ಚಿಂತನೆ ಮಾಡಬೇಕೇ ಹೊರತು ಕಾಂಗ್ರೆಸ್‌ನವರು ಎತ್ತಿ ಕಟ್ಟಿದ್ದಾರೆ, ಜೆ.ಡಿ.(ಎಸ್) ನವರು ಎತ್ತಿ ಕಟ್ಟಿದ್ದಾರೆ...

ಅಧ್ಯಕ್ಷರು:– ಮಾನ್ಯ ಕೃಷ್ಣಮೂರ್ತಿಯವರೇ, ಬೇಗ ಮುಗಿಸಿ. ತಾವು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಹೆಚ್ಚು ಮಾತನಾಡುವಿರಂತೆ.

ಶ್ರೀ. ಕೆ.ಎಂ. ಕೃಷ್ಣಮೂರ್ತಿ:– ನಾನು ಇನ್ನು ಐದು ನಿಮಿಷವೂ ಮಾತನಾಡಿಲ್ಲ. ಇದು 'ರಾಮಯಣ'ದಲ್ಲಿ ಅರ್ಧ ನಾಟಕ ಆಡಿದಂತಾಗುತ್ತದೆ. ರಾವಣನನ್ನು ಕೊಂದದನ್ನು ನಾನು ಹೇಳುವಂತಿಲ್ಲ. ಸೀತೆ ತಂದಿದ್ದೂ ಹೇಳುವಂತಿಲ್ಲ. ಸೀತೆ ಮಾಯವಾಗಿರುವ ವಿಚಾರ ಪ್ರಸ್ತಾಪ ಮಾಡಿ, ಅಲ್ಲಿಗೇ ನಿಲ್ಲಿಸಬೇಕಾಗುತ್ತದೆ. ಎಲ್ಲವನ್ನು ಹೇಳದೆ 'ರಾಮಾಯಣ' ಪೂರ್ತಿಯಾಗುವುದಿಲ್ಲ. ನಾನು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸುವ ನಿರ್ಣಯದ ಮೇಲೂ ಮಾತನಾಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಮಾನ್ಯ ಸುರೇಶ್‌ಕುಮಾರ್ ಅವರು ಬಹಳ ಬುದ್ಧಿಜೀವಿಗಳು. ಅವರು ಈ ಕಡೆ ಕುಳಿತಾಗ ಬಹಳ ಉಪಕತೆಗಳನ್ನು ಹೇಳುತ್ತಿದ್ದರು, ಈಗ ಆ ಕಡೆ ಕುಳಿತುಕೊಂಡು ಎಷ್ಟು ಉಪಕತೆಗಳನ್ನು ಹೇಳುತ್ತಾರೆಂಬುದನ್ನು ನಾವು ನೋಡಬೇಕೆಂದಿದ್ದೇವೆ.

ಅಧ್ಯಕ್ಷರು: ಈಗ ನೀವು ಹೇಳಿರಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ತಾವು ಅರ್ಧಕ್ಕೆ ನಿಲ್ಲಿಸಿ ಎಂದು ಹೇಳಿದಿರಲ್ಲ. ಅದಕ್ಕೆ ನಾನು ರಾಮಾಯಣವನ್ನು ಪೂರ್ತಿಯಗಿ ಹೇಳಿದರೆ ಚೆನ್ನಾಗಿರುತ್ತದೆಂದು ಹೇಳಿದೆ. ಇಲ್ಲದಿದ್ದರೆ, ದಶರಥನ ಕಂದ ಸೀತೆಯನ್ನು ತಂದ, ರಾವಣನನ್ನು ಕೊಂದ ಎಂದು ಹೇಳಿಬಿಟ್ಟರೆ ಅದು ಅರ್ಥಪೂರ್ಣವಾಗುವುದಾದರೂ ಹೇಗೆ? ಅದು ಮಜ್ಜಿಗೆ ರಾಮಾಯಣವಾಗುತ್ತದೆ. ಆದುದರಿಂದ ತಮ್ಮ ಮಾತಿಗೆ ಗೌರವವನ್ನು ಕೊಟ್ಟು, ರೈತರ ಬಗ್ಗೆ ತಾವು ಕೂಡ ಕಳಕಳಿಯನ್ನು ವಹಿಸಬೇಕು. ತಾವು ಸಭಾಧ್ಯಕ್ಷರಾಗಿ ಈ ಸಭೆಯನ್ನು ಬಹಳ ವ್ಯವಸ್ಥಿತವಾಗಿ ನಡೆಸಲು ಅವಕಾಶ ಕೊಡಬೇಕು. ಶಾಸಕರು ನಿಯಮಾವಳಿಗಳನ್ನು ಮೀರದಂತೆ, ಅವರು ಏನಾದರೂ ಓದುವುದಿದ್ದರೆ ಅಥವಾ ಸಂಬಂಧಪಟ್ಟ ಕಾನೂನನ್ನು ಹೇಳುವುದಿದ್ದರೆ ತಮ್ಮ ಪರ್ಮಿಷನ್ ತೆಗೆದುಕೊಂಡು ಓದಲಿ. ರೈತರ ಬಗ್ಗೆ ಏನು ಮೆಸೇಜ್ ಹೋಗುತ್ತದೆ, ಯಾವುದೇ ಪಕ್ಷದವರಾಗಿರಲಿ, ನಾವು ಇಲ್ಲಿ ಶಾಸಕರೇ ಹೊರತು ಬಿಜೆಪಿ, ಜನತಾದಳ, ಕಾಂಗ್ರೆಸ್ ಎಂದಲ್ಲ. ಚುನಾವಣಾ ಪ್ರಚಾರದಲ್ಲಿ ನಮ್ಮ ನಮ್ಮ ಚುನಾವಣಾ ಪ್ರಣಾಳಿಕೆಯನ್ನು ಒಪ್ಪಿ ಜನ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ ಆದರೆ ಎಲ್ಲಾ

ಚುನಾವಣಾ ಪ್ರಣಾಳಿಕೆಗಳು ರೈತರ ಪರವಾಗಿದೆಯೇ ಹೊರತು ಬೇರೆಯವರ ಪರವಾಗಿಲ್ಲ. ಆದುದರಿಂದ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಇವತ್ತೇನು ಆತ್ಮಹತ್ಯೆಯಾಗುತ್ತಿದೆ, ಇದಕ್ಕೆ ಎರಡು ತಿಂಗಳಲ್ಲಿ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ಕೋರುತ್ತೇನೆ.

ಅಧ್ಯಕ್ಷರು: ಈಗ ಚರ್ಚೆಯನ್ನು ಮುಗಿಸೋಣ, ಊಟದ ವಿರಾಮದ ನಂತರ ಮುಖ್ಯಮಂತ್ರಿಗಳಿಂದ ಉತ್ತರ, ಈಗ ಸದನವನ್ನು ಮಧ್ಯಾಹ್ನ ಮೂರು ಗಂಟೆಗೆ ಸೇರುವಂತೆ ಮೂಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮಧ್ಯಾಹ್ನ 2 ಗಂಟೆ 2 ನಿಮಿಷಕ್ಕೆ ಮೂಂದೂಡಲಾಯಿತು)

(ಸದನವು ಮಧ್ಯಾಹ್ನ 3 ಗಂಟೆ 13 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಸಭಾಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಉಪಸ್ಥಿತರಿದ್ದರು)

ಅಧ್ಯಕ್ಷರು:– ಈಗ ಸರ್ಕಾರದಿಂದ ಉತ್ತರ

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ನಿಯಮ 69 ರಡಿಯಲ್ಲಿ ನಡೆದಂಥ ಚರ್ಚೆಗೆ ನಾನು ಉತ್ತರ ಕೊಡುವುದಕ್ಕೆ ಮುಂಚೆ ಸನ್ಮಾನ್ಯ ಸಂಬಂಧಪಟ್ಟ ಖಾತೆ ಸಚಿವರು ಒಂದೈದತ್ತು ನಿಮಿಷಗಳ ಕಾಲ ಉತ್ತರವನ್ನು ಕೊಡುತ್ತಾರೆ. ಅವರ ನಂತರ ನಾನು ಮಾತನಾಡುವುದು ಸೂಕ್ತವೆನಿಸಬಹುದು.

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು):– ಮಾನ್ಯ ಅಧ್ಯಕ್ಷರೆ, ಮುಂಗಾರು ಮಳೆ ಆರಂಭವಾಗುವುದಕ್ಕಿಂತ ಮುಂಚೆ ರಸಗೊಬ್ಬರಗಳ ದಾಸ್ತಾನು ಹಿಂದಿನ ಸರ್ಕಾರವಿದ್ದಾಗ ಅಂದರೆ 01.04.2007 ರಲ್ಲಿ ಸಾಕಷ್ಟು ಸ್ಟಾಕ್ ಇತ್ತು. ಆದರೆ 01.04.2008ರಲ್ಲಿ ಯಾವುದೇ ರೀತಿಯ ರಾಸಾಯನಿಕ ಗೊಬ್ಬರಗಳ ಸ್ಟಾಕ್ ಹಿಂದೆ ಇದ್ದಷ್ಟು ಇರಲಿಲ್ಲವೆಂಬುದನ್ನು ನೋಡಿರತಕ್ಕಂಥದ್ದಾಗಿದೆ. ಇದರಲ್ಲಿ ಹಿಂದಿನ ವರ್ಷ ಡಿ.ಎ.ಪಿ 31 ಸಾವಿರ ಟನ್, ಆದರೆ ಈ ವರ್ಷ 3, 782 ಟನ್ ಇದೆ. ಅದೇ ರೀತಿ ಕಾಂಪ್ಲೆಕ್ಸ್ ಗೊಬ್ಬರ ಹಿಂದಿನ ವರ್ಷ 78131 ಟನ್ ಇದ್ದರೆ ಈ ವರ್ಷ 9,031 ಟನ್ ಮಾತ್ರ. ಈ ರೀತಿ ರಾಸಾಯನಿಕ ಗೊಬ್ಬರಗಳನ್ನು ಮೊದಲಿನಿಂದಲೂ ನಮ್ಮ ಅಧಿಕಾರಿಗಳೇನಿದ್ದಾರೆ, ಸರ್ಕಾರವೇನಿರುತ್ತದೆ. ಅದು ಸ್ಟಾಕ್ ಮಾಡತಕ್ಕಂಥ ಒಂದು ಕೆಲಸವನ್ನು ಮುಂಗಾರು ಮಳೆ ಪ್ರಾರಂಭವಾಗುವುದಕ್ಕಿಂತ ಮುಂಚೆ ಮಾಡುತ್ತಿತ್ತು. ಈ ವರ್ಷ ಆ ಕೆಲಸವನ್ನು ಸಾಕಷ್ಟು ಮಾಡಿಲ್ಲ. ಇದರ ಜೊತೆಗೆ

ಸಾಕಷ್ಟು ಮಾಹಿತಿ ನನಗೆ ಗೊತ್ತಿರುವ ಹಾಗೆ ಮಾಧ್ಯಮಗಳ ಮುಖಾಂತರ ಫಾಸ್ಪಾರಿಕ್ ಆ್ಯಸಿಡ್, ನ್ಯಾಪ್ತಾ, ಪೆಟ್ರೋಲಿಯಂ ಬೆಲೆಗಳು ಜಾಸ್ತಿಯಾಗುತ್ತವೆ ಎನ್ನತಕ್ಕಂಥ ವಿಷಯ ಪತ್ರಿಕೆಗಳಲ್ಲಿ ಮತ್ತು ಇತರ ಮಾಧ್ಯಮಗಳಲ್ಲಿ ಪದೇ ಪದೇ ಬರತಕ್ಕಂಥವುಗಳೂ ಕೂಡ ನಮ್ಮ ರೈತರಿಗೆ ಒಂದು ರೀತಿ ಪ್ರಚೋದನೆ ಮಾಡಿದಂತಾಯಿತು. ಮುಂದೆ ಗೊಬ್ಬರದ ಅವಶ್ಯಕತೆ ಇದ್ದಾಗ ಸಿಗದೇ ಹೋಗಬಹುದು ಅಥವಾ ತೊಂದರೆಯಾಗಬಹುದು ಎನ್ನವ ಮನೋಭಾವನೆಯಿಂದ ನಮ್ಮ ಜನರು ರಾಸಾಯನಿಕ ಗೊಬ್ಬರವನ್ನು ಮಳೆ ಬರುವುದಕ್ಕಿಂತ ಮುಂಚೆಯೇ ಕೆಲವು ಭಾಗಗಳಲ್ಲಿ ಈ ರಾಸಾಯನಿಕ ಗೊಬ್ಬರಕ್ಕಾಗಿ ರೈತರ ಹೋರಾಟ ನಡೆದಿರತಕ್ಕಂಥದ್ದು ಆಗಿದೆ. ಇನ್ನೊಂದು ರೀತಿಯಲ್ಲಿ ಈ ವರ್ಷ ಮುಂಗಾರು ಮಳೆ ಹಿಂದಿನ ವರ್ಷಗಳಿಗಿಂತ ಸಾಕಷ್ಟು ಮುಂಚೆಯೇ ಬಂದಿರತಕ್ಕಂಥದ್ದೂ ಕೂಡ ತಮ್ಮ ಗಮನಕ್ಕೂ ಬಂದಿರತಕ್ಕಂಥದ್ದಾಗಿದೆ. ಶಿವಮೊಗ್ಗ, ಧಾರವಾಡ, ಹಾವೇರಿ, ದಾವಣಗೆರೆ ಈ ಭಾಗದಲ್ಲಿ ಮುಂಗಾರು ಮಳೆ ಬೇಗ ಬಂದಿದೆ. ಹೀಗಾಗಿ ರಾಸಾಯನಿಕ ಗೊಬ್ಬರ ಕಡಿಮೆ ಇದ್ದಂಥ ಸಂದರ್ಭದಲ್ಲಿಯೂ ಇರುವುದನ್ನೂ ಸಹ ಕೊಡುವುದಕ್ಕೆ ಬಿಡದಂತೆ ರೈತರ ಹೋರಾಟ ನಡೆದಿರುವುದು, ಇದೆಲ್ಲಾ ನನ್ನ ಗಮನಕ್ಕೆ ಬಂದಂಥವುಗಳು. ಆ ರೀತಿಯಲ್ಲಿ ಇರತಕ್ಕಂಥ ಸ್ಟಾಕ್‌ನ್ನೂ ಸಹ ನಾವು ಆದಷ್ಟು ಕೊಡಬೇಕೆಂದಿದ್ದರೂ ಅದನ್ನು ಕೊಡುವುದಕ್ಕೂ ಸಹ ಬಿಡದೇ ಇರತಕ್ಕಂಥದ್ದು ನಮ್ಮ ದಾವಣಗೆರೆ ಭಾಗದಲ್ಲಿ ನಡೆದಿದೆ. ಈ ರೀತಿಯ ರೈತರ ಹೋರಾಟ ನಡೆದಿದೆ. ಅಂದರೆ ಇದು ಉದ್ದೇಶಪೂರ್ವಕವಾಗಿ ಮಾಡಿದಂಥ ಹೋರಾಟವಲ್ಲವೆಂದು ನನಗನ್ನಿಸುತ್ತದೆ. ಈ ರೀತಿಯ ವ್ಯವಸ್ಥಿತವಾದ ಒಂದು ರೈತರ ನಿಲುವು ನಮಗೆ ಕಾಡುತ್ತಿತ್ತು. ಆದರೆ ಅವರು ನಿಜವಾದ ರೈತರ ಪರವಾಗಿ ಕೆಲಸ ಮಾಡತಕ್ಕಂಥವರಲ್ಲವೆಂದು ನನಗನ್ನಿಸುತ್ತದೆ. ಈ ರೀತಿಯ ಒಂದು ವ್ಯವಸ್ಥೆಯನ್ನು ಸಾಕಷ್ಟು ಮಾಡುತ್ತಿದ್ದರು. ಹಿಂದೆ ಇದ್ದಂಥ ರಾಜ್ಯಪಾಲರ ಆಳ್ವಿಕೆಯಲ್ಲಿ ಎಷ್ಟು ರಸಗೊಬ್ಬರ ನಮ್ಮ ರಾಜ್ಯಕ್ಕೆ ಅವಶ್ಯಕತೆ ಇದೆಯೋ ಅಷ್ಟು ರಾಸಾಯನಿಕ ಗೊಬ್ಬರಗಳನ್ನು ತಂದು ಸ್ಟಾಕ್ ಮಾಡಬೇಕಾಗಿತ್ತು. ಆದರೆ ಎಲ್ಲ ಹಿಂದಿನ ವರ್ಷಗಳಲ್ಲಿ ರಾಸಾಯನಿಕ ಗೊಬ್ಬರಗಳ ಸ್ಟಾಕ್ ಏನಿತ್ತೋ ಅದೇ ರೀತಿಯಲ್ಲಿ ಈ ವರ್ಷವೂ ಕೂಡ ಸರಿಯಾಗಿ ಸ್ಟಾಕ್ ಇಡುವಂಥದ್ದು ಆಗಿಲ್ಲ. ಇದರ ಜೊತೆಗೆ ಮಂಗಳೂರು ಫರ್ಟಿಲೈಸರ್ಸ್ ಕೆಮಿಕಲ್ಸ್ ನವರಿಂದ 16.01.2008 ರಂದು ಒಂದು ಪತ್ರ ಬಂದಿದೆ. ಏನೇನು ತೊಂದರೆಯಾಗುತ್ತದೆ, ಯಾವ ರೀತಿ ಕಷ್ಟವಾಗುತ್ತದೆ, ಫಾಸ್ಪಾರಿಕ್ ಆ್ಯಸಿಡ್‌ನ್ ಕೊರತೆ ಇದೆ, ಅಲ್ಲದೆ ಅದಕ್ಕೆ ಸರಿಯಾದಂಥ ಸಬ್ಸಿಡಿ ನಮಗೆ ಕೊಡುತ್ತಿಲ್ಲ. ಎನ್ನತಕ್ಕಂಥ ಪತ್ರವನ್ನು ಬರೆದಿದ್ದಾರೆ. ಈ ರೀತಿಯ ಸಾಕಷ್ಟು ಸಮಸ್ಯೆಗಳು

ಇದ್ದರೂ ಕೂಡ ನಮ್ಮ ಸರ್ಕಾರ ಇದರ ಬಗ್ಗೆ ಜಾಗ್ರತೆ ವಹಿಸಿ ಎಷ್ಟು ಅವಶ್ಯಕತೆ ಇದೆಯೋ ಮುಂಗಾರು ಬೆಳೆಗೆ ಅದೇ ರೀತಿ ನನಗೆ ಗೊತ್ತಿರುವಂತೆ ಬೇಸಿಗೆ ಬೆಳೆಗೂ ಕೂಡ ರಾಸಾಯನಿಕ ಗೊಬ್ಬರಗಳನ್ನು ನಮ್ಮ ಭಾಗದಲ್ಲಿ ಹಾಕುತ್ತಾರೆ. ನಮ್ಮ ಭಾಗದಲ್ಲಿ ನೀರಾವರಿ ಪ್ರದೇಶ ಕೂಡ ಇದೆ. ತುಂಗಭದ್ರಾ ಅಚ್ಚುಕಟ್ಟಿನಲ್ಲಿ ಗೊಬ್ಬರದ ಕೊರತೆ ಸಾಕಷ್ಟು ಇದ್ದರೂ ಕೂಡ ಬಂದಂಥ ಗೊಬ್ಬರವೂ ಕೂಡ ಎರಡ್ಮೂರು ದಿವಸಗಳಲ್ಲಿಯೇ ಖಾಲಿಯಾಗಿ ಹೋಯಿತು. ಇದೇ ತರಹ ಈ ಮೊದಲು ಸಾವಿರಾರು ಟನ್ ಗೊಬ್ಬರ ನಮ್ಮ ಭಾಗದಲ್ಲಿ ಸ್ಟಾಕ್ ಇರುತ್ತಿತ್ತು. ಆದರೆ ಈ ವರ್ಷ ಕೊರತೆ ಇತ್ತು. ಅದರಲ್ಲಿಯೂ ಕಾಂಪ್ಲೆಕ್ಸ್ ಗೊಬ್ಬರಗಳು ಮಾತ್ರ ಕೊರತೆ ಇರುವುದು. ಯೂರಿಯಾ ಸಾಕಷ್ಟು ದಾಸ್ತಾನಿದ್ದರೂ ಕೂಡ ಅದನ್ನು ನಾಟಿ ಹಾಕುವುದಕ್ಕೆ ಪೂರ್ವದಲ್ಲಿ ಅದನ್ನು ಉಪಯೋಗಿಸುವುದಕ್ಕೆ ಬರುವುದಿಲ್ಲ. ಅದನ್ನು ಮೇಲುಗೊಬ್ಬರವಾಗಿ ಮಾತ್ರ ಉಪಯೋಗಿಸುವುದು. ಈ ರೀತಿಯಲ್ಲಿ ಗೊಬ್ಬರದ ಕೊರತೆ ಸಾಕಷ್ಟು ಕಂಡುಬಂದರೂ ಕೂಡ ಹಿಂದೆ ನಮ್ಮ ರಾಜ್ಯಪಾಲರ ಆಳ್ವಿಕೆಯಲ್ಲಿ ಕೆಲಸ ಮಾಡಿ ಗೊಬ್ಬರವನ್ನು ಸ್ಟಾಕ್ ಮಾಡಬಹುದಾಗಿತ್ತು. ಅದೇ ರೀತಿ ನಮ್ಮ ರಾಜ್ಯದಲ್ಲಿ ಮತ್ತು ವಿರೋಧ ಪಕ್ಷದ ಎಲ್ಲಾ ನಾಯಕರುಗಳು ಏನು ಮಾತನಾಡುತ್ತಿದ್ದಾರೆ, ಅವರುಗಳು ಹಿಂದೆಯೇ ಮುಂಜಾಗ್ರತೆಯಾಗಿ ಅವರಿಗೆ ಹೇಳಿ ಸ್ಟಾಕ್ ಮಾಡಿ ಎಂದು ಅವರಿಗೆ ತಿಳಿಸಬಹುದಾಗಿತ್ತು ಅಥವಾ ಕೇಂದ್ರ ಸರ್ಕಾರಕ್ಕೂ ಸಹ ಅವರು ಪತ್ರ ಬರೆದು ಈ ಬಗ್ಗೆ ತಿಳಿಸಬಹುದಾಗಿತ್ತು. ಏಕೆಂದರೆ ಕೇಂದ್ರದಲ್ಲಿ ಅವರದೇ ಆದಂಥ ರೀತಿಯಲ್ಲಿ ಯು.ಪಿ.ಎ. ಸರ್ಕಾರ ಇರುವುದರಿಂದ ಸಾಕಷ್ಟು ರಾಸಾಯನಿಕ ಗೊಬ್ಬರವನ್ನು ಕಳುಹಿಸಿ ಎಂದು ಹೇಳುವುದರ ಬಗ್ಗೆ ವಿರೋಧ ಪಕ್ಷದವರು ಚಿಂತನೆಯನ್ನು ಮಾಡಬಹುದಾಗಿತ್ತು. ಆ ಚಿಂತನೆಯನ್ನು ಅವರೂ ಸಹ ಅವತ್ತು ಮಾಡಲಿಲ್ಲ. ಅಂದರೆ ಇದರ ಉದ್ದೇಶ ನನ್ನ ಆನಿಸಿಕೆ, ಮುಂದೆ ಭಾರತೀಯ ಜನತಾ ಪಾರ್ಟಿಯೇ ಈ ರಾಜ್ಯದಲ್ಲಿ ಸರ್ಕಾರ ರಚಿಸುತ್ತದೆ ಎನ್ನುವ ಮನೋಭಾವನೆ ಅವರಲ್ಲಿ ಇತ್ತೇನೋ ಎಂಬುದು ನನ್ನ ಅನಿಸಿಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಇಂಥ ಉಢಾಫೆ ಮಾತುಗಳನ್ನು ಹೇಳಬೇಡಿ. ಇಲ್ಲಿ ಏನು ಹೇಳಬೇಕಾಗಿದೆಯೋ ಅದರ ಬಗ್ಗೆ ಹೇಳಿ. ಅದನ್ನು ಬಿಟ್ಟು ಇಂಥ ಉಢಾಫೆ ಮಾತುಗಳನ್ನು ಹೇಳಿಕೊಂಡು ಕಾಲ ಕಳೆಯಬೇಡಿ. ಯಾರಾದರೂ ಹಿಂದೆ ಈ ರೀತಿ ಮಾಡಿದ್ದಾರೇನು?

ಶ್ರೀ ಟಿ.ಬಿ. ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಬೇರೆ ಗೊಬ್ಬರಗಳ ಓಪನಿಂಗ್ ಬ್ಯಾಲೆನ್ಸ್ ಕೂಡ ಸಾಕಷ್ಟು ಇದೆ. ಕಾಂಪ್ಲೆಕ್ಸ್ ಗೊಬ್ಬರ ಕೊರತೆ ಇದೆ. ಹೀಗಿರುವಾಗ ಈ

ರೀತಿಯಲ್ಲಿ ನೀವು ಹೇಳುವುದು ಸರಿಯಲ್ಲ.

ಶ್ರೀ ಎಸ್.ಎ. ರವೀಂದ್ರನಾಥ್ :– ಮಾನ್ಯ ಅಧ್ಯಕ್ಷರೆ, ಸುಮ್ಮನೆ ಉಢಾಫೆ ಮಾತನಾಡುವುದಕ್ಕೆ ನಾನು ಇಲ್ಲಿ ನಿಂತಿಲ್ಲ. ನಿಮಗೆಲ್ಲರಿಗೂ ತಿಳಿದಂಥೆ ನಾನು ಮಾತನಾಡುವುದೇ ಕಡಿಮೆ. ಆದರೆ ನಾನು ಅಪರೂಪಕ್ಕೆ ಮಾತನಾಡತಕ್ಕಂಥವನು. ಹೀಗಿರುವಾಗ ಉಡಾಫೆ ಮಾತನಾಡತಕ್ಕಂಥ ಅವಶ್ಯಕತೆ ನನಗಿಲ್ಲ. ಇವತ್ತು ತಾಂತ್ರಿಕವಾಗಿ ಏನಿದೆಯೋ ಅದನ್ನು ನಾನು ತಿಳಿಸುತ್ತಿದ್ದೇನೆ. ನಿಮ್ಮ ಅನಿಸಿಕೆ ಹಾಗಿದ್ದರೆ ನಾನೇನು ಮಾಡುವುದಕ್ಕೆ ಆಗುವುದಿಲ್ಲ. ಹತ್ತಾರು ವರ್ಷಗಳಿಂದ ಆಗದೇ ಇರುವಂತಹ ಕೊರತೆ ಈ ವರ್ಷ ಕೊರತೆ ಆಗಿರುವುದು ಏಕೆ? ಈ ರೀತಿ ಆಗಿದೆ ಎನ್ನುವ ವಿಷಯವನ್ನು ನಾನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಬಯಸುತ್ತೇನೆ. ಇದೇ ರೀತಿ ಇವತ್ತು ರಾಜ್ಯದಲ್ಲಿ ರಾಸಾಯನಿಕ ಗೊಬ್ಬರಗಳ ಕೊರತೆ ಎನ್ನುವ ವಿಚಾರ ಜನವರಿಯಿಂದಲೇ ಇರುವುದನ್ನು ನೋಡಿಕೊಂಡು, ನಮ್ಮ ರಾಜ್ಯಕ್ಕೆ ತೊಂದರೆಯಾಗುತ್ತಿದೆ, ಇಷ್ಟು ಅವಶ್ಯಕತೆ ಇದೆ ಎಂದು ಕೇಂದ್ರ ಸರ್ಕಾರಕ್ಕೆ ತಿಳಿಸ ಬಹುದಾಗಿತ್ತು ಎಂದು ನಾನು ತಮ್ಮ ಮುಖಾಂತರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈ ವಿಚಾರದ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರುಗಳು ಏನು ಮಾತನಾಡಿದ್ದಾರೆ, ಬೀಜಕ್ಕೆ ನಾವು ಹಿಂದಿನ ವರ್ಷ 75% ಸಬ್ಸಿಡಿ ಕೊಟ್ಟಿದ್ದೆವು, ಈ ವರ್ಷ 50% ಕೊಟ್ಟಿದ್ದಾರೆ ಎಂದು ಹೇಳುವಂತಹ ಸಂದರ್ಭದಲ್ಲಿ, ನನಗೆ ಗೊತ್ತಿದ್ದ ಹಾಗೆ ಹಿಂದಿನ ವರ್ಷ 75% ಕೊಟ್ಟಿಂತಹ ಸಂದರ್ಭದಲ್ಲಿ ನಾವೂ ಸಹ ಅಲ್ಲಿ ಇದ್ದು, 75% ಕೋಡಿ ಎಂದು ಹೇಳಿದಂತಹವರು. ಆದರೆ ಈ ವರ್ಷ ಅದನ್ನು ಒಂದು ಹೆಕ್ಟೇರ್‌ಗೆ 50% ಕೊಡಿ ಎಂದು ಹಿಂದೆ ಇದ್ದಂತಹ ಮಾನ್ಯ ರಾಜ್ಯಪಾಲರ ಆಡಳಿತದಲ್ಲಿ ಮಾಡಿದ್ದನ್ನು, ನಮ್ಮ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಮೇಲೆ ಕೆಲವೇ ಗಂಟೆಗಳಲ್ಲಿ ಅದರ ಬಗ್ಗೆ ನನಗೆ ಆದೇಶವನ್ನು ಕೊಡಿಸಿದರು. 5 ಎಕರೆಗೆ ಬೀಜಕ್ಕೆ 50% ಸಬ್ಸಿಡಿ ಕೊಡಿ ಎಂದು ಹೇಳಿ ಮಾಡುವಂತಹ ಕೆಲಸವಾಗಿದೆ. ಈ ರೀತಿ ಸಾಕಷ್ಟು ಚಿಂತನೆಯನ್ನು ...

ಶ್ರೀ ಬಂಡೆಪ್ಪ ಕಾಶಂಪೂರ್: – ಮಾನ್ಯ ಅಧ್ಯಕ್ಷರೆ, ಹಿಂದೆ 2 ಹೆಕ್ಟೇರ್ ಇತ್ತು, ಒಂದು ಹೆಕ್ಟೇರ್ ಇರಲಿಲ್ಲ. ಮಾನ್ಯ ರಾಜ್ಯಪಾಲರ ಆಡಳಿತದಲ್ಲಿ ಒಂದು ಹೆಕ್ಟೇರ್ ...

(ಗೊಂದಲ)

ಶ್ರೀ ಎಸ್.ಎ. ರವಿಂದ್ರನಾಥ್:– ನಾವು ಬಂದಮೇಲೆ ಇದನ್ನು ಒಂದು ಹೆಕ್ಟೇರ್ ಇದ್ದುದ್ದನ್ನು 2 ಹೆಕ್ಟೇರ್‌ಗೆ ಮಾಡಿದ್ದೇವೆ.

ಶ್ರೀ ಬಂಡೆಪ್ಪ ಕಾಶಂಪೂರ್: – ಬಹಳ ಸಂತೋಷ 2 ಹೆಕ್ಟೇರ್ ಮಾಡಿದ್ದೀರಿ. ಅದನ್ನು 75% ಮಾಡಿಬಿಟ್ಟರೆ ಮುಗಿದು ಹೋಯಿತಲ್ಲ.

ಶ್ರೀ ಎಸ್.ಎ. ರವಿಂದ್ರನಾಥ್: – ನೀವು ಆಮೇಲೆ ಮಾತನಾಡಿ, ಬೇಡ ಎಂದು ಹೇಳುತ್ತೇವಾ? ಆಮೇಲೆ ನೀವೆಲ್ಲಾ ಮಾತನಾಡಬಹದಲ್ಲ.

ಶ್ರೀ ಬಂಡೆಪ್ಪ ಕಾಶಂಪೂರ್: – Confusion ಮಾಡಬೇಡಿ.

ಶ್ರೀ ಹೆಚ್.ಡಿ. ರೇವಣ್ಣ: – ಸದನವನ್ನು ತಪ್ಪು ದಾರಿಗೆ ಎಳೆಯುವುದು ಬೇಡ.

ಶ್ರೀ ಎಸ್.ಎ. ರವಿಂದ್ರನಾಥ್: – ನಾವು ತಪ್ಪು ದಾರಿಗೆ ಎಳೆಯುವಂತಹ ಅವಶ್ಯಕತೆ ಇಲ್ಲ. ಇರುವಂತಹ ವಿಚಾರವನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: – ಹಿಂದೆ ನಮ್ಮ ಕಾಲದಲ್ಲಿ ಮಾಡಿದ್ದನ್ನು ತೆಗೆದು ಹಾಕಿದರು ಎಂದು ಹೇಳುತ್ತಾರೆ....

ಶ್ರೀ ಬಂಡೆಪ್ಪ ಕಾಶಂಪೂರ್: – ಹಿಂದೆ ಮಾನ್ಯ ಉಪ ಮುಖ್ಯಮಂತ್ರಿಗಳು ಇದ್ದಾಗಲೂ 2 ಹೆಕ್ಟೇರ್ ಇತ್ತು. ಹಾಗಾಗಿ ಈಗ 50% ಇರುವುದನ್ನು 75% ಮಾಡಿ ಎಂದು ಹೇಳುತ್ತಿರುವುದು.

ಶ್ರೀ ಎಸ್.ಎ. ರವಿಂದ್ರನಾಥ್ : –ಮಾನ್ಯ ರಾಜ್ಯಪಾಲರ ಆಳ್ವಿಕೆಯಲ್ಲಿ ಒಂದು ಹೆಕ್ಟೇರ್ ಇತ್ತು. ಅದಕ್ಕಿಂತ ಮೊದಲು ನಾವು ನೀವು ಸೇರಿ ಇದ್ದಾಗ ತಾನೆ 75% ಇದ್ದದ್ದು. ಸ್ವಲ್ಪ ಸುಮ್ಮನೆ ಕುಳಿತುಕೊಳ್ಳಿ. ಏಕೆ ಪದೇಪದೇ ಎದ್ದೇಳುತ್ತೀರಿ? ನಾನು ಉತ್ತರ ಕೊಡುವುದು ಬೇಡವೇ? ನಾನು ಯಾವಾಗಲಾದರೂ ನೀವು ಮಾತನಾಡುವಾಗ ಎದ್ದು ನಿಂತುಕೊಂಡು ಮಾತನಾಡಿದ್ದೀನಾ? ಸ್ವಲ್ಪ ಸಮಾಧಾನವಾಗಿ ಇರಿ ಏಕೆ? ನಾನು ಮಾತನಾಡಿದ ಮೇಲೆ ನೀವು ಎಲ್ಲಾ ಹೇಳುವಿರಂತೆ. ಹೀಗೆ ಸರ್ಕಾರ ಎಲ್ಲಾ ರೀತಿಯಲ್ಲೂ ಸಹ ಕೊಡುವಂತಹ ಕೆಲಸವನ್ನು ಮಾಡಿದೆ. ಇವತ್ತು ನಾವು ಮಾನ್ಯ ಮುಖ್ಯಮಂತ್ರಿಗಳ ಜೊತೆ ಹತ್ತಾರು ಜನ ಕ್ಯಾಬಿನೇಟ್ ಸಚಿವರು ಪ್ರಧಾನ ಮಂತ್ರಿಗಳನ್ನು ಹಾಗೂ ರಾಸಾಯನಿಕ ಗೊಬ್ಬರದ ಮಂತ್ರಿಗಳನ್ನು ಕಂಡು ಬಂದಾಗ ಮೇಲೆ, ನಾವು ಅಧಿಕಾರಕ್ಕೆ ಬಂದು ಕೇವಲ 25 ದಿವಸವಾಗಿದೆ. ಆ 25 ದಿವಸದೊಳಗೆ ನಾವು ಇಷ್ಟು ಒತ್ತಾಯ ಮಾಡಿದ್ದು, ನಮಗೆ DAP 1,20,000 ಟನ್ ಕೊಡುತ್ತೇವೆಂದು ಹೇಳಿದ್ದು, ಇವತ್ತು 80,000 ಟನ್‌ನಷ್ಟು ಕಳುಹಿಸಿಕೊಟ್ಟಿದ್ದಾರೆ. ಅದೇ ರೀತಿ complex ಗೊಬ್ಬರ ಕೂಡ... ನಾವು ಒತ್ತಾಯ ಮಾಡದಿದ್ದರೆ ಇದೂ ಸಹ ಬರುತ್ತಿರಲಿಲ್ಲವೆನ್ನುವುದು ನನ್ನ ಭಾವನೆ. ಅದಲ್ಲದೆ ನಮ್ಮ

ಮಾನ್ಯ ಮುಖ್ಯಮಂತ್ರಿಗಳು ಮತ್ತೊಮ್ಮೆ ಮಾನ್ಯ ಪ್ರಧಾನ ಮಂತ್ರಿಗಳಿಗೆ ಒಂದು ಪತ್ರವನ್ನು 16ನೇ ತಾರೀಖು ಬರೆದಿದ್ದಾರೆ. ಆ ಪತ್ರದಲ್ಲಿ ನಮಗೆ ರಾಸಾಯನಿಕ ಗೊಬ್ಬರದ ಕೊರತೆ ಇದೆ. ರಾಜ್ಯದಲ್ಲಿ ರೈತರಿಂದ ಸಾಕಷ್ಟು ಗಲಾಟೆ ನಡೆಯುತ್ತಿದೆ ಎಂದು ಕೇಂದ್ರ ಸರ್ಕಾರದ ಮಾನ್ಯ ಪ್ರಧಾನ ಮಂತ್ರಿಗಳ ಗಮನಕ್ಕೆ ತೆಗದುಕೊಂಡು ಬಂದಿದ್ದೇವೆ. ಈ ರೀತಿಯಾಗಿ ನಮ್ಮ ಸರ್ಕಾರದಿಂದ ಏನೇನು ಒತ್ತಡ ಹಾಕಬೇಕೋ ಹಾಕಿ ಎಲ್ಲಾ ಕೆಲಸವನ್ನು ಮಾಡಿದ್ದೇವೆ. ನನ್ನ ಕಳಕಳಿ ಏನೆಂದರೆ ರೈತರ ಬಗ್ಗೆ ನಾನು ಹೇಳುವುದೇನೆಂದರೆ, ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ಏನೂ ಲಾಭವಾಗುವುದಿಲ್ಲ. ನಮ್ಮ ಕೊನೇ ಹನಿ ರಕ್ತ ಇರುವವರೆಗೂ ಹೋರಾಟ ಮಾಡಿ ಜೀವದಲ್ಲಿ ಕೆಲಸ ಮಾಡಿ ಋಣ ತೀರಿಸಬೇಕೆ ಹೊರತು, ಯಾವುದೇ ಕಾರಣಕ್ಕೂ ಕೂಡ ನಾವು ಜೀವನವನ್ನು ಕಳೆದುಕೊಳ್ಳುವಂತಹ ಪ್ರಯತ್ನವನ್ನು ಮಾಡಬಾರದು ಎಂದು ತಮ್ಮ ಮುಖಾಂತರ ರೈತರಲ್ಲಿ ಮನವಿ ಮಾಡುತ್ತಾ, ನನಗೆ ಇವತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ. ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : – ಮಾನ್ಯ ಅಧ್ಯಕ್ಷರೆ, clarification ಕೇಳಬಹುದಾ?

ಅಧ್ಯಕ್ಷರು : – ಒಂದು minute ತಡೆಯಿರಿ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲಿ.

ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : – Agriculture Minister ಹೇಳಿರುವುದಕ್ಕೆ...

ಅಧ್ಯಕ್ಷರು : – ಉತ್ತರ ಎಲ್ಲಾ ಮುಗಿಯಲಿ, ಎಲ್ಲಾ ಸೇರಿಸಿ ಕೇಳುವಿರಂತೆ. ಶರಣ ಪ್ರಕಾಶ್‌ರವರೇ, ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ನಂತರ ಎಲ್ಲಾ ಸೇರಿ clarification ಕೇಳುವಿರಂತೆ. ನನ್ನ ತೀರ್ಮಾನವೇನಂದರೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ. ಆಮೇಲೆ ಎಲ್ಲ ಸೇರಿಸಿ ಸ್ಪಷ್ಟಿಕರಣ ಕೇಳುವಿರಂತೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) : – ಸನ್ಮಾನ್ಯ ಸಭಾಧ್ಯಕ್ಷರೆ, ಪ್ರತಿಪಕ್ಷದ ನಾಯಕರಾದಂತಹ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಜಯಚಂದ್ರರವರು, ಮಾನ್ಯ ಕುಮಾರಸ್ವಾಮಿಯವರು, ಮಾನ್ಯ ರೇವಣ್ಣನವರು, ಮಾನ್ಯ ಬಿ.ಸಿ. ಪಾಟೀಲ್‌ರವರು, ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರು ಸೇರಿದಂತೆ 16ಕ್ಕೂ ಹೆಚ್ಚು ಜನ ಆ ಕಡೆ ಕುಳಿತಿರುವಂತಹ ಗೌರವಾನ್ವಿತ ಸದಸ್ಯರುಗಳು ನಿಯಮ 69ರ

ಅಡಿಯಲ್ಲಿ ನಡೆದಂತಹ ಪ್ರಮುಖವಾದಂತಹ ಚರ್ಚೆಗೆ ತಮ್ಮ ಸಲಹೆ, ಸಹಕಾರ, ಆಕ್ರೋಶ, ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅನ್ನದಾತನ ಹೆಸರಿನಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದಂತಹ ಪ್ರಾರಂಭದಲ್ಲೇ ಇಂತಹ ಒಂದು ಗಂಭೀರವಾದಂತಹ ಸನ್ನಿವೇಶವನ್ನು ಎದುರಿಸಬೇಕಾಗಿ ಬಂದಿರುವಂಥದ್ದು. ಇದು ಒಂದು ವಿಧದಲ್ಲಿ ನಮ್ಮ ಸರ್ಕಾರಕ್ಕೆ ಒಂದು ಅಗ್ನಿಪರೀಕ್ಷೆ ಎಂದು ಭಾವಿಸಿದ್ದೇನೆ. ನಾನು ಇದರಿಂದ ಧೃತಿಗೆಟ್ಟಿಲ್ಲ. ಯಾವುದೇ ಸಮಸ್ಯೆ ಮತ್ತು ಸವಾಲನ್ನು ಸ್ವೀಕರಿಸಿ ಎದುರಿಸುವುದಕ್ಕೆ ನನ್ನ ಸರ್ಕಾರ ಸನ್ನದ್ಧವಾಗಿದೆ. ರೈತರನ್ನು ಕಾಡುತ್ತಿರುವಂತಹ ಈ ಸಂಕಷ್ಟಗಳಿಗೆ ಪರಿಹಾರವನ್ನು ರೂಪಿಸುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ರೈತರ ಸಾವು ನನ್ನನ್ನು ಬಹು ತೀವ್ರವಾಗಿ ಕಾಡಿದೆ. ಅದರಲ್ಲೂ ಆತ್ಮಹತ್ಯೆಯಂತಹ ಅತ್ಯಂತ ನೋವಿನ ಸಂಗತಿ ನನ್ನ ಮನಸ್ಸನ್ನು ಕದಡಿದೆ. ಸ್ವಾತಂತ್ರ್ಯ ಬಂದು 60 ವರ್ಷಗಳ ನಂತರವೂ ಸಹ ನಮ್ಮ ರೈತನ ದಯನೀಯ ಪರಿಸ್ಥಿತಿಯನ್ನು ನೋಡುವಂತಹ ಕಾಲ ಬಂತಲ್ಲ. ಎಂದು ನಿದ್ದೆಗೆಸುತ್ತಿದ್ದೇನೆ. ನನಗೆ ಉಪ ಮುಖ್ಯಮಂತ್ರಿಯಾಗಿ ಆಯವ್ಯಯವನ್ನು ಮಂಡನೆ ಮಾಡುವಂತಹ ಅವಕಾಶ ಸಿಕ್ಕಾಗ ಮಾನ್ಯ ಗೋಪಾಲ ಕೃಷ್ಣ ಅಡಿಗರ ಒಂದು ಮಾತನ್ನು ನಾನು ಹೇಳಿದ್ದೆನು. "ಅನ್ನವನ್ನು ಕೊಡು ಮೊದಲು, ಬಟ್ಟೆಯನ್ನು ಕೊಡು ಉಡಲು, ಕಟ್ಟಿಕೊಡು ಮನೆಗಳನು, ಇದು ಮೊದಲು ಆಮೇಲೆ ಉಳಿದುದೆಲ್ಲಾ." ಅಂದರೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳ ನಂತರವೂ ಸಹ ನಮ್ಮ ನಾಡಿನ ಜನರ ಜೀವನ ಸ್ಥಿತಿ ಸುಧಾರಣೆಯಾಗಲಿಲ್ಲ ಎನ್ನುವುದು ಆ ಕವನದಲ್ಲಿ ಬಹಳ ಸ್ಪಷ್ಟವಾಗಿ ಕಾಣುತ್ತಿರುವಂಥದ್ದನ್ನು ನೋಡುತ್ತೇವೆ. ಸ್ವಾತಂತ್ರ್ಯಪೂರ್ವದಲ್ಲೂ ನಮ್ಮ ರೈತ ಸಾಲಗಾರ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳ ನಂತರವೂ ಸಲಗಾರನಾಗಿ ಆತ್ಮಹತ್ಯೆಯ ದಾರಿಯನ್ನು ಹಿಡಿದಿರುವಂಥದ್ದು, ನಾವೆಲ್ಲಾ ಒಟ್ಟಾಗಿ ಕುಳಿತು ಚಿಂತಿಸಬೇಕಾದಂತಹ ವಿಷಯ ಎಂದು ನಾನು ಭಾವಿಸಿದ್ದೇನೆ. ಈ ಆತ್ಮಹತ್ಯೆ ಪ್ರಕರಣಗಳು ಈ ದೇಶದ ಯಾವುದೇ ರಾಜ್ಯವನ್ನು ಬಿಟ್ಟಿಲ್ಲ. ಭಾರತದಲ್ಲಿ 1997 ರಿಂದ 2007 ರವರೆಗೆ 1,66,304 ರೈತರ ಆತ್ಮಹತ್ಯೆ ಪ್ರಕರಣಗಳು ನಡೆದಿದೆ. ರಾಷ್ಟ್ರೀಯ ಅಪರಾಧ ದಾಖಲಾತಿಬ್ಯೂರೋ ವರದಿಯಂತೆ 2002ರಿಂದ 2006ರವರೆಗೆ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿ ಸಂಭವಿಸುತ್ತಿವೆ ಎನ್ನುವಂತಹ ಅಂಕಿ-ಅಂಶಗಳು ಮೇಲ್ನೋಟಕ್ಕೆ ಕಾಣಿಸುತ್ತಿವೆ. ರೈತರ ಆತ್ಮಹತ್ಯೆ ಪ್ರಕರಣಗಳಿಗೆ ಅನೇಕ ಸಾಮಾಜಿಕ, ಆರ್ಥಿಕ ಹಾಗೂ ಕೌಟುಂಬಿಕ ಸಮಸ್ಯೆಗಳು ಕಾರಣವೆನ್ನುವುದು ಸಮಾಜ ಶಾಸ್ತ್ರಜ್ಞರ ಮತ್ತು ತಜ್ಞರ ಅಭಿಪ್ರಾಯವಾಗಿದೆ. ಜಾಗತೀಕರಣ ಆರ್ಥಿಕ ಕ್ಷೇತ್ರದಲ್ಲಿ ಏರುಪೇರುಗಳು,

ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಕುಸಿತವಾಗಿರುವಂಥಾದ್ದು, ರೈತ ಬೆಳೆದಂತಹ ಬೆಳೆಗೆ ಒಂದು ವೈಜ್ಞಾನಿಕ ಬೆಲೆಯನ್ನು ಕೊಡುವುದಕ್ಕೆ ಆಗದಿರುವುದು, ರೈತರ ಈ ರೀತಿಯ ಆತ್ಮಹತ್ಯೆ ಪ್ರಕರಣಗಳಿಗೆ ಕಾರಣವಾಗಿದೆ. 2006ರಲ್ಲಿ ಮಹಾರಾಷ್ಟ್ರ ರಾಜ್ಯವೊಂದರಲ್ಲೇ 4,453 ರೈತರು ಸಾವನ್ನಪ್ಪಿದರು. ಮಧ್ಯಪ್ರದೇಶ ಹಾಗೂ ಛತೀಸ್‌ಘಡ್ ರಾಜ್ಯದಲ್ಲಿ ಅದೇ ವರ್ಷ 2,858 ಮಂದಿ ಮೃತಪಟ್ಟರು. ಆಂಧ್ರಪ್ರದೇಶದಲ್ಲಿ 2,607 ರೈತರು ಸಾವಿಗೆ ಶರಣರಾದರು.

ಕರ್ನಾಟಕ ರಾಜ್ಯದಲ್ಲಿ 2003 ರಿಂದ ಇಲ್ಲಿಯವರೆಗೆ 839 ಮಂದಿ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆನ್ನುವಂಥಾದ್ದು ಅಂಕಿ-ಅಂಶಗಳಿಂದ ನಮಗೆ ಕಾಣೂತ್ತಾ ಇದೆ. 2008ರಲ್ಲಿ ಮಾರ್ಚ್ ತಿಂಗಳಿನಿಂದ ಜೂನ್ ತಿಂಗಳವರೆಗೆ 85 ಮಂದಿ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ನಾವೆಲ್ಲರೂ ಸಹಜವಾಗಿ ರೈತರಿಂದ ಓಟನ್ನು ಪಡೆದು ಪ್ರತಿನಿಧಿಸುವಂಥ ನಮಗೆಲ್ಲರಿಗೂ ಸಹ ಇದು ಅತ್ಯಂತ ನೋವನ್ನು ಉಂಟು ಮಾಡುವಂಥ ಘಟನಾವಳಿಗಳಾಗಿವೆ. ಯಾವುದೇ ಪ್ರಮಾಣದ ನೆರವು ಸಹ ಇದಕ್ಕೆ ಪರಿಹಾರ ಸಿಕ್ಕಲ್ಲವೆನ್ನುವಂಥದ್ದನ್ನು ನಾವು ಕಾಣುತ್ತೇವೆ. ನನಗೆ ನೆನಪು ಇರುವ ಹಾಗೆ ಸ್ವಾತಂತ್ರ್ಯಾ ನಂತರ ಕಳೆದ 2, 3 ವರ್ಷಗಳಿಂದಿಚೇಗೆ ಕೇಂದ್ರ ಸರ್ಕಾರ ವಿಶೇಷವಾಗಿ ಕರ್ನಾಟಕ ರಾಜ್ಯ ಸರ್ಕಾರ ರೈತರ ನೆರವಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಬಂದ ಮೇಲೂ ಸಹ ಈ ಆತ್ಮಹತ್ಯೆ ಪ್ರಕರಣಗಳನ್ನು ತಡೆಯುವುದಕ್ಕೆ ಆಗಿಲ್ಲ. ಬಹಶಃ ನಾವು ನೀವೆಲ್ಲಾ ಒಟ್ಟಾಗಿ ಸೇರಿ ರೈತರಲ್ಲಿ ಒಂದು ರೀತಿಯ ಆತ್ಮ ವಿಶ್ವಾಸವನ್ನು ತುಂಬಿ ಅವರು ಹತಾಶೆಗೆ ಒಳಗಾಗದಂತೆ ನೋಡಿಕೊಳ್ಳುವಂಥ ಹೊಣೆ, ಸಮಾಜದ್ದು ಮತ್ತು ಸರ್ಕಾರದ್ದು ಎಂದು ನಾನು ಭಾವಿಸಿದ್ದೇನೆ. ಈ ದಿಶೆಯಲ್ಲಿ ತಳಮಟ್ಟದಿಂದ ಎಲ್ಲಾ ಹಂತಗಳಲ್ಲಿ ಆಡಳಿತಗಾರರ ನಡುವೆ ತಜ್ಞರ ನಡುವೆ ಚಿಂತನೆ ನಡೆದು ಕೃಷಿಯನ್ನು ಲಾಭದಾಯಕವಾಗುವಂಥ ಪರಿಣಾಮಕಾರಿ ಕಾರ್ಯಕ್ರಮಗಗಳನ್ನು ರೂಪಿಸದೇ ಇದ್ದರೆ, ಮುಂದೆ ಬರುವಂಥ ದಿವಸಗಳು ಬಹಳ ಕಠಿಣವಾದ ದಿವಸಗಳೆಂದು ನಾನು ಭಾವಿಸಿದ್ದೇನೆ. ಏಕೆಂದರೆ ನಮ್ಮ ಬಳಿ ಯಾವುದೇ ಒಂದು ಸ್ಥಿರವಾದಂತಹ ಸಿದ್ಧ ಪರಿಹಾರ ನಮ್ಮ ಕಣ್ಣ ಮುಂದೆ ಇಲ್ಲ. ಸರ್ಕಾರ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳವುದಕ್ಕೆ ನಾನು ಈ ಮಾತನ್ನು ಹೇಳುತ್ತಾ ಇಲ್ಲ. ಸರ್ಕಾರದೊಂದರಿಂದಲೇ ಎಲ್ಲಕ್ಕೂ ಪರಿಹಾರ ಸಿಗುತ್ತದೆಂದು ನಾನು ಭಾವಿಸಿಲ್ಲ. ರೈತರ ಈ ದಯನೀಯ ಪರಿಸ್ಥಿತಿಗೆ ಎಲ್ಲಾ ರೈತನ ಹಿತ ಚಿಂತಕರು ಒಂದಾಗಿ ಚಿಂತನೆ ಮಾಡಬೇಕೆಂಬುದು ನನ್ನ ಕಳಕಳಿಯ ಮನವಿಯಾಗಿದೆ. ಹಾವೇರಿ ಜಿಲ್ಲೆಯಲ್ಲಿ ಆದಂಥ

ಗೋಲಿಬಾರ್ ಘಟನೆಯ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ದಿನಾಂಕ: 10–06–2008ರಂದು ಹಾವೇರಿ ಜಿಲ್ಲೆಯಲ್ಲಿ ನಡೆದ ಪೊಲೀಸ್ ಗೋಲಿಬಾರ್‌ನಲ್ಲಿ ಸಿದ್ದಲಿಂಗಪ್ಪ ಚಿನ್ನಪ್ಪ ಚೂರಿ ಎನ್ನುವ ರೈತ ಮೃತ ಪಟ್ಟು ಮೂವರಿಗೆ ತೀವ್ರರವಾದ ಗಾಯಗಳಾಯಿತು. ಪೊಲೀಸರಿಗೆ ಮತ್ತೆ ಅನೇಕ ರೈತ ಪ್ರಮುಖರಿಗೆ ಗಾಯಗಳಾಯಿತು, ಮತ್ತೆ ಇದು ಅತ್ಯಂತ ದುರದೃಷ್ಟಕರ ಮತ್ತು ನೋವಿನ ವಿಚಾರ. ಈಘಟನೆಯಾಗಬಾರದಾಗಿತ್ತೆಂಬುದು ನಮ್ಮ ನಿಮ್ಮೆಲ್ಲರ ಅಭಿಪ್ರಾಯವಾಗಿದೆ. ನಾನು ರೈತ ಪರ ಹೋರಟದಲ್ಲಿ ಸಾರ್ವಜನಿಕ ಜೀವನದಲ್ಲಿ ಕಳೆದ ಮೂರು ದಶಕಗಳಿಂದ ನನ್ನನ್ನು ನಾನು ತೊಡಗಿಸಿಕೊಂಡು ಹೊರ ಬಂದಂಥವನನಾಗಿದ್ದೇನೆ. ಬಸವನ ಬಾಗೇವಾಡಿಯಿಂದ, ಬಸವ ಕಲ್ಯಾಣದಿಂದ, ಬನವಾಸಿಯಿಂದ, ಅನೇಕ ಬಾರಿ ಜಾಥಾ, ಹೋರಾಟ, ಪಾದಯಾತ್ರೆ, ಧರಣಾ, ಸತ್ಯಾಗೃಹ, ಚಳುವಳಿ, ವಿಶೇಷವಾಗಿ ಇದೇ ಮನೆಯಲ್ಲಿ unauthorized cultivation ಮಾಡುತ್ತಿದಂಥ ಬಡವರನ್ನು ಒಕ್ಕಲೆಬ್ಬಿಸುವಂಥ ಒಂದು ಕಾನೂನನ್ನು ಅವತ್ತಿನ ಅರಣ್ಯ ಸಚಿವರಾಗಿದ್ದ ಮಾನ್ಯ ರಾಚಯ್ಯನವರು ತಂದಾಗ, ಈ ಸದನದಲ್ಲಿ ಇಬ್ಬರಲ್ಲಿ ಒಬ್ಬರು ಬಿಟ್ಟಿದ್ದರು. ನಾನು ಒಬ್ಬನೇ ಇದ್ದೆ. ಲಕ್ಷಾಂತರ ಜನ ದೀನದಲಿತರಿಗೆ, ಹಿಂದುಳಿದವರಿಗೆ ಅನ್ಯಾಯವಾಗುತ್ತದೆಂದು ಈ ಮನೆಯೊಳಗೆ ಬಂದು ಕಣ್ಣೀರಿಟ್ಟು ಬಹಶಃ ಥೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಈ ಅನ್ಯಾಯವಾಗುತ್ತಿರುವುದನ್ನು ಮನವರಿಕೆ ಮಾಡಿಕೊಂಡು ಅವತ್ತು introduce ಮಾಡಿದಂಥ ಬಿಲ್ ಅನ್ನು ಮಾನ್ಯ ರಾಚಯ್ಯನವರು ವಾಪಸ್ಸು ಪಡೆದಂಥದ್ದು ಒಂದು ಐತಿಹಾಸಿಕ ಘಟನೆಯಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಯಾವ ಬಿಲ್?

ಶ್ರೀ ಬಿ.ಎಸ್. ಯಡಿಯೂರಪ್ಪ :– Un-authorized cultivation ಮಾಡುತ್ತೇವೆಂದು ಬಡವರಿಗೆ C&P land ಎಂದು. ಈಗ ಮಧ್ಯದಲ್ಲಿ ಏಕೆ, ನಾನು ಉತ್ತರವನ್ನು ಕೊಟ್ಟ ಮೇಲೆ ಕೇಳಿ. ನಾನು ಹೊಗಳಿಕೆಗೆ ಎಂದು ಅಲ್ಲ. ಅದು ಸರಿಯಿಲ್ಲವೆಂದರೆ ತೆಗದು ಹಾಕಿ ಬಿಡಿ. ನನ್ನದು ಏನೂ ಅಭ್ಯಂತರವಿಲ್ಲ. ನಾನು ಏನು ಘಟನೆ ನಡೆಯಿತು ಅದನ್ನು ನೆನಪು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಇನ್ನು ಬೇರೆ ಏನೂ ಉದ್ದೇಶವಿಲ್ಲ. ದಿನಾಂಕ: 10–06–2008 ರಂದು ಈ ಘಟನೆ ನಡೆದಾಗ, ನಾನು ರಾಜ್ಯದ ಮುಖ್ಯಮಂತ್ರಿಯಾಗಿದ್ದುಕೊಂಡು 11ನೇ ತಾರೀಖಿನಂದು ಈ ಶವ ಸಂಸ್ಕಾರಕ್ಕೆ ಹೋಗಬೇಕು, ಆ ಕುಟುಂಬವನ್ನು ಕಂಡು ಸಂತೈಸಬೇಕೆಂಬ ಪ್ರಯತ್ನವನ್ನು ಮಾಡಿದಾಗ, ಅವತ್ತು ಅಲ್ಲಿನ

ಪರಿಸ್ಥಿತಿಯಲ್ಲಿ ನನಗೆ ಅಲ್ಲಿಗೆ ಬರಬಾರದೆಂಬ ಸೂಚನೆ ಕೊಟ್ಟರು. ಆದರೆ ನಾನು ಒಬ್ಬ ಮುಖ್ಯಮಂತ್ರಿಯಾಗಿ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಕೆಲವೇ ದಿವಸಗಳಲ್ಲಿ ಗೋಲಿಬಾರ್‌ನಿಂದ ಒಬ್ಬ ರೈತ ಸಾವನ್ನಪ್ಪಿದನೆಂದರೆ, ಅವರ ಮನೆಗೆ ಹೋಗಿ ಸಾಂತ್ವನ ಹೇಳುವುದಕ್ಕೆ ಆಗದೇ ಇದ್ದರೆ, ಅದು ಎಂಥದ್ದೆ ಕಠಣ ಪರಿಸ್ಥಿತಿ ಬಂದರೂ ನೋಡೋಣವೆಂದು ನಾನು ಅವರ ಮನೆಗೆ ಹೋದೆ, 11ನೇ ತಾರೀಖಿನಂದು ಆಗ ತಾನೇ ಶವ ಸಂಸ್ಕಾರ ಮುಗಿಸಿಕೊಂದು ಬಂದಂಥ ಅವರ ತಾಯಿ ಮತ್ತು ಅವರ ಮನೆ ಮಂದಿಯನ್ನು ನೋಡಿದಾಗ, ಯಡಿಯೂರಪ್ಪನವರೆ, BJP ಪಕ್ಷದ ಗೆಲುವಿಗಾಗಿ ನನ್ನ ಮಗ ಹಗಲು ರಾತ್ರಿ ದುಡಿಯುತ್ತಿದ್ದ, ನೀವು ಮುಖ್ಯಮಂತ್ರಿಯಾದಾಗ ಹಬ್ಬವನ್ನು ಅವನು ಆಚರಿಸಿದನು. ಇವತ್ತು ನನ್ನ ಮಗನನ್ನು ಕಳೆದುಕೊಂಡೆನೆಂದು ಆ ತಾಯಿ ಕಣ್ಣೀರು ಇಟ್ಟಾಗ, ಆ ಸಂದರ್ಭದಲ್ಲಿ ನನಗೆ ಕಣ್ಣೀರು ಹಾಕುವುದನ್ನು ಬಿಟ್ಟರೆ ನನಗೆ ಬೇರೆ ಏನೂ ಮಾರ್ಗ ಕಾಣಲಿಲ್ಲ. ನಾವು ಈ ಬಗ್ಗೆ ನ್ಯಾಯಾಂಗ ತನಿಖೆ ಮಾಡುತ್ತಿದ್ದೇವೆ. ಅವತ್ತು ಗೋಲಿಬಾರ್‌ನ ಅಗತ್ಯವಿತ್ತಾ? ಅಗತ್ಯವಿರಲಿಲ್ಲವಾ? ಕಾರಣ ಏನು? ಪತ್ತೆ ಹಚ್ಚಿ, ನಮ್ಮ ಎಲ್ಲಾ ಹಿರಿಯ ಸದಸ್ಯರು ಹೇಳಿದಂತೆ ತೀವ್ರತರವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ನಾನು ವಿರೋಧಪಕ್ಷದಲ್ಲಿ ಇದ್ದಾಗ ಒಂದು ಮಾತು ; ಜನರ ಆಶೀರ್ವಾದದಿಂದ ಆಡಳಿತ ಪಕ್ಷದಲ್ಲಿ ಕುಳಿತಾಗ ಮತ್ತೊಂದು ಮಾತನ್ನು ಆಡುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಅದಕ್ಕಾಗಿಯೇ, ನಾನು ತತ್ ತಕ್ಷಣ ನಿಮ್ಮೆಲ್ಲರ ಅಭಿಪ್ರಾಯಗಳನ್ನು ಅರ್ಥ ಮಾಡಿಕೊಂಡು ಏಕೆ ಸದಸ್ಯ ನ್ಯಾಯಾಂಗ ತನಿಖೆಗೆ ಈಗಾಗಲೇ ಆದೇಶ ಮಾಡಿದ್ದೇನೆ. ಮಾನ್ಯ ಕಡಬಂಡಿ ಜಗನ್ನಾಥ ಶೆಟ್ಟರ ಏಕೆ ಸದಸ್ಯ ಆಯೋಗವನ್ನು ಮಾಡಿದ್ದು. ಇದರ terms of reference ಏನು ಇದೆಯೆಂಬುದನ್ನು ನಾನು ಹೇಳುತ್ತೇನೆ. ಆ ತನಿಖೆ ಪ್ರಾರಂಭ ಆಗುವುದಕ್ಕೆ ಬೇಕಾದಂತಹ ಎಲ್ಲಾ ವ್ಯವಸ್ಥೆಗಳನ್ನು ಮಾಡಿದ್ದೇನೆ. ಅವತ್ತು ನಾನು ಅಲ್ಲಿಗೆ ಹೋಗಿ ಸಾಂತ್ವನವನ್ನು ಹೇಳಿ, ಬಹಶಃ ಸ್ವಾತಂತ್ರ್ಯ ನಂತರ ಮೊದಲ ಬಾರಿಗೆ ಅವರ ಮನೆ ಬಾಗಿಲಿಗೆ ಹೋಗಿ, ಅವರ ತಾಯಿ, ಆ ಗಂಡನನ್ನು ಕಳೆದುಕೊಂಡಿದ್ದ ಹೆಂಡತಿಯನ್ನು ಮತ್ತು ಮಕ್ಕಳನ್ನು ಭೇಟಿ ಮಾಡಿ, ಸ್ಥಳದಲ್ಲೇ ಸರ್ಕಾರದ ವತಿಯಿಂದ ಎರಡು ಲಕ್ಷ ರೂಪಾಯಿಗಳ ಪರಿಹಾರ ಕೊಟ್ಟು, ನಮ್ಮ ಸಚಿವರಾಗಿರುವಂಥ ಮಾನ್ಯ ಉದಾಸಿಯವರು ಮತ್ತು ಬಸವರಾಜ ಬೊಮ್ಮಾಯಿಯವರು ಈ ಘಟನೆ ನಡೆದ ತಕ್ಷಣದಿಂದ ಶವ ಸಂಸ್ಕಾರ ಮುಗಿದು, ಅಲ್ಲಿನ ವಾತಾವರಣ ತಿಳಿಯಾಗುವವರೆಗೂ ಅಲ್ಲಿ ಕುಳಿತು ಎಲ್ಲಾ ರೀತಿಯ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಅವರ ಜೊತೆಯಲ್ಲಿ ನಾನು ಮೃತರ

ಮನೆಗೆ ಹೋಗಿದ್ದೆ. ಅವರ ಬೇಡಿಕೆಗಳು ಏನು ಇತ್ತೆಂದರೆ ಮೃತರ ಪತ್ನಿಗೆ ಒಂದು ಸರ್ಕಾರಿ ಉದ್ಯೋಗವನ್ನು ಕೊಡಬೇಕು, ಮತ್ತು ಮೃತರಾದ ಸಿದ್ದಲಿಂಗಪ್ಪ ಚುರಿಯವರ ಪುತಳಿಯನ್ನು ಸರ್ಕಲ್‌ನಲ್ಲಿ ಪ್ರತಿಸ್ಥಾಪನೆ ಮಾಡಬೇಕು, ಅವರ ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಬೇಕೆನ್ನುವಂಥ ಮೂರು ಬೇಡಿಕೆಗಳನ್ನು ಒಪ್ಪಿಕೊಂಡು, ಅಲ್ಲಿಂದ ನೇರವಾಗಿ ನಮ್ಮ ಸಚಿವ ಸಂಪುಟದ ಸಚಿವರೆಲ್ಲರೂ ದೆಹಲಿಗೆ ಹೋದೆವು. ದೆಹಲಿಗೆ ಹೋಗಿ 11ನೇ ತಾರೀಖಿನಂದು ಸಂಜೆ 7 ಗಂಟೆಗೆ ಪ್ರಧಾನ ಮಂತ್ರಿಯವರನ್ನು ಬೇಟಿ ಮಾಡಿದೆ. ಈ ಗೋಲಿಬಾರ್‌ನ ಪ್ರಕರಣ fertilizer ಕೊರತೆಯಿಂದ ಮತ್ತು ಬೇರೆ ಬೇರೆ ಕಾರಣಕ್ಕಾಗಿ ಈ ರೀತಿಯ ಘಟನೆಗಳು ನಡೆಯುತ್ತಿವೆ, ಇದನ್ನು ನಾವು ಅವರಿಗೆ ಮನವರಿಕೆ ಮಾಡಿ, ಅವರ ಸೂಚನೆಯಂತೆ ನಾವು 9 ಜನ ಸಚಿವರೊಂದಿಗೆ ರಾತ್ರಿ 10 ಗಂಟೆಯಿಂದ 11–30 ಗಂಟೆಯವರೆಗೂ ಮಾನ್ಯ ರಾಮ ವಿಲಾಸ್ ಪಾಸ್ವಾನ್ ರವರ ಮನೆಗೆ ಹೋಗಿ, ನಮ್ಮ ರಸಗೊಬ್ಬರದ ಸ್ಥಿತಿ ಗತಿಗಳು ಏನು ಇತ್ತು, ನಮ್ಮ ಬೇಡಿಕೆಗಳು ಏನು ಇವೆ, ಅದನ್ನು ಅವರ ಮುಂದೆ ಇಡುವಂಥ ಪ್ರಯತ್ನವನ್ನು ಮಾಡಿದ್ದೇವೆ, ನಾನು ಜವಾಬ್ದಾರಿಯಿಂದ ಅಂಕಿ ಅಂಶಗಳನ್ನು ಕೊಡುತ್ತಿದ್ದೇನೆ. ಯಾವುದು ತಪ್ಪು ಮಾಹಿತಿಯನ್ನು ಕೊಡುವಂಥ ಅಗತ್ಯವಿಲ್ಲ. ಈ ರಸಗೊಬ್ಬರದ ಸಮಸ್ಯೆಗೆ ನಮ್ಮಲ್ಲಿ opening stock ಏನು ಇರಬೇಕಾಗಿತ್ತು, ನಮ್ಮಲ್ಲಿ ಏಪ್ರಿಲ್ ಪ್ರಾರಂಭದಲ್ಲಿ ಏನು ದಾಸ್ತಾನು ಇರಬೇಕಾಗಿತ್ತು, ಅದರಲ್ಲಿ ಕೊರತೆ ಇತ್ತು. ಅದಕ್ಕೆ ನಾನು ಯಾರನ್ನು ದೂಷಣೆ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಏಕೆಂದರೆ ಮಾನ್ಯ ರಾಜ್ಯಪಾಲರು ಸಹ ದಿನಾಂಕ: 25–02–2008ರಲ್ಲಿ ಮತ್ತು ದಿನಾಂಕ: 15–03–2008ರಲ್ಲಿ ಕೇಂದ್ರ ಸರ್ಕಾರದ ರಸಗೊಬ್ಬರದ ಸಚಿವರಿಗೆ ಕರ್ನಾಟಕ ರಾಜ್ಯದಲ್ಲಿ ರಸಗೊಬ್ಬರದ ಕೊರತೆ ಏನು ಆಗುತ್ತಿದೆಯೆಂಬ ವಾಸ್ತವ ಸ್ಥಿತಿಯನ್ನು ತಿಳಿಸಿ, ನಮಗೆ ತತ್ ತಕ್ಷಣ ರಸಗೊಬ್ಬರವನ್ನು ಸರಬರಾಜು ಮಾಡದೇ ಇದ್ದರೆ ನಾವು ಸಂಕಷ್ಟದಲ್ಲಿ ಸಿಕ್ಕಿ ಹಾಕಿಕೊಳ್ಳಬೇಕಾಗುತ್ತದೆಂಬ ಒಂದು ವಾಸ್ತವಿಕ ಸ್ಥಿತಿಯನ್ನು ರಾಜ್ಯಪಾಲರು ಕೇಂದ್ರದ ರಸಗೊಬ್ಬರ ಸಚಿವರಿಗೆ ತಿಳಿಸಿದರು. ದಿ: 01–04–2007ರಂದು ರಾಜ್ಯದಲ್ಲಿ ಇದ್ದಂತಹ ದಾಸ್ತಾನು DAP 31 ಸಾವಿರ ಮೆಟ್ರಿಕ್ ಟನ್, complex 78,131 ಮೆಟ್ರಿಕ್ ಟನ್ MOP 37,270 ಟನ್ ಇತ್ತು.

01–04–2008 ರಂದು ಅಂದರೆ ಈ ವರ್ಷ 31 ಸಾವಿರ ಮೆಟ್ರಿಕ್ ಟನ್ ಇದ್ದಂಥ DAP ಜಾಗದಲ್ಲಿ ಕೇವಲ 3,782 ಮೆಟ್ರಿಕ್ ಟನ್ ಇದೆ. Complex ಹೋದ

ಏಪ್ರಿಲ್‌ನಲ್ಲಿ balance ಇದ್ದದ್ದು 78,131 ಮೆಟ್ರಿಕ್ ಟನ್ ಇದ್ದರೆ ಈ ವರ್ಷ ಕೇವಲ 9,031 ಟನ್ ಇದೆ. ಮತ್ತು MOP ಹೋದ ಸಾರಿ 37,270 ಮೆಟ್ರಿಕ್ ಟನ್ ಇದ್ದರೆ, ಈ ಬಾರಿ 12,107 ಮೆಟ್ರಿಕ್ ಟನ್ ಮಾತ್ರ ಇತ್ತು. ಈ ಸಂಗತಿಯನ್ನು ಪ್ರಧಾನಿಯವರಿಗೆ ನಾನು ಮುಖ್ಯಮಂತ್ರಿಯಾದ 48 ಗಂಟೆಗಳೋಳಗೆ ಭೇಟಿ ಮಾಡಿದಾಗ ವಿವರಗಳನ್ನು ಒದಗಿಸಿ ಕೊಟ್ಟಿದ್ದೆ, ಮಾಹಿತಿಯನ್ನು ತಿಳಿಸಿದ್ದೆ. ಈ ಹಾವೇರಿ ಘಟನೆ ಆದ ಮೇಲೆ ಅಂಕಿ ಅಂಶದೊಂದಿಗೆ ಮತ್ತೊಂದು ಪತ್ರವನ್ನು ಕೊಟ್ಟಾಗ ಅವರು ಪಾಸ್ವಾನ್‌ಜೀಯವರೊಂದಿಗೆ ನಾನು ಮಾತನಾಡುತ್ತೇನೆ ಎಂದು ಹೇಳಿದರು. ಅವರ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆಯೂ ಸಹ ಅರ್ಧ ಗಂಟೆ ಕಾಲ ನಮ್ಮೊಂದಿಗಿದ್ದು, ಸಹಾನುಭೂತಿಯಿಂದ ನಮ್ಮ ಎಲ್ಲಾ ವಿಚಾರಗಳನ್ನು ಕೇಳಿ ಇದಕ್ಕೆ ಬೇಕಾದಂಥ ವ್ಯವಸ್ಥೆಯನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ಮಾನ್ಯ ಪ್ರಧಾನಿಯವರು ಕೊಟ್ಟರು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ಮುಂಗಾರು ಪ್ರಾರಂಭದಲ್ಲಿ ಕೇವಲ ಶೇಕಡ 8ರ ಪ್ರಮಾಣದಲ್ಲಿ ಮಾತ್ರ DAP ಮತ್ತು complex ಗೊಬ್ಬರಗಳ ದಾಸ್ತಾನು ಇತ್ತು. ಮುಂಗಾರು ಪ್ರಾರಂಭವಾದ ಪೂರ್ವದಲ್ಲಿ ಅಂದರೆ ಕಳೆದ ಐದಾರು ತಿಂಗಳಲ್ಲಿ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಇತ್ತು, ಆ ಸಂದರ್ಭದಲ್ಲಿ ಗೊಬ್ಬರವನ್ನು ದಾಸ್ತಾನು ಮಾಡುವುದಕ್ಕೆ ರಾಜ್ಯಪಾಲರು ಏನೇ ಪ್ರಯತ್ನ ಮಾಡಿದರೂ ಅದು ಆಗಲಿಲ್ಲ. ಮತ್ತು ರಾಜ್ಯಪಾಲರು ಬರೆದಂಥ ಯಾವುದೇ ಪತ್ರಕ್ಕೆ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಲಿಖಿತ ಉತ್ತರ ಬರಲಿಲ್ಲ ಎನ್ನುವುದು ನಾವೆಲ್ಲರೂ ಗಮನಿಸಬೇಕಾದಂಥ ಅಂಶ. ನಾನು ಪ್ರಧಾನಿಯವರನ್ನು ಮತ್ತು ಸಂಬಂಧಪಟ್ಟ ರಸಗೊಬ್ಬರದ ಸಚಿವರನ್ನು ಭೇಟಿ ಮಾಡಿ ಬಂದ ಮೇಲೆ ಮಾರನೇ ಬೆಳಿಗ್ಗೆಯೇ ಸಚಿವ ಸಂಪುಟದ ಸಭೆ ಇತ್ತು. ಇಂಥ ಪ್ರಸಂಗಗಳು ಬಂದಾಗ ಅಲ್ಲಿ ಹಿಂದೆ ಏನು ನಡೆದಿದೆಯೋ ಗೊತ್ತಿಲ್ಲ. ಯಾವ ಗೋಲಿಬಾರ್‌ನಿಂದ ರೈತ ತನ್ನ ಜೀವವನ್ನು ಕೊಡಬೇಕಾಯಿತೋ, ಅವನಿಗೆ ಸಚಿವ ಸಂಪುಟದ ಸಭೆಯಲ್ಲ ಶ್ರದ್ಧಾಂಜಲಿಯನ್ನು ಅರ್ಪಿಸಿ, ಸಭೆಯನ್ನು ಪ್ರಾರಂಭ ಮಾಡಿದೆವು. ಅವರ ಶ್ರೀಮತಿಯವರಿಗೆ ತಕ್ಷಣ ಹಾವೇರಿಯಲ್ಲೇ ಸರ್ಕಾರಿ ಉದ್ಯೋಗ ಕೊಡಬೇಕೆಂದು ತೀರ್ಮಾನ ಮಾಡಿ, ಸರ್ಕಾರಿ ಆಜ್ಞೆಯನ್ನು ಹೊರಡಿಸಿ, ಸರ್ಕಾರಿ ಆಜ್ಞೆಯನ್ನು ಅವರಿಗೆ ಈಗಾಗಲೇ ತಲುಪಿಸಿ ಆಗಿದೆ. ಅವರ ಮೂರು ಜನ ಮಕ್ಕಳ ಶಿಕ್ಷಣದ ಜವಾಬ್ದಾರಿ ಮತ್ತು ಅವರ ಅಪೇಕ್ಷೆಯಂತೆ ಮೃತ ಸಿದ್ಧಲಿಂಗಪ್ಪ ಚೂರಿಯವರ ಪುತ್ಥಳಿಯನ್ನು ಸರ್ಕಲಿನಲ್ಲಿ ಹಾಕುತ್ತೇವೆ ಎಂದು ಒಪ್ಪಿಕೊಂಡು ಬಂದಿದ್ದೇವೆ, ಅಂದರೆ, ಈ ಘಟನೆ ನಡೆದಾಗ ನಾವು ಹೇಗೆ ನಡದುಕೊಂಡಿದ್ದೇವೆ ಎನ್ನುವುದಕ್ಕೋಸ್ಕರ ಇದೆಲ್ಲವನ್ನು ನಾನು ನಿಮ್ಮ ಗಮನಕ್ಕೆ

ತರುವಂಥ ಪ್ರಯತ್ನ ಮಾಡಿದ್ದೇನೆ. ಹಾವೇರಿ ಘಟನೆ ನಡೆದ ತಕ್ಷಣ ಬೆಳಗಾವಿಯ ಪ್ರಾದೇಶಿಕ ಆಯುಕ್ತರನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಿದೆವು 10 ದಿನಗಳಲ್ಲಿ ವಾಸ್ತವಿಕ ಸ್ಥಿತಿಯ ವರದಿಯನ್ನು ಕೊಡಬೇಕು ಎಂದು ಸೂಚನೆಯನ್ನು ಕೊಟ್ಟೆ. ಪ್ರತಿಪಕ್ಷದ ನಾಯಕರು ಅಪೇಕ್ಷೆಯನ್ನು ಕಂಡ ಮೇಲೆ ಒಂದು ಕ್ಷಣ ತಡ ಮಾಡಬಾರದು ಎಂದು ಭಾವಿಸಿ, 15-06-2008ರಂದೇ ಈ ಘಟನೆ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶ ಮಾಡಿದ್ದೇನೆ. 4 ತಿಂಗಳೊಳಗಾಗಿ ಆ ನ್ಯಾಯಾಂಗ ತನಿಖೆಯ ವರದಿಯನ್ನು ಕೊಡಬೇಕು ಎಂದು ಹೇಳಿದ್ದೇನೆ. ವಿಚಾರಣಾ ಆಯೋಗದ ಪರಿಶೀಲನಾಂಶಗಳೂ ಈ ಕೆಳಗಿನಂತಿವೆ. Terms of reference are as follows:

1) ಈ ಘರ್ಷಣೆ ಕುರಿತು ಯಾವುದೇ ಪೂರ್ವ ಮಾಹಿತಿ ಇತ್ತೇ? ಹಾಗಿದ್ದಲ್ಲಿ, ಈ ಘರ್ಷಣೆಯನ್ನು ಹತ್ತಿಕ್ಕಲು ಪೊಲೀಸ್ ಕೈಗೊಂಡ ಕ್ರಮಗಳೇನು?

2) 10-06-2008ರಂದು ಹಾವೇರಿಯಲ್ಲಿ ನಡೆದ ಪೊಲೀಸ್ ಗೋಲಿಬಾರ್‌ನಲ್ಲಿ ಒಬ್ಬರು ಗುಂಡೇಟಿನಿಂದ ಮೃತಪಟ್ಟು, 9 ಜನ ಗಾಯಾಳುಗಳಾಗಿದ್ದಾರೆ. ಈ ಬಗ್ಗೆ ಕಾರಣವಾದ ಪ್ರಾಸಂಗಿತ ಘಟನೆಗಳು ಮತ್ತು ಸಂದರ್ಭಗಳ ಬಗ್ಗೆ ವಿಚಾರಣೆ ಮಾಡುವಂಥಾದ್ದು. ಈ ಪ್ರಕರಣದಲ್ಲಿ ಉಪಯೋಗಿಸಿದ ಬಲದ ಪ್ರಮಾಣ ಅವಶ್ಯಕವಾಗಿತ್ತೇ? ನ್ಯಾಯ ಸಮ್ಮತವಾಗಿತ್ತೇ ಅಥವಾ ಇದು ಅಧಿಕವಾಯಿತೇ? ಈ ಘಟನೆಯನ್ನು ನಿಯಂತ್ರಿಸುವಲ್ಲಿ ಪೊಲೀಸರು ಅಥವಾ ಕಾರ್ಯಕಾರಿ ದಂಡಾಧಿಕಾರಿಯವರು ಯಾವುದೇ ನಿರ್ಲಕ್ಷ್ಯತೆ ತೋರಿಸಿದ್ದಾರೆಯೇ ಅಥವಾ ತಪ್ಪು ನಿರ್ಣಯವನ್ನು ತೆಗೆದುಕೊಂಡಿದ್ದಾರೆಯೇ?

3) ಸದರಿ ಘಟನೆಗೆ ಸಂಬಂಧಪಡಬಹುದಾದ ಅಥವಾ ಸಂಬಂಧಪಟ್ಟ ಯಾವುದೇ ಕೃತ್ಯ ಲೋಪ ಅಥವಾ ವ್ಯವಹರಣೆಯಿಂದ ಉದ್ಭವಿಸಬಹುದಾದ ಅಥವಾ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾಗಿ ಯಾವುದೇ ಇತರ ವಿಷಯಗಳಿದ್ದರೂ ಸಹ ಈ ಬಗ್ಗೆ ಸಮಗ್ರವಾದಂಥ ತನಿಖೆಯನ್ನು ಮಾಡಿ ವರದಿಯನ್ನು ಕೊಡಬೇಕು.

ಈ ರೀತಿಯಾದಂಥ Terms of Reference ಅನ್ನು ಕೊಟ್ಟು ಒಂದು ಆಜ್ಞೆಯನ್ನು ನಾನು ಮಾಡಿದ್ದೇನೆ. 4 ತಿಂಗಳೊಳಗಾಗಿ ಈ ಆಯೋಗ ನಮಗೆ ವರದಿಯನ್ನು ಕೊಡಬೇಕಾಗಿದೆ.

ನಾವು ರಾಮ ವಿಲಾಸ್ ಪಾಸ್ವಾನ್‌ರವರನ್ನು ಭೇಟಿ ಮಾಡಿದಾಗ ದಿನಾಂಕ

20–06–2008 ರೊಳಗಾಗಿ ಅಂದರೆ ಈ ತಿಂಗಳ 20ನೇ ತಾರೀಖಿನೊಳಗಾಗಿ 1.20 ಲಕ್ಷ ಮೆಟ್ರಿಕ್ ಟನ್ DAP 1.10 ಲಕ್ಷ ಮೆಟ್ರಿಕ್ ಟನ್ complex ಗೊಬ್ಬರವನ್ನು ಒದಗಿಸುವಂಥ ಭರವಸೆಯನ್ನು, ರಾತ್ರಿ ಹತ್ತು ಗಂಟೆಯಿಂದ ಹನ್ನೊಂದುವರೆ ಗಂಟೆಯವರೆಗೆ ನಡೆದಂಥ ಚರ್ಚೆಯಲ್ಲಿ ಒಪ್ಪಿಕೊಂಡರು. ಅದರೆ 21–6–2008 ರವರೆಗೆ 70,436 ಮೆಟ್ರಿಕ್ ಟನ್ DAP 57,226 ಮೆಟ್ರಿಕ್ ಟನ್ complex ಗೊಬ್ಬರ ಸರಬರಾಜಾಗಿದೆ. ಅಂದರೆ ಶೇಕಡ 59 ರಷ್ಟು DAP ಮತ್ತು ಶೇಕಡ 58ರಷ್ಟು complex ಗೊಬ್ಬರ ಸರಬರಾಜಾಗಿದೆ. ರಾಜ್ಯಕ್ಕೆ ಕೇಂದ್ರ ಭರವಸೆ ಇತ್ತಂತೆ ರಸಗೊಬ್ಬರಗಳ ಸರಬರಾಜು ಆಗಿಲ್ಲ. ಇದನ್ನು ಈ ಸದನ ಗಂಭೀರವಾಗಿ ಗಮನಿಸಬೇಕು ಎಂದು ವಿನಂತಿಯನ್ನು ಮಾಡುತ್ತೇನೆ. ದುರಾದೃಷ್ಟ ಎಂದರೆ ಜುಲೈ ತಿಂಗಳ ಅವಧಿಗೆ ರಾಜ್ಯಕ್ಕೆ ಅಗತ್ಯವಿರುವಂಥ ರಸಗೊಬ್ಬರಗಳ ಪ್ರಮಾಣದಲ್ಲಿ ಕೇವಲ ಅರ್ಧದಷ್ಟನ್ನು ಮಾತ್ರ ಕೇಂದ್ರ ಸರ್ಕಾರ ಹಂಚಿಕೆ ಮಾಡಿದೆ. ಉದಾರಣೆಗೆ, DAP 95 ಸಾವಿರ ಮೆಟ್ರಿಕ್ ಟನ್ ಅಗತ್ಯವಿದ್ದರೆ ಅವರು ಹಂಚಿಕೆ ಮಾಡಿರುವಂಥಾದ್ದುಮಾತ್ರ 45 ಸಾವಿರ ಮೇಟ್ರಿಕ್ ಟನ್ ಮಾತ್ರ complex ಗೊಬ್ಬರ 1.64 ಲಕ್ಷ ಮೆಟ್ರಕ್ ಟನ್ ಅಗತ್ಯ ಇದ್ದರೆ ಅವರು ಹಂಚಿಕೆ ಮಾಡಿರುವಂಥಾದ್ದು ಕೇವಲ 1 ಲಕ್ಷ ಮೆಟ್ರಿಕ್ ಟನ್ ಮಾತ್ರ. ಇದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಡುವ ಸಂಭವವಿದ್ದು ಇದರ ಬಗ್ಗೆ ಕೇಂದ್ರ ಸರ್ಕಾರವೇ ಮುಂದೆ ಬರುವಂಥ ದಿವಸಗಳಲ್ಲಿ ಹೋರಟಯನ್ನು ಹೊರಬೇಕಾದಂಥ ಒಂದು ವಿಚಿತ್ರವಾದ ಸನ್ನಿವೇಶದಲ್ಲಿ ನಾವಿದ್ದೇನೆ. ಈ ಸಂದರ್ಭವನ್ನು ಕೆಲವು ಸಮಾಜಘಾತುಕ ಶಕ್ತಿಗಳು ಮತ್ತು ರಾಜಕೀಯ ವ್ಯಕ್ತಿಗಳು ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು ಎನ್ನುವಂಥ ವರದಿ ನಮ್ಮ ಹತ್ತಿರ ಇದೆ. ಸತ್ಯಾಸತ್ಯತೆಗಳ ಬಗ್ಗೆ ನ್ಯಾಯಾಂಗ ತನಿಖೆಯಾಗುತ್ತಿದೆ, ಅವರು ತಮ್ಮ ವರದಿಯನ್ನು ಕೊಡಲಿ. ಆ ರೀತಿ ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ ಪರಿಣಾಮ ಈ ಘಟನಾವಳಿಗಳು ನಡೆಯಿತು ಎನ್ನುವಂಥಾದ್ದು ನಮಗೆ ಸಿಕ್ಕರುವಮಥ ಮಾಹಿತಿ. ತಾವು ಹೇಳಿದಿರಿ. ರಸಗೊಬ್ಬರಹೊರಗಡೆಯಿಂದ ನಮಗೆ ಬಂದಾಗ ನೇರವಾಗಿ ಇಂಥಿಂಥ ಜಿಲ್ಲೆಗೆ ಇಷ್ಟು ಎಂದು ನೇರವಾಗಿ ರಸಗೊಬ್ಬರ ಸರಬರಾಜು ಆಗುತ್ತಿತ್ತು. ತಾವು ಕೇಂದ್ರದ ಸಂಬಂಧಪಟ್ಟಂಥ ಕಾರ್ಯದರ್ಶಿಯವರು ಇಲ್ಲಿಗೆ ಬಂದಾಗ ಅವರಿಗೆ ಮನವರಿಕೆ ಮಾಡಿ, ಮಳೆ ಬಿದ್ದ ಕಡೆ, ಅಗತ್ಯವಿರುವ ಕಡೆಗೆ ಅದನ್ನು transfer ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ವಿನಂತಿಯನ್ನು ಮಾಡಿ ಅವರ ಅನುಮತಿಯನ್ನು ತೆಗೆದುಕೊಂಡೆವು. ಅದಾದ ಮೇಲೆ, ಎಲ್ಲೆಲ್ಲಿ ಸ್ಪಾಕ್ ಇತ್ತು, ಎಲ್ಲಿ ಮಳೆ ಬಿದ್ದಿಲ್ಲ. ಎಲ್ಲೆಲ್ಲಿ ಅಗತ್ಯ ಇತ್ತು ಅಲ್ಲಿ

transfer ಮಾಡುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಇನ್ನು ಮುಂದೆ ಯಾವುದೇ ಸಂದರ್ಭದಲ್ಲಿ ರೈತನ ಮೇಲೆ ಗುಂಡು ಹಾರಿಸುಂಥ ಪ್ರಯತ್ನವನ್ನು ಮಾಡಕೂಡದು ಎಂದು ಆಜ್ಞೆಯನ್ನು ಹೊರಡಿಸಿದ್ದೇವೆ. ಅನಿವಾರ್ಯವಾದಾಗ ರಬ್ಬರ್ ಗುಂಡು ಉಪಯೋಗಿಸಬಹುದು, ಬೇರೆ ಬೇರೆ ಮಾರ್ಗಗಳನ್ನು ಅನುಸರಿಸಬೇಕು. ಆದರೆ ಇನ್ನು ಮುಂದೆ ಯಾವುದೇ ಕಾರಣಕ್ಕೆ ಗುಂಡು ಹಾರಿಸುವಂಥ ಪ್ರಯತ್ನವನ್ನು ಮಾಡಬಾರದು ಎನ್ನುವಂಥ ಆದೇಶವನ್ನು ನಾನು ಕೊಟ್ಟಿದ್ದೇನೆ. ರಸಗೊಬ್ಬರ ಕೊರತೆ ಇರುವಂಥ ಈ ಕಾಲದಲ್ಲಿ ಯಾರು hold ಮಾಡಿದ್ದಾರೆ, ಕಾನೂನು ಬಾಹಿರವಾಗಿ ಯಾರು ಸ್ಟಾಕ್ ಮಾಡಿದ್ದಾರೆ. ಅವರ ಮನೆಗಳನ್ನು ರೈಡ್ ಮಾಡುವುದಕ್ಕೆ ಸಾರ್ವಜನಿಕವಾಗಿ ವಿನಂತಿ ಮಾಡಿದ್ದೇನೆ. 10 ಸಾವಿರ ರೂಪಾಯಿ ಪರಿಹಾರ ಕೊಡುತ್ತೇವೆ ಎನ್ನುವಂಥ ಮಾತನ್ನೂ ಸಹ ನಾವು ಹೇಳಿದ್ದೇವೆ. ಆರೀತಿ ಏನೇನು ಪ್ರಯತ್ನ ಮಾಡಬೇಕೋ ಅದನ್ನು ನಾನು ಮಾಡಿದ್ದೇನೆ. ಪ್ರತಿಪಕ್ಷದ ನಾಯಕರಾದಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಾ ಮುಖ್ಯ ಕಾರ್ಯದರ್ಶಿಯವರ ಪತ್ರವನ್ನು ಉಲ್ಲೇಖಿಸಿದ್ದಾರೆ. ಸಚಿವರ ಸಮಕ್ಷಮ ನಾನು ದೆಹಲಿಯಲ್ಲಿದ್ದಾಗ ಈ ವಿಷಯ ಬಂತು. ಆದರೆ, ಕೊನೆಯ ಕಂಡಿಕೆಯಲ್ಲಿ monsoon ಬೇಗ ಪ್ರಾರಂಭವಾಗುವ ಕಾರಣ ಮತ್ತು ಬೇಡಿಕೆ ತೀವ್ರವಾಗಿರುವುದರಿಂದ ತಕ್ಷಣ ರಸಗೊಬ್ಬರ ಸರಬರಾಜು ಮಾಡುವುದಕ್ಕೋಸ್ಕರ Chief Secretary ಯವರು ನಮ್ಮಲ್ಲಿ ರಸಗೊಬ್ಬರ shortage ಇದೆಯೆಂದು ಸ್ಪಷ್ಟವಾಗಿ ಆ ಪತ್ರದಲ್ಲಿ ವಿನಂತಿಯನ್ನು ಮಾಡಿದ್ದಾರೆ. ದಿನಾಂಕ: 10–06–2008ರ ಪತ್ರದಲ್ಲಿ ಅವರು 10 ದಿನಗಳೊಳಗಾಗಿ ಗರಿಷ್ಠ ಸರಬರಾಜು ಮಾಡಲು ಮನವಿ ಮಾಡಿದ್ದಾರೆ. ಆದರೆ ಕೇಂದ್ರ ಸರ್ಕಾರದ ರಸಗೊಬ್ಬರ ಖಾತೆ ಕಾರ್ಯದರ್ಶಿಯವರಾಗಲಿ, ಬೇರೆ ಯಾವುದೇ ಅಧಿಕಾರಿಗಳಿಂದಾಗಲಿ ನಮ್ಮ Chief Secretary ಯವರ ಪತ್ರಕ್ಕೂ ಉತ್ತರವಿಲ್ಲ. ಮುಖ್ಯಮಂತ್ರಿ ಬರೆದ ಪತ್ರಕ್ಕೂ ಉತ್ತರವಿಲ್ಲ. ರಾಜ್ಯಪಾಲರು ಬರೆದ ಪತ್ರಕ್ಕೂ ಉತ್ತರವಿಲ್ಲ. ನಾವು ಪ್ರಧಾನ ಮಂತ್ರಿಯವರನ್ನು ವಿನಂತಿ ಮಾಡಿದ ಮೇಲೆ ದಿನಾಂಕ: 11–06–2008 ರಂದು ಕೇಂದ್ರ ಸರ್ಕಾರದ ರಸಗೊಬ್ಬರ ಖಾತೆಯ ಸಚಿವರು ಮತ್ತು ಕಾರ್ಯದರ್ಶಿಯವರು ದೆಹಲಿಯಲ್ಲಿ ನಡೆದ ಸಭೆಯಲ್ಲಿ ಆಶ್ವಾಸನೆ ನೀಡಿದಂತೆ ದಿನಾಂಕ: 20–06–2008ರ ವರೆಗೆ ಬರಬೇಕಾಗಿದ್ದ ಪ್ರಮಾಣದಲ್ಲಿ ನಾನು ಈಗಾಗಲೇ ಹೇಳಿದಂತೆ ಆರ್ಧದಷ್ಟು ಸಹ ರಸಗೊಬ್ಬರ ಬರಲಿಲ್ಲ. ರೈತರ ಆತ್ಮಹತ್ಯೆ ಪ್ರಕರಣ ನಾಡಿಗೆ ಅನ್ನಕೊಡುವ ಅನ್ನದಾತ ರೈತ ಆತ್ಮಹತ್ಯೆ ಹಾದಿ ತುಳಿದಿರುವಂಥದ್ದು ದುರದೃಷ್ಟಕರ. ತಮಗೆ ಗೊತ್ತಿದೆ, ಮಾಹಾರಾಷ್ಟ್ರದ ವಿಧರ್ಭ ಪ್ರಾಂತ್ಯದಲ್ಲಿ ರೈತರು ಆತ್ಮಹತ್ಯೆಗೆ

ಒಳಗಾದಂಥ ಸಂದರ್ಭದಲ್ಲಿ ಮಾನ್ಯ ಪ್ರಧಾನಿ ಮನಮೋಹನ ಸಿಂಗ್‌ರವರೇ ಖುದ್ದು ಭೇಟಿ ನೀಡಿದರು. ಒಂದು package ಘೋಷಣೆ ಮಾಡಿದರು. ಒಟ್ಟು 11 ಸಾವಿರ ಕೋಟಿ ರೂಪಾಯಿಗಳ package ನಲ್ಲಿ ಕರ್ನಾಟಕಕ್ಕೆ 2689 ಕೋಟಿ ರೂಪಾಯಿಗಳ package ಪ್ರಕಟವಾಯಿತು. ಆದರೆ, ಈ package ಘೋಷಣೆ ನಂತರವೂ ಸಹ ಆತ್ಮಹತ್ಯೆಗಳ ಸಂಖ್ಯೆ ಕಡಿಮೆಯಾಗಲಿಲ್ಲ. ಕರ್ನಾಟಕ ರಾಜ್ಯದಲ್ಲಿ ದೇಶದಲ್ಲಿಯೇ ಮೊದಲ ಬಾರಿಗೆ 25 ಸಾವಿರ ರೂಪಾಯಿಗಳವರೆಗೆ ರೈತನ ಸಾಲ ಮನ್ನಾ ಮಾಡಿ ಸಹಕಾರಿ ಸಂಸ್ಥೆ ಸಾಲ ಮನ್ನಾ ಮಾಡಿದ್ದನ್ನು 1725 ಕೋಟಿ ರೂಪಾಯಿಗಳನ್ನು ಮುನ್ನಾ ಮಾಡಿ 4% ಬಡ್ಡಿಗೆ ಸಹಕಾರಿ ಸಂಘದಲ್ಲಿ ಸಾಲವನ್ನು ಕೊಡುವಂಥ ಒಂದು ಐತಿಹಾಸಿಕ ನಿರ್ಧಾರವನ್ನು ಹಿಂದಿನ ಸಮಿಶ್ರ ಕಾರದಲ್ಲಿ ತೆಗೆದುಕೊಂಡ ಮೇಲೂ ಸಹ ಕರ್ನಾಟಕದಲ್ಲೂ ಸಹ ಈ ಹತ್ಯಹತ್ಯೆ ಪರಕರಣವನ್ನು ತಡೆಯಲಿಕ್ಕೆ ಆಗಲಿಲ್ಲ. ಈ ಬಾರಿ ಅದಂಥ ಅನಾಹುತವೆಂದರೆ, early monsoon ಬಂತು. ಇದರಿಂದ ಒಂದು ಕಡೆ ಆನಂದ ಮತ್ತೊಂದು ಕಡೆ ಬೇಸಾಯದ ಕೆಲಸ ಪ್ರಾರಂಭವಾದಾಗ ತತಕ್ಷಣಕ್ಕೆ ರಸಗೊಬ್ಬರ ಕೊಡುವುದಕ್ಕೆ ಆಗದೇ ಇರುವಂಥದ್ದು. 2 ಚೀಲದಷ್ಟು ಗೊಬ್ಬರ ಅವನಿಗೆ ಅಗತ್ಯವಿದ್ದರೂ ಸಹ ಈಗ ಅನೇಕ ಜನರು ಪ್ರಸ್ತಾಪ ಮಾಡಿದರು. ಯಡಿಯೂರಪ್ಪನವರೇ, ನೀವು ಪ್ರಧಾನಿಯವರನ್ನು ಭೇಟಿ ಮಾಡಿ ಬಂದ ಮೇಲೆ ರಸಗೊಬ್ಬರ ದಾಸ್ತಾನು ಕೊರತೆ ಇಲ್ಲವೆಂದು ಹೇಳಿಕೆ ಕೊಟ್ಟಿದ್ದೀರಿ ಎಂದು. ಹೌದು ನಾನು ಹೇಳಿಕೆ ಕೊಟ್ಟದ್ದೇನೆ. ಒಬ್ಬ ಮುಖ್ಯಮಂತ್ರಿ ಸ್ಥಾನದಲ್ಲಿದ್ದುಕೊಂಡು ರಸಗೊಬ್ಬರದ ಕೊರತೆಯಿದೆಯೆಂದು ಅವತ್ತು ನಾನು ಹೇಳಿದ್ದರೆ. ಈಗೇನು ಗೊಂದಲಗಳಾಗಿವೆ, ಇದಕ್ಕಿಂತ ಹತ್ತು ಪಟ್ಟು ಜಾಸ್ತಿ ಆಗುತ್ತಿತ್ತು. ಒಂದು ಕಡೆ ಪ್ರಧಾನ ಮಂತ್ರಿಯವರು, ಸಂಬಂದಪಟ್ಟಂಥ ಸಚಿವರು ಕೊಟ್ಟಂಥ ಭರವಸೆ, 20ನೇ ತಾರೀಖಿನೊಳಗಾಗಿ ಇಷ್ಟು ಗೊಬ್ಬರವನ್ನು ಸರಬರಾಜು ಮಾಡುತ್ತೇವೆಂದು ಏನು ಹೇಳಿದ್ದರು. ಅದರ ಆಧಾರದ ಮೇಲೆ ರೈತನಿಗೆ ಒಂದು ವಿಶ್ವಾಸ ಮೂಡಿಸುವಂಥದ್ದು ಅಗತ್ಯವಿದೆಯೆಂದು ನಾನು ಈ ಮಾತನ್ನು ಹೇಳಿದ್ದೆ. ನಾನು ವಿನಯದಿಂದ ಒಂದು ಮಾತನ್ನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾವು ಆಹಾರ ಸ್ವಾವಲಂಭಿಗಳಾಗಬೇಕೆನ್ನುವ ಕಾರಣಕ್ಕೋಸ್ಕರ ರೈತರ ಮನೆ ಬಾಗಿಲಿಗೆ ರಸಗೊಬ್ಬರವನ್ನು ಕಡಿಮೆ ಬೆಲೆಗೆ ಕೊಟ್ಟು ಅವನಿಗೆ ಉತ್ತೇಜನ ಮಾಡಿ ಹೆಚ್ಚು hybrid ತಳಿಯನ್ನು ಬೆಳೆಯುವುದಕ್ಕೆ ಹಚ್ಚಿದವರೇ ನಾವು. ಈಗ ರಸಗೊಬ್ಬರ ಇಲ್ಲದಿದ್ದರೆ ಭೂಮಿ ಬರಡಾಗಿದೆ, ಬೆಳೆ ಬೆಳೆಯುವುದಕ್ಕೆ ಆಗದಿರುವಂಥ ವಿಚಿತ್ರವಾದ ಸನ್ನಿವೇಶ ಇರುವಂಥ ಸಂದರ್ಭದಲ್ಲಿ ಅಗತ್ಯಕ್ಕೆ ತಕ್ಕಂತೆ ರಸಗೊಬ್ಬರವನ್ನು ಕೊಡುವ

ಕಾರಣ ರೈತ ಆತಂಕಕ್ಕೆ ಒಳಗಾಗಿರುವಂಥದ್ದು ಮತ್ತು ಇದರಿಂದ ನನಗೆ ನೋವು ತಂದಿರುವಂಥ ಸಂಗತಿಯಾಗಿದೆ. ಮಾನ್ಯ ಕುಮಾರಸ್ವಾಮಿಯವರು ಮಾತನಾಡಬೇಕಾದರೆ–ನೀವು ಸಮಸ್ಯೆ ನಿವಾರಣೆ ಬಿಟ್ಟು ಕೇಂದ್ರದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದೀರಾ, ಇದು ಆಡಳಿತ ಪಕ್ಷ, ವಿರೋಧ ಪಕ್ಷದ ದ್ವಿಪಾತ್ರವನ್ನು ನೀವೇ ಅನುಸರಿಸುತ್ತಿದ್ದೀರಾ, ಸಮನ್ವಯ ಹಾದಿ ನಮ್ಮದು ಎಂದು ಹೇಳಿದ್ದೀರಾ, ಸಂಘರ್ಷಕ್ಕೆ ಎಡೆಯಿಲ್ಲವೆಂದು ಹೇಳಿದ್ದೀರಾ, ಆದರೆ, ಇವತ್ತು ನೀವು ಈ ನಿಲುವನ್ನು ತೆಗೆದುಕೊಳ್ಳುತ್ತಿದ್ದೀರಾ ಎಂದು ಹೀಗೆ ಅನೇಕ ಸಲಹೆಗಳನ್ನು ಕಟ್ಟಿದ್ದಾರೆ. ಅಧಿಕಾರದ ಮದ ತಲೆಗೇರಿದರೆ ನಿಮ್ಮನ್ನು ಈ ಸ್ಥಾನದಲ್ಲಿ ಕೂರಿಸುವರೆ? ತಕ್ಕ ಪಾಠ ಕಲಿಸುತ್ತಾರೆ. ಚಕ್ರ ತಿರುಗುತ್ತಿದೆ, ಮುಖ್ಯಮಂತ್ರಿಗಳೇ ಅಧಿಕಾರ ಶಾಶ್ವತವಲ್ಲ ಎಂದು ಮತ್ತೊಂದು ಕಿವಿಮಾತನ್ನು ಅವರು ಹೇಳಿದ್ದಾರೆ. ರೈತರ ಸಮಾಧಿ ಮೇಲೆ ನಿಂತು ಸೊಬಗು ಸವಿಯುತ್ತೀರಾ? ಎಂಬ ಮತ್ತೊಂದು ಮಾತನ್ನು ಮಾನ್ಯ ಕುಮಾರಸ್ವಾಮಿಯವರು ಹೇಳಿದ್ದಾರೆ. ಗಾಯಾಳು ಪುಟ್ಟಪ್ಪನಿಗೆ ನೆರವು ನೀಡುವ ವಿಚಾರದಲ್ಲಿ ನಿಮಗೆ ಮನುಷ್ಯತ್ವವಿದೆಯೇ ಎಂದು ಕುಮಾರಸ್ವಾಮಿಯವರು ಕೇಳಿದ್ದಾರೆ. ಗೋಲಿಬಾರ್‌ನಿಂದ ಪುಟ್ಟಪ್ಪನಿಗೆ ತೊಂದರೆಯಾದಾಗ ನಾನು ಹುಬ್ಬಳ್ಳಿ KIMS ಆಸ್ಪತ್ರೆಗೆ ಹೋಗಿ ಎಲ್ಲಾ ಗಾಯಾಳುಗಳನ್ನು ಭೇಟಿ ಮಾಡಿ ಬಂದಿದ್ದೇನೆ. ಇಲ್ಲಿಯ ಸಂಜಯಗಾಂಧಿ ಆಸ್ಪತ್ರೆಗೆ ಪುಟ್ಟಪ್ಪ ಬಂದಮೇಲೆ ನಾನು ಮತ್ತು ಮಾನ್ಯ ಉದಾಸಿಯವರು ಹೋಗಿ ಅವನಿಗೆ ಸಾಂತ್ವಾನ ಹೇಳಿ ಆ ಮೂರು ಮಕ್ಕಳ ಹೆಸರನಲ್ಲಿ ಸರ್ಕಾರದಿಂದಲ್ಲ. ದಾನಿಗಳಿಂದ, ಸ್ನೇಹಿತರಿಂದ ಒಂದೊಂದು ಲಕ್ಷ ರೂಪಾಯಿಗಳ deposit ಇಡಿಸಿ ಅವರ ಶಿಕ್ಷಣದ ಜವಾಬ್ದಾರಿಯನ್ನು ಹೊರುತ್ತೇವೆ. ನೀನು ಅತಂಕಕ್ಕೊಳಗಾಗುವ ಅಗತ್ಯವಿಲ್ಲವೆಂದು ಭರವಸೆಯನ್ನು ಕೊಟ್ಟು ಬಂದಿದ್ದೇನೆ. ನಾನು ಮಾತನಾಡಿ ಬಂದಿದ್ದೇನೆ. ನಾನು ಕಾವಿ, ಹಸಿರು ಟವಲ್ ಹಾಕಿದ ಬಗ್ಗೆ, ರೈತನ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕಾರ ಮಾಡಿದ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳನ್ನು ನಾನು ಕೇಳಿದ್ದೇನೆ. ಬಹುಶಃ ಈ ನಾಡಿನ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ನಾನು ಅವರು ನೆಮ್ಮದಿಯಿಂದ ಬದುಕುವುದಕ್ಕೆ ಬೇಕಾದ ಕೆಲಸ ಮಾಡುವುದಕ್ಕೆ ಬದ್ಧನಿದ್ದೇನೆ. ರೈತರು ನಡೆದಾಡುವ ದೇವರೆಂದು ನಾನಂದುಕೊಂಡಿದ್ದೇನೆ. ರೈತ ಕುಟುಂಬವನ್ನು ರಕ್ಷಿಸುವಂಥ ಗುರುತರ ಜವಾಬ್ದಾರಿ ನಮ್ಮ ಸರ್ಕಾರದ ಮೇಲಿದೆ. ಭಗವಂತನ ಹೆಸರಿನ ಮೇಲೆ ಮತ್ತು ನಡೆದಾಡುವಂಥ ದೇವರ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕರಿಸಿರುವುದು ನಿಜ. ಈ ರೈತ ನೇಗಿಲ ಯೋಗಿ, ಅನ್ನದಾತ. ನಾನು ನನ್ನ ಜೀವನದಲ್ಲಿ ರೈತರನ್ನು ನಡೆದಾಡುವ ದೇವರೆಂದು

ತಿಳಿದುಕೊಂಡಿದ್ದೇನೆ. ಅವನು ನೆಮ್ಮದಿಯ ಜೀವನಕ್ಕೆ ನಾನು, ನಮ್ಮ ಸರ್ಕಾರ ಬದ್ಧರಾಗಿದ್ದೇವೆ. ಒಬ್ಬರು ದೊಡ್ಡವರು ಹೇಳಿದಂಥ ಮಾತಿಗೆ, ನಮ್ಮ ರೈತನನ್ನು ನೋಡಿದಾಗ ಈ ಪರಿಸ್ಥಿತಿ ಅರ್ಥವಾಗುತ್ತದೆ. ಉಣ್ಣುವವನು ಉಣ್ಣುತ್ತಲೇ ಇದ್ದಾನೆ. ದುಡಿಯುವವನು ದುಡಿಯುತ್ತಲೇ ಇದ್ದಾನೆ. ಉಣ್ಣುವ ವರ್ಗ ಒಂದಾದರೆ, ದುಡಿಯುವ ವರ್ಗ ಒಂದು. ಉಣ್ಣುವವನು ದುಡಿಯುವಂತಿಲ್ಲ, ದುಡಿಯುವವನು ಉಣ್ಣುವಂತಿಲ್ಲ. ಅಂದರೆ, ಈ ದೇಶಕ್ಕೆ ಅನ್ನ ಕೊಡುವಂಥ ಅನ್ನದಾತ ರೈತನ ಪರಿಸ್ಥಿತಿ ಏನಾಗಿದೆಯೆಂಬುದು ಇದರಿಂದ ಬಹಳ ಸ್ಪಷ್ಟವಾಗಿ ಅರ್ಥವಾಗುತ್ತದೆ. ಒಂದು ಮಾತನ್ನು ಪದೇ ಪದೇ ನಮ್ಮ ಕಾಂಗ್ರೆಸ್ ಮತ್ತು ಜೆಡಿ(ಎಸ್)ನ ಸ್ನೇಹಿತರು ಹೇಳಿದ್ದಾರೆ. ಬಹಶಃ 4 ದಶಕಗಳ ಕಾಲ ಆಡಳಿತ ನಡೆಸಿದ ಪ್ರತಿಪಕ್ಷವಾದ ಕಾಂಗ್ರೆಸ್, ಸುಮಾರು 10–12 ವರ್ಷಗಳ ಕಾಲ ಅಧಿಕಾರ ನಡೆಸಿದ ಎರಡನೇ ಪ್ರತಿಪಕ್ಷ (ಜೆಡಿ(ಎಸ್) ಇವರಿಬ್ಬರ ಮಧ್ಯೆ ನಮ್ಮದು ಅನನುಭವಿ ಪಕ್ಷವೆಂದು ತಾವು ಏನು ನಮ್ಮನ್ನು ಬಣ್ಣಿಸಿದ್ದೀರಿ. ಈ ಅನುನುಭವಿ ಪಕ್ಷವೇ ಜನತೆಯ ಆಶೀರ್ವಾದದಿಂದ ಒಂದು ಸರ್ಕಾರವನ್ನು ರಚನೆ ಮಾಡುವ ಪರಿಸ್ಥಿತಿಗೆ ನಾವು ಬಂದಿದ್ದೇವೆ, ನಾವು ಅನನುಭವಿಗಳು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, 4 ದಶಕಗಳ ಕಾಲ ಅಧಿಕಾರ ನಡೆಸಿದ ನಮ್ಮ ಕಾಂಗ್ರೆಸ್ ಸ್ನೇಹಿತರು 10–12 ವರ್ಷಗಳ ಕಾಲ ಜೆಡಿ(ಎಸ್) ನವರು ನಾವೆಲ್ಲ ಅವರ ಜೊತೆ ಸೇರಿ ಆಡಳಿತ ನಡೆಸಿದ್ದೇವು. ಆ ಸಂದರ್ಭದಲ್ಲಿ ವಿಶೇಷವಾಗಿ ನಮ್ಮ ಕಾಂಗ್ರೆಸ್‌ನ ಸ್ನೇಹಿತರು ಈ ನಾಡಿಗೆ ಅನ್ನ ಕೊಟ್ಟಂಥ ಅನ್ನದಾತ, ನೀವು ಒಂದು B-Form ತಂದರೆ ಸಾಕು MP, MLA ಆಗುವಂಥ ಕಾಲವಿತ್ತಲ್ಲ, ನಿಮಗೆ ಅಶೀರ್ವಾದ ಮಾಡುತ್ತಿದ್ದರಲ್ಲ, ಅವರನ್ನು ನೀವು ಸರಿಯಾದ ರೀತಿಯಲ್ಲಿ ನೋಡಿಕೊಂಡದ್ದರೆ ಇವತ್ತು ಈ ಸದನದಲ್ಲಿ ಗೋಲಿಬಾರ ಬಗ್ಗೆ, ರಸಗೊಬ್ಬರ ಸಿಗಲಿಲ್ಲವೆಂದು ಚರ್ಚೆ ಮಾಡುವ ಪ್ರಸಂಗಗಳೇ ಬರುತ್ತಿರಲಿಲ್ಲವೆಂದು ನಾನಂದುಕೊಂಡಿದ್ದೇನೆ. ನನ್ನನ್ನು ಅನನುಭವಿ ಎಂದು ನೀವೇನು ಹೇಳಿದ್ದೀರಿ. ಅನುಭವವಿದ್ದಂತಹ ನೀವು ಮಾಡಿದ್ದೇನು? ನೀವು ಆಡಳಿತ ನಡೆಸುವ ಸಂದರ್ಭದಲ್ಲಿ ಗೋಲಿಬಾರ ಆಗಲಿಲ್ಲವೇ? ನೀವು ಆಡಳಿತ ನಡೆಸುವ ಕಾಲದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳಲಿಲ್ಲವೇ? ಹಾಸನದಲ್ಲಿ ಅತಿ ಹೆಚ್ಚು ಆತ್ಮಹತ್ಯೆ ಮಾಡಿಕೊಂಡರಲ್ಲ ಅದಕ್ಕೆ ಕುಮಾರಸ್ವಾಮಿಯವರು, ರೇವಣ್ಣನವರು ಜವಾಬ್ದಾರಿಯೆಂದು ಹೇಳೂತ್ತೇನೆಯೇ? ಹೇಳಬೇಕೆ? ಹೇಳುವುದು ಸರಿಯೇ? ಶಿವಮೊಗ್ಗದಲ್ಲಿ ನಡೆದಿರುವುದನ್ನೂ ಹೇಳುತ್ತೇನೆ. ಅದರಂತೆ ಗುಲ್ಬರ್ಗಾದಲ್ಲಿ ಈಗಲೂ ರೈತರ ಆತ್ಮಹತ್ಯೆ ನಡೆಯುತ್ತಿದೆಯಲ್ಲ, ಅದಕ್ಕೆ ಮಲ್ಲಿಕಾರ್ಜುನ ಖರ್ಗೆಯವರು, ಧರ್ಮಸಿಂಗ್ ರವರು ಹೊಣೆಯೆಂದು ನಾನು ಹೇಳಬೇಕೆ? ನಾನು ಪದೇ ಹೇಳುವುದಿಷ್ಟೇ, ನಮ್ಮ

ಕಾಂಗ್ರೆಸ್‌ನ ಸ್ನೇಹಿತರು ಏಕಮೇವಾದ್ವಿತೀಯ ರೀತಿ ಅಧಿಕಾರವೆಂದರೆ ನಮ್ಮದೇ ಬೇರೆ ಯಾರೂ ಇಲ್ಲಿಗೆ ಬರುವುದಕ್ಕೆ ಸಾಧ್ಯವಿಲ್ಲ. ಎನ್ನುವ ಸ್ಥಿತಿ ನಿಮ್ಮದು. ಮತ್ತೆ, ನಮ್ಮ ಜೆಡಿ(ಎಸ್) ನ ಸ್ನೇಹಿತರು ಈ ಬಾರಿ ಯಾವ ಸರ್ಕಾರವಿರಬೇಕೆಂದು, ನಮ್ಮ ಕಪಿ ಮುಷ್ಟಿಯಲ್ಲಿರಬೇಕೆಂದದೇನು ಚಿಂತನೆ ಮಾಡಿದ್ದರು, ಅದಕ್ಕೆ ಅವಕಾಶ ಸಿಗಲಿಲ್ಲವೆಂದು ನಿರಾಶೆಯಾದಂಥ ನೀವಿಬ್ಬರಿಗೆ ಅಧಿಕಾರ ಹೋದಾಗ ಇವತ್ತು ಹೃದಯವೈಶಾಲ್ಯತೆ ಇರಬೇಕಾಗಿತ್ತು. ಅಧಿಕಾರ ನಡೆಸಿದವರಿಗೆ ನಾವು ಅಧಿಕಾರದಲ್ಲಿದ್ದಾಗ ಏನು ಮಾಡಿದೆವು ಎನ್ನುವ ಭಾವನೆಯನ್ನು ಮರೆತು, ಈ ಘಟನೆಗಳು ನಡೆದಾಗ ಇವತ್ತಿನವರೆಗೆ ಪ್ರತಿಕ್ಷಣದಲ್ಲಿ ನೀವು ಕಾರುತ್ತಿವುದು ವಿಷ. ಯಡಿಯೂರಪ್ಪ ಮತ್ತು ಬಿ.ಜೆ.ಪಿ ಮೇಲೆ ಜನರು ಏನು ಆಶೀರ್ವಾದ ಇಟ್ಟಿದ್ದಾರೆ. ಇದಕ್ಕೆ ಚ್ಯುತಿ ಬರದ ರೀತಿಯಲ್ಲಿ ನಡೆದುಕೊಳ್ಳುವುದು ನಮ್ಮ ಜವಾಬ್ದಾರಿಯಿದೆ. ಮಾನ್ಯ ಜೆಡಿ(ಎಸ್) ನಾಯಕರು ಯಡಿಯೂರಪ್ಪನವರೆ, ಅಧಿಕಾರ ಶಾಶ್ವತವಲ್ಲವೆಂದು ಹೇಳಿದ್ದಾರೆ. ನಿಮಗೆಲ್ಲರಿಗಿಂತಲೂ ಚೆನ್ನಾಗಿ ನನಗೆ ಗೊತ್ತಿದೆ. 7 ದಿನಗಳಲ್ಲಿಯೇ ಅಧಿಕಾರ ಬಿಟ್ಟುಹೋದವನು ನಾನು. ಅಧಿಕಾರ ಶಾಶ್ವತವಲ್ಲವೆನ್ನುವುದಕ್ಕೆ ಅದಕ್ಕಿಂತ ಉದಾರಣೆ ಬೇರೆ ಬೇಕಾಗಿಲ್ಲ. ಆ ದಿನ ನಾನು ಮನಸ್ಸು ಮಾಡಿದ್ದರೆ, ಷರತ್ತುಗಳಿಗೊಪ್ಪಿದರೆ ನಾನು ಮುಖ್ಯಮಂತ್ರಿಯಾಗಿ ಮುಂದುವರಿಯಬಹುದಾಗಿತ್ತು. ಆದರೆ, ಈ ನಾಡಿನ ಜನರ ಹಿತ ಮುಖ್ಯವೆಂದು ಜನತಾ ನ್ಯಾಯಾಲಯದ ಮುಂದೆ ಹೋದವನು ನಾನು.

ಶ್ರೀ ಹೆಚ್.ಡಿ. ರೇವಣ್ಣ: 2 ನಿಮಿಷ ಅವಕಾಶ ಕೊಡಿ

ಅಧ್ಯಕ್ಷರು: ರೇವಣ್ಣನವರೆ, ಮುಖ್ಯಮಂತ್ರಿಯವರು yield ಆಗಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಅವರು ಹೇಳೀದಕ್ಕೆ ನಾನು clarification ಕೊಡಬೇಕು. ಇದೆಲ್ಲ ಮುಗಿದಹೋಗಿರುವ ಕಥೆಯನ್ನು ಪ್ರಸ್ತಾಪ ಮಾಡಬೇಕೆಂದರೆ ಒಂದು ದಿವಸವೆಲ್ಲಾ ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಸನ್ಮಾನ್ಯ ಈಶ್ವರಪ್ಪನವರು ಇಲ್ಲಿ ಕುಳಿತಿದ್ದಾರೆ, ನೀವು ಅಲ್ಲಿ ಸಭಾಧ್ಯಕ್ಷರ ಸ್ಥಾನದಲ್ಲಿ ಕುಳಿತಿದ್ದೀರಿ. ಷರತ್ತಿನ ಬಗ್ಗೆ ಕೊನೆಯಲ್ಲಿ ಯಾವ ರೀತಿ ಸಭಾಧ್ಯಕ್ಷರ ಛೇಂಬರ್‌ನಲ್ಲಿ ಈಶ್ವರಪ್ಪನವರು, ತಾವು ಅಂದು ಏನು ಷರತ್ತಿಗೆ ಸೈನ್ ಹಾಕುತ್ತೇವೆಂದು ಹೇಳಿದ್ದನ್ನು ಜ್ಞಾಪಿಸಿಕೊಂಡರೆ ಸಾಕು. ಅಧಿಕಾರಕ್ಕೆ ಯಾವ ರೀತಿ ಹೋರಾಡುತ್ತಿದ್ದಾರೆನ್ನುವುದನ್ನು ಇವತ್ತು ಚರ್ಚೆ ಮಾಡಬೇಕಾಗಿಲ್ಲ.

ಅಧ್ಯಕ್ಷರು: ಮುಖ್ಯಮಂತ್ರಿಯವರು Yield ಆಗಿಲ್ಲ, ನೀವು ಆಮೇಲೆ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಕುಮಾರಸ್ವಾಮಿಯವರು ಮಾತನಾಡುವ ಕಾಲದಲ್ಲಿ ಈ ಕೆಲವು ಮಾತುಗಳನ್ನು ಅವರು ಹೇಳದೇ ಇದ್ದಿದ್ದರೆ ನಾನು ಈ ವಿಷಯ ಪ್ರಸ್ತಾಪ ಮಾಡುತ್ತಿರಲಿಲ್ಲ. ಯಡಿಯೂರಪ್ಪನವರೆ, ಅಧಿಕಾರ ಶಾಶ್ವತವಲ್ಲ. ಅಧಿಕಾರದ ಮದದಿಂದ ಮೆರೆಯಬೇಡಿ ಎಂದು ಹೇಳದೇ ಇದ್ದಿದ್ದರೆ ನಾನು ಈ ಉತ್ತರವನ್ನು ಕೊಡುವ ಪ್ರಸಂಗವೇ ಬರುತ್ತಿರಲಿಲ್ಲ. ಆದರೆ, ಇಲ್ಲಿ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದುದು ನನ್ನ ಕರ್ತವ್ಯ. ನಾನು ಅಧಿಕಾರಕ್ಕೆ ಬಂದಿರುವುದು ಅದರ ಮದದಿಂದ ಕೊಬ್ಬಿ ಮೆರೆಯುವುದಕ್ಕಲ್ಲ. ನನಗೆ ಸಿಕ್ಕಿರುವಂಥ ಅಧಿಕಾರವನ್ನು ಜನತೆ ಮೆಚ್ಚುವ ರೀತಿಯಲ್ಲಿ ಬಳಸಬೇಕೆನ್ನುವುದು ನನ್ನ ಅಪೇಕ್ಷೆ. ಅದೇ ನನ್ನ ಆಸೆ. ಯಡಿಯೂರಪ್ಪನವರೆ, ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸಬೇಡಿ ಎಂದು ಅನೇಕ ಸಾರಿ ನಮ್ಮ ಸ್ನೇಹಿತರು ಹೇಳಿದ್ದರು. ನಾನು postman ರೀತಿ ಕೆಲಸ ಮಾಡುತ್ತಿದ್ದೇನೆಂದು ಹೇಳಿದ್ದಕ್ಕೆ ಆ ರೀತಿ ಹೇಳಬೇಡಿ ಎಂದು ಆಕ್ಷೇಪ ವ್ಯಕ್ತಪಡಿಸಿದ್ದರು. ಹಸಿರು ಶಾಲಿನ ಬಗ್ಗೆ ಟೀಕೆ ಮಾಡಿದರು. ರೈತರ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕಾರ ಮಾಡಿದೆ. ಟೀಕೆ ಮಾಡಿದಿರಿ. ಆದರೆ, ಒಬ್ಬ ಮುಖ್ಯಮಂತ್ರಿ ಅಧಿಕಾರಕ್ಕೆ ಬಂದ 48 ಗಂಟೆಯೊಳಗೆ ನನ್ನದೇನೂ ತಪ್ಪಿಲ್ಲದಿದ್ದರೂ ಸಹ ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ರಸಗೊಬ್ಬರದ ವಿಷಯದ ಬಗ್ಗೆ ಮನವಿಯನ್ನು ಮಾಡಿಕೊಂಡು, ರಸಗೊಬ್ಬರ ಕಳಹಿಸಿಕೊಡಿ ಎಂದು ವಿನಂತಿ ಮಾಡಿ ಬಂದೆ, ಪತ್ರ ಬರೆದೆ. ಸಚಿವ ಸಂಪುಟದ ಸಹೋದ್ಯೋಗಿಗಳೊಡನೆ ಹೋಗಿ ಅವರನ್ನು ಕಂಡು ಭೇಟಿ ಮಾಡಿ ಬಂದೆ. ರಸಗೊಬ್ಬರದ ಸಚಿವರನ್ನು ಭೇಟಿ ಮಾಡಿ ಬಂದೆ. ಆದರೂ ಕೂಡ ಕೇಂದ್ರ ಸರ್ಕಾರ ಸ್ಪಂದಿಸಲಿಲ್ಲ. ಈ ರಾಜ್ಯದಲ್ಲಿ ರಸಗೊಬ್ಬರದ ಕ್ಷೋಭೆ ಇದೆಯೆನ್ನುವುದು ಕೇಂದ್ರ ಸರ್ಕಾರದ ಗಮನಕ್ಕೆ ಬರಲಿಲ್ಲವೇ? ಈ ದೇಶದ ಯಾವ್ಯಾವ ರಾಜ್ಯಗಳಲ್ಲಿ ಏನೇನು ಸಮಸ್ಯೆಗಳಿವೆ ಎನ್ನುವುದು ಅವರಿಗೆ ಗೊತ್ತಿಲ್ಲವೇ? ಅವರಿಗೆ ಎಲ್ಲವೂ ಗೊತ್ತಿದೆ. ಅದರೆ, ದುಃಖ ತರುವುದೇನೆಂದರೆ, ನಾನು ಮುಖ್ಯಮಂತ್ರಿಯಾದ 48 ಗಂಟೆಯೊಳಗಾಗಿ ಪ್ರಧಾನ ಮಂತ್ರಿಯವರನ್ನು coutesy call ಮಾಡಲು ಹೋದಾಗ ರಾಜ್ಯದ ರಸಗೊಬ್ಬರದ ಪರಿಸ್ಥಿತಿ ಬಗ್ಗೆ, early monsoon ಬಗ್ಗೆ ಎಲ್ಲ ವಿವರವನ್ನೂ ಕೊಡುವ ಪ್ರಯತ್ನವನ್ನು ನಾನು ಮಾಡಿದೆ. ಇವತ್ತು ಪ್ರತಿಪಕ್ಷ ನಾಯಕರಾದ ತಾವು ನನ್ನ ಮೇಲೆ ಆರೋಪ ಮಾಡುತ್ತಿದ್ದೀರಿ. ನಾನು ನಮ್ಮ ಕಾಂಗ್ರೆಸ್‌ನ ಸ್ನೇಹಿತರನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ,

Vol. 9, I, '47

ಯಾರಾದರೊಬ್ಬರು ನೀವು ಕೇಂದ್ರ ಸರ್ಕಾರದ ಜೊತೆ ಮಾತನಾಡಲು ಬೇರೆ ಬೇರೆ ಕೆಲಸಕ್ಕೆ ಹೋಗುತ್ತೀರಿ. ನಾನೂ ನನ್ನ ಪಕ್ಷದ ಕೆಲಸಕ್ಕೆ ಹೋಗುತ್ತೇನೆ. ನೀವೂ ಹೋಗುತ್ತೀರಿ. ಅದರೆ, ರಸಗೊಬ್ಬರದ ಕೊರತೆಯಿದೆ ಎನ್ನುವ ಮಾತನ್ನು ನಿಮ್ಮ ನಾಯಕರಿಗೆ ತಿಳಿಸಿ, ಸ್ವಲ್ಪ ಸಹಕಾರ ಕೊಡಬೇಕು, ಇಲ್ಲದಿದ್ದರೆ ರೈತರು ಬೀದಿ ಪಾಲಾಗುತ್ತಾರೆನ್ನುವ ಮಾತನ್ನು ನೀವು ಹೇಳುತ್ತೀರೆಂದು ನಾನು ನಿರೀಕ್ಷೆ ಮಾಡಿದ್ದೆ. ರಾಜ್ಯದ ಹಿತ ಕಾಯ್ದುವುದು ಕೇವಲ ಆಡಳಿತ ಪಕ್ಷಕ್ಕೆ ಮಾತ್ರವಲ್ಲ, ವಿರೋಧ ಪಕ್ಷದ ಮೇಲೆಯೂ ಜವಾಬ್ದಾರಿ ಇದೆ ಎನ್ನುವುದಕ್ಕೋಸ್ಕರ ನಾನು ಅತ್ಯಂತ ವಿನಯದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕೆ ಎಷ್ಟು ಜವಾಬ್ದಾರಿ ಇದೆಯೋ ವಿರೋಧ ಪಕ್ಷಕ್ಕೆ ಅದಕ್ಕಿಂತ ಹೆಚ್ಚು ಜವಾಬ್ದಾರಿ ಇದೆ ಎಂದು ನಾನು ತಿಳಿದಿರುವವನು. ನೀವೇನು ಟೀಕೆ–ಟಿಪ್ಪಣಿ ಮಾಡುತ್ತೀರೋ, ಅದು ನಿಮ್ಮ ಕರ್ತವ್ಯ, ನೀವು ಮಾಡಬೇಕು. ನಾನು ಅದರಿಂದ ಯಾವುದೇ ವಿಚಲಿತನಾಗಿಲ್ಲ. ತಾವು ಹೇಳುವ ಸಲಹೆ, ಕೊಟ್ಟಿರುವ ಸಲಹೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಲೇಬೇಕು. ಅದಕ್ಕಾಗಿಯೇ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರತಿಪಕ್ಷಕ್ಕೆ ಇಷ್ಟು ಮಾನ್ಯತೆ ಇರುವುದು ಇದೆ. ಆದರೆ, ಆ ಕೆಲಸ ನಿಮ್ಮಿಂದಾಗಲಿಲ್ಲ. ಒಂದು ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಮಲ್ಲಿಕಾರ್ಜುನ ಖರ್ಗೆಯವರಿಗೆ, ಕುಮಾರಸ್ವಾಮಿಯರವರಿಗೆ ಹೇಳುತ್ತೇನೆ. ಇವತ್ತೇ ನಾನು 500 ಕೋಟಿ ರೂ.ಗಳ draft ಅನ್ನು ನಿಮ್ಮ ಕೈಗೆ ಕೊಡುತ್ತೇನೆ. ನೀವು ಎಲ್ಲಿಂದ ರಸಗೊಬ್ಬರ ತರುತ್ತೀರೋ ತನ್ನಿ, We are ready. ಏಕೆಂದರೆ, ಈ ಮಾತಿನ ವೈಖರಿ, ಚರ್ಚೆಯ ವೈಖರಿ ನೋಡಿದಾಗ, ನನ್ನನ್ನು, ನಮ್ಮ ಸರ್ಕಾರವನ್ನು ನೀವು ಯಾವಾಗ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬೇಕು? ಸಕಾಲಕ್ಕೆ ರಸಗೊಬ್ಬರ ಬಂದು ಅದನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡದೆ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದೇವೆಂದರೆ ನಾನು ಆ ಜವಾಬ್ದಾರಿಯನ್ನು ಹೊರುವುದಕ್ಕೆ ಸಿದ್ಧನಿದ್ದೇನೆ. ಆದರೆ, ಯಾವುದೇ ತಪ್ಪಿಲ್ಲದೆ ಇವತ್ತು ಈ ಮಾತುಗಳನ್ನು ತಾವು ಹೇಳುತ್ತಿದ್ದೀರಿ. ಗೊಬ್ಬರ ತಯಾರು ಮಾಡುವ ಮಂತ್ರದಂಡ ನನ್ನ ಹತ್ತಿರವಿಲ್ಲ. ಈ ಜವಾಬ್ದಾರಿ ಸರ್ಕಾರದ್ದು ಇದೆ, ಕೇಂದ್ರ ಸರ್ಕಾರದ್ದೂ ಇದೆ ಎಂದು ನಾನು ಅತ್ಯಂತ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ನಾನೂ ಎಲ್ಲಾ ಪ್ರಯತ್ನ ಮಾಡಿದೆ. ನಮ್ಮ ಸರ್ಕಾರದಿಂದ ಬೇರೆ ಬೇರೆ ರಾಜ್ಯಗಳನ್ನೂ ಸಂಪರ್ಕ ಮಾಡುವಂಥ ಪ್ರಯತ್ನ ಮಾಡಿದೆ. ಮುಂದೆ ಯಾವ ರೀತಿ ಹಣವನ್ನು adjust ಮಾಡಿಕೊಳ್ಳಬೇಕೋ ಎಂಬುದನ್ನು ಅನಂತರ ನೋಡೋಣ. ಏಕೆಂದರೆ, ಈಗ ಮಳೆ ಬಿದ್ದರೆ, ಹೆಚ್ಚು ಬೇಡಿಕೆ ಇದೆ. ಆ ರೀತಿ ಮುಂದೆ

ಗೊಂದಲವಾಗಬಾರದೆಂದಿದ್ದರೆ ನನ್ನ ಎಲ್ಲ ಅಭಿವೃದ್ಧಿ ಕಾರ್ಯವನ್ನು ನಿಲ್ಲಿಸಿ ರೈತನ ಉಳಿವಿಗೆ ಸರ್ಕಾರದ ಖಜಾನೆಯಿಂದ ನಾಳೆಯೇ 500 ಕೋಟಿ ರೂಗಳ draft ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಎಲ್ಲಿ ರಸಗೊಬ್ಬರ ಸಿಗುತ್ತದೆಂದು ಹೇಳಿ? ಎಲ್ಲಿ ಅವಕಾಶ ಇದೆ? ಎಲ್ಲಿಂದ ತರಬಹುದು ಎಂದು ಸಲಹೆ ಕೊಟ್ಟರೆ ನಾನು ಮುಕ್ತವಾಗಿ ನಿಮ್ಮ ಜೊತೆ ಚರ್ಚೆ ಮಾಡುವುದಕ್ಕೆ ರೆಡಿ ಇದ್ದೇನೆ. ನಾನು ಈಗೇನು ಭರವಸೆಯನ್ನು ಕೊಟ್ಟಿದ್ದೇನೆ, ಅದನ್ನು ನಡೆಸಿಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.ಮಾನ್ಯ ಎಸ್.ಎಂ. ಕೃಷ್ಣರವರ ಕಾಲದಲ್ಲಿ ಬರಗಾಲವಿತ್ತು. ಅಂದೂ ಆತ್ಮಹತ್ಯೆ ಪ್ರಕರಣಗಳಾದವು. ನಾನು ಅಂದು ಆ ಪ್ರಶ್ನೆ ಕೇಳಲಿಲ್ಲ. ಇವತ್ತು ನೀವು ಕೆಣಕಿದ ಮೇಲೆ ಈ ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಮುಖ್ಯಮಂತ್ರಿಯಾಗಿ ಆತ್ಮಹತ್ಯೆ ಮಾಡಿಕೊಂಡವರ ಮನೆಗೆ ಹೋಗಿ ಬಂದೆ. ಇನ್ನೊಬ್ಬರು ಆತ್ಮಹತ್ಯೆ ಮಾಡಿಕೊಂಡವರ ಮನೆಗೆ ಹೋದಾಗ ಆಗ ಅಲ್ಲಿ ಹಾರ ಹಾಕಿದ ರೀತಿ ಸರಿಯಿಲ್ಲವೆಂದರು. O.K. ಆದರೆ, ಹಿಂದಿನ ಮುಖ್ಯಮಂತ್ರಿಗಳು ಎಷ್ಟು ಜನ ಆತ್ಮಹತ್ಯೆ ಮಾಡಿಕೊಂಡವರ ಮನೆಗೆ ಹೋಗಿ ಸಾಂತ್ವನ ಹೇಳಿ ಬಂದಿದ್ದಾರೆ? ಕುಮಾರಸ್ವಾಮಿಯವರೆ, ನೀವು ಮಾಡಿಲ್ಲವೆಂದು ನಾನು ಹೇಳುತ್ತಿಲ್ಲ. ನಾನು ನಮ್ಮ ಸ್ನೇಹಿತರನ್ನು ಪ್ರಶ್ನೆ ಕೇಳುತ್ತಿದ್ದೇನೆ. ನಾನು ಏನೂ ಹೇಳುವುದಿಲ್ಲ. ನಾನೇಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಬರಗಾಲವಿದ್ದಾಗಲೂ ಆತ್ಮಹತ್ಯೆ ನಡೆಯುತ್ತಿತ್ತು. ಚೆನ್ನಾಗಿ ಮಳೆಯಾಗಿ, ರಸಗೊಬ್ಬರವನ್ನು ಸಮಯಕ್ಕೆ ಸರಿಯಾಗಿ ವಿತರಣೆ ಮಾಡಿದಾಗಲೂ ಆತ್ಮಹತ್ಯೆ ಪ್ರಕರಣಗಳು ನಡೆದಿವೆ. ಅಂದರೆ, ಇದಕ್ಕೆ ವಿಶೇಷವಾದಂಥ ಕಾರಣವಿದೆ. ಆ ಕಾರಣವನ್ನು ಹುಡುಕಬೇಕು. ನೀವು ಜಂಟಿ ಸದನ ಸಮಿತಿಯ ಪ್ರಸ್ತಾಪ ಮಾಡಿದ್ದೀರಿ. ಇದರಿಂದೇನು ಪ್ರಯೋಜನವೆಂಬುದು ನಮಗಿಂತ ಅಧಿಕಾರದಲ್ಲಿದ್ದಂಥ ನಿಮಗೇ ಹೆಚ್ಚಾಗಿ ಗೊತ್ತಿದೆ. ಅಂದು ನ್ಯಾಯಂಗ ತನಿಖೆಯಾಗಬೇಕೆಂದಿರಿ. ಇಲ್ಲಿ ಚರ್ಚೆಯಾಗುವುದಕ್ಕೆ ಮುಂಚೆ ಒಂದು ದಿವಸವೂ ತಡ ಮಾಡಬಾರದೆಂದು ನ್ಯಾಯಾಂಗ ತನಿಖೆಗೆ ಆದೇಶ ಮಾಡಿದ ಮೇಲೆ ಈಗ ಜಂಟಿ ಸದನ ಸಮಿತಿ ರಚಿಸಬೇಕೆಂದು ಕೇಳುತ್ತಿದ್ದೀರಿ. ನ್ಯಾಯಾಂಗ ತನಿಖೆಗೆ ಆದೇಶ ಮಾಡಿರುವುದೇ ಸತ್ಯ ಹೊರಬರಬೇಕೆಂದು, ಸತ್ಯಾಂಶವನ್ನು ಮುಚ್ಚಿಡಬೇಕೆಂದಿದ್ದರೆ, ನಾನಾಗಿಯೇ ನ್ಯಾಯಾಂಗ ತನಿಖೆಗೆ ಆದೇಶ ಮಾಡುತ್ತಿರಲಿಲ್ಲ. ಕರ್ನಾಟಕದ ಒಂದೇ ಕಡೆಯಲ್ಲ, ನನ್ನ ಹತ್ತಿರ ಎಲ್ಲ ವಿವರವಿದೆ. ಮಹಾರಾಷ್ಟ್ರ, ಆಂಧ್ರಪ್ರದೇಶ ಈ ಎರಡೂ ಕಡೆ ರಸಗೊಬ್ಬರಕ್ಕೆ ಗಲಾಟೆ ನಡೆಯುತ್ತಿದೆ. ಹಾಗಾದರೆ ಆ ಕಾಂಗ್ರೆಸ್ ಸರ್ಕಾರಕ್ಕೆ ನಿಮ್ಮ ಮುಖಂಡರ ಸಲಹೆ ಏನು? ರಾಜೀನಾಮೆ ಕೊಡಿ ಎಂದು ಹೇಳುತ್ತೀರಾ?

ಅಥವಾ ಅಧಿಕಾರ ಬಿಟ್ಟು ಹೊಗಿ ಎಂದು ಹೇಳುತ್ತೀರಾ? ಅಥವಾ ಏನು ಸಲಹೆ ಕೊಡುತ್ತೀರಾ? ಅದಕ್ಕೆ ನಾನು ಪದೇ ಪದೇ ನಿಮ್ಮಲ್ಲಿ ಹೇಳುವುದಿಷ್ಟೆ ಇದೊಂದು ರಾಷ್ಟ್ರೀಯ ಸಮಸ್ಯೆಯಾಗಿದೆ, ಅದಕ್ಕೆ ಕೇಂದ್ರ ಸರ್ಕಾರವೇ ನಾಯಕತ್ವ ವಹಿಸಿ ಎಲ್ಲಾ ರಾಜ್ಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯಕ್ರಮ ರೂಪಿಸಬೇಕಾಗಿದೆ. ಅದನ್ನು ಬಿಟ್ಟು ನಾವ್ಯಾರು ಯಾವುದೇ ಕಾರಣಕ್ಕೆ ಇದರಲ್ಲಿ ರಾಜಕೀಯ ಮಾಡುವುದು ಬೇಡ. ಈ ನಾಡಿನ ನೆಲ, ಜಲ, ಭಾಷೆ, ರೈತನ ಪ್ರಶ್ನೆ ಬಂದಾಗ ಇತಿಹಾಸವನ್ನು ತೆಗೆದು ನೋಡಿದಾಗ ನಾವೆಲ್ಲರೂ ಒಟ್ಟಾಗಿದ್ದೇವೆ. ಈಗಲೂ ಸಹ ಮುಂದೆ ಬರುವ ರೈತನ ಈ ಜಲ್ವಂತ ಸಮಸ್ಯೆಗಳನ್ನು ಬಗೆಹರಿಸುವುದಕ್ಕೋಸ್ಕರ ನೀವೇನೂ ಮಾಡಬೇಕೆಂದು ಸಲಹೆ ಕೊಡುತ್ತೀರೋ ಅದಕ್ಕೆಲ್ಲಾ ಸಮಾಲೋಚನೆ ಮಾಡುವುದಕ್ಕೆ ನಾನು ಬಿಚ್ಚು ಮನಸ್ಸಿನಿಂದ ಸಿದ್ಧನಿದ್ದೇನೆ. ಕೃಷಿ ಕ್ಷೇತ್ರದಲ್ಲಿ ಅಮೂಲಗ್ರ ಬದಲಾವಣೆ ತರಬೇಕಾಗಿದೆ. ಆ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಸಾವಯವ ಕೃಷಿ ರೈತ ಹೋಗುವುದು ಅನಿವಾರ್ಯವಾಗುತ್ತದೆ. ಆ ಕಾಲದಲ್ಲಿ ಆಹಾರದಲ್ಲಿ ಸ್ವಾವಲಂಬನೆ ಬೇಕೆಂದು ನಾವೇ ರೈತರಿಗೆ ಕಡಿಮೆ ದರದಲ್ಲಿ ರಸಗೊಬ್ಬರ ಕೊಟ್ಟು ಆ ಭೂಮಿಯ ಸತ್ವವನ್ನು ಹಾಳು ಮಾಡಿ, ಈಗ ಆ ರಸಗೊಬ್ಬರ ಸಕಾಲಕ್ಕೆ ಕೊಡದೇ ರೈತ ಬೀದಿಪಾಲಾಗುವಂಥ ದಾರುಣ ಪರಿಸ್ಥಿತಿ ಏನು ಇದೆ, ಇದರ ಬಗ್ಗೆ ಪಕ್ಷಭೇದ ಮರೆತು ನಾವು ಒಟ್ಟಾಗಿ ಚಿಂತನೆಯನ್ನು ಮಾಡಬೇಕಾಗಿದೆ. ಈ ರೈತರು ಆತ್ಮಹತ್ಯೆ ಮಾಡಿಕೊಂಡಾಗ ಹೇಗೆ ನಿಭಾಯಿಸಬೇಕು ಎಂದು ಕಾರ್ಯತಂತ್ರ ರೂಪಿಸುವುದಕ್ಕೆ ಪ್ರತಿಪಕ್ಷದವರು, ಕೃಷಿ ತಜ್ಞರು, ಮಾಧ್ಯಮದವರು, ರೈತ ಮುಖಂಡರು, ರೈತ ಸಂಘಟನೆಗಳ ಸಭೆ ನಾಳೆ 30ನೇ ತಾರೀಖು ಮಧ್ಯಾಹ್ನ ಒಂದು ಗಂಟೆಗೆ ವಿಧಾನಸೌಧದಲ್ಲಿ ಈ ರಾಜ್ಯದ ಎಲ್ಲಾ ರೈತ ಮುಖಂಡರುಗಳನ್ನು ಈ ಘಟನಾವಳಿಯ ಹಿನ್ನೆಲೆಯಲ್ಲಿ ಅವರ ಸಲಹೆ ಏನು ಎನ್ನುವುದಕ್ಕಾಗಿ ನಾನು ಆ ಸಭೆಯನ್ನು ಕರೆಯುತ್ತಿದ್ದೇನೆ. ಪ್ರತಿ ಪಕ್ಷದ ನಾಯಕರು ಹಾಗೂ ನಾವೆಲ್ಲಾ ಒಟ್ಟಾಗಿ ಸರ್ವಪಕ್ಷಗಳ ಒಂದು ನಿಯೋಗ ಹೋಗಿ ಪ್ರಧಾನಿಯವರನ್ನು ಭೇಟಿ ಮಾಡೋಣ. ಈ ರೈತರ ಜ್ವಲಂತ ಸಮಸ್ಯೆಗೆ ಒಂದು ಪರಿಹಾರ ಹುಡುಕುವಂಥ ಪ್ರಮಾಣಿಕ ಪ್ರಯತ್ನ ಮಾಡೋಣ. ತಾವೇನು ಅನೇಕ ಅಮೂಲ್ಯವಾದ ಸಲಹೆಗಳನ್ನು ಕೊಟಿದ್ದೀರಾ ಅವುಗಳನ್ನು ಸ್ವೀಕರಿಸುವುದಕ್ಕೆ ನಾನು ಸಿದ್ದನಿದ್ದೇನೆ. ನಾಡಿನ ಜನರ ಮುಂದೆ ನಾನೊಂದು ಬಹಿರಂಗವಾದ ಮನವಿಯನ್ನು ಸಲ್ಲಿಸಿದ್ದೇನೆ. ವಾಸ್ತವಿಕ ಸ್ಥಿತಿ ಏನು? ನಾವು ಅಧಿಕಾರಕ್ಕೆ ಬಂದಾಗ ಯಾವ ಪರಿಸ್ಥಿತಿ ಇತ್ತು? ಈಗ ಯಾವ ಪರಿಸ್ಥಿತಿ ಇದೆ? ಮುಂದೆ ನಾವೇನು ಜವಾಬ್ದಾರಿ ನಿರ್ವಹಿಸುತ್ತಿದ್ದೇವೆ? ರೈತರು ಧೃತಿಗೆಡದೆ ಆತ್ಮಹತ್ಯೆಗೆ ಶರಣಾಗದೆ ಸಹಕಾರ ನೀಡಬೇಕೆಂದು

ವಿನಂತಿ ಮಾಡಿದ್ದೇನೆ. ನಾನು ಮತ್ತೊಮ್ಮೆ ಅತ್ಯಂತ ವಿನಯದಿಂದ ಈ ಮನೆಯ ಎಲ್ಲಾ ಸದಸ್ಯರಲ್ಲಿ ಏನು ವಿನಂತಿ ಮಾಡುತ್ತೇನೆಂದರೆ, ನಾವೆಲ್ಲಾ ಒಟ್ಟಾಗಿ ಸರ್ವಪಕ್ಷದ ನಿಯೋಗ ಹೋಗೋಣ, ಕರ್ನಾಟಕ ರಾಜ್ಯದ ರೈತರ ಉಳಿವಿನ ದೃಷ್ಟಿಯಿಂದ ಮತ್ತೊಮ್ಮೆ ಈ ರೀತಿಯ ಅತ್ಮಹತ್ಯೆಯ ಪ್ರಕರಣಗಳು ಮರುಕಳಿಸಬಾರದು ಎನ್ನುವ ದೃಷ್ಟಿಯಿಂದ ನೀವೇನೇನು ಸಲಹೆಗಳನ್ನು ಕೊಡುತ್ತೀರಿ, ಅವುಗಳನ್ನು ಸ್ವೀಕರಿಸುವುದಕ್ಕೆ ಸಿದ್ದನಿದ್ದೇನೆ. ಸಧ್ಯದಲ್ಲಿಯೇ ಎಲಾ ಕೃಷಿ ತಜ್ಞರು, ಪ್ರತಿ ಪಕ್ಷದ ನಾಯಕರು, ರೈತ ಮುಖಂಡರು, ಇನ್ನು ಯಾರ್ಯಾರು ಇದಕ್ಕೆ ಒಳ್ಳೆಯ ಸಲಹೆಗಳನ್ನು ಕೊಡಬಹುದೋ, ಬೇರೆ ಬೇರೆ ರಾಜ್ಯದಲ್ಲಿರುವ ಪರಿಸ್ಥಿತಿಯ ಬಗ್ಗೆ ಚಿಂತೆ ಮಾಡುವುದು ಬೇಡ. ಆದರೆ, ನಮ್ಮ ರಾಜ್ಯದಲ್ಲಿ ರೈತರನ್ನು ಉಳಿಸುವುದಕ್ಕೆ ಏನೇನು ಮಾಡಬೇಕೆಂದು ನೀವು ಸಲಹೆಗಳನ್ನು ಕೊಡುತ್ತೀರೋ ಆ ಸಲಹೆಗಳನ್ನು ಸ್ವೀಕರಿಸಲಿಕ್ಕೆ ಸಿದ್ದನಿದ್ದೇನೆ. ಅತ್ಯಂತ ಪ್ರಮಾಣಿಕವಾಗಿ ಈ ಮನೆಯಲ್ಲಿ ರೈತ ಸಮೂಹಕ್ಕೆ ಒಂದು ಭರವಸೆ ಕೊಡುವುದಕ್ಕೆ ಇಚ್ಛಿಸುತ್ತೇನೆ. ರೈತನ ಉಳಿವಿಗಾಗಿ ರೈತ ನೆಮ್ಮದಿಯಿಂದ ಗೌರವದಿಂದ, ಸ್ವಾಭಿಮಾನದಿಂದ ಬಾಳಿ ಬದುಕುವುದಕ್ಕಾಗಿ ಏನೇನು ಕಾರ್ಯಕ್ರಮಗಳನ್ನು ರೂಪಿಸಬೇಕೋ, ನೀವು ಆಶೀರ್ವಾದ ಮಾಡಿರುವುದಕ್ಕೆ ಒಬ್ಬ ಸಾಮಾನ್ಯ ರೈತನ ಮಗ ಬಂದು ಇಲ್ಲಿ ಕುರ್ಚಿಯ ಮೇಲೆ ಕುಳಿತಿರುವುದು. ನಿಮ್ಮ ಅಪೇಕ್ಷೆಗಳನ್ನು ಪೂರೈಸುವುದಕ್ಕೆ ಸರ್ಕಾರ ಸಿದ್ದವಿದೆ. ಮುಂದೆ ಬರುವಂಥ ದಿವಸಗಳಲ್ಲಿ ರಸಗೊಬ್ಬರದ ಕಠಿಣ ಪರಿಸ್ಥಿತಿ ಬರಬಹುದು. ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ ರಸಗೊಬ್ಬರ ಸರಬರಾಜು ಮಾಡುವುದಕ್ಕೆ ನಾವು ನೀವೆಲ್ಲಾ ಒಟ್ಟಾಗಿ ಹೊಗಿ ಪ್ರಯತ್ನ ಮಾಡದಿದ್ದರೆ ನಾವಿಬ್ಬರೂ ಹೊಣೆಗಾರರಾಗಿರುತ್ತೇವೆ. ಆದುದರಿಂದ, ಸರ್ವಪಕ್ಷಗಳ ನಿಯೋಗ ಒಟ್ಟಾಗಿ ಹೋಗಿ ಕೇಂದ್ರ ಸರ್ಕಾರದ ಮನವೊಲಿಸಿ ರಸಗೊಬ್ಬರ ತರಬೇಕಾಗಿದೆ. ಕೆಲವು ಸ್ನೇಹಿತರು ಬಿತ್ತನೆ ಬೀಜದ ಬಗ್ಗೆ ಮಾತನಾಡಿದ್ದಾರೆ. ನನಗೆ ಇರುವ ಮಾಹಿತಿ ಪ್ರಕಾರ ಬಿತ್ತನೆ ಬೀಜ ಕೊರತೆ ರಾಜ್ಯದಲ್ಲೂ ಎಲ್ಲೂ ಇಲ್ಲ. ಎಲ್ಲಾದರೂ ಇದೆ ಎಂದು ನಿಮಗೆ ಅನ್ನಿಸಿದರೆ ತಾವು ನಮ್ಮ ಅಧಿಕಾರಿಗಳ ಅಥವಾ ನನ್ನ ಗಮನಕ್ಕೆ ತಂದರೆ 24 ಗಂಟೆಯಲ್ಲಿ ಬಿತ್ತನೆ ಬೀಜದ ಯಾವುದೇ ರೀತಿಯಲ್ಲಿ ಕೊರತೆಯಾಗದಂತೆ ನಾನು ನೋಡಿಕೊಳ್ಳುವುದಕ್ಕೆ ಸಿದ್ದನಿದ್ದೇನೆ. ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಅದಕ್ಕಾಗಿ ನಿಮ್ಮ ಸಂಪೂರ್ಣವಾದ ಸಹಕಾರ ಬೇಕೆಂದು ವಿನಂತಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ದೀರ್ಘವಾಗಿ ಮತ್ತು emotionally charged

ಒಂದು ದೊಡ್ಡ ಭಾಷಣ ಮಾಡಿದರು. ಅವರು ಮಾಡಿದಂಥ ಕೆಲಸಗಳ ಬಗ್ಗೆ ಹೊಗಳಿಕೆಯ ಮಾತುಗಳನ್ನು ಹೇಳಿಕೊಂಡಿದ್ದಾರೆ. ಎಲ್ಲಿ ಅವರು ವಿಫಲರಾಗಿದ್ದಾರೋ ಅದನ್ನು ಕೇಂದ್ರ ಸರ್ಕಾರದ ಮೇಲೆ, ರಾಜ್ಯದ ರಾಜಕೀಯ ಪಕ್ಷಗಳ ಮೇಲೆ ಮತ್ತು ರಾಜಕಾರಣಿಗಳ ಮೇಲೆ ಮತ್ತು Anti Social Element ಇವರೆಲ್ಲರೂ ಕಾರಣಕರ್ತರು, ಗೋಲಿಬಾರ್ ಆಗಿರುವುದಕ್ಕೆ ಅಲ್ಲಿ ಎಲ್ಲಾ ಕಡೆ ರಸಗೊಬ್ಬರದ ಸರಬರಾಜು ಏನು ಇದೆ, ಚೆನ್ನಾಗಿ ನಡೆದಿಲ್ಲದಿರುವುದಕ್ಕೆ ಇವರೆಲ್ಲರೂ ಕಾರಣಕರ್ತರು, ಎನ್ನುವ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದಕ್ಕಿಂತ ಮುಂಚೆ, ಮಾನ್ಯ ಕೃಷಿ ಸಚಿವರು ಒಂದು ಮತ್ತು ಹೇಳಿದರು. ಅದೇನೆಂದರೆ, ಈ agitation ಏನು ನಡೆದಿವೆ ಅಥವಾ ಗೊಬ್ಬರದ ಕೊರತೆ ಮತ್ತು ಬೀಜದ ಕೊರತೆ ಏನು ಇದೆ, ಇದೆಲ್ಲವೂ ಕೂಡ created, ಇದರಲ್ಲಿ ರೈತರಾರು ಇಲ್ಲ. ರೈತರೇತರ ಜನರೇ ಈ agitation ಮಾಡಿದ್ದಾರೆ, ನಿಜವಾದ ರೈತರು ಅದರಲ್ಲಿ involve ಇಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಒಂದು ಸಲ ಅಲ್ಲ, ಅನೇಕ ಸಲ ಹೇಳಿದ್ದಾರೆ ಮತ್ತು ಸತ್ತವರು ಕೂಡ ಆತ್ಮಹತ್ಯೆ ಮಾಡಿಕೊಂಡಂಥವರೂ ಕೂಡ ರೈತರಲ್ಲ, ಅವರೆಲ್ಲ ಕುಡುಕರು, ಮನೆಯಲ್ಲಿ ಜಗಳ ಆಡಿಕೊಂಡು ಸತ್ತವರು, ... ಅದನ್ನು ಬೇಕಾದರೆ ಪತ್ರಿಕೆಯಲ್ಲಿ ಹೇಳಿದ್ದಾರೆ ತೋರಿಸಿ ಎಂದರೆ ತೋರಿಸುತ್ತೇನೆ. ಈಗಲಾದರೂ ಅವರು ಹೇಳಿದ್ದೇನೆಂದರೆ, ಅದರಲ್ಲಿ ಯಾರು ಸತ್ತವರು ಅಥವಾ ಅನೇಕ ಜನ ಆತ್ಮಹತ್ಯೆ ಮಾಡಿಕೊಂಡಂಥವರು ಯಾರು ರೈತರಲ್ಲ ಎನ್ನುವ ಮಾತನ್ನು ಅವರು ಸ್ಪಷ್ಟಪಡಿಸಿದ್ದಾರೆ. ಕುಡುಕರು ಎನ್ನುವ ಮಾತನ್ನು ಪತ್ರಿಕೆಯಲ್ಲಿ ಹೇಳಿದ್ದಾರೆ, ಬಾಕ್ಸ್ ನ್ಯೂಸ್ ಆಗಿ ಬಂದಿದೆ, ಬೇಕಾದರೆ ಅದನ್ನು ತೋರಿಸಿ ಎಂದರೆ ನನ್ನ ಹತ್ತಿರ ಇರುವುದನ್ನು ತೋರಿಸುತ್ತೇನೆ, ಅವರಿಗೂ ಯಾವ ಪತ್ರಿಕೆಯಲ್ಲಿ ಬಂದಿದೆ ಎಂದು ಗೊತ್ತಿದೆ. ಅದನ್ನು ನಾನು ಪುನಃ ಹುಡುಕಿ ಬೇಕಾದರೆ ತಮಗೆ ಕಳುಹಿಸಿ ಕೊಡುತ್ತೇನೆ. ಕೃಷಿ ಸಚಿವರ ದೃಷ್ಟಿಯಲ್ಲಿ ಯಾರೂ ಕೂಡ ರೈತರಲ್ಲ, ಎಲ್ಲರೂ ಕೂಡ ಬೇರೆಯವರೇ ಇದನ್ನು ಮಾಡಿದ್ದು, ಅದಕ್ಕಾಗಿ ನೀವು ಅಷ್ಟೊಂದು serious ಆಗಿ ಇದನ್ನು ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ ಎನ್ನುವ ಭಾವನೆಯಿಂದ ಅವರು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಮುಖ್ಯ ಕಾರ್ಯದರ್ಶಿಯವರ ಪತ್ರವನ್ನು ಓದಿದರು. ಅದೇನೆಂದರೆ, ಮೊದಲನೆಯದಾಗಿ ಹೇಳಿದ್ದರೂ ಕೊನೆಯ ಪ್ಯಾರಾದಲ್ಲಿ ನೋಡಿ, ಅದರಲ್ಲಿ ಏನು ಬರೆದಿದ್ದಾರೆ, ಏನು ಹೇಳಿದ್ದಾರೆ ಎಂದು ಮತ್ತು ವಿಶೇಷವಾಗಿ ಕೃಷಿ ಸಚಿವರು ಏನು ಹೇಳಿದರು ಎಂದರೆ, ನಮಗೇನು ಪೂರೈಕೆಯಾಗಿದೆ ಅದನ್ನು ಸರಿಯಾದ ರೀತಿಯಲ್ಲಿ

ಕೇಂದ್ರ ಸರ್ಕಾರ ಮಾಡಿಲ್ಲ, ನಮ್ಮ ಬೇಡಿಕೆ ಏನು ಇದೆ, ಆ ಬೇಡಿಕೆಗೆ ಅನುಗುಣವಾಗಿ ನಮಗೆ ಸಿಕ್ಕಿಲ್ಲ, ಅದೇ ಮಾತನ್ನು ಅವರು ಪ್ರಸ್ತಾಪಿಸಿ ಮಾನ್ಯ ಮುಖ್ಯ ಮಂತ್ರಿಗಳು ಕೂಡ ಎಷ್ಟು ನಮಗೆ ಬಂದಿದೆ, ಇನ್ನು ಎಷ್ಟು ಕೊರತೆ ಇದೆ ಎಂದು ಇವತ್ತಿನ ತಾರೀಖಿನವರೆಗೆ ಅವರು ಹೇಳಿದರು. ಆದರೆ, ಈ ಪತ್ರ ನಿಮ್ಮ ಕಛೇರಿಯಿಂದ ಹೊಗಿದೆ. ಅಂದರೆ, ಮುಖ್ಯ ಕಾರ್ಯದರ್ಶಿಗಳೇ ಕಳುಹಿಸಿದಂಥ ಪತ್ರ ನಮ್ಮದಲ್ಲ. .. ಸ್ವಲ್ಪ ಕೇಳಿ ಸಾರ್. ನಮಗೆ ಮಾತನಾಡಬೇಡಿ ಎಂದು ಹೇಳಿದಿರಿ, ನೀವ್ಯಾಕೆ ಮಾತನಾಡುತ್ತೀರಿ? ಈ ಪತ್ರವನ್ನು ಬರೆದಿದ್ದು ನಾವಲ್ಲ. ತಮ್ಮ ಮುಖ್ಯ ಕಾರ್ಯದರ್ಶಿಗಳೇ ಬರೆದಿದ್ದು. ಬರೆದಂಥ ಪತ್ರವನ್ನು ತಾವು ಮೊದಲು ಸರಿಯಗಿ ಓದಿಕೊಳ್ಳಿ. ಏನು ಬರೆದಿದ್ದಾರೆಂದರೆ, you will recall that, you have Kindly instruct the Fertilizer Companies to supply 1,22,000 Metric Tone of DAP, and 90,000 Metric Ton of Complex Fertilizer during the Month of June to the State of karnataka, As per your advice the Department of Agriculture has complied that, date-wise and district-wise schedule the Department of Agriculture has complied the district wise and date-wise schedule which various companies have to ensure the availability of these Fertilizers. A copy of the schedule is enclosed for your kind perusal ಎಂದು ಬರೆದಿದ್ದೀರಿ. ಮತ್ತೆ ಮುಂದೆ ಏನು ಹೇಳಿರುತ್ತೀರೆಂದರೆ, we are continuously monitoring the actual supplies vice-versa the commitment given in the schedule. I am writing to inform you that upto 10th June 2008 we have received 23, 100 MT of DAP as against the programmed supply of 23,060 MT; 24, 573 MT of Complex Fertilizer against the programmed supply of 19, 195 MT. ಅಂದರೆ ಇದನ್ನು ನೋಡಿದಾಗ ಯಾವುದೇ ಅಂಥ ಒಂದು ವ್ಯತ್ಯಾಸ ಇಲ್ಲವೆಂಬುದು ಇದರಿಂದ ಕಾಣುತ್ತದೆ. ಮತ್ತೆ ನಿಮಗೆ ಸರಬರಾಜು ಮಾಡಿರತಕ್ಕಂಥ ಒಂದು ನೋಟ್‌ನಲ್ಲಿ ಪೇಜ್ ನಂಬರ್ 2ರ ಪ್ಯಾರಾ ಗ್ರಾಫ್ 5ರಲ್ಲಿ ಏನು ಹೇಳಿದ್ದಾರೆಂದರೆ, ನಮ್ಮಲ್ಲಿ available ಇರತಕ್ಕಂಥದ್ದು 133 ಮೆಟ್ರಿಕ್ ಟನ್ ಓverall for the month of june-2008 the position of Urea and MOP is very comfortable. In respect of DAP as against the requirement of 1,10,000 MT, the state is being supplied 1,21,514 Metric Ton (10,000

excess) along with an opening stock of 11,700 Metric Ton, the total availabality would be of the order of 1,33,000 Metric Ton, As regards complexes the State's requirement is 1,10,000 Metric Ton, as against ನಿಮ್ಮಲ್ಲಿ available ಇರತಕ್ಕಂಥದ್ದು 1,33,000 MT, of which 1,00,000 is being supplied besides an opening stock of nearly 10,000 Metric Ton. The State Government has now prepared a district-wise, company-wise movement schedule. In this letter dated 10.6.2008 the chief Secretary of Karnataka has confirmed that the supply is an per schedule in respect of DAP and slighty higher in respect of complexes. ನೀವು confirm ಮಾಡಿಕೊಂಡು ನಮಗೆ ಇಷ್ಟು ಬಂದಿದೆ ಎಂದು ಒಪ್ಪಿಕೊಂಡಿದ್ದೀರಿ. ಈ ಮಾತನ್ನು ಅವರು ಹೇಳಿರುವುದರಿಂದ ಇದನ್ನು ಎಲ್ಲಿಯೂ ಕೂಡ ಅಲ್ಲಗಳಿದಿಲ್ಲ. ಆದರೆ, ಸುಮ್ಮನೆ ಕೇಂದ್ರ ಸರ್ಕಾರದ ಕಡೆಗೆ ಬೆಟ್ಟು ಮಾಡಿ ತೋರಿಸತಕ್ಕಂಥದ್ದು ಮತ್ತು ಅವರ ಮೇಲೆ ಗೂಬೆ ಕೂರಿಸತಕ್ಕಂಥದ್ದು ಸರಿಯಲ್ಲ. ಇನ್ನು ಬೇಕಾದರೆ ನೀವು ಹೋರಾಟ ಮಾಡಿ ಮತ್ತು ಅಲ್ಲಿಗೆ ಹೊಗಿ ಕಾಡಿ ಬೇಡಿ ಎಲ್ಲಾ ಕಡೆ ಯಾವ ರೀತಿ ಮಾಡುತ್ತಾರೆಯೋ ಆ ರೀತಿಯಾಗಿ ಮಾಡಿ. ಅದನ್ನು ಬಿಟ್ಟು ಎಲ್ಲವೂ ಕೂಡ ಕೇಂದ್ರ ಸರ್ಕಾರದ್ದೆ ತಪ್ಪು, ಇದರಲ್ಲಿ ನಮ್ಮ ತಪ್ಪೇನು ಇಲ್ಲ. ನಾವು ಕೇಳಿರುವಷ್ಟು ಅವರು ಕೊಟ್ಟಿಲ್ಲ ಎನ್ನತಕ್ಕಂಥ ಮಾತನ್ನು ನೀವು ಹೇಳಿಕೊಳ್ಳುತ್ತಾ ಬಂದಿದ್ದೀರಿ. ಮತ್ತೆ subsidy ಬಾಕಿ ಇದೆ ಎಂದು ಇಂಥ ಕಂಪನಿಯ ಎಂ.ಡಿ.ಯವರು ಬಂದು ಮಾತನಾಡಿದರು ಎಂದು ತಾವೇನು ಪತ್ರಿಕೆಗಳಲ್ಲಿ ಹೇಳಿದ್ದಿರಿ, ಅದರ ಬಗ್ಗೆ ಕೂಡ ಇದರಲ್ಲಿ ಹೇಳಿದ್ದಾರೆ. ನಾನು ಆ ರೀತಿಯಾಗಿ ಹೇಳಿಲ್ಲವೆಂದು ಮ್ಯಾನೇಜಿಂಗ್ ಡೈರೆಕ್ಟರ್ ಬಂದು ನಮ್ಮ ಹತ್ತಿರ apology ಕೇಳಿಕೊಂಡಿದ್ದಾರೆ. ಪ್ರತಿ ತಿಂಗಳು ನಮ್ಮ ಬಿಲ್‌ಗಳು ಇರುತ್ತವೆ, ನಾವು ಅವುಗಳನ್ನು ಸೆಟ್ಲ್ ಮಾಡಿಕೊಂಡು ಹೋಗುತ್ತೇವೆ. ಅದಕ್ಕೆ ಸಂಬಂಧಪಟ್ಟಂಥ ಯಾವುದೇ problem ಇಲ್ಲ ಎನ್ನತಕ್ಕಂಥ ಮಾತನ್ನು ಅವರೇ ಹೇಳುತ್ತಾರೆ. ಅಂದರೆ, ಎಷ್ಟರಮಟ್ಟಿಗೆ ನೀವು ಈ ಸದನದಲ್ಲಿ ಸತ್ಯಾಂಶವನ್ನು ಪ್ರಸ್ತಾಪ ಮಾಡುತ್ತಿದ್ದೀರಿ ಎನ್ನತಕ್ಕಂಥದ್ದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ನೀಡಿರತಕ್ಕಂಥ ನೋಟ್‌ನ ಪೇಜ್ 3ರಲ್ಲಿ ಇರತಕ್ಕಂಥದ್ದನ್ನು ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. It iis learnt that the Chief Minister of Karnataka has been briefed by some company representatives that non-payment of subsidy is resulting in toppage of

production by companies. During the meeting on 7.6.2008 the Chief Minister himself raised this issue and indicated that a sum of Rs. 400 Crores is to be paid to Mangalore Chemical Fertilizer Company Limited. The Secretary had indicated to the Chief Minister of Karnataka that the company representatives had wrongly briefed the Chief Minister and that the management of the company has apologized to the Secretary for this mistake. ಅಂದರೆ ಇದು ಯಾರ ಪತ್ರ ಸ್ವಾಮಿ? ಇದೇನು ನಮ್ಮ ಮನೆಯಿಂದ ಕೊಟ್ಟಿಲ್ಲ. ಇದು ನಿಮ್ಮ ಕಛೇರಿಯಿಂದ ಬಂದಿದೆ. ಅಂದರೆ, ನಿಮ್ಮಲ್ಲಿರತಕ್ಕಂಥ ರೆಕಾರ್ಡ್‌ನ್ನು ನೀವು ಒಪ್ಪುವುದಿಲ್ಲ. ಮತ್ತೆ ನೀವೇ ಹೇಳಿರತಕ್ಕಂಥ ಸತ್ಯಾಂಶವನ್ನು ಸಹ ಒಪ್ಪಿಕೊಳ್ಳುವುದಕ್ಕೆ ನಿಮಗೆ ಸಾಧ್ಯವಾಗುತ್ತಿಲ್ಲ. ಆದರೆ, ನಾವು ಕೇಳಿರುವಷ್ಟನ್ನು ಅವರು ಕೊಟ್ಟಿಲ್ಲವೆಂದು ಕೇವಲ ಹೇಳುತ್ತಾ ಇದ್ದೀರಷ್ಟೆ. ಇಲ್ಲಿಗೆ ಯಾರು ಬಂದಿಲ್ಲ, ಆದರೆ, ನಾವೆಲ್ಲಾ ಅಲ್ಲಿಗೆ ಹೋಗಿದ್ದೇವೆ, ಆದರೂ ಕೂಡ ನಮ್ಮ ಕಡೆ ಏನು ಗಮನ ಕೊಟ್ಟಿಲ್ಲವೆಂದು ತಾವು ಹೇಳಿದ್ದೀರಿ. ಅಂದರೆ ಇಡೀ ದೇಶದಲ್ಲಿ ನಾವೊಬ್ಬರೇ ಮುಖ್ಯ ಮಂತ್ರಿಗಳಿದ್ದು ನಾವು ಹೇಳಿದ ತಕ್ಷಣವೇ ಅವರು ಒಡಿ ಬರಬೇಕಾಗಿತ್ತೆಂದು ಹೇಳುತ್ತೀರಿ. ನೀವು ಅಲ್ಲಿಗೆ ಹೋಗಿ ಬಂದ ಮೇಲೆ ಇಲ್ಲಿಗೆ ಡಾ॥ ಶರ್ಮಾ ಎನ್ನುವವರು ಇಲ್ಲಿಗೆ ಬಂದಿದ್ದರು. ಅವರು ನೀವು ಹೋಗಿ ಬಂದ ಮೇಲೆ ಬಂದರೋ ಅಥವಾ ಅವರು ಬಂದ ಮೇಲೆ ನೀವು ಅಲ್ಲಿಗೆ ಹೋಗಿದ್ದೀರಾ? ಪ್ರಮಾಣವಚನ ತೆಗದುಕೊಂಡ ತಕ್ಷಣವೇ ನಾನು ಅಲ್ಲಿಗೆ ಹೋಗಿದ್ದೆ ಎಂದು ತಾವು ಹೇಳಿದ್ದೀರಿ. ಅಲ್ಲಿಗೆ ತಾವು ಹೋದ ಮೇಲೆ ಡಾ॥ ಶರ್ಮಾರವರು ಅಧಿಕಾರಿಗಳು ಮತ್ತು ನಿಮ್ಮ ಸಮ್ಮುಖದಲ್ಲಿ ಹೇಳಿದ್ದಾರೆ. ಮತ್ತೆ ಈ ವಿಷಯವನ್ನು ಪತ್ರಿಕಾ ಗೋಷ್ಠಿಯಲ್ಲಿ ಸಹ ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, "ರಾಜ್ಯಕ್ಕೆ ಸಾಕಷ್ಟು ರಸಗೊಬ್ಬರವನ್ನು ಪೂರೈಕೆ ಮಾಡಲಾಗಿದ್ದು, ಜಿಲ್ಲೆಗಳ ನಡುವೆ ಸಮಾನ ಹಂಚಿಕೆ ಮತ್ತು ಅಕ್ರಮ ದಾಸ್ತಾನು ಹಾಗೂ ಕಾಳಸಂತೆಗಾರರ ಸಮಸ್ಯೆ ಇರುವುದರಿಂದ ಇದರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುವುದು ರಾಜ್ಯ ಸರ್ಕಾರದ ಹೊಣೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಜಿಲ್ಲಾವಾರು ಹಂಚಿಕೆಯ ಯೋಜನೆಯನ್ನು ರೂಪಿಸಿ ರಸಗೊಬ್ಬರದ ಸಾಗಾಟದ ಉಸ್ತುವಾರಿಯನ್ನು ಸೂಕ್ಷ್ಮವಾಗಿ ಮಾಡದೆ ಹೋದರೆ, ಯಾವುದೇ ರಾಜ್ಯದಲ್ಲೇ ಆಗಲೀ ಸಮಸ್ಯೆ ಸ್ವಾಭಾವಿಕವೆಂದು ಕೇಂದ್ರ ರಸಗೊಬ್ಬರಗಳ ಇಲಾಖೆಯ ಕಾರ್ಯದರ್ಶಿಯಾದ ಡಾ॥ ಜಿ.ಎಸ್. ಶರ್ಮಾರವರು ಹೇಳಿದ್ದಾರೆ" ಅಂದರೆ ಸಾಕಷ್ಟು ಇದೆ. ಆದರೆ, ಅದು district-wise ಇರುವುದರಿಂದ ಅದನ್ನು ಸಮರ್ಪಕವಾಗಿ

Vol. X. C. 28

ಇವರು ಹಂಚದೇ ಇರುವ ಕಾರಣ ಮತ್ತು ಅನೇಕ ಖಾಸಗಿ ಏಜೆನ್ಸಿಗಳು ಹೆಚ್ಚಿನ ಲಾಭವನ್ನು ಪಡೆದುಕೊಳ್ಳುವುದಕ್ಕೋಸ್ಕರ ಅವರೇನು ಸ್ಟಾಕ್‌ನ್ನು ಇಟ್ಟುಕೊಂಡಿರತಕ್ಕಂಥದ್ದನ್ನು ನೀವು ಹೊರಕ್ಕೆ ತೆಗೆಯದೆ ಇರತಕ್ಕಂಥದ್ದು ಮತ್ತು ನಿಮ್ಮ ಆಡಳಿತದ ವೈಫಲ್ಯದ ಕಾರಣದಿಂದ ಇವತ್ತು ಈ ರೀತಿಯಾಗಿದೆ. ನಾನೇನು ಭಾಷಣ ಮಾಡುತ್ತಿಲ್ಲ. ನೀವು ಹೇಳಿರಕ್ಕಂಥದ್ದಕ್ಕೆ ನಾನು ಉತ್ತರ ಹೇಳಬೇಕಾಗಿರುವುದರಿಂದ ಇದನ್ನು ಹೇಳುತ್ತಿದ್ದೇನೆ. ಏಕೆಂದರೆ, ಅದೇ ರೀತಿಯಾಗಿ ಜನರಿಗೆ ಮಾಹಿತಿ ಹೋದರೆ ಇದಕ್ಕೆಲ್ಲಾ ಕೇಂದ್ರ ಸರ್ಕಾರದ ತಪ್ಪೆಂದು ಮತ್ತು ನಾವು ಹೇಳುವುದೆಲ್ಲಾ ಸತ್ಯಕ್ಕೆ ದೂರವಾದ ಮಾತುಗಳೆಂದು ಮತ್ತು ನಾವು ಹೇಳತಕ್ಕಂಥದ್ದೇ ಸತ್ಯಾ ಎನ್ನತಕ್ಕಂಥದ್ದಾದರೆ ಇದು ಕಷ್ಟವಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ, ಡಾ॥ ಶರ್ಮಾರವರು ಅಂಕಿ-ಅಂಶವನ್ನು ಸಹ ನೀಡಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ರಾಜ್ಯಕ್ಕೆ ರಸಗೊಬ್ಬರದ ಪೂರೈಕೆಯಲ್ಲಿ ಯಾವುದೇ ರೀತಿಯ ವ್ಯತಿರಿಕ್ತವಾಗಿಲ್ಲ. ಸಾಕಷ್ಟು ಪ್ರಮಾಣದ ಪೂರೈಕೆ ನಡೆದಿದೆ. ಅದನ್ನು ಹೇಳಿಕೊಂಡು ಮುಂದೆ ಏನು ಹೇಳಿದ್ದಾರೆಂದರೆ, ಯೂರಿಯಾದ ಅಗತ್ಯತೆ 1.20 ಲಕ್ಷ ಟನ್ ಮತ್ತು ಇರ ಲಭ್ಯತೆ 2.28 ಲಕ್ಷ ಟನ್ ಮತ್ತು ಇದರ ಮಾರಾಟ 32,650. ಅಂದರೆ, ಹೆಚ್ಚು ಕಡಿಮೆ 1 ಲಕ್ಷದ 80 ಸಾವಿರ ಯೂರಿಯಾ ಇವತ್ತಿನ ದಿವಸ ಖಾಸಗಿಯವರ ಹತ್ತಿರ ಅಥವಾ ಸೊಸೈಟಿ ಹತ್ತಿರ ಸ್ಟಾಕ್ ಇದೆಯೋ ಎಂಬುದನ್ನು ಕಂಡುಹಿಡಿದು ಅದನ್ನು ತೆಗೆಯತಕ್ಕಂಥದ್ದು ಆಗಬೇಕು. ಅಥವಾ ಡಾ॥ ಶರ್ಮಾರವರೇ ಇದಕ್ಕೆ ಸಂಬಂಧಪಟ್ಟಂತೆ ಸುಳ್ಳು ಹೇಳಿದ್ದರೆ ಬೇಕಾದರೆ ಅವರ ಮೇಲೆ ಕೇಸ್ ಹಾಕಿ? ಕೇಂದ್ರ ಸರ್ಕಾರ ಅಥವಾ ಯಾರೇ ಇರಲಿ ಪರವಾಗಿಲ್ಲ. ನೀವು ತಂದಂಥ ಮಾಹಿತಿ ಸುಳ್ಳು, ಇದರಿಂದ ನೀವು ನಮ್ಮ ಜನಕ್ಕೆ ಮೋಸ ಮಾಡುತ್ತಿದ್ದೀರಿ ಎನ್ನತಕ್ಕಂಥ ಮಾತನ್ನು ತಾವು ಹೇಳಬೇಕು. ಇದು ಅಲ್ಲದೆ ಡಿಎಪಿ ಬಗ್ಗೆ ಹೇಳಿದ್ದಾರೆ. ಡಿಎಪಿ ಅಗತ್ಯ ಇರತಕ್ಕಂಥದ್ದು 1.10 ಲಕ್ಷ ಟನ್ ಮತ್ತು ಇದರ ಲಭ್ಯತೆ ಇರತಕ್ಕಂಥದ್ದು 77,270 ಟನ್‌ಗಳು ಮತ್ತು ಮಾರಾಟ ಆಗಿರತಕ್ಕಂಥದ್ದು 27000 ಮಾತ್ರ. ಅಂದರೆ, ಇನ್ನೂ 50 ಸಾವಿರ ಟನ್‌ಗಳು ಆ ಡೇಟ್ ನಲ್ಲಿತ್ತು. ಅದರೆ, ಇದು ಎಲ್ಲಿದೆ ಮತ್ತು ಹೇಗಿದೆ, ಇದನ್ನು ಯಾರು, ಇಟ್ಟುಕೊಂಡಿದ್ದಾರೆ ಎನ್ನತಕ್ಕಂಥದ್ದನ್ನು ಕೂಡ ಕಂಡು ಹಿಡಿಯಬೇಕಲ್ಲವೇ? ನಾವು ಕೇವಲ factನ್ನು ಮಾತ್ರ ಕೊಟ್ಟಿದ್ದೇವೆ. ಅಲ್ಲಿಂದ ಸರಬರಾಜು ಬಂತು, ಅದರೆ ಇಲ್ಲಿ ಎಷ್ಟು ಕೊಟ್ಟಿದ್ದೀರಿ ಎಂಬುದು ಇಲ್ಲ. ಮಾರ್ಕೆಟ್‌ನಲ್ಲಿ ಮಾರಾಟ ಮಾಡಿರತಕ್ಕಂಥ ಅಂಕಿ-ಅಂಶಗಳನ್ನು ಸಹ ನೀವು ಕೊಡುತ್ತಿಲ್ಲ. ಜೊತೆಯಲ್ಲಿ MOPಯ ಅಗತ್ಯ 45,000 ಟನ್ ಇದ್ದರೆ, ಇದರ ಲಭ್ಯತೆ ಇರತಕ್ಕಂಥದ್ದು 45,120 ಟನ್ ಇದು

ಜಾಸ್ತಿ ಇದೆ. ಆದರೆ, ಅದನ್ನು ಮಾರಾಟ ಮಾಡಿರತಕ್ಕಂಥದ್ದು 17,430 ಟನ್ ಅದೇ ರೀತಿಯಾಗಿ NA PK ಅಗತ್ಯ 1.10 ಲಕ್ಷ ಟನ್, ಪೂರೈಕೆಯಾಗತಕ್ಕಂಥದ್ದು 59, 310 ಟನ್ ಮತ್ತು ಇಲ್ಲಿಯವರೆಗೆ ಹೊರಗಡೆ ಮಾರಾಟ ಮಾಡಿರತಕ್ಕಂಥದ್ದು 60,000. ಅಂದರೆ ಹೆಚ್ಚಿಗೆ ಬಂದಿರತಕ್ಕಂಥದ್ದು. ಇದು ಎಲ್ಲಿತ್ತು? ಈ ಮಾತುಗಳನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಅನೇಕ ಸಾರಿ ನಿಮಗೆ ಕೊರತೆ ಇದ್ದರೂ ಕೂಡ ಮತ್ತು ಕೆಲವು ಬಾಬತ್ತಿನಲ್ಲಿ ಸರಬರಾಜು ಹೆಚ್ಚಿಗೆ ಇದ್ದರೂ ಕೂಡ ನೀವು ಸಮರ್ಪಕವಾಗಿ ಹಂಚಿಕೆ ಮಾಡಿಲ್ಲ. ಮತ್ತು ಇವತ್ತಿನ ದಿವಸ ಮಳೆ ಎಲ್ಲಿಲ್ಲಿ ಬೇಗ ಬಂದಿದೆಯೋ ಅಲ್ಲಿ ಬಿತ್ತನೆ ಕೆಲಸ ಕೂಡ ಪ್ರಾರಂಭವಾಗುತ್ತಿದೆ. ಅಂಥ ಕಡೆ ಡೈವರ್ಟ್ ಮಾಡತಕ್ಕಂಥ ಶಕ್ತಿ ಆಡಳಿತಕ್ಕೆ ಇದೆ. ಅದನ್ನು ನೀವು ಬಿಟ್ಟು ನಾವು ಏಕೆ ಅದನ್ನು ಮಾಡಬೇಕು, ಇವರು ಕೊಡಲಿಲ್ಲ, ಅವರು ಕೊಡಲಿಲ್ಲ ನಮ್ಮ ಕಡೆ ಲಕ್ಷ್ಯ ಕೊಡಲಿಲ್ಲ ಎಂದು ಹೇಳಿ ಈ ಮಾತುಗಳನ್ನು ಹೇಳಿದ್ದಕ್ಕಾಗಿ ನಾನು ಅವರಿಗೆ ಅಂದೆ. ಇದನ್ನು ನೀವು ಈ ರೀತಿಯಾಗಿ ಹೇಳಿಕೊಂಡು ಹೋದರೆ ಹೇಗೆ? ತಮಗೆ ಗೊತ್ತಿದೆ. ಅವರಿಗೆ ಗೊತ್ತು, ರೈತರ ಬಗ್ಗೆ ವಿಶೇಷವಾಗಿ ಬೆಳೆಗಳ ಬಗ್ಗೆ ತಳಿಗಳ ಬಗ್ಗೆ ಭೂಮಿಗಳ ಬಗ್ಗೆ ಮತ್ತು ಅಲ್ಲಿ ಬೀಜ ಯಾವಾಗ ಹಾಕಬೇಕು ಎನ್ನುವಂಥದ್ದು ಗೊತ್ತಿದೆ. ಬಳ್ಳಾರಿ ಮತ್ತು ರಾಯಚೂರಿನಲ್ಲಿ ಈಗಂತೂ ಉಪಯೋಗ ಮಾಡಲಿಲ್ಲ. ಮೇನಲ್ಲಿ ಮಾಡಲಿಲ್ಲ. ಜುಲೈನಲ್ಲಿ ಮಾಡತಕ್ಕಂಥವರು ಮತ್ತು ಎಲ್ಲಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಗೊಬ್ಬರವನ್ನು ಖರ್ಚು ಮಾಡತಕ್ಕಂಥದ್ದು ಬಳ್ಳಾರಿ ಮತ್ತು ರಾಯಚೂರಿನಲ್ಲಿ, ಅಂತಹ ಕಡೆ ಇದ್ದಾಗ ಸ್ವಲ್ಪಮಟ್ಟಿಗೆ ನೀವು ತಾತ್ಪೂರ್ತಿಕವಾಗಿ ತರಬಹುದಾಗಿತ್ತು. ಅಲ್ಲಿ ಬಂದ ಮೇಲೆ ಅವರಿಗೆ ಕಳುಹಿಸಬಹುದಾಗಿತ್ತು. ಈ management ಮಾಡುವುದಕ್ಕೂ ಕೂಡ ನೀವೂ ಬೇರೆಯವರೇ ಮಾಡಬೇಕು, ಬೇರೆಯವರೇ ಹೇಳಬೇಕು. ನಿಮಗೆ ಆಡಳಿತದ ಅನುಭವ ಇಲ್ಲವೆಂದು ಹೇಳುವುದು, ಹೌದು, ನಮಗೆ ಆಡಳಿತದ ಅನುಭವವಿಲ್ಲ. ನೀವು 40 ವರ್ಷದಿಂದ ಏನು ಮಾಡಿದಿರಿ. ನಾವು 40 ವರ್ಷದಿಂದ ಏನು ಮಾಡಿದ್ದೇವೆಂದು ಈ ದೇಶದ ಜನರಿಗೆ ಗೊತ್ತಿದೆ. ನಾವು 40 ವರ್ಷ ಈ ದೇಶದಲ್ಲಿ ಪ್ರಜಾಪ್ರಭುತ್ವ ಸರಿಯಾದ ರೀತಿಯಲ್ಲಿ ಇಟ್ಟು ಅದರ ಆಳವಾದ ಬುನಾದಿಯನ್ನು ಇಡದೇ ಹೋಗಿದ್ದರೆ ನೀವು ಮುಖ್ಯಮಂತ್ರಿಯಾಗುತ್ತಿರಲಿಲ್ಲ. ಇವರೆಲ್ಲರೂ ಕೂಡ ಮಂತ್ರಿಗಳು ಆಗುತ್ತಿರಲಿಲ್ಲ. ಇದಕ್ಕೆ ನಾವೇ ಕಾರಣ. ನಿಮ್ಮ ಕೈಯಲ್ಲಿ ಮೊದಲೇ ಏನಾದರೂ ಸಿಕ್ಕಿದ್ದರೆ ನಾವು ಯಾರೂ ಉಳಿಯುತ್ತಿರಲಿಲ್ಲ. ಏಕೆಂದರೆ ಪ್ರಜಾಪ್ರಭುತ್ವವೇ ಇರುತ್ತಿರಲಿಲ್ಲ. ಎಲ್ಲಿ ಹೋದರೂ ಖಾಕಿ ಚಡ್ಡಿಗಳು ಕೈಯಲ್ಲಿ ಲಾಠಿಗಳು, ಅದನ್ನು ಬಿಟ್ಟರೆ ಬೇರೆ ಏನೂ ಬರುತ್ತಿರಲಿಲ್ಲ. ಒಂದು

ಉಪಕಾರ ಮಾಡಿದಿರಿ, ಯಾವ ರೀತಿಯಾಗಿ ಗೋಡ್ಸೆಯವರು ಮಹಾತ್ಮ ಗಾಂಧೀಜಿಯವರಿಗೆ ಗುಂಡು ಹಾಕಿ ಕೊಂದರು, ನೀವು ಅಧಿಕಾರಕ್ಕೆ ಬಂದ ತಕ್ಷಣ ರೈತರಿಗೆ ಗುಂಡು ಹಾಕಿ ಕೊಂದಿರಿ. ಇದು ಒಂದು ದೊಡ್ಡ ಸಾಧನೆ. ಇನ್ನೊಂದು ಮಾತು ತಾವು ಹೇಳಿದ್ದೇನೆಂದರೆ, 99ರ ಪ್ರಕಾರ Land Revenue Act amendment ಆಗಿದೆ, unauthorized cultivationದ್ದು ನಾವು ಮಾಡಿದ್ದು. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದರು, ಆಗ ನಾನು Revenue MInister ಇದ್ದೆ. ಆಗ ನಾನು ತಿದ್ದುಪಡಿಯನ್ನು ತಂದು ಬರೀ Government circular ದಿಂದ ಆಗುವುದಿಲ್ಲವೆಂದು ಹೇಳಿ Section 97 ಇರಬಹುದು, ಅದರ ಪ್ರಕಾರ ಇದನ್ನು amendment ಮಾಡಿ ಲಕ್ಷಾಂತರ ಜನರಿಗೆ ಭೂಮಿಯನ್ನು ಕೊಡಿಸಿದೆವು. unauthorized cultivation committee ಯಾವಾಗಾದರೂ ಆಗಿದ್ದರೆ ಅದು ನಾವು ಮಾಡಿದ್ದು. ಅದನ್ನು ನಾನು ಮಾಡಿದ್ದೇನೆಂದು ಹೇಳಿಕೊಳ್ಳುವುದಿಲ್ಲ, ಏಕೆಂದರೆ ಪ್ರಚಾರವನ್ನು ನಾವು ಹೆಚ್ಚಿಗೆ ಮಾಡಿಕೊಳ್ಳುವುದಿಲ್ಲ. ಭೂಸುಧಾರಣೆಯಲ್ಲಿ ಒಂದು tribunal ಇದ್ದದ್ದನ್ನು ಎರಡು tribunal ಮಾಡಿ ಲಕ್ಷಾಂತರ ಜನರಿಗೆ ಭೂಮಿಯನ್ನು ಕೊಟ್ಟೆವು. ಅದು ನಾನು 1981 ರಲ್ಲಿ Revenue Minister ಆಗಿದ್ದಾಗ ಮಾಡಿದ್ದು. 1991 ರಲ್ಲಿ ಈ ಕಾನೂನನ್ನು amendment ಮಾಡಿ ಇದನ್ನು ನಾವು ತಂದೆವು. 'C' &'D' class land ಏನು ಹೇಳುತ್ತಿದ್ದೀರಿ, REvenue Department ದಿಂದ Forest ಗೆ ಹೋದ ಮೇಲೆ ಅದನ್ನು ಬಡವರಿಗೆ ಕೊಡಬಾರದು ಎಂದು ಹೇಳಿ ಏನು ಬಿಲ್ ಬಂದಿತ್ತು, ಅದನ್ನು ಇಲ್ಲಿ oppose ಮಾಡಿದ್ದು ಅದು ಬೇರೆ ವಿಚಾರ. ಆದರೆ ಬಡವರಿಗೆ ಭೂಮಿಯನ್ನು ಕೊಡತಕ್ಕಂಥ ಕೆಲಸ 1991ರಲ್ಲಿ ನಾವು ಮಾಡಿದ್ದೇವೆ, ನಾನು ಮಾಡಿದ್ದೇನೆ ಎನ್ನುವುದಕ್ಕೆ ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಅದನ್ನು ನಮ್ಮ ಪಕ್ಷ ಮಾಡಿಕೊಟ್ಟು ಲಕ್ಷಾಂತರ ಜನರಿಗೆ ಭೂಮಾಲೀಕರನ್ನು ಮಾಡಿದೆ. ಇದು ಮಹತ್ವದ ಕೆಲಸ ಅದಕ್ಕೆ ನೀವು ಏನು ಮಾಡಿದಿರಿ, 40 ವರ್ಷದಲ್ಲಿ ನಾವು ಏನು ಮಾಡಿದ್ದೇವೆ ಎನ್ನುವ ಪಟ್ಟಿಯನ್ನು ಹೇಳಬೇಕಾ? ಪಟ್ಟಿಯನ್ನು ಹೇಳಿಕೊಂಡು ಹೋದರೆ ನೀವು ಇಲ್ಲಿಂದ ಓಡಿ ಹೋಗಬೇಕಾಗುತ್ತದೆ. ಭೂಸುಧಾರಣೆ ಕಾನೂನನ್ನು ನೀವು ತಂದಿರಾ? unauthoized cultivation regularize ನೀವು ಮಾಡಿದಿರಾ? Banking Nationalize ನೀವು ಮಾಡಿದಿರಾ? ಸಾಕಷ್ಟು ಇದೆ, ಈಗ ಅದನ್ನು ಹೇಳುವುದು ಬೇಡ. ಅದನ್ನು ಹೇಳುವ ಸಂದರ್ಭದಲ್ಲಿ ಹೇಳೋಣ. ಅದಕ್ಕಾಗಿ ಇವತ್ತಿನ ದಿವಸ ಇನ್ನೊಂದು ಮಾತನ್ನು ತಾವು ಹೇಳಿದಿರಿ. ಏನೆಂದರೆ, ಹಾವೇರಿಯಲ್ಲಿ ಈ ಗೋಲಿಬಾರ್ ನಡೆಯಿತು ಅಥವಾ ಈಗ agitation ಏನು ನಡೆದಿದೆ. ನನ್ನ ಹತ್ತಿರ ವರದಿ

ಇದೆ. ಅದರ ಹಿಂದೆ ಯಾರ ಕೈವಾಡ ಇದೆ, ಯಾವ ಕಾಣದ ಕೈಗಳು ಇವೆ, ಅದರಲ್ಲಿ Politicians ಇದ್ದಾರೆ, ಅದರಲ್ಲಿ antisocial element ಇದೆ. ಅದರಲ್ಲಿ ಬೇರೆ ಬೇರೆಯವರು ಇದ್ದಾರೆ, ಅದನ್ನು ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲವೆಂದು ಹೇಳಿದಿರಿ. ನಾನು ಕೇಳುತ್ತೇನೆ. ಈ ಸದನಕ್ಕೆ ಗೊತ್ತಾಗಬೇಕು. ಏಕೆಂದರೆ Politician ಅಂದರೆ ಇಲ್ಲಿರತಕ್ಕಂಥವರು ಎಲ್ಲರೂ ಕೂಡ Politicians. ಏಕೆಂದರೆ ಒಂದು ಪಾರ್ಟಿ ಇಲ್ಲದಿದ್ದರೆ ಇನ್ನೊಂದು ಪಾರ್ಟಿಯಿಂದ affiliated ಆಗಿ elect ಆಗಿ ಬಂದಿದ್ದಾರೆ. except ನಿಮ್ಮ coalition government ದ್ದು. 6 ಜನ independent ಸದಸ್ಯರನ್ನು ಬಿಟ್ಟರೆ, ನಿಮ್ಮ ಸಮ್ಮಿಶ್ರ ಸರ್ಕಾರದ್ದು ಬಾಕಿ ಎಲ್ಲಾ ಒಂದಿಲ್ಲಾ ಒಂದು ಪಕ್ಷಕ್ಕೆ ಅಂಟಿಕೊಂಡವರು ಇದ್ದಾರೆ. ಅವರು ಯಾರು Politician ಮಲ್ಲಿಕಾರ್ಜುನ ಖರ್ಗೆಯವರಾ, ಏನು ಜಯಚಂದ್ರರವರಾ, ಶಿವಕುಮಾರರವರಾ, ರೇವಣ್ಣನವರಾ, ಕುಮಾರಸ್ವಾಮಿಯವರಾ, ಈಶ್ವರಪ್ಪನವರಾ ಯಾರು ಎನ್ನುವುದು ಗೊತ್ತಾಗಬೇಕಲ್ಲವೇ? ನೀವು ಅಮುಖರಾಗಿ ಇಟ್ಟು ಇದರ ಬಗ್ಗೆ ನಮ್ಮ ಕಡೆ ಹೇಳುತ್ತಾರೆ. "ಶಾಲಿನಲ್ಲಿಟ್ಟು ಹೊಡೆಯುವುದಕ್ಕೆ ಹೋಗಬೇಡಿ" ಅದನ್ನು ಬಿಚ್ಚಿ, ಅದರಲ್ಲಿ ಏನು ಇದೆ ಎನ್ನತಕ್ಕಂಥದ್ದು ಗೊತ್ತಾಗಲಿ. ಯಾರದು ತಪ್ಪು ಇದೆ, ಅವರು ಚಾಲೆಂಜ್ ಮಾಡುತ್ತಾರೆ. ಇಲ್ಲಾ ಅವರು ಶಿಕ್ಷಗೆ ಒಳಗಾಗುತ್ತಾರೆ. ಇಲ್ಲಾ ನಿಮ್ಮ ಹತ್ತಿರ ಇದ್ದರೆ, ನೀವು ಹೇಳಿಬಿಡಿ ಇಂಥವರು ಮಾಡಿದ್ದಾರೆ, ಅವರಿಂದಲೇ ಈ agitation ಆಯಿತು ಎಂದು ಹೇಳಿ ನೋಡೋಣ. " ಗೋಡಾ ಹೈ, ಮೈದಾನ ಹೈ" ನೋಡುತ್ತಾರೆ, ಪಾಪ, ಯಾರಿಂದ allegation ಬರುತ್ತದೆ, ಅವರು defend ಆದರೂ ಮಾಡಿಕೊಳುತ್ತಾರೆ. ಇಲ್ಲಾ ಜೈಲಿಗಾದರೂ ಹೋಗುತ್ತಾರೆ. ಆದರೆ ಒಂದು ಹೇಳುವುದು, ಇದರ ಹಿಂದೆ Politicians. ಇದ್ದಾರೆ. ನಿಮ್ಮ ವೈಫಲ್ಯತೆಗಳನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ನಿಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಏಕೆ ಬೇರೆಯವರ ಮೇಲೆ ಗೂಬೆ ಕೂಡಿಸುತ್ತೀರಿ? ನಿಮ್ಮ responsibility Shirk ಮಾಡುವುದಕ್ಕೋಸ್ಕರ ಈ ಮಾತುಗಳನ್ನು ಹೇಳಿ, emotional ಆಗಿ ನೀವು ಹೇಳಿದರೆ, ಅದಕ್ಕೆ ಬಗೆಹರಿಯುವುದಿಲ್ಲ. emotional ಆಗಿ ಮಾತನಾಡಿದರೆ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. Practical ಆಗಿ ಹುಡುಕಿ. ಅದರ ಬಗ್ಗೆ ಏನು ಮಾಡಬೇಕು, ಎಲ್ಲಿ ತಪ್ಪಿರುತ್ತೀರಿ ಎನ್ನತಕ್ಕಂಥದ್ದನ್ನು ಬಿಟ್ಟು ಇವತ್ತು ವಿರೋಧ ಪಕ್ಷದವರ ಮೇಲೆ ರಾಜಕಾರಣಿಗಳ ಮೇಲೆ ನೀವು ಇವತ್ತು ಈ ಮಾತುಗಳನ್ನು ಹೇಳುತ್ತಿದ್ದೀರಿ. ಇದು ಸರಿಯಲ್ಲ ಎನ್ನತಕ್ಕಂಥದ್ದನ್ನು ನಿಮಗೆ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ಹೇಳಿದಿರಿ, ಶಾಲಿನ ಬಗ್ಗೆ, ನಾನು ಮೂರು ಸಲ ಹೇಳುತ್ತೇನೆ ಒಂದು ಸಲ ಅಲ್ಲ. ನೀವು

ಏನು oath ತೆಗೆದುಕೊಂಡಿರುತ್ತೀರಿ, ಇದು unconstitutional ಇದರ ಬಗ್ಗೆ ಮಾನ್ಯ ಸುರೇಶ್‌ಕುಮಾರ್‌ವರು ಹೇಳಲಿ. ಸಂವಿಧಾನದ ಪ್ರಕಾರ ಶಪತ್‌ನಿಧಿಯನ್ನು ನಮ್ಮ ಮುಖ್ಯಮಂತ್ರಿಗಳು ತೆಗೆದುಕೊಂಡಿದ್ದಾರೆ, ಅದು constitutional ಬಾಹಿರ ಅಲ್ಲ. constitution ಗೆ ಸಂಬಂಧಪಟ್ಟ formatನಲ್ಲಿ ತೆಗೆದುಕೊಂಡಿದ್ದಾರೆಂದರೆ, ನಾನು ಒಪ್ಪುತ್ತೇನೆ. ನೀವು ನಡೆದುಕೊಳ್ಳುವುದು unconstitutional ಅದು, ಯಾರೋ ಮೆಚ್ಚಗೆಗೋಸ್ಕರ ಮಾಡುವುದಲ್ಲ. ಒಂದು ಸಂವಿಧಾನವಿದೆ, ಈ ದೇಶದಲ್ಲಿ ಸ್ವಾತಂತ್ರ್ಯ ತಂದುಕೊಟ್ಟಂಥ ಅನೇಕ ಮಹನೀಯರು ಸೇರಿ ಆ ಸಂವಿಧಾನವನ್ನು ರಚಿಸಿದ್ದಾರೆ. ಅದು ಎಲ್ಲಕ್ಕಿಂತಲೂ ಪವಿತ್ರವಾದಂಥದ್ದು. ಯಾವುದೇ ಒಂದು ಧರ್ಮದ ಗ್ರಂಥಗಳು ಇರಬಹುದು. ಆ ಧರ್ಮದ ಗ್ರಂಥಗಳನ್ನು ನಾವು ನಮ್ಮ ನಮ್ಮ ಮನೆಯಲ್ಲಿ ಪೂಜೆ ಮಾಡುತ್ತೇವೆ. ಆದರೆ ಈ ಗ್ರಂಥ ಏನಿದೆ, ಸಂವಿಧಾನ ಏನು ಇದೆ, ಇಡೀ ದೇಶದ ಜನ ಪೂಜೆ ಮಾಡುತ್ತಾರೆ. ಇಡೀ ದೇಶದ ಜನ ಆ ಸಂವಿಧಾನದ ಪ್ರಕಾರ ನಡೆದುಕೊಂಡು ಹೋಗುತ್ತಾರೆಯೇ ಹೊರತಾಗಿ, ನನ್ನ ಇಚ್ಛೆ ಪ್ರಕಾರ, ನನ್ನ ಮನಸ್ಸಿನಲ್ಲಿರತಕ್ಕಂಥದ್ದು ನಾನು ಒಳಗೆ ಕೇಸರಿ, ಹೊರಗಡೆ ಹಸಿರು ಎಂದರೆ ಇದು ನಡೆಯುವುದಿಲ್ಲ. ಅದರೊಳಗೆ ಹಾಗೆ ಇಲ್ಲ. ನಿಮಗೆ ಒಳಗಡೆ ಕೇಸರಿ ಹೊರಗಡೆ ಆ ತರಹ ಇಲ್ಲ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ತಾವು ಸ್ಪಷ್ಟೀಕರಣವನ್ನು ಕೇಳಿ. ಮತ್ತೊಮ್ಮೆ ಚರ್ಚೆ ಮಾಡುವುದು ಬೇಡ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಇವರು ಬಹಳ ಸಿನಿಯರ್, ಇಲ್ಲಿ ಬಹಳ ಜನ ಹೊಸಬರು ಬಂದಿದ್ದಾರೆ. clarification ಕೇಳುವುದು ಬಿಟ್ಟು, ಇನ್ನೊಂದು ಭಾಷಣ ಮಾಡುವುದು ಸರಿಯೇ? ನಿಮ್ಮ ಭಾಷಣವನ್ನು ಕೇಳುವುದಕ್ಕೆ ಇಲ್ಲಿ ನಾವು ಬಂದು ಕುಳಿತಿದ್ದೇವೆ ಏನು? ಇವರು clarification ಕೇಳಲಿ, ಮತ್ತೆ ಮತ್ತೆ repeat ಮಾಡುವುದನ್ನು ಕೇಳುವುದಕ್ಕೆ ನಾವು ಇಲ್ಲಿ ಬಂದಿಲ್ಲ.

ಅಧ್ಯಕ್ಷರು: ಈ ವಿಷಯದ ಬಗ್ಗೆ ಹಿಂದೆ ಮಾತನಾಡಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಬರೆದು ಇಟ್ಟುಕೊಂಡಿದ್ದೇನೆ, ಇವರು ಏನು ಹೇಳಿದ್ದು ಅಂದರೆ, ನಾನು oath ತೆಗೆದುಕೊಂಡಿದ್ದು ಸರಿಯಿಲ್ಲವೆಂದು ಹೇಳಿದರು,

ಹೌದು. ನಾನು ತೆಗೆದುಕೊಂಡಿದ್ದೇ ಸರಿ ಎಂದು ಹೇಳುತ್ತಾರೆಂದರೆ, ಕಾನೂನು ಮಂತ್ರಿಗಳು ಬೇಕಾದರೆ ಹೇಳಲಿ, ಸಂವಿಧಾನದಲ್ಲಿ ಈ ರೀತಿ ಇದೆ, ಅವರು ತೆಗೆದುಕೊಂಡಿದ್ದು ಸರಿ ಎನ್ನತಕ್ಕಂಥದ್ದು ಹೇಳಲಿ. ಅವರು ಹೇಳಲಿಲ್ಲವೆ, ನಾನು ರೈತರ ಹೆಸರಿನ ಮೇಲೆ ತೆಗೆದುಕೊಂಡಿದ್ದು, ಅದು ಸರಿ ಇದೆ. ಯಾರು ಏನೇ ಹೇಳಲಿ ಎಂದು. ಅಂದರೆ ಈ ರೀತಿಯಾಗಿ ಗೊತ್ತಿದ್ದೂ ಗೊತ್ತಿದ್ದೂ ತಪ್ಪು ಮಾಡತಕ್ಕಂಥದ್ದು ಸರಿಯಲ್ಲ. ನಾನು ತಪ್ಪು ಹೇಳಿದ್ದೇ ಸರಿ ಎಂದು ಹೇಳಿದರೆ ಅದು ಹಿಟ್ಲರ್ ವಾದ ಆಗುತ್ತದೆ. (ಗೂಬೆಕ್ಸ್) ವಾದ ಆಗುತ್ತದೆ. ಅದಕ್ಕಾಗಿ ಆ ಕಡೆ, ಇನ್ನು ಮೇಲಾದರೂ ಸ್ವಲ್ಪ ಗಮನವನ್ನು ಕೊಡಿ. ಇಂತಹ ಪ್ರಸಂಗ ಬಂದಾಗ ಯಾವಾಗಲಾದರೂ ಇಲ್ಲಿ ಅಲ್ಲ ಇನ್ನೊಂದು ಕಡೆ ಆದರೂ oath ತೆಗೆದುಕೊಳ್ಳುವುದು ಬಂದಾಗ ಸಂವಿಧಾನದ ಪ್ರಕಾರ ತೆಗೆದುಕೊಳ್ಳಿ. ನಿಮ್ಮ ದೇವರು, ನಿಮ್ಮ ಮನೆಯ ದೇವರು ನಿಮ್ಮ ಯಾಗ, ಯಜ್ಞ, ಹವನಗಳು ನಿಮ್ಮ ಮನೆಯಲ್ಲಿ ಮಾಡಿಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಂದಿನ ಬಾರಿ ಮತ್ತು ಎಲ್ಲಾ ಬಾರಿ ಮುಖ್ಯಮಂತ್ರಿಗಳಾದಾಗ ಸಂವಿಧಾನಬದ್ಧವಾಗಿಯೇ ತೆಗೆದುಕೊಳ್ಳುತ್ತಾರೆ. ಇನ್ನು ಎಲ್ಲಾ ಸಾರಿ ಸಂವಿಧಾನಬದ್ಧವಾಗಿಯೇ ತೆಗೆದುಕೊಳ್ಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇನ್ನೊಂದು ನೀವು ಏನು ಹೇಳಿದಿರಿ ಎಂದರೆ, ಇದರ ಜೊತೆಯಲ್ಲಿ ಗೋಲಿಬಾರ್ ಬಗ್ಗೆ, ಈಗಾಗಲೇ judicial probe ಮಾಡಿದಿರಿ. ನಾನು ನಿಮ್ಮ ಎಲ್ಲರ ಬೇಡಿಕೆಯ ಮೇರೆಗೆ ನಾನು ಅದನ್ನು ಮಾಡಿದ್ದೇನೆ. ಮತ್ತೆ ನೀವು ಏಕೆ ಜಂಟಿಸದನದ ಸಮಿತಿ ಕೇಳುತ್ತಿದ್ದೀರಿ, ತಾವು judicial probe ಮಾಡುವುದಕ್ಕೆ ಏನು order issue ಮಾಡಿದ್ದೀರಿ, ಅದನ್ನು ನಾವು ಸ್ವಾಗತ ಮಾಡಿದ್ದೇವೆ. ನಿಮ್ಮ terms reference ಏನಿದೆ, ಅದನ್ನು ಸದನದ ಮುಂದೆ ಇಟ್ಟರೆ ಅದರಲ್ಲಿ ಏನು amendment ಮಾಡಬೇಕು, ಏನು ಸೇರಿಸಬೇಕು ಎನ್ನುವುದನ್ನು ಹೇಳೋಣ. ಅದು firing ಬಗ್ಗೆ ನೇರವಾಗಿ ಒಬ್ಬ ರೈತನಿಗೆ ಗುಂಡೇಟು ಹಾಕಿ ಕೊಂದಂಥ ವಿಷಯದಲ್ಲಿ, ಇದು ಏನು as ussual mobಗೆ ಗುಂಡೇಟು ಹಾಕಿ ಅಥವಾ disperse ಮಾಡುವುದಕ್ಕೆ ಹೊಡೆದಿರುವುದು ಅಲ್ಲ. ಗುರಿಯಿಟ್ಟು ಹೊಡೆದಂಥ ಗುಂಡು ಅದು ನಿಮ್ಮ ಕಾರ್ಯಕರ್ತರಿಗೆ ಹೊಡೆದಿದ್ದಾರೆಂದು ನೀವೇ ಹೇಳಿಕೊಳ್ಳುತ್ತಿದ್ದಿರಿ. ಆದರೆ ನಾವು ಅವನಿಗೆ ಒಬ್ಬ ಸಾಮಾನ್ಯ ರೈತ, ರೈತ ಕುಟುಂಬದಿಂದ ಬಂದಿದ್ದಾನೆ, ರೈತನ ಮಗ ಎಂದು ನಾವು ಕೂಡ ಹೋದೆವು. ನಾವು

ಸಾಂತ್ವನ ಮಾಡಿದ್ದೇವೆ. ನಾವು ನಮ್ಮ ಪಕ್ಷದ ವತಿಯಿಂದ ಎರಡು ಲಕ್ಷ ರೂ.ಗಳ ಸಹಾಯವನ್ನು ಮಾಡಿ ಬಂದಿದ್ದೇವೆ. ನಮಗೆ ಗೊತ್ತು, ನಿಮ್ಮ ಪಕ್ಷದವರೆ ಅವರು ಹೇಳಿದರೂ ಕೂಡ ಅವರ ಅಣ್ಣ ಕೂಡ ಹೇಳಿದಾ, ನಾವೆಲ್ಲಾ ಬಿಜೆಪಿಯ ಕಾರ್ಯಕರ್ತರೇ ಸರ್. ಆದರೆ ಈ enquiry ಯಲ್ಲಿ ನೇರವಾಗಿ ಗುಂಡು ಯಾರು ಹೊಡೆದರು ಎನ್ನುವುದರ ಬಗ್ಗೆ enquiry ಆಗಬೇಕು ಎನ್ನುವಂಥ ಮಾತು ಅವರೇ ಹೇಳಿದರು. ಅದಕ್ಕಾಗಿ ನಾವು Judicial probe ಕೇಳಿದ್ದೆವು. ಈ ಜಂಟಿ ಸದನ ಸಮಿತಿಯನ್ನು ಕೇಳುತ್ತಿರುವುದು ಏಕೆ ಎಂದರೆ, ಈ ಹಿಂದೆ ವೀರೇಶ್‌ರವರ ಕಮಿಟಿ ಒಂದಾಯಿತು. ಅದರ ಹಿಂದೆ ಜಿ.ಬಿ. ಶಿವಕುಮಾರ್ ಅವರ ಕಮಿಟಿ ಆಯಿತು. ಆದರೆ ಈಗ ಪುನಃ ಸರಣಿ ಸಾವು ಈಗ 24 ಆದೆವು. ನೀವು ನಿನ್ನೆಯವರೆಗೆ ಉತ್ತರ ಕೊಡುವವರೆಗೆ 11–12ರವೆರೆಗೆ ಅದು ನಿಂತಿತ್ತು. ನೀವು ಉತ್ತರ ಕೊಡುವುದಕ್ಕೆ ರೆಡಿ ಇದ್ದೀರಿ ಎಂದಾಗ ಪುನಃ ಇವತ್ತು 4–5 ಆಗಿವೆ. ಸುಮಾರು ಹೆಚ್ಚು ಕಡಿಮೆ 22 ಸಾವು, ದಿನಕ್ಕೊಂದು ಬಲಿ ತೆಗದುಕೊಂಡಂತೆ, ನೀವು ಅಂದರೆ ನಿಮ್ಮ ಬಗ್ಗೆ ವೈಯಕ್ತಿಕವಾಗಿ ಹೇಳುವುದಿಲ್ಲ. ನಿಮ್ಮ ಸರ್ಕಾರ. ಬಹಳ ದಿವಸ ಹೀಗೆ ಉಳಿದಿರಿ ಅಂದರೆ ಎಲ್ಲಾ ರೈತರು ಸತ್ತುಹೋಗುತ್ತಾರೆ. ದಯವಿಟ್ಟು ನಾವು ಆದಷ್ಟು ಬೇಗನೆ ನಿಮ್ಮಿಂದ ಮುಕ್ತಿ ಪಡೆಯಬೇಕಾಗುತ್ತದೆ. ಅದಕ್ಕಾಗಿ ಜಂಟಿ ಸಮಿತಿ ನಾವು ಕೇಳಿದ್ದು ಏಕೆಂದರೆ joint House Committee, ಇದು ಏಕೆಂದರೆ ನಿಜವಾಗಲೂ ಸತ್ಯಾಂಶ ಗೊತ್ತಾಗಲಿ, ಗೊಬ್ಬರದ ಕೊರತೆಯಿಂದ ಸತ್ತಿದ್ದಾರೋ, ಸಾಲದ ಬಾಧೆಯಿಂದ ಸತ್ತಿದ್ದಾರೋ, ಒಳಜಗಳಗಳಿಂದ ಸತ್ತಿದ್ದಾರೋ, ಅಥವಾ ರಾಜಕಾರಣಿಗಳು ಪುಸಲಾಯಿಸಿ ಕೊಂದಿದ್ದಾರೋ ಇವೆಲ್ಲಕ್ಕೂ ಕೂಡ, ತಿರುಗಾಡಿ, ಎಲ್ಲಾ ಕಡೆ ಅಡ್ಡಾಡಿ, ಏಕೆಂದರೆ ಈ terms of reference ನಲ್ಲಿ ಗೋಲಿಬಾರ್, ಫೈರಿಂಗ್ ವಿಷಯದಲ್ಲಿ ಅದು ಇಲ್ಲ. ಅದಕ್ಕಾಗಿ ಇದೆಲ್ಲವನ್ನೂ ಕೂಡ ನಮ್ಮ ಈ ಮನೆ ಶಾಸಕರು, ಆ ಮನೆ ಶಾಸಕರು ಎಲ್ಲರೂ ಹೋಗುತ್ತಾರೆ. ಸತ್ಯಾಂಶ ಗೊತ್ತಾಗುತ್ತದೆ. ಇದಕ್ಕೇನು ಪರಿಹಾರವನ್ನು ಕಂಡುಹಿಡಿಯಬೇಕು ಅದೂ ಕೂಡ ಗೊತ್ತಾಗುತ್ತದೆ ಮತ್ತು ನೀವು ತಕ್ಷಣ action ತೆಗೆದುಕೊಳ್ಳುವವರು. ಈಗ ಜಿ.ಬಿ. ಶಿವಕುಮಾರ್‌ದ್ದಾಗಲಿ, ವೀರೇಶ್ ಕಮಿಟಿ ರಿಪೋರ್ಟ್ ಮೇಲೆ ಬೇರೆ ಸರ್ಕಾರದವರು action ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ನೀವು ಬಂದ ತಕ್ಷಣ ತೆಗೆದುಕೊಳ್ಳುತ್ತೀರಿ. ಅದಕ್ಕೆ ತಡವೇನು ಆಗುವುದಿಲ್ಲ. ಅದಕ್ಕೆ ದಯವಿಟ್ಟು ನಮ್ಮ joint House Committee ಮಾಡಿ ಎಲ್ಲರಿಗೂ ಕೂಡ ಅದರಿಂದ ಒಂದು ಸಹಾಯ ಆಗುತ್ತದೆಂದು ಅದಕ್ಕಾಗಿ ಅದರ ಕಡೆ ಗಮನ ಕೊಡಬೇಕೆಂದು ನಾನು ಈಗಾಗಲೇ ಕೇಳಿದ್ದೇನೆ. ಆದರೆ ತಾವು ಅದನ್ನು ನಿರಾಕರಿಸಿದ್ದೀರಿ. ಅದರ ಜೊತೆಯಲ್ಲಿ

joint House Committee ನಾನು ಕೇಳಿದೆ. ಹಾವೇರಿ ಫೈರಿಂಗ್ ಬಗ್ಗೆ ತಾವು ಈಗಾಗಲೇ ಹೇಳಿದ್ದೀರಿ, ಅದಕ್ಕೆ terms of reference ನಲ್ಲಿ ಹೆಚ್ಚಿನ ರೀತಿಯಲ್ಲಿ ಏನು ತಾವು ತೆಗೆದುಕೊಂಡು ಮಾಡಬೇಕು. Compensation ಅವರೊಬ್ಬರಿಗೆ ಕೊಟ್ಟು ಬಂದಿರಿ. ಆ firing ನಲ್ಲಿ ಮಡಿದಂಥ ವ್ಯಕ್ತಿಗೆ ಎಲ್ಲರೂ ಕೊಟ್ಟರು. ಅದು deserving ಅವರಿಗೆ ಕೊಡಬೇಕು. ಆದರೆ ಉಳಿದ ಜನ ಏನಿದ್ದಾರೆ ಅದೇ 20–24 ಜನ ರೈತರು ಏನು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಅವರಿಗೂ ಕೂಡ ನೀವು compensation ಕೊಡಬೇಕು. ಅದರಲ್ಲಿ ಕೆಲವು fertilizer ಇರಬಹುದು. ಕೆಲವು ಸಾಲದ ಬಾಧೆಯಿಂದ ಇರಬಹುದು, ಸಾಲ ಇದೆಯೆಂದು ತಿಳಿದುಕೊಂಡೇ ನೀವು as a special case ಎಂದು ಅವರೆಲ್ಲರಿಗೂ ಕೂಡ ಸಹಾಯ ಮಾಡುವುದನ್ನು ಮಾಡಿದ್ದರೆ ಜನರ ಮನಸ್ಸಿನಲ್ಲಿ ಏನು ಸಂಶಯ ಮೂಡಿದೆ, ಹಾವೇರಿಯಲ್ಲಿ ಅವರ ಪಕ್ಷದವರು ಇದ್ದ ಕಾರಣ ಎಲ್ಲರೂ ಕೊಟ್ಟು ಕೊಟ್ಟು ಬಂದರು, ಬೇರೆಯವರಿಗೆ ಕೇಳುವವರು ಗತಿಯೇ ಇಲ್ಲ, ಅವರೇನು ರೈತರಲ್ಲವೇನು? ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ದಯವಿಟ್ಟು ಎಲ್ಲಾ ರೈತರು ಏನು ಮಡಿದಿದ್ದಾರೆ ಅಥವಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಅವರಿಗೆ compensation ಕೊಡಬೇಕು. ಒಂದು Joint house Committee, ಎರಡನೆಯದು ಫೈರಿಂಗ್ ದು terms of reference ಹೆಚ್ಚಿಗೆ ಮಾಡುವಂಥದ್ದು, ಮೂರನೆಯದು, compensation ನಾಲ್ಕನೆಯದು, ಸಾರ್ವಜನಿಕರಲ್ಲಿ ಏನು Agriculture Minister, ಮುಖ್ಯಮಂತ್ರಿಗಳು ಕೆಲವು ಕಡೆ openly ಏನು ಹೇಳಿದ್ದಾರೆಂದರೆ ಅವರನ್ನು ರೈತರೇ ಅಲ್ಲ ಮತ್ತು ರೈತರ ಕುಟಂಬಕ್ಕೆ ಸೇರಿಸವರಲ್ಲ, ಅಂಥ ಎಲ್ಲಾ ಜನ ಇವತ್ತು ಸತ್ತಿದ್ದಾರೆ. ಅದಕ್ಕೆ ನಮಗೆ ಸಂಬಂಧ ಇಲ್ಲ ಎನ್ನತಕ್ಕಂಥ ಮಾತು ಒಂದು. ಕೃಷಿ ಸಚಿವರು ದಾವಣಗೆರೆಯಲ್ಲಿ, ಹರಿಹರ ತಾಲ್ಲೂಕಿನ ಕುಮಾರ ಹಳ್ಳಿಯಲ್ಲಿದ್ದಂಥ ಮನುಷ್ಯ ಕುಡಿಯುತ್ತಿದ್ದ. ಅವನು ಕುಡುಕನಾಗಿದ್ದ ಅದಕ್ಕೆ ಸತ್ತಿದ್ದಾನೆ ಎಂಬ ಈ ಮಾತನ್ನು ಅವರ ಬಾಯಿಂದ ಕೇಳಿದ್ದೇವೆ. ಏನೆಂದರೆ you are insulting farming class. ಯಾವ ರೈತರ ಬಗ್ಗೆ ನಿಮಗೆ ಗೌರವವಿದೆ, ಆ ರೈತರ ಬಗ್ಗೆ ಈ ರೀತಿಯಾಗಿ ಮಾತನಾಡುವುದು ನಿಜವಾಗಲೂ ಇದು ಅವಹೇಳನಕರ ಮತ್ತು ಅವರಿಗೆ ನೀವು ಮಾಡುತ್ತಿರುವ insult. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ರೈತರಿಗೆ ಇದೊಂದು ಅಪಮಾನ ಮಾಡಿದ್ದೀರಿ. ಅದಕ್ಕೆ ದಯವಿಟ್ಟು ಅವರಲ್ಲಿ ನೀವು ಕ್ಷಮೆ ಕೇಳಿಕೊಳ್ಳಿ, ಆ ರೈತರಿಗೆ ಈ ರೀತಿಯಾಗಿ ಇನ್ನೊಮ್ಮೆ ನಾವು ಅನ್ನುವುದಿಲ್ಲವೆಂಬ ಮಾತು ನಿಮ್ಮ ಬಾಯಿಂದ ಬರಬೇಕು. ಏಕೆಂದರೆ ರೈತರು ನಮ್ಮ ದೇವರು ಎಂದು ಹೇಳಿಕೊಳ್ಳುತ್ತೀರಿ, ಅವರಿಂದಲೇ

Vol. 2. P.29

ನಾವು ಬಂದಿದ್ದೇವೆಂದು ಹೇಳಿಕೊಳ್ಳುತ್ತೀರಿ, ಅವರ ಬಗ್ಗೆ ನಿಮಗೆ ಇರತಕ್ಕಂಥ ನಿಮ್ಮ ಭಾವನೆ, ನಿಮ್ಮ ನಡವಳಿಕೆ, ನಿಮ್ಮ ನುಡಿ ನೋಡಿದರೆ ಖಂಡಿತವಾಗಿಯೂ ಇದು ಯಾರಿಗೂ ಗೌರವ ತರುವುದಿಲ್ಲ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು, ಕೃಷಿ ಸಚಿವರು ಇಬ್ಬರೂ ಕೂಡ ಈ ರಾಜ್ಯದ ಜನತೆ ಹಾಗೂ ರೈತರ ಬಗ್ಗೆ ಕ್ಷಮೆ ಕೇಳಬೇಕು. ಇಷ್ಟನ್ನು ನಾನು ಅವರ ಮುಂದೆ ಇಟ್ಟಿದ್ದೇನೆ. ದಯವಿಟ್ಟು ಇವೆಲ್ಲಕ್ಕೂ ಅವರು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ. ಬಹುಶಃ ಅವರು ಇದರ ಬಗ್ಗೆ ಅಪಾಲಜಿ ಕೇಳಿಕೊಳ್ಳುವುದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಚ್.ಡಿ. ರೇವಣ್ಣ (ಹೊಳೇನರಸೀಪುರ) :– ಸನ್ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷ ಹಾಗೂ ಜೆಡಿಎಸ್ ಪಕ್ಷದ ಬಗ್ಗೆ ಮಾತನಾಡಿ, 40 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷ, 12 ವರ್ಷ ಜೆಡಿಎಸ್ ಪಕ್ಷ ಆಡಳಿತದಲ್ಲಿ ಏನಾಗಿದೆಯೆಂದು ಸವಿಸ್ತಾರವಾಗಿ ಹೇಳಿದ್ದಾರೆ. ಆದರೆ ಇಲ್ಲಿ ಕೆಲವು ನಿಜವಾದಂತಹ ಮಾಹಿತಿಯನ್ನು ಅವರು ಮುಚ್ಚಿಟ್ಟಿದ್ದಾರೆಂದು ನಾನು-ಹೇಳಬೇಕಾಗುತ್ತದೆ. ಏಕೆಂದರೆ ಇಲ್ಲಿರುವುದು ನನ್ನದಲ್ಲ, ನಿಮ್ಮ ಇಲಾಖೆಯ ಮಾಹಿತಿಯಿದು. ಈ ರಾಜ್ಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ತೆಗೆದುಕೊಂಡಿದ್ದು 30–05–2008 ಕ್ಕೆ. 31–05–2008ಕ್ಕೆ ಯೂರಿಯಾ 1,88,307 ಟನ್ ಅಂತಿಮ ದಾಸ್ತಾನು ಇದ್ದುದು, ಡಿ.ಎ.ಪಿ, 24,119 ಟನ್, ಎಂ.ಒ.ಪಿ. 19,449 ಟನ್, ಕಾಂಪ್ಲೆಕ್ಸ್ 21,000 ಟನ್. 31–05–2008ಕ್ಕೆ ಸ್ಟಾಕ್ ಇದ್ದುದು ಸುಮಾರು 2,53,226 ಟನ್ ಎಂದು ಹೇಳಿ ಇಲಾಖೆಯುವರು ಹೇಳುತ್ತಾರೆ. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಸ್ಟಾಕ್ ಇತ್ತು. ಯಾವ್ಯಾವ ರೀತಿಯಿಂದ ವಿತರಣೆ ಮಾಡಿದ್ದಾರೆ, ಸಹಕಾರಿ ರಂಗದಿಂದ ವಿತರಣೆ ಮಾಡಿದ್ದಾರೆಯೇ ಅಥವಾ ಖಾಸಗಿ ಶಾಪ್‌ನಿಂದ ವಿತರಣೆ ಮಾಡಿದ್ದಾರೆಯೇ, ಇದರ ಬಗ್ಗೆ ಮಾಹಿತಿ ಕೇಳಿದ್ದೇನೆ, ಆದರೆ ಅದರ ಬಗ್ಗೆ ಚಕಾರ ಎತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು 40 ವರ್ಷ ಕಾಂಗ್ರೆಸ್ ಆಡಳಿತದ ಬಗ್ಗೆ, 12 ವರ್ಷ ಜೆಡಿಎಸ್ ಆಡಳಿತದ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿದ್ದಾರೆ. ಮಾಡಲಿ, ನಮಗೂ ಸಂತೋಷ, ಅದರ ಜೊತೆಗೆ ಹಾವೇರಿ ಗೋಲಿಬಾರ್ ಪ್ರಕರಣದಲ್ಲಿ ಸುಮಾರು 94 ಜನರನ್ನು ಅರೆಸ್ಟ್ ಮಾಡಿದ್ದಾರೆ. ಯಾರ್ಯಾರನ್ನು ಅರೆಸ್ಟ್ ಮಾಡಿದ್ದಾರೆ, ಕೆಲವು ಮಾಹಿತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಯಾವ್ಯಾವ ರೀತಿಯಿದೆ ಎಂಬುದನ್ನು ಡಿಟೇಲ್ ಆಗಿ ಕೊಟ್ಟಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇವರು ನಿಜವಾದ ರೈತರು ಅಥವಾ ರಸ್ತೆಯಲ್ಲಿ

ಓಡಾಡವವರನ್ನೆಲ್ಲಾ, ನಿನ್ನೆ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಹೇಳಿದರು, ಯಾರೋ ಪಾಪ ಸಿದ್ದಲಿಂಗಪ್ಪನವರನ್ನು ನೋಡಲಿಕ್ಕೆ ಹೋಗುವಾಗ ಚೆಂಬು ಇಟ್ಟುಕೊಂಡು ಹೋದಾಗ ಆ ಚೆಂಬು ಸಹಿತ ಅರೆಸ್ಟ್ ಮಾಡಿದರು. ಅಂತಹ ನಿರಪರಾಧಿಗಳನ್ನೆಲ್ಲಾ ಅರೆಸ್ಟ್ ಮಾಡಿರುವ ಬಗ್ಗೆ ಏನನ್ನೂ ಹೇಳಿಲ್ಲ. ಅದಾದ ಮೇಲೆ ಧಾರವಾಡದಲಿ, ಅನೇಕಲ್‌ನಲ್ಲಿ ಗಲಾಟೆ ಆಗಿ ಸಾರ್ವಜನಿಕ ಆಸ್ತಿ ನಷ್ಟವಾಯಿತು. ಎಷ್ಟು ನಷ್ಟವಾಯಿತು? ಯಾರು ಮಾಡಿದರು? ಇವರ ಮೇಲೆ ಏನು ಕೇಸ್ ಹಾಕಿದ್ದಾರೆ ಇಲ್ಲಿಯವರೆಗೆ? ಏತಕ್ಕೆ ಕೇಸ್ ಹಾಕಿಲ್ಲ? ಯಾರನ್ನು ಅರೆಸ್ಟ್ ಮಾಡಿದ್ದಾರೆ? ಉದ್ದೇಶ ಏನು ಹೇಳಲಿ. ಪಾಪ ಇವರ 23 ದಿನಗಳ ಆಡಳಿತದಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಗಳು ಆಡಳಿತಕ್ಕೆ ಬಂದು 23 ದಿನಗಳಾಗಿವೆ. ಅವರು ಆಡಳಿತ ಮಾಡುವಾಗ ಬಸ್ ಸುಟ್ಟು ಹಾಕಿದವರ ವಿರುದ್ಧ ಕೇಸ್ ಹಾಕುವುದಿಲ್ಲ. ರೈತರು ಗಲಾಟೆ ಮಾಡಿದಾಗ ಯಾರು ಆ ಘಟನೆಗೆ ಕಾರಣಕರ್ತರು? ಏತಕ್ಕೆ ಸಿದ್ಧಲಿಂಗಪ್ಪನವರು ಅಲ್ಲಿಗೆ ಹೋಗಿದ್ದರು? ಬಿಜೆಪಿ ಕಾರ್ಯಕರ್ತರು ಎಂದು ಅವರೇ ಹೇಳುತ್ತಾರೆ. ಅವರೇಕೆ ಪೊಲೀಸಿನವರಿಗೆ ಕಲ್ಲು ಹೊಡೆಯುತ್ತಿದ್ದರೆಂದು ಟಿ.ವಿ.ಯಲ್ಲಿ ತೋರಿಸುತ್ತಾರೆ. ಮೃತಪಟ್ಟಿರುವ ಸಿದ್ದಲಿಂಗಪ್ಪನವರು ಪೊಲೀಸಿನವರಿಗೆ ಕಲ್ಲು ಹೊಡೆಯುವುದನ್ನು ಟಿ.ವಿ.ಯಲ್ಲಿ ತೋರಿಸುತ್ತಿದ್ದಾರೆ. ಸಿದ್ದಲಿಂಗಪ್ಪ ಎನ್ನುವವರು ಯಾರು ತೀರಿ ಹೋಗಿದ್ದಾರೆ, ಅವರೇ ಕಲ್ಲು ಹೊಡೆಯುತ್ತಿರುವುದನ್ನು ತೋರಿಸುತ್ತಿದ್ದಾರೆ. ಬಿ.ಜೆ.ಪಿ. ಕಾರ್ಯಕರ್ತರೇ ಅವರ ಸರ್ಕಾರದ ಮೇಲೆ ಕಲ್ಲು ಹೊಡೆಯುತ್ತಿದ್ದಾರೆ ಎಂಬುದನ್ನು ಟಿ.ವಿ.ಯಲ್ಲಿ ಪ್ರತ್ಯಕ್ಷವಾಗಿ ಬೇಕಾದರೆ ನೋಡಲಿ. ಏಕೆಂದರೆ ಅವರು ದುಷ್ಟಶಕ್ತಿಗಳು ಸೇರಿ ಗಲಾಟೆ ಮಾಡಿಸಿ firing ಮಾಡಿಸಿದ್ದಾರೆಂದು ಹೇಳುತ್ತಾರೆ. ಹಾಗಾದರೆ ಸಿದ್ದಲಿಂಗಪ್ಪನವರು ದುಷ್ಟಶಕ್ತಿಗಳೇ? ಅವರು ಬಿ.ಜೆ.ಪಿಯ ವಿ.ಎಸ್.ಎಸ್,ಎನ್. ಅಧ್ಯಕ್ಷರು ಎಂದು ತಾವೇ ಹೇಳಿದ್ದೀರಿ. ಇದಕ್ಕೆ ಯಾವುದಕ್ಕೂ ಕ್ಲಾರಿಫಿಕೇಷನ್ ಇಲ್ಲದೆ ಸುಮ್ಮನೆ ಏಕಾಏಕಿ ಇದನ್ನು ಹೇಳುವುದು ಸೂಕ್ತವಲ್ಲವೆಂದು ನನ್ನ ಭಾವನೆ. ನನಗೆ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ದಾಸ್ತಾನು ಇತ್ತು. ಅಲ್ಲಿ ಗೊಬ್ಬರ ಬೇಕಾಗಿತ್ತೆ? ನಮ್ಮ ಕೃಷಿ ಇಲಾಖೆಯ ನಿರ್ದೇಶಕರು ಇರಬಹುದು, ಮಂಗಳೂರಿನಲ್ಲಿ ಮೂರು ಸಾವಿರ ಟನ್ ಗೊಬ್ಬರ ಹಾಗೆ ಇದೆಯೆಂದು ಪತ್ರಿಕೆಯಲ್ಲಿದೆ. ಅದನ್ನು ಎಲ್ಲಿ ಬೇಡಿಕೆ ಇದೆ, ಅಲ್ಲಿಗೆ ಡೈವರ್ಟ್ ಮಾಡಬಹುದಾಗಿತ್ತಲ್ಲ. ಬಳ್ಳಾರಿಯಲ್ಲಿ ದಾಸ್ತಾನು ಹಾಗೆಯೇ ಇತ್ತು, ಮೈಸೂರಿನ ರೈಲ್ವೆ ಯಾರ್ಡ್‌ನಲ್ಲಿ ಮೂರು ಸಾವಿರ ಟನ್ ಗೊಬ್ಬರ ಬೇಕಿಲ್ಲವೆಂದು ಹೇಳುತ್ತಿದ್ದಾರೆ. ಎಲ್ಲೇಲ್ಲಿ ಯಾವ್ಯಾವ ಬೆಳೆಗೆ ಗೊಬ್ಬರದ ಅವಶ್ಯಕತೆ ಇದೆ, ಅದರ ಬಗ್ಗೆ ಚಿಂತನೆ ಮಾಡಿದ್ದೀರಾ? 11ನೇ ತಾರೀಖು ಪತ್ರ

ಬರೆದಿದ್ದೇನೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳುತ್ತಿದ್ದಾರೆ. 30ನೇ ತಾರೀಖಿನಿಂದ 11ನೇ ತಾರೀಖಿನವರೆಗೆ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಎಲ್ಲಿ ಗೊಬ್ಬರದ ದಾಸ್ತಾನು ಇತ್ತು. ಅದು ಎಲ್ಲಿ ಬೆಳೆಗೆ ಅವಶ್ಯಕತೆ ಇತ್ತು, ಅದು ಏಕೆ ವಿಚಾರಣೆ ಮಾಡಲಿಲ್ಲ ಎಂಬುದನ್ನು ದಯಮಾಡಿ ರಾಜ್ಯದ ಜನತೆಗೆ ತಿಳಿಸಬೇಕು. ಏಕೆಂದರೆ, ಈಗ 500 ಕೋಟಿ ಕೊಡುತ್ತೇನೆಂದು ಹೇಳಿದ್ದಾರೆ. ಉದಾಹರಣೆಗೆ ಗುಜರಾತ್ ಫೆಡರೇಷನ್‌ನವರು ನಮಗೆ ಫರ್ಟಿಲೈಸರ್ಸ್‌ನ್ನು ಕೊಡಲು ತಯಾರಿದ್ದಾರೆ. ಅಲ್ಲಿ ಅದು ಹೇರಳವಾಗಿದೆ, ಕೊಡಲು ತಯಾರಾಗಿದ್ದೇವೆಂದು ಹೇಳುತ್ತಾರೆ. ಅದನ್ನು ಕೊಂಡುಕೊಳ್ಳಲು ಇವರು ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ? ಏಕೆ ತೆಗೆದುಕೊಂಡಿಲ್ಲ? ಏಕೆಂದರೆ ಸುಮ್ಮನೆ ಗೂಬೆ ಕೂರಿಸಿ ನಮ್ಮನ್ನು ದಿಕ್ಕು ತಪ್ಪಿಸುವುದು ಬೇಡ. ಕೇಂದ್ರ ಸರ್ಕಾರದಿಂದ ಬಂದಿಲ್ಲ ಅನ್ನುವುದು ಬೇಡ. ಈಗ ನಿಮ್ಮಲ್ಲಿ ಇರುವ ದಾಸ್ತಾನು 31-05-2008ಕ್ಕೆ ರಾಜ್ಯಪಾಲರ ಕಾಲದಲ್ಲಿ ಮಾಡಿಲ್ಲ ಎಂಬುದಲ್ಲ. ಈಗ ದೀಪಕ್ ವರ್ಮಾರವರು ಪತ್ರವನ್ನು ಬರೆದು ಸುಮಾರು 40 ಸಾವಿರ ಟನ್ ಗೊಬ್ಬರವನ್ನು ಕಳುಹಿಸಲು ತಯಾರಿದ್ದೇವೆ, ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಇವೆಲ್ಲಾ ರಾಜ್ಯಪಾಲರ ಕಾಲದಲ್ಲೇ ನಡೆದಿರುವುದು. ರಾಜ್ಯಪಾಲರ ಕಾಲದಲ್ಲಿ ಏನೇನಾಗಿದೆ ಎಂಬುದನ್ನು ಸಭೆಯ ಮುಂದೆ ಇಡಿ. ರೈತರ ಪರವಾಗಿ ಬೇಕಾದರೆ ಚರ್ಚೆ ಮಾಡೋಣ. ಸುಮ್ಮನೆ ಕೇಂದ್ರ ಸರ್ಕಾರವನ್ನು ಗುರಿಯಾಗಿಟ್ಟುಕೊಂಡು ದಾರಿ ತಪ್ಪಿಸುವುದಲ್ಲ. ಅದು ಆಗಬಾರದು. ಯಾರು ನಿರಪರಾಧಿಗಳನ್ನು ಅರೆಸ್ಟ್ ಮಾಡಿದ್ದಾರೆ, ಅದರ ಬಗ್ಗೆ ಚಿಂತನೆ ಇಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುವಾಗ ಯಾರು ನಿರಪರಾಧಿಗಳನ್ನು ಅರೆಸ್ಟ್ ಮಾಡಿದ್ದಾರೆ, ಅವರ ಕೇಸನ್ನು ವಾಪಸ್ ಪಡೆಯುತ್ತೇವೆ ಎಂಬ ಮಾತನ್ನು ಹೇಳಿದ್ದಾರೆಯೇ? ಧಾರವಾಡ, ಆನೇಕಲ್, ಮೈಸೂರು, ಬೆಂಗಳೂರು ಮುಂತಾದ ಕಡೆ ಬಸ್ಸನ್ನು ಸುಟ್ಟುಹಾಕಿರುವವರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆಯೇ? ಬಿ.ಜೆ.ಪಿ ಯವರು ಮಾಡಿದ್ದಾರೆ, ಬೇಡ ಎಂದು ಹೇಳುವುದಕ್ಕೆ ಒಂದು ಕಾನೂನನ್ನು ಇದ್ದರೆ ಹೇಳಲಿ. ನಾವು ಅದರ ಬಗ್ಗೆ ಹೇಳಲು ಹೋಗುವುದಿಲ್ಲ. ಬಿ.ಜೆ.ಪಿ. ಯವರು ಬಸ್ಸನ್ನು ಸುಟ್ಟರೆ ಕೇಸನ್ನು ಹಾಕುವುದಿಲ್ಲ, ಅರಸ್ಟ್ ಮಾಡುವುದಿಲ್ಲ ಎಂಬ ಮೆಸೇಜ್ ರಾಜ್ಯದ ಜನತೆಗೆ ಹೋಗಲಿ. ಅದರ ಬಗ್ಗೆ ಚಕಾರವನ್ನು ಎತ್ತಿಲ್ಲ ಎಂದರೆ ಇದರ ಅರ್ಥವೇನು? ಏನೋ ಸಭೆಯನ್ನು ಬೇರೆ ದಿಕ್ಕಿಗೆ ತಿರುಗಿಸುವುದಕೋಸ್ಕರ ವಿರೋಧ ಪಕ್ಷದ ಮೇಲೆ ಗೂಬೆ ಕೂರಿಸುವುದಕೋಸ್ಕರ ಮಾಡುತ್ತೇವೆಂದರೆ ನಮ್ಮ ಅಭ್ಯಂತರವೇನಿಲ್ಲ. ಇದಕ್ಕೆ ದಯಮಾಡಿ ಉತ್ತರ ಬಯಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :- ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಯವರು ನಿನ್ನೆ ಗೊಬ್ಬರದ ಸರಬರಾಜಿನ ವಿಷಯದಲ್ಲಿ ನಡೆದಿರುವ ಹಲವಾರು ಘಟನೆಗಳ ಬಗ್ಗೆ ನಡೆದಿರುವ ಚರ್ಚೆಗೆ ಉತ್ತರವನ್ನು ಕೊಡತಕ್ಕ ಸಂದರ್ಭದಲ್ಲಿ ಅವರಿಗೆ ಏನು ಮಾಹಿತಿಗಳನ್ನು ಕೊಟ್ಟಿದ್ದಾರೆ, ಅಧಿಕಾರಿಗಳು ಅವರಿಗೆ ಸರಿಯಾದ ಮಾಹಿತಿಯನ್ನು ಕೊಟ್ಟಿದ್ದಾರೋ ಇಲ್ಲವೊ ಗೊತ್ತಿಲ್ಲ. ಗೊಬ್ಬರದ ವ್ಯವಸ್ಥೆಯನ್ನು ಮುಂದಿನ ರೈತರಿಗೆ ಬಿತ್ತನೆಯನ್ನು ಮಾಡತಕ್ಕದ್ದಕ್ಕೆ ಸರಬರಾಜು ಮಾಡತಕ್ಕ ವಿಷಯದಲ್ಲಿ ಜವಾಬ್ದಾರಿ ಹೊತ್ತುಕೊಳ್ಳುತ್ತೇನೆ ಎಂಬ ವಿಷಯದಲ್ಲೂ ಅವರ ಬಾಯಿಯಿಂದ ಬರಲಿಲ್ಲ. 500 ಕೋಟಿ ರೂಪಾಯಿಯ ಡ್ರಾಫ್ಟ್‌ನ್ನು ನಿಮಗೇ ಕೊಟ್ಟುಬಿಡುತ್ತೇವೆಂದು ಹೇಳಿದರು. ನಾವು ನಿಮ್ಮಿಂದ 500 ಕೋಟಿ ಡ್ರಾಫ್ಟ್ ತೆಗೆದುಕೊಂಡು ಕೆಲಸ ಮಾಡಲು ಇಲ್ಲಿ ಇಲ್ಲ. ಅದು ನಿಮ್ಮ ಜವಾಬ್ದಾರಿ. ಈ ರೀತಿ ಉಡಾಫೆ ಮಾತನ್ನು ಆಡಬೇಡಿ ಎಂದು ನಾನು 31ನೇ ತಾರೀಖಿನಿಂದಲೂ ಹೇಳುತ್ತಿದ್ದೇನೆ. ಇವತ್ತು ಅದೇ ರೀತಿ ಧೋರಣೆಯನ್ನು ನೀವು ತೋರಿಸುತ್ತಿದ್ದೀರಿ. ಕೇಂದ್ರ ಸರ್ಕಾರದಿಂದ ಗೊಬ್ಬರನ್ನು ತರಿಸತಕ್ಕ ವಿಷಯದಲ್ಲಿ ರಾಜ್ಯಪಾಲರ ಆಡಳಿತದಲ್ಲಿ ಸರಿಯಾದ ರೀತಿಯಲ್ಲಿ ಕೆಲಸವನ್ನು ಮಾಡಿಲ್ಲವೆಂದು ಇವತ್ತು ಪದೇ ಪದೇ ಪ್ರಸ್ತಾಪ ಮಾಡಿದ್ದೀರಿ. ಕೃಷಿ ಸಚಿವರೂ ಮಾತನಾಡಿದ್ದಾರೆ. ಏಪ್ರಿಲ್ 11ನೇ ತಾರೀಖು ದೀಪಕ್‌ಕುಮಾರ್, ನಿರ್ದೇಶಕರು, ಭಾರತ ಸರ್ಕಾರ ಇವರು ಒಂದು ಪತ್ರ ಬರೆಯುತ್ತಾರೆ. "Kindly find enclosure of the minutes of the meeting held by the Secretary, Fertilizers on 5th April 2008 at Bangalore regarding availability of fertilizer particularly DAP and complex fertilizers in Karnataka State" ಎಂದು ಪತ್ರದಲ್ಲೇನು ನಮೂದು ಮಾಡುತ್ತಾರೆ, 05–04–2008ರಲ್ಲಿ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳ ಚರ್ಚೆಯಲ್ಲಿ ಏನೇನು ಚರ್ಚೆಗೆ ಬರುತ್ತದೆಂದರೆ "As regards DAP, the requirement for Karnataka is 27,000 MT in April 2008 and 62,000 MT in May 2008 totalling 89,000 MT. The availability in the field was only 3,821 MT." ಏನು ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ, "Besides, the quanitity of 14,200 MT of DAP is available at New Mangalore port. M/s. IPL was instructed to supply the entire quantity to Karnataka State thus as against a requirement of 27,000 MT for April. Already a stock of 18,000 MT was available as on 01-04-2008. Besides, the following companies have stated that

they would be supplying the following quantities in April and May roughly in equal proportions" ಎಂದು ಎಲ್ಲಾ ಹೇಳಿ Mangalore Chemicals & Fertilizers ನಿಂದ 8,000 MT, IFFCO ದಿಂದ 10,000 MT, Gujarat State Fertilizers Corporation ನಿಂದ 2,000 ಎಂದು ಎಲ್ಲಾ ಏನು ಹೇಳುತ್ತಾರೆ. "The total availability in April 2008, would thus be 31,711 MT. As regards in May 2008, M/s. IPL has been asked to supply the balance quantity of 45,000 MT of DAP to the state." ಅವರು ಆ ಪತ್ರದಲ್ಲಿ ಹೇಳುತ್ತಾರೆ "It is advised that the firm order may kindly be placed on M/s. IPL by making necessary payment for the supply of DAP. The firm order may also be placed for the stock of DAP lying at new Mangalore port." ಇದು ರಾಜ್ಯಪಾಲರ ಆಡಳಿತದಲ್ಲಿ ಯಾವುದೇ ರೀತಿಯ ನ್ಯೂನತೆಗಳು ಆಗಲಿಲ್ಲ. ಮಾನ್ಯ ರೇವಣ್ಣನವರು ಇಲ್ಲಿ ಹೇಳಿದಂತೆ ಏನು ಸರ್ಕಾರದ ಮಾಹಿತಿಗಳು ಇದೆ, ಮೇ ಮಾಹೆಯ ರಸಗೊಬ್ಬರ ಬೇಡಿಕೆ, ಲಭ್ಯತೆ ಮತ್ತು ಮಾರಾಟದ ವಿವರ, 31-05-2008 ರವರೆಗೆ ಯೂರಿಯಾ ಮಾರಾಟವಾಗಿರುವುದು 26,900 ಟನ್, ದಾಸ್ತಾನು ಇರತಕ್ಕದ್ದು 1,88,367 ಟನ್, 31-05-2008 ರವರೆಗೆ, ಡಿ.ಎ.ಪಿ. ಮಾರಾಟವಾಗಿರತಕ್ಕದ್ದು 34,903 ಟನ್, ದಾಸ್ತಾನು ಇರತಕ್ಕದ್ದು 24,119 ಟನ್. 31-05-2008 ರವರೆಗೆ total ಮಾರಾಟವಾಗಿರುವುದು 1,16,273 ಟನ್, ದಾಸ್ತಾನು 2,53,226 ಟನ್ ಇತ್ತು ಎಂದು ಇಲ್ಲಿ ಏನು ಮಾಹಿತಿಯನ್ನು ಕೊಟ್ಟಿದ್ದಾರೆ, ಇವರು ಅಧಿಕಾರ ಸ್ವೀಕಾರ ಮಾಡಿದ ನಂತರ ಏಕೆ ಈ ಗೊಬ್ಬರದ ಸಮಸ್ಯೆ ಉಂಟಾಯಿತು? ಏನು ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಪಕ್ಷದವರು ಈ ಒಂದು ಸಮಸ್ಯೆ ಉದ್ಭವವಾಗಲು ಕಾರಣಕರ್ತರೆ? ಇದರ ಬಗ್ಗೆ ಸಮರ್ಥವಾದ ಉತ್ತರವನ್ನು ಇಡಲು ಮಾನ್ಯ ಮುಖ್ಯಮಂತ್ರಿಯವರಿಗೆ ಏಕೆ ಸಾಧ್ಯವಾಗುತ್ತಿಲ್ಲ? ಮುಂದಿನ ದಿವಸಗಳಲ್ಲಿ ರೈತರಿಗೆ ಯಾವ ರೀತಿಯಾಗಿ ಗೊಬ್ಬರವನ್ನು ಸರಬರಾಜು ಮಾಡುತ್ತೇವೆ ಎಂಬ ಬಗ್ಗೆ ಚಕಾರ ಎತ್ತುತ್ತಿಲ್ಲ. ರೇವಣ್ಣನವರು ಹೇಳಿದಂತೆ ಬಂಧನಕ್ಕೆ ಒಳಗಾಗಿರತಕ್ಕ ಅಮಾಯಕರನ್ನು ಬಂಧನದಿಂದ ವಿಮುಕ್ತಿಗೊಳಿಸುತ್ತೇವೆ ಎಂಬ ವಿಷಯನ್ನೂ ಪ್ರಸ್ತಾಪ ಮಾಡುತ್ತಿಲ್ಲ. ಮೊನ್ನೆ ವಿರೋಧ ಪಕ್ಷದ ನಾಯಕರು ಅವರ ತಾಲ್ಲೂಕಿನಲ್ಲಿ ಆದಂಥ ಆತ್ಮಹತ್ಯೆ ಪ್ರಕರಣಕ್ಕೆ ಭೇಟಿ ಕೊಡಲು ಹೋದಾಗ ಅಲ್ಲಿ ಒಬ್ಬ ವಿ.ಎಸ್.ಎಸ್.ಎನ್. ಸೊಸೈಟಿಯ ಅಧ್ಯಕ್ಷನಿಗೆ ಸಾರ್ವಜನಿಕವಾಗಿ ಹೊಡೆದಂಥವರನ್ನು ಇಲ್ಲಿಯವರೆಗೆ ಅರಸ್ಟ್ ಮಾಡಿದ್ದಾರೊ ಇಲ್ಲವೊ ಎಂಬುದನ್ನು ಸದನದ ಗಮನಕ್ಕೆ ತರಲಿಲ್ಲ.

ಅದನ್ನು ನಾವೆಲ್ಲ ಟಿ.ವಿ.ಗಳಲ್ಲಿ ನೋಡಿದ್ದೇವೆ.

(ಮಾನ್ಯ ಎನ್. ಯೋಗೇಶ್‌ಭಟ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಲ್ಲಿ ನಡೆದಂಥ ಘಟನೆಯಲ್ಲಿ ಯಾರು ಅವರ ಮೇಲೆ ದೈಹಿಕವಾಗಿ ಹಲ್ಲೆ ಮಾಡಿದ್ದಾರೆ, ಯಾರನ್ನು ಅರೆಸ್ಟ್ ಮಾಡಿದ್ದಾರೆ ಎಂಬ ಬಗ್ಗೆ ಮುಖ್ಯಮಂತ್ರಿಯವರು ಕೊಡತಕ್ಕ ಹೇಳಿಕೆ ಎಂದು ಹೇಳಲು ಬಯಸುತ್ತೇನೆ. ಪದೇ ಪದೇ ರೈತರ ಹೆಸರಿನಲ್ಲಿ ನಾವು ಬಂದಿದ್ದೇವೆ, ನಾವೆಲ್ಲರು ರೈತರ ಮಕ್ಕಳು ಎಂದು ಹೇಳುವುದಲ್ಲ. ಇಲ್ಲಿರುವ ನಾವೆಲ್ಲರೂ ರೈತರ ಮಕ್ಕಳೇ ಎಲ್ಲರೂ ರೈತರ ಕುಟುಂಬದಿಂದ ಬಂದಿರತಕ್ಕವರೇ, ನೀವೊಬ್ಬರೇ ರೈತರ ಮಕ್ಕಳು ಎಂದು ಹೇಳಲು ಸಾಧ್ಯವಿಲ್ಲ. ನಾವೂ ರೈತರ ಮಕ್ಕಳೇ ಆದರೆ, ಹೆಸರಿಗೆ ರೈತರ ಮಕ್ಕಳು ಎಂದು ಮಾತಿನಲ್ಲಿ ಹೇಳುವುದರ ಬದಲಾಗಿ ಕೃತಿಯಲ್ಲಿ ತರುವುದರಲ್ಲಿ ಏನು ಸಂಪೂರ್ಣವಾಗಿ ವಿಫಲರಾಗಿದ್ದೀರಿ ಎಂಬುದನ್ನು ಸದನದ ಮುಂದೆ ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು 500 ಕೋಟಿಯವರೆಗೆ ಹಣವನ್ನು ನಿಮ್ಮ ಕೈಗೇ ಡ್ರಾಫ್ಟ್‌ನ್ನು ಕೊಡುತ್ತೇವೆ ಎಂಬ ಮಾತನ್ನು ಹೇಳುತ್ತಿದ್ದೀರಿ, ಇವತ್ತು ನೀವೆಲ್ಲರೂ ಕುಳಿತಿದ್ದೀರಿ. ಇವತ್ತು ಸರ್ಕಾರ ಜನರ ಬೆಂಬಲದಿಂದ ಬಂದಿದ್ದೇವೆ. ರೈತರು ನಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ ಎಂದು ಹೇಳುತ್ತಿದ್ದೀರಿ. ಇವತ್ತು ಗುಜರಾತ್‌ನ ಮುಖ್ಯಮಂತ್ರಿಗಳು 15 ದಿವಸಗಳ ಕಾಲ ಇಡೀ ರಾಜ್ಯದ ಪ್ರವಾಸ ಮಾಡಿದ್ದಾರೆ.

5–00 P.M.

ನಿಮ್ಮ ಪಕ್ಷದ ಪರವಾಗಿ ಮತವನ್ನು ಪಡೆಯುವುದಕ್ಕೆ ಅವರು 15 ದಿವಸ ಇಲ್ಲಿ ಹೋಟಾಟ ಮಾಡಿದ್ದಾರೆ. ಗುಜರಾತ್‌ನಲ್ಲಿ ಈಗ ಗೊಬ್ಬರದ ಅವಶ್ಯಕತೆ ಇಲ್ಲ. ಅಲ್ಲಿ ಜುಲೈ ಮತ್ತು ಆಗಸ್ಟ್ ತಿಂಗಳ ನಂತರ ಗೊಬ್ಬರದ ಅವಶ್ಯಕತೆ ಇದೆ. ನಿಮ್ಮ ಪಕ್ಷದವರೇ ಆದ ಗುಜರಾತ್‌ನಲ್ಲಿ ಮುಖ್ಯಮಂತ್ರಿಗಳಾಗಿದ್ದಾರೆ. ಗುಜರಾತ್ ಮಾದರಿ ಸರ್ಕಾರ ಕೊಡುತ್ತೇವೆ ಎಂದು ನೀವೇ ಹಲವಾರು ಬಾರಿ ಹೇಳಿದ್ದೀರಿ. ಮೋದಿಯವರಿಗೆ ಮನವಿ ಮಾಡಿ, ಅಲ್ಲಿಂದ ಗೊಬ್ಬರ ತೆಗೆದುಕೊಂಡು ಬನ್ನಿ ಸ್ವಾಮಿ. ಅಲ್ಲಿರುವ ಗುಜರಾತ್ ಫರ್ಟಿಲೈಸರ್ಸ್ ಕಂಪೆನಿ, ಅದು ಗುಜರಾತ್ ಸರ್ಕಾರದ ಕಂಪೆನಿಯಾಗಿದೆ. ಏತಕ್ಕಾಗಿ ಅಲ್ಲಿಂದ ನಿಮ್ಮ ಕೈಯಲ್ಲಿ ತರಲಿಕ್ಕೆ ಸಾಧ್ಯವಾಗಲಿಲ್ಲ? ನೀವು ನಿಮ್ಮ ಪಕ್ಷದಲ್ಲಿ ಇರತಕ್ಕಂಥ ಆಂತರಿಕ ದೌರ್ಬಲ್ಯಗಳನ್ನು ಸರಿಪಡಿಸುವ ಕಡೆಗೆ ಗಮನ ಕೊಡಲಿಕ್ಕೆ ಹೊರಟಿರಿ. ಇವತ್ತು ರೈತರ ಬಗ್ಗೆ ಗಮನ ಕೊಡುವುದರಲ್ಲಿ ಸಮಯವನ್ನು ಮೀಸಲಾಗಿಡದೆ, ನೀವು ಮಾಡಿರತಕ್ಕಂಥ

ವೈಫಲ್ಯವನ್ನು ಮುಚ್ಚಿಟ್ಟುಕೊಳ್ಳುವುದಕ್ಕೆ 'ವಿರೋಧ ಪಕ್ಷಗಳು ರಾಜಕೀಯವನ್ನು ಮಾಡುತ್ತಿದ್ದಾರೆ, ರಾಜಕೀಯ ಶಕ್ತಿಗಳು ಈ ಒಂದು ಘಟನೆಗೆ ಕಾರಣ' ಎಂದು ಪದೇ ಪದೇ ಹೇಳುತ್ತಿದ್ದೀರಿ.

ಇವತ್ತಿನಿಂದ ವಿರೋಧ ಪಕ್ಷದಲ್ಲಿ ಇರತಕ್ಕಂಥ ನಾವುಗಳು ಯಾವ ವಿಷಯಗಳನ್ನೂ ಸಹ ಸಾರ್ವಜನಿಕವಾಗಿ ಪ್ರಸ್ತಾಪ ಮಾಡಬಾರದು ಎಂದು ಹೇಳಿಬಿಡಿ. ಈ ರಾಜ್ಯದಲ್ಲಿ ಯಾವುದೇ ರೈತರುಗಳು ಆತ್ಮಹತ್ಯೆ ಮಾಡಿಕೊಂಡಾಗ ನೀವ್ಯಾರು ಆ ರೈತರು ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ಕುಟುಂಬಗಳಿಗೆ ಭೇಟಿ ಮಾಡತಕ್ಕಂಥ ಕೆಲಸ ಮಾಡಬೇಡಿ. ನಾನೇ ಎಲ್ಲಾ ಜವಾಬ್ದಾರಿಯನ್ನೂ ನಿರ್ವಹಿಸುತ್ತೇನೆ ಎನ್ನತಕ್ಕಂಥ ಮಾತನ್ನು ನೀವು ಹೇಳುವುದಾದರೆ ಇವತ್ತಿನಿಂದ ನಾವು ಯಾವುದೇ ವಿಷಯಗಳ ಬಗ್ಗೆ ಚರ್ಚೆ ಮಾಡುವುದಿಲ್ಲ. ನಾವು ಮಾಡತಕ್ಕಂಥ ಚರ್ಚೆಗಳ ಬಗ್ಗೆ ನೀವು ಕೇವಲ ರಾಜಕೀಯವನ್ನು ಮಾತ್ರ ಬೆರೆಸುತ್ತಿದ್ದೀರಿ. '23 ದಿವಸಗಳ ಕಾಲ ಮುಖ್ಯಮಂತ್ರಿಯಾಗಿ ನಾನು ಕೆಲಸವನ್ನು ಪ್ರಾರಂಭ ಮಾಡಿದ್ದೇನೆ, ಅಸುಯೆಗೋಸ್ಕರವಾಗಿ ಇವತ್ತು ನನ್ನ ಮೇಲೆ ಇಲ್ಲಸಲ್ಲದ ಗೂಬೆಯನ್ನು ಕೂರಿಸುತ್ತಿದ್ದೀರಿ, ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರುವುದಕ್ಕೆ ಹೊರಟಿದ್ದೀರಿ' ಎಂದು ಪದೇ ಪದೇ ಹೇಳುವುದನ್ನು ನಿಲ್ಲಿಸಿ. ನಿಮ್ಮ ಅಧಿಕಾರಿಗಳಲ್ಲಿ ವಿಶ್ವಾಸವನ್ನು ಮೂಡಿಸಿ, ಕೆಲಸವನ್ನು ಮಾಡತಕ್ಕಂಥ ಕೆಲಸಕ್ಕೆ ಕೈ ಹಾಕಿ. ನನಗೂ ಗೊತ್ತಿದೆ, ನಾನು ಮುಖ್ಯಮಂತ್ರಿಯಾಗಿ ನಿಮ್ಮಗಳ ಸಹಕಾರದಿಂದ ಕೆಲಸವನ್ನು ಮಾಡಿದ್ದೇನೆ. ಮೊದಲು ನಿಮ್ಮ ಅಧಿಕಾರಿ ವರ್ಗದಲ್ಲಿ ಇರತಕ್ಕಂಥ ಅವಿಶ್ವಾಸ, ಗುಂಪುಗಾರಿಕೆಗಳನ್ನು ಸರಿಪಡಿಸಿಕೊಂಡು ಸರಿಯಾದ ರೀತಿಯಲ್ಲಿ ಕೆಲಸ ಮಾಡಿ. ನಮ್ಮಗಳ ಮೇಲೆ ಗೂಬೆ ಕೂರಿಸತಕ್ಕಂಥ ಕೆಲಸಕ್ಕೆ ಕೈ ಹಾಕಬೇಡಿ. ನಿಮ್ಮ ಆಡಳಿತ ಪ್ರಾರಂಭ ಮಾಡಿದ ಒಂದೇ ವಾರದಲ್ಲಿ 60 ಅಧಿಕಾರಿಗಳನ್ನು transfer ಮಾಡಲಿಕ್ಕೆ ಹೊರಟಿರಿ, ಇದು ನಮಗೆ ಗೊತ್ತಿದೆ. ಇವತ್ತು ನಿಮ್ಮ Principal Secretary ಒಬ್ಬ ಅಧಿಕಾರಿಗೆ ಯಾವ ರೀತಿಯ ಮಾತುಗಳನ್ನು ಆಡಿದ್ದಾರೆ ಎನ್ನತಕ್ಕದ್ದೂ ಸಹ ನನ್ನ ಗಮನದಲ್ಲಿದೆ. ಅವರೇನೂ ದೇವಲೋಕದಿಂದ ಇಳಿದು ಬಂದಿರತಕ್ಕಂಥವರು ಅಲ್ಲ. ಇಲ್ಲಿ ಕುಳಿತಿದ್ದಾಗ ಕುತ್ತಿಗೆ ಪಟ್ಟಿಗೆ ಕೈ ಹಾಕಿದಂತಹ ಘಟನೆ ಈ ಸದನದಲ್ಲಿ ನಡೆದಿತ್ತು. ಅಂತಹ ವ್ಯಕ್ತಿಯನ್ನು ಇವತ್ತು ನಿಮ್ಮ Principal Secretary ಆಗಿ ಮಾಡಿಕೊಂಡಿದ್ದೀರಿ. ಅವರು ಯಾವ ಪದವನ್ನು ಬಳಸಿದ್ದಾರೆ ಎಂಬ ಬಗ್ಗೆ ನನ್ನ ಹತ್ತಿರ ಮಾಹಿತಿ ಇದೆ. ಇದು ನಡೆಯುವುದಿಲ್ಲ. ನಿಮ್ಮ Principal Secretary ಇವತ್ತು ಕುಳಿತುಕೊಂಡು transfer

ಮಾಡತಕ್ಕಂಥ ಸಂದರ್ಭದಲ್ಲಿ ಕೆಲವು ಸಮಾಜಕ್ಕೆ ಸೇರಿದಂತಹ ವ್ಯಕ್ತಿಗಳನ್ನು ಗುರಿಯಾಗಿಟ್ಟುಕೊಂಡು ಯಾವ ರೀತಿಯ ತೀರ್ಮಾನಗಳನ್ನು ಮಾಡಿದ್ದಾರೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಇಂತಹ ಕೆಲಸಕ್ಕೆ ನಿಮ್ಮ ಸಮಯವನ್ನು ಮೀಸಲಾಗಿಟ್ಟಿದ್ದೀರಿ. ಇದಲ್ಲ ನಿಮ್ಮ ಕೆಲಸ. ಇವತ್ತು ಗೊಬ್ಬರದ ಸಮಸ್ಯೆ ಏನಿದೆ. ಅದರ ಬಗ್ಗೆ ನಾವು ಹೋರಾಟ ಮಾಡಬೇಕಾಗುತ್ತದೆ. ನಮ್ಮ ಕೆಲಸ ಅದೇ. ಇವತ್ತು ಸಾರ್ವಜನಿಕರಿಗೆ ತೊಂದರೆಯಾದಾಗ ಸರ್ಕಾರದ ವಿರುದ್ಧವಾಗಿ ಜನ ಸಂಘಟನೆ ಮಾಡತಕ್ಕ ವಿರೋಧ ಪಕ್ಷದ ಕರ್ತವ್ಯವೇನಿದೆ, ಆ ಕೆಲಸವನ್ನು ಮಾಡಬೇಡಿ ಎಂದು ಹೇಳತಕ್ಕಂಥ ಮಾತನ್ನು ಹೇಳಲಿಕ್ಕೆ ನಿಮಗೆ ಯಾವುದೇ ನೈತಿಕ ಹಕ್ಕಿಲ್ಲ ಎಂಬ ಮಾತನ್ನು ಹೇಳುತ್ತೇನೆ. ಇವತ್ತು ಗೊಬ್ಬರದ ಬಗ್ಗೆ ನೀವು ಸರಿಯಾದ ರೀತಿಯ ಸಂದೇಶವನ್ನೇನು ಇವತ್ತು ರೈತರಿಗೆ ಕೊಡಬೇಕಾಗಿದೆ, ಆ ಸಂದೇಶವನ್ನು ನೀವು ಇಲ್ಲಿ ಕೊಡಬೇಕಾಗುತ್ತದೆ. ಇವತ್ತು 500 ಕೋಟಿ ರೂ.ಗಳ ಡ್ರಾಫ್ಟ್ ಅನ್ನು ಈ ಭಾಗದಲ್ಲಿ ಇರತಕ್ಕವರ ಕಡೆಗೆ ಕೊಟ್ಟು ಬಿಡುತ್ತೇನೆ. ನೀವೇ ಗೊಬ್ಬರ ತೆಗೆದುಕೊಂಡು ಬನ್ನಿ ಎಂದು ಹೇಳುವುದು ಸರಿಯಲ್ಲ. ನಿಮ್ಮ ಕೈಯ್ಯಲ್ಲಿ ಆ ಕೆಲಸ ಮಾಡಲಿಕ್ಕೆ ಸಾಮರ್ಥ್ಯತೆ ಇಲ್ಲವೆನ್ನುವುದಾದರೆ, ಮೊದಲು ರಾಜೀನಾಮೆ ಕೊಟ್ಟು ಹೊರಗಡೆ ಹೋಗಿ ಎಂಬ ಮಾತನ್ನು ಹೇಳಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ) :– ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯೆಲ್ಲಾ ಚರ್ಚೆ ಮಾಡಿದ್ದಕ್ಕೆ ಸಾಕಷ್ಟು ರೀತಿಯಲ್ಲಿ ಸಮಾಧಾನದಿಂದ ಉತ್ತರವನ್ನೂ ಕೂಡ ಕೊಟ್ಟಿದ್ದಾರೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಉತ್ತರ ಕೊಡುವ ಸಂದರ್ಭದಲ್ಲಿ ಎಲ್ಲೋ ಒಂದು ಕಡೆಗೆ ನಾನು ರೈತರ ಪರವಾಗಿ ಇರತಕ್ಕಂಥ ಕಳಕಳಿಯನ್ನು ಇಟ್ಟುಕೊಂಡಿದ್ದೇನೆ, ನನ್ನಿಂದ ಏನೂ ತಪ್ಪಾಗಿಲ್ಲ, ನಾವು ಎಲ್ಲಾ ರೀತಿಯಲ್ಲೂ ಕೂಡ ಚಾಚೂ ತಪ್ಪದೆ ಎಲ್ಲಾ ಕಾರ್ಯಕ್ರಮಗಳನ್ನು ನಿರ್ವಹಿಸಿದ್ದೇವೆ ಎಂಬ ಭಾವನೆ ಬರತಕ್ಕಂಥ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತೇನೆ. ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಬರೇ clarification ಮಾತ್ರ ಕೇಳುತ್ತೇನೆ. ಇದು ಮುಖ್ಯ ಕಾರ್ಯದರ್ಶಿಗಳು ಬರೆದಿರತಕ್ಕಂಥ ಕಾಗದದಲ್ಲಿ ಉಲ್ಲೇಖ ಮಾಡಿರತಕ್ಕಂಥದ್ದು. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಗೊಬ್ಬರದ ಕೊರತೆ ಬರಲೇ ಇಲ್ಲ, ಸಾಕಷ್ಟು ದಾಸ್ತಾನು ಇತ್ತು. ತೊಂದರೆಯೇ ಆಗಲಿಲ್ಲ.

ರಾಜ್ಯಪಾಲರ ಆಡಳಿತದಲ್ಲಿ.....

ಅಧ್ಯಕ್ಷರು :– ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಅದು repeat ಆಗುವುದು ಬೇಡ.

ಶ್ರೀ ಟಿ.ಬಿ. ಜಯಚಂದ್ರ :– ನಾನು ಮತ್ತೆ ಆ ವಿಷಯನ್ನು repeat ಮಾಡುವುದಿಲ್ಲ. ನಾನು ಓದುತ್ತಿರುವುದು ಬೇರೆ ಪ್ಯಾರ.

. "Overall for the month of June 2008, the position of urea and MOP is very comfortable. The Chief Secretary himself informed the Chief Minister that the supply of fertilizers has been made as planned by Government of India and that is for the State Government officials now to monitor the fertilizer supply position on day to day basis. Unfortunately this was not done properly and hence the adverse situation is some districts.

ಮುಖ್ಯ ಕಾರ್ಯದರ್ಶಿಗಳೇ ಈ ಮಾತನ್ನು ಹೇಳಬೇಕಾದರೆ ಇದಕ್ಕೇನು ಸ್ವಾಮಿ ತಮ್ಮ ಉತ್ತರ? ತಾವು ಹೇಳಬೇಕು ಅದನ್ನು Lapses ಏನೂ ಇಲ್ಲ ಎನ್ನತಕ್ಕಂಥ ರೀತಿಯಲ್ಲಿ ಉತ್ತರ ಕೊಟ್ಟರಲ್ಲಾ, ನಿಮ್ಮಲ್ಲಿ lapses ಇದೆ. ಎನ್ನುವುದನ್ನು ನಿಮ್ಮ ಮುಖ್ಯ ಕಾರ್ಯದರ್ಶಿಗಳೇ ಇವತ್ತು ಹೇಳಿರಬೇಕಾದಾಗ ಏನು ಕಾರ್ಯಕ್ರಮ ಸ್ವಾಮಿ ತಮ್ಮದು? ಇನ್ನೊಂದು ಮುಖ್ಯವಾಗಿ ಅಧ್ಯಕ್ಷರೆ, ವಿರೋಧ ಪಕ್ಷದವರು ಕೇಂದ್ರಕ್ಕೆ ಹೋಗುತ್ತೀರಿ, ನೀವು ಏನೂ ಒತ್ತಾಯ ಮಾಡಲಿಲ್ಲ. ನೀವ್ಯಾರೂ ಕೂಡ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಲಿಲ್ಲವೆಂದು ಹೇಳಿದಿರಿ. ಮುಖ್ಯ ಕಾರ್ಯದರ್ಶಿಗಳು ಬರೆದಿರತಕ್ಕಂಥ. ಕಾಗದ 10ನೇ ತಾರೀಖು. 10ನೇ ತಾರೀಖಿನವರೆಗೂ ಎಲ್ಲಾ position comfortable ಇದೆ. ಏನೂ ತೊಂದರೆ ಇಲ್ಲ. ಇವತ್ತು 24ನೇ ತಾರೀಖು ಅಷ್ಟೆ ತದನಂತರ ನೀವು ವಿರೋಧ ಪಕ್ಷದ ನಾಯಕರನ್ನೆಲ್ಲಾ ಕರೆದು, ವಿಚಾರವನ್ನು ಮಾಡಿದ್ದರೆ, ಬಹುಶಃ ಇನ್ನೂ ಅದಕ್ಕೆ ಪರಿಹಾರ ಸಿಗುತ್ತಿತ್ತು. ಎಲ್ಲೋ ಒಂದು ಕಡೆಗೆ ಜವಾಬ್ದಾರಿಯಿಂದ ನೀವು ಏನೂ ಮಾಡಲಿಲ್ಲವೆನ್ನುವಂತಹ ರೀತಿಯಲ್ಲಿ ಮೂದಲಿಸತಕ್ಕದ್ದು ತರವಲ್ಲ. ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ನಿನ್ನೆ ನಾನು ಪ್ರಸ್ತಾಪ ಮಾಡಿದೆ. ಇವತ್ತು ನೀವು revolving fund ನಲ್ಲಿ ಹಣ ಇಟ್ಟುಕೊಂಡಿದ್ದೀರಿ, ನೀವು ಅದನ್ನು advance ಮಾಡಿ ಎನ್ನತಕ್ಕಂಥ ಮಾತನ್ನು ಹೇಳಿದೆ. ಇವತ್ತು ಮಾನ್ಯ ಕುಮಾರಸ್ವಾಮಿಯವರ ಕಡೆಗೆ ಬೆರಳು ತೋರಿಸಿ, ಇವತ್ತು 500 ಕೋಟಿ ರೂ.ಗಳ

ಡ್ರಾಫ್ಟ್ ಕೊಡುತ್ತೇವೆ. ನೀವು ಹೋಗಿ ತನ್ನಿ ಎನ್ನತಕ್ಕಂಥ ಮಾತುಗಳನ್ನು ಹೇಳುವ ಬದಲು ದಯಮಾಡಿ ಕೇಂದ್ರದ ಕೃಷಿ ಸಚಿವರಿಗೆ ಈ ಮಾತನ್ನು ಹೇಳಿ. ಈ ಮಾತನ್ನು ಅವರಿಗೆ ನೀವು ಮೊದಲೇ ಹೇಳಿದ್ದರೆ ಬಹುಶಃ ಬಹಳಷ್ಟು ಸುಧಾರಿಸುತ್ತಿತ್ತು ಎಂಬುದು ನನ್ನ ಸ್ಪಷ್ಟವಾಗಿರತಕ್ಕಂಥ ಅಭಿಪ್ರಾಯವಾಗಿದೆ. ಈಗಲೂ ಕೂಡ ಆ ಮಾತನ್ನು ಹೇಳಲಿಕ್ಕೆ ಸಾಧ್ಯವಿದೆ. ಅದನ್ನು ಹೇಳಿ ತರಿಸತಕ್ಕಂಥ ಕೆಲಸವನ್ನು ಮಾಡಿ. ಇವತ್ತು ಗೋಲಿಬಾರ್ ಆದಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದೀರಿ. ಇದರಲ್ಲಿ anti-social elements, ರಾಜಕಾರಣಿಗಳು ಎಲ್ಲರೂ ಇದ್ದಾರೆ ಎನ್ನತಕ್ಕಂಥ ಮಾತನ್ನು ಹೇಳುವಂತಹ ಸಂದರ್ಭದಲ್ಲಿ ಬಹುಶಃ ಎಲ್ಲೋ ಒಂದು ರೀತಿಯಲ್ಲಿ ಅವರ ಹೆಸರುಗಳನ್ನು ಹೇಳದಿದ್ದರೆ ಏನೋ ಒಂದು ರೀತಿಯಲ್ಲಿ ಶಾಸಕರನ್ನು black mail ಮಾಡುತ್ತಿದ್ದೀರಿ ಎನ್ನುವತಕ್ಕಂಥ ಭಾವನೆ ಬರುತ್ತದೆ. ಯಾರು ಅದರಲ್ಲಿ involve ಆಗಿದ್ದಾರೆ ಎಂಬ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇದ್ದರೆ, ಅದನ್ನು ಹೇಳುವುದಕ್ಕೆ ನಿಮಗೇನು ತೊಂದರೆ ಇರಲಿಲ್ಲ. ಆ ಮಾತನ್ನು ಹೇಳಬೇಕು. ಆ ಮಾತನ್ನು ಹೇಳಬೇಕಾದಾಗ, ಎಲ್ಲೋ ಅ ಕಡೆಗೆ ಇರಬಹುದು, ಈ ಕಡೆಗೆ ಇರಬಹುದು, ಅವರಿಗೆ black mail ಮಾಡುತ್ತಿದ್ದೀರಿ ಎನ್ನುವಂತಹ ಭಾವನೆ ಬರುತ್ತದೆ. ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ bio fertilizers ಬಗ್ಗೆ ತಾವು ಮಾತನಾಡಿದ್ದೀರಿ. ಅದರು ಹೆಚ್ಚು ಬಳಕೆ ಆಗಬೇಕು, ರೈತರಿಗೆ ಅ ಬಗ್ಗೆ ತಿಳುವಳಿಕೆ ಕೊಡಬೇಕು ಎಂದು ಹೇಳಿದ್ದೀರಿ. ನಾನು ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಯಾವುದೇ ಸದನದ ಸಮಿತಿ, ಇವತ್ತು ಶಿವಕುಮಾರ್‌ರವರ ಅಧ್ಯಕ್ಷತೆಯಲ್ಲಿ ಇದ್ದಂತಹ ಸಮಿತಿ ಇರಬಹುದು, ಅಥವಾ ಶಿರಾ firing ಸಂದರ್ಭದಲ್ಲಿ ರಚಿಸಿದಂತಹ ಸಮಿತಿ ಕೊಟ್ಟಂತಹ ಸಲಹೆಗಳು ಇರಬಹುದು, ಆ ಸಮಿತಿಗಳು ಕೊಟ್ಟಂತಹ ಸಲಹೆಗಳ ಮೇಲೆಯೇ ಸರ್ಕಾರಿ ಆದೇಶಗಳು ಹೊರಟಿವೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಏಕೆ ಜಂಟಿ ಸದನ ಸಮಿತಿ ರಚಿಸಲು ನಾವು ಒತ್ತಾಯವನ್ನು ಮಾಡುತ್ತಿದ್ದೇವೆ ಎಂದರೆ, ಆ ಸಮಿತಿಯಲ್ಲಿ ನಾವು ನಿರ್ದಿಷ್ಟವಾಗಿ ವಿಚಾರವನ್ನು ಹೇಳಿದಂತಹ ಸಂದರ್ಭದಲ್ಲಿ ಇವತ್ತು ಕೊಟ್ಟಂತಹ ಸಲಹೆ ಮೇಲೆ ಸರ್ಕಾರಿ ಆದೇಶಗಳು ಹೊರ ಬೀಳುತ್ತದೆ, ಇದರಿಂದ ಪರಿಸ್ಥಿತಿ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ. ಜಂಟಿ ಸದನ ಸಮಿತಿಯ ಅವಶ್ಯಕತೆ ಇದೆ ಎನ್ನುವುದಕ್ಕೋಸ್ಕರ ಆ ಮಾತನ್ನು ಹೇಳುತ್ತೇನೆ. ಮತ್ತೊಂದು ಬಹಳ ಮುಖ್ಯವಾಗಿ ಇರತಕ್ಕಂಥದ್ದು ಎಂದರೆ, ನೀವು ಇಲ್ಲಿಯವರೆಗೂ ಆಗಿರುವುದಕ್ಕೆ ವಿವರಣೆ ಕೊಟ್ಟಿದ್ದೀರಿ. ಜುಲೈ ಮತ್ತು ಆಗಸ್ಟ್ ತಿಂಗಳಿಗೆ ಕಷ್ಟವಾಗುತ್ತದೆ ಎಂದು ನಾನು ಆತಂಕ ವ್ಯಕ್ತಪಡಿಸಿದೆ.

ಅದಕ್ಕೇನು ಪರಿಹಾರ? ಯಾವ ರೀತಿಯಲ್ಲಿ ಗೊಬ್ಬರದ ತೊಂದರೆಯನ್ನು ಇವತ್ತು ನಿವಾರಿಸತಕ್ಕ ಕೆಲಸವನ್ನು ನೀವು ಮಾಡುತ್ತೀರಿ ಎಂಬ ಬಗ್ಗೆ ಕೂಡ ತಾವು ಮಾತನಾಡಬೇಕಾಗುತ್ತದೆ. ಇವತ್ತು ನಾನು ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಕೃಷಿ ಸಚಿವರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಸತ್ತಿರತಕ್ಕವರೆಲ್ಲಾ ನೈಜವಾಗಿ ಇರತಕ್ಕಂಥ ರೈತರಲ್ಲ...

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೂ ಸಹ ಆ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಆ ವಿಷಯವನ್ನು ತಾವು ಚರ್ಚೆ ಮಾಡುವಾಗ ಸಹ ಮಾತನಾಡಿದ್ದೀರಿ. ಮತ್ತೆ ಅದನ್ನು repeat ಮಾಡಬೇಡಿ. ಏನಾದರೂ ಸ್ಪಷ್ಟೀಕರಣ ಕೇಳುವುದಿದ್ದರೆ ಕೇಳಿ. ನೀವು ಚರ್ಚೆ ಮಾಡಿದ್ದೀರಿ ಮತ್ತೆ ಅದನ್ನೇ ಇಲ್ಲಿ ಹೇಳುವುದರಲ್ಲಿ ಏನು ಅರ್ಥವಿದೆ? ಅದಕ್ಕೆ ಈಗಾಗಲೇ ಅವರು ಉತ್ತರ ಕೊಟ್ಟರು. Again ಅದನ್ನೇ ನೀವು ಹೇಳುವುದರಲ್ಲಿ ಅರ್ಥವಿಲ್ಲ. ಇದು ಮತ್ತೊಂದು ಚರ್ಚೆಯನ್ನು ಪ್ರಾರಂಭ ಮಾಡಿದಂತಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲವನ್ನೂ ಹೇಳಿದ್ದಾರೆ. ನೀವು senior member ಆಗಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಆಯಿತು. ಮಾನ್ಯ ಶಿವಕುಮಾರ್‌ಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಾಗ ಆ ವಿಷಯವನ್ನು ಪ್ರಸ್ತಾಪಿಸುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದಲ್ಲಿ ಕುಳಿತ್ತಿದ್ದಾಗ, ಇವತ್ತು ರೈತರ ಬಗ್ಗೆ ವೀರೇಶ್ ಕಮಿಟಿ ಕೊಟ್ಟ ವರದಿಯನ್ನು reject ಮಾಡಬೇಕೆಂದು ಹೇಳಿದ್ದರು...

ಅಧ್ಯಕ್ಷರು: Again ಅದನ್ನೇ ಚರ್ಚೆ ಮಾಡುವುದರಲ್ಲಿ ಏನು ಆರ್ಥವಿದೆ?

ಶ್ರೀ ಟಿ.ಬಿ. ಜಯಚಂದ್ರ: ಅದರಲ್ಲಿ alcoholicಎನ್ನವತಕ್ಕಂಥ ಶಬ್ದ ಬಂದಿದೆ ಎಂದು ನೀವು ಆಗ ಹೇಳಿದ್ದೀರಿ. ಆದೇ ಮಾತನ್ನು ನಿಮ್ಮ ಕೃಷಿ ಸಚಿವರು ಮತ್ತು ನಿಮ್ಮ ಭಾಗದ ಶಾಸಕರು ಹೇಳುತ್ತಿದ್ದಾರೆ. ನೀವು ರೈತರ ಕ್ಷಮೆ ಕೇಳಬೇಕೋ ಬೇಡವೋ ಎಂಬುದನ್ನು ತಾವು ಯೋಚನೆ ಮಾಡಿ. ಆ ದೃಷ್ಟಿಯಿಂದ ನೀವು ಈ ರೀತಿಯಾಗಿರತಕ್ಕಂಥ ಉತ್ತರಗಳನ್ನು ಕೊಟ್ಟರೆ ಸಮಾಧಾನವಾಗುವುದಿಲ್ಲ. ಇವತ್ತು ನಿಮ್ಮ ಹೇಳಿಕೆಗಳಿಗೆ ನೀವು ಬಲವಾಗಿ ಸಮರ್ಥನೆ ಮಾಡತಕ್ಕಂಥ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ (ಕನಕಪುರ): ಮಾನ್ಯ ಅಧ್ಯಕ್ಷರೆ, ಕೆಲವರು, ಮುಖ್ಯಮಂತ್ರಿಗಳು ಬಹಳ ಸಮಾಧಾನವಾಗಿ ಮಾತನಾಡಿದರೆಂದು ಹೇಳಿದರು. ನನಗೆ ಅವರು ವಿರೋಧ ಪಕ್ಷದ ನಾಯಕರು ಮಾತನಾಡಿದಂತೆ ಆಯಿತು. ವಿರೋಧ ಪಕ್ಷದ ನಾಯಕರು ಯಾವ ಟೋನ್‌ನಲ್ಲಿ ಮಾತನಾಡುತ್ತಿದ್ದರೋ ಅದೇ ಟೋನ್ ಇತ್ತು. ತಾವು ದೆಹಲಿಯಲ್ಲಿ ನಾನು ಹೋರಾಟ ಮಾಡುತ್ತೇನೆಂದು ಒಂದು ಹೇಳಿಕೆಯನ್ನು ಕೊಟ್ಟೀರಿ. ಯಾರ ಮೇಲೆ ಹೋರಾಟ ಮಾಡುತ್ತೇವೆಂದು ಹೇಳಿದರೋ ನನಗೆ ಗೊತ್ತಾಗಲಿಲ್ಲ. ಕೇಂದ್ರ ಸರ್ಕಾರದ ಮೇಲೆ ಹೋರಾಟ ಮಾಡಿತ್ತಿದ್ದೀರೊ, ನಿಮ್ಮ ಪಕ್ಷದವರ ಮೇಲೆ ಹೋರಾಟ ಮಾಡುತ್ತಿದ್ದಿರೊ, ಗೊತ್ತಾಗಲಿಲ್ಲ. ಒಟ್ಟಿನಲ್ಲಿ ನಾನು ಹೋರಾಟ ಮಾಡುತ್ತೇನೆಂದು ನೀವು ಅಲ್ಲೊಂದು ಹೇಳಿಕೆಯನ್ನು ಕೊಟ್ಟಿರಿ. ನಮ್ಮ ಮೊದಲನೇ ಬೇಡಿಕೆ. ರೇವಣ್ಣನವರು ಪ್ರಸ್ತಾಪ ಮಾಡಿದರು. ನಮ್ಮ ಪಕ್ಷದ ಪರವಾಗಿ ಮೊದಲು ರೈತರ ಮೇಲೆ ಏನೇನು ಕೇಸ್ ಹಾಕಿದ್ದಾರೆ, ಅವೆಲ್ಲಾ ವಾಪಸ್ ತೆಗೆದುಕೊಳ್ಳಬೇಕೆಂಬುದು ನಮ್ಮ ಪಕ್ಷದ ಬೇಡಿಕೆ. ಏಕಂದರೆ, ತಾವು ಬಹಳ ಯಶಸ್ವಿಯಾಗಿದ್ದಿರಿ, ನೀವು ಬಹಳ successful ಸ್ಥಾನದಲ್ಲಿ ಕುಳಿತಿದ್ದೀರಿ. ಏಕೆಂದರೆ ನಿಮ್ಮ ಊರಿನಲ್ಲಿ ಏನೇ ಗಲಾಟೆಯಾದರೇ ಎಲ್ಲಿಯೂ ಕೇಸ್ ಇಲ್ಲ. ಆನೇಕಲ್‌ನಲ್ಲಾದರೂ ಕೇಸ್ ಇಲ್ಲ, ನಮ್ಮ ಮೈಸೂರಿನಲ್ಲಾದರೂ ಕೇಸ್ ಇಲ್ಲ. ಪಾಪ, ಅವರ ಮೇಲೆ ಯಾವ ಕೇಸ್ ಇಲ್ಲ. ಇಲ್ಲಿ ರೈತರ ಮೇಲೆಲ್ಲಾ ಕೇಸ್ ಹಾಕಿ ಒದ್ದು ಒಳಕ್ಕೆ ಹಾಕುತ್ತಿದ್ದಾರೆ. ಈ ರಾಜ್ಯದ ಮುಖ್ಯಮಂತ್ರಿಗಳು ಈ ಕೇಸ್‌ಗಳ ಬಗ್ಗೆ ರೈತರ ಬಗ್ಗೆ ಏನು ಧೋರಣೆ ಇದೆ ಎಂಬುದನ್ನು ದಯವಿಟ್ಟು ತಿಳಿಸಬೇಕು. ಬೇರೆ ಎಲ್ಲೂ ಕೇಸ್ ಇಲ್ಲ. ಬರೀ ಇವರ ಮೇಲೆ ಕೇಸ್, ರೈತರ ವಿಚಾರ ಬಂದಾಗ ಮಾತ್ರ ಕೇಸ್, ಒದ್ದು ಒಳಕ್ಕೆ ಹಾಕುವುದು, ಇನ್ನು ಎಲ್ಲೂ ಕೇಸ್ ಇಲ್ಲ. ಸಾತನೂರಿನಲ್ಲಾದಾಗಲೂ ಕೇಸ್ ಹಾಕಿಲ್ಲ. ನಾನು ಇನ್ನೊಂದು ಪ್ರಮುಖವಾದ ವಿಚಾರವನ್ನು ಹೇಳುವುದಕ್ಕೆ ಬಯಸುವುದೇನೆಂದರೆ, ಮುಖ್ಯಮಂತ್ರಿಗಳು ಬಹಳ ಒಳ್ಳೆಯ ಕೆಲಸವನ್ನೂ ಮಾಡಿದ್ದಾರೆ, ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಆಂದರೆ ಸತ್ತ ಕುಟುಂಬಕ್ಕೆ compensation ಆಗಿ ಸರ್ಕಾರಿ ನೌಕರಿಯನ್ನು ಕೊಡುತ್ತೇನೆಂದು ಹೇಳಿರುವುದನ್ನು ನಾವು ಮಾಧ್ಯಮದಲ್ಲಿ ಓದಿದ್ದೇವೆ, ಆದರೆ ಒಂದನ್ನು ಈ ರಾಜ್ಯದ ಜನತೆಗೆ ಈ ನಮ್ಮಂತಹವರಿಗೆ ತಿಳಿಸಬೇಕಾದ್ದು, ಯಾವ ಕಾನೂನಿನ ಅಡಿಯಲ್ಲಿ ಪಾಪ ಒಬ್ಬ ರೈತನಿಗೆ ಅವಕಾಶ ಮಾಡಿಕೊಟ್ಟಿರಿ, ಏಕೆಂದರೆ ಮುಂದಕ್ಕೆ ನಮಗೂ ತಿಳಿವಳಿಕೆ ಬೇಕಾಗುತ್ತದೆ. ಯಾವುದಾದರೂ ಒಂದು ಅಮೆಂಡ್‌ಮೆಂಟ್ ಆಯಿತಾ, ಒಂದು ಸ್ಪೆಷಲ್ ಅರ್ಡರ್ ಆಯಿತಾ, ನಾನು ಸರ್ಕಾರದಲ್ಲಿದ್ದು ಸುಮಾರು 6–7 ವರ್ಷವಿದ್ದು ಕೆಲಸ

ಮಾಡಿದ ಅನುಭವವಿದೆ. ಏಕೆಂದರೆ ರೈತನಿಗೆ ಸಹಾಯ ಮಾಡಿದ್ದು ಒಳ್ಳೆಯದು, ನಾನು ತಪ್ಪೆಂದು ಹೇಳುವುದಿಲ್ಲ. ಆದರೆ ಎಲ್ಲಿ ಅವಕಾಶವಿತ್ತು. ಹೇಗೆ ಮಾಡಿದರು, ಒಂದು ತಿದ್ದುಪಡಿಯನ್ನೇನಾದರೂ ತಂದಿರಾ, ಇಲ್ಲದಿದ್ದರೆ ಏನಾದರೂ ಆರ್ಡಿನೆನ್ಸ್ ಪಾಸ್ ಮಾಡಿದಿರಾ, ಇಲ್ಲಾ, ಆ ವಿಚಾರ ಈ ಅಸೆಂಬ್ಲಿಯಲ್ಲೇನಾದರೂ ಬರುತ್ತದೆಯಾ ಎನ್ನುವುದನ್ನು ದಯವಿಟ್ಟು ಈ ರಾಜ್ಯದ ಜನತೆಗೆ ತಿಳಿಸಿದರೆ ಬಹಳ ಉತ್ತಮ. ಅದು ಎಲ್ಲಿದೆ ಎಂದು ತೋರಿಸಿ ಸ್ವಾಮಿ, ಸಿ.ಎಂ. list ನಲ್ಲಿ ಎಲ್ಲಿದೆ ತೋರಿಸಿ? ನಾನು ಕೇಳುತ್ತಿರುವುದು ಫಂಡ್ ಅಲ್ಲ ಒಂದು ಜಾಬ್. ಏಕೆಂದರೆ ಇದು ಒಬ್ಬರಿಗೆ ಸೀಮಿತವಾಗುವುದಕ್ಕೆ ಸಾಧ್ಯವಿಲ್ಲ. ಇದು ಎಲ್ಲಾ ಸಂದರ್ಭದಲ್ಲಿ C & R rule ನಲ್ಲಿ ಇದಾಗಬೇಕಾಗುತ್ತದೆ. ನೀವು ಒಬ್ಬ ಮುಖ್ಯಮಂತ್ರಿಯಗಿದ್ದುಕೊಂಡು ನಾಳೆ ಬೆಳಿಗ್ಗೆ ಯಾರನ್ನಾದರೂ ನೇಮಕಾತಿ ಮಾಡಕೊಳ್ಳಬಹುದು. ನಾಳೆ ಬೆಳಿಗ್ಗೆ ಒಂದು ನಿಮಿಷದಲ್ಲಿ ಬೇಕಾದರೆ ನೇಮಕಾತಿ ಮಾಡಿಕೊಳ್ಳಬಹುದು. ಹಿಂದೆ ಕುಮಾರಸ್ವಾಮಿಯವರು ಕೂಡ ಯಾರೋ ಹನೀಫ್ ಎಂಬ ಒಬ್ಬ ವೈದ್ಯರನ್ನು ಕರೆದು, ನಾನು ಸರ್ಕಾರದ ನೌಕರಿಯನ್ನು ಕೊಡುತ್ತೇನೆಂದು ಆಹ್ವಾನ ಮಾಡಿದ್ದರು. ಒಬ್ಬ ವೈದ್ಯರಿಗೆ ಎಲ್ಲಿ ನೌಕರಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ನಮಗೆ ಆಶ್ಚರ್ಯವಾಗಿತ್ತು. ಹಾಗೆ ಒಬ್ಬ ರೈತನಿಗೆ ಕೊಟ್ಟಿದ್ದು ನಮಗೆ ಬಹಳ ಸಂತೋಷ. ನಮಗೆ ಹಿರಿಮೆ ಇದೆ, ಇದು ಮುಂದುವರೆಯಬೇಕು. ಎಲ್ಲೆಲ್ಲಿ ಗೋಲಿಬಾರ್ ಆಗಿ ಗುಂಡೇಟಿನಿಂದ ಸತ್ತಂಥ ರೈತರಿಗೆ ಈ ಸರ್ಕಾರದಿಂದ ಅಂಥವರಿಗೆ ಸಹಾಯವಾಗಬೇಕು. ಅದಕ್ಕೆ ಯಾವ ಕಾನೂನಿನ ಅಡಿಯಲ್ಲಿ ತಾವು ಸಹಾಯ ಮಾಡಿದ್ದೀರಿ ಎಂಬುದನ್ನು ತೋರಿಸಬೇಕು. ನೀವು ದುಡ್ಡು ಕೊಟ್ಟ ವಿಚಾರವನ್ನು ನಾನು ಕೇಳುತ್ತಿಲ್ಲ. ಸ್ವಾಮಿ ಏಕೆಂದರೆ, ಯಾರೊ ನೌಕರಿಯಲ್ಲಿದ್ದುಕೊಂಡು ಅವರ ಮನೆಯವರಿಗೆ ಕಾಂಪೆನ್ಸೇಷನ್ ಕೊಟ್ಟರೆ ಪರವಾಗಿಲ್ಲ. ಒಬ್ಬ ರೈತ ಮನೆಯವರಿಗೆ ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕೆ ಎಲ್ಲಿ ಅವಕಾಶವಾಯಿತು. ಇದನ್ನು ಮುಂದಕ್ಕೆ ಹೇಗೆ ಮುಂದುವರೆಸಿಕೊಂಡು ಹೋಗಬೇಕು. This is an office ಇದು institution. ವ್ಯಕ್ತಿಯಲ್ಲ, ಇದೊಂದು ಸರ್ಕಾರ, ಈ ಸರ್ಕಾರ ಮುಂದುವರೆದುಕೊಂಡು ಹೋಗಬೇಕಾಗುತ್ತದೆ, ಇದು ಇಲ್ಲಿಗೆ ನಿಲ್ಲುವುದಕ್ಕೆ ಸಾಧ್ಯವಿಲ್ಲ. ಈ ಪ್ರಾರಂಭಕ್ಕೆ ಒಂದು ಕೊನೆ ಇರಲೇಬೇಕಾಗುತ್ತದೆ. ಅದಕ್ಕೆ ನಾನು ಈ ಸಂದರ್ಭದಲ್ಲಿ ಅವರನ್ನು ಕೇಳುತ್ತಿದ್ದೇನೆ, ಅವರುಇಷ್ಟನ್ನು ಮಾತ್ರ ನನಗೆ ಹೇಳಿದರೆ ನನಗೆ ಹೇಳಿದರೆ ನನಗೆ ಬಹಳ ಸಂತೋಷ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಪುಟ್ಟೇಗೌಡರಂತಹ ಹಿರಿಯರು, ಇತರೆ ನಮ್ಮ ಹಿರಿಯ ಸದಸ್ಯರಿಗೆ ಹೇಳುವುದೇನೆಂದರೆ, ಅನಗತ್ಯವಾಗಿ ಯಾರಾದರೂ ರೈತರ ಮೇಲೆ ಕೇಸ್ ಹಾಕಿದ್ದರೆ ಪರಿಶೀಲನೆ ಮಾಡಿ ತಕ್ಷಣ ವಾಪಸ್ ತೆಗೆದುಕೊಳ್ಳುವುದಕ್ಕೆ ನಾನು ಈಗಲೇ ಆದೇಶವನ್ನು ಕೊಡುತ್ತೇನೆ. ಅದರ ಬಗ್ಗೆ ಎರಡನೇ ಮಾತಿಲ್ಲ. ಅನುಕಂಪದ ಆಧಾರದ ಮೇಲೆ ಸಚಿವ ಸಂಪುಟದ ನಿರ್ಧಾರದ ಮೇಲೆ ಸರ್ಕಾರದ ಆದೇಶ ಹೊರಡಿಸಲಾಗಿದೆ, ಅದರ ಪ್ರಕಾರ ಸರ್ಕಾರಿ ನೌಕರಿಯನ್ನು ಕೊಟ್ಟಿದ್ದೇವೆ. ಇದೊಂದು ವಿಶೇಷ ಪ್ರಕರಣವೆಂದು ಮಾಡಿದ್ದೇವೆ. ಸರ್ಕಾರ ಮಾಡಬೇಕಾದರೆ ಜವಾಬ್ದಾರಿಯಿಂದಲೇ ಮಾಡಿದೆ. ಯಾವುದೇ ರಸಗೊಬ್ಬರದ ಕಂಪನಿ ಕೇಂದ್ರ ಸರ್ಕಾರದ ಅದೇಶದ ಅನುಸಾರ, ಯಾವುದೇ ರಾಜ್ಯಕ್ಕೆ ರಸಗೊಬ್ಬರವನ್ನು ಸರಬರಾಜು ಮಾಡುತ್ತಾರೆ. ನಾವು ನೇರವಾಗಿ ಕಂಪನಿಗಳಿಂದ ನಾವು ಖರೀದಿ ಮಾಡುವುದಕ್ಕೆ ಕೇಂದ್ರ ಸರ್ಕಾರ ಅನುಮೋದನೆ ಇಲ್ಲ. ಆ ಕೇಂದ್ರ ಸರ್ಕಾರದ ಅನುಮೋದನೆ ಇಲ್ಲದೆ, ಕೇಂದ್ರ ಸರ್ಕಾರ ಯಾವ ಪ್ಲಾನ್ ಪ್ರಕಾರ ರಸಗೊಬ್ಬರವನ್ನು ವಿತರಣೆ ಮಾಡಬೇಕೆಂದು ಹೇಳಿರುತ್ತದೆಯೋ ಆ ಪ್ರಕಾರವಾಗಿ ವಿತರಣೆ ಮಾಡತ್ತದೆಯೋ ಹೊರತು ಬೇರೆ ರೀತಿಯಲ್ಲಿ ವಿತರಣೆ ಮಾಡುವುದಕ್ಕೆ ಬರುವುದಿಲ್ಲ. ಹಿಂದಿನ ಹಿಂಗಾರು 2007–2008ರಲ್ಲಿ ಬರಬೇಕಾದ DAP 2.25 ಮೆಟ್ರಿಕ್ ಟನ್ ಆದರೆ ಬಂದ ಪ್ರಮಾಣ 1.47 ಮೆಟ್ರಿಕ್ ಟನ್, ಕೊರತೆ 80 ಸಾವಿರ ಮೆಟ್ರಿಕ್ ಟನ್, ಕಾಂಪ್ಲೆಕ್ಸ್ ರಸಗೊಬ್ಬರದ ಪೂರೈಕೆ 2.39 ಲಕ್ಷ ಟನ್ ಗೊಬ್ಬರ, ಆದರೆ ಕಾಂಪ್ಲೆಕ್ಸ್ ಕೊರತೆ 3 ಲಕ್ಷ ಟನ್ ನಮಗೆ ಬೇಕಾದ ರಸಗೊಬ್ಬರದ ಪೂರೈಕೆ ಕೇವಲ ಅರ್ಧದಷ್ಟು ಮಾತ್ರ ಬಂತು. ಅಂದರೆ 5.65 ಮೆಟ್ರಿಕ್ ಟನ್‌ಗೆ ಬಂದದ್ದು 2.39 ಮೆಟ್ರಿಕ್ ಟನ್. ಹಿಂದೆ ಆ ರವಿ ಸೀಸನಲ್ಲೂ ಕೂಡ ಕೇಂದ್ರ ಸರ್ಕಾರದಿಂದ ಬರಬೇಕಾದ ರಸಗೊಬ್ಬರ ರಸಗೊಬ್ಬರ ಬರಲಿಲ್ಲ. ಮತ್ತೆ ನಮ್ಮ ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಮಾತನಾಡಬೇಕಾದರೆ ಕೆಲವು ನೋಟ್ ಬಗ್ಗೆ ಪ್ರಸ್ತಾಪ ಮಾಡಿದರು. ಬಹುಶಃ ಅದರ ಕಾಪಿಯನ್ನು ಕಳುಹಿಸಿಕೊಡು, ಏಕೆಂದರೆ, ಕೇಂದ್ರ ಕಾರ್ಯದರ್ಶಿ ಪ್ರಧಾನ ಮಂತ್ರಿಗಳಿಗೆ ಕೊಟ್ಟಂಥ ನೋಟ್ ಇರಬಹುದು ಅಷ್ಟೆ. ನಮ್ಮ ಹತ್ತಿರ ಆ ಮಾಹಿತಿ ಇಲ್ಲ. ಪ್ರತಿಯನ್ನು ಕಳುಹಿಸಿಕೊಟ್ಟು ಆ ಮಾಹಿತಿ ನಿಮಗೆ ಹೇಗೆ ಸಿಕ್ಕಿತು ಎನ್ನುವ ಮಾಹಿತಿಯನ್ನು ಕೊಟ್ಟರೆ ನಾನು ಅದರ ಬಗ್ಗೆ ವಿವರವಾದ ಮಾಹಿತಿಯನ್ನು ಕೊಡಬಲ್ಲೆ, ಅದರ ಪ್ರತಿಯನ್ನು ಕಳುಹಿಸಿಕೊಡಿ. ದಿನಾಂಕ: 11–06–2008 ರಂದು ರಸಗೊಬ್ಬರ ಖಾತೆ ಸಚಿವರ ಆಶ್ವಾಸನೆಯ ಪ್ರಕಾರ 20–06–2008 ರೊಳಗೆ ಎಲ್ಲರ ಎದುರುಗಡೆ ಚರ್ಚೆಯಾಗಿದೆ, ಎಲ್ಲಾ ನೋಟ್

ಆಗಿದೆ. ಮಂತ್ರಿಗಳ ಮತ್ತು ಕಾರ್ಯದರ್ಶಿಗಳ ಸಮಕ್ಷಮದಲ್ಲಿ ನಡೆದಂತಹದ್ದು 1,20,000 ಮೆಟ್ರಿಕ್ ಟನ್ ಡಿ.ಎ.ಪಿ. ಬರಬೇಕಾಗಿತ್ತು. 1,10,000 MT ಟನ್ ಕಾಂಪ್ಲೆಕ್ಸ್ ಬರಬೇಕಾಗಿತ್ತು. ಆದರೆ ಬಂದಂತಹದ್ದು ಕೇವಲ 22 ಜೂನ್‌ಗೆ ನಾನು ಅಂಕಿಅಂಶವನ್ನು ಕೊಡುತ್ತಿದ್ದೇನೆ. ಡಿಐಪಿ 70.436 ಮೆಟ್ರಿಕ್ ಟನ್ ಬಂತು, ಕಾಂಪ್ಲೆಕ್ಸ್ 57,246 MT ಬಂತು ಇದೆಲ್ಲಾ ನಮ್ಮ ಗೌರವಾನ್ವಿತ ಸದಸ್ಯರಿಗೆ ಗೊತ್ತಿರಲಿ. ತಾವೆಲ್ಲಾ ಆಡಳಿತವನ್ನು ನಡೆಸಿದ್ದಂತಹವರು. ರಸಗೊಬ್ಬರ ನೇರವಾಗಿ ಜಿಲ್ಲಾಕೇಂದ್ರಗಳಿಗೆ ಹೋಗುತ್ತದೆ. ಅಲಾಟ್‌ಮೆಂಟ್ ಅಲ್ಲಿಂದಲೇ ಆಗುತ್ತದೆ. ಈ ಸಾರಿ ನಾವು ವಿಶೇಷ ಪ್ರಕರಣವೆಂದು ಅವರೇ ಒಂದು ಜಿಲ್ಲೆಗೆ ಅಲಾಟ್‌ಮೆಂಟ್ ಮಾಡಿದ್ದರೆ ಮಳೆ ಬರದೆ ಇದ್ದರೆ, ಅಲ್ಲಿ ತಕ್ಷಣ ಅಗತ್ಯವಿಲ್ಲದೆ ಇದ್ದರೆ ಬೇರೆಡೆಗೆ ನಮಗೆ ವರ್ಗಾವಣೆ ಮಾಡುವುದಕ್ಕೆ ಅವಕಾಶ ಕೊಡಿ. ವಾಪಸ್ ತುಂಬಿಕೊಡುತ್ತೇವೆಂದು ಹೇಳಿದ್ದಕ್ಕೆ ನಮಗೆ ಅನುಮತಿಯನ್ನು ಕೊಟ್ಟಿದ್ದರಿಂದ ಬೇರೆ ಕಡೆ ಸ್ಟಾಕ್ ಇದ್ದದ್ದನ್ನು ನಾವು ಬೇರೆಕಡೆ ಕಳುಹಿಸುವಂತಹ ಪ್ರಯತ್ನವನ್ನು ಮಾಡಿದ್ದೇವೆ, ಇದನ್ನು ನಾನು ನಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ಹಾಸನದಲ್ಲಿ ನಮಗೆ ಸ್ಟಾಕ್ 1,28,000 ಬೇಕೆಂದು ಕೇಳಿದಾಗ, ಕೇಂದ್ರ ಸರ್ಕಾರ ಸನ್ಮಾನ್ಯ ದೇವೇಗೌಡರೆ, ರಾಜ್ಯ ಸರ್ಕಾರ ಅಲಾಟ್‌ಮೆಂಟ್ ಮಾಡುವುದು ಹೊರತು ಕೇಂದ್ರ ಸರ್ಕಾರ ನೇರವಾಗಿ ಯಾವ ಜಿಲ್ಲೆಗೂ ಮಾಡುವುದಕ್ಕಾಗುವುದಿಲ್ಲವೆನ್ನುವುದನ್ನು ಕೇಂದ್ರದ ರಸಗೊಬ್ಬರ ಮಂತ್ರಿಗಳು ಹೇಳಿದ್ದಾರೆ. ತಾವು ನೇರವಾಗಿ ಜಿಲ್ಲೆಗೆ ಹೋಗುತ್ತದೆಂದು ಹೇಳುತ್ತೀರಿ. ಆದರೆ ನಾನು ತಮ್ಮ ಹತ್ತಿರ ಕೇಳುತ್ತಿರುವುದು ಇಷ್ಟೆ, 2,53,000 ಟನ್ ಸ್ಟಾಕ್ ಇತ್ತೆಲ್ಲಾ 31.05–2008ಕ್ಕೆ ತಾವು ಅಧಿಕಾರ ತೆಗೆದುಕೊಂಡಾಗ, ಯಾವ್ಯಾವ ಜಿಲ್ಲೆಯದು ಎಷ್ಟೆಂಬುದನ್ನು ದಯವಿಟ್ಟು ಸಭೆಯ ಗಮಕ್ಕೆ ತನ್ನಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಮುಖ್ಯಮಂತ್ರಿಗಳೇ ಖರೀದಿಸಲು ಸಾಧ್ಯವಿಲ್ಲ ಕೇಂದ್ರ ಸರ್ಕಾರವೇ ನೇರವಾಗಿ ಕಳುಹಿಸಬೇಕು ಎನ್ನುವ ಮಾತನ್ನು ತಾವು ಹೇಳಿದಿರಿ. ಅದಕ್ಕೆ ಸಪೋರ್ಟಿಂಗ್ ಆಗಿ ನಾನು ಒಂದು ವಿಷಯವನ್ನು ಹೇಳುತ್ತೇನೆ. ದಿನಾಂಕ: 19–04–2008 ರಲ್ಲಿ ಕೃಷಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಒಂದು ಸಭೆ ಮಾಡುತ್ತಾರೆ. "Principal Secretary welcomed all the Members and informed that Government of India has made arrangements for supply of DAP and complex fertilizers for our State by allocating from the indig-

enous manufactures and importers. He further said that the Government of India is of the opinion that the private parties may not be in a position to lift the stocks by making huge investments in advance and hence the state Government should nominate some agency for the procurrement of fertilizers, which is in shortage by making necessary investments in advance. After detail discussions. It was agreed that Karnataka State Co-operative Marketing Federation Limited Bangalore could be designated as a Nodal Agency for the distribution of fertilizers in the State and that the marketing co-operative federation should make arrangements for the funds required immeidately to purchase and store the DAP and complex fertilizers in advance as the season would be commencing very shortly."

ಕೇಂದ್ರ ಸರ್ಕಾರದ್ದೇ ಜವಾಬ್ದಾರಿ ಎಂದು ನೀವು ಪದೆ ಪದೆ ಹೇಳತಕ್ಕಂಥದ್ದನ್ನು ನಿಲ್ಲಿಸಿ. ನೀವು ಪ್ರೈವೇಟ್‌ನಲ್ಲಿ ಪರ್ಚೇಸ್ ಮಾಡಲಿಕ್ಕೆ ಅವಕಾಶವಿದೆ. 500 ಕೋಟಿ ರೂಪಾಯಿಗಳ ಡ್ರಾಫ್ಟ್ ಈಗಲೇ ಕೊಡುತ್ತೇನೆಂದು ನೀವು ಹೇಳಿದಿರಿ. ಪ್ರೈವೇಟ್‌ನಲ್ಲಿ ಪರ್ಚೇಸ್ ಮಾಡಲಿಕ್ಕೆ ಅವಕಾಶಗಳಿವೆ. ಮಾರ್ಕೆಟಿಂಗ್ ಫೆಡರೇಷನ್ ಅಥವಾ ಬೇರೆ ಬೇರೆ ಯಾವ ಸಂಸ್ಥೆಗಳ ಮುಖಾಂತರ ಪರ್ಚೇಸ್ ಮಾಡುತ್ತೀರಿ. ಆ ಕೆಲಸ ಮಾಡಬೇಕು. ಅದಕ್ಕೆ ಪ್ರಾವಿಷನ್ ಇದೆ.

ಶ್ರೀ. ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ಈಗಿರುವ ನನ್ನ ಒಂದು ಅಂದಾಜಿನ ಪ್ರಕಾರ 40,000 ರೂಪಾಯಿಗಳು ಹೆಚ್ಚು ಸಬ್ಸಿಡಿಯನ್ನು ಒಂದು ಟನ್ ರಸಗೊಬ್ಬರಕ್ಕೆ ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರ ಒಂದು ಟನ್ ರಸಗೊಬ್ಬರ ತಯಾರು ಮಾಡುವ ವಸ್ತುಗಳ ಬೆಲೆ ಗಗನಕ್ಕೇರುತ್ತಿರುವುದರಿಂದ, ಮಾನ್ಯ ಪಾಸ್ವಾನ್‌ಜೀಯವರು ಹೇಳುವ ಪ್ರಕಾರ ಒಂದು ಮೆಟ್ರಿನ್ ಟನ್‌ಗೆ 40,000 ಕ್ಕೂ ಹೆಚ್ಚು ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಕೊಡುತ್ತಿವೆ. ನಾನು ಎಲ್ಲಿಯವರೆಗೆ ನಿಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆಂದರೆ, ನಾವೆಲ್ಲಾ ಜವಾಬ್ದಾರಿ ಸ್ಥಾನದಲ್ಲಿ ನಿಂತು ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಿಮಗೆಲ್ಲಾ ಹೆಚ್ಚಿನ ಮಾಹಿತಿ ಇದೆ. ನಾನು ಇನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನಾನು ಇನ್ನು 23 ದಿವಸದವನು. ನೀವು 26 ರಿಂದ 40 ವರ್ಷಗಳ ಕಾಲ ರಾಜಕಾರಣ

Vol. 2. P. 41

ಮಾಡಿದವರು. ನಾನು ಏನು ಹೇಳುವುದಕ್ಕೆ ಹೊರಟಿದ್ದೆನೆಂದರೆ, ನಾಳೆ ದಿವಸ ಸರ್ವ ಪಕ್ಷಗಳ ನಿಯೋಗ ಹೋದಾಗ ರಾಜ್ಯದ ರೈತರ ಹಿತಮುಖ್ಯವೇ ಹೊರತು ಬೇರೇನೂ ಇಲ್ಲ, ಕೆಲವು ಅಭಿವೃದ್ಧಿ ಕಾರ್ಯಗಳನ್ನು ನಿಲ್ಲಿಸುವುದಕ್ಕೆ ನಾನು ತಯಾರಿದ್ದೇನೆ. ಆದರೆ ಮುಂದಿನ ತಿಂಗಳಿನಿಂದ ಮತ್ತೊಮ್ಮೆ ರಸಗೊಬ್ಬರದ ಸಮಸ್ಯೆ ಬಂದು ಗೊಂದಲದ ವಾತಾವರಣ ನಿರ್ಮಾಣವಾಗಬಹುದು. ನಾವು ನೀವು ಎಲ್ಲ ಒಟ್ಟಾಗಿ ಹೋಗಿ ಒತ್ತಾಯ ತಂದು ನಮ್ಮ ಅಪೇಕ್ಷೆ. ನಿರೀಕ್ಷೆಗಳೇನಿದೆ. ಒಂದು ಸಾರಿ ಸಭೆ ಕರೆದಾಗ ನಮಗೆ ಇಷ್ಟಿಷ್ಟು ಬೇಕೆಂದು ಹೇಳಿದ್ದೇವೆ. ಅಷ್ಟು ಕೊಡದೆ ಇದ್ದರೆ, ಇನ್ನು ಅನೇಕ ಕಡೆ ಮಳೆ ಆಗಿಲ್ಲ. ಮುಂದಿನ ದಿನಗಳಲ್ಲಿ ಬಿತ್ತನೆ ಒಂದೇ ಸಮನೆ ಪ್ರಾರಂಭವಾದಾಗ ರಸಗೊಬ್ಬರದ ಸಮಸ್ಯೆ ಆಗುವುದಿದೆ. ಅದಕ್ಕೋಸ್ಕರ ನಾನು ಹೇಳುವುದು ನಿಮ್ಮ ಜೊತೆಯಲ್ಲಿಯೇ ನಾನು 500 ಕೋಟಿ ರೂಪಾಯಿ ಡ್ರಾಫ್ಟ್ ತೆಗೆದುಕೊಂಡು ಬರತ್ತೇನೆ. ರಾಜ್ಯದ ಜನತೆಗೆ ತಪ್ಪು ಮೆಸೇಜ್ ಹೋಗಬಾರದು. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ರಸಗೊಬ್ಬರವನ್ನು ಖರೀದಿ ಮಾಡುವುದಕ್ಕೆ ರಸಗೊಬ್ಬರವೂ ಸಿಗುವುದಿಲ್ಲ. ರಸಗೊಬ್ಬರ ಖರೀದಿ ಮಾಡುವ ಅಧಿಕಾರವೂ ನಮಗಿಲ್ಲ. ಅವಕಾಶಗಳೂ ಬಹಳ ಕಡಿಮೆ. ನೀವೇನಾದರೂ ಇಂಪೋರ್ಟ್ ಮಾಡಿಕೊಳ್ಳಬೇಕೆಂದರೆ, ಅದಕ್ಕೆ ಇನ್ನು ಮೂರು ತಿಂಗಳು ಬೇಕು. ಎರಡು-ಮೂರು ತಿಂಗಳು ಮೊದಲೇ ಅದನ್ನು ಮಾಡುವುದಕ್ಕೆ ಸಿದ್ಧತೆ ಮಾಡಕೊಳ್ಳಬೇಕಾಗಿತ್ತು. ಇಂಪೋರ್ಟ್ ಮಾಡಿಕೊಂಡು ಸುಮಾರು 43,000 ಸಬ್ಸಿಡಿ ಇದೆ. ಅದು ಯಾರು ಕೊಡಬೇಕೆಂದು ಪ್ರಶ್ನೆ. ಮಾನ್ಯ ರೇವಣ್ಣನವರಗೆ ಗೊತ್ತಿದೆ. ನೀವು ಕೃಷಿ ಸಚಿವರಾಗಿದ್ದರಿಂದ ನಿಮಗೆ ಗೊತ್ತಿದೆ. ಬೇರೆಯವರು ಮಾತನಾಡುವುದಕ್ಕೆ ಬಿಟ್ಟು ನಂತರ ನೀವು ಏನು ಬೇಕಾದರೂ ಮಾತನಾಡಿ ರೈತರಿಗೆ ಒಳ್ಳೆಯದಾಗುವುದಾದರೆ ನಾನು ರಾತ್ರಿ 9.00 ಗಂಟೆಯವರೆಗೂ ಕುಳಿತುಕೊಳ್ಳುವುದಕ್ಕೆ ಸಿದ್ದನಿದ್ದೇನೆ.

ಶ್ರೀ. ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಏನು ನೀವು ಹಣವನ್ನು ಬಿಡುಗಡೆ ಮಾಡಿ, ಹೊಸದಾಗಿ ಗೊಬ್ಬರವನ್ನು ನೇರವಾಗಿ ಖರೀದಿ ಮಾಡುತ್ತೀರಿ. subsequent ಆಗಿ ನೀವು ಕೇಂದ್ರ ಸರ್ಕಾರದ ಮುಂದೆ ನೀವು ಏನು ಹೇಳು ಕೊಟ್ಟಿರುತ್ತೀರಿ, ಆ ಹಣದ ವಿವರಗಳನ್ನು ಕೊಟ್ಟು ಆ ಮೇಲೆ ಹಣವನ್ನು reimburese ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಹೋದ ವರ್ಷ ನಮಗೆ ಕೇಂದ್ರ ರಾಸಾಯನಿಕ ಗೊಬ್ಬರ ಖಾತೆ ಸಚಿವರು ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ನಮ್ಮಿಂದ ನಿಮಗೆ ರಸಗೊಬ್ಬರದ

ಕೊರತೆಯಾದರೆ ನೀವು ಖರೀದಿ ಮಾಡಿ ನಂತರ ನೀವು ವಿವರ ಕೊಟ್ಟರೆ reimburse ಮಾಡುವುದಕ್ಕೆ ನಾವು ಸರ್ಕಾರದವರು ತೀರ್ಮಾನ ಮಾಡುತ್ತೇವೆಂದು ಹೇಳಿದ್ದಾರೆ. ಅದರ ಬಗ್ಗೆ ನೀವು ಗಮನ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಒಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಾಳೆ ಅಧಿವೇಶನ ಮುಗಿದ ಮೇಲೆ ಪ್ರತಿ ಪಕ್ಷದ ನಾಯಕರು ಮತ್ತು ನಾವೆಲ್ಲಾ ಒಟ್ಟಾಗಿ ಸೇರೋಣ. ನೀವು ಏನು ಸಲಹೆಗಳನ್ನು ಕೊಡುತ್ತೀರಿ. ನಾವು ಸರ್ವ ಪಕ್ಷಗಳ ನಿಯೋಗ ಪ್ರಧಾನಿಗಳ ಬಳಿ ಹೋಗುವುದಕ್ಕೆ ಮುಂಚೆ ನಿಮ್ಮ ಸಲಹೆಗಳನ್ನು ಕೇಳುವುದಕ್ಕೆ ನಾನು ತಯಾರಿದ್ದೇನೆ. ನನ್ನ ರಾಜ್ಯದ ರೈತರಿಗೆ ರಸಗೊಬ್ಬರ ಕೊಡುವುದು ಮುಖ್ಯ. ಅದಕ್ಕೆ ಯಾವುದೇ ಕಾರಣಕ್ಕೆ ನಾನು ಹಿಂದೆ ಮುಂದೆ ನೋಡುವುದಿಲ್ಲ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ (MCF) 16/01/2008ರ ಪತ್ರದಲ್ಲಿ ಕಾರೀಫ್ 2007–08ರಲ್ಲಿ ಡಿಎಪಿ ಮತ್ತು ಕಾಂಪ್ಲೆಕ್ಸ್ ಗೊಬ್ಬರಗಳ ಕೊರತೆ ಏನೇನಾಗಬಹುದು ಎಂದು ಪತ್ರ ಬರೆದಿದ್ದರು. ಕಾರ್ಖಾನೆ ಮಾಲೀಕರು (MCF) ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ಬರೆದಿರುವಂತೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಡಿಎಪಿ ಮತ್ತು ಕಾಂಪ್ಲೆಕ್ಸ್ ಗೊಬ್ಬರಗಳ ತಯಾರಿಕೆಗೆ ಬೇಕಾದ ಕಚ್ಚಾ ಮಾಲಿನ ಬೆಲೆ ಪ್ರತಿ ಟನ್ ಡಾಲರ್ 100 ರೂಪಾಯಿ ಇದ್ದುದು 500 ರೂಪಾಯಿಗೆ ಏರಿದ್ದರಿಂದ ರಸಗೊಬ್ಬರ ಕಾರ್ಖಾನೆಗಳು ಕೆಲವು ಮುಚ್ಚಿರುವುದಾಗಿ, ಮತ್ತೆ ಕೆಲವು ಕಾರ್ಖಾನೆಗಳು ಉತ್ಪದನೆಯನ್ನು ಕಡಿಮೆ ಮಾಡಿರುವುದಾಗಿ ಬರೆದಿರುತ್ತಾರೆ. ಹೆಚ್ಚಿನ ಬೆಲೆಯಿಂದಾಗಿ ಭಾರತ ಸರ್ಕಾರ ಹೆಚ್ಚಿನ ಸಹಾಯಧನ ಕೊಡಬೇಕೆಂಬ ವಿಷಯವನ್ನು ಕೂಡ ಅವರು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ. ಫರ್ಟಿಲೈಸರ್ ಕಂಪನಿಯವರ ಒಂದು ಸಭೆಯನ್ನು ಇಲ್ಲಿಯೇ ವಿಧಾನಸೌಧದಲ್ಲಿ ಮಾಡಿದೆ. ನಾನು ಇಷ್ಟೇ ಮಾನ್ಯ ಪ್ರತಿಪಕ್ಷದ ನಾಯಕರಿಗೆ ಹೇಳುವುದಕ್ಕೆ ಇಚ್ಛೆಪಡುವುದು. ಆ ಸಭೆಯಲ್ಲಿ ಸಬ್ಸಿಡಿ ಯಾವ ರೀತಿ ಬರುತ್ತಿಲ್ಲವೆಂದು ಅಲ್ಲಿದ್ದಂತಹವರೆಲ್ಲ ಹೇಳಿದರು. ನಾನು ಮಾನ್ಯ ಪಾಸ್ವಾನ್‌ರವರ ಬಳಿ ಹೋದಾಗ ಕೂಡ ಅವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ. ಸಬ್ಸಿಡಿ ಬಗ್ಗೆ ಮಾತನಾಡುವುದಕ್ಕೆ ನಾನು ಯಾರು? ನಾನು ಇಷ್ಟೇ ಹೇಳುವುದಕ್ಕೆ ಇಚ್ಛೆ ಪಡುವಂಥದ್ದು. ರಸಗೊಬ್ಬರದ ಕಂಪನಿಯವರು ರಸಗೊಬ್ಬರ ಕಾಂಪ್ಲೆಕ್ಸ್ ತಯಾರು ಮಾಡುವ ಪದಾರ್ಥಗಳ ಬೆಲೆ ನಾಲ್ಕು ಪಟ್ಟು ಜಾಸ್ತಿಯಾಗಿರುವುದರಿಂದ 100 ಡಾಲರ್

ಇದ್ದುದು 500 ಡಾಲರ್‌ಗೆ ಏರಿರುವುದರಿಂದ ನಾವು ಕಡಿಮೆ ಉತ್ಪಾದನೆ ಮಾಡಿದ್ದೇವೆಂದು ಪತ್ರ ಬರೆದಿದ್ದಾರೆ. ಅಂಕಿ ಅಂಶ ನನ್ನ ಬಳಿ ಇದೆ. ಅದನ್ನು ನಿಮ್ಮ ಗಮನಕ್ಕೆ ತರುವಂತಹ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ಮಾನ್ಯ ಮುಖ್ಯ ಕಾರ್ಯದರ್ಶಿಯವರು ಪತ್ರ ಬರೆದರು, ಮತ್ತೊಂದನ್ನು ನಾನು ಮತ್ತೆ ಮತ್ತೆ ಹೇಳುವುದಕ್ಕೆ ಇಚ್ಛೆ ಪಡುವುದಿಲ್ಲ. ಈ ಮನೆಯ ಮೂಲಕ ಒಂದು ಸಂಗತಿಯನ್ನು ರಾಜ್ಯದ ಜನತೆಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವಾಣಿಜ್ಯ ಬ್ಯಾಂಕುಗಳು ಅಥವಾ ಸಹಕಾರಿ ಬ್ಯಾಂಕುಗಳಲ್ಲಿ ಸಾಲ ಇದ್ದು, ಸದರಿ ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಲ್ಲಿ ವಿಚಾರಣೆಯ ನಂತರ ಅದು ಸಾಬೀತಾದರೆ ಒಂದು ಲಕ್ಷ ರೂಪಾಯಿಯವರೆಗೆ ಪರಿಹಾರ ನೀಡುವುದಕ್ಕೆ ಸರ್ಕಾರಿ ಆದೇಶದಲ್ಲಿ ಅವಕಾಶವಿದೆ. ರಾಷ್ಟ್ರೀಕೃತ ಬ್ಯಾಂಕು ಮತ್ತು ಸಹಕಾರಿ ಬ್ಯಾಂಕುಗಳಲ್ಲಿ ಸಾಲ ಪಡೆದು ಅವರು ಕಟ್ಟದೆ ಆತ್ಮಹತ್ಯೆ ಮಾಡಿಕೊಂಡರೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುವುದಕ್ಕೆ ಅವಕಾಶವಿದೆ. ಕೈ ಸಾಲ ತೆಗೆದುಕೊಂಡಿದ್ದರೆ, ಅದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದರೆ ಪರಿಹಾರ ಕೊಡುವುದಕ್ಕೆ ಅವಕಾಶವಿಲ್ಲವೆಂದು ಈಗಿರುವ ಸರ್ಕಾರಿ ಆದೇಶವನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಎರಡನೆಯದು, ಇವತ್ತು ನಮ್ಮ.....

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಚುನಾವಣಾ ಪ್ರಣಾಳಿಕೆಯಲ್ಲಿ ಕೈ ಸಾಲ ಮನ್ನ ಮಾಡುತ್ತೇವೆಂದು ಹೇಳಿದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬೇಕಾದ್ದು ಮಾಡೋಣ ಬನ್ನಿ ಸ್ವಾಮಿ. ನಾವು ರೈತರಿಗಾಗಿ ಇಲ್ಲಿದ್ದೇವೆ, ರೈತನಿಗೆ ಕೊಟ್ಟರೆ ಎಲ್ಲಿ ಹೋಗುತ್ತದೆ. I am ready for anything. ನಮ್ಮ ರೈತನ ಉಳಿವಿಗಾಗಿ ಏನು ಬೇಕಾದರೂ ಮಾಡುವುದಕ್ಕೆ ಯಡಿಯೂರಪ್ಪ ಸಿದ್ದನಿದ್ದಾನೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾನೂನು ಯಾರು ಮಾಡುವುದು, ಯಾರಿಗೋಸ್ಕರ ಈ ಕಾನೂನು? ಮಾನ್ಯ ಶಿವಕುಮಾರ್‌ರವರು ಒಂದು ಲಕ್ಷ ರೂಪಾಯಿ ಕೊಡುವುದಕ್ಕೆ ಇರುವ ಕಾನೂನು ಯಾವುದು ಎಂದು ಹೇಳಿದರು. ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡದ್ದು ಯಾರು ಅಡ್ಡಿ ಮಾಡುತ್ತಾರೆ ನೋಡೋಣ.

ಶ್ರೀ ಡಿ.ಕೆ. ಶಿವಕುಮಾರ್: ನೀವು ಮಾಡಿದ್ದಕ್ಕೆ ಸಂತೋಷ ಕೆಲಸ ಕೊಡಿ. ಇದು ಒಂದು ಗೌರ್ನಮೆಂಟ್ ಆರ್ಡರ್ ಆಗಲಿ. ಮುಂದಕ್ಕೆ ಎಲ್ಲರಿಗೂ ಸಿಗಲಿ ಎಂಬ ಉದ್ದೇದಿಂದ ಹೇಳುತ್ತಿದ್ದೇನೆ. Let it not be a special case. Special case ಆಗುವುದು ಬೇಡ. Let it be a permanent case.

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮ್ಮೆಲ್ಲರನ್ನು ಕರೆಯುತ್ತೇನೆ. ನೀವೂ ಇಷ್ಟು ವರ್ಷ ಅಧಿಕಾರ ನಡೆಸಿದಿರಿ, ನೀವೇನು ಹೇಳುತ್ತೀರಿ, ನಿಮ್ಮ ಅನುಭವದ ಮೇಲೆ ಅದನ್ನು ನಾನು ಸ್ವೀಕಾರ ಮಾಡುವುದಕ್ಕೆ ಸಿದ್ಧನಿದ್ದೇನೆ. ಯಾವುದನ್ನೂ ಲಘುವಾಗಿ ತೆಗೆದುಕೊಳ್ಳುವುದಕ್ಕೆ ಸಿದ್ದನಿಲ್ಲ. ನಾಳೆ ಅಧಿವೇಶನ ಮುಗಿದ ಮೇಲೆ ಕುಳಿತು ಚರ್ಚೆ ಮಾಡೋಣ. ಒಟ್ಟಾಗಿ ರೈತನನ್ನು ಉಳಿಸುವುದಕ್ಕೆ ಏನು ಬೇಕೋ ಅದನ್ನು ಮಾಡೋಣ. ಮಾನ್ಯ ಕುಮಾರಸ್ವಾಮಿಯವರು ಹೇಳಿದರು, ನಮ್ಮ ಪ್ರಧಾನ ಕಾರ್ಯದರ್ಶಿಯವರ ಬಗ್ಗೆ ಹೇಳುತ್ತಾ 24 ದಿವಸಗಳಲ್ಲಿಯೇ ಹುಳುಕು ಹಿಡಿದುಕೊಂಡು ಹೊರಟಿದ್ದಾರೆ. "ಹಳದಿ ಕನ್ನಡಕ ಹಾಕಿಕೊಂಡರೆ ಕಾಣುವುದೆಲ್ಲಾ ಹಳದಿಯೇ". ನಮ್ಮ ಪ್ರಧಾನ ಕಾರ್ಯದರ್ಶಿಯವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ, ನಾಳೆ ನಿಮಗೇನಾದರೂ ಲೋಪದೋಷಗಳು ಕಂಡರೆ ಯಡಿಯೂರಪ್ಪನವರೇ ಹೀಗಾಗಿದೆ ಎಂದು ಹೇಳಿದರೆ ನಾನು ಅದನ್ನು ಸರಿಪಡಿಸುತ್ತೇನೆ. ಅದು ಬಿಟ್ಟು ನೀವು ಈಗಲೇ ಆರೋಪಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದರೆ, ವರ್ಗಾವಣೆ ಮೇಲೆ ಕುಳಿತಿದ್ದೀರಿ, ಯಾರ್ಯಾರನ್ನು ಎಲ್ಲೆಲ್ಲಿ ಹಾಕಿದ್ದೀರಿ ಎಂದು ಗೊತ್ತು, ಹಾಗಾದರೆ ಕಳೆದ 10 ವರ್ಷಗಳಲ್ಲಿ ಆಯಕಟ್ಟಿನ ಸ್ಥಳದಲ್ಲಿ ಯಾರ್ಯಾರ ಕಾಲದಲ್ಲಿ ಯಾರ್ಯಾರನ್ನು ಹಾಕಿದ್ದಿರಿ ಎಂದು ಚರ್ಚೆಯಾಗಲಿ. ನಾನು ಹೇಗೆ ಎಲ್ಲ ವರ್ಗದ ಜನರಿಗೆ ಆದ್ಯತೆಯನ್ನು ಕೊಟ್ಟಿದ್ದೇನೆ, ನ್ಯಾಯ ಒದಗಿಸಿದ್ದೇನೆ, ಬೇರೆಯವರ ಕಾಲದಲ್ಲಿ ಏನೇನಾಗಿದೆ, ಅದರ ಬಗ್ಗೆ ಕೂಡ ಒಂದು ದಿನ ಚರ್ಚೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ಚರ್ಚೆ ಮಾಡೋಣ I am ready ಈ ಮನೆಯಲ್ಲಿ ಮುಚ್ಚಿಡುವುದು ಏನಿದೆ, ಇದು ಪಾರದರ್ಶಕ ಸರ್ಕಾರ. ನಾವು ಏನೂ ಮುಚ್ಚಿಡುವುದಕ್ಕೆ ಸಿದ್ದವಿಲ್ಲ. ಆದ್ದರಿಂದ ಜಂಟಿ ಸದನ ಸಮಿತಿಯ ಅಗತ್ಯವಿಲ್ಲ. ನಾವು ಈಗಾಗಲೇ ನ್ಯಾಯಾಂಗ ತನಿಖೆಗೆ ಆದೇಶ ಕೊಟ್ಟಿದ್ದೇವೆ. ವರದಿ ಬರಲಿ ದಯಮಾಡಿ ಸಹಕರಿಸಿ. ವಾಕ್‌ಔಟ್ ಮತ್ತೊಂದು ಮಾಡಬೇಡಿ. ಮೊದಲ ಬಾರಿಗೆ ನಾವೆಲ್ಲ ಒಟ್ಟಾಗಿದ್ದೇವೆ ಎಂಬ ಸಂದೇಶವನ್ನು ಕೊಡಿ.

(ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಗೆ ಬಂದು ಧರಣಿ ಪ್ರಾರಂಭಿಸಿ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:..... ಅವರು ಒಪ್ಪಿಕೊಂಡಿದ್ದಾರೆ. ಎರಡನೆಯದು ಟರ್ಮ್ಸ್ ಆಫ್ ರೆಫರೆನ್ಸ್ ಅವರು ಒಪ್ಪಿಕೊಂಡಿದ್ದಾರೆ. ಮೂರನೆಯದು ಎಲ್ಲಾ ರೈತರಿಗೂ ಕಾಂಪೆನ್‌ಸೇಷನ್ ಕೊಡಿ ಎಂದು ಕೇಳಿದ್ದೇವೆ.

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದರು)

ನಾಲ್ಕನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೃಷಿ ಸಚಿವರು ಕ್ಷಮೆ ಕೇಳಬೇಕೆಂದು ಹೇಳಿದ್ದೆವು. ಐದನೆಯದಾಗಿ, ಬಡ ರೈತರ ಮೇಲೆ ಏನು ಕೇಸ್‌ಗಳನ್ನು ಹಾಕಿದ್ದಾರೆ, ಅವುಗಳನ್ನು ವಿತ್‌ಡ್ರಾ ಮಾಡಬೇಕೆಂದು ಕೇಳಿದ್ದೆವು. ಇವು ಐದು ಪಾಯಿಂಟ್ ನಮ್ಮದು ಇತ್ತು. ಈ ಐದು ಪಾಯಿಂಟ್ ಬಿಟ್ಟು ಬೇರೆ ಯಾವ ಪಾಯಿಂಟ್ ಕೂಡ ಇಲ್ಲ. ಅದಕ್ಕಾಗಿ ಮೊದಲು ಜಂಟಿ ಸದನ ಸಮಿತಿ ಮಾಡುವುದಕ್ಕೆ ಮತ್ತು ಪರಿಹಾರವನ್ನು ಕೊಡುವುದಕ್ಕೆ ಮತ್ತು ಕ್ಷಮೆ ಕೇಳುವ ಕೆಲಸವನ್ನು ಮಾಡುವುದಕ್ಕೆ ಸರ್ಕಾರ ಒಪ್ಪಿಕೊಂಡರೆ ಸಾಕು. ಬಾಕಿಯದನ್ನು ಆಮೇಲೆ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ, ಕ್ಷಮೆ ಕೇಳಬೇಕಾಗಿರುವವರು ಕಾಂಗ್ರೆಸ್ಸಿನವರು. ಏಕೆಂದರೆ ಈ ರಾಜ್ಯದ ಜನತೆಗೆ ರಸಗೊಬ್ಬರ ಬರದಂತೆ ರಾಜಕಾರಣ ಮಾಡಿ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ): ರಸಗೊಬ್ಬರ ಸಿಗದಂತೆ ಮಾಡಿರುವುದು ಕಾಂಗ್ರೆಸ್ ಸರ್ಕಾರ. ಗೊಬ್ಬರ ವಿಷಯಕ್ಕೆ ಸಂಬಂಧಪಟ್ಟಂತೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡದಿದ್ದವರು ನೀವು. ಆ ಕಾರಣದಿಂದ ಈ ರಾಜ್ಯದ ಜನತೆಯ ಕ್ಷಮೆ ಕೇಳಬೇಕಾಗಿರುವುದು ನೀವು. ನಾನು ಹೇಗೆ ಕೇಳುವುದಕ್ಕಾಗುತ್ತದೆ?

ಶ್ರೀ ಎಂ. ಶ್ರೀನಿವಾಸ್: ಇಷ್ಟೊಂದು ಹೊಟ್ಟೆ ಉರಿ ಇದ್ದುಬಿಟ್ಟರೆ ಇನ್ನು ಐದು ವರ್ಷದಲ್ಲಿ ನೀವು ಹೇಗಪ್ಪಾ ಬದುಕುತ್ತೀರಿ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ, ನ್ಯಾಯಾಂಗ ತನಿಖೆಯಾದ ಮೇಲೆ ನಾವೆಲ್ಲರೂ ಒಟ್ಟಿಗೆ ಕುಳಿತುಕೊಳ್ಳೋಣ. ನಮ್ಮ ರಾಜ್ಯದ ರೈತರು

ನೆಮ್ಮದಿಯಿಂದ ಬದುಕುವುದಕ್ಕೆ ಈ ಆತ್ಮಹತ್ಯೆಗಳು ನಿಲ್ಲುವುದಕ್ಕೆ ಯಾವ ರೀತಿಯ ಸಮಿತಿಯನ್ನು ಮಾಡುವುದಕ್ಕೂ ನಾನು ಸಿದ್ಧನಿದ್ದೇನೆ. ಆದರೆ ಈಗ ನ್ಯಾಯಾಂಗ ತನಿಖೆಯನ್ನು ಏನು ಮಾಡುತ್ತಿದ್ದೇವೆ, ಇಂಥ ಸಂದರ್ಭದಲ್ಲಿ ಜಂಟಿ ಸಮಿತಿಯ ಅಗತ್ಯವಿಲ್ಲ. ಬೇರೆ ಸಂದರ್ಭದಲ್ಲಿ ನೀವು ಯಾವ ಸಮಿತಿ ಹೇಳುತ್ತೀರೋ ಅದನ್ನು ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ರೈತರ ಒಳಿತಿಗಾಗಿ ಎಲ್ಲಕ್ಕೂ ನಾನು ಸಿದ್ಧನಿದ್ದೇನೆ.

(ಸದನದ ಬಾವಿಯಿಂದಲೇ ಕಾಂಗ್ರೆಸ್‌ನ ಹಲವಾರು ಸದಸ್ಯರು ಮಾತನಾಡುತ್ತಿದ್ದರು)

ಅಧ್ಯಕ್ಷರು: ನೋಡಿ ಒಂದು ಸಲ ನೀವು ಸದನದ ಬಾವಿಗೆ ಬಂದಮೇಲೆ ಅಲ್ಲಿಂದಲೇ ನೀವು ಮಾತನಾಡುವುದಕ್ಕೆ ನಿಯಮದ ಪ್ರಕಾರ ಅವಕಾಶವಿಲ್ಲ. ಈಗಾಗಲೇ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಿಮ್ಮ ಬೇಡಿಕೆ ಏನಿತ್ತೋ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆದಕಾರಣ ಸದನದ ಬಾವಿಯಲ್ಲಿರುವ ಸದಸ್ಯರುಗಳು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು. ಅಜೆಂಡಾ ಪ್ರಕಾರ ಏನು ಕಾರ್ಯಕಲಾಪವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಚರ್ಚೆಯನ್ನು ಪ್ರಾರಂಭ ಮಾಡೋಣ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

(ಸದನದ ಬಾವಿಯಲ್ಲಿದ್ದ ಕಾಂಗ್ರೆಸ್ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಿದ್ದರು)

ಅಧ್ಯಕ್ಷರು: ರಾಜ್ಯಪಾಲರು ದಯಪಾಲಿಸಿದ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲೆ ಚರ್ಚೆ ಆಗಬೇಕಾಗಿದೆ. ಅದನ್ನು ಪ್ರಾರಂಭ ಮಾಡೋಣ. ದಯವಿಟ್ಟು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಈಗಾಗಲೇ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾನೂ ಕೂಡ ಚರ್ಚೆಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ನೀವೆಲ್ಲರೂ ಚೆರ್ಚೆಯಲ್ಲಿ ಭಾಗವಹಿಸಿದ್ದೀರಿ. ನಿಮ್ಮ ಮನಸ್ಸಿನಲ್ಲಿದ್ದ ವಿಚಾರಗಳನ್ನು ಹೇಳಿದ್ದೀರಿ. ಅವುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸಾಕಷ್ಟು ಉತ್ತರವನ್ನು ಕೊಟ್ಟಿದ್ದಾರೆ. ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಗತ್ಯಬಿದ್ದರೆ ಪ್ರತ್ಯೇಕವಾದ ಸಮಿತಿಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಈಗ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡೋಣ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಯನ್ನು ಮಾಡುತ್ತಿದ್ದೇನೆ.

(ಗೊಂಧಲ)

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 10.30 ಗಂಟೆಗೆ ಸಮಾವೇಶಗೊಳ್ಳುವಂತೆ ಸದನವನ್ನು ಮುಂದೂಡಿದ್ದೇನೆ.

(ಸದನವು ಸಂಜೆ 5 ಗಂಟೆ 33 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ 25ನೇ ಜೂನ್ 2008ರ ಬುಧವಾರದಂದು ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಕರ್ನಾಟಕ ವಿಧಾನಸಭೆ

ಹದಿಮೂರನೇ ವಿಧಾನಸಭೆ

ಪ್ರಥಮ ಅಧಿವೇಶನ

ಶ್ರೀ ಜಗದೀಶ್ ಶೆಟ್ಟರ್

ಅಧ್ಯಕ್ಷರು

VOL 2. F.42

ಕರ್ನಾಟಕ ವಿಧಾನಸಭೆ

ಬುಧವಾರ 25 ನೇ ಜುನ್ 2008 ರಂದು ಸದನವು

ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಗ್ಗೆ 10–50ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು ಶ್ರೀ ಜಗದೀಶ್‌ಶೆಟ್ಟರ್ ರವರು

ಪೀಠವನ್ನು ಅಲಂಕರಿಸಿದ್ದರು

1. ರೈತರ ಸರಣಿ ಆತ್ಮಹತ್ಯೆಯ ಬಗ್ಗೆ ವಿಚಾರಣೆಗೆ ಜಂಟಿ ಸದನಸಮಿತಿ ನೇಮಕಕ್ಕೆ ಒತ್ತಾಯಿಸಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರಿಂದ ಧರಣಿ.

[ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು]

[ಸದನದ ಬಾವಿಯಿಂದ ಮಾನ್ಯ ಸದಸ್ಯರಾದ ಶ್ರೀ ಡಿ.ಕೆ.ಶಿವಕುಮಾರ್‌ರವರು ಮಾತನಾಡುತ್ತಿದ್ದರು]

ಅಧ್ಯಕ್ಷರು : ವೆಲ್‌ನಲ್ಲಿ ನಿಂತು ಮಾತನಾಡಲಿಕ್ಕೆ ದಯಮಾಡಿ ಅವಕಾಶವಿಲ್ಲ. ನಾನು ಇನ್ನೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಹೇಳಿದ್ದಾರೆ. ತಾವು ಕೆಲವೊಂದು ವಿಷಯಗಳ ಬಗ್ಗೆ ಅವರಿಗೆ ಒತ್ತಾಯ ಮಾಡಿದ್ದೀರಿ. ಸಾಕಷ್ಟು ಅದರ ಬಗ್ಗೆ ಚರ್ಚೆಯಾಗಿದೆ. ನ್ಯಾಯಾಂಗ ತನಿಖೆಗೆ ನಾವು ಅಜ್ಞೆ ಮಾಡಿದ್ದೇವೆ ಎಂಬ ಮಾತನ್ನು ಸರ್ಕಾರದವರು ಹೇಳಿದ್ದಾರೆ. ಜಂಟಿ ಸದನ ಸಮಿತಿ ಅವಶ್ಯಕತೆ ಇಲ್ಲವೆಂದೂ ಸಹ ಅವರು ಹೇಳಿದ್ದಾರೆ. ಇಂದು ಹೊಸದೊಂದು ವಿಷಯವನ್ನು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡಬೇಕೆಂದು ತಾವು ನೋಟಿಸ್ ಕೊಟ್ಟಿದ್ದೀರಿ. ತಮ್ಮಲ್ಲಿ ನನ್ನದೊಂದು ವಿನಂತಿ ಇದೆ. ಈಗಾಗಲೇ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ವಾದ-ವಿವಾದಗಳಾಗಿದೆ. ಅದಾದ ಮೇಲೆ ಸರ್ಕಾರವೂ ಕೂಡ ಅದಕ್ಕೆ ಉತ್ತರ ಕೊಟ್ಟಿದೆ. ನಿಮ್ಮ ಬೇಡಿಕೆ ಸರ್ಕಾರದ ಮುಂದಿಟ್ಟಿದ್ದೀರಿ. ಇವತ್ತು ಒಂದು ಹಂತಕ್ಕೆ ಈ ವಿಷಯಬಂದಿದೆ. ದಯವಿಟ್ಟು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳೂವುದೇನೆಂದರೆ, ನಾವು ಮುಂದಿನ ಎಲ್ಲಾ Proceedings ಮತ್ತು Business ನಡೆಸಿಕೊಂಡು ಹೋಗಬೇಕಾಗಿದೆ. ಇವತ್ತೇ ಕೊನೆಯ ದಿವಸ ಇರುವುದರಿಂದ ಮಾನ್ಯ ರಾಜ್ಯಪಾಲರ ಭಾಷಣದ ವಂದನಾ

ನಿರ್ಣಯದ ಮೇಲೆ ಸಹ ಇಂದು ಚರ್ಚೆ ಮಾಡಬೇಕಾಗಿದೆ. ಸಾಕಷ್ಟು ಜನ ಗೌರವಾನ್ವಿತ ಸದಸ್ಯರು ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಲಿದ್ದಾರೆ. ಮಾನ್ಯ ಸದಸ್ಯರು ನಿರ್ಣಯದ ಮೇಲೆ ಮಾತನಾಡಲು ತಮ್ಮ ಹೆಸರುಗಳನ್ನು ಸಹ ನನ್ನ ಕಡೆಗೆ ಕೊಟ್ಟಿದ್ದಾರೆ. ಚರ್ಚೆಯಲ್ಲಿ ನಾವು ಭಾಗವಹಿಸುತ್ತೇವೆ, ನಮಗೆ ಅವಕಾಶ ಕೊಡಿ ಎಂದು ಕೇಳಿದ್ದಾರೆ. ಬೇರೆ ಬೇರೆ ವಿಷಯಗಳ ಬಗ್ಗೆ ನಾವು ಚರ್ಚೆ ಮಾಡೋಣ. ಈ ವಿಷಯದ ಬಗ್ಗೆ ನೀವು ಸಾಕಷ್ಟು ಬೆಳಕು ಚೆಲ್ಲಿದ್ದೀರಿ, ರಾಜ್ಯದ ಜನತೆಯ ಗಮನವನ್ನು ಸೆಳೆದಿದ್ದೀರಿ, ರೈತರ ಬಗ್ಗೆ ನಿಮಗಿರುವಂತಹ ಕಳಕಳಿಯನ್ನು ನೀವೆಲ್ಲಾ ವ್ಯಕ್ತಪಡಿಸಿದ್ದೀರಿ. ಇದನ್ನು ಇಲ್ಲಿಗೇ ಮುಕ್ತಾಯಗೊಳಿಸಿ ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹಿಂತಿರುಗಿ. ಮುಂದಿನ Business ನಡೆಸಲಿಕ್ಕೆ ಅವಕಾಶ ಮಾಡಿ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ [ವಿರೋಧ ಪಕ್ಷದ ನಾಯಕರು] :– ಮಾನ್ಯ ಅಧ್ಯಕ್ಷರೆ, ನಾವು ಸರ್ಕಾರದ ಮುಂದೆ ಡಿಮ್ಯಾಂಡ್ ಇಟ್ಟಿದ್ದು ಇಷ್ಟೇ. Judicial Probe ಗೋಲಿಬಾರ್ ಬಗ್ಗೆ ಮಾತ್ರವೇ ಇದೆ. ಗೋಲಿಬಾರ್ ಹೇಗೆ ಆಯಿತು ? ಅದರ ಅವಶ್ಯಕತೆ ಇತ್ತೇ? ಯಾರು ಮಾಡಿದರು ? ಯಾರು Order ಮಾಡಿದರು ? ಎಂಬ ವಿಷಯದಲ್ಲಿ ಮಾತ್ರ Judicial Probe ಆಗಲಿದೆ. ಈ ಸರಣಿ ಆತ್ಮಹತ್ಯೆಗಳೇನು ನಡೆದಿವೆ, ಗೊಬ್ಬರಕ್ಕಾಗಿ, ಸಾಲದ ಬಾಧೆಯಿಂದ ಮತ್ತು ಅನೇಕ ರೀತಿಯಿಂದ ಇವತ್ತು ರೈತರು ತೊಂದರೆಗೆ ಈಡಾಗಿ ಏನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಅದಕ್ಕೆ ಕಾರಣಗಳೇನು ? ಅದರಲ್ಲಿ ಸರ್ಕಾರದ ಪಾತ್ರವೇನು ? ಅಧಿಕಾರಿಗಳು ತೆಗೆದುಕೊಳ್ಳತಕ್ಕಂಥ ನಿರ್ಣಯವೇನು ? ಎಂಬ ವಿಚಾರಗಳ ಬಗ್ಗೆ ಸದನ ಸಮಿತಿ ಮಾಡಿ ಎಂದು ನಾವು ಕೇಳಿಕೊಂಡಿದ್ದೇವೆ. ಈ ಎರಡೂ ಬೇರೆ ಬೇರೆ ವಿಚಾರಗಳು. ದಯವಿಟ್ಟು

ಪತ್ರಿಕೆಗಳಲ್ಲೂ ಸಹ ನಾನು ನೋಡಿದೆ. ಕೆಲವು ಪತ್ರಿಕೆಯಲ್ಲಿ Judicial Probeಗೆ ಅವರು Agree ಆಗಿದ್ದಾರೆ, ಮತ್ತೆ ಏನು ಬೇಕು ? ಎಂದು ಬರೆದಿದ್ದಾರೆ. Judicial Probe ಇರುವುದು ಗೋಲಿಬಾರ್ ಬಗ್ಗೆ ಮಾತ್ರ. ನೇರವಾಗಿ ಗುಂಡೇಟಿನಿಂದ ಒಬ್ಬ ರೈತನ ಕೊಲೆಯಾಗಿದೆ. ಅದರ ಬಗ್ಗೆ ಇರತಕ್ಕದ್ದು ನ್ಯಾಯಾಂಗ ತನಿಖೆ. ಇಡಿ ರಾಜ್ಯದಲ್ಲಿ ಸರಣಿ ಆತ್ಮಹತ್ಯೆ ಏನು ನಡೆದಿವೆ, ಕೆಲವು ಜನ Fertilizer ಸಿಕ್ಕಲಿಲ್ಲ, ಕೆಲವು ಜನ ಬೀಜ ಸಿಕ್ಕಿಲ್ಲ, ಕೆಲವು ಜನ ಸಾಲದಿಂದ ನಮಗೆ ಬಾಧೆಯಾಗಿದೆ ಎಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಎಲ್ಲಾ ವಿಷಯಗಳು ಅದರಲ್ಲಿವೆ. ಅದಕ್ಕೆ ಯಾವ ರೀತಿಯ ಉಪಾಯ ಕಂಡು ಹಿಡಿಯಬೇಕು ? ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ರಾಜ್ಯದ ಜನಪ್ರತಿನಿಧಿಗಳಿ ಇರತಕ್ಕಂಥ ಜಂಟಿ ಸದನ ಸಮಿತಿ ರಚಿಸಬೇಕು. ಅದರಲ್ಲಿ ಮೇಲ್ಮನೆ ಮತ್ತು ಕೆಳಮನೆ ಸದಸ್ಯರು ಇಬ್ಬರೂ ಕೂಡ ಇರುತ್ತಾರೆ. ಎಲ್ಲಾ ಸದಸ್ಯರು ಸೇರಿ ಅಧ್ಯಯನ ಮಾಡುತ್ತಾರೆ. ತಾವೇ ಅದಕ್ಕೆ ಸದಸ್ಯರನ್ನು ನಾಮಿನೇಟ್ ಮಾಡುತ್ತೀರಿ. ಆ ರೀತಿ ನಾಮಿನೇಟ್ ಆದ ಸಮಿತಿ ಸದಸ್ಯರು ಎಲ್ಲಾ ಕಡೆಗೂ ಟೂರ್ ಮಾಡಿ ತಮಗೆ Report submit ಮಾಡುತ್ತಾರೆ ಮತ್ತು ಆ Report ಆಧಾರದ ಮೇಲೆ ಸರ್ಕಾರ ಏನು Action ತೆಗೆದುಕೊಳ್ಳುತ್ತದೆ ಎನ್ನುವುದು ಮುಂದಿನ ವಿಚಾರ. ಅದನ್ನು ನಾವು ಡಿಮ್ಯಾಂಡ್ ಮಾಡಿದ್ದೇವೆ. ಸತ್ಯಾಂಶ ಜನರಿಗೆ ಗೊತ್ತಾಗಲಿ, ರಾಜ್ಯದ ರೈತರಿಗೆ ಗೊತ್ತಾಗಲಿ ಎನ್ನತಕ್ಕ ದೃಷ್ಟಿಯಿಂದ ಆ ಡಿಮ್ಯಾಂಡ್ ಇಟ್ಟಿದ್ದೇವೆ. ಎರಡನೆಯದಾಗಿ, Compensation ಎಲ್ಲರಿಗೂ ಕೊಡಿ ಎಂದು ಕೇಳಿದ್ದೇವೆ. ಗೋಲಿಬಾರ್‌ನಿಂದ ಸತ್ತವರಿಗೆ ಕೊಟ್ಟಿದ್ದನ್ನು ಎಲ್ಲರೂ Wel-come ಮಾಡಿದ್ದಾರೆ. ಅದರ ಬಗ್ಗೆ Order ವೊಂದನ್ನು ಹೊರಡಿಸಬೇಕೆಂದು ಮಾನ್ಯ ಶಿವಕುಮಾರ್‌ರವರು, ಮಾನ್ಯ ಜಯಚಂದ್ರರವರು ಮತ್ತು ಅನೇಕ ಸದಸ್ಯರು ಹೇಳಿದರು.

ಕಾನೂನು ಪ್ರಕಾರವಾಗಿ ಅದು ಎಲ್ಲರಿಗೂ ಅನ್ವಯಿಸುವಂತೆ ಮಾಡಿ ಎಂದು ಹೇಳಿದ್ದಾರೆ. ಈಗೇನು Compensation ಕೊಟ್ಟಿದ್ದೀರಿ, ಅದೇ ರೀತಿಯಾಗಿ ಈಗ ಇಲ್ಲಿಯವರೆಗೂ ಸತ್ತಂತಹ 24 ರೈತರಿಗೂ ಕೊಡತಕ್ಕದ್ದಾಗಬೇಕು. ಅದರಲ್ಲಿ ಯಾವುದಾದರೂ ಒಂದು ಪ್ರಕರಣದಲ್ಲಿ ಪರಿಹಾರ ಕೊಟ್ಟಿದ್ದು ಸರಿಯಿಲ್ಲವೆಂದು ಸಮಿತಿಗೆ ಕಂಡು ಬಂದರೆ, ಅದನ್ನು ಅವರು ವರದಿಯಲ್ಲಿ ನಮೂದು ಮಾಡುತ್ತಾರೆ. ಮೂರನೆಯದಾಗಿ ನಾವು ಕೇಳಿದ್ದು ಏನೆಂದರೆ, ರೈತರ ಮೇಲೆ ಇವತ್ತೇನು ಕೇಸ್‌ಗಳನ್ನು ಹಾಕಿದ್ದೀರಿ, ಅದನ್ನು Withdraw ಮಾಡಿಕೊಳ್ಳಬೇಕು. ಅನೇಕ ಜನ, ಈಗ ಆನೇಕಲ್‌ನಲ್ಲಿ, ಆಯಿತು, ಹುಬ್ಬಳ್ಳಿ-ಧಾರವಾಡದಲ್ಲಿ ಆಯಿತು, ಹಾವೇರಿಯಲ್ಲಿ ಆಯಿತು, ಮೈಸೂರಿನಲ್ಲಿ ಆಯಿತು, ಬೇರೆ ಬೇರೆ ಕಡೆಯೂ ಕೂಡ ಆಗಿದೆ, ಅಂತಹ ಕಡೆ Public Property ಹ್ಹಾಳು ಮಾಡಿದ್ದೇ ಆಗಲಿ, Government property ಹಾಳು ಮಾಡಿದ್ದಾಗಲಿ, ಅವರ ಮೇಲೆ Action ಇಲ್ಲ. ಆದರೆ ರೈತರ ಮೇಲೆ Agitation ನಲ್ಲಿ Participate ಮಾಡಿದ್ದಾರೆಂದು Cases ಹಾಕಿದ್ದೀರಿ, ಅದನ್ನು ವಾಪಸ್ ತೆಗೆದುಕೊಳ್ಳಿ ಎಂದು ಕೇಳಿದ್ದೇವೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ. ಎಲ್ಲಾ ರೈತರ ಮೇಲೆ ಇರತಕ್ಕಂಥ, ಅವರು ಯಾರೇ ರೈತರು ಇರಲಿ, ಎಲ್ಲರ ಮೇಲಿನ ಕೇಸ್‌ಗಳನ್ನೂ ವಾಪಸ್ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. Terms of reference ಅನ್ನು expand ಮಾಡುವುದಕ್ಕೂ ಸಹ ಅವರು ಒಪ್ಪಿದ್ದಾರೆ. ಉಳಿದದ್ದು ಮಹತ್ವದ ಮೂರೇ ವಿಚಾರಗಳು. ಅವು ಯಾವುವೆಂದರೆ, ಜಂಟಿ ಸದನ ಸಮಿತಿ ರಚಿಸುವುದು, Compensation ಕೊಡುವುದು ಮತ್ತು ಈ ರಾಜ್ಯದ ಜನತೆಗೆ ಅವರ ಮುಖೇನ ಮತ್ತು ಮಾನ್ಯ ಕೃಷಿ ಸಚಿವರ ಮುಖೇನ ಏನೊಂದು ಅವಮಾನಕರವಾದಂತಹ ಮಾತುಗಳು ಆದಿದ್ದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ, 'ಅವರು ರೈತರೇ ಅಲ್ಲ, ಅವರೆಲ್ಲರೂ ಕೂಡ

ವೈಯಕ್ತಿಕ ಜಗಳಕ್ಕಾಗಿ ಸತ್ತಿದ್ದಾರೆ, ಅವರು ಕುಡುಕರು' ಎನ್ನತಕ್ಕಂಥ ಹೇಳಿಕೆಗಳನ್ನು ಮಾನ್ಯ ಕೃಷಿ ಸಚಿವರು ಕೊಟ್ಟಿದ್ದಾರೆ ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಕೂಡ 'ನನ್ನ ಬಳಿ ವರದಿ ಇದೆ, ಅದರ ಹಿಂದೆ Politicians ಇದ್ದಾರೆ, ರಾಜಕಾರಣಿಗಳಿದ್ದಾರೆ, ಯಾರ್ಯಾರು ಎಂದು ನನಗೆ ಗೊತ್ತು' ಎನ್ನತಕ್ಕಂಥ ಮಾತುಗಳನ್ನು ಹೇಳಿದ್ದಾರೆ. ಈ ರಾಜ್ಯದ ಜನ ಏನು Agitation ಮಾಡುತ್ತಿದ್ದಾರೆ, ಆ ರೈತರಿಗೆ ಅವಮಾನ ಮಾಡತಕ್ಕಂಥ ರೀತಿಯಲ್ಲಿ ಮಾತನಾಡಿದ್ದಾರೆ. ಅದರ ಬಗ್ಗೆ ಕ್ಷಮೆ ಕೇಳಬೇಕೆಂದು ಕೇಳಿದ್ದೇವೆ. ಈ ಮೂರು ಬೇಡಿಕೆಗಳನ್ನು ಮಾತ್ರವೇ ನಾವು ಸರ್ಕಾರದ ಮುಂದಿಟ್ಟಿದ್ದೆವು. ಅದಕ್ಕೆ ಅವರು ತರಾತುರಿಯಲ್ಲಿ 'ಇದಕ್ಕೆ ನಾನು ಒಪ್ಪುವುದಿಲ್ಲ, ಆ ರೀತಿ ಮಾಡುವುದಕ್ಕಾಗುವುದಿಲ್ಲ, ನಾನು ಈಗಾಗಲೇ Judicial Probe order ಮಾಡಿದ್ದೇನೆ' ಎಂದಿದ್ದಾರೆ. Judicial Probe ಮಾಡುತ್ತಿರುವುದು ಒಂದು ವಿಚಾರಕ್ಕೆ ಮಾತ್ರ. ಉಳಿದ ವಿಚಾರಕ್ಕೂ ಅದಕ್ಕೂ ಸಂಬಂಧವಿಲ್ಲ. ಆದ್ದರಿಂದ ದಯವಿಟ್ಟು ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ತಾವೂ ಕೂಡ ಅವರಿಗೆ ಸಲಹೆ ಮಾಡಬೇಕು. ಈ ಸದನದ ಸಮಯವನ್ನು ವ್ಯರ್ಥ ಮಾಡಬೇಕು ಎಂಬುದು ನಮ್ಮ ಇಚ್ಛೆಯಲ್ಲ. ಹಾಗೆ ಇದ್ದಿದ್ದರೆ, ನಾವು ಪ್ರಾರಂಭದಲ್ಲೇ ಆ ಕೆಲಸವನ್ನು ಮಾಡುತ್ತಿದ್ದೆವು. ತಾವು ಹೇಳಿದಂತೆ ನಾವು ಬಹಳ ಗಂಭೀರವಾಗಿ ಚರ್ಚೆಯಲ್ಲಿ ಭಾಗವಹಿಸಿದ್ದೇವೆ. ಸುಮಾರು 20–25 ಜನ ಮಾತನಾಡಿದೆವು. ಏಕೆಂದರೆ, ಈ ವಿಷಯವನ್ನು Highlight ಮಾಡಬೇಕು, ಜನರಿಗೆ ತಿಳಿಸಬೇಕು ಮತ್ತು ಸರ್ಕಾರದ ಧೋರಣೆ ಏನಿದೆ, ಅದೂ ಕೂಡ ಜನರಿಗೆ ಗೋತ್ತಾಗಲಿ ಎಂಬ ದೃಷ್ಟಿಯಿಂದ ನಾವು ಬಹಳ ಶಾಂತ ರೀತಿಯಿಂದ ಮಾತನಾಡಿದ್ದೇವೆ. ಅವರ ಮಾತನ್ನೂ ಕೂಡ ಶಾಂತ ರೀತಿಯಿಂದ ಕೇಳಿದ್ದೇವೆ. ನಾವು ಶಾಂತ ರೀತಿಯಿಂದ ಹೇಳಿದಂತಹ ಮಾತಿಗೆ ಮನ್ನಣೆ

Vol. 2 P. 43

ಇಲ್ಲದ ಕಾರಣ ನಾವು ಧರಣಿ ಮಾಡುತ್ತಿದ್ದೇವೆಯೇ ಹೊರತಾಗಿ ಬೇರೆ ಯಾವ ದೃಷ್ಟಿಯಿಂದಲೂ ಕೂಡ ಇಲ್ಲ. ದಯವಿಟ್ಟು ತಾವು ಅವರಿಗೆ Instructions ಕೊಟ್ಟು, ಈ ಮೂರು, ಜಂಟಿ ಸದನ ಸಮಿತಿ ರಚನೆ, Compensation ಕೊಡುವುದು ಮತ್ತು ಕ್ಷಮಾ ಯಾಚನೆ, ಈ ಮೂರನ್ನೂ ಕೂಡ ಅವರು ಮಾಡಬೇಕು. ಇದರಿಂದ ಅವರಿಗೇನೂ ಗೌರವ ಹೋಗುವುದಿಲ್ಲ. ಏಕೆಂದರೆ, ಯಾವ ರೈತರಿಗೆ ಅವರು ಇವತ್ತು ಅವಮಾನ ಮಾಡಿದ್ದಾರೋ ಅದೇ ರೈತರಲ್ಲಿ ಕ್ಷಮೆ ಕೇಳುತ್ತಿದ್ದಾರೆ, ಬೇರೆ ಯಾರನ್ನು ಕೇಳುತ್ತಿಲ್ಲ ಅಥವಾ ರಾಜಕಾರಣಿಗಳಲ್ಲ, ರಾಜಕೀಯ ಪಕ್ಷಗಳನ್ನಲ್ಲ. ಯಾರ ಮೇಲೆ ಅವರಿಗೆ ಪ್ರೀತಿ ಇದೆ, ವಿಶ್ವಾಸವಿದೆ ಅಂತಹವರ ಬಗ್ಗೆ ಕ್ಷಮೆ ಕೇಳಿ ಎಂದು ನಾವು ಹೇಳುತ್ತಿದ್ದೇವೆ. ದಯವಿಟ್ಟು ಇದನ್ನು ಅವರಿಗೆ ಹೇಳಬೇಕು ಮತ್ತೆ ಬೇರೆ ವಿಚಾರಗಳನ್ನು ಅವರು ಒಪ್ಪಿರುವುದಿಲ್ಲ, Judicial Probe Session ಶುರುವಾಗುವುದಕ್ಕಿಂತ ಮುಂಚೆ ಒಪ್ಪಿದಂತಹ ವಿಚಾರ. ಅದಕ್ಕೆ ದಯವಿಟ್ಟು ತಾವು ಅವರಿಗೆ ಸೂಚನೆಯನ್ನು ಕೊಟ್ಟು ಅವರು ಒಪ್ಪತಕ್ಕಂತಹದ್ದಾಗಲಿ, ಮತ್ತೆ ನಾನೂ ಕೂಡ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ನಾವು ಇಷ್ಟೊಂದು ಸಹಕರಿಸುವಾಗ ಜಂಟಿ ಸಮಿತಿಗೆ, ಪರಿಹಾರಕ್ಕೆ, ಕ್ಷಮೆಯಾಚನೆಗೆ ಒಪ್ಪಬೇಕು.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಒಂದು Clarification ಕೇಳುತ್ತಿದ್ದೇನೆ, ತಾವು ಎರಡು ಮೂರು ಬೇಡಿಕೆಗಳನ್ನು ಇಟ್ಟಿದ್ದೀರಿ, ಸರ್ಕಾರದವರು ಆ ಬಗ್ಗೆ ಈಗಾಗಲೆ ಹೇಳಿದ್ದಾರೆ ಮತ್ತೆ ಏನು ಹೇಳುತ್ತಾರೋ ನೋಡೋಣ. ಒಂದು, ಆತ್ಮಹತ್ಯೆ ಮಾಡಿಕೊಂಡ ಎಲ್ಲಾ ರೈತರಿಗೆ ಪರಿಹಾರ ಕೊಡಬೇಕೆಂದು ನೀವು ಹೇಳುತ್ತಿದ್ದೀರಿ. ಹಿಂದಿನ ಎಲ್ಲಾ ಸರ್ಕಾರಗಳ ನಡವಳಿಕೆಗಳನ್ನು ನೀವು ನೋಡಿಕೊಳ್ಳಿ, ಅದು ಯಾವುದೇ ಪಕ್ಷದ ಸರ್ಕಾರವಿರಲಿ, ಆ ಸಂದರ್ಭದಲ್ಲಿ ಆತ್ಮಹತ್ಯೆ ಮಾಡಿಕೊಂಡ ಎಲ್ಲಾ ರೈತರಿಗೆ ಪರಿಹಾರಧನವನ್ನು ಕೊಟ್ಟಿದ್ದಾರೋ ಹೇಗೆ

ಎಂಬುದನ್ನು ತಾವೇ ಹೇಳಬೇಕು. ಮತ್ತೆ Assistant Commissioner ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ, ಆ ಸಮಿತಿ ಎಲ್ಲಾ Examine ಮಾಡಿಕೊಂಡು ಯಾವುದಕ್ಕೆ ಕೊಡಬೇಕು, ಯಾವುದಕ್ಕೆ ಕೊಡಬಾರದು ಎಂಬುದನ್ನು ನೋಡಿಕೊಂಡು ಕೊಡುವ ಪದ್ಧತಿಯನ್ನು ನಾನು ಇಲ್ಲಿಯವರೆಗೆ ನೋಡಿಕೊಂಡು ಬಂದಿದ್ದೇನೆ. ಇದರ ಬಗ್ಗೆ ತಾವೇನು ಹೇಳುತ್ತಿರೆಂಬುದನ್ನು ತಿಳಿಸಬೇಕು, ಆ ಒಂದು ಪದ್ಧತಿಯನ್ನು ನೀವು ಹಾಕಿದ್ದೀರಿ, ಒಂದು ನಿಯಮವನ್ನು ಹಾಕಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :- ಸರ್ಕಾರದ ಆದೇಶ ಏನಿದೆ ಅದರ ಪ್ರಕಾರ Assistant Commissioner, Deputy Commissioner enquiry ಮಾಡಿ ಮಾಡಲಿ, ನೀವು ಆ Enquiry ಗಿಂತ ಮುಂಚೆಯೇ "ಇಲ್ಲ ಆತ ಕುಡುಕ, ಸರಿಯಿಲ್ಲ ನಮಗೆ ಅದು ಗೊತ್ತು" ಎಂದು ಹೇಳಿಬಿಟ್ಟಿದ್ದೀರಲ್ಲ, ಮತ್ತೆ ನೀವು ಯಾರು? ಮಂತ್ರಿಗಳು, ಮುಖ್ಯಮಂತ್ರಿಗಳು ಕಾನೂನಿನ ಪ್ರಕಾರ ಹೋಗಬೇಕಾಗುತ್ತದೆಯೇ ಹೊರತು, ನಾವು ನೀವು ರಚಿಸಿಕೊಟ್ಟಂಥ ಕಾನೂನಿನ ಪ್ರಕಾರ ಅನುಷ್ಠಾನಕ್ಕೆ ತರುವ ಕೆಲಸ ಆಗಬೇಕು. ನಿಮ್ಮ Discretion ಇದ್ದರೆ, ಐದು ಹತ್ತು ರೂಪಾಯಿಗಳ ಪರಿಹಾರವನ್ನು ಎಲ್ಲಾದರೂ ಕೊಡಬಹುದು, ಅಥವಾ Compassionate ground ಮೇಲೆ ಏನಾದರೂ ಮಾಡಬಹುದು, ಎಲ್ಲಕ್ಕೂ ನಿಮಗೆ ಅಧಿಕಾರವನ್ನು ಪಹಿಸಿಕೊಟ್ಟಿಲ್ಲ. ಇವತ್ತು ಐಪಿಸಿ ಪ್ರಕಾರ Police stationನಲ್ಲಿ Case register ಮಾಡಬೇಕಾದರೆ, ಅಲ್ಲಿರುವ Police in charge ಏನು ಇರುತ್ತಾನೆ, Inspector ಇರಬಹುದು sub inspector ಇರಬಹುದು, ಅವನಿಗೆ ಅಧಿಕಾರವಿರುತ್ತದೆಯೇ ಹೊರತು, ಡಿಜಿಪಿಗೂ ಇರುವುದಿಲ್ಲ, ಗೃಹ ಮಂತ್ರಿಗೂ ಇರುವುದಿಲ್ಲ. ಅದಕ್ಕಾಗಿ ತಮ್ಮನ್ನು

ಕೇಳಿದ್ದೇನೆಂದರೆ, ಜಂಟಿ ಸಮಿತಿ ರಚನೆಯಾದರೆ ಈ ಸರಣಿ ಆತ್ಮಹತ್ಯೆಗಳ ಬಗ್ಗೆ ಗೊತ್ತಾಗುತ್ತದೆ, ಯಾವುದು ಸರಿಯಿಲ್ಲವೆಂದು ಕಂಡುಬಂದರೆ ಅವರಿಗೆ ಕೊಡಬೇಡಿ, ಸರಿ ಇದೆ ಎಂದರೆ ಕೊಡಿ, ಅದನ್ನು ನಾವು ಕೇಳುತ್ತಿದ್ದೇವೆ. ಮತ್ತೆ ಅದಕ್ಕೆ ಕಾರಣಗಳು ಏನೆಂದು ಗೊತ್ತಾಗಲಿ, ಏನು ಬರಿ ಸಾಲವೇ ಕಾರಣವೋ ಏನು ಕುಡಿತದಿಂದ ಸತ್ತರೋ ಏನು ಭೀಜ ಸಿಕ್ಕಿಲ್ಲವೆಂದು ಸತ್ತರೋ, ಏನು ರಸಗೊಬ್ಬರ ಸಿಕ್ಕಿಲ್ಲವೆಂದು ಸತ್ತರೋ ಯಾವುದಕ್ಕೆ ಸತ್ತರೆಂಬುದು ಕೊಡ ಹೊರಕ್ಕೆ ಬರುತ್ತದಲ್ಲ? ಅದೂ ಕೂಡ ಗೊತ್ತಾಗುತ್ತದೆ, ಆ ದೃಷ್ಟಿಯಿಂದ ಕೇಳಿದ್ದು ಹೊರತು ಮತ್ತೇನಲ್ಲ.

ಶ್ರೀ ಡಿ.ಕೆ.ಶಿವಕುಮಾರ್ [ಕನಕಪುರ] : ನಿನ್ನೆಯ ದಿವಸ ಮಾನ್ಯ ಮಂತ್ರಿಗಳು ಎಲ್ಲಾ ಟಿವಿಗಳಲ್ಲಿ ರಾಜ್ಯದ ಜನತೆಗೆ ತಿಳಿಯುವಂತೆ ಸಾರಿ ಸಾರಿ ಏನು ಹೇಳಿದರೆಂದರೆ, "ನಾವು ಎಲ್ಲಾ ಸಹಕಾರವನ್ನು ಕೊಡುವುದಕ್ಕೆ ತಯಾರಿದ್ದೇವೆ, ನೀವು ರೈತರ ಪರವಾಗಿ ಏನೇನು ಸಲಹೆಗಳನ್ನು ಕೇಳುತ್ತೀರಿ, ನಿಮ್ಮನ್ನೆಲ್ಲಾ ಕೂರಿಸಿಕೊಂಡು ಚರ್ಚೆ ಮಾಡಿ ನಾವು ಎಲ್ಲಾ ವಿಚಾರಕ್ಕೂ ಒಪ್ಪುತ್ತೇವೆ" ಎನ್ನುವ ಒಂದು ವಿಚಾರವನ್ನು ಹೇಳಿದರು, ಇಲ್ಲಿ ಪ್ರತಿಷ್ಠೆಯನ್ನು ಏಕೆ ಮಾಡಿಕೊಳ್ಳುತ್ತೀರಿ? ನನಗೆ ಅರ್ಥವಾಗುತ್ತಿಲ್ಲ. ಸದನದ ಸಮಿತಿಯಲ್ಲಿ ಯಾರು ಇರುತ್ತಾರೆಂದರೆ, ಮೇಲ್ಮನೆ, ಕೆಳಮನೆಯ ಶಾಸಕರು ಇರುತ್ತಾರೆ. ಅವರು ಚರ್ಚೆ ಮಾಡಿ, ವಾಸ್ತವವಾಗಿ ಪರಿಸ್ಥಿತಿಯನ್ನು ನೋಡಿ, ಅವರ ಸಲಹೆಗಳನ್ನು, ಹಳ್ಳಿಗಳಲ್ಲಿ ಅವರಿಗೇನು ಅನುಭವವಾಗಿದೆ, ಏನು ನಿಜವಿದೆಯಾ?, ಸತ್ಯವಿದೆಯಾ?, ಸುಳ್ಳು ಇದೆಯಾ?, ಇಲ್ಲ, ಪೋಲಿಸಿನವರು ಏನು ಮಾಡುತ್ತಿದ್ದಾರೆ? ಇಲ್ಲ, ಕಾರ್ಯಕರ್ತರಿಗೆ ತೊಂದರೆಯಾಗುತ್ತಿದೆಯಾ?, ನಿಜವಾಗಿಯೂ ಸತ್ತಿದ್ದಾರಾ? ಇದರಲ್ಲಿ ಏನಾದರು ಲೇಪ ಹಚ್ಚಿದ್ದಾರಾ? ಎಂಬುದನ್ನು ತಿಳಿದುಕೊಂಡು ಶಾಸಕರು ತಮ್ಮ ವರದಿಯನ್ನು ಕೊಡುವುದನ್ನು ನೀವು ಬೇಡವೆಂದರೆ ಹೇಗೆ? ಇದಕ್ಕೆ ಯಾಕೆ ಇಷ್ಟೊಂದು ಪ್ರತಿಷ್ಠೆ? ನನಗಂತೂ ಅರ್ಥವಾಗುತ್ತಿಲ್ಲ. ಶಾಸಕರ ಸದನ ಸಮಿತಿ ಹೋಗಿ ಅಲ್ಲಿರುವ ರೈತರ

ಹತ್ತಿರ ಮಾತನಾಡಿ, ನಿಮ್ಮ ಅಧಿಕಾರಿಗಳ ಹತ್ತಿರ ಚರ್ಚೆ ಮಾಡಿ, ವಾಸ್ತವಾಂಶವನ್ನು ತಿಳಿದುಕೊಂಡು ಸರ್ಕಾರಕ್ಕೆ ಸಲಹೆ ಕೊಡಲೆಂದರೆ ಯಾಕೆ ಒಪ್ಪುತ್ತಿಲ್ಲ? ನೀವೇ ಹೇಳುತ್ತೀರಿ, ನೀವೆಲ್ಲಾ ಬನ್ನಿ ನಾನು ಪ್ರತ್ಯೇಕವಾಗಿ ಸಭೆಯನ್ನು ಕರೆಯುತ್ತೇನೆ, ದೆಹಲಿಗೆ, ಅಲ್ಲಿಗೆ, ಇಲ್ಲಿಗೆ ಬನ್ನಿ ಎಂದು ಎಲ್ಲವನ್ನೂ ನೀವೇ ಹೇಳುತ್ತಿದ್ದೀರಿ, ಹೇಳುವವರು ನೀವೇ, ಬೇಡ, ಬೇಡವೆಂದು ಹೇಳುವವರೂ ನೀವೆ. ಇದರಲ್ಲಿ ದೊಡ್ಡದು ಏನಿದೆ? ಏನಾದರು ನಿಮ್ಮ ಅಧಿಕಾರಕ್ಕೆ ಕುತ್ತು ಬರುತ್ತದೆಯೆ? ನಾವು ಯಾರಾದರೂ ಅಧಿಕಾರಿಗಳು ಸರಿಯಿಲ್ಲವೆಂದು, ವ್ಯವಸ್ಥೆ ಸರಿಯಿಲ್ಲವೆಂದು ದೂರುವಂಥ ಸಂದರ್ಭವಿಲ್ಲ, ಮುಂದಕ್ಕೆ ಆ ಬಗ್ಗೆ ಏನಾಗಬೇಕು, ಇದನ್ನು ತಡೆಯುವುದಕ್ಕೆ ಏನಾಗಬೇಕು ಎಂಬುದರ ಬಗ್ಗೆ ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುತ್ತೇವೆ. ಏಕೆಂದರೆ, ಹಿಂದೆ ಜಿ.ಬಿ.ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯಾಗಿತ್ತು, ಅವರು ವ್ಯಾಪಕವಾಗಿ ಚರ್ಚೆ ಮಾಡಿ ಒಂದು ವರದಿಯನ್ನು ಕೊಟ್ಟರು, ವೀರೇಶ್ ಅವರು ಒಂದು ವರದಿ ಬಂತು, ಅದನ್ನು ತಮ್ಮ ನಾಯಕರಾದ ಯಡಿಯೂರಪ್ಪನವರು ಆವತ್ತು ಇದು ಸರಿ ಇಲ್ಲವೆಂದು ಅಶೋಕ್, ಕಟ್ಟಾ ಸುಬ್ರಮಣ್ಯ ನಾಯ್ಡುರವರು, ನಾವು ಇದನ್ನು ರಿಜೆಕ್ಟ್ ಮಾಡುತ್ತೇವೆಂದು ಖಡಾಖಂಡಿತವಾಗಿ ವಿರೋಧ ಮಾಡಿದರು, ಅದು ಬೇರೆ ವಿಚಾರ, ಅದು ಅವರ ಪಕ್ಷದ ನಿಲುವು. ಹೀಗೆ ಕೆಲವು ವಿಚಾರಗಳಲ್ಲಿ ವಿಭಿನ್ನವಾದ ನಿಲುವುಗಳುಬರುತ್ತವೆ. ಆದುದರಿಂದ ರೈತರ ವಿಚಾರದಲ್ಲಿ ಪ್ರತಿಷ್ಠೆ ಮಾಡುವುದು ಬೇಡ, ದಯವಿಟ್ಟು ಸದನ ಸಮಿತಿಗೆ ಒಪ್ಪಿಕೊಳ್ಳಿ, ನಾವು ಇದಕ್ಕೆ ಎಲ್ಲಾ ರೀತಿಯ ಸಹಕಾರವನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ[ರಾಮನಗರ] : ಮಾನ್ಯ ಸಭಾಧ್ಯಕ್ಷರೆ, ನಿನ್ನೆ ಮುಖ್ಯಮಂತ್ರಿಗಳು ಸುದೀರ್ಘವಾಗಿ ಉತ್ತರವನ್ನು ಕೊಟ್ಟನಂತರ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ವಿಷಯವಾಗಿ, ರೈತರು ಯಾವ ತೊಂದರೆಗಳಿಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂಬುವ ಒಂದು

Facts finding ಮಾಡುವುದಕ್ಕೆ ಸದನದ ಸಮಿತಿಯಾಗಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಇದರಲ್ಲಿ ಯಾವುದೇ ರೀತಿಯಾಗಿ ಸರ್ಕಾರಕ್ಕೆ ಮುಜುಗರವಾಗುವ ವಿಚಾರವಿಲ್ಲ. ಇದೆಲ್ಲಕ್ಕಿಂತ ಪ್ರಮುಖವಾಗಿ ನಿನ್ನೆ ಮುಖ್ಯಮಂತ್ರಿಗಳು ಹೇಳಿದ್ದಾರೆ, " ಗೊಬ್ಬರವನ್ನು ರೈತರಿಗೆ ಸರಬರಾಜು ಮಾಡುವುದಕ್ಕೆ ನನ್ನ ಹತ್ತಿರ ಮಂತ್ರದಂಡವಿಲ್ಲ.". ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಇಲ್ಲಿಯವರೆಗೆ ಆಗಿರುವ ಘಟನೆ ಒಂದು ಕಡೆ, ಮತ್ತೆ ಮುಂದಿನ ತಿಂಗಳಿನಿಂದ ಉತ್ತರ ಕರ್ನಾಟಕದ ರಾಯಚೂರು, ಬಳ್ಳಾರಿ ಮತ್ತು ಆ ಭಾಗಗಳಲ್ಲಿ ಭತ್ತದ ಬೆಳೆಯನ್ನು ಹಾಕತಕ್ಕಂಥ ಸಂದರ್ಭದಲ್ಲಿ ಅವರಿಗೇನು ಗೊಬ್ಬರದ ಅವಶ್ಯಕತೆ ಇದೆ, ಇವತ್ತು ಗೊಬ್ಬರ ಕೊಡುವುದಕ್ಕೆ ಸಾಧ್ಯವಿಲ್ಲವೆನ್ನುವ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. "ನಾನು ವಿರೋಧಪಕ್ಷದ ನಾಯಕರ ಹತ್ತಿರ 500 ಕೋಟಿ ರೂಪಾಯಿಗಳ ಡ್ರ್ಯಾಫ್ಟ್ ಅನ್ನು ಇವತ್ತೇ ಬೇಕಾದರೆ ನಾನು ಕೊಟ್ಟುಬಿಡುತ್ತೇನೆ, ನೀವು ಗೊಬ್ಬರವನ್ನು ತರಿಸಿ", ಎನ್ನುವ ಮಾತನ್ನು ನಿನ್ನೆ ಹೇಳಿದ್ದಾರೆ. ಆದರೆ ನಿನ್ನೆ ನಾವು ಕೆಲವು ಮಾಹಿತಿಗಳನ್ನು ಸದನದ ಮುಂದಿಟ್ಟಿದ್ದೇವೆ. ಮೇ 31ನೇ ತಾರೀಖಿನವರೆಗೆ ಇದ್ದಂಥ ರಸಗೊಬ್ಬರ ದಾಸ್ತಾನು ಏನಿತ್ತು ಎಂಬುದನ್ನು ನಾವು ಪ್ರಸ್ತಾಪ ಮಾಡಿದ್ದೇವೆ, ನಮಗೆ ಸಿಕ್ಕಿರುವ ಅಂಕಿಅಂಶಗಳನ್ನು ಸಭೆಯ ಮುಂದಿಟ್ಟಿದ್ದೇನೆ. ಮುಖ್ಯಮಂತ್ರಿಗಳಿಗೆ ಅಧಿಕಾರಿಗಳು ಕೊಟ್ಟಿರುವ ಆ ಮಾಹಿತಿಗಳಿಗೂ ನಮ್ಮ ಹತ್ತಿರವಿರುವ ಮಾಹಿತಿಗಳಿಗೂ ಕೆಲವು ವ್ಯತ್ಯಾಸವಿರುವುದನ್ನು ನಾವು ಕಾಣುತ್ತಿದ್ದೇವೆ. ನನಗೆ ನಿನ್ನೆಯವರೆಗೆ ಬಂದಿರುವ ಕೆಲವು ಮಾಹಿತಿಯ ಪ್ರಕಾರ, ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ ಯಾವ್ಯಾವ ತಿಂಗಳಿಗೆ ರೈತರಿಗೆ Requirement ಇತ್ತು, ಆ Requirement ಅನ್ನು ರಾಜ್ಯದಲ್ಲಿ ದಾಸ್ತಾನು ಮಾಡುವುದಕ್ಕೆ ಯಾವುದೇ ರೀತಿಯ ತೊಂದರೆಯಾಗದಿರುವುದಕ್ಕೆ ಮಾಹಿತಿ ನನಗೆ ಬಂದಿದೆ. ನಿನ್ನೆ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿಯನ್ನು ವಹಿಸಿದ್ದಾರೆ. "ಇವತ್ತು ಕೇಂದ್ರ ಸರ್ಕಾರ

ಗೊಬ್ಬರವನ್ನು ಕೊಟ್ಟರೆ ನಾನು ಪೋಸ್ಟ್‌ಮ್ಯಾನ್ ಕೆಲಸವನ್ನು ನಾನು ಮಾಡುತ್ತೇನೆ, ನಾನು ಮುಖ್ಯಮಂತ್ರಿಗಿಂತ ಹೆಚ್ಚಾಗಿ ಪೋಸ್ಟ್‌ಮ್ಯಾನ್ ಎನ್ನುವ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಇವತ್ತು ಗೊಬ್ಬರದ ದಾಸ್ತಾನು ಎಷ್ಟಿದೆ? ಇವತ್ತು ಕಳೆದ ಮೂರು ತಿಂಗಳಿನಿಂದ ಯಾವ್ಯಾವ ರೀತಿ ಗೊಬ್ಬರವನ್ನು ವಿತರಣೆ ಮಾಡಿದ್ದಾರೆ? ಈ ವಿತರಣೆಯಾದ ಮೇಲೆ ದಾಸ್ತಾನಿರುವುದು ಎಷ್ಟೆಂಬುದನ್ನು ರಾಜ್ಯದ ಜನತೆಗೆ ಮಾಹಿತಿಯನ್ನು ನಾವು ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ನಾವು ಇವತ್ತು ಯಾವ ಕಾರಣಕ್ಕೆ ರೈತರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವ ವಿಷಯವನ್ನು ಸಾರ್ವಜನಿಕವಾಗಿ ತರುವುದರ ಜೊತೆಗೆ ಇಲ್ಲಿರುವ ದಾಸ್ತಾನಿನ ಸಮಸ್ಯೆಗೆ ಸಂಬಂಧಿಸಿದಂತೆ, ಇವತ್ತು ಮಾರುಕಟ್ಟೆಯಲ್ಲಿರುವ ಗೊಬ್ಬರದ ದಾಸ್ತಾನು ಎಷ್ಟೆಂಬುದನ್ನು ಕಂಡುಹಿಡಿಯಬೇಕಾದರೆ, ಏನು ಎರಡು ಕಡೆ ಇರುವ ಮಾಹಿತಿಗಳಲ್ಲಿ, ಅಭಿಪ್ರಾಯಗಳಲ್ಲಿ ವ್ಯತ್ಯಾಸವಿದೆ, ಇದಕ್ಕೋಸ್ಕರವಾದರೂ ನೀವು ಸದನದ ಸಮಿತಿಯನ್ನು ಮಾಡಲೇ ಬೇಕಾಗುತ್ತದೆ. ಇವತ್ತು ಕೇಂದ್ರ ಸರ್ಕಾರದ ಕಡೆ ಕೈ ತೋರಿಸಿ ಅವರಿಂದ ಗೊಬ್ಬರದ ಸಮಸ್ಯೆ ಆಗಿರುವುದೆನ್ನುವುದನ್ನು ಪದೇಪದೇ ಹೇಳುವುದರ ಮುಖಾಂತರ ಇವರು ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡು, ಇವತ್ತು ರೈತರಿಗೆ ಗೊಬ್ಬರವನ್ನು ಕೊಡುವ ವಿಷಯ ಅಸಮರ್ಥರಾಗಿ ಉಳಿದ್ದಾರೆ, ಇದರ ಬಗ್ಗೆ ಸಾರ್ವಜನಿಕವಾಗಿ ಜನತೆಯ ಮುಂದಿಡುವುದಕ್ಕೆ ಸದನದ ಸಮಿತಿಯ ಅವಶ್ಯಕತೆ ಇದೆ. ಇವತ್ತು ಗೊಬ್ಬರದ ದಾಸ್ತಾನು ಎಷ್ಟಿದೆ, ಯಾವ್ಯಾವ ರೀತಿ ಯಾವ್ಯಾವ ತಿಂಗಳಲ್ಲಿ ಮಾರಾಟ ಮಾಡಿದ್ದಾರೆ, ಉಳಿದಿರುವುದು ಎಷ್ಟು, ಏಕೆಂದರೆ, ನಿನ್ನೆ ಅವರು, ನಮಗೆ 20ನೇ ತಾರೀಖಿನವರೆಗೆ 1,24,000 ಟನ್ DAP ಬೇಕೆನ್ನುವ ಮನವಿಯನ್ನು ಕೊಟ್ಟಿದ್ದು ಕೇವಲ 80,000 ಟನ್ ಮಾತ್ರ ಇಲ್ಲಿಯವರೆಗೆ ಕೇಂದ್ರ ಸರ್ಕಾರ ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಇವೆಲ್ಲಾ ಸಾರ್ವಜನಿಕವಾಗಿ ಜನತೆಗೆ ತಿಳೀಯಬೇಕಾದರೆ, ಕೇಂದ್ರ ಸರ್ಕಾರದಿಂದಾಗಿರುವ ತಪ್ಪೋ, ರಾಜ್ಯ ಸರ್ಕಾರ 30ನೇ ತಾರೀಖು ಪ್ರಮಾಣವಚನವನ್ನು ಸ್ವೀಕಾರ ಮಾಡಿ 23 ದಿವಸಗಳಲ್ಲಿ

ಇವರು ಈ ಗೊಬ್ಬರದ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ರೈತರಿಗೆ ತಲುಪಿಸುವುದರಲ್ಲಿ ವಿಫಲರಾಗಿದ್ದಾರೋ ಎಂಬುದು ಇವತ್ತು ರಾಜ್ಯದ ಜನತೆಗೆ ತಿಳಿಯಬೇಕಾದರೆ, ಸತ್ಯಾಂಶ ರಾಜ್ಯ ಜನತೆಗೆ ತಿಳಿಯಬೇಕಾದರೆ, ಸದನದ ಸಮಿತಿ ಅವಶ್ಯಕತೆ ಇದೆ. ಇವತ್ತು ಗೋಲಿಬಾರ್ ವಿಷಯದಲ್ಲಿ ನ್ಯಾಯಾಂಗ ತನಿಖೆಗೆ ಅಜ್ಞೆ ಮಾಡಿದ್ದಾರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ ಆದರೆ ಗೋಲಿಬಾರಿನ ವಿಚಾರ ಬೇರೆ, ರೈತರು ಗೊಬ್ಬರದ ಕೊರತೆಯಿಂದ ಏನು ಆತಂಕಕ್ಕೆ ಒಳಗಾಗಿದ್ದಾರೆ, ಆ ಮಾಹಿತಿ ಸರಿಯಾದ ರೀತಿ ದೊರಕಬೇಕಾದರೆ, ಸದನ ಸಮಿತಿ ಅವಶ್ಯಕತೆ ಇದೆ, ಸರ್ಕಾರ ಇದರಲ್ಲಿ ಪ್ರತಿಷ್ಠೆ ಇಟ್ಟುಕೊಳ್ಳುವುದು ಬೇಡ. ಏನೇನು ತೊಂದರೆಗಳು ಇವೆ ಎನ್ನುವ ಸರಿಯಾದ ಮಾಹಿತಿಯನ್ನು ರಾಜ್ಯದ ಜನತೆಗೆ ತಿಳಿಸತಕ್ಕಂತಹ ದೃಷ್ಟಿಯಿಂದ ಸದನದ ಸಮಿತಿ ಅವಶ್ಯಕತೆ ಇದೆ ಎಂದು ನಿಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಸರ್ಕಾರ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ನಮ್ಮ ಪಕ್ಷದ ನಿಲುವು.

ಶ್ರೀ ಎ. ರಾಮದಾಸ್(ಕೃಷ್ಣರಾಜ) : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷಗಳು ನ್ಯಾಯಾಂಗ ತನಿಖೆಯ ತಮ್ಮ ಬೇಡಿಕೆ ಇಡುವ ಮೊದಲೇ ರೈತರ ಬಗ್ಗೆ ಕಾಳಜಿ ಇರುವ ನಮ್ಮ ಮುಖ್ಯ ಮಂತ್ರಿಗಳು ಸದನ ಪ್ರಾರಂಭವಾಗುವುದಕ್ಕೆ ಮೊದಲೇ ನ್ಯಾಯಂಗ ತನಿಖೆಗೆ ಆದೇಶ ಮಾಡಿದ ಇತಿಹಾಸವಿದು.

ಅಧ್ಯಕ್ಷರು : ಅವರು ಅವರ ಅಭಿಪ್ರಾಯ ಹೇಳುವುದಕ್ಕೆ ಅವಕಾಶ ಇದೆ. ಯಾರ್ಯಾರಿಗೆ ಮಾತನಾಡಲಿಕ್ಕೆ ಅವಕಾಶವಿದೆ ಅವರಿಗೆ ಅವಕಾಶ ಕೊಟ್ಟಿದ್ದೇನೆ ನಾನು. ಉತ್ತರ ಕೊಡುತ್ತಿಲ್ಲ. ನಿಮಗೆ ಯಾವ ರೀತಿ ಮಾತನಾಡುವುದಕ್ಕೆ ಅವಕಾಶವಿದೆ ಅದೇ ತರಹ ಅವರಿಗೆ ಮಾತನಾಡುವ ಹಕ್ಕು ಇದೆ, ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ. ನೀವು Intervene ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎ.ರಾಮದಾಸ್ : ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ಕಾಳಜಿ ಹೊಂದಿರುವ ಮಾನ್ಯ ಮುಖ್ಯಮಂತ್ರಿಗಳು ನ್ಯಾಯಾಂಗ ತನಿಖೆಗೆ ಆದೇಶ ಮಾಡಿದರು. ಇಲ್ಲಿ ಒಂದು ಪ್ರಶ್ನೆ ಹೇಳಿದರು, ಜಂಟಿ ಸದನ ಸಮಿತಿ ಮಾಡುವುದಕ್ಕೆ ಒಂದು ಪ್ರೆಸ್ಟೀಜ್ ಇಶ್ಯೂ ಆಗಿ ತೆಗೆದುಕೊಳ್ಳುವಂಥದ್ದು ಏಕೆ? ಇಲ್ಲಿ ಈ ಪ್ರಶ್ನೆ ಇಲ್ಲವೇ ಇಲ್ಲ. ಒಂದು, ಕಳೆದ ಬಾರಿಯ ಸರಣಿ ಆತ್ಮಹತ್ಯೆ ಪ್ರಕರಣ ಆದ ಸಮಯದಲ್ಲಿ ಜಂಟಿ ಸದನ ಸಮಿತಿ ಆದಾಗ ಶ್ರೀ ಜಿ.ಬಿ.ಶಿವಕುಮಾರ್‌ರವರ ನೇತೃತ್ವದಲ್ಲಿ ಸಮಿತಿ ಮಾಡಲಾಗಿತ್ತು ಆ ಸಮಿತಿಯ ಸದಸ್ಯರಾಗಿದ್ದಿರಿ. ನಾನೂ ಕೂಡ ಸದಸ್ಯನಾಗಿದ್ದೆ. ಒಂದು ವಾರ ಕಾಲ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಮಗ್ರವಾದ ರೀತಿಯಲ್ಲಿ ಅಧ್ಯಯನ ಮಾಡಿ ಸಮಗ್ರವಾದ ವರದಿ ಕೊಟ್ಟಿದ್ದೇವೆ. ಇಲ್ಲಿ ಎಲ್ಲರಿಗೂ ರೈತರ ಬಗ್ಗೆ ಕಾಳಜಿ ಇದೆ. ದಯಮಾಡಿ ಆ ವರದಿ ಏನಿದೆ ಅದನ್ನು ಇಲ್ಲಿ ಟೇಬಲ್ ಮಾಡಿ. ವಿಶೇಷವಾಗಿ ರೈತರಿಗೆ ಆಗಬೇಕಾದ ಯಾವ ಯಾವ ಕೆಲಸಗಳು ಇವೆ. ಏನೇನು ಆಗಬೇಕೆಂದು ಕೊಟ್ಟಿದೆ, ಅದು ಎಷ್ಟು ಎಕ್ಸಿಕ್ಯೂಟ್ ಆಗಿದೆ, ಮುಂದೆ ಎಷ್ಟು ಎಕ್ಸಿಕ್ಯೂಟ್ ಆಗಬೇಕಾಗಿದೆ, ಎನ್ನುವ ಎಲ್ಲಾ ವಿಚಾರಗಳು ಅದರಲ್ಲಿ ಇವೆ. ಹಾಗಾಗಿ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಎಲ್ಲರಿಗೂ ಸಂತೋಷ. ಆದರೆ ಇಲ್ಲಿ ಕೇವಲ ಜಂಟಿ ಸದನ ಸಮಿತಿ ಆಗಬೇಕೆಂದು ಅವರು ಕೇಳುವುದರಲ್ಲಿ ಮಾನ್ಯ ಕುಮಾರಸ್ವಾಮಿಯವರು ಒಂದು ರೆಫರೆನ್ಸ್ ಹೇಳಿದರು. ಏಕೆ ಆಗಬೇಕೆಂದರೆ, ರೈತರಿಗೆ ಈಗಿರುವ ರೀತಿಯಲ್ಲಿ ಫರ್ಟಿಲೈಸರ್ ಸಮಪರ್ಕವಾಗಿ ವಿತರಣೆ ಆಗಿದೆಯೇ ಇಲ್ಲವೆಂದು ನೋಡುವುದಕ್ಕೆ ಬೇಕು ಎನ್ನುವಂಥದ್ದು Point of reference ಅಲ್ಲಿ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಜಂಟಿ ಸದನ ಸಮಿತಿ ಬೇಕಾಗಿರುವುದು ರೈತರಿಗೆ ಸಮಸ್ಯೆಗಳಿಗೆ ಆಗಬೇಕಾಗಿರುವ ಪರಿಹಾರವನ್ನು ಸದನ ಹುಡುಕಬೇಕೆಂದು. ಹೌದು, ಎರಡು ಬಾರಿ ಹುಡುಕಿಟ್ಟಿದ್ದೇವೆ. ಎರಡು ಬಾರಿ ಪರಿಹಾರ ಹುಡುಕಿಟ್ಟು, ನಾವು ಏನು ಎಕ್ಸಿಕ್ಯೂಟ್ ಮಾಡಿದ್ದೇವೆಂದು ನಾವು ಆತ್ಮಾವಲೋಕನ ಮಾಡಬೇಕಾಗಿದೆ. ತಕ್ಷಣದಲ್ಲಿ

VOL.9 F.44

ಪರಿಹಾರವಾಗುತ್ತದೆ. ಅದನ್ನು ಹೇಳುವಂತಹ ಕೆಲಸ ಮಾಡಬೇಕೆಂಬ ವಿಚಾರವನ್ನು ಹೇಳುತ್ತಾ. ವಿಶೇಷವಾಗಿ ಒಂದು ಮಾತನ್ನು ಹೇಳಿದಿರಿ, ಯಾರ್ಯಾರೋ ಆತ್ಮಹತ್ಯೆ ಮಾಡಿಕೊಂಡಂತಹ ಪ್ರಕರಣಗಳು ಬಂದಾಗ ಇನ್ನು ಮುಂದೆ ಆ ರೀತಿ ಎಲ್ಲಾದರೂ ಆದರೆ, ಆ ವಿಶೇಷವಾದ ಪ್ರಕರಣಗಳಲ್ಲಿ ಯಾವ ಯಾವ ಕಾನೂನಿನಡಿಯಲ್ಲಿ ಇದನ್ನು ಕೊಡಬೇಕೆಂದು ಕೂಡ ಆ ಸಮಿತಿಯ ವರದಿಯಲ್ಲಿದೆ. ದಯಮಾಡಿ ವರದಿಯನ್ನು ಟೇಬಲ್ ಮಾಡಿದರೆ, ಅದಕ್ಕೆ ಇಲ್ಲಿಯೇ ಪರಿಹಾರ ಸಿಗುತ್ತದೆ ಎಂದು ನಾನು ತಮಗೆ ಮನವಿ ಮಾಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) : ಮಾನ್ಯ ಸಭಾಧ್ಯಕ್ಷರೆ, ಬಹುಶ: ನಿನ್ನೆಯಿಂದ ಸುಮಾರು 25 ರಿಂದ 30 ಜನ ಸದಸ್ಯರು ಈ ಭಾಗದಿಂದ ಆಯಾ ಭಾಗದ ರೈತರ ಸಮಸ್ಯೆ ಏನಿದೆ, ಬೀಜ ಇರಬಹುದು, ಗೊಬ್ಬರ ಇರಬಹುದು, ರೈತರ ಆತ್ಮಹತ್ಯೆ ಪ್ರಕರಣ ಇರಬಹುದು, ಗೋಲಿಬಾರ್ ಪ್ರಕರಣ ಇರಬಹುದು. ಅದನ್ನು ವಿಧವಿಧವಾಗಿ ಸರ್ಕಾರಕ್ಕೆ ಮನದಟ್ಟು ಮಾಡುವಂತಹ ಕೆಲಸವನ್ನು ಮಾಡಿದಾಗ್ಯೂ ಕೂಡ ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಂತಹ ಸಂದರ್ಭದಲ್ಲಿ ಆ ಉತ್ತರದಿಂದ ಪತ್ರಿಕಾ ಮಾಧ್ಯಮದಲ್ಲಿ ಬಂದಿರತಕ್ಕಂತಹ ವರದಿಯನ್ನು ತಾವು ಒಂದು ಸಾರಿ ನೋಡಿದ್ದರೆ, ರೈತರಿಗೆ ಯಾವುದಾದರೂ ರೀತಿಯಾದ ವಿಶ್ವಾಸ ಮೂಡಿಸತಕ್ಕಂತಹ ಸಂದೇಶ ಹೋಗಿದೆಯೇ ಎಂದರೆ ಅದು ಆಗಿಲ್ಲ. ಗೊಬ್ಬರ ಸಿಗರಕ್ಕಂತಹ ವಿಚಾರ ಇದೆಯೇ ಎಂದರೆ ಅದೂ ಸಿಗುತ್ತಿಲ್ಲ. ಬೀಜ ಸಿಗುತ್ತದಾ? ಅದೂ ಇಲ್ಲ. ಆ ಕೊರತೆಯಿಂದಾಗಿ ಆತ್ಮಹತ್ಯೆ ಪ್ರಕರಣಗಳು ಇವತ್ತು ನಿರಂತರವಾಗಿ ನಡೆಯುತ್ತಲ್ಲೇ ಇವೆ. ಯಾವುದೇ ಸಂದೇಶ ಈ ಮನೆಯಿಂದ ಹೋಗದೇ ಇದ್ದಾಗ ನಾವು ಚರ್ಚೆ ಮಾಡಿ ಏನು . ಪ್ರಯೋಜನ? ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಅನೇಕ ಆಕ್ಷೇಪಗಳನ್ನು ಎತ್ತಿ. ಸರ್ಕಾರದ ಲೋಪದೋಷಗಳು ಎಲ್ಲಿವೆ, ಇಲ್ಲಿ ಕರ್ತವ್ಯದಿಂದ ವಂಚಿತರಾಗಿದ್ದಾರೆ,

ಇದು ಏಕೆ ಇನ್ನತಕ್ಕಂತಹ ಮಾತನ್ನು ಹೇಳಿದಾಗ ಕೂಡ ಹಾರಿಕೆ ಉತ್ತರವನ್ನು ಕೊಟ್ಟಂತಹ ಸಂದರ್ಭದಲ್ಲಿ, ನಮ್ಮ ಯಾವುದೇ ಡಿಮಾಂಡನ್ನು ಒಪ್ಪುವುದಕ್ಕೆ ತಯಾರಿಲ್ಲ ಎನ್ನುವುದಾದರೆ, ಇದು ಏಕೆ ಎನ್ನತಕ್ಕಂತಹ ಮಾತು. ಕೃಷಿ ಎನ್ನತಕ್ಕಂಥದ್ದು, ಗೊಬ್ಬರ ಅಥವಾ ಬೀಜ ಎನ್ನತಕ್ಕಂಥದ್ದು ಇದು ಕೇವಲ ಈ ಸಂದರ್ಭಕ್ಕೆ ಬಂದಿರತಕ್ಕಂಥದ್ದು ಅಲ್ಲ. ಇನ್ನು ಮುಂದೆ ಇದು ನಿರಂತರವಾಗಿ ಇರತಕ್ಕಂತಹ ಒಂದು ಸಮಸ್ಯೆ ಆಗುತ್ತದೆ. ಬಹುಶ: ಈ ಸಮಸ್ಯೆ ಹಿಂದಿನ ವರ್ಷಗಳಲ್ಲಿ ಇರಲಿಲ್ಲ. ಹಿಂದಿನ ದಿನಗಳಲ್ಲಿ ಇರಲಿಲ್ಲ. ಇನ್ನು ಮುಂದೆ ಅದು ನಿರಂರರವಾಗಿ ಬರುತ್ತದೆ. ಏಕೆಂದರೆ ತಮಗೆ ಗೊತ್ತಿರತಕ್ಕಂಥದ್ದು ಪೆಟ್ರೋಲಿಯಂ ಪ್ರಾಡಕ್ಟ್ ದರಗಳು ಜಾಸ್ತಿಯಾಗಿದ್ದಾಗ ನಮ್ಮ ಕಚ್ಚಾಮಾಲುಗಳ ಬೆಲೆ ಜಾಸ್ತಿಯಾದ ಮೇಲೆ ಮುಂದೆ ಬರತಕ್ಕಂತಹ ಸಮಸ್ಯೆಗಳನ್ನು ನಿರಂತರವಾಗಿ ಎದುರಿಸಬೇಕಾದಾಗ, ಜಂಟಿ ಸದನ ಸಮಿತಿ ಆದಾಗ ಆ ಎಲ್ಲಾ ವಿಚಾರಗಳನ್ನು ಕೂಡ ಓವರ್‌ವ್ಯೂ ಮಾಡಿ ಸರ್ಕಾರಕ್ಕೆ ಸಲಹೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅಧ್ಯಕ್ಷರೆ, ಹಿಂದೆಮಾನ್ಯ ಶಿವಕುಮಾರ್ ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಆಯಿತು. ಗುಲ್ಬರ್ಗದಲ್ಲಿ ಪೆಸ್ಟಿಸೈಡ್ಸ್ ಕುಡಿದು ಜನ ಸತ್ತಿದ್ದಾರೆ ಎಂದು ಹೇಳಿದ ಮೇಲೆ ಅಂದಿನ ಸರ್ಕಾರ ಸದನ ಸಮಿತಿ ಮಾಡಿತ್ತು. ಅದಾದ ಮೇಲೆ ಶಿರಾದಲ್ಲಿ ಫೈರಿಂಗ್ ಆಯಿತು. ಫೈರಿಂಗ್ ಆಗಿ ನಾಲ್ಕಾರು ಜನ ಸತ್ತ ಮೇಲೆ ಅಲ್ಲಿ ಒಂದು ಸಮಿತಿ ಆಯಿತು. ಆ ಸಮಿತಿಯ ವರದಿಯ ಆಧಾರ ಮೇಲೆ ಸರ್ಕಾರದ ಅನೇಕ ಆದೇಶಗಳು ಹೊರಬಿದ್ದವು. ಸರ್ಕಾರಗಳ ಆದೇಶ ಹೊರ ಬಿದ್ದ ಮೇಲೆ ಸಾಕಷ್ಟು ರೀತಿಯಲ್ಲಿ ರೈತರಿಗೆ ಸಹಾಯವಾಗುವಂತಹ ಕೆಲಸಗಳಾದವು. ಇವತ್ತು ಏನಾಗಿದೆ ಅಧ್ಯಕ್ಷರೆ, ಈಗಾಗಲೇ ಆತ್ಮಹತ್ಯೆ ಮಾಡಿಕೊಂಡಂತಹ ರೈತರಿಗೆ ಒಂದು ಲಕ್ಷ ರೂಪಾಯಿ ಕೊಡಬೇಕೆನ್ನುವುದರ ಜೊತೆಗೆ ಮೆಜಿಸ್ಟೀರಿಯಲ್ ಎನ್‌ಕ್ವೈರಿ ಮಾಡಬೇಕು. ಎನ್ನತಕ್ಕಂಥದ್ದು ಅದು ಮ್ಯಾಂಡೇಟರಿ ಆಗಿರತಕ್ಕಂಥದ್ದು. ಅಧ್ಯಕ್ಷರೆ ನಾನು ದು:ಖದಿಂದ ಹೇಳಬೇಕಾಗುತ್ತದೆ. 100 ಕೇಸ್ ರಿಪೋರ್ಟ್ ಆದರೆ,

ಕಾಂಪೆನ್‌ಸೇಷನ್ ಸಿಕ್ಕಿರುವುದು ಕೇವಲ 10 ರಿಂದ 15 ಜನರಿಗೆ ಮಾತ್ರ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈ ರಾಜ್ಯದಲ್ಲಿ 2003 ರ ನಂತರ ಕೇವಲ 800 ಜನ ಸತ್ತಿರತಕ್ಕಂಥದ್ದು, ಬಹಳ ಕಡಿಮೆ ಜನ ಸತ್ತಿದ್ದಾರೆ ಎಂದು ಹೇಳಿದರು. ದಯಮಾಡಿ ನಮ್ಮ ಕಾನೂನಿನಲ್ಲಿ ಏನು ಲೋಪದೋಷವಿದೆ ಎಂದರೆ, ನಮ್ಮಲ್ಲಿ ಸತ್ತಿರತಕ್ಕಂತಹವರ ಸಂಖ್ಯೆ 11,000 ಇದ್ದರೂ, 800 ಜನರಿಗೆ ಮಾತ್ರ ಇವತ್ತು ಕಾಂಪೆನ್‌ಸೇಷನ್ ಸಿಕ್ಕಿರತಕ್ಕಂಥದ್ದು. ಯಾವ ರೀತಿಯಾಗಿ ಸರ್ಕಾರಿ ಆದೇಶ ಇದೆ, ನಮ್ಮ ಅಧಿಕಾರಿಗಳು ಯಾವ ರೀತಿಯಾಗಿ ಇಂಟರ್‌ಪ್ರೀಟ್ ಮಾಡುತ್ತಿದ್ದಾರೆಂದರೆ, ಸತ್ತಂತಹ ರೈತರಿಗೆ ಸರಿಯಾದ ಸಮಯದಲ್ಲಿ ಪರಿಹಾರ ಸಿಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ಕಾರಣಕ್ಕಾಗಿ ಇವತ್ತು ಜಂಟಿ ಸದನ ಸಮಿತಿ ಮಾಡಿದಾಗ ಮಾತ್ರ ಅದಕ್ಕೆ ಒಂದು ಅರ್ಥ ಬರುತ್ತದೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು [ಅಬಕಾರಿ ಸಚಿವರು] : ಆವತ್ತು ಕೃಷಿ ಸಚಿವರಾಗಿ ಕೆಲಸ ಮಾಡಿದವರು, ನುಸಿ ರೋಗ ಬಂದಿತ್ತು. ಇವರ ಮೇಲೆ ಆರೋಪ ಬಂದಿತು. (ಗೊಂದಲ) ಆವತ್ತು ನಾವು ಕೇಳಲಿಲ್ಲ. ಆವತ್ತು ಕೃಷಿ ಸಚಿವರಾಗಿ ಕೆಲಸ ಮಾಡಿದವರು, ಇವತ್ತು ಜಂಟಿ ಸದನ ಸಮಿತಿ ಕೇಳುತ್ತಿದ್ದೀರಲ್ಲ? ಆವತ್ತು ಇವರು ಏನಾದರೂ ಮಾತನಾಡಿದರಾ?

ಅಧ್ಯಕ್ಷರು : ಬೇಗ ಮುಗಿಸಿ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾವು ಭಿಕ್ಷೆ ಬೇಡುತ್ತಿಲ್ಲ. ಇದು ವಿರೋಧ ಪಕ್ಷದವರಿಗೆ ಇರುವ ಸಂವಿಧಾನಬದ್ಧ ಹಕ್ಕು. It is our right to demand. We have every right to demand. ರಾಜ್ಯದ ಹಿತದೃಷ್ಟಿಯಿಂದ, ಇದು ಒಪ್ಪಲೇ ಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರೆ, ದಯಮಾಡಿ ತಾವು ಇದಕ್ಕೆ ಮಧ್ಯೆ ಪ್ರವೇಶ ಮಾಡಿ ಮುಖ್ಯಮಂತ್ರಿಗಳಿಗೆ ತಿಳಿವಳಿಕೆ ಹೇಳಬೇಕು.

ಅಧ್ಯಕ್ಷರು : ಸರ್ಕಾರ ಏನು ಉತ್ತರ ಕೊಡುತ್ತದೆ ನೋಡೋಣ. ನಾಯ್ಡುರವರೇ ಮಾತನಾಡಿ.

(ಗೊಂದಲ)

(ಕಾಂಗ್ರೆಸ್ ಪಕ್ಷದ ಸದಸ್ಯರು ಬಾವಿಯಲ್ಲಿ ಧರಣಿ ಮುಂದುವರೆಸಿದ್ದರು)

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಈಗ ರೈತರ ಬಗ್ಗೆ ಕಾಳಜಿ ಇಟ್ಟು ಮಾತನಾಡುತ್ತಿದ್ದಾರೆ. ಅವರು ಕೃಷಿ ಸಚಿವರಾಗಿದ್ದಾಗ ನುಸಿ ಪೀಡೆ ಬಂದಿತ್ತು. ತೆಂಗಿನ ಮರ ಎಲ್ಲಾ ತೆಗೆದು ರೈತರ ಮನೆಗಳನ್ನೆಲ್ಲಾ ಹಾಳು ಮಾಡಿದಿರಲ್ಲ. ಆಗ ಅವರಿಗೆ ರೈತರ ಬಗ್ಗೆ ಕಾಳಜಿ ಇರಲಿಲ್ಲವಾ ? ಇಲ್ಲಿ ಮೊಸಳೆ ಕಣ್ಣೀರು ಸುರಿಸಿ ನಾಟಕವಾಡುವುದು ಬೇಡ.

ಶ್ರೀ ಎ.ರಾಮದಾಸ್ : ಒಳಗಡೆ ನಿಂತು ರೈತ ವಿರೋಧಿ ಎಂದು ಕೂಗುವ ಬದಲು, 2003ರಲ್ಲಿ ದಿನಕ್ಕೊಬ್ಬ ರೈತ ಆತ್ಮಹತ್ಯೆ ಮಾಡಿಕೊಂಡ. ಅದೇನೂ ಕೇಳುವುದಿಲ್ಲವಾ? ಒಂದು ವರ್ಷದಲ್ಲಿ 365 ದಿವಸಕ್ಕೆ 365 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಷ್ಟನ್ನು ಆತ್ಮಾವಲೋಕನ ಮಾಡಿಕೊಳ್ಳಿ.

ಶ್ರೀ ಎಂ. ಶ್ರೀನಿವಾಸ್: 2003 ರಿಂದ ಇವತ್ತಿನವರೆಗೆ 889 ಜನ ಸತ್ತರು. ಆಗ ಇವರು ಎಲ್ಲಿ ಹೋಗಿದ್ದರು? ನುಸಿ ಪೀಡೆ ಬಗ್ಗೆ ಮಾಡಿದ ಸಮಿತಿಗೆ ನಮ್ಮ ಶಿವಕುಮಾರ್‌ರವರು ಅಧ್ಯಕ್ಷರಾಗಿದ್ದರು.

(ಗೊಂದಲ)

ಅಧ್ಯಕ್ಷರು : ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ವಿನಂತಿ ಏನೆಂದರೆ

(ಸದನದ ಬಾವಿಯಲ್ಲಿ ನಿಂತು ಕಾಂಗ್ರೆಸ್ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು.)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ದಯವಿಟ್ಟು ಶಾಂತರಾಗಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಅತ್ಯಂತ ವಿನಯದಿಂದ ನಮ್ಮ ಪ್ರತಿಪಕ್ಷದ ನಾಯಕರು ಹಾಗೂ ಸದಸ್ಯರುಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ತಾವು ಯಾವುದೇ ಒಂದು ಪ್ರತಿಷ್ಠೆ ಮೇಲೆ ನಿಲ್ಲುವಂತಹ ಅಗತ್ಯವಿಲ್ಲ. ನಾನು ಸಹ ಇವತ್ತಲ್ಲ, ಅಧಿಕಾರದಲ್ಲಿರುವವರೆಗೂ, ಈ ರಾಜ್ಯದ ರೈತನ ಜ್ವಲಂತ ಸಮಸ್ಯೆಗಳ ಪ್ರಶ್ನೆಯನ್ನು ನೀವು ಇಲ್ಲಿ ಪ್ರಸ್ತಾಪಿಸಿದಾಗ, ನಾವು ಆಡಳಿತ ಪಕ್ಷ, ನೀವು ವಿರೋಧ ಪಕ್ಷ ಎನ್ನುವಂತಹ ಭಾವನೆ ಇಟ್ಟುಕೊಳ್ಳದೆ ನಿಮ್ಮ ಜೊತೆ ಸ್ಪಂದಿಸುವುದಕ್ಕೆ ನಾನು ಸಿದ್ಧನಿದ್ದೇನೆ. ನಾವು ಏನು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ, ಈ ನಾಡಿನ ಐದೂವರೆ ಕೋಟಿ ಜನರು ಎಲ್ಲವನ್ನೂ ಗಮನಿಸುತ್ತಿದ್ದಾರೆ. ನಾನು ನಿಮ್ಮನ್ನೇ ಒಂದು ಪ್ರಶ್ನೆ ಕೇಳುತ್ತೇನೆ. ಜೆಡಿ(ಎಸ್) ಮತ್ತು ಕಾಂಗ್ರೆಸ್ಸಿನ ಹಿರಿಯ ನಾಯಕರು ಸಾಕಷ್ಟು ಈ ರಾಜ್ಯದ ರೈತರ ಬಗ್ಗೆ ಕಳಕಳಿ ಇಟ್ಟಂತಹವರು. ನಾನು ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ ತಕ್ಷಣ ವರದಿಯನ್ನು ಕೊಡಬೇಕೆಂದು ಆದೇಶ ಮಾಡಿದ್ದೇನೆ. ತಮ್ಮ ಕಡೆಯ ಪ್ರಮುಖರಿಂದ ಮಾಜಿ ಪ್ರಧಾನಿ ದೇವೇಗೌಡರಿಂದ ಹಿಡಿದು ಅನೇಕ ಹಿರಿಯರಿಂದ ಈ ರೀತಿ ಒಬ್ಬ ಅಧಿಕಾರಿ ತನಿಖೆ ಮಾಡುವುದರಿಂದ ಸತ್ಯಾಂಶಗಳು ಹೊರಬರುವುದಿಲ್ಲ, ನ್ಯಾಯಾಂಗ ತನಿಖೆ ಆಗಬೇಕೆಂದು ಹೇಳಿದರು. ನಿಮ್ಮ ಸಲಹೆಯಂತೆ ನಾನು ಆವತ್ತೇ ತಕ್ಷಣ ನ್ಯಾಯಾಂಗ ತನಿಖೆಗೆ ಆದೇಶ ಮಾಡಿದ ಉದ್ದೇಶವೇನೆಂದರೆ, ಒಂದೊಂದು ದಿವಸವೂ ಸಹ ಮುಖ್ಯವಾದಂತಹದ್ದು, ಸತ್ಯ ಹೊರಬರಬೇಕು, ಗೋಲಿಬಾರ್‌ನಿಂದ, ರಸಗೊಬ್ಬರದ ಗೊಂದಲದಿಂದ ಯಾವಾಗ Early monsoon ಬಂದು ಸಂತೋಷದಿಂದ ಇರಬೇಕಾದ ರೈತ, ನಾವು ನೀವೆಲ್ಲರೂ ಸಂತೋಷದಿಂದ ಓಟು ತೆಗೆದುಕೊಂಡಂತಹವರು, ಆಡಳಿತ ಪಕ್ಷದಲ್ಲೇ ಇರಲಿ, ವಿರೋಧ ಪಕ್ಷದಲ್ಲೇ ಇರಲಿ,

ಸಂತೋಷಪಡಬೇಕಾದಂತಹ ಈ ಕಾಲದಲ್ಲಿ, ಈ ಘಟನೆಗಳು ನಡೆಯಿತಲ್ಲಾ ಎಂದು ನಾನು ನ್ಯಾಯಂಗ ತನಿಖೆಗೆ ಆದೇಶ ಮಾಡಿದೆ. ಬಹುಃಶಃ ಇದು ತಪ್ಪು ಎಂದರೆ ನಾನು ತಿದ್ದಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಸದನ ಪ್ರಾರಂಭವಾದ ನಂತರ, ನೀವು ಒತ್ತಾಯ ಮಾಡಿದ ಮೇಲೆ ನ್ಯಾಯಂಗ ತನಿಖೆ ಆಗಲೇಬೇಕೆಂದು ಅದೇ ಪಟ್ಟನ್ನು ನೀವು ಹಿಡಿದಾಗ ನಾನು ಸದನದಲ್ಲಿ ನಿಂತು, ಆಯಿತು, ನಿಮ್ಮ ಬೇಡಿಕೆ ಅಥವಾ ನಿಮ್ಮ ಒತ್ತಾಯ ಸರಿಯಿದೆ, ನಾನು ನ್ಯಾಯಂಗ ತನಿಖೆಗೆ ಆದೇಶ ಕೊಡುತ್ತಿದ್ದೇನೆಂದು ಹೇಳಬಹುದಿತ್ತು. ಒಂದು ಸಾರಿ ನ್ಯಾಯಂಗ ತನಿಖೆಗೆ ಒಳಪಡಿಸಿದ ನಂತರ terms of reference ಏನು ಇರಬೇಕೆಂಬುದರ ಬಗ್ಗೆ ಎಲ್ಲಾ ರೀತಿಯಲ್ಲೂ ಅವರಿಗೆ ಶಕ್ತಿ ತುಂಬುವಂತಹ ಕೆಲಸವನ್ನು ನಾನು ಮಾಡಿದ್ದೇನೆ. ಇಷ್ಟು ವರ್ಷ ಅನುಭವವಿರುವಂತಹ ನಮ್ಮ ಆಡಳಿತ ಪಕ್ಷದಲ್ಲಿದ್ದಂತಹ ಸದಸ್ಯರುಗಳು, ವಿರೋಧ ಪಕ್ಷದಲ್ಲಿರುವವರು ಆ terms of reference ನಲ್ಲಿ ಇನ್ನೂ ಅನೇಕ ವಿಷಯಗಳು ಸೇರಬೇಕೆಂದು ಹೇಳಿದರೆ, ಯಾರನ್ನೂ ನಾನು Spare ಮಾಡುವುದಕ್ಕೆ ರೆಡಿಯಿಲ್ಲ. ಆತ ಎಷ್ಟೇ ದೊಡ್ಡ ಅಧಿಕಾರಿ ಇರಲಿ, ಆ ತನಿಖೆಯ ಸಂದರ್ಭದಲ್ಲಿ ಪೊಲೀಸ್ ಇಲಾಖೆಯ Interference ಇರಬಾರದೆಂದು ಎಸ್.ಪಿ.ಯವರನ್ನು ಅಲ್ಲಿಂದ ಬದಲಾವಣೆ ಮಾಡಿದ್ದೇನೆ, ಅವರನ್ನು ರಜೆಯ ಮೇಲೆ ಕಳುಹಿಸಿದ್ದೇನೆ. ಹೀಗೆ ಅತ್ಯಂತ ಪ್ರಾಮಾಣಿಕವಾಗಿ ಸ್ಪಂದಿಸುವಂತಹ ಪ್ರಯತ್ನವನ್ನು ನಾನು ಮಾಡಿದ್ದೇನೆ.

ಎರಡನೆಯದಾಗಿ, ತಮಗೆ ಗೊತ್ತಿರುವಂತೆ ಕೆಲವು ವರ್ಷಗಳ ಹಿಂದೆ ತುಮಕೂರು ಜಿಲ್ಲೆಯ ಶಿರಾ ಮತ್ತು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಗರಗಳಲ್ಲಿ ರೈತರ ಮೇಲೆ ನಡೆದ ಗೋಲಿಬಾರ್ ವಿಚಾರಗಳ ಬಗ್ಗೆ ತನಿಖೆಯನ್ನು ನಡೆಸುವುದಕ್ಕೆ ಸದನ ಸಮಿತಿ ರಚಿಸಿದ್ದೆವು. ಆದರೆ, ಸದನ ಸಮಿತಿ ವರದಿ ಬರುವುದು ವಿಳಂಬವಾಯಿತು. ಈ ಹಿಂದೆ ನಡೆದ ಸಮಿತಿಯ ವಿಚಾರಗಳ ಆಧಾರದ ಮೇಲೆ ಕೈಗೊಂಡ ಕ್ರಮದ ಬಗ್ಗೆ ಈ

ಹಿಂದೆ ನಡೆದ ಘಟನೆಗಳ ಬಗ್ಗೆ ನಾವೂ-ನೀವೂ ಪರಿಶೀಲನೆ ಮಾಡಬೇಕಾಗಿದೆ

ಮೂರನೆಯದಾಗಿ, ಇವತ್ತು ಮಾಹಿತಿಗಳಿವೆ, ನಾನು ನಿಮಗೆ ಕೊಡುತ್ತೇನೆ. 2002 ರಿಂದ 2007ರ ವರೆಗೆ ಒಟ್ಟು 2,126 ಕೃಷಿ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ನಾನು ನಿಮಗೆ ಒಂದು ಮಾಹಿತಿಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. 97 ಗೋಲಿಬಾರ್ ಪ್ರಕರಣಗಳಲ್ಲಿ 1981 ರಿಂದ 2006ರವರೆಗೆ ಒಟ್ಟು 254 ಜನರು ಸತ್ತಿದ್ದಾರೆ. ಇತ್ತೀಚೆಗೆ 1997ರಲ್ಲಿ 18ಜನರು, 1998ರಲ್ಲಿ 13, 1999ರಲ್ಲಿ 8, 2001ರಲ್ಲಿ 8, 2007ರಲ್ಲಿ 6 ಮತ್ತು 2006ರಲ್ಲಿ ಇಬ್ಬರು ಹೀಗೆ ಒಟ್ಟು 1981 ರಿಂದ 2006ರವರೆಗೆ 254 ಜನರು ಗೋಲಿಬಾರ್‌ನಿಂದಾಗಿ ಸತ್ತಿದ್ದಾರೆ. ಆ ಸಂದರ್ಭದಲ್ಲಿ ನೀವೆಲ್ಲರೂ ಆಡಳಿತ ಪಕ್ಷದಲ್ಲಿದ್ದಿರಿ, ನಾವು ವಿರೋಧ ಪಕ್ಷದಲ್ಲಿದ್ದೆವು. ನಾವು ಹೋರಾಟ ಮಾಡಿದ್ದೇವೆ. ನಮ್ಮದೇ ಆದ ಡಿಮ್ಯಾಂಡ್ ಇಟ್ಟಿದ್ದೇವೆ. ಅದು ಆಗಲಿಲ್ಲವೆಂದರೆ ವಾಕ್‌ಔಟ್ ಮಾಡಿ ಹೊರಹೋಗಿದ್ದೇವೆ ಅಥವಾ ಧರಣಿ ಕುಳಿತು ಸದನದ ಕಾರ್ಯಕಲಾಪಗಳಿಗೆ ಅಡ್ಡಿಯಾಗಬಾರದೆಂದು ಮುಂದೆ ಹೋಗಿದ್ದೇವೆ. ನಿಮಗೆ ನಾವು ಸಹಕಾರ ಕೊಟ್ಟಿದ್ದೇವೆ. ಇಷ್ಟು ವರ್ಷಗಳ ಅನುಭವವಿರುವ ನಮ್ಮ ಶಾಸಕರುಗಳು ಇರುವಂತಹ ಈ ಕಾಲದಲ್ಲಿ ನನಗೆ ಅಷ್ಟೊಂದು ಪ್ರಜ್ಞೆ ಇಲ್ಲವೇ? ನಿಮ್ಮ ವಿಚಾರಗಳಿಗೆ ನಾನು ಗೌರವ ಕೊಡಬೇಕು. ನಾವು-ನೀವು ಒಟ್ಟಾಗಿ ರೈತರ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕು. ನಿನ್ನೆಯೇ ಅತ್ಯಂತ ವಿನಯದಿಂದ ಮನವಿಮಾಡಿದೆ. ಈ ಗೋಲಿಬಾರ್ ಪ್ರಕರಣಗಳು ಮತ್ತು ಈ ಆತ್ಮಹತ್ಯೆ ಪ್ರಕರಣಗಳು ನಿಲ್ಲುವುದಕ್ಕೆ ನಾವು-ನೀವೆಲ್ಲರೂ ಒಟ್ಟಿಗೆ ಚರ್ಚೆ ಮಾಡುವುದಕ್ಕೆ ನಾಳೆಯೇ ಸಭೆ ಕರೆಯುತ್ತೇನೆ. ನಾಳೆಯೇ ನಿಮ್ಮೆಲ್ಲರ ಸಭೆ ಕರೆದು ಚರ್ಚೆ ಮಾಡೋಣ. ನಮ್ಮ ಹಿರಿಯರಾದ ಕೆಲವು ಮುಖಂಡರುಗಳು, ಕುಮಾರಸ್ವಾಮಿಯವರು ಮಾತನಾಡಿದರು. ಇವತ್ತು

ಅಂಕಿ ಅಂಶಗಳಲ್ಲಿ ವ್ಯತ್ಯಾಸವಾಗಿದೆ ಎಂದು ಹೇಳಿದರು. ನೀವು ಸ್ಪೀಕರ್ ಕೊಠಡಿಯಲ್ಲಿ ಹೇಳುತ್ತೀರಾದರೆ, ನಾನು ಸ್ಪೀಕರ್ ಕೊಠಡಿಗೆ ಬರುತ್ತೇನೆ. ಅಥವಾ ನಾಳೆ ನಮ್ಮ ಛೇಂಬರ್‌ನಲ್ಲಿ ಬೇರೆ ಮೀಟಿಂಗ್ ಕರೆಯಬೇಕೆ? ಎಲ್ಲಾ ಅಂಕಿ ಅಂಶಗಳನ್ನು ನಾನು ಕೊಡುತ್ತೇನೆ. ನಾನು ಕೊಟ್ಟ ಅಂಕಿ ಅಂಶಗಳು, ಒಬ್ಬ ಜವಾಬ್ದಾರಿ ಮುಖ್ಯಮಂತ್ರಿ ಸ್ಥಾನದಲ್ಲಿ ನಿಂತು ಇಲಾಖಾಧಿಕಾರಿಗಳು ಕೊಟ್ಟಿರುವಂತಹ ವರದಿಯನ್ನು ನಾನು ನಿಮಗೆ ಕೊಟ್ಟಿದ್ದೇನೆ. ಏನಾದರೂ ಸಣ್ಣಪುಟ್ಟ ವ್ಯತ್ಯಾಸಗಳಿದ್ದರೆ ಸರಿಪಡಿಸೋಣ. ಮತ್ತೊಂದು ನಿಮ್ಮಲ್ಲಿ ನಾನು ವಿನಂತಿ ಮಾಡಿದ್ದೇನೆ. ಎಲ್ಲರೂ ಒಟ್ಟಾಗಿ ಹೋಗೋಣ. ಸರ್ವಪಕ್ಷಗಳ ನಿಯೋಗ ತೆಗೆದುಕೊಂಡು ಹೋಗೋಣ, ಮಾನ್ಯ ಪ್ರಧಾನಮಂತ್ರಿಯವರ ಮನವೊಲಿಸೋಣ. "ಯಡಿಯೂರಪ್ಪನವರೆ, ಮುಂದೆ ವ್ಯವಸ್ಥೆ ಏನು?" ಎಂದು ತಾವು ಕೇಳಿದಿರಿ.? ನನ್ನ ಹತ್ತಿರ ಏನೂ ಇಲ್ಲ. ಮಂತ್ರ ದಂಡ ಇಲ್ಲವೆಂದು ಹೇಳಿದೆ. ನಾನು ಬೇಜವಾಬ್ದಾರಿಯಿಂದ ಈ ಮಾತನ್ನು ಹೇಳುತ್ತಿಲ್ಲ. ಈ ವರ್ಷ ಭಗವಂತನ ದಯೆಯಿಂದ ಮಳೆ ಬೀಳುತ್ತಿದೆ. ರೈತನ ಮಕ್ಕಳ ಪ್ರತಿನಿಧಿಯಾಗಿ ನಾವಿಲ್ಲಿ ಬಂದಿದ್ದೇವೆ. ಇವತ್ತೂ ನಾನು ಹೊಲಕ್ಕೆ ಹೋಗುತ್ತೇನೆ, ನೀವೂ ಹೊಲಕ್ಕೆ ಹೋಗುತ್ತೀರಿ, ನಾವು ಕೃಷಿ ಮಾಡುತ್ತಿದ್ದೇವೆ. ಅಲ್ಲಿ ರಸಗೊಬ್ಬರ ಇಲ್ಲದಿದ್ದರೆ, ರೈತರ ಭವಿಷ್ಯ ಹಾಳಾಗಿ ಹೋಗುತ್ತದೆ. ಅದಕ್ಕೆ ನಾವೆಲ್ಲರೂ ಜವಾಬ್ದಾರರಾಗಬೇಕಾಗುತ್ತದೆ. ಇದಕ್ಕೆ ಮಾರ್ಗವೇನು? ಮಾರ್ಗ ಏನೆಂದರೆ ಎಲ್ಲಿ ಮಳೆ ಬಿದ್ದಿಲ್ಲ. ಬೇರೆ ಬೇರೆ ರಾಜ್ಯಗಳಿಗೆ ವರ್ಗಾವಣೆ ಮಾಡಿಸುವಂಥಾದ್ದು, ಪ್ರಧಾನ ಮಂತ್ರಿಗಳಿಗೆ ಅತ್ಯಂತ ಪ್ರೀತಿ,ವಾತ್ಸಲ್ಯ,ವಿಶ್ವಾಸದಿಂದ ನಾವೆಲ್ಲರೂ ಒಟ್ಟಾಗಿ ಹೋಗಿ ಮನವರಿಕೆ ಮಾಡೋಣ. ಇದಕ್ಕೆ ಸಿದ್ಧವಿದ್ದರೆ, ನಾಳೆ ಬೆಳಗ್ಗೆ ನನ್ನ ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ನಾನೂ ಅಲ್ಲಿಗೆ ಬರುವುದಕ್ಕೆ ಸಿದ್ಧನಿದ್ದೇನೆ. ಅದನ್ನು ಬಿಟ್ಟು ನೀವು ಇದನ್ನೇ ಮುಂದುವರೆಸುವುದಾದರೆ, ನನ್ನಲ್ಲಿರುವ ಒಂದೇ ಒಂದು ಮಾರ್ಗವೇನೆಂದರೆ, ನಮ್ಮ ಸಚಿವ ಸಂಪುಟದ ಸದಸ್ಯರುಗಳೆಲ್ಲರೂ ಹೋಗಿ ನಿಮ್ಮ ಶಾಸಕರು, ವಿರೋಧ

VOL 2.F.45

ಪಕ್ಷದಲ್ಲಿರುವವರು ಈ ಕೆಲಸ ಮಾಡುತ್ತಿದ್ದಾರೆ ಸ್ವಾಮಿ, ನಾನು ಕೇಂದ್ರ ಸರ್ಕಾರ ಪ್ರಧಾನಮಂತ್ರಿಯವರಲ್ಲಿ ವಿಶ್ವಾಸ ಇಟ್ಟಿರುವಂತಹ ವ್ಯಕ್ತಿ. ಈಗಿರುವ ಪ್ರಧಾನಿ ಒಬ್ಬ ಆಡ್ಮಿನಿಸ್ಟೇಟರ್, ಬಹಳ ಎತ್ತರದ ವ್ಯಕ್ತಿಗಳಲ್ಲಿ ಅವರಿಗೂ ನಾನು ಗೌರವ ಕೋಟ್ಟಿಂಥವನು. ಎರಡು ಮೂರು ಸಲ ಭೇಟಿಯಾದಾಗಲೂ ಬೆಂಗಳೂರಿನ ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ಇರಬಹುದು, ಮೂಲಭೂತ ಸವಲತ್ತುಗಳನ್ನು ಒದಗಿಸಿಕೊಡುವುದರ ಬಗ್ಗೆ ಇರಬಹುದು. ಇವತ್ತು ಹಣಕಾಸು ಸಚಿವರು ಬಂದಾಗ ವಿನಂತಿಸಿಕೊಂಡಿದ್ದೇನೆ. ಸುಮಾರು 70,000 ಕೋಟಿ ರೂಪಾಯಿಗಳಷ್ಟು ರೈತರ ಸಾಲ ಮನ್ನಾ ಮಾಡಿದ್ದು ನಮ್ಮ ರಾಜ್ಯಕ್ಕೇನೂ ಅನುಕೂಲವಾಗುತ್ತಿಲ್ಲ. ನಾವೇನು 1,775 ಕೋಟಿ ರೂಪಾಯಿಗಳಿಗೆ ವನವಿ ಕೊಟ್ಟಿದ್ದೇವೆ. ಆ ಹಣವನ್ನು ಕೊಟ್ಟರೆ ರೈತಾಪಿ ವರ್ಗದ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳುತ್ತೇವೆ. ಆ ದುಡ್ಡು ಕೊಡಿ ಎಂದು ವಿನಂತಿಸಿದ್ದೇವೆ. ನಿಮ್ಮ ಡಿಮ್ಯಾಂಡ್ ಸರಿಯಿದೆ, ನಾವು ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಅದರ ಕ್ರೆಡಿಟನ್ನು ನಾನೊಬ್ಬನೇ ತೆಗೆದುಕೊಳ್ಳಬೇಕೆಂದೇನಿಲ್ಲ. ನಾವೆಲ್ಲರೂ ಒಟ್ಟಾಗಿ ಹೋಗೋಣ. ದಯಮಾಡಿ ಸಹಕರಿಸಿ. ಇವತ್ತು ಅಧಿವೇಶನ ಕರೆದದ್ದು, ನಿಮ್ಮೆಲ್ಲರ ಒಪ್ಪಿಗೆಯಿಂದ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣದ ಮೇಲೆ ವಂದನಾ ನಿರ್ಣಯ ಸಲ್ಲಿಸುವ ಮೂಲಕ ಚರ್ಚೆ ಮಾಡ ಬೇಕೆಂಬ ಉದ್ದೇಶದಿಂದ. ಇವತ್ತು ಸಾಯಂಕಾಲದೊಳಗೆ ಅಧಿವೇಶನ ಮುಗಿಯುತ್ತಿದೆ. ನಾನು ಯಾವುದೇ ಒಣ ಪ್ರತಿಷ್ಠೆ ಮೇಲೆ ಏನಾದರೂ ಉಪಯೋಗ ಆಗಿದೆ ಎಂದರೆ ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ನೀವು ಅದ್ಯಾವುದನ್ನೂ ಮಾಡದೇ ಇದ್ದರೆ, ನಾವು ಮೂವತ್ತು ಜನ ಸಚಿವರು ಸೇರಿ, ಸ್ವಾಮಿ, ನಿಮ್ಮ ಸದಸ್ಯರುಗಳು ಹೀಗೆ ನಡೆದುಕೊಳ್ಳುತ್ತಿದ್ದಾರೆ, ನಮಗೆ ರಸಗೊಬ್ಬರ ಕೊಡುವವರೆಗೂ ನಾವು ಮೇಲೇಳುವುದಿಲ್ಲವೆಂದು ಲೋಕಸಭೆ ಮುಂದೆ ಮಾನ್ಯ ಪ್ರಧಾನಮಂತ್ರಿಯವರ ಮುಂದೆ ಹೋಗಿ ನಾವು ಧರಣಿ ಕುಳಿತುಕೊಳ್ಳುತ್ತೇವೆ. ನನಗೆ ಬೇರೆ ಮಾರ್ಗ ಇಲ್ಲ. ನೀವು

ರಾಜಕಾರಣವನ್ನೇ ಮಾಡಬೇಕೆಂದಿದ್ದರೆ, ನಾವೂ ರಾಜಕಾರಣ ಮಾಡಬೇಕಾಗುತ್ತದೆ. ದೆಹಲಿಗೆ ಹೋಗಿ, ಪಾರ್ಲಿಮೆಂಟ್ ಮುಂದೆ ಹೋಗಿ ಧರಣಿ ಕುಳಿತುಕೊಳ್ಳುವ ಮೂಲಕ ನಮಗೆ ಅಗತ್ಯವಿರುವ ರಸಗೊಬ್ಬರವನ್ನು ಬಿಡುಗಡೆ ಮಾಡುವುದಕ್ಕೆ ಮುಂಚೆ ನಾನು ಆ ಜಾಗ ಬಿಟ್ಟು ಕದಲುವುದಿಲ್ಲ. ನನಗೆ ಅದನ್ನು ಬಿಟ್ಟು ಬೇರೆ ಮಾರ್ಗವಿಲ್ಲ. ಬಹುಶಃ ಇದನ್ನು ಅನಿವಾರ್ಯವಾಗಿ ನೀವು ಸಹಕರಿಸದೇ ಹೋದರೆ ನಾವಷ್ಟೂ ಜನ ಹೋಗಿ ಅಲ್ಲಿ ಕುಳಿತುಕೊಳ್ಳುತ್ತೇವೆ. ಅಲ್ಲಿ ಬಂದು ಪ್ರಧಾನಿಯವರಿಗೆ, ಕೇಂದ್ರ ಸರ್ಕಾರಕ್ಕೆ ಉತ್ತರ ನೀವೇ ಕೊಡಿ. ಇದನ್ನು ಬಿಟ್ಟು ಬೇರೆ ಮಾರ್ಗವಿಲ್ಲ. ನಿನ್ನೆ ನಾನು ಒಂದು ಮಾತನ್ನು ಹೇಳಿದೆ. ತಮಷೆಗೆ ನಾನು ಹೇಳಲಿಲ್ಲ. ಜವಾಬ್ದಾರಿಯಿಂದ ಹೇಳಿದೆ. ರಸಗೊಬ್ಬರವನ್ನು ಬೇರೆ ಕಾರ್ಖಾನೆಗಳಿಂದ ಖರೀದಿ ಮಾಡುವಂಥ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಎಲ್ಲಿ ರಸಗೊಬ್ಬರ ತಯಾರಾಗುತ್ತದೆ, ಎಷ್ಟೆಷ್ಟು ಯಾವ ಯಾವ ರಾಜ್ಯಕ್ಕೆ ಕಳುಹಿಸಬೇಕು ಎನ್ನುವ ತೀರ್ಮಾನವನ್ನು ಕೇಂದ್ರ ಸರ್ಕಾರ ಮಾಡಬೇಕು. ಮತ್ತೆ ಕೇಂದ್ರ ಸರ್ಕಾರ ಕೂಡ ಬೇರೆ ಕಾರಣಕ್ಕೋಸ್ಕರ, ನಾನು ರಾಜಕಾರಣ ಮಾಡುವುದಕ್ಕೆ ಇಷ್ಟಪಡುವುದಿಲ್ಲ, ಏಕೆಂದರೆ ಪ್ರಧಾನಿಯವರು ಹೇಳಿದಂಥದ್ದು, ರಾಮ್ ವಿಲಾಸ್ ಪಾಸ್ವಾನ್‌ರವರು ಹೇಳಿದಂಥದ್ದನ್ನು ಇವತ್ತು ಸಬ್ಸಿಡಿ ನಾಲ್ಕು ಪಟ್ಟು ಆಗಿದೆ. ಕಚ್ಚಾಮಾಲು 5 ಪಟ್ಟು ಜಾಸ್ತಿಯಾಗಿದೆ. ಒಂದುನೂರು ಡಾಲರ್ ಇದ್ದದ್ದು ಐದುನೂರು ಡಾಲರ್ ಆಗಿದೆ. ಈ ಸಂದರ್ಭದಲ್ಲಿ ಒಂದು ಟನ್ ರಸಗೊಬ್ಬರಕ್ಕೆ 40 ಸಾವಿರ ರೂಗಳಿಗೂ ಹೆಚ್ಚು ಸಬ್ಸಿಡಿ ಕೊಡಬೇಕಾದಂಥ ಪರಿಸ್ಥಿತಿ ಬಂದಿದೆ. ಇನ್ನೂ ಮುಂದೆ ಬರುವಂಥ ವರ್ಷಗಳಲ್ಲಿ ಇದು ಬಹಳ ಜ್ವಲಂತವಾದ ಸಮಸ್ಯೆಯಾಗುತ್ತದೆ. ಈ ಸಮಸ್ಯೆಗೆ ನಾವು ಮತ್ತು ನೀವು ಸರಿಯಾದ ರೀತಿಯಲ್ಲಿ ಪರಿಹಾರ ಹುಡುಕಬೇಕಾಗಿದೆ. ಎಲ್ಲಿಯೂ ಕೂಡ ರಾಜಕಾರಣ ಮಾಡುವ ಅಗತ್ಯವಿಲ್ಲ. ನಾನು ಮತ್ತೊಮ್ಮೆ ನಿಮಗೆ ವಿಶ್ವಾಸದಿಂದ ಹೇಳುತ್ತೇನೆ. ಈ ನಾಡಿನ ನೆಲ, ಜಲ, ಭಾಷೆ ಮತ್ತು ರೈತರ ಪ್ರಶ್ನೆ ಬಂದಾಗ ಪಕ್ಷ ಬಿಟ್ಟು ಪಕ್ಷದ ಹಿತವನ್ನು ಬಿಟ್ಟು ನಾನು ಎಲ್ಲ

ರೀತಿಯಲ್ಲಿಯೂ ಸಹಕಾರ ಕೊಡುವುದಕ್ಕೆ ಸಿದ್ಧನಿದ್ದೇನೆ. ಅಧಿಕಾರ ಇಲ್ಲಿ ಯಾರಿಗೂ ಶಾಶ್ವತವಲ್ಲ. ನಾನು ನನ್ನ ಕರ್ತವ್ಯವನ್ನು ಮಾಡುವುದಕ್ಕೆ ಸಿದ್ಧನಿದ್ದೇನೆ. ದಯಮಾಡಿ ಈ ಘಟನೆಗಳನ್ನು ಯಾವುದೇ ಪ್ರೆಸ್ಟೀಜ್ ಎಂದು ಎಳೆದುಕೊಂಡು ಹೋಗಬೇಡಿ. ನಿಮಗೇನಾದರೂ ನ್ಯಾಯಂಗ ತನಿಖೆಯಾದ ಮೇಲೆ ನಿಮಗೆ ಮತ್ತೆ ಏನಾದರೂ ಜಂಟಿ ಸದನ ಸಮಿತಿ ಅಗತ್ಯವಿದೆ ಎನಿಸಿದರೆ, ನಾನು ಜಂಟಿ ಸದನ ಸಮಿತಿ ಏಕೆ ರಚನೆ ಮಾಡಬೇಕೆಂದುಕೊಂಡಿದ್ದೇನೆಂದರೆ, ಈ ಘಟನೆಗಳಿಗಲ್ಲ ಮಾಡೋಣ, ಯಾವಾಗ ? ಕೆಲವು ಎಕ್ಸ್‌ಪರ್ಟ್ಸ್‌ಗಳನ್ನು ಇಟ್ಟುಕೊಂಡು, ರೈತರ ಸಮಸ್ಯೆ ಗೊತ್ತಿರುವಂಥ ರೈತ ಮುಖಂಡರನ್ನು ಇಟ್ಟುಕೊಂಡು, ರೈತರ ಸಮಸ್ಯೆ ಪರಿಹರಿಸುವಂಥ ತಜ್ಞರನ್ನು ಇಟ್ಟುಕೊಂಡು ಒಂದು ಸಮಿತಿ ಮಾಡೋಣ, ಕರ್ನಾಟಕದ, ದೇಶದ ಯಾವುದೇ ಭಾಗದಲ್ಲಿ ಎಂಥದ್ದು ನಡೆಯಬಾರದು, ಕರ್ನಾಟಕದಲ್ಲಿ ಆತ್ಮಹತ್ಯೆ ಪ್ರಕರಣಗಳು ನಿಲ್ಲಬೇಕು. ಅದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನೀವು ಸಲಹೆಗಳನ್ನು ಕೊಡುತ್ತೀರೋ ಆ ರೀತಿ ಸಮಿತಿಯನ್ನು ರಚನೆ ಮಾಡಿ ತಜ್ಞರನ್ನೊಳಗೊಂಡಂಥ ಸಮಿತಿ ಮಾಡಿ ಮುಂದಿನ ಬಜೆಟ್ ಒಳಗಾಗಿ ಒಂದು ತಾತ್ಕಾಲಿಕ ವರದಿಯನ್ನು ಕೊಡಿ ಮತ್ತು ಆಮೇಲೆ ಒಂದು ವರದಿಯನ್ನು ಕೊಡಿ ಎಂದು ನಾನು ಕೇಳುವುದಕ್ಕೆ ಸಿದ್ಧನಿದ್ದೇನೆ. ಬಹುಶಃ ನನಗನ್ನಿಸುತ್ತದೆ, ನೀವು ಸಹಕರಿಸದೆ ಇದ್ದರೆ ನೀವು ರಾಜಕಾರಣ ಮಾಡುವುದಕ್ಕೆ ಹೊರಟಿದ್ದೀರಿ ಹೊರತು ಈ ಜ್ವಲಂತ ಸಮಸ್ಯೆಯನ್ನು ಬಗೆಹರಿಸುವಂಥ ಉದ್ದೇಶದಿಂದ ನೀವು Wellನಲ್ಲಿ ಕುಳಿತಿದ್ದೀರೆಂದು ನನಗನ್ನಿಸುವುದಿಲ್ಲ. ಪ್ರಚಾರಕ್ಕಾಗಿ ಈ ರೀತಿ ಕೆಲಸ ಮಾಡುವಂಥದ್ದನ್ನು ನಾನು ನಿಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ. ನಾನೂ ಕೂಡ ಹೋರಾಟ ಮಾಡಿದ್ದೇನೆ. ನಾನು ಆಗ ಒಬ್ಬನೇ ಇದ್ದೆ. ನಾವಿಬ್ಬರೆ ಸದಸ್ಯರು ಇದ್ದೆವು. ಆಗ ರಾಜ್ಯದ ಗಮನ ಸೆಳೆಯುವುದಕ್ಕೆ ಇದರ ಅಗತ್ಯವಿತ್ತು. ಆದರೆ ಇವತ್ತು ಇಷ್ಟು ದೊಡ್ಡ ಪ್ರಮಾಣದಲ್ಲಿ ಜೆ.ಡಿ.(ಎಸ್), ಕಾಂಗ್ರೆಸ್ ಪ್ರತಿಪಕ್ಷದವರೆಲ್ಲರೂ ಸೇರಿ ಒಟ್ಟಾಗಿ ಒಂದಾಗಿರುವಂಥ ಈ ಕಾಲದಲ್ಲಿ ನೀವುಗಳು ಹೇಳುವಂಥ ಒಂದು ಮಾತು

ನನಗೆ ಹೇಳಬಹುದು. ಈ ರಾಜ್ಯದ ಜನರ ಹಿತದೃಷ್ಟಿಯಿಂದ ಕೊಡುವಂಥ ಸಲಹೆಗಳನ್ನು ಅತ್ಯಂತ ಪ್ರಮುಖವಾದಂಥದ್ದು ಎಂದು ಹೇಳಿ ನಾನು ಸ್ವೀಕಾರ ಮಾಡುವುದಕ್ಕೆ ಸಿದ್ಧನಿದ್ದೇನೆ. ಆದುದರಿಂದ ದಯಮಾಡಿ ನಾನು ಮತ್ತೊಮ್ಮೆ ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ನಾವು ರಾಜಕಾರಣ ಮಾಡುವುದಕ್ಕೆ ರೆಡಿ ಇಲ್ಲ. ನಿಮಗೆ ಗೊತ್ತಿದೆ ಒಂದು ಪ್ರಶ್ನೆ ನೀವು ಕೇಳಿದಿರಿ. ಯಡಿಯೂರಪ್ಪನವರೆ, ರಸಗೊಬ್ಬರ ಸ್ಟಾಕ್ ಇಲ್ಲ, ಆದರೂ ಸ್ಟಾಕ್ ಇದೆಯೆಂದು ಹೇಗೆ ಹೇಳಿದಿರಿ? ಹೌದು, ಪ್ರಧಾನಿಯವರ ಮೇಲೆ ವಿಶ್ವಾಸವಿಟ್ಟು, ಅವರು ಹೇಳಿದಂತೆ ಅವರ ಆದೇಶದಂತೆ ರಸಗೊಬ್ಬರವನ್ನು ಬಿಡುಗಡೆ ಮಾಡುತ್ತಾರೆ, ಯಾವುದೇ ಅಡ್ಡಿ ಆತಂಕಗಳು ಇಲ್ಲ. ನಮ್ಮ ರೈತರು ಗೊಂದಲಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ, ಮತ್ತೆ ಮುಂದೆ ರಸಗೊಬ್ಬರ ಸಿಗುವುದಿಲ್ಲವೆಂದು ಭಯಭೀತರಾಗುತ್ತಾರೆ ಎನ್ನುವ ಕಾರಣಕ್ಕೋಸ್ಕರ ರಸಗೊಬ್ಬರ ಬರುತ್ತಿದೆ, ಕೊಡುತ್ತೇವೆ, ವಿಚಲಿತರಾಗಬೇಡಿ ಎಂದು ಹೇಳಿ ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ. ನಾವು ರಾಜಕಾರಣ ಮಾಡಲಿಲ್ಲ. ಅದನ್ನೇ ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ದಯಮಾಡಿ ಸಹಕರಿಸಿ. ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲು ಭಾಷಣ ಮಾಡುವಾಗ ನೀವು ಅನೇಕ ವಿಷಯಗಳನ್ನು ಹೇಳಬಹುದು. ನಾನು ನಿಮಗೆ ಒಂದು ಮಾತನ್ನು ಹೇಳುವುದೇನೆಂದರೆ ನಮ್ಮದು ಪಾರದರ್ಶಕ ಸರ್ಕಾರ. ಯಾವ ಸಂದರ್ಭದಲ್ಲಿ ನೀವು ಏನು ಮಾಡಬೇಕು ಎಂದು ಹೇಳುತ್ತೀರೋ ಆ ಬಗ್ಗೆ ಪ್ರೆಸ್ಟೀಜ್ ತೆಗೆದುಕೊಳ್ಳುವುದಿಲ್ಲ. ಆದರೆ ಈಗ ಜಂಟಿ ಸದನ ಸಮಿತಿಯ ಅಗತ್ಯವಿಲ್ಲ. ಆದುದರಿಂದ ದಯಮಾಡಿ ಸಹಕರಿಸಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಪ್ರತಿಪಕ್ಷಗಳವರು ಮಾತನಾಡುವುದು ಪ್ರಚಾರಕ್ಕೋಸ್ಕರ, ದೂರದರ್ಶನಕ್ಕೋಸ್ಕರ ಮಾತನಾಡುತ್ತಾರೆ ಎನ್ನುವ ಭಾವನೆಯನ್ನು ಅವರು ವ್ಯಕ್ತಮಾಡಿದ್ದಾರೆ. ನಾವು ಕೇಳುತ್ತಿರುವುದು

ಇಷ್ಟೇ ಸ್ವಾಮಿ, ದಯಮಾಡಿ ಅವರು ಅಧಿಕಾರಕ್ಕೆ ಬಂದಮೇಲೆ 31.05.2008ರಲ್ಲಿ ಏನು ಸ್ಟಾಕ್ ಇತ್ತು? ಆ ಸ್ಟಾಕ್‌ನ್ನು ಯಾವ ಯಾವ ಜಿಲ್ಲೆಗಳಿಗೆ ಕೊಟ್ಟಿದ್ದಾರೆ? ಯಾವ ರೀತಿ ವಿತರಣೆಯಾಯಿತು? ಮತ್ತೆ ಅದರ ಜೊತೆಗೆ.....

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈಗಲೇ ನಿಮ್ಮ ಕೊಠಡಿಗೆ ಕರೆಯಿರಿ. ಪ್ರತಿ ಪಕ್ಷದ ಮುಖಂಡರನ್ನು ಕರೆಯಿರಿ. ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಸ್ಟಾಕ್ ಇದೆ, ನಾನು ಅಧಿಕಾರಕ್ಕೆ ಬಂದಮೇಲೆ ಹೇಗೆ ಹಂಚಿದ್ದೇನೆ, ಹಾಗೂ ಇದಕ್ಕೆ ಪೂರಕವಾಗಿ ಎಲ್ಲ ವಿಚಾರಗಳನ್ನು ಇವತ್ತೇ ನಿಮ್ಮ ಕೊಠಡಿಯಲ್ಲಿ ನಡೆಯುವ ಸಭೆಯಲ್ಲಿ ಇವತ್ತೇ ನಾನು ಕೊಡುವುದಕ್ಕೆ ಸಿದ್ಧನಿದ್ದೇನೆ. ಎಲ್ಲ ವಿವರಗಳನ್ನೂ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ಸದನದಲ್ಲಿ ಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು) : ನೀವು ಒಪ್ಪಲಿಲ್ಲವಲ್ಲ. ಸದನದಲ್ಲಿ ಕೊಟ್ಟಂಥ ಅಂಕಿ ಅಂಶಗಳನ್ನು ಮಾನ್ಯ ಅಧ್ಯಕ್ಷರೆ ಇವರು ಒಪ್ಪುತ್ತಿಲ್ಲ. ಅದಕ್ಕಾಗಿ ನಾನು ನಿಮ್ಮ ಸಮಕ್ಷಮದಲ್ಲಿ ಎಲ್ಲ ವಿವರಗಳನ್ನು ಕೊಡುತ್ತೇನೆ. ಅದೇನಾದರು ಸರಿ ಇಲ್ಲವೆಂದರೆ ಸರಿಪಡಿಸಿಕೊಳ್ಳುವುದಕ್ಕೂ ನಾನು ಸಿದ್ಧನಿದ್ದೇನೆ. ಏಕೆಂದರೆ ಸನ್ಯಾನ್ಯ ರೇವಣ್ಣನವರಿಗೆ ಬೇರೆ ಬೇರೆ ಮಾಹಿತಿಗಳು ಇರುತ್ತವೆ. ಏಕೆಂದರೆ ಅವರ ತಂದೆಯವರು ಮಾಜಿ ಪ್ರಧಾನಿಗಳಾಗಿದ್ದವರು. ಅವರ ಹತ್ತಿರವೂ ಮಾಹಿತಿಗಳಿರುತ್ತವೆ. ನಮ್ಮ ಮಾಹಿತಿ ಸರಿ ಇಲ್ಲದಿದ್ದರೆ ಸರಿಪಡಿಸಿಕೊಳ್ಳಲು ನಾನು ಸಿದ್ಧನಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಇಷ್ಟೇ ಕೇಳುತ್ತಿರುವುದು. ಏಕೆಂದರೆ ಇಬ್ಬರು ಜನರು ನನ್ನ ಜಿಲ್ಲೆಯಲ್ಲಿ ಅರಕಲಗೂಡು ತಾಲ್ಲೂಕಿನಲ್ಲಿ ಬನ್ನೂರಿನಲ್ಲಿ ಒಬ್ಬರು ಮತ್ತು ಚನ್ನರಾಯಪಟ್ಟಣದಲ್ಲಿ ಒಬ್ಬರು, ಅದೂ ನನ್ನ ವಿಧಾನಸಭೆ ಕ್ಷೇತ್ರದಲ್ಲಿ ಇಬ್ಬರು ಜನರು ಸತ್ತುಹೋಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು. ಅವರು ಚುನಾವಣೆ ಸಂದರ್ಭದಲ್ಲಿ ಅವರ ಪ್ರಣಾಳಿಕೆಯಲ್ಲಿ 3 ಪರ್ಸೆಂಟ್, 4 ಪರ್ಸೆಂಟ್ ಬಡ್ಡಿಯಲ್ಲಿ ಸಾಲ ಕೊಡುತ್ತೇವೆಂದು ಹೇಳಿದ್ದರು. ಆದರೆ 15 ಪರ್ಸೆಂಟ್ ಬಡ್ಡಿಯನ್ನು ವಸೂಲು ಮಾಡಿದ್ದಾರೆ. 15 ಪರ್ಸೆಂಟ್ ಬಡ್ಡಿ ವಸೂಲಿ ತಾಳಲಾರದೆ ನಿನ್ನೆ ಇಬ್ಬರು ಜನರು ಸತ್ತುಹೋಗಿದ್ದಾರೆ. ನಾನು ಬೇಕಾದರೆ ನಿಮಗೆ ಪತ್ರವನ್ನು ಕಳುಹಿಸಿಕೊಡುತ್ತೇನೆ. ಏಕೆಂದರೆ ಸಾಲವನ್ನು ಕಟ್ಟಲಾಗಿಲ್ಲ. ಏಕೆಂದರೆ 15 ಪರ್ಸೆಂಟ್ ಬಡ್ಡಿಯನ್ನು ಪ್ರಾಥಮಿಕ ಸಹಕಾರಿ ಕೃಷಿ ಗ್ರಾಮೀಣ ಬ್ಯಾಂಕ್‌ನಲ್ಲಿ ಹಾಕಿದ್ದಾರೆ. ಇದರ ಜೊತೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕಾದ ಇತರ ವಿಷಯಗಳೆಂದರೆ, ಧಾರವಾಡದಲ್ಲಿ ಕೆಲವರು ಬಸ್ ಸುಟ್ಟು ಹಾಕಿದರು, ಬೆಂಗಳೂರು ಆನೇಕಲ್‌ನಲ್ಲಿ ಕೂಡ ಬಸ್ ಸುಟ್ಟು ಹಾಕಿದರು. ಇದೇ ರೀತಿ ರಾಜ್ಯದ ವಿವಿಧ ಕಡೆ ಈ ರೀತಿ ಮಾಡಿದ್ದಾರೆ. ಅವರ ಮೇಲೆ ಏನು ಕೇಸ್ ಹಾಕಿದ್ದೀರಿ? ಯಾರ ಮೇಲೆ ಹಾಕಿದ್ದೀರಿ ? ಆಮೇಲೆ ಶಿಕಾರಿಪುರದಲ್ಲಿ ಜೆ.ಡಿ.(ಎಸ್) ಕಾರ್ಯಕರ್ತರಿಗೆ ಹೊಡೆದಿದ್ದಾರೆಂದು ನಾವು ಹೇಳಲಿಲ್ಲ. ಟಿ.ವಿ.ಯವರೇ ಹೇಳಿದ್ದಾರೆ. ನಾವೇನು ಪ್ರಚಾರ ಮಾಡಿಸಿಕೊಳ್ಳಬೇಕಾದ ಪ್ರಮೇಯವಿಲ್ಲ. ನಾನು ನಿನ್ನೆ ಮಾತನಾಡಿರುವುದು ಯಾವುದೂ ಬಂದಿಲ್ಲ. ಖರ್ಗೆ ಸಾಹೇಬರು ಮಾತನಾಡಿದ್ದೂ ಬಂದಿಲ್ಲ. ಕೇವಲ ಮುಖ್ಯಮಂತ್ರಿಗಳು ಮಾತನಾಡಿರುವುದೇ ಬಂದಿರುವುದು. ನಿಮ್ಮದನ್ನು ನೀವು ಪ್ರಚಾರ ಮಾಡಿಕೊಳ್ಳಿ. ನಮ್ಮದೇನೂ ಅಭ್ಯಂತರವಿಲ್ಲ. ಒಟ್ಟಿನಲ್ಲಿ ರೈತರಿಗೆ ಅನುಕೂಲವಾಗಲಿ ಎಂಬುದೇ ನಮ್ಮ ನಿಲುವು. ಈಗ ಸದನದಲ್ಲಿಯೇ ರಸಗೊಬ್ಬರ ಸ್ಟಾಕ್ ಎಷ್ಟಿತ್ತು, ಹೇಗೆ ಹಂಚಲಾಗಿದೆ ಎಂಬುವುದನ್ನು

ಬಹಿರಂಗಪಡಿಸಲಿ. ರಾಜ್ಯದ ಜನತೆಗೆ ಇದರ ಬಗ್ಗೆ Message ಹೋಗಲಿ. ಅದನ್ನು ಬಿಟ್ಟು ನಾವು ಮೂರು ಜನ ಕುಳಿತುಕೊಂಡು ಮೀಟಿಂಗ್ ಮಾಡುವುದು ಬೇಡ. ಈ ರಾಜ್ಯದ ಜನತೆಗೆ ವಿಧಾನಸಭೆ ಮುಖೇನ ಬಹಿರಂಗವಾಗಲಿ. ರಾಜ್ಯದ ಜನತೆಗೋಸ್ಕರ ಒಂದು ಸದನ ಸಮಿತಿಯನ್ನು ಮಾಡಿ. ನಿಮ್ಮದು ತಪ್ಪಿಲ್ಲವೆಂದ ಮೇಲೆ ಸದನ ಸಮಿತಿ ಮಾಡುವುದಕ್ಕೆ ಏಕೆ ಹೆದರುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ಕೇಳಿದೆ. ಇಲ್ಲಿ ಏನಾಗಿದೆಯೆಂದರೆ ನಾವು ವೆಲ್‌ನಲ್ಲಿ ಇರುವುದು. ಒಬ್ಬೊಬ್ಬರೆ ವೆಲ್‌ನಿಂದ ಹೋಗಿ ನಮ್ಮ ಸೀಟಿನಿಂದ ಮಾತನಾಡುವುದು, ಇದು ಹೀಗೆ ಹೋಗಿ ಡಿಬೇಟ್ ಕಂಟಿನ್ಯೂ ಆಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಕೆಲವು ಮಾತುಗಳನ್ನು ಹೇಳಿದರು. ಅವರು ಎಲ್ಲಿಯವರೆವಿಗೂ ಹೇಳಿದರೆಂದರೆ, ನೀವು ಒಂದು ವೇಳೆ ಧರಣಿಯನ್ನು ವಾಪಸ್ ತೆಗೆದುಕೊಳ್ಳದೇ ಹೋದರೆ; ನಮ್ಮ ಎಲ್ಲ ಮಂತ್ರಿಗಳು ಸೇರಿ, ಸಮ್ಮಿಶ್ರ ಸರ್ಕಾರದ ಎಲ್ಲಾ ಮಂತ್ರಿಗಳೂಸೇರಿ ನಾವು ಪ್ರತಿ ಜಿಲ್ಲೆಗೆ ಹೋಗಿ ನಿಮ್ಮ ಶಾಸಕರು ಶಾಸಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳುತ್ತೇವೆ.

ಅಧ್ಯಕ್ಷರು : ಆ ರೀತಿ ಹೇಳಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ನಿಮ್ಮ ಶಾಸಕರು ಇಲ್ಲಿ ಗಟ್ಟಿಯಾಗಿ ಕುಳಿತಿದ್ದಾರೆ. ಆದರೆ, ನಮಗೆ ಪಾರಿಹಾರ ಬೇಕು ಅಂತ ಅಲ್ಲಿ ಹೋಗಿ ಧರಣಿ ಕುಳಿತುಕೊಳ್ಳುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ಮಾನ್ಯ ಅಧ್ಯಕ್ಷರೆ, ಇವರು ಈ ರೀತಿ ಹೆದರಿಸತಕ್ಕಂಥ ಮಾತು ಒಂದು ಕಡೆ. ಇನ್ನೊಂದು ಕಡೆ ಇವರು ಏನು ಹೇಳಿದ್ದಾರೆಂದರೆ, ನಾನೇ ಪಾರ್ಲಿಮೆಂಟಿನ

ಮುಂದೆ ಕುಳಿತು ರಸಗೊಬ್ಬರ ಸಿಗುವವರೆಗೆ ಅಲ್ಲಿಯೇ ಕುಳಿತುಬಿಡುತ್ತೇನೆ, ನೋಡೋಣ ಏನಾಗುತ್ತೆದೆಂದು ಹೇಳುವ ಮೂಲಕ ಅದೊಂದು ಬೆದರಿಕೆ ಹಾಕುತ್ತಾರೆ. ಅಂದರೆ ಕೇಂದ್ರ ಸರ್ಕಾರದ ಪಾರ್ಲಿಮೆಂಟ್ ಸದಸ್ಯರು ಏನಿದ್ದಾರೆ ಅವರಿಗೆ ಹೆದರಿಸಿದ ಹಾಗೆ ನಮಗೆ ಹೆದರಿಸುತ್ತಾರೆ. ಮತ್ತೆ ಇನ್ನೊಂದು ಕಡೆ ಅವರು ಏನು ಹೇಳುತ್ತಾರೆಂದರೆ, ನೀವು ಮತ್ತು ನಾವು ಸೇರಿ ಕೇಂದ್ರ ಸರ್ಕಾರಕ್ಕೆ ರೆಪ್ರೆಸೆಂಟೇಶನ್ ಹೋಗೋಣ, ಅವರಿಗೆ ಕೇಳೋಣ ಎಂದು ಇನ್ನೊಂದು ಕಡೆ ಹೇಳುತ್ತಾರೆ. ಅಂದರೆ ಈ ರೀತಿಯಾಗಿ ಹೆದರಿಸಿ ನಾನು ಆಳುತ್ತೇನೆಂದರೆ ಇದು ಸಾಧ್ಯವಿಲ್ಲ. ಇದು ಪ್ರಜಾಪ್ರಭುತ್ವ, ಡಿಕ್ಟೇಟರ್‌ಶಿಪ್ ಅಲ್ಲ. ಇದು ಒಂದು ವಿಚಾರ. ಇನ್ನೊಂದು ಇಲ್ಲಿಯವರೆವಿಗೆ ಏನು ಮೆಸೇಜ್ ಕಳುಹಿಸುತ್ತಿದ್ದಾರೆ ಅದು ಒನ್ ಸೈಡೆಡ್ ಹೋಗುತ್ತಿದೆ. ನಾನು ಪದೇ ಪದೇ ಹೇಳುತ್ತಿದ್ದೇನೆ. Judicial probe pertaining to firing, Joint select committee pertaining to distribution of fertilizers, seeds and farmers suicide, ಆದಕಾರಣ ಇದಕ್ಕೂ ಮತ್ತು ಅದಕ್ಕೂ ವ್ಯತಾಸವಿದೆ. ಅದೇ ಬೇರೆ ವಿಚಾರ ಮತ್ತು ಇದೇ ಬೇರೆ ವಿಚಾರ. ಅದಕ್ಕಾಗಿ ದಯವಿಟು ಗೊಂದಲ ಮಾಡಿ ರಾಜ್ಯದ ಜನತೆಗೆ ಒನ್ ಸೈಡೆಡ್ ಮೆಸೇಜ್ ಹೋಗಬಾರದು. ಮಾನ್ಯ ಮುಖ್ಯಮಂತ್ರಿಗಳು ಎಲ್ಲಕ್ಕೂ ರೆಡಿ ಇದ್ದಾರೆ, ಈ ವಿರೋಧ ಪಕ್ಷದವರು ಬೇಕಂತಲೆ ಅವರ ಸಮಯವನ್ನು ಹಾಳು ಮಾಡುತ್ತಿದ್ದಾರೆ, ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ, ಅವರು ಬಹಳ ಒಳ್ಳೆಯವರು, ವಿರೋಧ ಪಕ್ಷದವರು ಮಾತ್ರ ಕೆಟ್ಟವರು ಎನ್ನತಕ್ಕಂಥ ಒಂದು ಚಿತ್ರವನ್ನು ಬಿಂಬಿಸತಕ್ಕಂಥದ್ದು ಆಗಬಾರರು. ನಾವು ಕೇಳತಕ್ಕಂಥದ್ದು ಸ್ಪಷ್ಟವಿದೆ. ಒಂದು ಜ್ಯುಡಿಶಿಯ ಪ್ರೋಬ್ ಅನ್ನತಕ್ಕಂಥದ್ದೇ ಬೇರೆ. ಅದು ಫೈರಿಂಗ್ ಆಗಿರುವುದಕ್ಕೆ. ನೇರವಾಗಿ ಮರ್ಡರ್ ಆಗಿದೆ. ಅದಕ್ಕಾಗಿ ಅವರ ಮನೆಯವರೂ ಕೂಡ ಅವರಿಗೆ ಹೇಳಿದ್ದಾರೆ. ಅವರು ಕೇಳಿಕೊಂಡಿದ್ದಾರೆ. ಅದರ ಬಗ್ಗೆ ಮಾತ್ರ ಸೀಮಿತವಾಗಿದೆ. ಇನ್ನು ಎರಡನೆಯದು, ಗೊಬ್ಬರದ ಕೊರತೆ ಹೇಗೆ

Vol. 2. P. 46

ಆಯಿತು? ಡಿಸ್ಟ್ರಿಬ್ಯೂಶನ್ ಏಕೆ ಆಗಲಿಲ್ಲ? ಸುಯಿಸೈಡ್‌ಗಳು ಏಕೆ ನಡೆದಿವೆ? ಏನು ಲೋನ್ ಬಗ್ಗೆಯೋ? ಕುಡಿತದಿಂದಲೋ? ಮನೆ ಜಗಳದಿಂದಲೋ? ಎನ್ನತಕ್ಕಂಥ ಪ್ರಶ್ನೆಗಳು ಇವೆ. ಅದಕ್ಕಾಗಿ ಜಂಟಿ ಸದನ ಸಮಿತಿ ಬೇಕು ಎಂದು ನಾವು ಕೇಳುತ್ತಿರುವುದು. ಮತ್ತೆ ನೀವು ಏನು ಅವಾಚ್ಯ ಮಾತುಗಳನ್ನು ರೈತರ ಬಗ್ಗೆ ಹೇಳಿದ್ದೀರಿ, ಅದಕ್ಕಾಗಿ ಕ್ಷಮೆ ಕೋರಿ ಎಂದು ಕೇಳಿದ್ದೇವೆ. ಎಲ್ಲರಿಗೂ Compensation ಕೊಡಿ ಎಂದು ಹೇಳಿದಾಗ, Assistant Commissionerರವರು ಒಂದು ಸುತ್ತೋಲೆ ಇದೆ ಎಂದು ನೀವು ಹೇಳಿದಿರಿ. ಜಂಟಿ ಸದನ ಸಮಿತಿಯನ್ನು ಮಾಡಿ ಎಂದು ಅದಕ್ಕಾಗಿಯೇನಾನು ಹೇಳಿದ್ದು. ಯಾರು ನಿಜವಾದ ರೈತರಿರುತ್ತಾರೆ Compensation ಅವರಿಗೆ ಕೊಡಿ. ಇಲ್ಲದೇ ಇರತಕ್ಕಂಥವರಿಗೆ ಬಿಡಿ ಎನ್ನತಕ್ಕಂಥ ಮಾತನ್ನು ಹೇಳಿದೆವು. ಆದರೆ, ನಮಗೆಹೆದರಿಸತಕ್ಕಂಥ ಮಾತುಗಳನ್ನು ಆಡಿದಿರಿ. ಬನ್ನಿ, ನೋಡೋಣ. ನೀವೆಲ್ಲ ಅಡ್ಡಿ ಮಾಡುತ್ತಿದ್ದೀರಿ. ನಾನು ಎಲ್ಲದ್ದಕ್ಕೂ Yield ಆಗುತ್ತಿದ್ದೇನೆ. ನನ್ನ ಒಪ್ಪಿಗೆ ಇದೆ. ನಾನು ಇಷ್ಟೊಂದು ಸಮಾಧಾನವಾಗಿ ಮಾಡಿದರೂ ಕೂಡ ನೀವು ಕೆಣಕುತಿದ್ದೀರಿ ಎನ್ನುವಂಥ ಮಾತುಗಳನ್ನು ಆಡಿದಿರಿ. ಕೆಣಕುವುದು ನಾವಲ್ಲ. ಕೆಣಕಿ, ಕೆಣಕಿ ಮಾತನಾಡುವುದು ಅವರೇ ಇಲ್ಲಿಯವರೆಗೂ ಮಾನ್ಯ ಮುಖ್ಯಮಂತ್ರಿಗಳು ಸಮಾಧಾನವಾಗಿಯೇ ಇದ್ದರು. ಈಗ ಏನಾದರು ಒಂದು ಹೇಳಿ ಕಾಲು ಕೆರೆದು ಜಗಳ ತೆಗೆಯುತ್ತಾರೆ. ಇದು ಬಿ.ಜೆ.ಪಿ.ಗೆ ಮೊದಲಿನಿಂದಲೂ ಬಂದಂಥ ಒಂದು ಅಭ್ಯಾಸವೆಂದು ಕಾಣುತ್ತದೆ. ಏನೂ ಸಿಗಲಿಲ್ಲವೆಂದರೇ ಕಾಲು ಕೆರೆದು ಜಗಳ ಮಾಡುವುದು. ನಾವು ಎಂದೂ ಕೂಡ ಪ್ರಚೋದನೆ ಮಾಡುವಂಥ ಮಾತನ್ನೇ ಆಡಲಿಲ್ಲ. ನೀವು ಮಾಡಲ್ಲಿಲ್ಲವೆಂದು ಹೇಳಿ ಎಲ್ಲ ಕಡೆಗೂ ಗೋಗಿ ಮಾನ್ಯ ಯಡಿಯೂರಪ್ಪನವರ ವಿರುದ್ಧ ಧರಣಿ ಮಾಡುತ್ತೇವೆ ಅಥವಾ ಸರ್ಕಾರದ ವಿರುದ್ಧ ಧರಣಿ ಮಾಡುತ್ತೇವೆ ಎಂದು ಹೇಳಲಿಲ್ಲ. ಅವರೇನು ಹೇಳಿದರು? ನೀವು ಬಿಡಲಿಲ್ಲ, ಇಲ್ಲಿಂದ ಏಳಲಿಲ್ಲ ಎಂದರೆ

ನೋಡಿ, ನಿಮ್ಮ ನಿಮ್ಮ ಮತ ಕ್ಷೇತ್ರಗಳಿಗೆ ಬಂದು ನಮ್ಮ ಮಂತ್ರಿಗಳನ್ನು ಛೂ ಬಿಟ್ಟು ನಿಮಗೆ ಛಜೀತಿ ಮಾಡುತ್ತೇನೆ ಎನ್ನತಕ್ಕಂಥ ರೀತಿಯಲ್ಲಿ ಹೇಳಿದರು. ಅಂದರೆ, ಈ ಧಾಟಿಯಲ್ಲಿ ಮಾತನಾಡತಕ್ಕಂಥವರು ಮಾನ್ಯ ಮುಖ್ಯಮಂತ್ರಿಗಳು. ಅಷ್ಟೇ ಅಲ್ಲ, ನಾನು ಅಲ್ಲಿ ಕೂರುತ್ತೇನೆ. ಏತಕ್ಕೆ ಕೂರುತ್ತೀರಿ ಸ್ವಾಮಿ? ನಿಮ್ಮ ತಪ್ಪಿಗಾಗಿ ಅಲ್ಲಿ ಹೋಗಿ ಕೂರುತ್ತೇನೆ ಎಂದು ಹೇಳುತ್ತೀರಲ್ಲ, ಅವರು supply ಮಾಡಲಿಲ್ಲವೆಂದರೆ defend ಮಾಡುವುದಕ್ಕೆ ನಾವೂ ನೀವೂ ಜೊತೆಯಲ್ಲೇ ರಾಜ್ಯದ ಹಿತದೃಷ್ಟಿಯಿಂದ ಕೇಳೋಣ. ಆದರೆ, 24ನೇ ಜೂನ್ ರಂದು 6 ಗಂಟೆ 53 ನಿಮಿಷಕ್ಕೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಸ್ಟಾಕ್ ಏನಿದೆ ಅದನ್ನು ನಿಮ್ಮ ಅಧಿಕಾರಿಗಳು ಬರೆದುಕೊಂಡರೆ ಒಳ್ಳೆಯದು ಅಥವಾ ನೀವು ನೋಡಿ. ಯೂರಿಯಾ ನಿಮ್ಮ requirement ಇರುವುದು 38,200 ಟನ್. Availability ಇರುವುದು 1,82,110 ಟನ್. ಇದು ಏಪ್ರಿಲ್ ತಿಂಗಳಿನದು. Sale ಆಗಿದ್ದು 27,320 ಟನ್. ನಿಮ್ಮ requirement ಇರತಕ್ಕಂಥದ್ದು 61,800 ಟನ್. DAP ಇರತಕ್ಕಂಥದ್ದು..... ನೀವು ಇನ್ನೊಮ್ಮೆ ಓದಿ ಎಂದರೆ ಓದುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ನಿಮಗೂ ಒಂದು ಕಾಪಿಯನ್ನು ಕೊಡುತ್ತೇನೆ. ನೀವು ನೋಡಿಕೊಂಡರೆ ಚನ್ನಾಗಿರುತ್ತದೆ. Authenticity, authenticity ಎನ್ನುತ್ತೀರಿ. ದಯವಿಟ್ಟು ಇದನ್ನು ಮಾನ್ಯ ಅಧ್ಯಕ್ಷರಿಗೆ ಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ನಿಮ್ಮ ಅಂಕಿ ಅಂಶಗಳನ್ನು ನಾನು dispute ಮಾಡುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ಒಂದು ನಿಮಿಷ. Supply ಆಗಿಲ್ಲ ಎಂದರೆ ಇಲ್ಲಿ ಎಲ್ಲೋ ವ್ಯಾಪಾರಸ್ಥರ ಮೇಲೆ

ನೀವು ಕಡಿವಾಣ ಹಾಕುತ್ತಿಲ್ಲ. ಕಳ್ಳ ಸಂತೆ ಕೋರರನ್ನು ನೀವು ಬಚಾವ್ ಮಾಡುತ್ತಿದ್ದೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ಹಿಡಿದುಕೊಡಿ. ಅಂಥವರನ್ನು ಜೈಲಿಗೆ.....

(ಗೊಂದಲ)

ಅಧ್ಯಕ್ಷರು : ಎಲ್ಲರೂ ಶಾಂತರಾಗಿ. ಯಾರೂ ಉದ್ವೇಗಕ್ಕೆ ಒಳಗಾಗಬೇಡಿ.

(ಗೊಂದಲ)

ಅಧ್ಯಕ್ಷರು : ಯಾರೂ ಉದ್ವೇಗಕ್ಕೆ ಒಳಗಾಗಬಾರರು. ಶಾಂತರೀತಿಯಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಬೇಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ರೈತರ ಸಮಸ್ಯೆಯನ್ನು ವಿರೋಧ ಪಕ್ಷದವರಿಗೆ ಬಗೆಹರಿಸಬೇಕೆಂದಿದ್ದರೆ ಪ್ರಾಮಾಣಿಕವಾಗಿ ಬರಲಿ ದೆಹಲಿಗೆ ಹೋಗೋಣ. ಅದನ್ನು ಬಿಟ್ಟು ಇಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಗೊಬ್ಬರದ ರಾಜಕಾರಣ ಎಷ್ಟು ದಿನ ಮಾಡುತ್ತಾರೆ. ರಾಜ್ಯದ ರೈತರಿಗೆ ಗೊತ್ತಿದೆ ನೀವು ಗೊಬ್ಬರದ ರಾಜಕಾರಣ ಮಾಡುವುದನ್ನು ಬಿಡಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಸುಮ್ಮನೆ ಆರೋಪ ಮಾಡುವುದಲ್ಲ. ಯಾರು ಯಾರು ಶಾಮೀಲಾಗಿದ್ದಾರೆಂಬುದನ್ನು ಹೇಳಿ

ಸಾರ್, ಯಾರು ಯಾರು ಶಾಮೀಲಾಗಿದ್ದಾರೆಂಬುದನ್ನು ಹೇಳಲಿ ನೋಡೋಣ.

(ಗೊಂದಲ)

ಅಧ್ಯಕ್ಷರು : ಈ ರೀತಿ ಗೊಂದಲ ಮಾಡಬಾರದು, ಇದರ ಬಗ್ಗೆ ಚರ್ಚೆ ಮಾಡಬೇಕು.

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಹದಿನೈದು ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನ 11.45 ನಿಮಿಷಕ್ಕೆ ಮುಕ್ತಾಯಗೊಂಡು ಪುನ: 15 ನಿಮಿಷದ ಬಳಿಕ ಸೇರುವಂತೆ ಮುಂದೂಡಲಾಯಿತು)

(ಸದನವು ಪುನ: ಮಧ್ಯಾಹ್ನ 1.10 ಗಂಟೆಗೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು : ಧರಣಿಯನ್ನು ಮುಗಿಸಿದಿರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ಇಲ್ಲ.

ಶ್ರೀ ಸಿ.ಟಿ.ರವಿ : ಸರ್ ಮತ್ತೆ ಮತ್ತೆ ಬಾವಿಗೆ ಬೀಳುವುದಕ್ಕೆ ಹೊರಟಿದ್ದೀರಿ. ಒಂದು ಸಾರಿಯಾದರೆ ಸರಿ. ಕಾಯಂ ಆಗಿ ಬಾವಿ ಒಳಗಡೆಯೆ ಇರಬೇಕೆಂದು ತೀರ್ಮಾನ ಮಾಡಿದ್ದೀರಾ ಹೇಗೆ ಸರ್? ನಿಮ್ಮ ಲಕ್ಷಣ ನೋಡಿದರೆ ಹಾಗೆ ಕಾಣುತ್ತಿದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ತಾವು ದೊಡ್ಡ ಮನಸ್ಸು ಮಾಡಿ ಜಂಟಿ ಸದನ ಸಮಿತಿಯನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಯಾವ ಉದ್ದೇಶ ಎಂದರೆ, ನಮಗೆ ಬೇರೆ ಯಾವ ರಾಜಕೀಯ ಮಾಡಬೇಕು ಎನ್ನುವ ಉದ್ದೇಶವಿಲ್ಲ. ರಾಜ್ಯದಲ್ಲಿ ಗೊಬ್ಬರ ಸ್ಟಾಕ್ ಇದೆ, ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ತೆಗೆದುಕೊಂಡ ಮೇಲೆ ಸ್ಟಾಕ್ ಇರುವುದರ ಬಗ್ಗೆ ನಿನ್ನೆ ಸವಿಸ್ತಾರವಾಗಿ ನಾನು ಹೇಳಿದ್ದೇನೆ. 2.53 ಲಕ್ಷ ಟನ್ 31ನೇ ತಾರೀಖಿಗೆ ಗೊಬ್ಬರ ಇತ್ತು. ಇವತ್ತು 23ನೇ ತಾರೀಖಿಗೆ ಸುಮಾರು ಯೂರಿಯ 2,41,000 ಟನ್ ಇದೆ. DAP 1,77,970 ಟನ್ ಇದೆ, MOP 45,000 ಟನ್ ಇದೆ, ಕಾಂಪ್ಲೆಕ್ಸ್ ಗೊಬ್ಬರ ಸುಮ್ಮಾರು 61,000 ಟನ್ ಇದೆ, ಇಷ್ಟೆಲ್ಲಾ ಗೊಬ್ಬರ ಇದ್ದರೂ ಕೂಡ ಕಾರಣ ಏನು? ಯಾವುದಕ್ಕೆ ಇದು ಸ್ಕೇರ್‌ಸಿಟಿಯಾಗಿದೆ? ಇದರಲ್ಲಿ ಕಾಳಸಂತೆಕೋರರು ಏನಾದರೂ ಮಾಡುತ್ತಿದ್ದಾರಾ? ಆ ಉದ್ದೇಶದಿಂದ ಜಂಟಿ ಸದನ ಸಮಿತಿ ಕೇಳುತ್ತಿದ್ದೇವೆ ಹೊರತು, ಬೇರೆ ಯಾವ ರಾಜಕೀಯ ಉದ್ದೇಶವಿಲ್ಲವೆಂದು ಹೇಳಿ ಮನವಿ ಮಾಡುತ್ತಿದ್ದೇವೆ. ಇದೂ ಅಲ್ಲದೆ ನಮ್ಮ ತಾಲ್ಲೂಕಿನಲ್ಲಿ ಎರಡು ಜನ ಇವತ್ತು ತೀರಿ ಹೋಗಿದ್ದಾರೆ. ಅರಕಲಗೂಡು ತಾಲ್ಲೂಕಿನ ಬನ್ನೂರು

ಗ್ರಾಮದಲ್ಲಿ ಮತ್ತು ಅದೇ ರೀತಿ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ತೀರಿ ಹೋಗಿದ್ದಾರೆ. ಸುಮಾರು ಇವತ್ತು VSS ದಿಂದ 14% ಸುಸ್ತಿ ಬಡ್ಡಿ ಈ ಸರ್ಕಾರ ಬಂದ ಮೇಲೆ ಹಾಕಿದ್ದಾರೆ. ಇವರು ರೈತರ ಪರವಾಗಿ ಇರುವವರು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಅದರೆ 14% ಸುಸ್ತಿ ಬಡ್ಡಿ ಹಾಕಿದರೆ ರೈತನ ಮನೆ ಉಳಿಯುತ್ತದೆಯೇ? ಮಾರ್ಚ್ 31ರೊಳಗೆ ಚುನಾವಣೆ ಇತ್ತು. ಚುನಾವಣೆಯ ಸಂದರ್ಭದಲ್ಲಿ ಯಾವುದು Decision ತೆಗೆದುಕೊಳ್ಳುವುದಕ್ಕೆ ಆಗಿರಲಿಲ್ಲ. ನಿಮ್ಮ ಸರ್ಕಾರ ಬಂದರೂ ಇವತ್ತಿನವರೆಗೆ Decision ತೆಗೆದುಕೊಳ್ಳುವುದಕ್ಕೆ ಅಗಲಿಲ್ಲ. 3–4% ಬಡ್ಡಿ ಕೊಡುತ್ತೀರೋ ಅದು ನನಗೆ ಗೊತ್ತಿಲ್ಲ. ಇದನ್ನು ಮಾಡುವುದಕ್ಕೆ ಆಗದೇ ಹೋದರೆ ರೈತರಿಗೆ ಇನ್ನು ಏನಾದರೂ ಆದರೆ ಇದಕ್ಕೆ ಸರ್ಕಾರ ಜವಾಬ್ದಾರಿ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ವಿರೋಧ ಪಕ್ಷದ ನಾಯಕರು ತಿಳಿಸಿದ್ದಾರೆ. ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ತಮ್ಮ ಗಮನಕ್ಕೆ ಸವಿಸ್ತಾರವಾಗಿ ತಿಳಿಸಿದ್ದಾರೆ. ತಾಪ್ರ ಜಂಟಿ ಸದನ ಸಮಿತಿ ಮಾಡಬೇಕು. ಸರ್ಕಾರ ಏಕೆ ಹಿಂಜರಿಯುತ್ತದೆಯೋ ಗೊತ್ತಿಲ್ಲ. ಇಷ್ಟನ್ನು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ಮಾನ್ಯ ಮುಖ್ಯಮಂತ್ರಿಗಳು ಇಲ್ಲವಲ್ಲಾ? ಅವರನ್ನು ಕರೆಯಬೇಕು. ಅವರೊಬ್ಬರಿಗೇ ಕೆಲಸ ಇದೆಯಾ? ಬೇರೆಯವರಿಗೆ ಕೆಲಸ ಇಲ್ಲವೆ?

ಶ್ರೀ ಸುರೇಶ್‌ಕುಮಾರ್ : ತಮಗೆ ಇಲ್ಲಿಯವರೆಗೆ ವಿವರಿಸಿದ್ದೇವೆ. ನಿದ್ದೆ ಮಾಡುವವರಿಗೆ ಎಬ್ಬಿಸಬಹುದು, ನಿದ್ದೆ ಮಾಡುವಂತೆ ಆಕ್ಟಿಂಗ್ ಮಾಡುವವರನ್ನು ಎಬ್ಬಿಸುವುದಕ್ಕಾಗುದುದಿಲ್ಲ. ನಾನು ಹೇಳುತ್ತೇನೆ ಕೇಳಿ.

ಪ್ರಾಯಶಃ ವಿರೋಧ ಪಕ್ಷದವರು ಕೇಳಿದ ಮೇಲೆ ಇಲ್ಲಿ Judicial enquiryಗೆ ಆರ್ಡರ್ ಮಾಡಿದ್ದರೆ ಸಮಾಧಾನವಾಗುತ್ತಿತ್ತು ಎಂದು ಕಾಣಿಸುತ್ತದೆ. ಮುಂಚೆಯೇ Judicial enquiry ಗೆ order ಮಾಡಿದ್ದು ಬಹಳ ಬೇಜಾರಾಗಿ ಹೋಗಿದೆ. ಈಗ Judicial enquiry ಗೆ order ಮಾಡಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಒಂದು ತಜ್ಞರನ್ನು ಒಳಗೊಂಡ ಸಮಿತಿಯನ್ನು ಮಾಡೋಣ. ಈಗಾಗಲೇ ಜಿ.ಬಿ.ಶಿವಕುಮಾರ್ ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವು, ಆ ಸಮಿತಿ ರಾಜ್ಯದಲ್ಲಿ ರೈತರ ಆತ್ಮಹತ್ಯೆಯ ಬಗ್ಗೆ ಸವಿಸ್ತಾರವಾದ ಒಂದು ವರದಿಯನ್ನು ಕೊಟ್ಟಿದೆ ಏಕೆ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾರೆ? ಆ ವರದಿಯನ್ನು ಅನುಷ್ಠಾನ ಮಾಡುವ ಒಂದು ಪರಿಸ್ಥಿತಿಯಲ್ಲಿ ನಾವು ಇಲ್ಲ. ದಯವಿಟ್ಟು ಈಗ ವಿರೋಧ ಪಕ್ಷದ ನಾಯಕರನ್ನು ಹಾಗೂ ಎಲ್ಲಾ ಸದಸ್ಯರನ್ನು ಕೇಳಿಕೊಳ್ಳುತ್ತೇನೆ. ನಾವೆಲ್ಲರೂ ಸೇರಿಕೊಂಡು ಈಗ ಆಗಿರುವ ಅನಾಹುತವನ್ನು ತಡೆಯೋಣ. ಅದರ ಕಡೆ ನಾವೆಲ್ಲರೂ ಗಮನವನ್ನು ಕೊಡೋಣ. ಈಗ ಏನು ನ್ಯಾಯಾಂಗ ತನಿಖೆಯಾಗುತ್ತಿದೆ, ಆ ವರದಿ ಬರಲಿ, ನಾಳೆಯೇ ಸರ್ವಪಕ್ಷದ ನಿಯೋಗವನ್ನು ದೆಹಲಿಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿದ್ದಾರೆ. ಆ ದೃಷ್ಟಿಯಿಂದ ಪರಿಹಾರದ ಕಡೆಗೆ ಹೆಜ್ಜೆ ಇಡೋಣವೆಂದು ನಾನು ಹೇಳುತ್ತೇನೆ. ಅದನ್ನು ಬಿಟ್ಟು ನಾವು ಹೇಳಿದಂತೆ ಕೇಳಿ, ನಾವು ಮಾಡಿದಂತೆ ನೀವು ಮಾಡಬೇಡಿ ಎಂದು ಹೇಳುವುದು ಒಳ್ಳೆಯ ಹೆಜ್ಜೆ ಅಲ್ಲವೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಹಿಂದಿನ ಸಮಿತಿ ಏನಾಯಿತು ಎಂದು ಎಲ್ಲರಿಗೂ ಗೊತ್ತಲ್ಲ? ವೀರೇಶ ಕಮಿಟಿ ವರದಿ ಏನಾಯಿತು ಎಂದು ಎಲ್ಲರಿಗೂ ಗೊತ್ತಲ್ಲ?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಇಲ್ಲಿಯೇ ಗೊಬ್ಬರ ಸ್ಟಾಕ್ ಇರುವಾಗ ದೆಹಲಿಗೆ ಯಾವ ಉದ್ದೇಶಕ್ಕೆ ಹೋಗಬೇಕು? ದುಡ್ಡು ಹೆಚ್ಚಾಗಿದೆಯಾ? ಗೊಬ್ಬರ ಎಲ್ಲಿದೆ ಅದಕ್ಕೆ ಜಂಟಿ ಸದನ ಸಮಿತಿ ಮಾಡಿ

ಎಂದರೆ ಏಕೆ ಹೆದರಿಕೊಳ್ಳಬೇಕಾಗಿದೆ? ಇವರು ಕಾಳಸಂತೆಕೋರರ ಜೊತೆಯಲ್ಲಿ ಏನಾದರೂ ಶ್ಯಾಮೀಲಾಗಿದ್ದಾರಾ? ಏನಾದರೂ ಗೊಬ್ಬರದ ಮಾಲೀಕರ ಜೊತೆ ಶ್ಯಾಮೀಲಾಗಿದ್ದಾರೋ ಹೇಳಿ. ದೆಹಲಿಗೆ ಏಕೆ ಹೋಗಬೇಕು? ಬೆಂಗಳೂರಿನಲ್ಲಿಯೇ ಮಾಡಿ ಸ್ವಾಮಿ ರೈತಾಪಿ ಜನರು ಇವತ್ತು ಸಾಯುತ್ತಿದ್ದಾರೆ. ಇನ್ನೊಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹಾವೇರಿಯಲ್ಲಿ ಮೊನ್ನೆ ಗೋಲಿಬಾರ್ ಆಯಿತು ಪುಟ್ಟಪ್ಪನವರು ಸಂಜಯಗಾಂಧಿ ಹಾಸ್ಪಟಲ್‌ನಲ್ಲಿ ಇದ್ದರು, ಅವರು ಇನ್ನೊಂದು 5–10ನಿಮಿಷದಲ್ಲಿ ಸಾಯುವ ಸನ್ನಿವೇಶ ಇದೆ ಎಂದು ನನಗೆ ಮಾಹಿತಿ ಬಂದಿದೆ. ಅದರ ಬಗ್ಗೆ ಸಭೆಯ ಗಮನಕ್ಕೆ ತರಬೇಕು. ಇದರ ಬಗ್ಗೆ ಸರ್ಕಾರದ ಗಮನಕ್ಕೆ ಏನಾದರೂ ಬಂದಿದೆಯಾ ದಯಮಾಡಿ ಸಭೆಗೆ ತಿಳಿಸಬೇಕೆಂದು ಮನವಿ ಮಾಡುತ್ತೇನೆ. ಸದನ ನಡೆಯುತಿದೆ ಗಲಾಟೆ ನಡೆಯುತ್ತಿದೆ ಎಂದು Ventilator ಮೇಲೆ ಇಟ್ಟಿದ್ದಾರೆಯೆ ಎನ್ನುವುದರ ಬಗ್ಗೆ ದಯಮಾಡಿ ತಿಳಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬರಲಿ ಮಾನ್ಯ ಸುರೇಶಕುಮಾರ್‌ರವರು ಹೇಳಿದರು. ಮಲಗಿದವರನ್ನು ಎಬ್ಬಿಸಬಹುದು, ಮಲಗಿದಂತೆ ನಟನೆ ಮಾಡಿದವರಿಗೆ ಎಬ್ಬಿಸುವುದು ಕಷ್ಟ ಎಂದು. ಆ ಕೆಲಸವನ್ನು ಅವರೇ ಮಾಡುತ್ತಿದ್ದಾರೆ. ಏಕೆಂದರೆ ಅವರಿಗೆ ಗೊತ್ತಿದೆ, ಶಿವಕುಮಾರ್‌ರವರ ರಿಪೋರ್ಟ್ ಆದ ಮೇಲೆ ವೀರೇಶ ಅವರ ರಿಪೋರ್ಟ್ ಬಂದಿತ್ತು. ಆ ಎಲ್ಲಾ ರಿಪೋರ್ಟ್‌ಗಳಲ್ಲಿ ಏನು ಇದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಆದರೆ ನಾವು ಡಿಮಾಂಡ್ ಮಾಡತಕ್ಕಂಥದ್ದು ಗೋಲಿಬಾರ್ ವಿಚಾರವೇ ಬೇರೆ ಅದಕ್ಕೆ Judicial enquiry ಮಾಡಬೇಕೆಂದು ಮಾಡಿದ್ದೀರಿ ನಾವು ಅದನ್ನು Welcome ಮಾಡಿದ್ದೇವೆ. ಎಲ್ಲರೂ ಕೂಡ ಅದು ಒಳ್ಳೆಯ ಕೆಲಸವೆಂದು ಶಹಬಾಷಗಿರಿಯನ್ನು ಕೊಟ್ಟಿದ್ದೇವೆ. ಆದರೆ ನಾವು ಕೇಳತಕ್ಕಂಥದ್ದು ಈ ಗೊಬ್ಬರ

VOL-2. P-47

ಕೊರತೆಯಿಂದ, ಸೀಡ್ಸ್ ಕೊರತೆಯಿಂದ ಮತ್ತು ಸಾಲದ ಭಾಧೆಯಿಂದ ತೊಂದರೆಗೆ ಒಳಗಾಗಿರುವ ರೈತರ ಸರಣಿ 23 ಆತ್ಮಹತ್ಯೆಗಳು ಇವತ್ತಿನವರೆಗೆ ಆಗಿವೆ, ಇದರ ಕಾರಣವನ್ನು ಕಂಡು ನಿಮ್ಮ ಕಾಲದಲ್ಲಿ, ನೀವು ಸುಮ್ಮಸುಮ್ಮನೆ ಕೇಂದ್ರ ಸರ್ಕಾರದಿಂದ ಬರಲಿಲ್ಲ. ಅದಕ್ಕಾಗಿ ಅಲ್ಲಿ ಹೋಗಿ ಸತ್ಯಾಗ್ರಹ ಮಾಡುತ್ತೇವೆ. ಇಲ್ಲಿ ಇದನ್ನು ಮಾಡುತ್ತೇನೆಂದು ಏನು ಹೇಳುತ್ತಿದ್ದೀರಿ? ಅದಕ್ಕಾಗಿ ಸತ್ಯಾಂಶ ಗೊತ್ತಾಗಬೇಕಲ್ಲಾ? ಆ ದೃಷ್ಟಿಯಿಂದ ನಾವು ಕೇಳಿದ್ದು, ಜಂಟಿ ಸದನ ಸಮಿತಿಯಿಂದ ನಿಮಗೆ ಏನು ತಾಪತ್ರಯ ಇದೆ? ಅದನ್ನು ಸ್ಪೀಕರ್‌ರವರು ಅಪಾಯಿಂಟ್ ಮಾಡುತ್ತಾರೆ. ಚೇರ್ಮನ್ ನಿಮಗೆ ಯಾರು ಬೇಕು ಅವರನ್ನು ಅಪಾಯಿಂಟ್ ಮಾಡುವುದು. ಈ ಕಡೆ ಸದಸ್ಯರನ್ನು ಅಥವಾ ಆ ಕಡೆ ಸದಸ್ಯರನ್ನಾದರೂ ಮಾಡಬಹುದು. ಯಾರಾದರೂ ನ್ಯೂಟ್ರಲ್ ಆಗಿರತಕ್ಕಂಥ independent ಸದಸ್ಯರನ್ನು ನೀವು ಮಾಡಬಹುದು. ಇನ್ನು ಒಬ್ಬರೆ ಮಂತ್ರಿಯಾಗದೇ ಉಳಿದಿರತಕ್ಕಂಥವರು. ನೀವು ಯಾರಿಗಾದರೂ ಮಾಡಬಹುದು. ಅದು ನಿಮ್ಮ ಕೈಯಲ್ಲಿ ಇದೆ. ಅದನ್ನು ಬಿಟ್ಟು ನಾವು ಒಪ್ಪುವುದಿಲ್ಲ, ನಾವು ಮಾಡುವುದೇ ಇಲ್ಲ ನಾವು Judicial probe ಗೆ order ಮಾಡಿದ್ದೇವೆ. ಮತ್ತೆ ಏಕೆ ಮಾಡಬೇಕು ಎಂದು ಹೇಳಬೇಡಿ, ಅದು ಮಾಡಿದ್ದು ಒಂದು ವಿಷಯ. ಇದು ಬೇರೆ ವಿಚಾರ, ಎರಡನೆಯದಾಗಿ ಅಲ್ಲಿ ಹೋಗಿ ಕೇಳೋಣವೆಂದು ಹೇಳುತ್ತಿದ್ದೀರಿ. ಏನು available ಇದೆ ಅದರ ಬಗ್ಗೆ ನಿಮ್ಮ ಮುಂದೆ facts and figures ಇದೆ. ಅದನ್ನು ನೀವು ಸರಿಯಾಗಿ ಸರಬರಾಜು ಮಾಡಿಲ್ಲವೆಂದು ನಾವು ಹೇಳುತ್ತಿದ್ದೇವೆ. ಬಾರ್ಡರ್ issue, ಜಲ, ನೆಲ, ಭಾಷೆ ಇಂತಹ ಕಾಮನ್ ವಿಷಯಗಳಿಗೆ ಅನೇಕ ಸಲ ಡೆಲಿಗೇಶನ್ ತೆಗೆದುಕೊಂಡು ಹೋಗಿದ್ದಾರೆ, ಹೋಗತಕ್ಕಂಥದ್ದು ಬರತಕ್ಕಂಥದ್ದು ಇದು ಸಹಜ. Distribution of food grains, fertilizers, ದಿನನಿತ್ಯದ ಕೆಲಸದಲ್ಲಿ ಅವರು ನಿಮ್ಮೊಂದಿಗೆ ದಿನಾ ಕರೆಸ್‌ಪಾಂಡೆನ್ಸ್ ಮಾಡುತ್ತಾರೆ. ನೀವು ಸಹ ಅವರೊಂದಿಗೆ ದಿನಾ

ಕರೆಸ್‌ಪಾಂಡೆನ್ಸ್ ಮಾಡುತ್ತೀರಿ. ಈ ರೀತಿ ನಿಮ್ಮಲ್ಲಿ ಎಲ್ಲಾ ಅವೇಲಬಲ್ ಇದ್ದರೂ figures ಎಲ್ಲಾ ಗೊತ್ತಿದ್ದರೂ ನೀವು ಇದನ್ನು ಮಾಡಲೂ ಏಕೆ ಒಪ್ಪಿಕೊಳ್ಳುತ್ತಿಲ್ಲ? ಅದನ್ನು ಬಿಟ್ಟು ನಮ್ಮನ್ನು ಹೆದರಿಸುವುದು. ನೀವು ಒಬ್ಬೊಬ್ಬರೆ ಬನ್ನಿ, ನಿಮ್ಮ ಮತ ಕ್ಷೇತ್ರದಲ್ಲಿ ತೋರಿಸುತ್ತೇವೆ, ನಮ್ಮಲ್ಲಿ 35ಮಂತ್ರಿಗಳು ಇದ್ದಾರೆ. ಕಾಲು ಮುರಿಯುತ್ತೇನೆಂದು ಮಾತ್ರ ಹೇಳಲಿಲ್ಲವಷ್ಟೇ! ಈ ಕಡೆ ಇದ್ದಾಗ ಬಡಿಗೆ ತೆಗೆದುಕೊಂಡು ಹೊಡೆಯುತ್ತಾರೆಂದು ಹೇಳುತ್ತಿದ್ದರು. ಈಗ ಆ ಕಡೆಯಿಂದ ಏನು ಹೇಳುತ್ತಾರೋ ಗೊತ್ತಿಲ್ಲ. ಬಹುಶಃ ಅವರ ಹತ್ತಿರ ಈಗ ಬಂದೂಕು ಇದೆ. ನಿಮ್ಮ ಪ್ರಚೋದನಕಾರಿ ಮಾತುಗಳನ್ನಾಡಿ ಅಲ್ಲಿ ಜನರಿಗೆಲ್ಲ ಈ ಭಾಷೆಯಿಂದ ಈಗ ಏನು ಮೆಸೇಜ್ ಹೋಗುತ್ತದೆ? ಒಬ್ಬರು ಮುಖ್ಯಮಂತ್ರಿಗಳಾಗಿ ಈ ರೀತಿಯ ಪ್ರಚೋದನಕಾರಿಯಾಗಿ ಮಾತನಾಡುತ್ತಾರೆ ಮತ್ತು legislators ವಿರುದ್ಧ ಜನರಿಗೆ ಎತ್ತಿಕಟ್ಟುತ್ತಿದ್ದಾರೆ ಎಂಬ ಮೆಸೇಜನ್ನು ಇವತ್ತು ನೀವು ಪತ್ರಿಕೆಯಲ್ಲಿ ಕೊಟ್ಟಿರಿ. ಮಾಧ್ಯಮದಲ್ಲಿ ಮತ್ತು ಅನೇಕ ಮೀಡಿಯಾದಲ್ಲಿ ಇದು ಹೋಯಿತು. Naturally ಆಡಳಿತದಲ್ಲಿ ಇದ್ದಂತಹ ಅಧಿಕಾರಿಗಳು ನಾಳೆ ದಿವಸ legislators ಮಾತು ಕೇಳುತ್ತಾರೆಯೇ? ನಾಳೆ ಇವರು ಎಲ್ಲಾದರು ಹೋದರೆ ಗೌರವ ಕೊಡುತ್ತಾರೆಯೇ? ಮುಖ್ಯಮಂತ್ರಿಯೇ ನೋಡಿಕೊಳ್ಳಿ ಎಂದು ಹೇಳಿದ್ದಾರೆ ಎಂದು ಮಾಡುತ್ತಾರೆ. ನೀವು ಕೇವಲ ನೋಡಿಕೊಳ್ಳಿ ಎಂದರೆ ಸಾಕು ಅವರು ನಮ್ಮನ್ನು ಮುಗಿಸೇ ಬಿಡುತ್ತಾರೆ. ನೀವು ನೋಡಿಕೊಳ್ಳಿ ಎಂದು ಹೇಳಿದ್ದಕ್ಕಾಗಿಯೇ ಒಬ್ಬ ರೈತನನ್ನು ಗುಂಡು ಹಾಕಿ ಕೊಂದೇ ಬಿಟ್ಟರು. ಈಗ ರೇವಣ್ಣನವರು ಹೊಸ ಸುದ್ದಿಯನ್ನು ತಂದಿದ್ದಾರೆ. ಆ firing ನಲ್ಲಿ ಇಬ್ಬರು ಬಹಳ ಸೀರಿಯಸ್ ಆಗಿದ್ದರು. ಅದರಲ್ಲಿ ಒಬ್ಬರು ವೆಂಟಿಲೇಟರ್‌ನಲ್ಲಿದ್ದು ಈಗಲೋ ನಾಳೆಯೋ ಎಂಬ ಸಂದರ್ಭ ಇದೆ ಎಂಬ ಮಾಹಿತಿ ಬಂತು. ಸರ್ಕಾರ ಯಾವ ರೀತಿಯಾಗಿ ಕೆಲಸವನ್ನು ಮಾಡುತ್ತಿದೆ ಎನ್ನುವುದಕ್ಕೆ ಇದೆಲ್ಲಾ ಉದಾಹರಣೆ. ಆದ್ದರಿಂದ,

ದಯವಿಟ್ಟು ಪ್ರೆಸ್ಟೀಜ್ ಇಶ್ಯೂ ಮಾಡಿಕೊಳ್ಳಬೇಡಿ. ನಾವು ಸಹಕರಿಸಲು ತಯಾರಿದ್ದೇವೆ. ಜಂಟಿ ಸದನದ ಸಮಿತಿ ಮಾಡಿ. ತಪ್ಪಾಗಿದೆಯೆಂದು large hearted, ವಿಶಾಲ ಹೃದಯ ಈಗಲೂ ಹಾಗೆಯೇ ಒಪ್ಪಿ ಮುಖ್ಯಮಂತ್ರಿಯಾಗಿ ನಮ್ಮ ಪಕ್ಷ ಬಹಳ ವಿಶಾಲವಾಗಿದೆ, ದೊಡ್ಡದಾಗಿದೆ, ಅಖಿಲ ಭಾರತ ಪಕ್ಷ ಎಂದು ಹೇಳಿ, ಆದರೆ ನಿಮ್ಮ ಹೃದಯ ಬಹಳ ಸಂಕುಚಿತ ಮತ್ತು ಅತ್ಯಂತ ಕೆಳಮಟ್ಟದಲ್ಲಿದ್ದರೆ ಬಹಳ ಕಷ್ಟ. ಆದರಿಂದ ಇದರ ಬಗ್ಗೆ ವಿಶಾಲ ದೃಷ್ಟಿಯಿಂದ ಯೋಚನೆ ಮಾಡಿ. ರಾಜ್ಯದ, ರೈತರ ಹಿತದೃಷ್ಟಿಯಿಂದ ದಯವಿಟ್ಟು ಯೋಚನೆ ಮಾಡಿ, ಮಾನ್ಯ ಅಧ್ಯಕ್ಷರೆ ನೀವು ಇದರ ಬಗ್ಗೆ ನಿರ್ದೇಶನ ಕೊಡಿ. ಅವರಿಗೂ ನೀವು ಹೇಗೆ ಚಾಟಿಬೀಸುತ್ತೀರಿ ಎಂಬುದು ಗೊತ್ತಾಗಲಿ. ಕೇವಲ ನಮ್ಮ ಕಡೆ ಅಲ್ಲ. ಸ್ಪೀಕರ್‌ರವರು ಸುಮ್ಮನೆ ಇರುವುದಿಲ್ಲ, ನ್ಯಾಯವಾಗಿ ನಡೆದುಕೊಳ್ಳಲಿಲ್ಲ ಎಂದರೆ ನಮಗೂ ಚಾಟಿ ಏಟನ್ನು ಹೊಡೆಯುತ್ತಾರೆಂದು ಅವರಿಗೂ ಗೊತ್ತಾಗಲಿ. ದಯವಿಟ್ಟು ತಾವು ಅವರಿಗೆ ಹೇಳಿ. ತಮ್ಮ ಮಾತನ್ನು ಕೇಳುತ್ತಾರೆ. ತಮ್ಮ ಬಗ್ಗೆ ಈಗ ಅವರಿಗೆ ಅಪಾರವಾದ ಗೌರವವಿದೆ. ತಾವು ಸ್ಪೀಕರ್ ಆದಮೇಲೆ ಅವರಿಗೆ ನಿಮ್ಮ ಬಗ್ಗೆ ಇನ್ನೂ ಗೌರವ ಹೆಚ್ಚಾಗಿದೆ. ಆದ್ದರಿಂದ, ದಯವಿಟ್ಟು ಅವರಿಗೆ ಸ್ವಲ್ಪ ಹೇಳಿ ತಾವು ನಗಬೇಕು. ಸೀರಿಯಸ್ ಆದರೆ ಹೇಗೆ?! ಒಪ್ಪಿಕೊಂಡುಬಿಡಿ.

ಅಧ್ಯಕ್ಷರು : ಆ ಲೆಕ್ಕದಲ್ಲಿ ನಿಮಗೂ ಗೌರವ ಇದೆಯಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ನಾವು ನಿಮಗೆ ಗೌರವದಿಂದ ಕಾಣಬೇಕು ಎಂಬುದು ಒಂದು. ನಮ್ಮ ಕೆಲಸ ಮಾಡುವುದು ಒಬ್ಬ ಮನುಷ್ಯರಾಗಿ ಎಂಬ ನೋವು ಇದೆ. ಬೇಕೆಂದು ಹೀಗೆ ಮಾಡಿದರಲ್ಲಾ ಎಂಬ ಬಹಳ ಅಳಲೂ ಇದೆ. ನಮಗೂ ಕೊರಗು ಇದೆ. ನಾವು ಹೇಳಿದ್ದ ಕೆಲಸ ನಡೆಯುತಿತ್ತು. ಈಗ ಈ ರೀತಿ ಆಯಿತಲ್ಲಾ ಎಂಬ ಕೊರಗೂ ಇದೆ. ಏಕೆ ಹೀಗೆ ಮಾಡಿದರು. ಬೇಕೆಂದೇ ಶೆಟ್ಟರ್‌ರವರಿಗೆ ತಪ್ಪಿಸಿದರಲ್ಲಾ, ಇನ್ನೊಬ್ಬ ಕಾಂಪಿಟೇಟಾರ್ ಇರಬಾರದು

ಎಂದು. ನಮ್ಮ ಮನಸ್ಸಿನಲ್ಲೂ ಇದು ಇದೆ. ಆದರೆ ಏನು ಮಾಡುವುದು. ಆಗಿದ್ದು ಆಯಿತು. ನೀವು ಅಲ್ಲಿ ಸ್ವೀಕಾರ ಮಾಡಿದಿರಿ. ಅವರೂ ಏನೋ ಕಸರತ್ತು ಮಾಡಿ ನಿಮ್ಮನ್ನು ಅಲ್ಲಿಗೇ ಕರೆದುಕೊಂಡು ಹೋಗಿ ಕೂರಿಸಿದರು. ಕೂರಿಸಲಿ ಪಾಪ. ನಮ್ಮ ಕೆಲಸವನ್ನಾದರು ಮಾಡಿಕೊಡಿ. ರಾಜ್ಯದ, ರೈತರ ಕೆಲಸ ಮಾಡಿಕೊಡಿ, ಇದೇ ನಿಮ್ಮನ್ನು ಕೇಳಿಕೊಳ್ಳುವುದು ಸ್ವಾಮಿ. ಅವರು ಏನೋ ಹೇಳಿಕೊಂಡು ಹೋಗಲಿ. ಆದರೆ ನೀವು ಅವರಿಗೆ ನಿರ್ದೇಶನ ಕೊಡಿ. ಯಡಿಯೂರಪ್ಪನವರೂ ಈಗ ಎಲ್ಲರನ್ನೂ ಕನ್‌ಸಲ್ಟ್ ಮಾಡಿದ್ದಾರೆ. ಖಂಡಿತವಾಗಿ ಅವರೂ ಜಂಟಿ ಸದನದ ಸಮಿತಿಗೆ ಒಪ್ಪುತ್ತಾರೆ. ಇಲ್ಲಿಯವರೆಗೆ ಸ್ವಲ್ಪ ಪ್ರೆಸ್ಟೀಜ್ ಮಾಡಿಕೊಂಡು ಕುಳಿತಿದ್ದರು. ರೇವಣ್ಣ ಹೇಳಿದ ಮೇಲೆ ತಕ್ಷಣ ಒಪ್ಪಿಕೊಳ್ಳುತ್ತಾರೆ. ತಾವೂ ಕೂಡ ಹೇಳಿ ಸದನದ ಸಮಿತಿ ಮಾಡಿಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ಸನ್ಮಾನ್ಯ ಸಭಾಧ್ಯಕ್ಷರೆ, ಈಗ ತಾನೆ ತಾವು ನನ್ನನ್ನು ಪ್ರತಿಪಕ್ಷದ ನಾಯಕರನ್ನು ಕರೆದು ಅನೇಕ ಸಮಾಲೋಚನೆಗಳನ್ನು ಮಾಡಿದ್ದೀರಿ. ಈ ಹಿಂದೆ 1997-98ರಲ್ಲಿ ವಿಶೇಷವಾಗಿ ಬೀದರ್, ಗುಲ್ಬರ್ಗಾ ಜಿಲ್ಲೆಗಳಲ್ಲಿ ಪ್ರಕೃತಿಯ ವೈಪರೀತ್ಯದಿಂದ ಕಳಪೆ ಬೀಜಗಳು ಹಾಗೂ ಕೀಟನಾಶಕ ಔಷಧಿಗಳನ್ನು ಉಪಯೋಗಿಸಿದ್ದರಿಂದ ತೀವ್ರ ಆರ್ಥಿಕ ಮತ್ತು ಮಾನಸಿಕ ಸಂಕಷ್ಟಕ್ಕೆ ಗುರಿಯಾದಂಥ ರೈತರು ಅಸಹಾಯಕ ಸ್ಥಿತಿಯಲ್ಲಿದ್ದಾರೆ. ಆ ಸಂದರ್ಭದಲ್ಲಿ ಅನೇಕ ಆತ್ಮಹತ್ಯೆ ಪ್ರಕರಣಗಳು ವಿಶೇಷವಾಗಿ ಆ ಭಾಗದಲ್ಲಿ ನಡೆದವು ಎಂದು ದಿ.28.03..1998 ರಂದು ಮಾನ್ಯ ಜಿ.ಬಿ.ಶಿವಕುಮಾರ್‌ರವರ ಅಧ್ಯಕ್ಷತೆಯಲ್ಲಿ 19 ಸದಸ್ಯರನ್ನೊಳಗೊಂಡ ಜಂಟಿ ಸದಸ್ಯ ಸಮಿತಿಯನ್ನು ರಚಿಸಲಾಗಿತ್ತು. ಮಾನ್ಯ ಸಭಾಧ್ಯಕ್ಷರೆ, ತಾವೂ ಆ ಸಮಿತಿಯಲ್ಲಿದ್ದಿರಿ. ಅವರು ವರದಿಯನ್ನು ಕೊಟ್ಟರು. ಆ ವರದಿ ಕೊಟ್ಟಿದ್ದನ್ನು ಈ ಮನೆಯಲ್ಲಿ table ಮಾಡಿದ ಮೇಲೆಯೂ ಸಹ ಆ ವರದಿಗಳು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬಂದಿವೆ? ಉತ್ಸಾಹದಲ್ಲಿ ಈ ರೀತಿ ಜಂಟಿ ಸದನ ಸಮಿತಿ

ಇರಬಹುದು, ಯಾವುದೇ ನ್ಯಾಯಾಂಗ ತನಿಖೆ ಇರಬಹುದು, ಯಾವುದೇ ಸಮಿತಿಗಳಿರಬಹುದು. ಆ ಘಟನೆಗಳು ನಡೆದಾಗ ನಮಗಿರುವಂಥ ಆಸಕ್ತಿ, ಜಂಟಿ ಸದನ ಸಮಿತಿ, ಬೇರೆ ಯಾವುದೇ ಸಮಿತಿಗಳನ್ನು ರಚನೆ ಮಾಡಬೇಕಾದರೆ ನಮಗಿರುವಂಥ ಆಸಕ್ತಿ, ಆ ಜಂಟಿ ಸದನ ಸಮಿತಿ ವರದಿಯನ್ನು ಕೊಟ್ಟ ಮೇಲೆ ಅದನ್ನು ಅನುಷ್ಠಾನಗೊಳಿಸುವುದಕ್ಕೆ ಯಾವ ರೀತಿಯ ಕಳಕಳಿ, ಆಸಕ್ತಿಯನ್ನು ತೋರಿಸಬೇಕಾಗಿತ್ತೋ, ಅದು ಎಷ್ಟರಮಟ್ಟಿಗೆ ಆಗಿದೆ, ಇಲ್ಲವೆನ್ನುವುದನ್ನು ಪರಿಶೀಲನೆ ಮಾಡಬೇಕಾಗಿದೆ. ನಾನು ಯಾವುದನ್ನೂ ನೋಡದೆ, ಯಾವುದೇ ಆರೋಪವನ್ನು ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅಂದರೆ, ಈಗ ಒಂದು ಸಾರಿ ಜಂಟಿ ಸದನ ಸಮಿತಿಯನ್ನು ಮಾಡಿದ್ದೆವು. ಕೆಲವು ದಿವಸಗಳಿಂದ ವಿಶೇಷ ಪ್ರಯತ್ನ ಮಾಡಿ, ಪ್ರತಿನಿತ್ಯ ಕರ್ನಾಟಕ ರಾಜ್ಯದಲ್ಲಿ ಆಗುತ್ತಿರುವಂಥ ರಸಗೊಬ್ಬರದ ತೊಂದರೆಯಿಂದ ರೈತರೇನು ಸಂಕಷ್ಟಕ್ಕೊಳಗಾಗಿದ್ದಾರೆ ಅದರ ಬಗ್ಗೆ ಕೇಂದ್ರಕ್ಕೆ ಒತ್ತಾಯ ತಂದು ನಾಳೆ ದಿವಸ Chief secretary ಯವರನ್ನು ನಾನು ಇಲ್ಲಿಂದ ದೆಹಲಿಗೆ ಕಳುಹಿಸುತ್ತಿದ್ದೇನೆ. ವಿಶೇಷವಾಗಿ ಕರ್ನಾಟಕದ ಬಗ್ಗೆಯೇ ನಾಳೆ fertilizer manufacturers ಅನ್ನು ಕೂರಿಸಿಕೊಂಡು ಇಲ್ಲಿಯ ಸ್ಥಿತಿಗತಿಗಳ ಬಗ್ಗೆ ಮೀಟಿಂಗ್ ಮಾಡುತ್ತಿದ್ದಾರೆ. ನಂತರ, ದೇಶದ ಬೇರೆ ಬೇರೆ ರಾಜ್ಯಗಳಲ್ಲೇನಿದೆ, ಆ ಸಮಸ್ಯೆಗಳ ಬಗೆಗೂ ಅಲ್ಲಿ ಚರ್ಚೆಯಾಗುತ್ತದೆ. ನಾಳೆ ವಿಶೇಷವಾಗಿ ನಮ್ಮ ಮುಖ್ಯ ಕಾರ್ಯದರ್ಶಿಗಳನ್ನೇ ನಾನು ಕಳುಹಿಸುತ್ತಿದ್ದೇನೆ. ಈ ಸಭೆ ಸಹ ನಡೆಯುತ್ತಿದೆ. ನಾನು ರಸಗೊಬ್ಬರದ ವಿತರಣೆಗಾಗಿ ನಮ್ಮ ಅಧಿಕಾರಿಗಳ ಜೊತೆಗೆ ನಾನೇ day-to-day review ಮಾಡುತ್ತಿದ್ದೇನೆ. ಸಂಬಂಧಪಟ್ಟ ಸಚಿವರೂ ಸಹ ಅದೇ ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಿಗೆ ಬಹುತೇಕ ಎಲ್ಲ ಕಡೆ ಸರಿಯಾದ ರೀತಿಯಲ್ಲಿ ರಸಗೊಬ್ಬರದ ವಿತರಣೆ ಆಗಬೇಕು ಎಂದು ಅವರು ಅಲ್ಲಿಯೇ ಹೋಗಿ ಕುಳಿತು ಅದನ್ನು ಪರಿಶೀಲನೆ

ಮಾಡುವಂಥದ್ದು, ಅಲ್ಲಿರುವ ಸಮಸ್ಯೆಗಳನ್ನು ತಕ್ಷಣ ನಮ್ಮ ಅಧಿಕಾರಿಗಳ ಗಮನಕ್ಕೆ ತರುವಂಥದ್ದು, ನನ್ನ ಗಮನಕ್ಕೆ ತರುವಂಥದ್ದು ಮಾಡಬೇಕೆಂದು ಹೇಳಿದ್ದೇನೆ. ಈ ರೀತಿ ನಾವು ನಿರಂತರವಾಗಿ ಮಾಡುತ್ತಿದ್ದೇವೆ ಇಲ್ಲಿರುವಂಥ 224ಜನ ಶಾಸಕರೂ ಪಕ್ಷಭೇದ ಮರೆತು ನಾವು ನಾಳೆಯಿಂದಲೇ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋದಾಗ ತಮಗೇನು ಅನಿಸುತ್ತದೆ ಅದನ್ನು ನೇರವಾಗಿ ನನ್ನ ಗಮನಕ್ಕೆ, ಅಧಿಕಾರಿಗಳ ಗಮನಕ್ಕೆ ಮತ್ತು ನಮ್ಮ ಕೃಷಿ ಸಚಿವರ ಗಮನಕ್ಕೆ ತಂದರೆ, ತಕ್ಷಣ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಮತ್ತೆ, ರಾಜಕಾರಣ ಮಾಡುವುದಕ್ಕೋಸ್ಕರ ಯಡಿಯೂರಪ್ಪನವರು ಈ ಮಾತನ್ನು ಹೇಳಿದರು ಎನ್ನುವ ಭಾವನೆ ನಿಮಗೆ ಬರುವುದು ಬೇಡ. ಏಕೆಂದರೆ, ಇವತ್ತು ನಿಮ್ಮ ಸಹಕಾರವಿದ್ದರೆ ಒಟ್ಟಾಗಿ ಹೋಗಬಹುದು, ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬಹುದು, ಆತ್ಮಹತ್ಯಾ ಪ್ರಕರಣಗಳನ್ನು ವಿಶ್ವಾಸದಿಂದ ಮಾತನಾಡಬೇಕು. ಭಗವಂತನ ದಯೆಯಿಂದ ಎಲ್ಲ ಕಡೆ ಮಳೆಯಾಗುವಂಥ ವಾತಾವರಣವಿರುವುದರಿದ ತಕ್ಷಣ ಒಂದೇ ಬಾರಿಗೆ ಎಲ್ಲ ಕಡೆ ರಸಗೊಬ್ಬರಕ್ಕೆ ಪೈಪೋಟಿ ಪ್ರಾರಂಭವಾಗುವುದರಿಂದ ಮತ್ತೆ ರಸಗೊಬ್ಬರವಿಲ್ಲದೆ, ನಾವೆಲ್ಲ ರೈತರ ಮಕ್ಕಳಿದ್ದೇವೆ, ಬಿತ್ತನೆ ಕಾರ್ಯ ಮಾಡುವುದಕ್ಕೆ ಸಾಧ್ಯವೇ ಇಲ್ಲವೆನ್ನುವುದು ನಮಗೆಲ್ಲರಿಗೂ ಗೊತ್ತಿರುವ ಸಂಗತಿಯಾಗಿರುವುದರಿಂದ ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ, ನಾಳೆ ಅಥವಾ ನಾಡಿದ್ದು, ನೀವು ಯಾವಾಗ ನಿಮ್ಮ ಅನುಕೂಲ ಹೇಳುತ್ತೀರಿ ಆಗ ನಾನು ಬರುವುದಕ್ಕೆ ಸಿದ್ಧನಿದ್ದೇನೆ. ನಿಮ್ಮೆಲ್ಲ ಸರ್ವಪಕ್ಷಗಳ ನಿಯೋಗವನ್ನು ಪ್ರಧಾನಮಂತ್ರಿಯವರ ಹತ್ತಿರ ಕರೆದುಕೊಂಡು ಹೋಗುವುದಕ್ಕೆ ನಾನು ಸಿದ್ಧನಿದ್ದೇನೆ. ನಾನೇನು ಹೇಳಿದೆನೆಂದರೆ, ತಾವು ಇಷ್ಟೆಲ್ಲ ಈ ಸರ್ಕಾರ ಗಂಭೀರವಾಗಿ ರಸಗೊಬ್ಬರದ ವಿಚಾರದಲ್ಲಿ ನಾನು ಮುಖ್ಯಮಂತ್ರಿಯಾದ 48 ಗಂಟೆಯಾಳಗಾಗಿ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ, ಸಚಿವ ಸಂಪುಟದ ಸಹೋದ್ಯೋಗಿಗಳನ್ನು ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಯವರನ್ನು, Fertilizer

Ministerರವರನ್ನು ಭೇಟಿ ಮಾಡಿ ಅವರಿಂದ ಆಶ್ವಾಸನೆಯನ್ನು ತೆಗೆದುಕೂಂಡು Chief secretary regular ಆಗಿ ಕೇಂದ್ರದ ರಸಗೊಬ್ಬರಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಸಂಪರ್ಕವಿಟ್ಟುಕೊಂಡು ನಾವೆಲ್ಲವನ್ನೂ ಮಾಡುತ್ತಿದ್ದೇವೆ. ಮತ್ತೊಂದು ಮಾತನ್ನು ನಾನು ಹೇಳಿದ್ದೆ. ಅಂಕಿ-ಅಂಶಗಳಲ್ಲಿ ಏನಾದರೂ ವ್ಯತ್ಯಾಸವಿದರೆ, ಸ್ಪೀಕರ್ ಕೊಠಡಿಗೆ ನಾಳೆ ನಿಮ್ಮನ್ನು ಕರೆಯುತ್ತೇನೆ, ಎಲ್ಲಾ ಅಂಕಿ-ಅಂಶಗಳನ್ನು ಪರಿಶೀಲನೆ ಮಾಡುವಿರಂತೆ. 2X2=5 ಆಗಲಿಕ್ಕೆ ಸಾಧ್ಯವಿಲ್ಲ. ಅಂಕಿ-ಅಂಶಗಳಲ್ಲಿ ಏನಾದರೂ ವ್ಯತ್ಯಾಸವಿದರೆ ಎಲ್ಲಿ black market ಮಾರಾಟ ಮಾಡುತ್ತಿದ್ದಾರೆ, ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿದ್ದಾರೆ, Stock ಅನ್ನು hoard ಮಾಡಿ ರೈತರಿಗೆ ತೊಂದರೆ ಮಾಡುವಂತಹ ಪ್ರಯತ್ನ ಮಾಡುತ್ತಿದ್ದಾರೆ, ಅವರ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಇಂತಹ ಕಡೆ Stock ಇದೆ ಎನ್ನುವ ಬಗ್ಗೆ ಪ್ರಾಮಾಣಿಕವಾದಂತಹ ಸುದ್ದಿಯನ್ನು ಅಥವಾ ಮಾಹಿತಿಯನ್ನು ಮುಟ್ಟಿಸಿದಲ್ಲಿ ಅವರ ಬೆನ್ನು ಸವರಿ, ಬೆಂಬಲಿಸಿ 10 ಸಾವಿರ ರೂ.ಗಳನ್ನು ತಕ್ಷಣ ಕೊಡುತ್ತೇವೆ ಎಂಬ ಪೋಷಣೆಯನ್ನೂ ಸಹ ಮಾಡಿದ್ದೇವೆ. ಬಹುಶಃ ರಾಜ್ಯದ ಇತಿಹಾಸದಲ್ಲಿ ಇದೇ ಮೊದಲನೆಯದಾಗಿ ಈ ರೀತಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ನಾನು ನಿಮಗೆ ವಿನಂತಿ ಮಾಡಿಕೊಳ್ಳುವುದೆನೆಂದರೆ, ಪ್ರಧಾನಿಯವರನ್ನು ಭೇಟಿ ಮಾಡುವುದಕ್ಕೆ ಹೋಗುತ್ತೇವೆ, ನೀವ್ಯಾರೂ ಸಹಕಾರ ಕೊಡದೆ, ಇದೇ ರೀತಿ ಧರಣಿ ಕುಳಿತು, ರಾಜ್ಯದ ಜನರ ಮುಂದೆ ಬಿ.ಜೆ.ಪಿ. ಸರ್ಕಾರ ಹಿಂದೇಟು ಹಾಕುತ್ತಿದೆ, ನಾವು ಮಾತ್ರ ಧರಣಿ ಮಾಡಿದೆವು, ಹೋರಾಟ ಮಾಡಿದೆವು ಎನ್ನುವುದನ್ನು ಸೃಷ್ಟಿ ಮಾಡಿ, ಆ ರೀತಿ ಏನಾದರೂ ಪ್ರಚಾರ ಪಡೆಯಬೇಕೆನ್ನುವುದು ನಿಮ್ಮ ಮನಸ್ಸಿನಲ್ಲಿದ್ದರೆ, ಬಹುಶಃ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ರಾಜ್ಯದ ಜನ ಇದನ್ನು ನೋಡುತ್ತಾರೆ. ರಸಗೊಬ್ಬರವನ್ನು ಮ್ಯಾಜಿಕ್ ಮಾಡಿ ಅಥವಾ ಇನ್ನೇನನ್ನೋ ಮಾಡಿ

ಇರುವಂತಹ ಶಕ್ತಿ ನನಗಿಲ್ಲವೆಂದು ನಾನು ಆವತ್ತು ಹೇಳಿದ್ದು ನಿಜ. ಇರುವಂತಹದ್ದನ್ನು ವ್ಯವಸ್ಥೆ ಮಾಡುವುದಕ್ಕೆ ಕೇಂದ್ರಕ್ಕೆ ಯಾವುದೇ ರೀತಿಯ ಒತ್ತಾಯ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ನೀವು ಇದೇ ರೀತಿ ಧರಣಿ, ಸತ್ಯಾಗ್ರಹ ಅಥವಾ ನಮ್ಮ ಮೇಲೆ ಗೊಬೆ ಕೂರಿಸತಕ್ಕಂಥ ಪ್ರಯತ್ನವನ್ನು ಮಾಡಿದರೆ ನನಗೆ ಬೇರೆ ದಾರಿ ಇಲ್ಲ. ನಾನು ದೇಹಲಿಗೆ ಹೋಗಿ ನಮ್ಮ ಎಲ್ಲಾ 30 ಜನ ಮಂತ್ರಿಗಳೆಲ್ಲರನ್ನೂ ಕರೆದುಕೊಂಡು ಹೋಗಿ ಅಲ್ಲಿ ಧರಣಿ ಕುಳಿತುಕೊಳ್ಳುವುದು ಅನಿವಾರ್ಯವಾಗುತ್ತದೆ ಎನ್ನುವ ಮಾತನ್ನು ನಾನ್ನು ಏಕೆ ಹೇಳಿದೆ ಎಂದರೆ, ಕೇಂದ್ರ ಸರ್ಕಾರದಿಂದ ಹೆಚ್ಚಿನ ನೆರವು ನಮಗೆ ಕೊಡುವಂತೆ ನೀವು ನೋಡಿಕೊಳ್ಳಬೇಕು. ಪ್ರತಿಪಕ್ಷದವರು ಕೇಂದ್ರದಲ್ಲಿರುವಂತಹ ಸಮ್ಮಿಶ್ರ ಸರ್ಕಾರಕ್ಕೆ ಮತ್ತು ಪ್ರಧಾನಿಯವರಿಗೆ ಹೆಚ್ಚಿನ ಒತ್ತಾಯವನ್ನು ತರುವಂತಹ ಕೆಲಸ ಮಾಡಬೇಕಾಗಿತ್ತು. ಯಾವುದೇ ಕಾರಣಕ್ಕಾಗಿ ನೀವು ಆ ಕೆಲಸವನ್ನು ಮಾಡಿಲ್ಲ. ಒಂದು ಶಬ್ದವನ್ನೂ ಸಹ ಇದರ ಬಗ್ಗೆ ಮಾತನಾಡಿಲ್ಲ. ನೀವು ಪದೇ ಪದೇ ಕೇಂದ್ರದ ಕಡೆಗೆ ಕೈ ತೋರಿಸುತ್ತೀದ್ದೀರಿ ಎಂದು ನನಗೆ ಹೇಳುತ್ತಿದ್ದೀರಿ. ಅವರನ್ನು ಬಿಟ್ಟು ನಾನು ಇನ್ಯಾರ ಕಡೆಗೆ ಕೈ ತೋರಿಸಲಿ? ನನ್ನಲ್ಲಿ ಏನಾದರೂ ಕೊರತೆ ಇದ್ದರೆ, ನಾನೇನಾದರೂ ರಸಗೊಬ್ಬರ ಬಂದಿದ್ದನ್ನು ಸರಿಯಾಅಗಿ ವಿತರಣೆ ಮಾಡುತ್ತಿಲ್ಲವೆಂದು ನಿಮಗನಿಸಿದರೆ, ಯಾವ ನಿಮಿಷದಲ್ಲಿ ಬೇಕಾದರೂ ನಿಮ್ಮೊಡನೆ ಸಮಾಲೋಚನೆ ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ. ನಮ್ಮ ಅಧಿಕಾರಿಗಳು ಎಲ್ಲಾ ಅಂಕಿ-ಅಂಶಗಳನ್ನು ನಿಮಗೆ ಕೊಡುತ್ತಾರೆ, ಚರ್ಚೆ ಮಾಡೋಣ. ಇನ್ನೊಂದನ್ನು ನಾನು ಮಾಡಬಹುದು. ಈಗ ತಾನೇ ಪ್ರತಿಪಕ್ಷದ ನಾಯಕರನ್ನು ಮತ್ತು ನಮ್ಮನ್ನು ಮಾನ್ಯ ಅಧ್ಯಕ್ಷರು ಅಧ್ಯಕ್ಷರು ಸಮಾಲೋಚನೆಗೆ ಕರೆದಾಗ ನಾನೊಂದು ಸಲಹೆಯನ್ನು ಕೊಟ್ಟೇ. ಮೊದಲನೆಯದಾಗಿ, ಇನ್ನು ಮುಂದೆ ಯಾವುದೇ ರೈತನ ಆತ್ಮಹತ್ಯೆ ಪ್ರಕರಣವಾದರೆ, ನಮ್ಮ Sub Division at Magistrate ತತ್‌ಕ್ಷಣ ಅಲ್ಲಿಗೆ ಹೋಗಿ, 24 ಗಂಟೆಯೊಳಗಾಗಿ, ಆತ್ಮಹತ್ಯೆ ಏಕೆ ಆಯಿತು? ಹೇಗೆ ಆಯಿತು? ಇದರ ಹಿನ್ನೆಲೆ ಏನು? ಈ

Vol. 2 F.H.

ಆತ್ಮಹತ್ಯೆ ಪ್ರಕರಣಕ್ಕೆ ಕಾರಣವೇನು? ಎಂಬ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಕೊಡಬೇಕೆನ್ನುವ ಸೂಚನೆಯನ್ನು ನಾನು ಕೊಡುತ್ತಿದ್ದೇನೆ. ಈ ನಿಮಿಷದಿಂದ ಅದು ಜಾರಿಗೆ ಬರುತ್ತಿದೆ. ಎರಡನೆಯದಾಗಿ, ಕಳಪೆ ಬಿತ್ತನೆ ಬೀಜ ಮತ್ತು ರಸಗೊಬ್ಬರ ಮಾರಾಟ ಮಾಡುವವರ ಮೇಲೆ Hoard ಮಾಡುವವರ ಮೇಲೆ ತೀವ್ರತರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಸೂಚನೆಯನ್ನು ಕೊಟ್ಟಿದ್ದೇನೆ. ನೀವು ಇನ್ನೂ ಏನಾದರೂ ಸಲಹೆ ಇದ್ದರೆ ಕೊಡಿ. ಅವರನ್ನು ಇನ್ನಷ್ಟು ಬಿಗಿ ಮಾಡುತ್ತೇವೆ. ಯಾವುದೇ ಕಾರಣಕ್ಕೆ ಈ ಒಂದು ಪರಿಸ್ಥಿತಿಯ ದುರ್ಲಾಭ ಪಡೆದು, ಲಾಭ ಮಾಡಿಕೊಳ್ಳುವಂತಹ ಪ್ರಯತ್ನವನ್ನು ಯಾರಾದರೂ ವ್ಯಾಪಾರಸ್ಥರು ಮಾಡಿದರೆ, ಅವರನ್ನು Spare ಮಾಡುವುದಿಲ್ಲ. ಅವರ ಲೈಸೆನ್ಸ್ ಅನ್ನು ರದ್ದು ಮಾಡುತ್ತೇವೆ ಮತ್ತು ಅವರ ಮೇಲೆ ಕ್ರಿಮಿನಲ್ ಕೇಸ್ ಬುಕ್ ಮಾಡುವುದಕ್ಕೆ ಕಾನೂನು ಚೌಕಟ್ಟಿನಲ್ಲಿ ಏನೇನು ಸಾಧ್ಯತೆ ಇದೆಯೋ, ಆ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ನಾವು ಸಿದ್ಧರಿದ್ದೇವೆ. ಮೂರನೆಯದಾಗಿ, ನಾನು ನಿಮಗೆ ಸಲಹೆ ಕೊಡುವಂತದ್ದು ಏನೆಂದರೆ, ಇವತ್ತು ಈ ವಿಷಯದಲ್ಲಿ ತಾವು ಜಂಟಿ ಸದನ ಸಮಿತಿ ರಚನೆಗೆ ಒತ್ತಾಯ ಮಾಡದೆ, ಒತ್ತಡಗಳನ್ನು ತರದಿದ್ದರೆ, ನಾವು ರೈತ ಮುಖಂಡರನ್ನೂ ಸೇರಿಸೋಣ, ಕೃಷಿ ತಜ್ಞರನ್ನು ಸೇರಿಸೋಣ, Social scientists ಯಾರಿದ್ದಾರೆ, ಅವರನ್ನೂ ಸೇರಿಸೋಣ, ನೀವು ಹೇಳುವ ಪ್ರತಿಯೊಂದು ಪಕ್ಷದ ಪ್ರಮುಖರನ್ನೂ ಅದರಲ್ಲಿ ಸೇರಿಸೋಣ, ಒಂದು ಸಮಿತಿಯನ್ನು ಮಾಡೋಣ. ಆ ಸಮಿತಿಯ ಮೂಲಕ, ಮುಂದೆ ಆಗಬಹುದಾದಂತಹ ಈ ರೀತಿಯ ಅನಾಹುತಗಳನ್ನು ತಡೆಯುವುದಕ್ಕೆ ಈಗಾಗಲೇ ಮಾನ್ಯ ಶಿವಕುಮಾರ್‌ರವರು ಕೊಟ್ಟಂತಹ ವರದಿಯಲ್ಲಿದೆ, ನೀವು ಏನೊಂದು ವರದಿಯನ್ನು ಕೊಡುತ್ತೀರೋ, ಅದಕ್ಕೆ 3 months time ಕೊಡೋಣ. ವರದಿಯನ್ನು ಕೊಡಿ. ಒಟ್ಟಾರೆಯಾಗಿ ನಿಮ್ಮ ಅಪೇಕ್ಷೆ ಏನು? ಮತ್ತೊಮ್ಮೆ ರಾಜ್ಯದಲ್ಲಿ ಈ ರೀತಿ ರೈತರ ಆತ್ಮಹತ್ಯೆ ಪ್ರಕರಣವಾಗಬಾರದು. ಅವರಲ್ಲಿ ಆತ್ಮವಿಶ್ವಾಸ ಮೂಡಿಸಬೇಕು.

ಅವರಿಗೆ ಏನೇನು ಸವಲತ್ತುಗಳನ್ನು ಒದಗಿಸಿಕೊಡಬೇಕೋ ಅದನ್ನು ಮಾಡೋಣ. ಯಾವುದೇ ರಾಜಕೀಯ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿ ಇರಲಿ, ನಿಮ್ಮ ಸಹಾಯ ನಮಗೆ ಎಲ್ಲಾ ರೀತಿಯಿಂದಲೂ ಬೇಕಾಗಿದೆ. ನಾಳೆ ಬಿ.ಜೆ.ಪಿ. ಅಧಿಕಾರಕ್ಕೆ ಬಂದರೂ ಸಹ ನಮಗೆ ನಿಮ್ಮ ಸಹಾಯ ಬೇಕೇ ಬೇಕು. ಯಾವ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೂ ಸಹ ಇಲ್ಲಿರುವಂತಹ ಶಾಸಕರು ಒಟ್ಟಾರೆ ಒಂದಾಗಿ ರಾಜ್ಯದ ಹಿತದೃಷ್ಟಿಯಿಂದ ಹೋಗಬೇಕಾಗುತ್ತದೆ. ಅದಕ್ಕಾಗಿ ನೀವು ಬನ್ನಿ, ಸರ್ವ ಪಕ್ಷಗಳ ಮುಖಂಡರೆಲ್ಲಾ ಹೋಗಿ ಪ್ರಧಾನಿಯವರನ್ನು, Fertilizer Minister ರವರನ್ನು ಮಾನ್ಯ ಶರದ್‌ಪವಾರ್ ಜೀಯವರನ್ನು ಭೇಟಿ ಮಾಡೋಣವೆಂದು ನಾನು ಈಗಾಗಲೇ ವಿನಂತಿ ಮಾಡಿದ್ದೇನೆ. ಆದ್ದರಿಂದ ದಯಮಾಡಿ, ನೀವು ಜಂಟಿ ಸದನ ಸಮಿತಿಯೇ ಬೇಕು, ಅದರಿಂದಲೇ ಪರಿಹಾರ ಸಿಗುತ್ತದೆಂದು ಹಠ ಮಾಡಬೇಡಿ. ಈಗಾಗಲೇ ಶಿವಕುಮಾರ್ ಅಧ್ಯಕ್ಷತೆಯ ಸಮಿತಿ ವರದಿ ಇದೆ. ಅದರಿಂದ ಏನಾಯಿತು ಸ್ವಾಮಿ? ಹಿಂದಿನ ಯಾವುದೇ ಸರ್ಕಾರದ ಕಡೆಗೆ ಬೆರಳು ಮಾಡಿ ತೋರಿಸುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆ ವರದಿ ಬಂದರೂ ಆತ್ಮಹತ್ಯೆಗಳು ನಿಂತಿವೆಯೇ? ಆದ್ದರಿಂದ ಸಮಾಧಾನಕ್ಕಾಗಿ ಮತ್ತೊಂದು ಜಂಟಿ ಸದನ ಸಮಿತಿ ಮಾಡಬೇಕೆಂಬ ಒತ್ತಾಯವನ್ನು ತಾವು ಮಾಡದೆ ವಿನಯದಿಂದ ನಾನು ನಿಮಗೆ ಕೈ ಮುಗಿಯುತ್ತೇನೆ, ದಯಮಾಡಿ ಸಹಕರಿಸಿ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗಬೇಕಾಗಿದೆ. ಇಲ್ಲಿನ ಒಂದೊಂದು ನಿಮಿಷವನ್ನೂ ಸಹ ನಾವು ಈ ನಾಡಿನ ಜನರ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ, ಪರಿಹಾರ ಹುಡುಕಬೇಕಾಗಿದೆ. ಐದಾರು ತಿಂಗಳ ರಾಷ್ಟ್ರಪತಿ ಆಳ್ವಿಕೆ ಸಂದರ್ಭದಲ್ಲಿ ಹಲವಾರು ಪ್ರಮುಖ ವಿಷಯಗಳ ಬಗ್ಗೆ ನಿರ್ಧಾರವನ್ನು, ಅದರದೇ ಆದಂತಹ ವಿಶೇಷ ಕಾರಣಕ್ಕಾಗಿ ತೆಗೆದುದ್ದೊಳ್ಳುವುದಕ್ಕೆ ಆಗಿಲ್ಲ. ಮಾನ್ಯ ರಾಜ್ಯಪಾಲರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ರಷ್ಟ್ರಪತಿ ಆಳ್ವಿಕೆ ಸಂದರ್ಭದ ಎಲ್ಲವನ್ನೂ ನಾನು ದೂರುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ರಾಜ್ಯಪಾಲರು ಎರಡು

ಪತ್ರಗಳನ್ನು ಬರೆದು, ವಾಸ್ತವಿಕ ಸ್ಥಿತಿಯನ್ನು ತಿಳಿಸಿದ್ದ ಮೇಲೂ ಸಹ, ಕೇಂದ್ರ ಅದರದೇ ಆದಂತಹ ವಿಶೇಷ ಕಾರಣಕ್ಕಾಗಿ ಇದನ್ನು ಮಾಡಿಲ್ಲ. ಇದರ ಜೊತೆಗೆ ಇನ್ನೋದನ್ನು ನಾನು ನಿಮಗೆ ಹೇಳುತ್ತೇನೆ. ಇದನ್ನು ಮಲತಾಯಿ ಧೋರಣೆ ಎಂದು ಕರೆಯುತ್ತೀರೋ, ಇನ್ನೇನೆಂದು ಕರೆಯುತ್ತೀರೋ, ಅದನ್ನು ನಾನು ನಿಮಗೇ ಬಿಡುತ್ತೇನೆ. ಬೇರೆ ಯಾವುದೇ ರಾಜ್ಯದಲ್ಲೂ ರಸಗೊಬ್ಬರದ ಸಮಸ್ಯೆ ಇಲ್ಲ. ಎಲ್ಲಿ ಮಳೆ ಆಗಿಲ್ಲವೋ ಅಲ್ಲಿಗೆಲ್ಲಾ ರಸಗೊಬ್ಬರ ಹೋಗುತ್ತಿದೆ. ನಾನು Fertilizer Ministerರವರನ್ನು ವಿನಂತಿ ಮಾಡಿದೆ. ಎಲ್ಲಿ ಮಳೆ ಬಿದ್ದಿಲ್ಲವೋ, ಆ ರಾಜ್ಯಗಳಿಂದ ಇಲ್ಲಿ divert ಮಾಡಿ, manufacture ಆದಂತೆಲ್ಲಾ ಅಲ್ಲಿಗೆ ಕಳುಹಿಸಿಕೊಡುವುದಕ್ಕೆ ಬರುತ್ತದೆ ಎಂಬ ವಿನಂತಿಯನ್ನು ಮಾಡಿದ್ದೇವೆ. "ನಿಮಗ್ಯಾಕೆ ಯಡಿಯೂರಪ್ಪನವರೆ, ಎಲ್ಲಿಂದ ಕಳುಹಿಸಬೇಕು ಎಂಬ ಬಗ್ಗೆ ನೀವು ಚಿಂತೆ ಮಾಡುವುದು ಬೇಡ, ನಾವು ನಿಮಗೆ 20ನೇ ತಾರೀಖಿನೊಳಗಾಗಿ ಏನೊಂದು ರಸಗೊಬ್ಬರವನ್ನು ಕೊಡಬೇಕೋ, ಅದಕ್ಕೆ ನಾನು ಬದ್ಧನಾಗಿದ್ದೇನೆ." ಎನ್ನುವಂತಹ ಮಾತನ್ನು ರಾತ್ರಿ 10 ಗಂಟೆಯಿಂದ 11.30 ಗಂಟೆಯವರೆಗೂ ಮಾತನಾಡಿದರು. ಆಮೇಲೆ ಅದ್ಯಾರ ಕೈವಾಡ, ಏತಕ್ಕಾಗಿ ತಡೆಯಾಯಿತು? ಏತಕ್ಕಾಗಿ ರಸಗೊಬ್ಬರ ಬರಲಿಲ್ಲ ಎಂಬುದು ನಮಗೆ ಗೊತ್ತಿಲ್ಲ. ಸರ್ವ ಪಕ್ಷಗಳ ನಿಯೋಗ ಹೋದಾಗ, ಬಿಚ್ಚು ಮನಸ್ಸಿನಿಂದ ಮಾತನಾಡಿದರು. ನನಗಿಂತ ಹೆಚ್ಚಾಗಿ ಅತ್ಯಂತ ಹತ್ತಿರದ ಸಂಪರ್ಕ ಇರುವಂತಹವರು, contact ಇರುವವರು, ನೀವು ಬನ್ನಿ, ಸಹಕರಿಸಿ, ಸಮಸ್ಯೆಯನ್ನು ಬಗೆಹರಿಸೋಣ. ಆದ್ದರಿಂದ ಅಧ್ಯಕ್ಷರಿಗೇ ಇವತ್ತು ಅಧಿಕಾರ ಇದೆ. ಅಧ್ಯಕ್ಷರದೇ ಆ ಅಧಿಕಾರ. ಅಧ್ಯಕ್ಷರು ತೀರ್ಮಾನ ತೆಗೆದುಕೊಳ್ಳಲ್ಲಿ. ಈ ರೀತಿ 4-6 ದಿವಸ ಎಲ್ಲರನ್ನೂ consult ಮಾಡಿ, ಈ ರೀತಿ ತಜ್ಞರು ಯಾರ್ಯಾರಿದ್ದಾರೆ, social serviceನಲ್ಲಿ ಅಧ್ಯಯನ ಮಾಡಿದವರು, ರೈತ ಮುಖಂಡರುಗಳು,

ಶಾಸಕರು ಸೇರಿದಂತೆ ಒಂದು ಸಮಿತಿಯನ್ನು ಮಾಡಿ, ಈ ಒಂದು ವರದಿಯನ್ನು ತರಿಸುವುದಕ್ಕೆ ಏನೇನು ಬೇಕೋ, ಎಲ್ಲವನ್ನೂ ಮಾಡೋಣ. ಭಾರತ ಸರ್ಕಾರದ ವೆಬ್‌ಸೈಟ್ ಮಾಹಿತಿ, ಇದು 12.30 ಗಂಟೆಯಲ್ಲಿದ್ದಂತೆ, ಅಂದರೆ ಒಂದು ಗಂಟೆ ಹಿಂದಿನ ಮಾಹಿತಿ ನನ್ನ ಬಳಿ ಇದೆ. ಭಾರತ ಸರ್ಕಾರದ ರಸಗೊಬ್ಬರ ವಿತರಣೆ, Fertilizer Management systemನ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಮಾಹಿತಿಯಂತೆ, ಕರ್ನಾಟಕ ರಾಜ್ಯದಲ್ಲಿ ದಿನಾಂಕ 25.06.2008ರಲ್ಲಿ 40,021 ಮೆಟ್ರಿಕ ಟನ್‌ನಷ್ಟು DAP ದಾಸ್ತಾನು ಇದೆ ಎಂದು ತೋರಿಸಿದೆ. ಆದರೆ ವಾಸ್ತವವಾಗಿ ಇದು ಸರಿಯಿಲ್ಲ. Iam telling you. ಜವಾಬ್ದಾರಿಯಿಂದ ನಾನು ನಿಮಗೆ ಹೇಳುತ್ತಿದ್ದೇನೆ. ವೆಬ್‌ಸೈಟ್‌ನಲ್ಲಿ ತೋರಿಸುತ್ತಿರುವ ಅಂಕಿ-ಅಂಶ ಸರಿಯಲ್ಲ. ಉದಾಹರಣೆಗೆ ಹೇಳುವುದಾದರೆ, ಧಾರವಾಡ ಜಿಲ್ಲೆಯಲ್ಲಿ ಭಾರತ ಸರ್ಕಾರದ ವೆಬ್‌ಸೈಟಿನ ಮಾಹಿತಿಯಂತೆ, 5,547 ಮೆಟ್ರಿಕ್ ಟನ್ ದಾಸ್ತಾನು ಇದೆ ಎಂದು ತೋರಿಸಲಾಗುತ್ತಿದೆ. ವಾಸ್ತವವಾಗಿ ಧಾರವಾಡ ಜಿಲ್ಲೆಯಲ್ಲಿ 100 ಮೆಟ್ರಿಕ್ ಟನ್ ಮಾತ್ರ ದಾಸ್ತಾನು ಇದೆ. ಹಾಗೆಯೇ ದಾವಣಗೆರೆ ಜಿಲ್ಲೆಯಲ್ಲಿ ವೆಬ್‌ಸೈಟ್ ಮಾಹಿತಿಯಂತೆ 5,880 ಮೆಟ್ರಿಕ್ ಟನ್ ದಾಸ್ತಾನು ತೋರಿಸುತ್ತಿದ್ದಾರೆ. ಆದರೆ ಜಿಲ್ಲೆಯಲ್ಲಿ ಕೇವಲ 300 ಮೆಟ್ರಿಕ್ ಟನ್‌ನಷ್ಟು ದಾಸ್ತಾನು ಮಾತ್ರ ಲಭ್ಯವಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ವೆಬ್‌ಸೈಟ್ ಮಾಹಿತಿಯಂತೆ, 5,602 ಮೆಟ್ರಿಕ್ ಟನ್‌ನಷ್ಟು ದಾಸ್ತಾನು ಇದೆ ಎಂದು ಹೇಳುತ್ತಿದ್ದಾರೆ. ಆದರೆ ಆ ಜಿಲ್ಲೆಯಲ್ಲಿ ವಾಸ್ತವಿಕವಾಗಿ 3,500 ಮೆಟ್ರಿಕ್ ಟನ್‌ನಷ್ಟು ದಾಸ್ತಾನು ಇದೆ. ಇದರಲ್ಲಿ 2,200 ಮೆಟ್ರಿಕ್ ಟನ್ ದಾಸ್ತಾನು ಕೇಂದ್ರ ಸರ್ಕಾರದಿಂದ ಮೊನ್ನೆ ದಿನಂಕ 23.06.2008ರ ರಾತ್ರಿಯಷ್ಟೇ ಗುಲ್ಬರ್ಗಾ ತಲುಪಿದೆ. ಇದರಲ್ಲಿ 2000 ಮೆಟ್ರಿಕ್ ಟನ್‌ನಷ್ಟು ಶೋರಾಪುರ ಮತ್ತು ಶಹಾಪುರದಲ್ಲಿ ದಾಸ್ತಾನಿದ್ದು, ಇದು ಆ ತಾಲ್ಲೂಕಿನಲ್ಲಿ ಅವಶ್ಯಕತೆ ಇರುತ್ತದೆ, ಅದನ್ನು ಬೇರೆ ಕಡೆಗೆ ವರ್ಗಾಯಿಸುವುದಕ್ಕೆ ಬರುವುದಿಲ್ಲ. ಆದರೆ ಬೆಳಗಾವಿ ಜಿಲ್ಲೆಯಲ್ಲಿ ವೆಬ್‌ಸೈಟ್ ಮಾಹಿತಿಯಂತೆ, 5321 ಮೆಟ್ರಿಕ್

ಟನ್‌ನಷ್ಟು ದಾಸ್ತಾನಿದೆ ಎಂದು ತೋರಿಸುತ್ತಿದ್ದಾರೆ. ಆದರೆ ಅಲ್ಲಿ 700 ಮೆಟ್ರಿಕ್ ಟನ್‌ನಷ್ಟು ದಾಸ್ತಾನು ಮಾತ್ರ ಲಭ್ಯವಿದೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಭಾರತ ಸರ್ಕಾರದ ವೆಬ್‌ಸೈಟ್ ಆಧರಿಸಿ, ಅಂಕಿ-ಅಂಶಗಳನ್ನೇನು ತಾವು ನೀಡಿದ್ದೀರಿ, ಇದು ಸರಿಯಲ್ಲ. ಕೇಂದ್ರ ಸರ್ಕಾರದ ವೆಬ್‌ಸೈಟಿಗೂ ವಾಸ್ತವಾಂಶಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎಂದು ಜವಾಬ್ದಾರಿಯಿಂದ ಇಲ್ಲಿ ನಿಂತು ನಾನು ಹೇಳುತ್ತಿದ್ದೇನೆ. ಆದ್ದರಿಂದ ಬನ್ನಿ ಅದಕೋಸ್ಕರ, ಈ ಎಲ್ಲಾ ಸಂಗತಿಗಳನ್ನು ನಾನು ಅಧ್ಯಕ್ಷರ ಕೊಠಡಿಯಲ್ಲಿ ಅಥವಾ ನನ್ನ ಛೇಂಬರನಲ್ಲಿ, ನಮ್ಮೆಲ್ಲಾ ಅಧಿಕಾರಿಗಳನ್ನು ಕರೆಸಿಕೊಂಡು, ನಿಮ್ಮ ಹತ್ತಿರ ಮಾತನಾಡುವುದಕ್ಕೆ ಸಿದ್ಧನಾಗಿದ್ದೇನೆ. ಆದರಿಂದ ಇದರಲ್ಲಿ ಮುಚ್ಚುಮರೆ ಮಾಡುವಂತಾದ್ದು ಏನೂ ಇಲ್ಲ. ಅಂಕಿ-ಅಂಶಗಳನ್ನು ಮುಚ್ಚುಮರೆ ಮಾಡುವಂತಹ ಅಗತ್ಯ ನನಗೇನಿದೆ? ಆದ್ದರಿಂದ ಈ ವೆಬ್‌ಸೈಟ್‌ನಲ್ಲಿ ಬಂದಿರುವಂತಹ ಅಂಕಿ-ಅಂಶಗಳನ್ನು ಆಧಾರವಾಗಿಟ್ಟುಕೊಂಡು ತಾವು ಮಾತನಾಡುವಂತಹ ಅಗತ್ಯವಿಲ್ಲ. ಈಗೊಂದು ಗಂಟೆ ಮುಂಚೆ ವೆಬ್‌ಸೈಟಿನಲ್ಲಿ ಇದ್ದಂತಹ ಮಾಹಿತಿಗಳೇನಿವೆ, ಅದಕ್ಕೂ ವಾಸ್ತವಿಕ ಸ್ಥಿತಿಗೂ ಏನು ವ್ಯತ್ಯಾಸವಿದೆ ಎನ್ನುವುದನ್ನು ನಿಮ್ಮ ಗಮನಕ್ಕೆ ತರುವಂತಹ ಪ್ರಯತ್ನವನ್ನು ನಾನು ಮಾಡಿದ್ದೇನೆ. ನಾನು ತಮಗೆ ವಿನಂತಿ ಮಾಡುತ್ತೇನೆ. ಅಧ್ಯಕ್ಷರು 15 ದಿವಸದಲ್ಲಿ ಅಥವಾ ಇನ್ನೊಂದು ವಾರದಲ್ಲಿ ಎಲ್ಲರನ್ನೂ ಸಂಪರ್ಕ ಮಾಡಿ, ಯಾರನ್ನು ಈ ಸಮಿತಿಯಲ್ಲಿ ಹಾಕಬೇಕೆಂದು ನಿರ್ಧರಿಸುತ್ತಾರೆ. ಸಮಿತಿ ಮಾಡುವುದು ಬಹಳ ಮುಖ್ಯವಲ್ಲ. ಆದರೆ ಆ ಸಮಿತಿಯಲ್ಲಿ ಕೆಲಸ ಮಾಡುವುದಕ್ಕೆ ಅವರಿಗೆ ಆಸಕ್ತಿ ಇರಬೇಕು. ಆಸಕ್ತಿಯಿಂದ ಸಮಿತಿ ಕೆಲಸ ಮಾಡಿ ನಮಗೊಂದು ವರದಿಯನ್ನು ಕೊಟ್ಟರೆ, ಇದರಿಂದ ನಮ್ಮ ರಾಜ್ಯದ ಈ ಸಮಸ್ಯೆಗೆಪರಿಹಾರವೊಂದು ಸಿಕ್ಕಿದರೆ, ಬಹುಶಃ ರೈತನ ಮಗನಾಗಿ ನಾನು ಸಂತೋಷಪಡುವಷ್ಟು ಬೇರೆ ಯಾರೂ ಸಂತೋಷ ಪಡುವುದಿಲ್ಲ. ದಯಮಾಡಿ ಸಹಕರಿಸಿ. ಮುಂದಿನ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಅತ್ಯಂತ ವಿನಯದಿಂದ ನಾನು

ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಯಾವುದೇ ಸಮಯದಲ್ಲಿ ತಾವು ದೂರವಾಣಿ ಮುಖಾಂತರ ಸಂಪರ್ಕ ಮಾಡಿ, ಯಡಿಯೂರಪ್ಪನವರೆ, ಇಂತಹದ್ದು ಆಗಬೇಕು ಎಂದರೆ, ಪಕ್ಷಭೇದ ಮರೆತು, ರಾಜ್ಯದ ರೈತರ ಹಿತದೃಷ್ಟಿಯಿಂದ ಆ ಕೆಲಸ ಮಾಡಿಸುತ್ತೇನೆ. ನಾನು ಇದರಲ್ಲಿ ರಾಜಕಾರಣ ಮಾಡಲಿಕೆ ಇಷ್ಟಪಡುವುದಿಲ್ಲ. ಚುನಾವಣೆ ಮುಗಿದು ಹೇಗಿದೆ, ನಾವೆಲ್ಲಾ ಪಕ್ಷದ ಒಂದು ಕಪಿಮುಷ್ಠಿಯಿಂದ ಹೊರಗೆ ಬಂದು, ರಾಜ್ಯ ಹಿತದೃಷ್ಟಿಯಿಂದ ಯೋಚನೆ ಮಾಡೋಣವೆಂದು ವಿನಯಪೂರ್ವಕವಾಗಿ ನಾನು ತಮ್ಮಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ, ದಯಮಾಡಿ ಹೋಗಿ ಸ್ವಾಮಿ ಸಹಕರಿಸಿ. ಸಾಕಷ್ಟು ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೀರಿ, ಇಷ್ಟ್ಟ ದೊಡ್ಡ ಸಂಖ್ಯೆಯಲ್ಲಿರುವವರು ಯಾವ ರೀತಿಯಾಗಿ ಪ್ರತಿಭಟನೆ ಮಾಡಬೇಕು ರಾಜ್ಯದ ಜನತೆಗೆ ಏನು ಹೇಳಬೇಕೆಂಬುದನ್ನು ಹೇಳಿದ್ದೀರಿ, ನಾನೇನು ಹೇಳಬೇಕು ಅದನ್ನು ಹೇಳಿದ್ದೇನೆ. ಇವತ್ತು ರಾಜ್ಯದ ಜನರು ಪ್ರಜ್ಞಾವಂತರಿದ್ದಾರೆ, ಯಾವುದು ಸರಿ ಯಾವುದು ತಪ್ಪು, ಯಾರು ರಾಜಕಾರಣ ಮಾಡುತ್ತಿದ್ದಾರೆ, ಏಕೆ ಹಾಗ ಮಾಡುತ್ತಿದ್ದಾರೆ, ಎಲ್ಲಾ ಸಂಗತಿಗಳು ಗೊತ್ತಿವೆ. ನಾನು ಈ ಕುರ್ಚಿಗೆ ಬಂದು 26 ದಿವಸಗಳಾಗಿವೆ, ಒಬ್ಬ ಮುಖ್ಯಮಂತ್ರಿಯಾಗಿ ಸಹಕರಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತಾ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ತಿಳಿಸಬಯಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ನಾಳೆ ನಮ್ಮ ಮುಖ್ಯ ಕಾರ್ಯದರ್ಶಿಗಳನ್ನು ದೆಹಲಿಗೆ ರಸಗೊಬ್ಬರ ಕಾರ್ಖಾನೆಗಳ ಮಾಲೀಕರೊಡನೆ ಮಾತನಾಡುವುದಕ್ಕೆ ಕಳುಹಿಸುತ್ತಿದ್ದೇವೆ ಎಂದು ಹೇಳಿದರು. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದಿಷ್ಟೆ ಅವರು ಮುಖ್ಯಮಂತ್ರಿಗಳಾದ ಮೇಲೆ ಕೇಂದ್ರದ ರಸಗೊಬ್ಬರದ ಕಾರ್ಯದರ್ಶಿಗಳು ಬಂದಂಥ ಸಂದರ್ಭದಲ್ಲಿ, ಅದಕ್ಕಿಂತ ಮುಂಚೆ ರಸಗೊಬ್ಬರ ಕಾರ್ಖಾನೆಗಳ ಮಾಲೀಕರುಗಳನ್ನು ಕರೆಯಿಸಿ ಈಗಾಗಲೆ

ಮಾತನಾಡಿದ್ದಾರೆ, ಅವರು ಏನು ಎಇಳಿಸಿದ್ದಾರೆಂಬುದನ್ನು ಈ ಸಭೆಯ ಗಮನಕ್ಕೆತರುತ್ತಿಲ್ಲ. ನಮ್ಮ ವಿರೋಧಪಕ್ಷದ ನಾಯಕರು, ವಿರೋಧಪಕ್ಷಗಳ ಮೇಲೆ ಗೊಬೆ ಕೂರಿಸುವುದಕ್ಕೋಸ್ಕರ ಮುಖ್ಯಮಂತ್ರಿಗಳು ಸುಮ್ಮನೆ ಈ ರೀತಿ ಹೇಳುವ ಅಗತ್ಯವಿಲ್ಲ. ಕೇಂದ್ರ ಸರ್ಕಾರದಿಂದ ಜಿಲ್ಲಾವಾರು ಎಷ್ಟು ಗೊಬ್ಬರ ಬಂದಿದೆ, ಯಾವ್ಯಾವ ತಿಂಗಳಲ್ಲಿ ಎಷ್ಟೆಷ್ಟು ಬಂದಿದೆ, ಎಲ್ಲೆಲ್ಲಿ ವಿತರಣೆಯಾಗಿದೆ ಎಂಬುದನ್ನು ಸಭೆಯ ಮುಂದಿಡಿ ಎಂದು ನಿನ್ನೆಯಿಂದ ಕೇಳುತ್ತಿದ್ದೇವೆ, ಏಕೆ ಹೆದರಿಕೆ? ಇಡದಿರುವುದಕ್ಕೆ ಏನು ಕಾರಣ? ಏನಾದರು ಹೆದರಿಕೆ ಇದೆಯಾ? ಸುಮ್ಮನೆ ವೆಬ್ ಸೈಟದ್ದನ್ನು ತಂದು ಧಾರವಾಡದಲ್ಲಿದೆ, ಬೇರೆಡೆ ಹೀಗಿದೆ ಎಂದು ಮೂರ್ನಾಲ್ಕು ಉದಾಹರಣೆಗಳನ್ನು ಕೊಟ್ಟರೆ ಹೇಗೆ? ರಾಜ್ಯದಲ್ಲಿ ಕೃಷಿ ಇಲಾಖೆ ಏನಾದರು ಸತ್ತು ಹೋಗಿದೆಯಾ?

ಶ್ರೀ ಹೆಚ್.ಸಿ.ಬಾಲಕೃಷ್ಣ : ವೆಬ್ ಸೈಟನಲ್ಲಿ ಮಾಹಿತಿಯನ್ನು ಕೊಡುತ್ತಿರುವ ಅಧಿಕಾರಿ ಯಾರು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ತಿಳಿಸಬೇಕು. ವೆಬ್ ಸೈಟ್‌ನಲ್ಲಿ ಕೊಟ್ಟಿರುವ ಮಾಹಿತಿ ಸರಿ ಎಲ್ಲವೆಂದು ಹೇಳುತ್ತಾರಲ್ಲ, ಆ ಮಾಹಿತಿಯನ್ನು ಯಾರು ಕೊಟ್ಟರು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು [ಅಬಕಾರಿ ಮಂತ್ರಿಗಳು]: ಕೇಂದ್ರ ಸರ್ಕಾರದ ಕೃಷಿ ಇಲಾಖೆಯನ್ನು ಕೇಳಿ, Fertilizer Ministerನ್ನು ಕೇಳಿ [ಗೊಂದಲ]

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಕಟ್ಟಾ ಸುಬ್ರಮಣ್ಯ ನಾಯ್ಡುರವರಿಗೆ ಗೊಬ್ಬರದ ವಿಷಯ ಗೊತ್ತಿಲ್ಲ, ಅವರು ಬೆಂಗಳೂರಿನಲ್ಲಿರುವುದು, ಅಬಕಾರಿ ಮಂತ್ರಿಗಳಾಗಿದ್ದಾರೆ, ಅವರು ಆ ಖಾತೆಯನ್ನು ಚೆನ್ನಾಗಿ ನಡೆಸುತ್ತಾರೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು [ಅಬಕಾರಿ ಮಂತ್ರಿಗಳು]: ಯಾರ್ಯಾರು ತೈತರ ಮಕ್ಕಳು, ಯಾರು ಇಲ್ಲ ಎಂಬುದು ಜನಕ್ಕೆಲ್ಲಾ ಗೊತ್ತಾಗುತ್ತದೆ, ತಾವು ಬೆಳಗ್ಗೆ ಎದ್ದು ಎಷ್ಟು ಉಳುಮೆ ಮಾಡುತ್ತಿದ್ದೀರಿ, ಯಾರು ವ್ಯಾಪಾರ ಮಾಡುತ್ತಿದ್ದಾರೆಂಬುದು ಇಲ್ಲಿ ಇರುವವರಿಗೆಲ್ಲಾ ಗೊತ್ತಿದೆ.

ಅಧ್ಯಕ್ಷರು : ಈಗ ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ, ಈ ಬಗ್ಗೆ ಈಗ ಸಾಕಷ್ಟು ಹೇಳಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದರು. ನಾನು ನನ್ನ ಛೇಂಬರ್‌ಗೆ ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಮುಖ್ಯಮಂತ್ರಿಗಳು ಹಾಗು ಇನ್ನಿತರ ನಾಯಕರುಗಳನ್ನು ಕರೆಯಿಸಿ ಈ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ, ಈಗ ಅವರು ಒಂದು ಸಮಿತಿಯನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ತಾವು ಹೇಳಬೇಕಾದ್ದನ್ನು ಇಲ್ಲಿಯವರೆಗೆ ಹೇಳಿದ್ದೀರಿ, ಸರ್ಕಾರಕ್ಕೆ ಇವತ್ತು ಹೇಳುವುದು, ಒತ್ತಾಯ ಮಾಡುವುದು, ಧರಣಿ ಮಾಡುವುದು, ಸತ್ಯಾಗ್ರಹ ಮಾಡುವುದು ಎಲ್ಲವನ್ನೂ ನೀವು ಹೇಳಿದಿರಿ, ಈಗ ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು, ನಾನು ಈ ಬಗ್ಗೆ ಒಪನ್ ಆಗಿ ಇದ್ದೇನೆ ಮತ್ತು ಸಮಿತಿಯನ್ನು ರಚಿಸುತ್ತೇನೆ ಎನ್ನುವ ತಮ್ಮ ಅಭಿಪ್ರಾಯವನ್ನು ಕೂಡ ಹೇಳಿದ್ದಾರೆ, ಏನು ಅಂಕಿ ಸಂಖ್ಯೆಗಳಿದ್ದಾವೆ ಆ ಬಗ್ಗೆ ಚರ್ಚೆಯನ್ನು ಮಾಡೋಣವೆಂದು ಹೇಳಿದ್ದಾರೆ. ಅದಕ್ಕೆ ನಾನು ಹೇಳುವುದೇನೆಂದರೆ, ಇಲ್ಲಿಯವರೆಗೆ ಚರ್ಚೆಯಾಗಿದೆ, ಮುಂದೆ ಚರ್ಚೆ ಮಾಡುವ ವಿಷಯಗಳು ಸಾಕಷ್ಟಿದ್ದಾವೆ. ಅದಕ್ಕೆ ನಾನು ಒಂದು ವಿನಂತಿಯನ್ನು ಮಾಡುತ್ತೇನೆ, ದಯವಿಟ್ಟು ಇಲ್ಲಿಯವರೆಗೆ ತಾವು ಧರಣಿ ಸತ್ಯಾಗ್ರಹ ಮಾಡಿ ಸಾರ್ವಜನಿಕ ಮಹತ್ವವಿರುವ ವಿಷಯದ ಬಗ್ಗೆ ಚರ್ಚೆ ಮಾಡಿ, ರೈತರಿಗೆ ಆಗಿರುವ ಅನ್ಯಾಯದ ಬಗ್ಗೆ ತಾವೆಲ್ಲಾ ಹೇಳಿ, ಮತ್ತೆ ಇನ್ನು ಮುಂದೇನಾಗಬೇಕೆಂಬುದನ್ನು ಕೂಡ ಹೇಳಿ ಅವರ ಗಮನಕ್ಕೆ ತಂದಿದ್ದೀರಿ, ಇಡೀ ರಾಜ್ಯದ ಜನತೆಯ ಗಮನವನ್ನು ಸೆಳೆದಿದ್ದೀರಿ, ರೈತರ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದೀರಿ. ಅದಕ್ಕಾಗಿ ಈ ವಿಷಯವನ್ನು

VOL.2. F 4-9

ಇಲ್ಲಿಗೆ ಮುಕ್ತಾಯಗೊಳಿಸಿ ಮುಂದಿನ ಕಾರ್ಯಕಲಾಪಕ್ಕೆ ಹೋಗೋಣ, ತಾವು ದಯವಿಟ್ಟು ತಮ್ಮ ಆ ಸನಕ್ಕೆ ತೆರಳಿ ಮುಂದಿನ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಈಗಾಗಲೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಜಿ.ಬಿ.ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲೇನು ಒಂದು ಸಮಿತಿ ಇತ್ತು, ಆ ಸದನ ಸಮಿತಿ ಹಿಂದೆ ಈ ರೀತಿ ಆತ್ಮಹತ್ಯೆ ಪ್ರಕರಣಗಳು ನಡೆದೆಂಥ ಸಂದರ್ಭದಲ್ಲಿ ರಚಿಸಿದಂಥ ಸಮಿತಿ, ಆ ಸಂದರ್ಭದಲ್ಲಿ ನಾನು ಅದರ ಸದಸ್ಯನ್ನಾಗಿ ಕೆಲಸ ಮಾಡಿದ್ದೇನೆ, ವಿವರವಾದ ವರದಿಯನ್ನು ಕೊಟ್ಟಿದ್ದಾರೆ, ಆ ಒಂದು ಜಂಟಿ ಸದನ ಸಮಿತಿಯ ವರದಿಯನ್ನು ಬೇಕಾದರೆ ಇಲ್ಲಿ ಚರ್ಚೆ ಮಾಡಿ.

(ಗೊಂದಲ, ಈ ಸಂದರ್ಭದಲ್ಲಿ ಸದನದ ಬಾವಿಯಲ್ಲಿದ್ದ ಸದಸ್ಯರು ಘೋಷಣೆಗಳನ್ನು ಕೂಗಿದರು.)

ಅಧ್ಯಕ್ಷರು : ವೆಲ್‌ನಲ್ಲಿ ಮಾತನಾಡುವುದಕ್ಕೆ ನಿಯಮದ ಪ್ರಕಾರ ಅವಕಾಶವಿಲ್ಲ, ನಿಮ್ಮ ಸ್ಥಾನಕ್ಕೆ ಹೋಗಿ ಚರ್ಚೆ ಮಾಡಿ, ಘೋಷಣೆಗಳನ್ನು ಇಲ್ಲಿ ಕೂಗಬಾರದು.

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ಹಿರಿಯ ಸದಸ್ಯರಾದ ರೇವಣ್ಣನವರು ಅಂಕಿ-ಅಂಶಗಳ ವಿವರಗಳನ್ನು ಕೇಳಿದರು. ತಮಗೆ ಗೊತ್ತಿರುವಂತೆ ಜೂನ್ ತಿಂಗಳಿನಲ್ಲಿ ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಸರಬರಾಜಾಗಿರುವ ಮಾಹಿತಿಯನ್ನು ಕೊಡುತ್ತೇನೆ – ನಮಗೆ ಒಟ್ಟು 1,20,000 ಮೆಟ್ರಿಕ್ ಟನ್ DAP ಬರಬೇಕಾಗಿತ್ತು. 84,337 ಮೆಟ್ರಿಕ ಟನ್ ಬಂದಿರುವುದು, 20ನೇ ತಾರೀಖಿನ ಒಳಗಾಗಿ ಕಾಂಪ್ಲೆಕ್ಸ್ ಗೊಬ್ಬರ ಅವರು ಭರವಸೆ ಕೊಟ್ಟಂತೆ ಬರಬೇಕಾಗಿದ್ದು, 1,10,000 ಮೆಟ್ರಿಕ್ ಟನ್ ಬಂದದ್ದು 57,880 ಮೆಟ್ರಿಕ್ ಟನ್. ಈ ರಸಗೊಬ್ಬರ ಜಿಲ್ಲೆಗೆ ನೇರವಾಗಿ ಬರುತ್ತದೆ. ಜೂನ್ ತಿಂಗಳಿನಲ್ಲಿ ಜಿಲ್ಲಾವಾರು ಎಷ್ಟೆಷ್ಟು ಬಂತೆಂಬ ವಿವರನ್ನು ಕೊಡುತ್ತೇನೆ, ಬಾಗಲಕೋಟೆ ಜಿಲ್ಲೆಗೆ 1,651 ಮೆಟ್ರಿಕ್ ಟನ್ DAP

ಬಂದಿದೆ, ಕಾಂಪ್ಲೆಕ್ಸ್ 1,718 ಮೆಟ್ರಿಕ್ ಟನ್ ಬಂದಿದೆ, ಬೆಂಗಳೂರು ರೂರಲ್ ನಲ್ಲಿ 1,236 ಮೆಟ್ರಿಕ್ ಟನ್ DAP ಬಂದಿದೆ, ಕಾಂಪ್ಲೆಕ್ಸ್ 590 ಮೆಟ್ರಿಕ್ ಟನ್ ಬಂದಿದೆ, ಬೆಂಗಳೂರು ಅರ್ಬನ್‌ನಲ್ಲಿ 944 ಮೆಟ್ರಿಕ್ ಟನ್ DAP ಬಂದಿದೆ, ಕಾಂಪ್ಲೆಕ್ಸ್ 2,201 ಮೆಟ್ರಿಕ್ ಟನ್ ಬಂದಿದೆ. ಬೆಳಗಾಂನಲ್ಲಿ DAP 6,831ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 6,574 ಮೆಟ್ರಿಕ್ ಟನ್ ಬಂದಿದೆ, ಬಳ್ಳಾರಿಯಾಲ್ಲಿ DAP 3,594 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 4,807 ಮೆಟ್ರಿಕ್ ಟನ್ ಬಂದಿದೆ, ಬೀದರ್‌ಗೆ DAP 5,635 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 293 ಮೆಟ್ರಿಕ್ ಟನ್ ಬಂದಿದೆ, ಬಿಜಾಪುರದಲ್ಲಿ DAP 2,568 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 1,906 ಮೆಟ್ರಿಕ್ ಟನ್ ಬಂದಿದೆ, ಚಾಮರಾಜನಗರಕ್ಕೆ DAP 250 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 115 ಮೆಟ್ರಿಕ್ ಟನ್ ಬಂದಿದೆ, ಚಿಕ್ಕಬಳ್ಳಾಪುರಕ್ಕೆ DAP 966 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 673 ಮೆಟ್ರಿಕ್ ಟನ್ ಬಂದಿದೆ, ಚಿಕ್ಕಮಗಳೂರಿಗೆ DAP 626 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 2,214 ಮೆಟ್ರಿಕ್ ಟನ್ ಬಂದಿದೆ, ಚಿತ್ರದುರ್ಗಕ್ಕೆ DAP 3,494 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 1,618 ಮೆಟ್ರಿಕ್ ಟನ್ ಬಂದಿದೆ, ದಾವಣಗೆರೆಗೆ DAP 8,003 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 4,488 ಮೆಟ್ರಿಕ್ ಟನ್ ಬಂದಿದೆ, ಧಾರವಾಡ ಜಿಲ್ಲಿಗೆ DAP 8,901 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 791 ಮೆಟ್ರಿಕ್ ಟನ್ ಬಂದಿದೆ, ಗದಗ ಜಿಲ್ಲೆಗೆ DAP 3,536 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 657 ಮೆಟ್ರಿಕ್ ಟನ್ ಬಂದಿದೆ, ಗುಲ್ಬರ್ಗ ಜಿಲ್ಲೆಗೆ DAP 13,003 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 1,992 ಮೆಟ್ರಿಕ್ ಟನ್ ಬಂದಿದೆ, ಹಾಸಸ ಜಿಲ್ಲೆಗೆ DAP 980 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 7,784 ಮೆಟ್ರಿಕ್ ಟನ್ ಬಂದಿದೆ, ಹಾವೇರಿ ಜಿಲ್ಲೆಗೆ DAP 5,489 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 1,942 ಮೆಟ್ರಿಕ್ ಟನ್ ಬಂದಿದೆ, ಕೊಡಗು

ಜಿಲ್ಲೆಗೆ DAP 488 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 1,640 ಮೆಟ್ರಿಕ್ ಟನ್ ಬಂದಿದೆ, ಕೋಲಾರ ಜಿಲ್ಲೆಗೆ DAP 1,359 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 688 ಮೆಟ್ರಿಕ್ ಟನ್ ಬಂದಿದೆ, ಕೊಪ್ಪಳಕ್ಕೆ DAP 2,416 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 1,465 ಮೆಟ್ರಿಕ್ ಟನ್ ಬಂದಿದೆ, ಮಂಡ್ಯ ಜಿಲ್ಲೆಗೆ DAP 666 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 2,192 ಮೆಟ್ರಿಕ್ ಟನ್ ಬಂದಿದೆ, ಮೈಸೂರು ಜಿಲ್ಲೆಗೆ DAP 535 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 2,142 ಮೆಟ್ರಿಕ್ ಟನ್ ಬಂದಿದೆ, ಉತ್ತರ ಕರ್ನಾಟಕಕ್ಕೆ DAP 651 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 230 ಮೆಟ್ರಿಕ್ ಟನ್ ಬಂದಿದೆ, ರಾಯಚೂರು ಜಿಲ್ಲೆಗೆ DAP 5,666 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 945 ಮೆಟ್ರಿಕ್ ಟನ್ ಬಂದಿದೆ, ರಾಮನಗರಂ ಜಿಲ್ಲೆಗೆ DAP 235 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 350 ಮೆಟ್ರಿಕ್ ಟನ್ ಬಂದಿದೆ, ಶಿವಮೊಗ್ಗ ಜಿಲ್ಲೆಗೆ DAP 2,445 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 4,519 ಮೆಟ್ರಿಕ್ ಟನ್ ಬಂದಿದೆ, ದಕ್ಷಿಣ ಕನ್ನಡಕ್ಕೆ DAP 198 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 530 ಮೆಟ್ರಿಕ್ ಟನ್ ಬಂದಿದೆ, ತುಮಕೂರು ಜಿಲ್ಲೆಗೆ DAP 2,270 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 2,416 ಮೆಟ್ರಿಕ್ ಟನ್ ಬಂದಿದೆ, ಉಡುಪಿ ಜಿಲ್ಲೆಗೆ DAP 110 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 400 ಮೆಟ್ರಿಕ್ ಟನ್ ಬಂದಿದೆ, ಒಟ್ಟು DAP 84,337 ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 57,880 ಮೆಟ್ರಿಕ್ ಟನ್ ಬಂದಿದೆ, ಅಂದರೆ ಈ ತಿಂಗಳ 20ನೇ ತಾರೀಖಿನಿನೊಳಗೆ ಭರವಸೆ ಕೊಟ್ಟಂತೆ 1.20ಲಕ್ಷ ಮೆಟ್ರಿಕ್ ಟನ್ ಬರಲಿಲ್ಲ. 84,337 ಮೆಟ್ರಿಕ್ ಟನ್ ಮಾತ್ರ ಬಂದಿದೆ. ಅದೇ ರೀತಿ ಕಾಂಪ್ಲೆಕ್ಸ್ 1.10 ಲಕ್ಷ ಮೆಟ್ರಿಕ್ ಟನ್ ಬರುವ ಕಡೆ 57,880 ಮೆಟ್ರಿಕ್ ಟನ್ ಬಂದಿದೆ. ಇಲ್ಲಿ ಎಷ್ಟೆಷ್ಟು ವಿತರಣೆ ಆಗಿದೆ ಎನ್ನುವಂಥದ್ದು ಪ್ರತಿನಿತ್ಯ ಪ್ರೊಸೀಜರ್‌ನಂತೆ ಅಲ್ಲಿ ವಿತರಣೆ ಆಗುತ್ತಿದೆ. ಇದು as on today

ಹೇಳಿರುವಂಥದ್ದು. DAP ಮತ್ತು ಕಾಂಪ್ಲೆಕ್ಸ್ ಮಳೆಯಾದ ಜಿಲ್ಲೆಗಳಲ್ಲಿ ಬಂದ ಹಾಗೆ ಎರಡು-ಮೂರು ಜಿಲ್ಲೆಗಳಲ್ಲಿ ಮಾರಾಟವಾಗುತ್ತಿದೆ. ಬೇರೆ ಜಿಲ್ಲೆಗಳಲ್ಲಿ ಈಗ ಮಳೆ ಪ್ರಾರಂಭವಾಗುತ್ತಿದೆ. ಅಲ್ಲಿಯೂ ಬೇಡಿಕೆ ಬರುತ್ತಿದೆ. ಬೇಡಿಕೆಯಷ್ಟು ಸರಬರಾಜು ಮಾಡುವುದಕ್ಕೆ ಆಗುತ್ತಿಲ್ಲ. 20,608ರೊಳಗೆ ಕೇಂದ್ರ ಸರ್ಕಾರ ಭರವಸೆ ನೀಡಿರುವಷ್ಟು ಬಂದಿದ್ದರೆ ಈ ಸಮಸ್ಯೆ ಇರುತ್ತಿರಲಿಲ್ಲ. ಅದಕ್ಕಾಗಿ ನಾಳೆ ಮುಖ್ಯ ಕಾರ್ಯದರ್ಶಿಯವರಿಗೆ ಕಳುಹಿಸಿ ಕೊಡುತ್ತಿದ್ದೇವೆ ರಸಗೊಬ್ಬರ ತಯಾರಕರ ಜೊತೆ ಕುಳಿತು ಕರ್ನಾಟಕ ರಾಜ್ಯಕ್ಕೆ ಆದ್ಯತೆ ಕೊಡಬೇಕೆಂದು ಹೇಳುತ್ತಿದ್ದೇವೆ. ಈ ಎಲ್ಲ ಘಟನಾವಳಿಗಳು ನಮ್ಮ ಕಾಂಗ್ರೆಸ್ ಸ್ನೇಹಿತರೇ ಬಾವಿಯಲ್ಲಿ ಕುಳಿತಿರುವುದು ಕೇಂದ್ರ ಸರ್ಕಾರಕ್ಕೆ ಗೊತ್ತಿಲ್ಲವೇನು? ನಮ್ಮವರೇ ಹೀಗೆಲ್ಲಾ ಮಾಡುತ್ತಿದ್ದಾರೆಂದು ಅವರೇ ಜಾಗೃತರಾಗಿ ಮುಖ್ಯ ಕಾರ್ಯದರ್ಶಿಯವರಿಗೆ ಕಳುಹಿಸಿ ಕೊಡಿ ಎಂದು ಕರೆಸಿದ್ದಾರೆ. ಬಹುಶಃ ಅವರು ನಿಮಗೆ ಕಿವಿ ಮಾತು ಹೇಳಬಹುದು. ಅದು ನಮ್ಮ ತಪ್ಪು ನೀವೇಕೆ ವೆಲ್‌ನಲ್ಲಿ ಕುಳಿತು ನಮ್ಮನ ಹರಾಜು ಹಾಕುತ್ತಿದ್ದೀರಿ? ಎಂದು ನಿಮಗೆ ಬುದ್ಧಿ ಹೇಳಬಹುದು. ಆದ್ದರಿಂದ ನೀವು ಈಗಲಾದರೂ ನಿಮ್ಮ ಸ್ಥಾನಕ್ಕೆ ಹೋಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಅವರು ಈಗ ವಿವರಗಳನ್ನು ಹೇಳಿದರು. ಈಗಾಗಲೇ ಸರ್ಕಾರದ ಕಡೆಯಿಂದ ಅವರು ಏನು ಹೇಳಬೇಕು ಅದನ್ನು ಹೇಳಿದ್ದಾರೆ. ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ. ದಯವಿಟ್ಟು ತಾವು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಮುಂದಿನ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅನುಕೂಲ ಮಾಡಿಕೊಡಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ದಯಮಾಡಿ ಸ್ಟಾಕ್ ಏನಿದೆ ಎಂದು ಹೇಳಲಿ.

ಅಧ್ಯಕ್ಷರು : ಆಗಲೇ ಹೇಳಿದರಲ್ಲ?

ಶ್ರೀ ಹೆಚ್.ಡಿ.ರೇವಣ್ಣ : ಬರೀ ಗೊಬ್ಬರ ಬಂದರೆ ಸಾಲದು, ದಯಮಾಡಿ ಇವತ್ತಿನ ಸ್ಟಾಕ್ ಏನಿದೆ ಎಂದು ಹೇಳಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ಮಾನ್ಯ ಅಧ್ಯಕ್ಷರೆ, ಅವರು ಸೇಲ್ಸ್ ಎಷ್ಟು ಆಗಿದೆ ಎಂದು ಹೇಳಿದ್ದಾರೆ. ಬಂದಿದ್ದು ಆಯಿತು ತೆಗೆದುಕೊಂಡಿದ್ದು ಆಯಿತು. ರಿಲೀಸ್ ಆಯಿತು, ಅವೈಲಬಿಲಿಟಿ ಆಯಿತು. What is the sale? ಕನ್‌ಸಮ್‌ಷನ್ ಏನು? ಅವರಿಗೆಲ್ಲ ರಕ್ಷಣೆ ಕೊಡುವವರು.

ಅಧ್ಯಕ್ಷರು : ಅದನ್ನು ಚರ್ಚೆ ಮಾಡೋಣವೆಂದು ಹೇಳಿದ್ದಾರೆ. ಪ್ರತಿಯೊಂದು ಜಿಲ್ಲೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ನಾಳೆ ಸಭೆ ಕರೆದು ಅಲ್ಲಿ ಚರ್ಚೆ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ಮಾನ್ಯ ಅಧ್ಯಕ್ಷರೆ, ಬಂದ ಹಾಗೆಯೇ ಖರ್ಚಾಗುತ್ತಿದೆ. ಸೇಲ್ ಬಗ್ಗೆ ಸಹ ನಾನು ಸಾಯಂಕಾಲ ಸಭೆ ಮುಗಿಯುವುದರೊಳಗಾಗಿ ಅಂಕಿ ಅಂಶಗಳನ್ನು ಕೊಡುತ್ತೀನೆ. ಏನೂ ತೊಂದರೆ ಇಲ್ಲ. ನಾವು ಮುಚ್ಚಿಡುವಂಥದ್ದು ಏನೂ ಇಲ್ಲ. ಸಾಯಂಕಾಲದ ಒಳಗೆ ಎಲ್ಲಿ ಗೊಬ್ಬರ ಇತ್ತು, ಎಷ್ಟು ಖರ್ಚಾಗಿದೆ ಎನ್ನುವುದನ್ನು ಈ ಸದನ ಮುಗಿಯುವುದರೊಳಗಾಗಿ ಅಂಕಿ ಅಂಶಗಳನ್ನು ಕೊಡುತ್ತೇನೆ.

ಅಧ್ಯಕ್ಷರು : ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ಎಲ್ಲ ವಿಚಾರಗಳನ್ನು ಹೇಳಿದಿರಿ, ಈ ವಿಷಯವನ್ನು ನಾನು ಇಲ್ಲಿಗೆ ಮುಕ್ತಾಯಗೊಳಿಸಿದ್ದೇನೆ. ಅಜೆಂಡಾ ಪ್ರಕಾರ ಮುಂದಿನ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ[ರಾಮನಗರ] : ಈ ಸರ್ಕಾರ ಪದೇ ಪದೇ ಕೇಂದ್ರ ಸರ್ಕಾರದ ಮೇಲೆ ತಪ್ಪು ಹೊರಿಸಲಿಕ್ಕೆ ಪ್ರಯತ್ನ

ಮಾಡುತ್ತಿದೆ. ಈ ಸರ್ಕಾರದ ಧೋರಣೆಯನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಜೆ.ಡಿ(ಎಸ್) ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅಧ್ಯಕ್ಷರು : ಈಗ ಕಾಗದ ಪತ್ರಗಳನ್ನು ಮಂಡಿಸುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ಮಾನ್ಯ ಅಧ್ಯಕ್ಷರೆ ನನ್ನ ಹೆಸರಿನ ಮುಂದೆ ಇರುವ ಈ ಕೆಳಕಂಡ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಕಲಂ 89ನೇ ಪ್ರಕರಣದ ಮೇರೆಗೆ:

1. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಸಂಡಿಗೆ ಹಾಗೂ ಉಪ್ಪಿನ ಕಾಯಿ (Sandige & Pickles)ನ ಮಾರಾಟದ ಮೇಲಿನ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 15.05.2007ರಂದು ಹೊರಡಿಸಲಾದ ಎಫ್‌ಡಿ/161/ಸಿಎಸ್‌ಎಲ್/2007ನೇ ಸಂಖ್ಯೆಯ ಅಧಿಸೂಚನೆ.
2. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ತಂಬಾಕು ಹಾಗೂ ಬೀಡಿಗಳ ಮಾರಾಟದ ಮೇಲಿನ ತೆರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 15.05.2007ರಂದು ಹೊರಡಿಸಲಾದ ಎಫ್‌ಡಿ/157/ಸಿಎಸ್‌ಎಲ್/2007ನೇ ಸಂಖ್ಯೆಯ ಅಧಿಸೂಚನೆ.
3. 2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ನಿಯಮಾವಳಿಗಳಿಗೆ ದಿನಾಂಕ 01.04.2007ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ

ದಿನಾಂಕ 26.07.2007ರಂದು ಹೊರಡಿಸಲಾದ ಎಫ್‌ಡಿ/165/ಸಿಎಸ್ ಎಲ್/2007ನೇ ಸಂಖ್ಯೆಯ ಅಧಿಸೂಚನೆ.

4. 2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ನಿಯಮಾವಳಿಗಳಿಗೆ ತಿದ್ದುಪಡಿ ಮಾಡಿ ದಿನಾಂಕ 26.07.2007ರ ಅಧಿಸೂಚನೆ ಸಂಖ್ಯೆ ಎಫ್‌ಡಿ/165/ಸಿಎಸ್‌ಎಲ್/2007ಕ್ಕೆ ಸಂಬಂಧಿಸಿದಂತೆ ದಿನಾಂಕ 29.09.2007ರಂದು ಹೊರಡಿಸಲಾದ ಎಫ್‌ಡಿ/165/ಸಿಎಸ್ ಎಲ್/2007ನೇ ಸಂಖ್ಯೆಯ ತಿದ್ದೋಲೆ.

5. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿಯಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯ ಮೂಲಕ ಮಾರಾಟ ಮಾಡುವ ಉದ್ದೇಶದಿಂದ ಖರೀದಿಸಲಾಗುವ ಸೀಮೆ ಎಣ್ಣೆಯ ಮೇಲಿನ ತೆರಿಗೆಯನ್ನು ಮಾರಾಟ ಮಾಡುವ ಸಂದರ್ಭದಲ್ಲಿ ಪಾವತಿಸಲಾಗುವ ಮಾರಾಟ ತೆರಿಗೆಗೆ ಸೀಮಿತಗೊಳಿಸುವ ಕುರಿತು ದಿನಾಂಕ 23.10.2007ರಂದು ಹೊರಡಿಸಲಾದ ಎಫ್‌ಡಿ/283/ಸಿಎಸ್ ಎಲ್/2007ನೇ ಸಂಖ್ಯೆಯ ಅಧಿಸೂಚನೆ.

6. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ, ಇಟ್ಟಿಗೆ ಮತ್ತು ಟೈಲ್ಸ್ ತಯಾರಿಕೆಯ ಮೇಲಿನ ತೆರಿಗೆಗೆ ಸಂಬಂಧಿಸಿದಂತೆ ಹೊರಡಿಸಲಾದ ದಿನಾಂಕ 30.04.2005ರ ಅಧಿಸೂಚನೆ ಸಂಖ್ಯೆ ಎಫ್‌ಡಿ/197/ಸಿಎಸ್‌ಎಲ್/2005(5)ಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 07.12.2007ರಂದು ಹೊರಡಿಸಲಾದ ಎಫ್‌ಡಿ/297/ಸಿಎಸ್‌ಎಲ್/2007ನೇ ಸಂಖ್ಯೆಯ ಅಧಿಸೂಚನೆ.

7. 2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ನಿಯಮಾವಳಿಗಳ ನಿಯಮ 34(3)ಕ್ಕೆ (ದಿನಾಂಕ 01.04.2007 ಹಾಗೂ 31.03.2007) ವಿವಿಧ ದಿನಾಂಕಗಳಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 24.01.2008 ರಂದು ಹೊರಡಿಸಲಾದ ಎಫ್‌ಡಿ/426/ ಸಿಎಸ್‌ಎಲ್/2007ನೇ ಸಂಖ್ಯೆಯ ಅಧಿಸೂಚನೆ.

8. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಭತ್ಯ, ಅಕ್ಕಿ, ಗೋಧಿ, ದ್ವಿದಳ ಧಾನ್ಯ, ಹಿಟ್ಟು, ಅಕ್ಕಿ-ಗೋಧಿ, ರವೆ ಹಾಗೂ ಗೋಧಿ ಮೈದಾ ಇವುಗಳ ಮಾರಾಟದ ಮೇಲಿನ ತೆರಿಗೆಗೆ ದಿನಾಂಕ 01.04.2008ರಿಂದ ಜಾರಿಗೆ ಬರುವಂತೆ ಹಾಗು ದಿನಾಂಕ 01.03.2009ರವರೆಗೆ ವಿನಾಯಿತಿ ನೀಡಿ ದಿನಾಂಕ 20.03.2008 ರಂದು ಹೊರಡಿಸಲಾದ ಎಫ್‌ಡಿ/507/ಸಿಎಸ್‌ಎಲ್ /2007(3)ನೇ ಸಂಖ್ಯೆಯ ಅಧಿಸೂಚನೆ.

9. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ದಿನಾಂಕ 30.03.2007ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಡಿ/ 141/ಸಿಎಸ್‌ಎಲ್/2007(11)ಅಧಿಕ್ರಮಣಗೊಳಿಸುತ್ತಾ ಪ್ರಕರಣ 11, ಉಪಪ್ರಕರಣ (5) ಮತ್ತು (6)ರಡಿ ನಿಗದಿಗೊಳಿಸಲಾದ ಸರಕುಗಳ ಖರೀದಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ನಿವ್ವಳ ತೆರಿಗೆಯನ್ನು ಲೆಖ್ಖ ಹಾಕುಕುವಾಗ ಶೇ.2ಕ್ಕಿಂತ ಅಧಿಕವಾಗಿ ವಿಧಿಸಿದ ಹೂಡುವಳಿ ತೆರಿಗೆಯನ್ನು ಕಡಿತಗೊಳಿಸಲು ದಿನಾಂಕ 01.04.2008ರಿಂದ ಜಾರಿಗೆ ಬರುವಂತೆ ಅನುಮತಿಸಿದ ದಿನಾಂಕ 24.03.2008ರಂದು ಹೊರಡಿಸಲಾದ ಎಫ್‌ಡಿ/507/ಸಿಎಸ್‌ಎಲ್ /2007(4)ನೇ ಸಂಖ್ಯೆಯ ಅಧಿಸೂಚನೆ.

10. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಸ್ಯಾನಿಟರಿ ನ್ಯಾಪ್‌ಕಿನ್, ಬಯೋಮಾಸ್ ಸ್ಟೋಕ್‌ಲೆಸ್ ಸ್ಟವ್, ಬ್ಯಾಟರಿಗಳಿಂದ ಚಲಿಸುವ ಮೋಟಾರು ವಾಹನ, ಭಾರತೀಯ ರೈಲ್ವೆಗೆ ನೀಡುವ ಬ್ಯಾಟರಿಗಳು ಹಾಗೂ ಕ್ರಂಬ್ ರಬ್ಬರ್ ಮಾಡಿಫೈಡ್ ಬಿಟುಮೆನ್ (ಸಿಆರ್‌ಎಂಬಿ) ಇವುಗಳಿಗೆ ವರ್ತಕರು ಪಾವತಿಸಬೇಕಾದ ಮಾರಾಟ ತೆರಿಗೆಯನ್ನು ದಿನಾಂಕ 01.04.2008ರಿಂದ ಜಾರಿಗೆ ಬರುವಂತೆ ಶೇಕಡಾ 4ರಷ್ಟು ಕಡಿತಗೊಳಿಸಿ ದಿನಾಂಕ 24.03.2008ರಂದು ಹೊರಡಿಸಲಾದ ಎಫ್‌ಡಿ/507/ಸಿಎಸ್‌ಎಲ್/2007(5)ನೇ ಸಂಖ್ಯೆಯ ಅಧಿಸೂಚನೆ.

ವಿ.ಇ.ಸ.ಸ.ಸಂ

11. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಅಧಿಸೂಚನೆ ಸಂಖ್ಯೆ ಎಫ್‌ಡಿ/141/ಸಿಎಸ್ ಎಲ್/2007(1) ದಿನಾಂಕ 30.03.2007ಕ್ಕೆ ದಿನಾಂಕ 01.04.2008ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 25.03.2008ರಂದು ಹೊರಡಿಸಲಾದ ಎಫ್‌ಡಿ/507/ಸಿಎಸ್‌ಎಲ್/2007(6)ನೇ ಸಂಖ್ಯೆಯ ಅಧಿಸೂಚನೆ.

12. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಅಸ್ವಾಭಾವಿಕ. ಮದ್ಯಸಾರದ ಮಾರಾಟದ ಮೇಲಿನ ತೆರಿಗೆಯನ್ನು ದಿನಾಂಕ 01.04.2008ರಂದು ಜಾರಿಗೆ ಬರುವಂತೆ ಶೇಕಡಾ 4ರಷ್ಟು ಕಡಿತಗೊಳಿಸಿ ದಿನಾಂಕ 25.03.2008ರಂದು ಹೊರಡಿಸಲಾದ ಎಫ್‌ಡಿ/507/ಸಿಎಸ್‌ಎಲ್/2007(7)ನೇ ಸಂಖ್ಯೆಯ ಅಧಿಸೂಚನೆ.

13. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಇಥೈಲ್ ಆಲ್ಕೋಹಾಲ್, ಸುಧಾರಿತ ಮದ್ಯಸಾರ ಹಾಗೂ ಮೋಲಾಸಿಸ್‌ಗಳ ಮೇಲಿನ ಮಾರಾಟ ತೆರಿಗೆಯನ್ನು ದಿನಾಂಕ 01.04.2008ರಂದು ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 25.03.2008ರಂದು ಹೊರಡಿಸಲಾದ ಎಫ್‌ಡಿ/507/ಸಿಎಸ್‌ಎಲ್/2007(8)ನೇ ಸಂಖ್ಯೆಯ ಅಧಿಸೂಚನೆ.

14. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ದಿನಾಂಕ 30.03.2007ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಡಿ/115/ಸಿಎಸ್‌ಎಲ್/2007(16)ಅನ್ನು ತಕ್ಷಣದಿಂದ ಜಾರಿಗೆ ಬರುವಂತೆ ತಿದ್ದುಪಡಿಸಿ ದಿನಾಂಕ 25.03.2008ರಂದು ಹೊರಡಿಸಲಾದ ಎಫ್‌ಡಿ/294/ಸಿಎಸ್ ಎಲ್/2007ನೇ ಸಂಖ್ಯೆಯ ಅಧಿಸೂಚನೆ.

15. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ದಿನಾಂಕ 24.03.2008ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಡಿ/507/ಸಿಎಸ್‌ಎಲ್/2007(4)ನ್ನು ದಿನಾಂಕ 01.04.2008

ರಂದು ಜಾರಿಗೆ ಬರುವಂತೆ ರದ್ದುಪಡಿಸಿ ಹೂಡುವಳಿ ತೆರಿಗೆಯ ದರವನ್ನು ಪರಿಷ್ಕರಿಸಿ ದಿನಾಂಕ 01.04.2008ರಂದು ಹೊರಡಿಸಲಾದ ಎಫ್‌ಡಿ/507/ಸಿಎಸ್‌ಎಲ್/2007(9)ನೇ ಸಂಖ್ಯೆಯ ಅಧಿಸೂಚನೆ.

16. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ನಿಯಮಾವಳಿಗಳ ನಿಯಮ 56ಕ್ಕೆ ತಿದ್ದುಪಡಿ ಮಾಡಿ ದಿನಾಂಕ 20.05.2008ರಂದು ಹೊರಡಿಸಲಾದ ಎಫ್‌ಡಿ/67/ಸಿಎಸ್‌ಎಲ್/2008ನೇ ಸಂಖ್ಯೆಯ ಅಧಿಸೂಚನೆ.

1979 ಕರ್ನಾಟಕ ಭೋಗವಸ್ತುಗಳ ಮೇಲಿನ ತೆರಿಗೆಯ ಕಾಯ್ದೆ 20(ಎ)ರ ಪ್ರಕರಣದ ಮೇರೆಗೆ:

1979ರ ಕರ್ನಾಟಕ ಭೋಗವಸ್ತುಗಳ ಮೇಲಿನ ತೆರಿಗೆಯ ಕಾಯ್ದೆಯಡಿ ದಿನಾಂಕ 30.03.2007ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಡಿ/115/ಸಿಎಸ್‌ಎಲ್/2007(17)ಅನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ದಿನಾಂಕ 25.03.2008ರಂದು ಹೊರಡಿಸಲಾದ ಎಫ್‌ಡಿ/294/ಸಿಎಸ್‌ಎಲ್/2007ರ ಸಂಖ್ಯೆಯ ಅಧಿಸೂಚನೆ.

1957 ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಪ್ರಕರಣ 39ರ ಮೇರೆಗೆ :

1. ರಾಜ್ಯದಲ್ಲಿ ಸಕ್ಕರೆಯನ್ನು ತಯಾರಿಸುವ ಘಟಕಗಳು ಅಂತಿಮವಾಗಿ ಖರೀದಿಸಲಾದ ಕಬ್ಬಿನ ಮೇಲಿನ ತೆರಿಗೆ ಮತ್ತು ಉಪಕರಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ದಿನಾಂಕ 31.03.2008ರಂದು ವಿನಾಯಿತಿ ನೀಡಿ ದಿನಾಂಕ 04.06.2007ರಂದು ಹೊರಡಿಸಲಾದ ಎಫ್‌ಡಿ/195/ಸಿಎಸ್‌ಎಲ್ /2007ನೇ ಸಂಖ್ಯೆಯ ಅಧಿಸೂಚನೆ.
2. ಅಧಿಸೂಚನೆ ಸಂಖ್ಯೆ ಎಫ್‌ಡಿ/35/ಸಿಎಸ್‌ಎಲ್/1998(1) ದಿನಾಂಕ 01.08.1998ನ್ನು ದಿನಾಂಕ 01.01.2000ರಿಂದ ಜಾರಿಗೆ ಬರುವಂತೆ ಕೆಲವು ವಿನಾಯಿತಿಗಳೊಂದಿಗೆ ರದ್ದುಪಡಿಸಿ, ದಿನಾಂಕ 17.07.2007ರಂದು ಹೊರಡಿಸಲಾದ ಎಫ್‌ಡಿ/363/ ಸಿಎಸ್‌ಎಲ್/2006(1)ನೇ ಸಂಖ್ಯೆಯ ಅಧಿಸೂಚನೆ.
3. ಅಧಿಸೂಚನೆ ಸಂಖ್ಯೆ ಎಫ್‌ಡಿ/70/ಸಿಎಸ್‌ಎಲ್/1997(1) ದಿನಾಂಕ 12.11.1999ನ್ನು ದಿನಾಂಕ 01.01.2000ರಿಂದ ಜಾರಿಗೆ ಬರುವಂತೆ ಕೆಲವು ವಿನಾಯಿತಿಗಳೊಂದಿಗೆ ರದ್ದುಪಡಿಸಿ, ದಿನಾಂಕ 17.07.2007ರಂದು ಹೊರಡಿಸಲಾದ ಎಫ್‌ಡಿ/363/ ಸಿಎಸ್‌ಎಲ್/2006(2)ನೇ ಸಂಖ್ಯೆಯ ಅಧಿಸೂಚನೆ.
4. ಅಧಿಸೂಚನೆ ಸಂಖ್ಯೆ ಎಫ್‌ಡಿ/32/ಸಿಎಸ್‌ಎಲ್/1996(iii) ದಿನಾಂಕ 15.11.1996ನ್ನು ದಿನಾಂಕ 01.01.2000ರಿಂದ ಜಾರಿಗೆ ಬರುವಂತೆ ಕೆಲವು ವಿನಾಯಿತಿಗಳೊಂದಿಗೆ ರದ್ದುಪಡಿಸಿ, ದಿನಾಂಕ 17.07.2007ರಂದು ಹೊರಡಿಸಲಾದ ಎಫ್‌ಡಿ/363/ ಸಿಎಸ್‌ಎಲ್/2006(3)ನೇ ಸಂಖ್ಯೆಯ ಅಧಿಸೂಚನೆ.
5. ಅಧಿಸೂಚನೆ ಸಂಖ್ಯೆ ಎಫ್‌ಡಿ/32/ಸಿಎಸ್‌ಎಲ್/1996(i) ದಿನಾಂಕ 15.11.1996ನ್ನು ದಿನಾಂಕ 01.01.2000ರಿಂದ ಜಾರಿಗೆ ಬರುವಂತೆ ಕೆಲವು ವಿನಾಯಿತಿಗಳೊಂದಿಗೆ ರದ್ದುಪಡಿಸಿ, ದಿನಾಂಕ 17.07.2007ರಂದು ಹೊರಡಿಸಲಾದ ಎಫ್‌ಡಿ/363/ ಸಿಎಸ್‌ಎಲ್/2006(4)ನೇ ಸಂಖ್ಯೆಯ ಅಧಿಸೂಚನೆ.

6. ಅಧಿಸೂಚನೆ ಸಂಖ್ಯೆ ಎಫ್‌ಡಿ/32/ಸಿಎಸ್‌ಎಲ್/1998(i i), ದಿನಾಂಕ 01.08.1998ನ್ನು ದಿನಾಂಕ 01.01.2000ರಿಂದ ಜಾರಿಗೆ ಬರುವಂತೆ ಕೆಲವು ವಿನಾಯಿತಿಗಳೊಂದಿಗೆ ರದ್ದುಪಡಿಸಿ, ದಿನಾಂಕ 17.07.2007ರಂದು ಹೊರಡಿಸಲಾದ ಎಫ್‌ಡಿ/363/ ಸಿಎಸ್‌ಎಲ್/2006(7)ನೇ ಸಂಖ್ಯೆಯ ಅಧಿಸೂಚನೆ.

7. ದಿನಾಂಕ 17.07.2007ರಂದು ಅಧಿಸೂಚನೆ ಸಂಖ್ಯೆ ಎಫ್‌ಡಿ/ 363/ಸಿಎಸ್‌ಎಲ್/2006(1)ನೇ ಸಂಖ್ಯೆಯ ಅಧಿಸೂಚನೆ. ತಿದ್ದುಪಡಿ ಮಾಡಿ ದಿನಾಂಕ 10.09.2007ರಂದು ಹೊರಡಿಸಲಾದ ಎಫ್‌ಡಿ/363/ಸಿಎಸ್‌ಎಲ್/2006ನೇಸಂಖ್ಯೆಯು ತಿದ್ದೋಲೆ.

8. ದಿನಾಂಕ 21.05.2007ರಂದು ಅಧಿಸೂಚನೆ ಸಂಖ್ಯೆ ಎಫ್‌ಡಿ/97/ಸಿಎಸ್‌ಎಲ್/2007ಕ್ಕೆ ತಿದ್ದುಪಡಿ ಮಾಡಿ ದಿನಾಂಕ 10.09.2007ರಂದು ಹೊರಡಿಸಲಾದ ಎಫ್‌ಡಿ/97/ಸಿಎಸ್‌ಎಲ್ /2007ನೇ ಸಂಖ್ಯೆಯ ತಿದ್ದೋಲೆ.

9. ಕರ್ನಾಟಕ ರಾಜ್ಯದಲ್ಲಿ ಮೀನುಗಾರರಿಗೆ ಸಂಬಂಧಪಟ್ಟಂತೆ ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಿಗೆ ಬಳಸುವ ಡೀಸಲ್ ಮೇಲಿನ ಮಾರಾಟ ತೆರಿಗೆಯನ್ನು ದಿನಾಂಕ 01.04.2008 ರಿಂದ ಜಾರಿಗೆ ಬರುವಂತೆ ಕೆಲವು ವಿನಾಯಿತಿ ನೀಡಿ ದಿನಾಂಕ 20.03.2008ರಂದು ಹೊರಡಿಸಲಾದ ಎಫ್‌ಡಿ/507/ಸಿಎಸ್‌ಎಲ್/2007(1)ನೇಸಂಖ್ಯೆಯ ಅಧಿಸೂಚನೆ.

10. ಕರ್ನಾಟಕ ರಾಜ್ಯದಲ್ಲಿ ಖರೀದಿಸಲಾದ ಕಬ್ಬಿನ ಮೇಲಿನ ತೆರಿಗೆಯನ್ನು ದಿನಾಂಕ 01.04.2008ರಿಂದ ಜಾರಿಗೆ ಬರುವಂತೆ ಹಾಗೂ ದಿನಾಂಕ 31.07.2008ರವರೆಗೆ ವಿನಾಯಿತಿ ನೀಡಿ ದಿನಾಂಕ 20.03.2008 ರಂದು ಹೊರಡಿಸಲಾದ ಎಫ್‌ಡಿ/507/ ಸಿಎಸ್‌ಎಲ್/2007(2)ನೇ ಸಂಖ್ಯೆಯ ಅಧಿಸೂಚನೆ.

11. ಕರ್ನಾಟಕ ರಾಜ್ಯದಲ್ಲಿ ಉಡಾವಣೆ ಟಬ್ಯೆನು ಇಂಧನಕ್ಕೆ(ಎಟಿಎಫ್) ಸಂಬಂಧಿಸಿದಂತೆ ತಕ್ಷಣದಿಂದ ಜಾರಿಗೆ ಬರುವಂತೆ ಮಾರಾಟ ತೆರಿಗೆಯನ್ನು ವಿನಾಯಿತಿಗೊಳಿಸಿ ದಿನಾಂಕ 02.04.2008ರಂದು ಹೊರಡಿಸಲಾದ ಎಫ್‌ಡಿ/491/ ಸಿಎಸ್‌ಎಲ್/2007(ಪಿ)ನೇ ಸಂಖ್ಯೆಯ ಅಧಿಸೂಚನೆ.

1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ:

1. 1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ನಿಯಮಾವಳಿಗಳ ನಿಯಮ 9ಎ ಹಾಗೂ ನಿಯಮ 100ಗಳಿಗೆ ದಿನಾಂಕ 01.04.2007 ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 30.08.2007 ರಂದು ಹೊರಡಿಸಲಾದ ಎಫ್‌ಡಿ/13/ಸಿಇಟಿ/2007ನೇ ಸಂಖ್ಯೆಯ ಅಧಿಸೂಚನೆ.
2. 1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆಯಡಿ ಕಲಂ 5ಃ(5)ರಲ್ಲಿ ತೆರಿಗೆಯನ್ನು ಪಾವತಿ ಮಾಡುವ ಕಡೆಯ ದಿನಾಂಕದ ಕುರಿತು ದಿನಾಂಕ 20.08.2007 ರಂದು ಹೊರಡಿಸಲಾದ ಎಫ್‌ಡಿ/5/ಸಿಇಟಿ/2007 ಸಂಖ್ಯೆಯ ಅಧಿಸೂಚನೆ.
3. 1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆಯಡಿ ಕೆಲವು ಸರಕುಗಳಿಗೆ ತೆರಿಗೆ ವಿನಾಯತಿ ನೀಡಿ ದಿನಾಂಕ 23.04.2008ರಂದು ಹೊರಡಿಸಲಾದ ಎಫ್‌ಡಿ/5/ಸಿಇಟಿ/2008 (1)ನೇ ಸಂಖ್ಯೆಯ ಅಧಿಸೂಚನೆ.

2004ರ ಕರ್ನಾಟಕ ಸರಕುಗಳ ಪ್ರವೇಶ ವಿಶೇಷ ತೆರಿಗೆ ಕಾಯ್ದೆ 15(3)ರ ಪ್ರಕರಣದ ಮೇರೆಗೆ:

2004ರ ಕರ್ನಾಟಕ ಸರಕುಗಳ ಪ್ರವೇಶ ವಿಶೇಷ ತೆರಿಗೆ ಕಾಯ್ದೆಯಡಿ ಕೆಲವು ಸರಕುಗಳಿಗೆ ತೆರಿಗೆ ವಿನಾಯತಿ ನೀಡಿ ದಿನಾಂಕ 23.04.2008ರಂದು ಹೊರಡಿಸಲಾದ ಎಫ್‌ಡಿ/5/ಸಿಎಟಿ/2008(2)ನೇ ಸಂಖ್ಯೆಯ ಅಧಿಸೂಚನೆ.

1976ರ ಕರ್ನಾಟಕ ವೃತ್ತಿ, ವ್ಯಾಪಾರಗಳು, ಕಸುಬುಗಳು ಮತ್ತು ಉದ್ಯೋಗಗಳ ತೆರಿಗೆಗಳು ಕಾಯ್ದೆ ಕಲಂ 33(3)ರ ಪ್ರಕರಣದ ಮೇರೆಗೆ :

1976ರ ಕರ್ನಾಟಕ ವೃತ್ತಿ, ವ್ಯಾಪಾರಗಳು, ಕಸುಬುಗಳು ಮತ್ತು ಉದ್ಯೋಗಗಳ ತೆರಿಗೆಗಳು ನಿಯಾಮಗಳಿಗೆ ದಿನಾಂಕ 01.04.2007ರಿಂದು ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ದಿನಾಂಕ 30.08.2007ರಂದು ಹೊರಡಿಸಲಾದ ಎಫ್‌ಡಿ/166/ಸಿಎಸ್‌ಎಲ್/2007ನೇ ಸಂಖ್ಯೆಯ ಅಧಿಸೂಚನೆ.

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 8(3) ಪ್ರಕರಣದ ಮೇರೆಗೆ :

1. 2007ರ ಕರ್ನಾಟಕ ಸರ್ಕಾರದ ಸಚಿವಾಲಯ ಸೇವೆಗಳು (ನೇಮಕಾತಿ)(ತಿದ್ದುಪಡಿ) ನಿಯಮಗಳ ಅನುಸೂಚಿಗೆ ತಿದ್ದುಪಡಿ ಮಾಡಿ ದಿನಾಂಕ 09.10.2007ರಂದು ಹೊರಡಿಸಲಾದ ಡಿಪಿಎಆರ್/77/ಎಸ್‌ಆರ್‌ಡಿ/2006ನೇ ಸಂಖ್ಯೆಯ ಅಧಿಸೂಚನೆ.
2. 1977ರ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳ ನಿಯಮ 13ಕ್ಕೆ ತಿದ್ದುಪಡಿ ಮಾಡಿ ದಿನಾಂಕ 05.11.2007ರಂದು ಹೊರಡಿಸಲಾದ

ಡಿಪಿಎಆರ್/142/ಎಸ್ಆರ್ ಆರ್/2006ನೇ ಸಂಖ್ಯೆಯ ಅಧಿಸೂಚನೆ.

3. 1974ರ ಕರ್ನಾಟಕ ನಾಗರೀಕ ಸೇವೆಗಳು (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳ ಅನುಸೂಚಿ 1 ಹಾಗೂ 2ಕ್ಕೆ ತಿದ್ದುಪಡಿ ಮಾಡಿ ದಿನಾಂಕ 26.04.2008ರಂದು ಹೊರಡಿಸಲಾದ ಡಿಪಿಎಆರ್/4/ಎಸ್ಆರ್ಆರ್/ 2007ನೇ ಸಂಖ್ಯೆಯ ಅಧಿಸೂಚನೆ.

4. 1992ರ ಕರ್ನಾಟಕ ಸರ್ಕಾರ ಸಚಿವಾಲಯದ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳ ಅನುಸೂಚಿಗೆ ತಿದ್ದುಪಡಿ ಮಾಡಿ ದಿನಾಂಕ 11.07.2007 ರಂದು ಹೊರಡಿಸಲಾದ ಡಿಪಿಎಆರ್/27/ಎಸ್ಆರ್ಡಿ/ 2005ನೇ ಸಂಖ್ಯೆಯ ಅಧಿಸೂಚನೆ.

1956ರ ಕಂಪನಿ ಅಧಿನಿಯಮ 619 (ಎ)(2) ಪ್ರಕರಣದ ಮೇರೆಗೆ :

1. ಶ್ರೀ ಕಂಠೀರವ ಸ್ಟುಡಿಯೋ ನಿಯಮಿತ, ಬೆಂಗಳೂರು ಇದರ 2006–07ನೇ ಸಾಲಿನ 41ನೇ ವಾರ್ಷಿಕ ವರದಿ.

2. ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ 2006–07ನೇ ಸಾಲಿನ 29ನೇ ವಾರ್ಷಿಕ ವರದಿ.

3. ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ 2995–06ನೇ ಸಾಲಿನ 33ನೇ ವಾರ್ಷಿಕ ವರದಿ.

4. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ 2006–07ನೇ ಸಾಲಿನ 36ನೇ ವಾರ್ಷಿಕ ವರದಿ.

5. ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ 2006–07ನೇ ಸಾಲಿನ 4ನೇ ವಾರ್ಷಿಕ ವರದಿ.

1974ರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆಯ ಕಂಡಿಕೆ 40(7)ರ ಹಾಗೂ 39(2)ರ ಮೇರೆಗೆ :

1. ಕರ್ನಾಟಕ ರಾಜ್ಯ ಮಾಲಿನ್ಯ ನಿವಾರಣೆ ನಿಯಂತ್ರಣ ಮಂಡಳಿಯ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ವಾರ್ಷಿಕ ವರದಿ.

2002ರ ಭಾರತ ಸರ್ಕಾರದ ಜೈವಿಕ ಅಧಿನಿಯಮದ ಅನುಚ್ಛೇದ 35ರ ಮೇರೆಗೆ :

1. ಕರ್ನಾಟಕ ಜೀವಿ ವೈವಿಧ್ಯ ಮಂಡಳಿಯ 2003–04, 2004–05 ಮತ್ತು 2005–06ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ವರದಿ.

1985ರ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ 13ರ ಪ್ರಕರಣದ ಮೇರೆಗೆ:

1. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ.

Vol. 2 F. 51

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ 48 ಮತ್ತು 49ನೇ ಪ್ರಕರಣದ ಮೇರೆಗೆ :

1. ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ.
2. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ.
3. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ.
4. ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ.
5. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2001–02, 2002–03 ಹಾಗೂ 2003–04ನೇ ಸಾಲಿನ ವಾರ್ಷಿಕ ವರದಿ.
6. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2005–06 ಹಾಗೂ 2006–07ನೇ ಸಾಲಿನ ವಾರ್ಷಿಕ ವರದಿ ಹಾಗೂ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
7. ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2004–05, 2005–06, 2006–07 ಮತ್ತು 2007–08ನೇ ಸಾಲಿನ ವಾರ್ಷಿಕ ವರದಿ.
8. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
9. ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
10. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

11. ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

12. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ 2005–06ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ. ಹಾಗೂ 2006–07ನೇ ಸಾಲಿನ ವಾರ್ಷಿಕ ವರದಿ.

13. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2001–02 ಹಾಗೂ 2005–06ನೇ ಸಾಲಿನ ವಾರ್ಷಿಕ ವರದಿ ಹಾಗೂ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

14. ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ.

15. ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ 2001–02 ಹಾಗೂ 2005–06ನೇ ಸಾಲಿನ ವಾರ್ಷಿಕ ವರದಿ ಹಾಗೂ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

16. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

17. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ವಾರ್ಷಿಕ ವರದಿ.

18. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ

19. ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

20. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

21. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ 2007–08ನೇ ಸಾಲಿನ ವಾರ್ಷಿಕ ವರದಿ.

1973ರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಯ್ದೆಯ ಕಲಂ 39ರ ಮೇರೆಗೆ:

1. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು 2006–07ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ವಿ.ಎಸ್. ಆಚಾರ್ಯ [ಗೃಹ ಸಚಿವರು] : ಮಾನ್ಯ ಅಧ್ಯಕ್ಷರೆ ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1964ರ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ರ ಪ್ರಕರಣದ ಮೇರೆಗೆ :

1. ಬಳ್ಳಾರಿ ಜಿಲ್ಲೆ ದೋಣಿಮಲೈನಲ್ಲಿರುವ ನ್ಯಾಷನಲ್ ಮಿನರಲ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಆಡಿಟೋರಿಯಂನಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ಹಾಗೂ ಸಾರ್ವತ್ರಿಕ ರಜಾ ದಿನಗಳಿಗೆ ಮಾತ್ರ ಸೀಮಿತಗೊಳಿಸಿ ದಿನಾಂಕ 31.12.2007ರವರೆಗೆ ಕೆಲವು ಷರತ್ತುಗೊಳಪಟ್ಟು 35 ಎಂಎಂ ಚಲನಚಿತ್ರವನ್ನು ಪ್ರದರ್ಶಿಸಲು ಕಲಂ 20ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಲಂ 4 ರಿಂದ ವಿನಾಯಿತಿ ನೀಡಿ ಅನುಮತಿ ನೀಡಲಾಗಿರು ದಿನಾಂಕ 30.05.2007ರಂದು ಹೊರಡಿಸಲಾದ ಹೆಚ್‌ಡಿ/17/ಸಿಎನ್‌ಎ/2007ನೇ ಸಂಖ್ಯೆಯ ಅಧಿಸೂಚನೆ.
2. ಮೈಸೂರು ಜಿಲ್ಲೆ ಹೆಬ್ಬಾಳ ಕೈಗಾರಿಕಾ ಪ್ರದೇಶದ ಪ್ಲಾಟ್ ನಂಬರ್ 384ರಲ್ಲಿ ಮೆಃ ಇನ್ಫೋಸಿಸ್ ಟೆಕ್ನಾಲಜಿ ಸಂಸ್ಥೆ ನಿರ್ಮಿಸಿರುವ ಆಡಿಟೋರಿಯಂನಲ್ಲಿ ಉದ್ಯೋಗಸ್ಥರ

ಮನರಂಜನೆಗಾಗಿ ಶನಿವಾರ ಮತ್ತು ಭಾನುವಾರದ ದಿನಗಳಿಗೆ ಮಾತ್ರ ಸೀಮಿತಗೊಳಿಸಿ ದಿನಾಂಕ 02.06.2008ರವರೆಗೆ ಮಾತ್ರ ಚಲನಚಿತ್ರವನ್ನು ಪ್ರದರ್ಶಿಸಲು ಕಲಂ 20ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಲಂ 4 ರಿಂದ ವಿನಾಯಿತಿ ನೀಡಿ ಅನುಮತಿ ನೀಡಲಾಗಿರು ದಿನಾಂಕ 17.08.2007ರಂದು ಹೊರಡಿಸಲಾದ ಹೆಚ್‌ಡಿ/17/ಸಿಎನ್‌ಎ/2007ನೇ ಸಂಖ್ಯೆಯ ಅಧಿಸೂಚನೆ.

ಅಧ್ಯಕ್ಷರು : ಮಂಡಿಸಲಾಯಿತು.

ವಿಶ್ವೇಶ್ವರ ಹೆಗಡೆ ಕಾಗೇರಿ [ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ :

2005ರ ಕರ್ನಾಟಕ ನಾಗರೀಕ ಸೇವೆಗಳು (ಸರ್ಕಾರಿ ಪ್ರೌಢಶಾಲೆಗಳಲ್ಲಿ, ಸಹಾಯಕ ಶ್ರೇಣಿ–II , ದೈಹಿಕ ಶಿಕ್ಷಕರು ಶ್ರೇಣಿ– II, ಮತ್ತು ಕ್ರಾಫ್ಟ್ ಶಿಕ್ಷಕರ ವೃಂದಗಳಲ್ಲಿ ಅರೆಕಾಲಿಕ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವವರನ್ನು ರಾಜ್ಯ ನಾಗರೀಕ ಸೇವೆಗಳಲ್ಲಿ ವಿಲೀನಗೊಳಿಸುವಿಕೆ) (ವಿಶೇಷ ನಿಯಮಗಳು) ನಿಯಮಗಳನ್ನು ರಚಿಸಿ, ದಿನಾಂಕ28.06.2006ರಂದು ಹೊರಡಿಸಲಾದ ಇಡಿ/16/ಎಸ್‌ಎಲ್‌ಬಿ/1996ನೇ ಸಂಖ್ಯೆಯ ಅಧಿಸೂಚನೆ.

2006ರ ಕರ್ನಾಟಕ ಶಿಕ್ಷಣ ಇಲಾಖೆ ಸೇವಾ (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳಲ್ಲಿನ ಅನುಸೂಚಿಗೆ ತಿದ್ದುಪಡಿ ಮಾಡಿ ದಿನಾಂಕ17.06.2006ರಂದು ಹೊರಡಿಸಲಾದ ಇಡಿ/82/ಎಸ್‌ಎಲ್‌ಬಿ/2003ನೇ ಸಂಖ್ಯೆಯ ಅಧಿಸೂಚನೆ.

1983ರ ಕರ್ನಾಟಕ ಶಿಕ್ಷಣಅಧಿನಿಯಮ (1995ರ ಕರ್ನಾಟಕ ಅಧಿನಿಯಮ-1) 145(4)ರ ಪ್ರಕರಣದ ಮೇರೆಗೆ :

1. 2006ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ (ಹಸ್ತಾಂತರ ಮತ್ತು ಸ್ಥಳಾಂತರ) ನಿಯಮಗಳನ್ನು ರೂಪಿಸಿ ದಿನಾಂಕ 17.04.2007ರಂದು ಹೊರಡಿಸಲಾದ ಇಡಿ/13/ಎಸ್ಇಎಸ್/2006ನೇ ಸಂಖ್ಯೆಯ ಅಧಿಸೂಚನೆ.
2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ದಿನಾಂಕ 22.03.2004 ರಿಂದ 29.03.2004 ರವರೆಗೆ ನಡೆಸಲಾದ ಎಸ್.ಎಸ್.ಎಲ್.ಸಿ. ಪರೀಕ್ಷಾ ಕಾರ್ಯಗಳ ಸುಲಲಿತ ನಿರ್ವಹಣೆಗಾಗಿ, ಉತ್ತರ ಪತ್ರಿಕೆಗಳು, ಗೌಪ್ಯ ಲಕೋಟೆಗಳು ವಿವಿಧ ರೀತಿಯ ನಮೂನೆಗಳು ಇತ್ಯಾದಿಗಳಿಗೆ ಅವಶ್ಯವಿರುವ ಬಿಳಿ ಕಾಗದ ಮತ್ತು ಕ್ರಾಫ್ಟ್ ಕಾಗದಗಳನ್ನು ತುರ್ತು ಸಂದರ್ಭವಿದ್ದುದರಿಂದ 1999ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಾವಳಿಗಳ ನಿಯಮ 4ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರದ ಸಂಸ್ಥೆಯಾದ ಎಂ.ಪಿ.ಎಂ (ಮೈಸೂರು ಪೇಪರ್ ಮಿಲ್ಸ್ ಲಿ.,)ನಿಂದ ಖರೀದಿಸಿರುವ ಕುರಿತು ಅನುಮತಿ ನೀಡಿ ದಿನಾಂಕ 17.09.2009 2007 ರಂದು ಹೊರಡಿಸಲಾದ ಇಡಿ/29/ಎಸ್ಎಕ್ಸ್ಎಂ/2003ನೇ ಸಂಖ್ಯೆಯ ಅಧಿಸೂಚನೆ.
3. ಶಿಕ್ಷಣ ಇಲಾಖೆಯ 05.05.2003ರಂದು ಹೊರಡಿಸಲಾದ ಅಧಿಸೂಚನೆ ಸಂ:ಇಡಿ/43/ವಿವಿಧ/2001ರ, ಪಟ್ಟಿಯಲ್ಲಿನ ಕ್ರಮ ಸಂಖ್ಯೆ – 3ನ್ನು ತಿದ್ದುಪಡಿ ಮಾಡಿರುವ ಬಗ್ಗೆ ದಿನಾಂಕ 25.08.2006 ರಂದು ಹೊರಡಿಸಲಾದ ಸಂ:ಇಡಿ/65/ವಿವಿಧ /2006ನೇ ಸಂಖ್ಯೆಯ ಅಧಿಸೂಚನೆ.

4. 2007ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಆಡಳಿತ ಮಂಡಳಿಯ ಅಧಿಕಾರ ಮತ್ತು ಕಾರ್ಯಗಳು ಹಾಗೂ ಕಾರ್ಯದರ್ಶಿಗಳ ಅಧಿಕಾರ ಮತ್ತು ಕರ್ತವ್ಯಗಳು) ನಿಯಮಗಳನ್ನು ರಚಿಸಿ ದಿನಾಂಕ 24.10.2007ರಂದು ಹೊರಡಿಸಲಾದ ಸಂ: ಇಡಿ/79/ವಿವಿಧ /2003(ಪಿ)ನೇ ಸಂಖ್ಯೆಯ ಅಧಿಸೂಚನೆ.

5. 2007ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ನಿಬಂಧನೆಗಳು ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳ ನಿಯಮ 12ಕ್ಕೆ ತಿದ್ದುಪಡಿ ಮಾಡಿರುವ ಬಗ್ಗೆ ದಿನಾಂಕ16.06.2007ರಂದುಹೊರಡಿಸಲಾದ ಇಡಿ/166/ಎಸ್ಎಲ್ಬಿ /2006ನೇ ಸಂಖ್ಯೆಯ ಅಧಿಸೂಚನೆ.

ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 1978ರ 8(3)ರ ಪ್ರಕರಣದ ಮೇರೆಗೆ :

1967ರ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಾವಳಿಗಳ ಅನುಸೂಚಿಗೆ ತಿದ್ದುಪಡಿ ಮಾಡಿ ದಿನಾಂಕ 19.02.2007ರಂದು ಹೊರಡಿಸಲಾದ ಇಡಿ/17/ಪಿಬಿಎಸ್ /2005ನೇ ಸಂಖ್ಯೆಯ ಅಧಿಸೂಚನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಬಿ.ಎನ್.ಬಚ್ಚೇಗೌಡ [ಕಾರ್ಮಿಕ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1978ರ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು ಅಧಿನಿಯಮದ 8(3)ರ ಪ್ರಕರಣದ ಮೇರೆಗೆ :

1984ರ ಕರ್ನಾಟಕ ರಾಜ್ಯ ಕಾರ್ಮಿಕ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು (ನೇಮಕಾತಿ) ನಿಯಮಗಳನ್ನು ರದ್ದುಪಡಿಸುತ್ತಾ 2007ರ ಹೊಸ ನಿಯಮಾವಳಿಗಳನ್ನು ರಚಿಸಿ ದಿನಾಂಕ 07.12.2007 ರಂದು ಹೊರಡಿಸಲಾದ ಎಲ್‌ಡಿ/176/ಎಲ್‌ಎಸ್‌ಐ/2006ನೇ ಸಂಖ್ಯೆಯ ಅಧಿಸೂಚನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 130ರ ಪ್ರಕರಣದ ಮೇರೆಗೆ :

1. 1960ರ ಸಹಕಾರ ಸಂಘಗಳ ನಿಯಮಾವಳಿಗಳ ನಿಯಮ 21ಎಗೆ ತಿದ್ದುಪಡಿ ಮಾಡಿ ದಿನಾಂಕ 06.11.2007 ರಂದು ಹೊರಡಿಸಲಾದ ಸಿಒ/105/ಸಿಎಲ್‌ಎಂ/2007ನೇ ಸಂಖ್ಯೆಯ ಅಧಿಸೂಚನೆ.
2. 1960ರ ಸಹಕಾರ ಸಂಘಗಳ ನಿಯಮಾವಳಿಗಳ ನಿಯಮಾವಳಿಗಳ ವಿವಿಧ ನಿಯಮಗಳಿಗೆ ತಿದ್ದುಪಡಿ ಮಾಡಿ ತತ್ಸಂಬಂಧವಾಗಿ ದಿನಾಂಕ 29.11.2007ರಂದು ಹೊರಡಿಸಲಾದ ಸಿಒ/223/ಸಿಎಲ್‌ಎಂ /2006ನೇ ಸಂಖ್ಯೆಯ ಅಧಿಸೂಚನೆ.

3. 1960ರ ಸಹಕಾರ ಸಂಘಗಳ ನಿಯಮಾವಳಿಗಳ ನಿಯಮಾ 17ಕ್ಕೆ ತಿದ್ದುಪಡಿಗಳನ್ನು ಮಾಡಿ ತತ್ಸಂಬಂಧವಾಗಿ ದಿನಾಂಕ 13.02.2008 ರಂದು ಹೊರಡಿಸಲಾದ ಸಿಒ/238/ಸಿಎಲ್‌ಎಂ/2007ನೇ ಸಂಖ್ಯೆಯ ಅಧಿಸೂಚನೆ.

1982ರ ಕೇಂದ್ರ ಚೀಟಿ ಅಧಿನಿಯಮ 89(3)ರ ಪ್ರಕರಣದ ಮೇರೆಗೆ :

1983ರ ಕರ್ನಾಟಕ ಚೀಟಿ ನಿಧಿ ನಿಯಮಾವಳಿಗಳ ಅಪೆಂಡಿಕ್ಸ್-ಖಖರ ಕ್ರಮಸಂಖ್ಯೆ(1)ರಲ್ಲಿರುವ ಶುಲ್ಕದ ತಿದ್ದುಪಡಿ ಮಾಡಿ ದಿನಾಂಕ 24.04.2008ರಂದು ಹೊರಡಿಸಲಾದ ಸಿಒ/156/ಸಿಎಲ್‌ಎಂ/ 2004ನೇ ಸಂಖ್ಯೆಯ ಅಧಿಸೂಚನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು [ಅಬಕಾರಿ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1965ರ ಕರ್ನಾಟಕ ಅಬಕಾರಿ ಕಾಯ್ದೆ 71(4)ರ ಪ್ರಕರಣದ ಮೇರೆಗೆ :

1. 1967ರ ಕರ್ನಾಟಕ ಅಬಕಾರಿ (ಮುಟ್ಟುಗೋಲಾದ ವಸ್ತುಗಳ ವಿಲೇವಾರಿ) ನಿಯಮಗಳ ನಿಯಮ 3,4 ಮತ್ತು 6ಕ್ಕೆ ತಿದ್ದುಪಡಿ ಮಾಡಿ ದಿನಾಂಕ 13.07.2007 ರಂದು ಹೊರಡಿಸಲಾದ ಎಫ್‌ಡಿ/6/ಪಿಇಎಸ್/ 2007ನೇ ಸಂಖ್ಯೆಯ ಅಧಿಸೂಚನೆ.
2. 1967ರ ಕರ್ನಾಟಕ ಅಬಕಾರಿ (ಮಾದಕ ವಸ್ತುಗಳ ಸ್ವಾಧೀನ, ಸಾಗಾಣಿಕ, ಆಮದು ಮತ್ತು ರಫ್ತು) ನಿಯಮಗಳ ನಿಯಮ 21ಕ್ಕೆ

Vol. XIX-52

ತಿದ್ದುಪಡಿ ಮಾಡಿ ದಿನಾಂಕ 14.08.2007ರಂದು ಹೊರಡಿಸಲಾದ ಎಫ್‌ಡಿ/13/ಪಿಇಎಸ್/2007 ನೇ ಸಂಖ್ಯೆಯ ಅಧಿಸೂಚನೆ.

3. 1987ರ ಕರ್ನಾಟಕ ಅಬಕಾರಿ (ಸಾರಾಯಿ ತಯಾರಿಕೆ ಮತ್ತು ಬಾಟ್ಲಿಂಗ್) ನಿಯಮಗಳನ್ನು ನಿರಸನಗೊಳಿಸಿರುವ ಬಗ್ಗೆ ದಿನಾಂಕ 03.09.2007ರಂದು ಹೊರಡಿಸಲಾದ ಎಫ್‌ಡಿ/10/ಪಿಇಎಸ್/2007(1) ನೇ ಸಂಖ್ಯೆಯ ಅಧಿಸೂಚನೆ.
4. 1967ರ ಕರ್ನಾಟಕ ಅಬಕಾರಿ (ಸಾರಾಯಿ ಮಾರಾಟ ಸನ್ನದುಗಳ ವಿಶೇಷ ಷರತ್ತುಗಳು) ನಿಯಮಗಳನ್ನು ನಿರಸನಗೊಳಿಸಿರುವ ಬಗ್ಗೆ ದಿನಾಂಕ 03.09.2007ರಂದ್ ಹೊರಡಿಸಲಾದ ಎಫ್‌ಡಿ/10/ಪಿಇಎಸ್/ 2007(2)ನೇ ಸಂಖ್ಯೆಯ ಅಧಿಸೂಚನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ರೇವೂನಾಯಕ ಬೆಳಮಗಿ [ಪಶುಸಂಗೋಪನೆ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1956ರ ಕಂಪನಿ ಅಧಿನಿಯಮ 619(ಎ)(2) ಪ್ರಕರಣದ ಮೇರೆಗೆ :

1. ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತದ 2006–07ನೇ ಸಾಲಿನ 33ನೇ ವಾರ್ಷಿಕ ವರದಿ.
2. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ 2006–07ನೇ ಸಾಲಿನ ವಾರ್ಷಿಕ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಜಿ.ಜನಾರ್ಧನ ರೆಡ್ಡಿ [ಪ್ರವಾಸೋದ್ಯಮ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1956ರ ಕಂಪನಿ ಅಧಿನಿಯಮ 619(ಎ)(2) ಪ್ರಕರಣದ ಮೇರೆಗೆ :

1. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ 2006-07ನೇ ಸಾಲಿನ 37ನೇ ವಾರ್ಷಿಕ ವರದಿ.
2. ಅರಣ್ಯ, ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ, ಬೆಂಗಳೂರು ಇದರ 2006-07ನೇ ಸಾಲಿನ 27ನೇ ವಾರ್ಷಿಕ ವರದಿ.
3. ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ 2006-07ನೇ ಸಾಲಿನ 13ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
4. ಬೆಂಗಳೂರು ಮೆಟ್ರೊ ರೈಲ್ ನಿಗಮ ನಿಯಮಿತದ 2006-07ನೇ ಸಾಲಿನ ವಾರ್ಷಿಕ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಎಸ್.ಎ.ರವೀಂದ್ರನಾಥ [ಕೃಷಿ ಸಚಿವರು]: ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1956ರ ಕಂಪನಿ ಅಧಿನಿಯಮ 619(ಎ)(2) ಪ್ರಕರಣದ ಮೇರೆಗೆ :

1. ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತದ 2006-07ನೇ ಸಾಲಿನ 34ನೇ ವಾರ್ಷಿಕ ವರದಿ.

2. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣ ಹಾಗೂ ರಫ್ತು ನಿಗಮ ನಿಯಮಿತದ 2006–07ನೇ ಸಾಲಿನ 11ನೇ ವಾರ್ಷಿಕ ವರದಿ.

3. ಮೈಸೂರು ಟೊಬ್ಯಾಕೊ ಕಂಪನಿ ನಿಯಮಿತದ 2006–07ನೇ ಸಾಲಿನ ವಾರ್ಷಿಕ ವರದಿ.

1963ರ ಕೃಷಿ ವಿಶ್ವವಿದ್ಯಾನಿಲಯ ಅಧಿನಿಯಮ ಕಲಂ 38(3)ರ ಪ್ರಕರಣದ ಮೇರೆಗೆ :

1. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 2006–07ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

ವಿಶ್ವೇಶ್ವರ ಹೆಗಡೆ ಕಾಗೇರಿ [ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1966ರ ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳ ಅಧಿನಿಯಮದ ಕಲಂ 25(3)ರನ್ವಯ:

1. ಕರ್ನಾಟಕ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ 2004–05ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಅರವಿಂದ ಎಸ್. ಲಿಂಬಾವಳಿ [ಉನ್ನತ ಶಿಕ್ಷಣ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

2000ದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಕಲಂ 47(4)ರ ಹಾಗೂ 50(2)ರ ಮೇರೆಗೆ :

1. ಕುವೆಂಪು ವಿಶ್ವವಿದ್ಯಾಲಯ ಜ್ಞಾನ ಸಹ್ಯಾದ್ರಿ–ಶಂಕರಘಟ್ಟದ 2004–05ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಮೈಸೂರು ವಿಶ್ವವಿದ್ಯಾಲಯದ 2006–07ನೇ ಸಾಲಿನ 91ನೇ ವಾರ್ಷಿಕ ವರದಿ ಹಾಗೂ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ಮಂಗಳೂರು ವಿಶ್ವವಿದ್ಯಾಲಯ 2005–06ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ ವಾರ್ಷಿಕ ವರದಿ.
4. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ 2006–07ನೇ ಸಾಲಿನ ವಾರ್ಷಿಕ ವರದಿ.
5. ಕುವೆಂಪು ವಿಶ್ವವಿದ್ಯಾಲಯ 2006–07ನೇ ಸಾಲಿನ 19ನೇ ವಾರ್ಷಿಕ ವರದಿ.
6. ಬೆಂಗಳೂರು ವಿಶ್ವವಿದ್ಯಾಲಯ 2005–06ನೇ ಸಾಲಿನ 41ನೇ ವಾರ್ಷಿಕ ವರದಿ.

1992ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಧಿನಿಯಮದ ಕಲಂ 26(3)ರ ಮೇರೆಗೆ :

1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 2005–06ನೇ ಸಾಲಿನ 10ನೇ ವಾರ್ಷಿಕ ವರದಿ.

1994ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಧಿನಿಯಮದ ಕಲಂ 25(2)ರ ಮೇರೆಗೆ :

1. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ 2006–07ನೇ ಸಾಲಿನ 9ನೇ ವಾರ್ಷಿಕ ವರದಿ.

1986ರ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯೂನಿವರ್ಸಿಟಿ ಅಧಿನಿಯಮದ ಕಲಂ 26(2)ರ ಮೇರೆಗೆ :

1. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯೂನಿವರ್ಸಿಟಿ, ನಾಗರಬಾವಿ, ಬೆಂಗಳೂರಿನ 2006–07ನೇ ಸಾಲಿನ ವಾರ್ಷಿಕ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಹೆಚ್.ಹಾಲಪ್ಪ [ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು]: ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1956ರ ಕಂಪನಿ ಅಧಿನಿಯಮದ 619(ಎ)(3)ಪ್ರಕರಣದ ಮೇರೆಗೆ :

1. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ 2006–07ನೇ ಸಾಲಿನ ವಾರ್ಷಿಕ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಆರ್. ಅಶೋಕ್ [ಸಾರಿಗೆ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1950ರ ರಸ್ತೆ ಸಾರಿಗೆ ಸಂಸ್ಥೆ ಅಧಿನಿಯಮದ (ಕೇಂದ್ರ)ಕಲಂ 35(2)ರ ಹಾಗೂ 33(4)ಪ್ರಕರಣದ ಮೇರೆಗೆ :

1. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ 2006–07ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ 2006–07ನೇ ಸಾಲಿನ 46ನೇ ವಾರ್ಷಿಕ ವರದಿ.
3. ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಗುಲ್ಬರ್ಗಾ ಇದರ 2006–07ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.
4. ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹುಬ್ಬಳ್ಳಿ ಇದರ 2006–07ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ 9ನೇ ವಾರ್ಷಿಕ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ [ಕೃಷಿ ಮಾರುಕಟ್ಟೆ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1962ರ ಉಗ್ರಾಣ ನಿಗಮ ಕಾಯ್ದೆಯ 31(2)ರ ಪ್ರಕರಣದ ಮೇರೆಗೆ :

1. ಕರ್ನಾಟಕ ರಾಜ್ಯ ಉಗ್ರಾಣ ನಿಗಮದ 2006–07ನೇ ಸಾಲಿನ 49ನೇ ವಾರ್ಷಿಕ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಡಿ.ಸುಧಾಕರ್ [ಸಮಾಜ ಕಲ್ಯಾಣ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1995ರ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶಗಳು, ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) ಅಧಿನಿಯಮ ಕಲಂ 2ರ ಮೇರೆಗೆ :

1. ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರ ಕಛೇರಿಯ 2006-07ನೇ ಸಾಲಿನ ವಾರ್ಷಿಕ ವರದಿ.

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ 2006-07ನೇ ಸಾಲಿನ 32ನೇ ವಾರ್ಷಿಕ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಮಮ್ತಾಜ್ ಆಲಿಖಾನ್ [ಅಲ್ಪಸಂಖ್ಯಾತರ ಮತ್ತು ವಕ್ಫ್ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ 2006-07ನೇ ಸಾಲಿನ 21ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಬಸವರಾಜ್ ಬೊಮ್ಮಾಯಿ [ಜಲಸಂಪನ್ಮೂಲ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 24 ಹಾಗೂ 25ರನ್ವಯ:

1. ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗದ ಇದರ 2006–07ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ತುಂಗಭದ್ರಾ ಯೋಜನೆ, ಮುನಿರಾಬಾದ್‌ನ 2006–07ನೇ ಸಾಲಿನ ವಾರ್ಷಿಕ ವರದಿ

3. ಮಲಪ್ರಭಾ ಮತ್ತು ಘಟಪ್ರಭಾ ಯೋಜನೆ, ಬೆಳಗಾವಿಯ 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

4. ಕಾವೇರಿ ಜಲಾನಯದ ಯೋಜನೆಗಳು, ಮೈಸೂರು 2006–07ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ 2006–07ನೇ ಸಾಲಿನ 13ನೇ ವಾರ್ಷಿಕ ವರದಿ.

2. ಕಾವೇರಿ ನೀರಾವರಿ ನಿಗಮ ನಿಯಮಿತದ 2006–07ನೇ ಸಾಲಿನ 4ನೇ ವಾರ್ಷಿಕ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಕೆ.ಎಸ್.ಈಶ್ವರಪ್ಪ [ಇಂಧನ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1956ರ ಕಂಪನಿ ಅಧಿನಿಯಮ 619(ಎ)(3) ಪ್ರಕರಣದ ಮೇರೆಗೆ :

1. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ 2006–07ನೇ ಸಾಲಿನ 8ನೇ ವಾರ್ಷಿಕ ವರದಿ.

2. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ 2006–07ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

VOL. XLII

3. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2006–07ನೇ ಸಾಲಿನ 5ನೇ ವಾರ್ಷಿಕ ವರದಿ.

4. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2006–07ನೇ ಸಾಲಿನ 5ನೇ ವಾರ್ಷಿಕ ವರದಿ.

5. ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ 2006–07ನೇ ಸಾಲಿನ 5ನೇ ವಾರ್ಷಿಕ ವರದಿ.

6. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 2006–07ನೇ ಸಾಲಿನ 37ನೇ ವಾರ್ಷಿಕ ವರದಿ.

7. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ 2006–07ನೇ ಸಾಲಿನ 2ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಸಿ.ಎಂ.ಉದಾಸಿ [ಲೋಕೋಪಯೋಗಿ ಸಚಿವರು] : ಮಾನ್ಯ ಅಧ್ಯಕ್ಷರೆ,

<u>1956ರ ಕಂಪನಿ ಅಧಿನಿಯಮ 619(ಎ)(2) ಪ್ರಕರಣದ ಮೇರೆಗೆ :</u>

1. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 2006–07ನೇ ಸಾಲಿನ 8ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಪಿ.ಎಂ. ನರೇಂದ್ರಸ್ವಾಮಿ [ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು] : ಮಾನ್ಯ ಅಧ್ಯಕ್ಷರೆ,

<u>1956ರ ಕಂಪನಿ ಅಧಿನಿಯಮ 619(ಎ)(2) ಪ್ರಕರಣದ ಮೇರೆಗೆ :</u>

1. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು 2006–07ನೇ ಸಾಲಿನ 20ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಎಸ್.ಎನ್.ಕೃಷ್ಣಯ್ಯ ಶೆಟ್ಟಿ [ಮುಜರಾಯಿ ಮತ್ತು ವಸತಿ ಸಚಿವರು] : ಮಾನ್ಯ ಅಧ್ಯಕ್ಷರೆ,

1962ರ ಕರ್ನಾಟಕ ವಸತಿ ಮಂಡಳಿ ಅಧಿನಿಯಮದ ಕಲಂ 55(3) ಪ್ರಕರಣದ ಮೇರೆಗೆ :

1. ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇದರ 2006–07ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

1974ರ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನಾ)ಅಧಿನಿಯಮದ ಕಲಂ 41ರ ಮೇರೆಗೆ :

1. ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಬೆಂಗಳೂರು ಇದರ 2005–06ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಕುಮಾರಿ ಶೋಭಾ ಕರಂದ್ಲಾಜೆ [ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು]: ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ :

1. ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯದ ತಾಲ್ಲೂಕು ಪಂಚಾಯತ್‌ನ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಇದರ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.
4. ಧಾರವಾಡ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.
5. ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.
6. ಮೈಸೂರು ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.
7. ರಾಯಚೂರು ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.
8. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.

9. ದಾವಣಗೆರೆ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.

10. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.

11. ತುಮಕೂರು ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

12. ಮಂಡ್ಯ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.

13. ಕೋಲಾರ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಆಡಳಿತ ವರದಿ.

14. ಹಾಸನ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.

15. ಉಡುಪಿ ಜಿಲ್ಲಾ ಪಂಚಾಯತನ್ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

16. ಬೆಳಗಾವಿ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ ಹಾಗೂ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ

17. ಗುಲ್ಬರ್ಗಾ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಆಡಳಿತ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ.

18. ಬಿಜಾಪುರ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.

19. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.
20. ಬಿಜಾಪುರ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.
21. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.
22. ಚಾಮರಾಜನಗರ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಆಡಳಿತ ವರದಿ ಹಾಗೂ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ
23. ಕೊಡಗು ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ ಹಾಗೂ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ
24. ಹಾವೇರಿ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ.
25. ಉತ್ತರಕನ್ನಡ ಜಿಲ್ಲಾ ಪಂಚಾಯತ್, ಕಾರವಾರದ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಹಾಗೂ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.
26. ಗದಗ ಜಿಲ್ಲಾ ಪಂಚಾಯತ್‌ನ 2006–07ನೇ ಸಾಲಿನ ವಾರ್ಷಿಕ ಆಡಳಿತ ವರದಿ.
27. ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 2005–06ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ

<u>1956ರ ಕಂಪನಿ ಅಧಿನಿಯಮ 619(ಎ)(2) ಪ್ರಕರಣದ ಮೇರೆಗೆ :</u>

1. ಕರ್ನಾಟಕ ಭೂಸೇನಾ ನಿಗಮ ನಿಯಮಿತ 2005–06ನೇ ಸಾಲಿನ 32ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಮುರುಗೇಶ ನಿರಾಣಿ [ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು] : ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸುತ್ತೇನೆ.

1956ರ ಕಂಪನಿ ಅಧಿನಿಯಮ 619(ಎ)(2) ಪ್ರಕರಣದ ಮೇರೆಗೆ :

1. ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2003–04ನೇ ಸಾಲಿನ 28ನೇ ವಾರ್ಷಿಕ ವರದಿ ಹಾಗೂ 2004–05ನೇ ಸಾಲಿನ 29ನೇ ವಾರ್ಷಿಕ ವರದಿ.
2. ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್ಸ್ ನಿಯಮಿತದ 2005–06ನೇ ಸಾಲಿನ ವಾರ್ಷಿಕ ವರದಿ.
3. ಕರ್ನಾಟಕ ಟ್ರಸ್ಟಿ ಕಂಪನಿ ಪ್ರೈವೇಟ್ ನಿಯಮಿತ, ಬೆಂಗಳೂರು 2006–07ನೇ ಸಾಲಿನ 9ನೇ ವಾರ್ಷಿಕ ವರದಿ.
4. ಕರ್ನಾಟಕ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ಪ್ರೈವೇಟ್ ನಿಯಮಿತ, ಬೆಂಗಳೂರು 2006–07ನೇ ಸಾಲಿನ 9ನೇ ವಾರ್ಷಿಕ ವರದಿ.
5. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ 2006–07ನೇ ಸಾಲಿನ 22ನೇ ವಾರ್ಷಿಕ ವರದಿ.
6. ದಿ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತದ 2006–07ನೇ ಸಾಲಿನ 67ನೇ ವಾರ್ಷಿಕ ವರದಿ.
7. ದಿ ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತದ 2006–07ನೇ ಸಾಲಿನ 71ನೇ ವಾರ್ಷಿಕ ವರದಿ.
8. ಮೈಸೂರು ಪೆಯಿಂಟ್ಸ್ ಮತ್ತು ವಾರ್ನಿಷ್ ನಿಯಮಿತದ 2006–07ನೇ ಸಾಲಿನ 61ನೇ ವಾರ್ಷಿಕ ವರದಿ.
9. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ 2006–07ನೇ ಸಾಲಿನ 43ನೇ ವಾರ್ಷಿಕ ವರದಿ.

10. ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತದ 2006–07ನೇ ಸಾಲಿನ 62ನೇ ವಾರ್ಷಿಕ ವರದಿ.
11. ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ನಿಯಮಿತದ 2006–07ನೇ ಸಾಲಿನ 30ನೇ ವಾರ್ಷಿಕ ವರದಿ.
12. ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 2006–07ನೇ ಸಾಲಿನ 27ನೇ ವಾರ್ಷಿಕ ವರದಿ.
13. ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಅಂಡ್ ಏಜೆನ್ಸಿಸ್ ನಿಯಮಿತದ 2006–07ನೇ ಸಾಲಿನ 35ನೇ ವಾರ್ಷಿಕ ವರದಿ.
14. ಮೈಸೂರು ಪೇಪರ್ ಮಿಲ್ಸ್ ನಿಯಮಿತದ 2006–07ನೇ ಸಾಲಿನ 72ನೇ ವಾರ್ಷಿಕ ವರದಿ.
15. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮಿತದ 2006–07ನೇ ಸಾಲಿನ 41ನೇ ವಾರ್ಷಿಕ ವರದಿ.
16. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ನಿಯಮಿತದ 2006–07ನೇ ಸಾಲಿನ 27ನೇ ವಾರ್ಷಿಕ ವರದಿ.
17. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತದ 2006–07ನೇ ಸಾಲಿನ 28ನೇ ವಾರ್ಷಿಕ ವರದಿ.
18. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ 2006–07ನೇ ಸಾಲಿನ 32ನೇ ವಾರ್ಷಿಕ ವರದಿ.
19. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 2006–07ನೇ ಸಾಲಿನ 31ನೇ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳು.
20. ಎನ್.ಜಿ.ಇ.ಎಫ್ (ಹುಬ್ಬಳ್ಳಿ) ನಿಯಮಿತದ 2006–07ನೇ ಸಾಲಿನ 18ನೇ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳು.
21. ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ 2006–07ನೇ ಸಾಲಿನ 61ನೇ ವಾರ್ಷಿಕ ವರದಿ.
22. ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮ ನಿಯಮಿತದ 2005–06ನೇ ಸಾಲಿನ 22ನೇ ವಾರ್ಷಿಕ ವರದಿ.

23. ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 2006–07ನೇ ಸಾಲಿನ 47ನೇ ವಾರ್ಷಿಕ ವರದಿ.

24. ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ 13ನೇ ವಾರ್ಷಿಕ ವರದಿ.

25. ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತದ 2005–06ನೇ ಸಾಲಿನ 42ನೇ ವಾರ್ಷಿಕ ವರದಿ ಹಾಗೂ 2006–07ನೇ ಸಾಲಿನ 43ನೇ ವಾರ್ಷಿಕ ವರದಿ.

1966 ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮದ ಕಲಂ 28(4)ರ ಮೇರೆಗೆ:

1. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ 2005–06ನೇ ಸಾಲಿನ ವಾರ್ಷಿಕ ವರದಿ.

ಅಧ್ಯಕ್ಷರು : ಮಂಡಿಸಲಾಯಿತು.

೩. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮಂಡನೆ ಮತ್ತೆ ಅನುಮೋದನೆ.

ಶ್ರೀ ಸಿ.ಟಿ.ರವಿ [ಚಿಕ್ಕಮಗಳೂರು] : ಮಾನ್ಯ ಅಧ್ಯಕ್ಷರೆ, ನನ್ನ ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"ದಿನಾಂಕ 6ನೇ ಜೂನ್ 2008ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ

Vol. XVI-54

ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ".

ಶ್ರೀ ಸಿ.ಸಿ.ಪಾಟೀಲ [ನರಗುಂದ] : ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಗೊಂದಲ:

ಅಧ್ಯಕ್ಷರು : ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣಾ ಪ್ರಸ್ತಾಪ ಮಂಡಿಸಿದ್ದಾರೆ ಮತ್ತು ಅದರ ಅನುಮೋದನೆಯಾಗಿದೆ. ಮಧ್ಯಾಹ್ನ ಮೂರು ಗಂಟೆಗೆ ಇದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಗಿದೆ.

(ಸದನವು 1.53ಕ್ಕೆ ಮುಕ್ತಯಗೊಂಡು ಮತ್ತು 3 ಗಂಟೆಗೆ ಸೇರಲು ನಿಶ್ಚಿಯಿಸಿತು)

(ಸದನವು ಪುನಃ 3.29ಗಂಟೆಗೆ ಸಮಾವೇಶಗೊಂಡಿತು, ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಕಾಂಗ್ರೆಸ್ ಪಕ್ಷದ ಸದಸ್ಯರು ವಿರೋಧಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಸದನದ ಬಾವಿಯಲ್ಲಿ ಧರಣಿ ನಡೆಸುತ್ತಿದ್ದರು)

4. ವಿಧಾನಸಭೆಯ ವಿವಿಧ ಸಮಿತಿಗಳ ರಚನೆ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟಿಗೆ ಸದಸ್ಯರ ನಾಮ ನಿರ್ದೇಶನದ ಪ್ರಸ್ತಾವ.

ಶ್ರೀ ಸಿ.ಎಂ.ಉದಾಸಿ [ಲೋಕೋಪಯೋಗಿ ಸಚಿವರು] : (ಶ್ರೀ ಎಸ್.ಸುರೇಶ್‌ಕುಮಾರ್, ಕಾನೂನು, ನ್ಯಾಯ ಮತ್ತು ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ,

"ಈಗಾಗಲೇ ದಿನಾಂಕ 23ನೇ ಜೂನ್, 2008ರಂದು ವಿಧಾನಸಭೆಯ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ರಾಜೀವ್‌ಗಾಂಧಿ ಅರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಚುನಾವಣಾ ಪ್ರಸ್ತಾವನೆಯನ್ನು ಮಂಡಿಸಿದ್ದು, ಅದರಂತೆ, ವಿಧಾನ ಸಭೆಯ ವಿವಿಧ ಸಮಿತಿಗಳಿಗೆ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಸೆನಟ್‌ಗೆ ಮಾನ್ಯ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರವರಿಗೆ ಅಧಿಕಾರ ನೀಡಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಈಗಾಗಲೇ ದಿನಾಂಕ 23ನೇ ಜೂನ್, 2008ರಂದು ವಿಧಾನಸಭೆಯ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ರಾಜೀವ್‌ಗಾಂಧಿ ಅರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಚುನಾವಣಾ ಪ್ರಸ್ತಾವನೆಯನ್ನು ಮಂಡಿಸಿದ್ದು, ಅದರಂತೆ, ವಿಧಾನ ಸಭೆಯ ವಿವಿಧ ಸಮಿತಿಗಳಿಗೆ ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಸೆನಟ್‌ಗೆ ಮಾನ್ಯ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರವರಿಗೆ ಅಧಿಕಾರ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಧರಣಿಯನ್ನು ಮುಂದುವರೆಸಿದ್ದರು)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ತಮಗೆ ಚರ್ಚೆ ಮಾಡುವುದಕ್ಕೆ ಸಾಕಷ್ಟು ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ರಾಜ್ಯಪಾಲರ ಭಾಷಣದ ಮೇಲೆ ನೀವು ಚರ್ಚೆ ಮಾಡಲಿಕ್ಕೆ ತಯಾರಿದ್ದರೆ ನಾನು ಅವಕಾಶ ಕೊಡಲಿಕ್ಕೆ ತಯಾರಿದ್ದೇನೆ. ನಾನು ಇಷ್ಟೆಲ್ಲಾ ಆವಕಾಶವನ್ನು ಕೊಟ್ಟಾಗ್ಯೂ ತಾವು ತಯಾರಿಲ್ಲವೆಂದರೆ, ನಾನು ಮುಂದಿನ ಕಲಾಪಗಳನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ಬೇರೆ ದಾರಿ ಇಲ್ಲ, ಬೇರೆ ಮಾರ್ಗ ಇಲ್ಲ. ಆ ಒಂದು ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಈಗಾಗಲೇ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ, ಚರ್ಚೆ ಮಾಡಿದ್ದೀರಿ, ಮತ್ತೇನೂ ಅವಕಾಶ ಕೊಡುವಂಥಾದ್ದು ಇಲ್ಲ. ಈಗ ನಾವು ಮುಂದಿನ ಬಿಸಿನೆಸ್ ಅನ್ನು ತೆಗೆದುಕೊಳ್ಳೂಣ. ನಿಮ್ಮ ಶಾಸಕರಲ್ಲಿ ಸಾಕಷ್ಟು ಜನ ಇವತ್ತು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಲಿಕ್ಕೆ ತಯಾರಿದ್ದಾರೆ. ಈಗಾಗಲೇ ನನಗೆ ಪತ್ರವನ್ನು ಕೊಟ್ಟಿದ್ದಾರೆ. ಚರ್ಚೆ ಮಾಡುವವರಿಗೆ ಕೊಡಿ. ಈಗ ಸಿ.ಟಿ.ರವಿಯವರು ಪ್ರಾರಂಭ ಮಾಡಬೇಕು.

ಶ್ರೀ ಸಿ.ಟಿ.ರವಿ [ಚಿಕ್ಕಮಗಳೂರು] : ಮಾನ್ಯ ಅಧ್ಯಕ್ಷರೆ, "ಆಗುವುದೆಲ್ಲಾ ಒಳ್ಳೆಯದಕ್ಕೇ" ಎಂದು ಒಂದು ಗಾದೆ ಇದೆ. ಅದೇ ರೀತಿ ಸಮ್ಮಿಶ್ರ ಸರ್ಕಾರ ಪ್ರಾರಂಭವಾಯಿತು, ಅದಕ್ಕೆ ಪೆಟ್ಟಾಯಿತು.....

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– (ತಮ್ಮ ಸ್ಥಾನದಿಂದ) ಮಾನ್ಯ ಅಧ್ಯಕ್ಷರೆ, ಈ ರೀತಿಯಾದರೆ ಆಗುವುದಿಲ್ಲ. ನಾವು ನಿಮಗೆ ಗೌರವ ಕೊಟ್ಟು.....

ಅಧ್ಯಕ್ಷರು : ಅದಕ್ಕೇ ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ತಮಗೆ ಗೊತ್ತಿದೆ, ಈ ಸದನದಲ್ಲಿ ಯಾವಯಾವ ರೀತಿಯ ಘಟನೆಗಳಾಗಿವೆ ಎನ್ನುವುದುಗೊತ್ತಿದೆ.

ಅಧ್ಯಕ್ಷರು : ಅಲ್ಲಿ ಏನೇನು ಘಟನೆಗಳಾಗಿವೆ ಎನ್ನುವುದೆಲ್ಲಾ ನನಗೆ ಗೊತ್ತಿದೆ. ಸದನದಲ್ಲಿ ನಾನೂ ಇದ್ದೆನು.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ಆ ಘಟನೆಗೆ ಸಂಬಂಧಿಸಿದಂದೆ Proceedings block ಮಾಡಬಾರದು ಎಂದು.....

(ಗೊಂದಲ)

ಶ್ರೀ ಸಿ.ಟಿ.ರವಿ [ಚಿಕ್ಕಮಗಳೂರು] : ಬಿ.ಜೆ.ಪಿ.ಗೆ ಬಹುಮತ ಬಂದಿದೆ. ಹಾಗೆ ಬಂದಂಥ ಕಾಲದಲ್ಲಿ ಜನತೆಯ ಆಶೋತ್ತರಗಳನ್ನು ಈಡೇರಿಸಬೇಕು ಎಂದು ಹೇಳಿ ಕೆಲಸ ಮಾಡಿ, ಅಶೋತ್ತರಗಳಿಗೆ ಅನುಗುಣವಾಗಿ.....

(ಗೊಂದಲ)

ಅಧ್ಯಕ್ಷರು : ಈಗ ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ಚರ್ಚೆಯನ್ನು ಸಾಯಂಕಾಲದವರೆಗೆ ಮಾಡೋಣವಂತೆ. ಸಾಕಷ್ಟು ವಿಷಯಗಳು ಚರ್ಚೆ ಮಾಡುವುದಿದೆ.....

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ನೀವು ಅವರ ಪರ ವಹಿಸಿಕೊಂಡು ಮಾತನಾಡುತ್ತಿದ್ದೀರಿ.

ಅಧ್ಯಕ್ಷರು : ನಾನು ನಿಮ್ಮ ಪರವಾಗಿಯೇ ಇದ್ದೆ. ಇಲ್ಲಿಯವರೆಗೂ ನಿಮ್ಮ ಪರವಾಗಿಯೇ ಮಾತನಾಡಿದ್ದೇನೆ. ನಿಮಗೆಲ್ಲರಿಗೂ ಅವಕಾಶ ಕೊಟ್ಟಿದ್ದೇನೆ. ಇನ್ನೂ ಅವಕಾಶ ಕೊಡುತ್ತೇನೆ. ಇನ್ನೂ ಬೇರೆ ವಿಷಯಗಳನ್ನು ಮಾತನಾಡಬೇಕು ಎಂದರೆ ಮಾತನಾಡಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ಯಾವಾಗಲೂ one-sided ಆಗಬಾರದು

(ಗೊಂದಲ)

ಶ್ರೀ ಸಿ.ಟಿ.ರವಿ [ಚಿಕ್ಕಮಗಳೂರು] : ಸಮ್ಮಿಶ್ರ ಸರ್ಕಾರದ ಕಾಲದಲ್ಲೇ ಯಡಿಯೂರಪ್ಪನವರು ಜನತೆಗೆ ಅನುಕೂಲ ಅಗತಕ್ಕಂಥ ಬಜೆಟ್ಟನ್ನು ಮಂಡನೆ ಮಾಡಿದ್ದರು. ಹೀಗೇ ಮುಂದುವರೆದರೆ ನಮಗೆ ಉಳಿಗಾಲವಿಲ್ಲ ಎನ್ನುವ ಹೊಟ್ಟೆಯುರಿಯಿಂದ ಇವರು ಇವತ್ತು ಈ ರೀತಿ ಮಾಡುತ್ತಿದ್ದಾರೆ. 150 ವರ್ಷಗಳ ಇತಿಹಾಸವಿರತಕ್ಕಂಥ ಒಂದು ಪಕ್ಷದ ಮುಖಂಡರುಗಳು ನಡೆದುಕೊಳ್ಳುತ್ತಿರತಕ್ಕಂಥ ರೀತಿ ನೋಡಿದರೆ ಅವರಿಗೆ ಯಾವುದಕ್ಕೂ ಸಹನೆ ಇಲ್ಲ. ಜನಾಭಿಪ್ರಾಯಕ್ಕೂ ಸಹನೆ ಇಲ್ಲ. ಸಹನೆ ಇಲ್ಲದ ರೀತಿಯಲ್ಲಿ ಇವರು ವರ್ತನೆ ಮಾಡುತ್ತಿದ್ದಾರೆ.

(ಈ ಹಂತದಲ್ಲಿ ಧರಣಿ ನಿರತ ಸದಸ್ಯರು ಘೋಷಣೆಗಳನ್ನೂ ಕೂಗುತ್ತಿದ್ದರು.)

(ಗೊಂದಲ)

ಶ್ರೀ ಸಿ.ಟಿ.ರವಿ [ಚಿಕ್ಕಮಗಳೂರು] : ಸಹನೆ ಇಲ್ಲದ ರೀತಿಯಲ್ಲಿ ಇವರು ವರ್ತನೆ ಮಾಡುತ್ತಿರುವುದನ್ನು ನೋಡಿದರೆ ಬಹುಶಃ ಇವರಿಗೆ ವಿರೋಧ ಪಕ್ಷದಲ್ಲಿ ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ಅವರಿಗೆ

ತಿಳಿಸಿಕೊಡಬೇಕಾದಂಥ ಅವಶ್ಯಕತೆ ಇದೆ. ಇಷ್ಟೊಂದು ಹೊಟ್ಟೆಕಿಚ್ಚು ಇರಬಾರದು ನಾನು ಅದನ್ನೇ ಮಾತನಾಡುತ್ತಿದ್ದೇನೆ. ಚರ್ಚೆಗೆ ನೀವು ತಯಾರಿಲ್ಲ. ಸಹಿಸಿಕೊಳ್ಳುವುದಕ್ಕೆ ನೀವು ತಯಾರಿಲ್ಲ. ನಮ್ಮ ಸರ್ಕಾರ ಬಂದ ಎರಡನೇ ದಿನದಿಂದಲೇ ನೀವು ಪ್ರಾರಂಭ ಮಾಡಿದಿರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ಪಾಪ ಅವರಿಗೆ ಗೊತ್ತಿರುವುದೇ ಎರಡು. ಒಂದು ಬಾಬಾ ಬುಡುಡನ್‌ಗಿರಿ, ಇನ್ನೊಂದು ಭಜರಂಗದಳ. ಅದು ಬಿಟ್ಟು ಅವರಿಗೆ ಬೇರೆ ಗೊತ್ತಿಲ್ಲ.

ಶ್ರೀ ಸಿ.ಟಿ.ರವಿ [ಚಿಕ್ಕಮಗಳೂರು] : ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೇ ನೀವು ತಯಾರಿಲ್ಲ ಎಂದರೆ ನಿಮ್ಮ ಬಣ್ಣ ಏನು ಎನ್ನುವುದು ಗೊತ್ತಾಗುತ್ತದೆ. ಚರ್ಚೆಗೆ ಬನ್ನಿ. ಆ ರೀತಿ ಚರ್ಚೆಗೆ ತಯಾರಿಲ್ಲದೇ ಇರತಕ್ಕಂಥ ಸ್ಥಿತಿಯಲ್ಲಿ, ಇಷ್ಟೊಂದು ಹೊಟ್ಟೆಯುರಿ ಇದ್ದರೆ ಅಲ್ಸರ್ ಬಂದುಬಿಡುತ್ತದೆ, ಒಳ್ಳೆಯದಲ್ಲ ಅದು. ನಿಮ್ಮ ಆರೋಗ್ಯಕ್ಕೆ ಒಳ್ಳೆಯದಲ್ಲ. ಇಷ್ಟೊಂದು ಹೊಟ್ಟೆಯುರಿ ನಿಮ್ಮ ಆರೋಗ್ಯಕ್ಕೆ ಒಳ್ಳೆಯದಲ್ಲ. ಹೇಗೆ ಸರ್ಕಾರ ಮಾಡುತ್ತಾರೆ ಎನ್ನುವುದನ್ನು ಸಹನೆಯಿಂದ ನೋಡುವುದನ್ನು ಅಭ್ಯಾಸ ಮಾಡಿಕೊಳ್ಳಿ. ಆ ಸಹನೆಯೇ ಇಲ್ಲದಿದ್ದರೆ ನಿಮ್ಮ ಆರೋಗ್ಯ ಕೆಟ್ಟುಹೋಗುತ್ತದೆ.

(ಗೊಂದಲ)

ಶ್ರೀ ಸಿ.ಟಿ.ರವಿ [ಚಿಕ್ಕಮಗಳೂರು] : ಜನ ನಿಮ್ಮ ಈ ಪರಿಸ್ಥಿತಿಯನ್ನು ನೋಡಿ, ನಿಮ್ಮನ್ನು ಅಲ್ಲಿ ಕೂರಿಸಬೇಕು ಎಂದು ಹೇಳಿ ಕಾಯಂ ಮಾಡಿದ್ದಾರೆ. ಅಲ್ಲಿ ಹೇಗೆ ನಡೆದುಕೊಳ್ಳಬೇಕು ಎನ್ನುವುದೇ ಗೊತ್ತಿಲ್ಲದೇ ಇರುವುದನ್ನು ನೋಡಿದರೆ ಅಧಿಕೃತ ಮಾನ್ಯತೆ ಇಲ್ಲದೇ ಇರತಕ್ಕಂಥ ಸ್ಥಿತಿಗೆ ಬಂದು ಬಿಡುಬಹುದು. ಸ್ವಾವಲಂಬಿಯಾಗಿದ್ದಂಥ ರೈತ ಇವತ್ತು

ಪರಾವಲಂಬಿಯಾಗತಕ್ಕಂಥ ಸ್ಥಿತಿಗೆ ತಂದಿರತಕ್ಕಂಥ ಈ ಹಂತದಲ್ಲಿ, ನಮ್ಮ ಸರ್ಕಾರ, ರೈತ ಮತ್ತೆ ಸ್ವಾವಲಂಬಿಯಾಗಬೇಕು ಇಂದು ಹೇಳಿ ಆತ ಸ್ವಾವಲಂಬಿಯಾಗುವ ನಿಟ್ಟಿನಲ್ಲಿ ರಾಜ್ಯಪಾಲರ ಮೂಲಕ ನಮ್ಮ ಸರ್ಕಾರದ ಆಶಯವನ್ನು ಹೇಳಿತಕ್ಕಂಥ ಕೆಲಸವನ್ನು ನಾವು ಈಗ ಮಾಡಿದ್ದೇವೆ. ಈ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣಕ್ಕೆ ಇಡೀ ಸದನ ವಂದನೆಗಳನ್ನು ಆರ್ಪಿಸಬೇಕು ಎಂದು ಸೂಚಿಸತಕ್ಕಂಥ ಕೆಲಸವನ್ನು ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಯಾರಾದರೂ ಇದರ ಮೇಲೆ ಚರ್ಚೆ ಮಾಡುವುದಿದ್ದರೆ ಮಾಡಬಹುದು. ಯಾರಾದರೂ ಗೌರವಾನ್ವಿತ ಸದಸ್ಯರು ಈ ಚರ್ಚೆಯನ್ನು ಮುಂದುವರೆಸಬಹುದು.

(ಗೊಂದಲ)

ಅಧ್ಯಕ್ಷರು : ಸಿ.ಸಿ.ಪಾಟೀಲರು ಅನುಮೋದಿಸಬೇಕು.

ಶ್ರೀ ಸಿ.ಸಿ.ಪಾಟೀಲ್ [ನರಗುಂದ] : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಮುಖಾಂತರ ಭಾಷಣವನ್ನು ದಯಪಾಲಿಸಿದ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು 20 ತಿಂಗಳು ಆರ್ಥಿಕ ಸಚಿವರಾಗಿ, ಈ ರಾಜ್ಯದ ಉಪಮುಖ್ಯಮಂತ್ರಿಗಳಾಗಿ, ಈ ನಾಡಿನ ಜನತೆಗೆ, ರೈತರಿಗೆ, ಮಹಿಳೆಯರಿಗೆ, ಕೂಲಿ ಕಾರ್ಮಿಕರಿಗೆ ಮಾಡಿದಂಥ ಒಂದು ಸಹಾಯ, ಸಹಕಾರವನ್ನು ನೋಡಿ ರಾಜ್ಯದ ಜನತೆ ನಿಚ್ಚಳ ಬಹುಮತದ ಸಮೀಪ ನಮ್ಮನ್ನು ಅಧಿಕಾರಕ್ಕೆ ತಂದು ಕೂರಿಸಿದ್ದಾರೆ.

(ಗೊಂದಲ)

ಶ್ರೀ ಸಿ.ಸಿ.ಪಾಟೀಲ್ [ನರಗುಂದ] : ನೀವು ಸರಿಯಾಗಿ ಊಟ ಮಾಡಿ ಬಂದಿಲ್ಲ.

(ಗೊಂದಲ)

ಶ್ರೀ ಸಿ.ಸಿ.ಪಾಟೀಲ್ [ನರಗುಂದ] : ನಮ್ಮಲ್ಲಿರತಕ್ಕಂಥ 110 ಮಂದಿಯೂ ಮಂತ್ರಿಗಳಿದ್ದೇವೆ. ಅದರ ಬಗ್ಗೆ ನಿಮ್ಮದೇನೂ Recommendation ಬೇಕಿಲ್ಲ. ನಮ್ಮನ್ನು ನಿಚ್ಚಳ ಬಹುಮತದ ಹತ್ತಿರ ತಂದು ಕೂಡಿಸಿದಂಥ ಈ ಸಂದರ್ಭದಲ್ಲಿ ರಾಜ್ಯಪಾಲರು ದಯಪಾಲಿಸಿದಂಥ ಭಾಷಣದಲ್ಲಿ ಗ್ರಾಮೀಣಾಭಿವೃದ್ಧಿ, ಆರೋಗ್ಯ, ವಸತಿಗಳ ಬಗ್ಗೆ ಸ್ಪಷ್ಟ ನಿಲುವನ್ನು ರಾಜ್ಯಪಾಲರ ಭಾಷಣದಲ್ಲಿ ದಯಪಾಲಿಸಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :- (ತಮ್ಮ ಸ್ಥಾನದಿಂದ) ನೀವು Governor Speech ಬಗ್ಗೆ ಚರ್ಚೆಯನ್ನು ಮುಂದಿನ ತಿಂಗಳು 10ನೇ ತಾರೀಖು ತೆಗೆದುಕೊಳ್ಳಿ.

ಅಧ್ಯಕ್ಷರು : ನೀವು ಚರ್ಚೆಗೆ ಬನ್ನಿ, ಮಾತನಾಡಿ, ಪ್ರಾರಂಭ ಮಾಡಿ, ನೀವು ಈಗ ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ, ನೀವು ನಿಮ್ಮ ಸ್ಥಳಗಳಿಗೆ ಹೋಗಿ Discussion start ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :- ಮೊದಲು ಈ ಸಭೆಯನ್ನು ಸರಿಮಾಡಿ.

ಅಧ್ಯಕ್ಷರು : ನನ್ನದು ಒಂದೇ ವಿನಂತಿ ಇದೆ. ದಯವಿಟ್ಟು ಎಲ್ಲರೂ ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಈ ಚರ್ಚೆಯಲ್ಲಿ ಭಾಗವಹಿಸಿ. ನಾನು ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ನೀವು ಅದರಲ್ಲಿ ಭಾಗವಹಿಸಿ. ನಿಮ್ಮ ಸ್ಥಳಗಳಿಗೆ ಹೋಗಿ. ನಿಮಗೆ ಚರ್ಚೆ ಮಾಡಲಿಕ್ಕೆ ಆಸಕ್ತಿ ಇಲ್ಲ. ನಾವು ಏನು ಮಾಡಬೇಕು? ನಿಮಗೆ ಆಸಕ್ತಿ ಇದ್ದರೆ ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿ. ಇದರ ಬಗ್ಗೆ ಚರ್ಚೆಯನ್ನು ಮುಂದುವರೆಸಿ. ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆಯಲ್ಲಿ ಭಾಗವಹಿಸಿ,

ಚರ್ಚೆಯನ್ನು, ಮುಂದುವರೆಸಿ, ಸಾಕಷ್ಟು ಜನ ನನಗೆ, "ನಾವು ಈ ಚರ್ಚೆಯಲ್ಲಿ ಭಾಗವಹಿಸುತ್ತೇವೆ". ಎಂದು ಲೆಟರ್ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಸಿ.ಸಿ.ಪಾಟೀಲ್ [ನರಗುಂದ] : .....ಒಂದು ಭರವಸೆಯನ್ನು ಕೊಟ್ಟಂಥ ಹಿನ್ನೆಲೆಯಲ್ಲಿ ಗೌರವಾನ್ವಿತ ವಿರೋಧ ಪಕ್ಷದ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

(ಗೊಂದಲ)

ಶ್ರೀ ಸಿ.ಸಿ.ಪಾಟೀಲ್ [ನರಗುಂದ] : ಸನ್ಮಾನ್ಯ ಸಿ.ಟಿ.ರವಿಯವರು ಸೂಚಿಸಿದ ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ಪ್ರಸ್ತಾವವನ್ನು ನಾನು ಸಂಪೂರ್ಣ ಬೆಂಬಲಿಸಿ, ಪ್ರಸ್ತಾಪವನ್ನು ಅನುಮೋದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಧರಣಿ ನಿರತ ಸದಸ್ಯರು ಘೋಷಣೆಯನ್ನು ಕೂಗುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು.

(ಈ ಹಂತದಲ್ಲಿ ಧರಣಿ ನಿರತ ಸದಸ್ಯರು ಘೋಷಣೆಯನ್ನು ಕೂಗುತ್ತಿದ್ದರು)

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ಸನ್ಮಾನ್ಯ ಸಭಾದ್ಯಕ್ಷರೆ, ರಾಜ್ಯ ವಿಧಾನ ಮಂಡಲದಲ್ಲಿ ಘನತೆವೆತ್ತ ರಾಜ್ಯಪಾಲರು ಸರ್ಕಾರದ ಪರವಾಗಿ ಮಾಡಿದ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ

ಮೇಲೆ ಗಂಭೀರ ಚರ್ಚೆಯಾಗಬೇಕಿತ್ತು. ಆದರೆ ಯಾವುದೇ ಚರ್ಚೆ ಇಲ್ಲದೇ ಔಪಚಾರಿಕ ಕ್ರಮವಾಗಿ ವಂದನಾ ನಿರ್ಣಯವನ್ನು ಅನುಮೋದಿಸುವ ಪರಿಪಾಠ ಇತ್ತೀಚೆಗೆ ಹೆಚ್ಚಿದೆ. ಈ ಅಧಿವೇಶನದಲ್ಲೂ ಕೂಡ ಇದೇ ಪರಿಪಾಠ ಮುಂದುವರೆದಿದ್ದಕ್ಕಾಗಿ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ನಮ್ಮ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸದನದ ಒಳಗಡೆ ನಡೆಯುವ ಚರ್ಚೆಗಳಿಗೆ ಬಹಳ ಪ್ರಾಮುಖ್ಯವಿದೆ. ಆದರೆ ಈ ಚರ್ಚೆಗಳಿಗೆ ಕಡಿವಾಣ ಹಾಕುವ ಮೂಲಕ ಪ್ರಾಮುಖ್ಯತೆಯನ್ನು ತಗ್ಗಿಸುವ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಪ್ರಸ್ತುತ ಈ ಸನ್ನಿವೇಶ ಸೃಷ್ಟಿಯಾಗಲು ಪ್ರತಿಪಕ್ಷಗಳೇ ಕಾರಣ. 50 ವರ್ಷಕ್ಕೂ ಹೆಚ್ಚು ಕಾಲ ಈ ರಾಜ್ಯ ಮತ್ತು ದೇಶವನ್ನು ಆಳಿದ ಕಾಂಗ್ರೆಸ್ ಪಕ್ಷವಾಗಲೀ ಅಥವಾ ದಶಕಕ್ಕೂ ಹೆಚ್ಚು ಕಾಲ ಆಳ್ವಿಕೆ ನಡೆಸಿದ ಜೆಡಿ(ಎಸ್) ಪಕ್ಷವಾಗಲೀ ಹೆಚ್ಚು ಹೊಣೆಗಾರಿಕೆಯಿಂದ ನಡೆದುಕೊಳ್ಳಬೇಕಾಗಿತ್ತು. ಏನೇ ಇರಲಿ, ನಮ್ಮ ನೂತನ ಸರ್ಕಾರದ ಧ್ಯೇಯೋದ್ದೇಶಗಳನ್ನು, ಅಭಿವೃದ್ಧಿ ಕಾರ್ಯಸೂಚಿಯನ್ನು ಮತ್ತು ಅದ್ಯತೆಗಳನ್ನು ರಾಜ್ಯಪಾಲರ ಭಾಷಣದಲ್ಲಿ ಅಡಕಗೊಳಿಸಲಾಗಿದೆ. ಶಕ್ತಿಶಾಲಿ ಹಾಗೂ ಸಮೃದ್ಧ ಕರ್ನಾಟಕ ನಿರ್ಮಾಣ ಮಾಡಲು ಅಭಿವೃದ್ಧಿ ಆಧಾರಿತ ಸ್ಪಂದನಶೀಲ ಆಡಳಿತ ನೀಡುವುದು ನಮ್ಮ ಸಂಕಲ್ಪವಾಗಿದೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ದಯಮಾಡಿ ನಮಗೆ ಚರ್ಚೆಗೆ ಅವಕಾಶ ಕೂಡಿ. ನಮಗೆ ಅವಕಾಶ ಕೊಡದಿರುವುದನ್ನು ನಾವು ವಿರೋಧಿಸುತ್ತಾ ಧರಣಿಗೆ ಬರುತ್ತೇವೆ.

(ಈ ಹಂತದಲ್ಲಿ ಜೆಡಿ(ಎಸ್) ಪಕ್ಷದ ಸದಸ್ಯರು ಶ್ರೀ ಹೆಚ್.ಡಿ ರೇವಣ್ಣನವರ ನೇತೃತ್ವದಲ್ಲಿ ಧರಣಿಗಾಗಿ ಸದನದ ಬಾವಿಗೆ ಬಂದರು)

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ಜನರ ಆಶೋತ್ತರಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುವ ಬದ್ಧತೆ ನಮ್ಮ ಸರ್ಕಾರಕ್ಕಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– (ತಮ್ಮ ಸ್ಥಾನದಿಂದ) ಏನಾದರೂ ಮಾಡಿ 5 ಗಂಟೆಯೊಳಗೆ ಇದನ್ನು ಪಾಸ್ ಮಾಡಿಕೊಳ್ಳಬೇಕೆಂದಿದ್ದೀರಿ.ಅದು ಹೇಗೆ ಸಾಧ್ಯ?

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ಸಮೃದ್ಧ ಕರ್ನಾಟಕ ನಿರ್ಮಾಣದ ದಿಕ್ಕಿನಲ್ಲಿ 5 ಮೂಲಭೂತ ಅವಶ್ಯಕತೆಗಳನ್ನು ಒದಗಿಸುವತ್ತ ನಾವು ಕಾರ್ಯೋನ್ಮುಖರಾಗಿದ್ದೇವೆ. ಈ ಐದು ಅಂಶಗಳೆಂದರೆ, ಆಹಾರ, ಆರೋಗ್ಯ, ಶಿಕ್ಷಣ, ವಸತಿ ಮತ್ತು ಶಾಂತಿ ಹಾಗೂ ಸಾಮಾಜಿಕ ನ್ಯಾಯ. ಈ ಐದು ಮೂಲಭೂತ ಅವಶ್ಯಕತೆಗಳನ್ನು ಒದಗಿಸಲು ಅನುಕೂಲವಾಗುವಂತೆ ನನ್ನ ಸರ್ಕಾರ ಬಡತನದ ವ್ಯಾಖ್ಯೆಯನ್ನು ಬದಲಿಸಲು ಬದ್ಧವಾಗಿದೆ. ಬಡತನದ ವ್ಯಾಖ್ಯೆಯನ್ನು ಬದಲಿಸಿ ಈಗಿರುವ ವಾರ್ಷಿಕ 11,800 ರೂ.ಗಳ ಆದಾಯದ ಮಿತಿಯನ್ನು 30,000 ರೂ ಗಳಿಗೆ ಏರಿಸಿ ಅವರನ್ನು ಕಡುಬಡವರೆಂದು ಮತ್ತು ವಾರ್ಷಿಕ 30,000 ರೂ.ಗಳಿಂದ 60,000 ರೂ ಗಳವರೆಗೆ ಆದಾಯ ಉಳ್ಳವರನ್ನು ಬಡವರು ಎಂದು ಪುನರ್ ವ್ಯಾಖ್ಯಾನಿಸಲಾಗುವುದು. ಇದು ದೇಶದಲ್ಲೇ ಮೊದಲ ಪ್ರಯತ್ನ. ಹೆಚ್ಚು ಮಂದಿ ಬಡವರಿಗೆ ಸರ್ಕಾರದ ಯೋಜನೆಗಳ ಫಲ ದೊರೆಯಬೇಕು ಎಂಬುದೇ ಈ ನಿರ್ಧಾರದ ಉದ್ದೇಶ. ಈ ಬಗ್ಗೆ ರಾಷ್ಟ್ರವ್ಯಾಪಿ ಚರ್ಚೆಯಾಗಬೇಕೆಂಬುದು ನಮ್ಮ ಅಪೇಕ್ಷೆ ಹಣದುಬ್ಬರದ ಈ ದಿನಗಳಲ್ಲಿ ವಾರ್ಷಿಕ 11,800 ರೂ.ಗಳ ಆದಾಯ ಮಿತಿಯನ್ನು ಅನ್ವಯ ಮಾಡಿದರೆ ಅರ್ಹ ಫಲಾನುಭವಿಗಳು ಸರ್ಕಾರದ ಯೋಜನೆಗಳ ಲಾಭ ಪಡೆಯವಲ್ಲಿ ವಂಚಿರಾಗುತ್ತಾರೆ. ಸಾಮಾಜಿಕ ನ್ಯಾಯದ ಬಗ್ಗೆ ಕಳಕಳಿಯುಳ್ಳ ಯಾವುದೇ ಪಕ್ಷ ಮತ್ತು ಯಾವುದೇ ಸರ್ಕಾರ ನಮ್ಮ ಈ ನಿಲುವನ್ನು ಸ್ವಾಗತಿಸುತ್ತದೆ ಮತ್ತು ಅನುಷ್ಠಾನಕ್ಕೆ ಮುಂದೆ ಬರುತ್ತದೆ ಎಂದು ನಾನು

ಭಾವಿಸಿದ್ದೇನೆ. ಸನ್ಮಾನ್ಯ ಸಭಾಧ್ಯಕ್ಷರೆ, ಅಭಿವೃದ್ಧಿ ಪ್ರಕ್ರಿಯೆಯ ವೇಗವನ್ನು ಹೆಚ್ಚಿಸಿ ಸಮಾಜದ ಎಲ್ಲ ಸ್ತರಗಳ ಜನರಿಗೆ ಬೆಳವಣಿಗೆಯ ಅವಕಾಶ ದೊರಕಿಸಿಕೊಡಬೇಕೆಂಬ ಹಿನ್ನೆಲೆಯಲ್ಲಿ ಸಮಿಶ್ರ ಸರ್ಕಾರಗಳ ಗೊಂದಲಕ್ಕೆ ಇತಿಶ್ರೀ ಹಾಡಿ ಏಕ ಪಕ್ಷದ ಸರ್ಕಾರಕ್ಕೆ ಜನಾದೇಶ ದೊರೆತಿದೆ. ಜನದೇಶವನ್ನು ಮಾನ್ಯ ಮಾಡುವುದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತಾರೂಢರಾದವರು ಪರಮ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ನಿರ್ವಹಿಸಲು ನಮ್ಮ ಸರ್ಕಾರ ಸಜ್ಜಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಈಗಾಗಲೇ ನಾನು ಪುನರುಚ್ಚರಿಸುತ್ತಾ ಬಂದಿರುವಂತೆ "ಅಭಿವೃದ್ಧಿಯೇ ನಮ್ಮ ಏಕೈಕ ಅಜೆಂಡಾ ಮತ್ತು ಗುರಿಯಾಗಿದೆ".

(ಧರಣಿ ನಿರತ ಸದಸ್ಯರು ಮುಖ್ಯಮಂತ್ರಿಗಳ ಭಾಷಣದುದ್ದಕ್ಕೂ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ಚುನಾವಣಾ ಕಾಲದ ಸಂಘರ್ಷಮಯ ಕಹಿ ವಾತಾವರಣದಿಂದ ಹೊರಬಂದು ಸಂಘರ್ಷಕ್ಕೆ ಅವಕಾಶ ಮಾಡಿಕೊಡದೆ ಸಹಮತದ ಹಾದಿಯಲ್ಲಿ ಮುನ್ನಡೆದು ಸಹಮತದ ಹಾದಿಯಲ್ಲಿ ಮುನ್ನಡೆದು ನಾಡ ನಿರ್ಮಾಣದ ಕರ್ತವ್ಯ ನಿರ್ವಹಿಸುವ ಗುರಿ ನಮ್ಮದು. ಈ ದಿಸೆಯಲ್ಲಿ ವಿರೋಧ ಪಕ್ಷಗಳ ಎಲ್ಲ ನಾಯಕರ ಮತ್ತು ಶಾಸಕರ ಸಹಕಾರವನ್ನು ನಾನು ಕೋರುತ್ತಿದ್ದೇನೆ. **(ಗೊಂದಲ)** ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಚರ್ಚೆ, ಚಿಂತನೆ ಮತ್ತು ಯುಕ್ತ ನಿರ್ಣಯ ಕೈಗೊಳ್ಳುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಉಳಿವಿಗ ಅನಿವಾರ್ಯ, ಅಗತ್ಯ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ಮಾನ್ಯ ಅಧ್ಯಕ್ಷರೆ, ಒಂದೂವರೆ ತಾಸಿನಲ್ಲಿ Governor's Speech ಬಗ್ಗೆ

ಎಲ್ಲರೂ ಮಾತನಾಡಿ ಮುಗಿಸುವುದಕ್ಕೆ ಆಗಿತ್ತದೆಯೇ ಎಂದು ನಿಮ್ಮ ಆತ್ಮಸಾಕ್ಷಿಯಾಗಿ ಹೇಳಿ.

(ಗೊಂದಲ)

ಅಧ್ಯಕ್ಷರು : ಯಾರೂ ಪ್ರಾರಂಭ ಮಾಡಲಿಲ್ಲ. ನಾನೇನು ಮಾಡಲಿ. ಸಾಕಷ್ಟು ಕಾಲಾವಕಾಶ ಕೊಟ್ಟೆ. ಹಾಗಾದರೆ ನೀವು ಈಗ ಮಾಡುತ್ತೀರಾ? ತಾವು Start ಮಾಡಬಹುದಾಗಿತ್ತಲ್ಲ? ಏಕೆ Start ಮಾಡುತ್ತಿಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ [ವಿರೋಧ ಪಕ್ಷದ ನಾಯಕರು] :– ನೀವು ಬೇಕಂತಲೇ ಮಾಡುತ್ತಿದ್ದೀರಿ. Intentionally ಮಾಡುತ್ತಿದ್ದೀರೆಂದು ನಾನು directly charge ಮಾಡುತ್ತಿದ್ದೇನೆ. It is a partiality. Yes

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ಅಧಿಕಾರಕ್ಕೆ ಬಂದ ಕೂಡಲೇ ನನ್ನ ಸರ್ಕಾರ ರಸಗೊಬ್ಬರದ ಸಮಸ್ಯೆ, ರೈತರ ಆತ್ಮಹತ್ಯೆ ಇತ್ಯಾದಿ ಸಮಸ್ಯೆಗಳ ಸುಳಿಗೆ ಸಿಲುಕಿತು.

(ಗೊಂದಲ)

ಅಧ್ಯಕ್ಷರು : ಹಾಗಾದರೆ Start ಮಾಡಿ. ತಾವು ಈ ರೀತಿ ಮಾತನಾಡಿ ಸಭಾಧ್ಯಕ್ಷರ ಸ್ಥಾನಕ್ಕೆ ಅಗೌರವ ಸೂಚಿಸುತ್ತಿದ್ದೀರಿ. ತಾವು ವಿರೋಧ ಪಕ್ಷದ ನಾಯಕರಾಗಿ ಈ ರೀತಿ ಮಾತನಾಡಬಾರದು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ [ಮುಖ್ಯಮಂತ್ರಿಗಳು] : ಈ ಸಮಸ್ಯೆಗಳನ್ನು ನಿವಾರಿಕೊಂಡು ಅಭಿವೃದ್ಧಿಪಥದಲ್ಲಿ ರಾಜ್ಯವನ್ನು ಕೊಂಡೊಯ್ಯುವ ಸಂಕಲ್ಪ ತೊಟ್ಟಿದ್ದೇನೆ. ನಮ್ಮ ಚುನಾವಣಾ ಪ್ರಣಾಳಿಕೆ "ಸಂಕಲ್ಪ" ದಲ್ಲಿ ನೀಡಿರುವ ಭರವಸೆಗಳನ್ನು 5 ವರ್ಷಗಳಲ್ಲಿ ಈಡೇರಿಸುವ ಹೊಣೆಗಾರಿಕೆ ನಮ್ಮ ಮೇಲಿದೆ. **(ಗೊಂದಲ)** ನಮ್ಮ ಕಾರ್ಯತಂತ್ರದ ಪರಿಚಯವನ್ನು ಮುಂಬರುವ ಬಜೆಟ್‌ನಲ್ಲಿ ಅಂದರೆ ಜುಲೈ 17ರಂದು ಮಾಡಿಕೊಡಲಿದ್ದೇನೆ. ಮುಂದಿನ 5 ವರ್ಷಗಳ ಅವಧಿಯಲ್ಲಿ ಈ ಸರ್ಕಾರ ತುಳಿಯಲಿರುವ ದಿಕ್ಸೂಚಿಯಾಗಿ ಬಜೆಟ್ ಭಾಷಣ ಇರುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. **(ಗೊಂದಲ)** ಸನ್ಮಾನ್ಯ ಅಧ್ಯಕ್ಷರೆ, ಇದಕ್ಕೆ ಈಗ ಅಗತ್ಯವಿರುವ ಅನುಮೋದನೆ ನೀಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. **(ಗೊಂದಲ)**

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"6ನೇ ಜೂನ್ 2008ರ ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ವಂದನಾ ನಿರ್ಣಯದ ಪ್ರಸ್ತಾವಕ್ಕೆ ಸಭೆಯ ಅನುಮತಿ ದೊರಕಿದೆ.

(ಗೊಂದಲ)

ಅಧ್ಯಕ್ಷರು : ಸದರಿ ವಂದನಾ ನಿರ್ಣಯವನ್ನು ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು. ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 3 ಗಂಟೆ 42 ನಿಮಿಷಕ್ಕೆ ಮುಕ್ತಾಯಗೊಂಡು ಅನಿರ್ದಿಷ್ಟ ಕಾಲಾವಧಿಯವರೆಗೆ ಮುಂದೂಡಲ್ಪಟ್ಟಿತು)

(B) 252260(1)

ಕಾ.ಸೂ, 03184, ದಿ: 28–06–2013, 350 ಪುಸ್ತಕಗಳು ಸ.ಕೇ.ಮು. ಘಟಕ–2, ಬೆಂ–59,